ಊರಿನಲ್ಲಿ ಹೊಲಗೇರಿ ಇರುತ್ತದೆ. ... ಪ್ರಕಾರ ಬೆಳಗಾವದ ತಾಲೂಕಿನಲ್ಲಿರುವ ... ರು ಊರವರನ್ನು ಮೀರಿ ಸರಕಾರಿ ... ಕೊಟ್ಟರು. ಈ ಪ್ರಕಾರ ಕಾಂಗ್ರೆಸ ಧ್ಯೇ ... ಹೊಲಗೇರಿ ಮಾಡಿದಂಥವರಿಗೆ ದಂಡ ಹಾಕಿ ಮತ್ತು ಅವರನ್ನು ಕುಲದ ಹೊರಗೆ ಇಡುವ ವಿಚಾರ ನಡೆದಿದೆ. ಊರವರೆಲ್ಲ ... ಉಳಿದವರೆಲ್ಲ ಒಂದಾದರೆ - ಉಳಿದವರೂ ... ವದು ಸಹಜವು.

ಬೆಂಗಳೂರಿನ ಶ್ರೀ ಡಾ|| ರಾಮಲಿಂ ... ಅಲ್ಲಾಬಾದಿನಲ್ಲಿರುವ ... ಕಾಂಗ್ರೆಸ ಆಸ್ಪತ್ರೆಗಾಗಿ, ಒಂದು ಸಾವಿರ ... ರು ಕೊಟ್ಟರು.

ಮೆಕ್ಸಿಕೋದಲ್ಲಿ ಪಾದ್ರಿಗಳಿಗೆ ಸಂಕ್ರಾಂತಿ

—(೦)—

ಮೆಕ್ಸಿಕ ರಾಜ್ಯಕ್ಕೆ ಪರದೇಶಗಳಿಂದ ಬಂದು ಕ್ರಿಸ್ತಮತ ಸಾರುವವರಕ್ಕಾಗಿ ಶಾಲೆ ಆಸ್ಪತ್ರೆ, ಮುಕ್ತಿಸೈನ್ಯ, ಉದ್ಯೋಗ ಮುಂತಾದ ಹಲವು ರೂಪಗಳಿಂದ ಬಂದ ಮತ್ತು ಬರುವ ಕ್ರಿಶ್ಚನರ ವಿರುದ್ಧ ಮೆಕ್ಸಿಕ ವರ್ತಮಾನ ಪತ್ರಗಳು ಬೊಬ್ಬೆ ಹೊಡೆದಿವೆ. ಆದರೆ ಮೆಕ್ಸಿಕ ರಾಜ್ಯದಲ್ಲಿರುವ ಮೂಲ ಪಾದ್ರಿಗಳ ವಿರುದ್ಧ ಇವರ ಆಕ್ಷೇಪಣೆ ಇರುವದಿಲ್ಲ. ಹೊರಗಿನ ಪಾದ್ರಿಗಳು ದುಡ್ಡಿನ ಬಲದಿಂದ ದೇಶದಲ್ಲಿ ಭೂಮಿ ಕೊಳ್ಳುವರು. ಶಾಲೆಗಳ ಮೂಲಕ ಕ್ರಿಸ್ತಮತ ಪ್ರಚಾರ ಮಾಡುವರು. ಸರಕಾರದವರು ಕ್ರಮೇಣ ಈ ಭೂಮಿಗಳನ್ನು ತೆಗೆದುಕೊಳ್ಳಬೇಕು. ಮತ್ತು ಇವರ ಸ್ಥಾಪಿತ ಶಾಲೆಗಳನ್ನು ಬಂದು ಮಾಡಬೇಕೆಂದು ಲೋಕಮತವಾಗಿ ಇದಕ್ಕೆ ಸರಕಾರವೂ ಒಲಿದೂ ಇದೆ. ವಿದ್ಯಾಖಾತೆಯ ಮಂತ್ರಿಯಾದ ಕಾರ್ಲೋಸರು ಈ ಬಗ್ಗೆ ಒಂದು ಕಾಯದೆ ಮಾಡಿದ್ದು, ಅದಕ್ಕೆ ಅಸೆಂಬ್ಲಿಯ ಒಪ್ಪಿಗೆಯೂ ದೊರೆತಿದೆ. ಅನಂತರ ವಿಶ್ವವಿದ್ಯಾಲಯಗಳ ಹಾಯಸ್ಕೂಲುಗಳಿಗೂ ಇದೇ ಕಾಯದೆ ಹೋಗಬಾರದೆಂದು ಕಾಯದೆ ಮಾಡುವರು. ಇದರಿಂದ ಮುಂದೆ ಪಾದ್ರಿ ಭಟ್ಟರು ಆ ದೇಶದಿಂದ ಗಂಟು ಕಟ್ಟಲಿಕ್ಕೆ ಅವಕಾಶವೇ ಉಳಿಯುತ್ತದೆ.

—

ಮುಂಬಯಿಯಲ್ಲಿ ಕೂಡಿದ ಸಂಸ್ಥಾನಿಕರ ಪರಿಷತ್ತಿನಲ್ಲಿ ಬರುವ ಠರಾವು.

—(೦)—

ಮುಂಬಯಿಯಲ್ಲಿ ಶ್ರೀ. ರಾಮಕಾಂತ ಭಟ್ಕಳೀಕರವರ ಅಧ್ಯಕ್ಷತೆಯಲ್ಲಿ ಸಂಸ್ಥಾನಗಳಲ್ಲಿ ವಾಸವಾಗಿರುವ ಪ್ರಜರ ಪರಿಷತ್ತು ಕೂಡಿದೆ. ಅಲ್ಲಿ ಶ್ರೀ ಜ್ಞಾನಿಯವರು ಮುಂದೆ ಕೊಟ್ಟಂಥ ಠರಾವು ತರಲ್ಪಡುವರಿದ್ದಾರೆ.

ಕೆಲ ಮಹಾರಾಜರು ಮತ್ತು ಬೇರೆ ರಾಜ್ಯಾಧಿಕಾರಿಗಳು ತೀರ ಕಾಲ್ಪಾಯುಳ್ಳವರಿದ್ದಾರೆ. ಕೆಲವು ಸಂಸ್ಥಾನಿಕರು ದುಂದುಗಾರಿಕೆಯಿಂದ, ಕೆಲವರು ದಬ್ಬಾಳಿಕೆಯಿಂದ, ಕೆಲವರು ಯಾವಾಗಲೂ ದೇಶಾಂತರ ವಾಸಿಗಳಾಗಿರುವದರಿಂದ ರಾಜ್ಯಾಡಳಿತಕ್ಕೆ ಅಯೋಗ್ಯರಾಗುತ್ತಾರೆ. ಇಂಥವರ ಬಗ್ಗೆ ವಿಚಾರಣೆ ಮಾಡಲು ಸರಕಾರವು ಒಂದು ಕಮೀಟಿ ನೇಮಿಸಿ, ಸಂಸ್ಥಾನಿಕರೆಂದು ಇಂಥವರನ್ನೆಲ್ಲ ಪದಭ್ರಷ್ಟರನ್ನಾಗಿ ಮಾಡಬೇಕು.

ಹಿಂದೂ ಅಣ್ಣ, ಮುಸಲಮಾನ ತಮ್ಮ.

ಫ್ರಂಟಿಯರ ಗಾಂಧಿಯ ಮತ.

—(೦)—

ಬಾರಡೋಲಿಗೆ ಬಂದಿರುವ ಸರಹದ್ದಿನ ಗಾಂಧಿಯವರು ಅಲ್ಲಿ ಕೂಡಿದ ಒಂದು ಸಭೆಯಲ್ಲಿ ಮಾಡಿದ ಭಾಷಣ-

“ನಾನು ಬಾರಡೋಲಿಯ ಜನರ ಸತ್ಯಾಗ್ರಹದಿಂದ ಕಲಿಯಬೇಕಾದುದನ್ನು ಕಲಿಯಲು ಬಂದಿದ್ದೇನೆ. ಅಹಿಂಸೆಯ ಅಸಹಕಾರವು ಹೊಸದಲ್ಲ. ೧೪೦೦ ವರ್ಷಗಳ ಹಿಂದೆ ಮಕ್ಕಾದಲ್ಲಿ ಇದನ್ನಾಚರಿಸಿದ್ದಾರೆ. ಜನರು ಅದನ್ನು ಮರೆತದ್ದರಿಂದ ಮಹಾತ್ಮರು ಅದನ್ನು ಹೊಸದಾಗಿ ಕಲಿಸುತ್ತಿದ್ದಾರೆ. ಹಾಂಗೆ,ನಾವು ಹಿಂದೂ ಜನರೆಂದು ಭಾವಿಸಿದರೂ, ಕುರಾನದಲ್ಲಿ ಹೇಳಿದ ಪ್ರಕಾರವೇ ಹಿಂದುಸ್ಥಾನವನ್ನು ಸ್ವತಂತ್ರ-ಮಾಡಲು ದಕ್ಷವಾಗಿದೆ. ಆದ್ದರಿಂದ ಮುಸಲಮಾನರು ಈ ಚಳವಳಿಯಲ್ಲಿ ಸೇರಲೇಬೇಕು. ಹಿಂದೂ ಜನರು ಹಿರಿಯಣ್ಣ ಮತ್ತು ಮುಸಲಮಾನರು ಅವರ ತಮ್ಮ ಆಗಿದ್ದಾರೆ. ಅಣ್ಣನು ತಮ್ಮನ ಆಶೆ ಪೂರ್ಣ ಮಾಡಬೇಕಾದದ್ದೊಂದು ಧರ್ಮ.”

ಪಾಲು ಆಗುವಾಗ ದೈವದವರು ಎರಡು ಭಾಗ ಮಾಡಬೇಕು. ತಮ್ಮನು ಬಿಟ್ಟದ್ದನ್ನು ಅಣ್ಣ ತಕ್ಕೊಳ್ಳಬೇಕು. ಆದರೂ ಇದರಲ್ಲಿ ಅಣ್ಣನ ದೆಸೆಯಿಂದ ಜ್ಯೇಷ್ಠಾಂಶ ತೆಗೆಯಬೇಕಾಗುತ್ತದೆಂಬುದನ್ನು ಮುಸಲಮಾನರು ಮರೆಯಕೂಡದು.

—

ವಿಲಿಂಗಡನ್ನ ಕಾಲೇಜದಲ್ಲಿ ಕನ್ನಡ ಶಿಕ್ಷಣದ ವ್ಯವಸ್ಥೆ.

—(೦)—

ಧಾರವಾಡದವರಾದ ಶ್ರೀ. ಕುಲಕರ್ಣಿ ರಾಮರಾಯರನ್ನು ವಿಲಿಂಗಡನ್ನ ಕಾಲೇಜದವರು ಇಂಗ್ಲಿಷ ಮತ್ತು ಕನ್ನಡದ ಪ್ರೊಫೇಸರರಾಗಿ ನೇಮಿಸಿಕೊಂಡಿದ್ದಾರೆ. ಮೊದಲು ಇವರು ಆ ಕಾಲೇಜದಲ್ಲಿ ಇಂಗ್ಲಿಷ ಪ್ರೊಫೇಸರರಾಗಿದ್ದರು. ಅಲ್ಲಿಂದ ವಿಲಾಯತಿಗೆ ಹೋಗಿ ಲೀಡ್ಸ ವಿಶ್ವವಿದ್ಯಾಲಯದಲ್ಲಿ ಪಿ.ಎಚ್. ಡಿ. ಪದವಿ ಧರಿಸಿ ತಿರುಗಿ ಬಂದಿದ್ದಾರೆ. ಈ ಕಾಲೇಜದಲ್ಲಿದ್ದ ಕನ್ನಡ ವಿದ್ಯಾರ್ಥಿಗಳು ಇಂಟರವರೆಗೆ ಕನ್ನಡದ ದೆಸೆಯಿಂದ ಬೇರೆ ಕಾಲೇಜಕ್ಕೆ ಹೋಗಬೇಕಾಗುತ್ತಿತ್ತು. ಆ ಅನಾನುಕೂಲತೆ ದೂರಾಗಿ, ಅಲ್ಲಿಯೇ ಕನ್ನಡದ ವ್ಯಾಸಂಗ ಮಾಡುವಂತಾಯಿತು.

ವೆಂಗುರ್ಲೆಯ ಮ್ಯುನಿಸಿಪಾಲಿಟಿಯಲ್ಲಿ ಗೊಂದಲ

....(೦)....

ಮೆಂಬರರೇ ಮೆಂಬರನನ್ನು ನಾಲಾಯಕ ಮಾಡಿದರು.

— (೦)—

ವೆಂಗುರ್ಲೆಯ ಮ್ಯುನಿಸಿಪಾಲಿಟಿಯ ತ್ರೈವಾರ್ಷಿಕ ಚುನಾವಣೆಯಾಗಹತ್ತಿದೆ. ಒಬ್ಬ ಮೆಂಬರರು ಹೊಸದಾಗಿ ಆಗಬೇಕಾದ ವೋಟರ ಲಿಸ್ಟಿನಲ್ಲಿ ಅನೇಕ ಬದಲಾವಣೆ ಮಾಡಿದ ಒಂದು ಯಾದಿಯನ್ನು ಮ್ಯುನಿಸಿಪಾಲಿಟಿಗೆ ಕಳಿಸಿದರು. ಇದರ ವಿಚಾರ ಮಾಡಲು ಜನರಲ ಕಮೀಟಿ ಕೂಡಿತು. ಆ ಮೆಂಬರನು ಕಳಿಸಿದ ಯಾದಿಯು ಮ್ಯುನಿಸಿಪಾಲಿಟಿಗೆ ಬೇಕೆಂದು ತ್ರಾಸಕೊಡುವದಾಗಿರುತ್ತದೆಂದು ಉಳಿದ ಮೆಂಬರರು ಠರಾವು ಮಾಡಿ, ಆತನು ಮೆಂಬರನಾಗಿರಲು ನಾಲಾಯಕನಾಗಿದ್ದಾನೆಂದು ತೀರ್ಮಾನಿಸಿ, ಮೆಂಬರ ಕೆಲಸದಿಂದ ತೆಗೆದುಹಾಕಿದರು. ಮ್ಯುನಿಸಿಪಾಲಿಟಿಯ ನಿರಂಕುಶ ಠರಾವಿನ ಮೇಲೆ ಆತನು ಸರಕಾರಕ್ಕೆ ಅರ್ಜಿಯನ್ನು ಮಾಡಿದ್ದು, ಸರಕಾರದವರು ಈ ಬಗ್ಗೆ ಪೂರ್ಣ ವಿಚಾರವಾಗುವ ತನಕ, ಮ್ಯುನಿಸಿಪಾಲಿಟಿಯ ಹುಕುಮನ್ನು ಸಸ್ಪೆಂಡ ಮಾಡಿಸಿದ್ದಾರೆ.

—

ಸೊಸೆಗೆ ಬರೀ ಕೊಟ್ಟದ್ದಕ್ಕಾಗಿ ಅತ್ತೆಗೆ ಆರು ತಿಂಗಳ ಶಿಕ್ಷೆ

—(೦)—

ಪುಣೆಯಲ್ಲಿ ರಾಧಾಬಾಯಿ ಎಂಬೊಬ್ಬಳು ಇವಳು ತನ್ನ ಸೊಸೆಯನ್ನು ಬಹಳವಾಗಿ ಕಾಡಿಸಿಕೊಳ್ಳುವಳು. ಕೊನೆಯಲ್ಲಿ ಬರೀ ಕೂಡ ಕೊಟ್ಟಳು, ಈ ಕ್ರೂರ ಕರ್ಮದ ದೆಸೆಯಿಂದ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ವಿಚಾರಣೆಯಾಗಿ, ಅತ್ತೆ ರಾಧಾಬಾಯಿಯು ಆರು ತಿಂಗಳ ಸಕ್ತಮ ಶಿಕ್ಷೆಗೆ ಗುರಿಯಾದಳು.

—

ಕಾನಪೂರದ ಕಲೆಕ್ಟರಿಗೆ ಅಳಬುರುಕ ಶಾಸನ

—(೦)—

ಕಾನಪೂರದಲ್ಲಾದ ಮೊದಲನೆಯ ದಂಗೆಯಲ್ಲಿ ಕಲೆಕ್ಟರರಾದ ನೇಲಸಾಹೇಬರು ತಮ್ಮ ಕರ್ತವ್ಯದಲ್ಲಿ ಜಾಗರೂಕರಾಗಲಿಲ್ಲೆಂದು ಸರಕಾರದಿಂದಲೇ ನೇಮಿಸಲ್ಪಟ್ಟ ಪಂಚ ಕಮೀಟಿಯವರ ಅಭಿಪ್ರಾಯದ ಪ್ರಕಾರ ಸರಕಾರದವರು ಇವರನ್ನು ಬೇರೆ ಕಡೆಗೆ ವರ್ಗ ಮಾಡಿದರು. ಇದು ಅಳಬುರುಕ ಶಿಕ್ಷೆಯು. ಕನಿಷ್ಠ ಶಿಕ್ಷೆಯು ಬಲವರ್ಧನಗುತ್ತದೆಂದು ಯಾರಾದರೂ ಹೇಳಬಹುದು.

ಜಾಹೀರ ನೋಟೀಸು

ಇಲ್ಲಿಯ ಅಂಜುಮನ್ನ ಇಸ್ಲಾಮದ ಖುಲ್ಲಾ ಗಿಯ ಪ್ಲಾಟುಗಳ ಲಿಲಾವ ಮಾಡುವದಕ್ಕಾಗಿ ಪೂರ್ವದಲ್ಲಿ ಜಾಹೀರ ನೋಟೀಸು ತೆಗೆಯಲ್ಪಟ್ಟಿ. ಆದರೆ ಕೆಲವು ಕಾರಣಗಳಿಂದ ಅದು ನೇಮವಾದ ತಾರೀಖಿಗೆ ಲಿಲಾವ ಆಗಲಿಲ್ಲ. ಈಗ ಜನರಲ್ ಮೀಟಿಂಗಿನಲ್ಲಿ ಲಿಲಾವ ಮಾಡಕೆಂದು ನಿಃಸ್ಸಾದ ಕಾರಣ ರವಿವಾರ ತಾ. ೨೧ ನೇ ೧೯೩೧ ನೇ ದಿವಸ ಮಧ್ಯಾಹ್ನ ೩ ಗಂಟೆಗೆ ಹೀರ ರೀತಿಯಿಂದ ಸದರಿ ಜಾಗಯನ್ನು ಲಿಲಾವ ಮಾಡ ಪಡಲ್ಲಿ ಬರುವದು. ಲಿಲಾವ ಆಗುವ ವದಲ್ಲಿ ಲಿಲಾವಿನ ಶರ್ತುಗಳನ್ನು ಓದಿ ಹೇಳಲಾಗುತ್ತ

ಆದ್ದರಿಂದ ತಕ್ಕೊಳ್ಳಲಿಚ್ಛಿಸುವವರು ವೇಳೆಗೆ ಹಾಜರ ಇದ್ದು ಬರಬೇಕಾಗಿ ವಿನಂತಿ.

ಧಾರವಾಡ ತಮ್ಮ

ತಾ ೧೦-೬-೩೧ A A. Kittur,

ಪ್ರೆಸಿಡೆಂಟ

ಅಂಜುಮನ್ ಇಸ್ಲಾಮ ಧಾರವಾಡ.

ನೋಟೀಸು

ಕೆಳಗೆ ಸಹಿ ಮಾಡಿದವನ ಕಡಿಂದಾ ನಿಮಗೆ ಳಿಸುವದೇನಂದರೆ.

ಹಾನಗಲ್ಲ ತಾಲೂಕ ವೈಕಿ ಮುಮಜೆ ಸೋಮಾಪುರ ಗ್ರಾಮದಲ್ಲಿರುವ ಮಲ್ಲವ್ವಾ ಕೋಂ ಓನಗಪ್ಪ ಮಾಳಗಿ ಇವಳಿಗೆ–

ನೀನು ನನ್ನ ಲಗ್ನದ ಹೆಂಡತಿ ಇದ್ದು ನನ್ನ ತಂದೆಯವರ ನಡುವ ಜಗಳ ಒಂದದ್ದರಿಂದ ನನ್ನ ನ್ನ ನಡುವೆ ಸಂಸಾರ ಚನ್ನಾಗಿ ನಾಗುವದಿಲ್ಲ ದ್ದರಿಂದ ನೀನು ನನ್ನ ಮನೆಯನ್ನು ಬಿಟ್ಟು ಹೋಗಿ ಇಂದಿಗೆ ಅಜಮಾಸ ಒಂದು ವರ್ಷವಾಯಿತು ಈ ವೇಳಗಾಗಿ ನಾನು ನಿನ್ನನ್ನು ಅನೇಕಾವರ್ತಿ ಕರಿಯಕಳಿಸಿದೆನು ಆದಾಗ್ಯೂ ಕೂಡಾ ನೀನು ಬರಲಿಲ್ಲಾ ಇದನ್ನು ನೋಡುತ್ತಿರಲಿಕ್ಕೆ ನೀನು ಒಂದು ನನ್ನ ಮನೆಯಲ್ಲಿರಲಿಕ್ಕೆ ಕಬೂಲ ಇದ್ದಂತೆ ಕಾಣಿಸುವದಿಲ್ಲವಾದ್ದರಿಂದ ನಿನಗೆ ಈ ನೋಟೀಸಿನ ಮುಖಾಂತರ ತಿಳಿಸುವದೇನಂದರೆ ನಿನಗೆ ಈ ನೋಟೀಸ ಮುಟ್ಟಿದ ಹದಿನೈದು ದಿವಸದೊಳಗಾಗಿ ನಿನಗೆ ಸಂಸಾರದ ಆಶಾ ಇದ್ದರೆ ಬಂದು ನನ್ನೊಡನೆ ಸೌಖ್ಯದಿಂದ ಇರಬೇಕು ಇಲ್ಲವಾದ್ದರೆ ಇದೇ ನೋಟೀಸಿಯಿಂದು ತಿಳಿಯಬೇಕು ಮನೆಂಬುವದಕ್ಕೆ ನೀನು ಜವಾಬ ಕೊಡಬೇಕು ಜವಾಬ ಕೊಡ

ದತ್ತಕ ಲಗ್ನದ ಕಟ್ಟಳೆಯು ಮುರಿದಂತಾಯಿತು ಆ ಮೇಲೆ ನನ್ನ ಮನಸಿಗೆ ಒಂದವಳನ್ನು ನಾನು ಮದಿತೆ ಮಾಡಿಕೊಳ್ಳುತ್ತೇನೆ ನಿನ್ನ ಮನಸಿಗೆ ಒಂದವರನ್ನು ನೀನು ಪುನಕೆ ಮಾಡಿಕೊಳ್ಳಬಹುದು ನನ್ನ ಆಸ್ತಿಯ ಮೇಲೆ ನಿನ್ನ ಹಕ್ಕ ಇಲ್ಲಾ ನಿನ್ನ ಮೇಲೆ ನನ್ನ ಹಕ್ಕ ಇಲ್ಲಾ ತಿಳಿಯಬೇದು

ತಾರೀಖು ೧೧-೬-೧೯೩೧ ಇಸ್ವಿ

ಈ. ಯ. ಹೆ ಗುತಾಳ ಬಸನಗವಡಾ ಬಿನ್ನ ಗುತ್ತನಗವಡಾ ಮಾಳಗಿ ಸಾ|| ಬೆಂಚಿಹಳ್ಳಿ ಇವನದು ಅದೆ

The Asian Life Assurance Co. Ltd Bombay. Branch office Hubli.

ಅನುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೭೫೦ ರೂ. ಗಳನು ಕೊಡುವಂಥ ಗೋಲ್ಡನ್ (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ ಕಂತುಗಳಾದರೂ ಅಷ್ಟಕ್ಕೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿರಿ. ಇಂಥ ಪಾಲಿಸಿಯನು ಕೊಡುವ ಕಂಪನಿಯಿಂದರೆ

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦, ಹೆಡ್‌ಆಫೀಸ ಮುಂಬಯಿ)

ಇದು ಜುನೆ ಸ್ವದೇಶಿ ಕಂಪನಿಯು. ಪರದೇಶಿ ಕಂಪನಿಗಳಿಗೆ ಮರುಳಾಗಬೇಡಿರಿ. ಈ ಕಂಪನಿಯು

ವಿಮೆಯ ರಕಮು ರೂ. ೧,೫೫,೦೦೦ ೦೦ ಕಂಪನಿಯ ಉತ್ಪನ್ನ ರೂ. ೭೦೨,೦೦೦

ವಿಮೆಯ ಹಣ ತಿರುಗಿ ಕೊಟ್ಟದ್ದು ೧೦,೦೦,೦೦೦

ಜೆಂದಿಗಿ ೬೩,೦೮,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರ ಬರೆಯಿರಿ.

ಮೆಸರ್ಸ ರಾವ ಬೋಗಾರ ಮತ್ತು ಕೆ. ಬ್ಲಿ. ಹೊಸ್ಕೋರಿ, ಬಿ ಎ.

ಕುಲಕರ್ಣಿ. ಧಾರವಾಡದ ಏಜಂಟರು ಫರ್ಸ್ಟ್ ಗ್ರೇಡ ಇನ್ಸ್ಪೆಕ್ಟರ ಮ್ಯಾನೇಜರ

ಬಿ. ಎಚ್. ಪಾಟೀಲ ಹುಬ್ಬಳ್ಳಿಯ ಏಜಂಟರು–

ಹಾವೇರಿಯ ಚೀಫ ಏಜಂಟರು ಶ್ರೀ. ಎಸ್. ಎಮ್. ದೊಡ್ಡವಾಡ ಮತ್ತು

ಶ್ರೀ. ಬಿ. ಟಿ ದಿವಾಣಕರ.

ಜಾಹೀರಾತು

ಶಿಲ್ಲೀಲೇಯ ತಲೆಯಲ್ಲಿ ಸಿದ್ಧಗೊಳಿಸಿದ ಹನುಮಂತದೇವರ ಮೂರ್ತಿ ಬೇಕು.

ಈ ವಿಷಯವಾಗಿ ಕೆಳಗಿನ ಪತ್ತೆಯ ಮೇಲೆ ಪತ್ರ ವ್ಯವಹಾರ ಮಾಡಬೇಕು

ಹನುಮಂತ ಜೀವಾಜಿ ಕುಲಕರ್ಣಿ

ಮುಕ್ಕಾಂ–ಯಕ್ಕುಂಡಿ

ಪೋ–ಯಕ್ಕುಂಡಿ

ಜಿ. ಬೆಳಗಾವ ತಾ. ಸವದತ್ತಿ

ಚಂದಾದಾರರಿಗೆ ಸೂಚನೆ

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ... ಮುದ್ರಣಾಲಯದಲ್ಲಿ ಮುದ್ರಿಸಿ ...

ವಿಜಯ

ಸಂಪಾದಕರು:- ಶ್ರೀಕೃಷ್ಣಾಚಾರ್ಯ ಬಾಳಾಚಾರ್ಯ ಜೋಶೀಲ.

ವರ್ಷ ೧೨ | ಧಾರವಾಡ ಶುಕ್ರವಾರ ತಾರೀಖು ೧೨ ನೇ ಜೂನ ೧೯೩೧ | ಸಂಚಿಕೆ ೧೩೨

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧಮಾಡಿದ್ದೇವೆ. ಇದರಲ್ಲಿ ವಾದೀ ಶ್ರೀ ಶಿವಾನಂದರ ಆಸಲ ಪೋಟೋ, ಶ್ರೀ ಸಿದ್ಧಾರೂಢಸ್ವಾಮಿಗಳ ಸ್ವರೂಪ ಮತ್ತು ಮುನಸಫರಾದ ಶ್ರೀ ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ಮುನಸಫರ ಛಾಯಾಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕ ... ಪ್ರತಿವಾದಿ ಹಾಗು ಮುನಸಫರ ... ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ... ಆಗ್ರಹದ ಸಲುವಾಗಿ ... ಇದರ ಒಂದೇ ಸಾವಿರ ಪ್ರತಿಗಳನ್ನು ತೆಗೆಸಿದ ದಾವೆಯ ಮಹತ್ವದ ದೃಷ್ಟಿಯಿಂದ ... ಲಬ್ಬಿರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ, ಹತ್ತು ಪ್ರತಿ ... ವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲಾಗುವದು. ... ಯೋಗ್ಯ ಕಮೀಶನ ಕೊಡಲ್ಪಡುವದು ... ಒಂದರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಎರಡಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಒಕಳ ಪ್ರತಿ ಬೇಕಾದವರು ಮುಂಗಡ ಮನಿಯಾರ್ಡರ ಮಾಡಬೇಕು. ... ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ

ಆಪರೇಟಿವ್ಹ ಬ್ಯಾಂಕ ಲಿಮಿಟಿಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲಿಂಟು ಇಕ್ಸ ಚೇಂಜಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ. ಮುಂದೆ ಪ್ರತಿಯೊಂದು ಪಳಿಗೆ ಒಂದೂವರೆ ಆಣೆ ಇಂಗ್ಲಿಷ ಪತಿಯೊಂದು ಪಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಆವಾರಿಸಿ ಕನ್ನಡದಲ್ಲಿ ಹಾಕವದಿದ್ದರೆ ಆರು ಆಣೆ ಡಬಲ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಒಳಗಿನ ಪತ್ರಿಕೆಗೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ ೩—೦—೦
ಕೃಷ್ಣಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦

೧೯-೧೧-೨೯ **ಮೈಸೂರ ಸ್ಟೋರ,**
ಬೆಳಗಾವಿಯವರಗಲ್ಲಿ
ಹುಬ್ಬಳ್ಳಿ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆಗೆ

೧೨ ತಿಂಗಳಿಗೆ		ರೂ. ೧೨-೮-೦
೬	”	೭-೦-೦
೩	”	೪-೮-೦

ವಾರ ಪತ್ರಿಕೆಗೆ ೧ ವರ್ಷಕ್ಕೆ ೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ತಾರೀಖು ೧೨-೬-೧೯೩೧ನೇ ಇಸ್ವಿ

ಬೇತಾಳನು ತನ್ನ ಮೊದಲಿನ ಸ್ಥಳಕ್ಕೇ ಬಂದನು.

ಭಾವೀ ಸ್ವರಾಜ್ಯದಲ್ಲಿ ಮುಸಲಮಾನರು ತಮಗೆ ಬೇಕಾದಂಥ ಹಕ್ಕುಗಳನ್ನು ಕೊಟ್ಟರೇ- ತಮ್ಮ ರಾಜಿ ಎಂದು ಹಟ ಹಿಡಿದು ಎರಡು ವರ್ಷವಾಯಿತು. ಮಹಾತ್ಮರು ಸರಕಾರಕ್ಕೆ ತಮ್ಮ ೧೧ ಕರಾರುಗಳನ್ನು ಹೇಳಿದರೆ- ಬ್ಯಾರಿಷ್ಟರ ಜಿನ್ನಾಸಾಹೇಬರು ಹಿಂದೂ ಜನರಿಗೆ ಮುಸಲಮಾನರ ಬೇಡಿಕೆಗಳೆಂದು ೧೪ ಕರಾರುಗಳನ್ನು ಹಾಕಿದ್ದಾರೆ ಈ ಕರಾರುಗಳಲ್ಲಿ ಭಾವೀ ಚುನಾವಣೆಗಳು ಈಗಿನಂತೆ ಮುಸಲಮಾನರ ಪಾಲ್ಗೆ ಸ್ವತಂತ್ರವಾಗಿರುವದು ಲೇಸೋ? ಹಿಂದೂ ಮುಸಲಮಾನ ಮಿಶ್ರ ಚುನಾವಣೆಯಾಗುವದು ಲೇಸೋ ಎಂಬ ಪ್ರಶ್ನವು ಮೊದಲನೆಯದಾಗಿರುತ್ತದೆ. ಇದಕ್ಕಾಗಿ ಅವರಲ್ಲಿ ಇಬ್ಬಣವಾಗಿದೆ ಎರಡು ತುಂಡುಗಳನ್ನು ಹೇಗಾದರೂ ಮಾಡಿ, ಜೋಡಿಸಬೇಕೆಂದು ಸತತವಾಗಿ ಪ್ರಯತ್ನ ನಡೆದಿದೆ. ಆದರೆ ಅವು ಕೂಡಲೇ ಒಲ್ಲವು. ಮೊದಲಿನ ರಾವುಂಡ ಟೇಬಲಿಗೆ ಹೋಗುವಾಗ ಹಡಗದಲ್ಲಿ ಮಾತಾಡಿದರು. ರಾವುಂಡ ಟೇಬಲಿನಲ್ಲಿ ಮಾತಾಡಿದರು. ಮಂತ್ರಿಗಳು ಮಧ್ಯಸ್ಥಿಕೆ ಮಾಡಿ, ನಿರಾಶರಾದರು. ಮೌಲಾನಾ ಮಹಮ್ಮದಾಲಿ ಮರಣ ಹೊಂದಿದರು ಮುಂದೆ ಹಿಂದುಸ್ಥಾನಕ್ಕೆ ಬಂದ ಬಳಿಕ ಅದೇ ವಿಚಾರವಿನಿಮಯವು ಸತತವಾಗಿ ನಡೆಯಿತು. ಭೋಪಾಳದ ನವಾಬಸಾಹೇಬರು ರಾಜಿಯ ಪ್ರಯತ್ನ ಮಾಡಿದ್ದಾಗ- ಅವರು ಇಸ್ಲಾಮದ್ರೋಹಿಯಾಗಿದ್ದಾರೆಂದು ಸ್ವತಂತ್ರ ಪಕ್ಷದವರು ಅವರ ನಿಂದೆ ಮಾಡಿದರು. ಅದೇ ನವಾಬಸಾಹೇಬರು ಎರಡೂ ಪಕ್ಷದವರನ್ನು ತಮ್ಮೂರಿಗೆ ಕರಿಸಿಕೊಂಡು, ಉಭಯತರ ರಾವುಂಡ ಟೇಬಲ ಮಾಡಿದರು. ಆದರೆ ಅವರ ಪ್ರಯತ್ನ, ಮತ ವೆಚ್ಚವು ಹೊಳೆಯಲ್ಲಿ ಹುಣಸೇ ಹಣ್ಣು ಕೊಳೆದಂತಾಯಿತು. ಇಬ್ಬರೂ ಒಂದು ಹೆಜ್ಜೆ ಕೂಡ ಮುಂದೆ ಸರಿಯಲಿಲ್ಲ. ಮೂರು ದಿವಸ ಚರ್ಚೆ ನಡೆದು ಬೇತಾಳನು ಪೂರ್ವ ಪದಕ್ಕೇ ಬಂದನೆಂದಾಗಿ, ಮೆಂಬರರು ಸ್ವಸ್ಥಾನಕ್ಕೆ ಗಮನ ಮಾಡಿದರು. ಈನಂತರ ಸಿಮ್ಲಾದಲ್ಲಿ ಮತ್ತೆ ಕೂಡುವರು. ವ್ಯರ್ಥ ಎಡತಾಕಪಟ್ಟಿಯೇ ಸೈ.

ಮಳೆ ನಿಂತರೂ ಮರದ ಹನಿ ನಿಂತಿಲ್ಲ

ಗಾಂಧಿ ಆಯುರ್ವಿನ ಒಪ್ಪಂದದ ಭಂಗ

—(೦)—

ದಿಲ್ಲಿಯಲ್ಲಿ ಹಿಂದುಸ್ಥಾನ ಟಾಯಿಮ್ಸವೆಂಬ ನಿತ್ಯ ಪತ್ರದ ಪ್ರತಿನಿಧಿಗಳಾದ ಶ್ರೀ ಜಮನಲಾಲರು ಮಹಾತ್ಮರ ಕೂಡ ವಿಲಾಯತಿಗೆ ಹೋಗಿ, ಅವರ ಕಾರ್ಯ ಕರ್ತವ್ಯಗಳ ರಿಪೋರ್ಟನ್ನು ತಮ್ಮ ಪತ್ರಕ್ಕೆ ಬರೆದು ಕಳಿಸಲು - ತನಗೆ ವಿಲಾಯತಿಗೆ ಹೋಗಲು ಪಾಸಪೋರ್ಟ ಕೊಡಬೇಕೆಂದು ದಿಲ್ಲಿಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಿಗೆ ಬರೆಕೊಂಡರು ಸಾಹೇಬರು ಯಾವ ಕಾರಣವನ್ನೂ ಹೇಳದೆ, ನಿಮಗೆ ಪಾಸಪೋರ್ಟು ದೊರೆಯಲಾರದೆಂದಿಷ್ಟೇ ಹುಂಬಗುತ್ತಿಗೆಯ ಉತ್ತರ ಕೊಟ್ಟಿದ್ದಾರೆ. ಶ್ರೀ ಜಮನಲಾಲರು ಸಾಹೇಬರ ವಿರುದ್ಧ ವರ್ತಮಾನ ಪತ್ರಗಳ ಸಂಘಕ್ಕೂ, ಅಸೆಂಬ್ಲಿಗೂ ದೂರಿಕೊಳ್ಳುವರು.

ಬಾಬು ರಾಜೇಂದ್ರ ಪ್ರಸಾದರು ಮುಂಬಯಿಗೆ ಬಂದು, ಮಹಾತ್ಮರ ಮುಂದೆ ಬಿಹಾರದ ಸರಕಾರದವರು ಒಡಂಬಡಿಕೆಯ ಕರಾರುಗಳನ್ನು ಹೇಗೆ ಮುರಿದಿರುತ್ತಾರೆಂಬದನ್ನು ಹೇಳಿದರು. ಅಲ್ಲಿಯ ಅನ್ಯಾಯಗಳ ಕಾಗದಗಳ ಒಂದು ದೊಡ್ಡ ಸುರಳಿಯನ್ನೇ ತಂದಿದ್ದಾರೆ ಎಷ್ಟೋ ಊರುಗಳಲ್ಲಿ ಹೆಚ್ಚು ಪೋಲಿಸರನ್ನು ಕೂಡಿಸಿದ್ದು, ಆ ಪೋಲಿಸರನ್ನು ಇನ್ನೂ ತೆಗೆದಿಲ್ಲ. ಅನೇಕ ದೇಶಭಕ್ತರು ಇನ್ನೂ ಸೆರೆಮನೆಯಲ್ಲಿರುವರು. ಇವಕ್ಕೆಲ್ಲ ಸಂಪೂರ್ಣ ಪ್ರಮಾಣಗಳಿರುತ್ತವೆ.

ಸರಹದ್ದಿನ ಗಾಂಧಿಯವರೂ ತಮ್ಮ ದೂರು ಹೇಳುತ್ತಾರೆ. ಇಂಗ್ರೇಜಿ ವರ್ತಮಾನಪತ್ರಗಳು ದ್ವೇಷ ಮತ್ತು ಮತ್ಸರದಿಂದ ಬರೆಯುವದನ್ನು ನಂಬಬೇಡಿರಿ. ನಾವು ಸಂಪೂರ್ಣವಾಗಿ ಅಹಿಂಸೆಯ ಅಸಹಕಾರಿಯಾಗಿದ್ದೇವೆ ಸ್ವತಃ ಅಲ್ಲಿಯ ಸರಕಾರದವರು ನನ್ನ ಮೇಲೆ ೧೪೪ ಕಲಮಿನ ನೋಟೀಸು ತೆಗೆದರು. ಈ ಹುಕುಮು ಭಯಂಕರವಾಗಿ ಸಿಟ್ಟಿಗೆಬ್ಬಿಸುವಂತಹದೂ, ಅನ್ಯಾಯದ್ದೂ, ಅನವಶ್ಯಕವೂ ಆಗಿದ್ದರೂ ಕೂಡ, ನಾನು ಮಹಾತ್ಮರ ಸೂಚನೆಯ ಪ್ರಕಾರ ಅದನ್ನು ಮುರಿದು ಕಾಯಿದೆಭಂಗ ಮಾಡಲಿಲ್ಲ. ಮಾಲಕಂದದ ಜನತೆಕ್ಕಿಂತ ಹೆಚ್ಚು ಕೈದಿಗಳನ್ನು ಬಿಟ್ಟಿಲ್ಲ. ಇಂಥ ಹಲವು ಭಂಗಗಳಿರುತ್ತವೆಂದು ಇವರು ಸಾರಿ ಹೇಳುತ್ತಾರೆ.

ಧಾರವಾಡದಲ್ಲಿ ಪಿಕೆಟಿಂಗದ ಮೋಜು

ಮೊನ್ನಿನಿಂದ ದಿವಸ ಧಾರವಾಡದಲ್ಲಿ ಪರಗೋಷ್ಟಿ ಜವಳೀ ಅಂಗಡಿ ೧೪ ಮುಂದೆ ಪಿಕೆಟಿಂಗ ಪ್ರಾರಂಭವಾಗಿದೆ ಕಾಯಿದೆಭಂಗದ ವೇಳೆಯಲ್ಲಿ ಇಲ್ಲಿಯ ವ್ಯಾಪಾರಸ್ಥರು ಒಂದು ಸಂಘ ಸ್ಥಾಪನ ಮಾಡಿದ್ದರೆ ಅದರ ಅಧ್ಯಕ್ಷರು ಮಾನವಾಡಿಯವರಾದ ಶೇಟ ಪುರಮಚಂದರೂ, ಕಾರ್ಯದರ್ಶಿಯು ಬ್ಯಾನಿಸ್ಟರ ಶ್ರೀ. ಗೋಡಬೋಲೆಯವರೂ ಇರುತ್ತಾರೆ ಈ ಗೋಡಬೋಲೆಯವರು ಮ್ಯುನಿಸಿಪಾಲಿಟಿಯ ಮೆಂಬರರೂ ಆಗಿದ್ದಾರೆ ಪಿಕೆಟಿಂಗವು ಇಬ್ಬರ ಅಂಗಡಿಯ ಮುಂದೇ ನಡೆಯಿತು ಇದು ಹೇಳತಕ್ಕಂಥ ಮೋಜಲ್ಲವೇ ?

ಧಾರವಾಡದ ಅಬಕಾರಿ ಖಾತೆಗೆ ಜ್ವರ ಏರಿತು

—(೦)—

ಹೋದ ಮಂಗಳವಾರ ದಿವಸ ಈ ಊರಲ್ಲಿ ಕರಿಯ ಗಡಂಗಗಳ ಲಿಲಾವಾಯಿತು ಲಿಲಾವಾಗಬಾರದೆಂದು ಕಾಂಗ್ರೆಸದವರು ಪಿಕೆಟಿಂಗ ಪ್ರಾರಂಭಿಸಿದರು. ದರಬಾರ ಹಾಲಿನಲ್ಲಿ ಹೋಗುವಾಗ ಸ್ವಯಂಸೇವಕರಿಗೆ ಕೊಳ್ಳಾಣೆ ಕೆಲ್ಟವರು ಸಹ ಸವಾಲು ಮಾಡಿದರು ಸವಾಲು ನಡೆದಾಗ, ಪಿಕೆಟಿಂಗ, ಕಾಂಗ್ರೆಸದ ನಿರ್ಬಂಧನೆ ಮುಂದೆ ಗಡಂಗಗಳ ಮುಂದೆ ಪಿಕೆಟಿಂಗ ಗಾದೀತೆಂಬ ಭಯದ ಚಿನ್ನವು ಯಾವ ಸವಾಲುಗಾರನ ಮೋರೆಯ ಮೇಲೂ ತೋರದಿಲ್ಲ. ಧಾರವಾಡದ ಅಂಗಡಿಗಳು ೪೧ ಸಾವಿರ ಮತ್ತು ಹುಬ್ಬಳ್ಳಿಯ ಅಂಗಡಿಗಳು ಒಂದೂವರೇ ಲಕ್ಷಕ್ಕೆ ಸವಾಲಾದವು. ಇದೇ ಪ್ರಕಾರ ಬೇರೆ ಅಂಗಡಿಗಳ ಮೇಲೆ ರೊಕ್ಕದ ಸುರಿಮಳೆಯಾಯಿತು. ಮೃಗಮಳೆಯು ಬರೇ ಪಂಚಾಂಗದಲ್ಲಾದರೂ, ಪ್ರತ್ಯಕ್ಷ ದ್ರವ್ಯದ ಮಳೆಯು ಗಡಂಗಗಳಿಗಾಯಿತು.

ದಿಲ್ಲಿಯಲ್ಲಿ ಕಾಳಿರಾಡದಂಥ ಬಿಸಿಲು

(೦)

ಬಿಸಿಲಿನ ಝಳದಿಂದ ಒಂಭತ್ತು ಜನರ ಮರಣ

—(೦)—

ದಿಲ್ಲಿಯಲ್ಲಿ ಬಿಸಿಲು ಭಯಂಕರವಾಗಿದೆ. ೧೧೪ ಡಿಗ್ರಿಯ ತನಕ ಏರುವದು ಬಿಸಿಲು ತಡೆಯಲಾರದೆ ಒಂಭತ್ತು ಜನರು ಮರಣ ಹೊಂದಿದರು ಬಿಸಿಲಿನ ಕೂಡ ನೀರಿನ ಕೊರತೆಯಾಗಿದ್ದು ಮ್ಯುನಿಸಿಪಾಲಿಟಿಗೆ ಇದೊಂದು ದೊಡ್ಡ ಚಿಂತೆಯನ್ನುಂಟುಮಾಡಿದೆ.

ಹಪ್ತೆಯ ವಸೂಲಿಯ ಅನರ್ಥ

ಜಮೀನದಾರ ಮತ್ತು ಅವರ ಆರು ಆಳುಗಳ ಕೊಲೆ

—(೦)—

ಅಲ್ಲಾಬಾದ ಜಿಲ್ಹೆಗೆ ಸೇರಿದ ಭತವಾಡಿ ಮಿಟ ಗ್ರಾಮದ ಜಮೀನದಾರನಾದ ಜವಾದ ಹುಸೇನಸಾಹೇಬನು ಸಂಗಡ ಆಳುಗಳನ್ನು ಕರಕೊಂಡು ಹಪ್ತೆಯ ವಸೂಲಿಗಾಗಿ ಹೋದನು. ರೈತರು ತಮ್ಮಲ್ಲಿ ತಾತ್ಪರ್ಯವಿಲ್ಲೆಂದು ಹೇಳಿಕೊಂಡರೂ, ಜಮೀನದಾರನು ಕೊಡಲಿಕ್ಕೇ ಬೇಕೆಂದು ಆಗ್ರಹ ತೊಟ್ಟನು. ಆಗ ಜಗಳ ಬಂತು. ರೈತರ ನೆರವಿಗೆ ನೆರೆಯ ಹಳ್ಳಿಗಳ ಜನರು ಬಡಿಗೆ ಬೊಣ್ಣೆ ತಕ್ಕೊಂಡು ಬಂದರು. ಜಮೀನದಾರನು ಬಂದೂಕು ಹಾರಿಸಿದನು. ಗುಂಡಿನ ಮೇಲೆ ಗುಂಡು ಹಾಕಿದನು. ಒಬ್ಬ ರೈತನು ಸತ್ತು ಅನೇಕರು ಘಾಯವಾದರು, ಮುಂದೆ ಹುಸೇನಸಾಹೇಬನ ಗುಂಡುಗಳೆಲ್ಲ ತೀರಿದವು. ಇದನ್ನು ತಿಳಿದು ರೈತರು ಅವನ ಸಮಾಚಾರ ತಕ್ಕೊಳ್ಳಲಿಕ್ಕೆ ಹೋಗಲು ಸಾಹೇಬನು ಕುದುರೆ ಹತ್ತಿ, ಕಾಲಿಗೆ ಬುದ್ಧಿ ಹೇಳಬೇಕೆಂದನು. ಆದರೆ ಕುದುರೆಯು ಗದ್ದಲನೋಡಿ, ಅಂಜಿ, ಮುಂದೆ ಹೆಜ್ಜೆ ಇಡಲೇ ಇಲ್ಲ. ಹೀಗಾಗಿ ಹುಸೇನಸಾಹೇಬನು ರೈತರ ಹೊಡತಕ್ಕೆ ಗುರಿಯಾಗಿ, ಸತ್ತೇ ಹೋದನು. ಇವನ ಕೂಡ ಆರು ಆಳುಗಳನ್ನೂ ಕೊಂದು, ಸಾಹೇಬನ ಹೆಣವನ್ನು ಊರ ಗಡಿಯ ತನಕ ಒಂದು ಮೈಲು ಎಳೆಯುತ್ತಾ ಒಯ್ದು, ಅಲ್ಲಿ ಹಂಗ ಹಲ್ಲುವಂತೆ ಅದನ್ನು ಬಿಟ್ಟು ಬಿಟ್ಟರು.

ಕಾನಪೂರ ದಂಗೆಯ ವಿಚಾರವಾಗಿ ವಿಲಾಯತಿಯ ಪತ್ರಗಳ ಮತವು

—(೦)—

ಮಹಾತ್ಮರೇ ಸ್ಥಾನದ ಕೊಲೆಗೆ ಹೊಣೆಗಾರರು

—(೦)—

ಕಾನಪೂರ ದಂಗೆಯ ರಿಪೋರ್ಟಿನ ಸಾರಾಂಶವು ಇಂಗ್ಲಂಡಕ್ಕೆ ಹೋದ ಕೂಡಲೆ- ಅಲ್ಲಿಯ ವರ್ತಮಾನ ಪತ್ರಗಳು ಮನಬಲ್ಲಂತೆ ಟೀಕೆ ಮಾಡಿವೆ. ಇಂಗ್ಲಿಷ ಜನರು ಸಕ್ತಿಯಿಂದ ರಾಜ್ಯವಾಳದಿದ್ದರ ಪರಿಣಾಮವೆಂದು ಡೇಲಿ ಟೆಲಿಗ್ರಾಫ ಪತ್ರವಂದಿದೆ, ಕಲಕತ್ತೆಯ ಸೇಲಸಾಹೇಬರು ತ್ವರೆಯ ಉಪಾಯ ಮಾಡಲಿಲ್ಲೆಂದು ಸರಕಾರವು ಅವರಿಗೆ ದೋಷ ಕೊಟ್ಟಿರುತ್ತದೆ. ಡಾಯರಸಾಹೇಬನು ತ್ವರೆಯ ಉಪಾಯ ಕೈಕೊಂಡರೆ-ಅವನ ನೆತ್ತಿ ಕುಕ್ಕಿತು. ಇದು ವಿಚಿತ್ರವಲ್ಲವೇ ಎಂದು ಮಾರ್ನಿಂಗ ಪೋಸ, ಪತ್ರವು ಉದ್ಗಾರ [illegible]

ನಾಲ್ಕುನೂರು ಮರಣಗಳಿಗೆ ಗಾಂಧಿಯೇ ಕಾರಣನೆಂದು ಡೇಲಿ ಮೇಲವು ಬೊಬ್ಬೆಯಿಟ್ಟಿರುತ್ತದೆ.

ಊಟಕ್ಕೆ ರುಚಿ ಉಪ್ಪಿನಕಾಯಿ

—(೦)—

ಊಟಕ್ಕೆ ರುಚಿ ಉಪ್ಪಿನಕಾಯಿ ಎಂದು ಕನ್ನಡದಲ್ಲಿ ಗಾದೆಯ ಮಾತುಂಟು. ಇಂಗ್ಲಂಡದಲ್ಲಿ ಊಟಕ್ಕೆ ರುಚಿ ಮೀನವೆಂದು ಹೇಳುವಂತಾಗಿದೆ. ಅಲ್ಲಿಯ ಕೆಲ ಸಾಹುಕಾರ ಮನೆಯವರೂ, ಉಪಹಾರದ ಅಂಗಡಿಯವರೂ ತಮ್ಮ ಹಿತ್ತಲದಲ್ಲಿ ಹೊಂಡಗಳನ್ನು ಮಾಡಿ, ನೂರಾರು ಜಾತಿಯ ಜೀವಂತ ಮೀನುಗಳನ್ನು ಸಾಕುವರು. ಯಾವನೊಬ್ಬ ಗಿರಾಕಿಯು ಹೊಂಡಕ್ಕೆ ಹೋಗಿ, ತನಗೆ ಇಂಥ ಮೀನದ ಅಡಿಗೆ ಬೇಕೆಂದು ಹೇಳಿದರೆ-ಆ ಮೀನವನ್ನು ಹೊರಗೆ ತೆಗೆದು ಅದರ ಅಡಿಗೆ ಮಾಡಿ ಹಾಕುವರು.

ನಗ್ನ ಮೂರ್ತಿಯ ಪೂಜೆಯ ವಿರುದ್ಧ ಪಿಕೆಟಿಂಗ

—(೦)—

ಉಜ್ಜಯಿನಿಯ ಚಿನಿವಾಲಗಟ್ಟಿಯವರು ಒಂದು ನಗ್ನ ಮೂರ್ತಿ ಮಾಡಿಸಿ, ಅದನ್ನು ಜನರು ನೋಡುವಂತೆ ಬೀದಿಯಲ್ಲಿಟ್ಟರು. ಕೆಲವು ದಿವಸದನಂತರ ಇದರ ಪ್ರತಿಷ್ಠಾಪನೆ ಮಾಡತಕ್ಕವರಿದ್ದರು. ಪುರುಷರ ಪೂರ್ಣ ಇಂದ್ರಿಯದ ಮೂರ್ತಿಯನ್ನು ಹೀಗೆ ಬತ್ತಲೆ ಇಡುವದೂ ಅದರ ಪೂಜೆ ಮಾಡುವದೂ ಕೇವಲ ಮೂರ್ಖತನದ್ದಾಗುತ್ತದೆಂದು ಸಮಾಜ ಸುಧಾರಕರು ಅದನ್ನು ಅಲ್ಲಿಂದ ತೆಗೆಯುವಂತೆ, ಅದರ ಮುಂದೆ ಸತ್ಯಾಗ್ರಹ ಮಾಡಿದರು. ಧರ್ಮಾಭಿಮಾನಿಗಳು ಇವರಿಗೆ ಪೈಮಾರಿ ಹೊಡೆದರು. ಇಬ್ಬರಂತೂ ಎಚ್ಚರದಪ್ಪಿದರು

ಕಾನಪೂರದಲ್ಲಿ ಬಾಂಬು ಹಾರಿತು

—(೦)—

ಕಾನಪೂರದಲ್ಲಿ ಸ್ಟೇಶನದ ಹತ್ತರವೇ ಚಲ್ಲಿಕೊಟ್ಟಿದ್ದ ಒಂದು ಬಾಂಬು ಹಾರಿ, ಪಾರಿಗಾರನೊಬ್ಬನು ಘಾಯವಾದನು.

ರೌಂಡಟೇಬಲಕ್ಕೆ ಒಪ್ಪಿರೆಂದು ಅಥವಾ ಸಂಯುಕ್ತ ದೊರೆತನದ ಕಮೀಟಿಗೆ ಬನ್ನಿರೆಂದು ಇನ್ನೂ ಮಹಾತ್ಮಾ ಗಾಂಧಿಯವರಿಗೆ ಆಮಂತ್ರಣ ಕಳಿಸಿಲ್ಲ. ಇವರಂತೆ ಇನ್ನಾರಿಗೂ ಆಮಂತ್ರಣ ಕಳಿಸಿಲ್ಲ. ಕಾಂಗ್ರೆಸದವರು ರೌಂಡಟೇಬಲಿನಲ್ಲಿ ಭಾಗ ತಕ್ಕೊಳ್ಳಬೇಕೆಂದು ಸರಕಾರದ ಅಪೇಕ್ಷೆಯಾಗಿರುತ್ತದೆಂದು ಮಿ. ಬೆನ್ನವೆಜ್ಜವುಡ್ಡ ಸಾಹೇಬರು [illegible]

ಮೊದಲು ಒಡಂಬಡಿಕೆಯಂತೆ ನಡೆಯಿರಿ

ಬಳಿಕ ನಿಮ್ಮ ರೌಂಡ ಟೇಬಲ

(೦)

ಮುಂಬಯಿಯಲ್ಲಿ ಕಾಂಗ್ರೆಸದ ವರ್ಕಿಂಗ ಕಮೀಟಿ ಕೂತಿದಷ್ಟೇ; ಇದರಲ್ಲಿ ನಡೆದ ಕೆಲಸವೆಲ್ಲ ಗುಪ್ತವಾಗಿರುವದು. ಆದರೂ ರೌಂಡ ಟೇಬಲದ ಆಮಂತ್ರಣ ವಿಚಾರ ನಡೆದಾಗ-

ಸರಕಾರದವರು ಗಾಂಧಿ-ಆಯರ್ವಿನ ಕರಾರುಗಳಂತೆ ನಡೆದು, ಆ ಪ್ರಕಾರ ಕೃತಿ ಮಾಡಿ ತೋರಿಸಬೇಕು. ಸರಕಾರವು ಈ ಪ್ರಕಾರ ನಡೆಯಿತೆಂದು ಎಲ್ಲಾ ಕಡೆಗೂ ಕಂಡು ಬಂದರೇ

ಮುಂದೆ ರೌಂಡ ಟೇಬಲಿನ ಆಮಂತ್ರಣ ಸ್ವೀಕರಿಸಬೇಕೆಂಬುದಾಗಿ ಎಲ್ಲಾ ಮೆಂಬರರ ಮತವಾಗಿರುತ್ತದೆಂದು ಕರ್ಣೋಪಕರ್ಣವಾಗಿ ಪ್ರಕಟವಾಗಿರುತ್ತದೆ.

ವಿವಿಧ ವರ್ತಮಾನಗಳು

—)(—(೦)—)(—

ದಿಲ್ಲಿಗಿಂತ ನಾಗಪೂರದಲ್ಲಿ ಬಿಸಿಲು ಹೆಚ್ಚಾಗಿದ್ದು, ಅದು ೧೧೩ ಡಿಗ್ರಿಯಾಗಿ, ಉರಿಗಾಳಿಯೇ ಬೀಸುತ್ತಿರುವದು.

ಸೊಲ್ಲಾಪೂರದಲ್ಲಿ ಕೀರ್ತನ ಕೇಸರಿ ಜಯರಾಮಾಚಾರ್ಯರ ಕೀರ್ತನೆ ನಡೆದಿವೆ. ಕೀರ್ತನಕ್ಕೆ ಅತಿಶಯವಾಗಿ ಜನ ದಟ್ಟಣೆಯಾಗುತ್ತದೆ.

ಬ್ರಹ್ಮದೇಶದ ಬಂಡಾಯವನ್ನು ಬೇಗನೆ ಮುರಿಯದಿದ್ದರೆ - ತಾವು ಸರಕಾರದ ಕೂಡ ಅಸಹಕಾರ ಮಾಡುವಂತೆ, ಬ್ರಹ್ಮೀ ಜನರು ಸಭೆ ಮಾಡಿ, ಸರಕಾರಕ್ಕೆ ತಿಳಿಸಿದ್ದಾರೆ.

ವಿಲಾಯತಿಯಿಂದ ಹಿಂದುಸ್ಥಾನಕ್ಕೆ ಕ್ರಿಕೆಟದ ಚಂಡು ಕೋಲಾಟದ ಕಂಪನಿಯು ಬರುವದಿದೆ. ಇದರಲ್ಲಿ ಹ್ಯಾಯಿಸರಾಯರಾದ ಲಾರ್ಡ ವಿಲಿಂಗಡನ್ನ ಸಾಹೇಬರು ಆಡುವರು.

ಮಹಾರಾಷ್ಟ್ರ ಪ್ರಾಂತದ ಮುಂದಿನ ವರ್ಷದ ರಾಜಕೀಯ ಪರಿಷತ್ತಿಗೆ ಪನವೇಲದವರು ಆಮಂತ್ರಣ ಕೊಟ್ಟಿದ್ದಾರೆ.

ಸಭೆಯಲ್ಲಿ ಗತಕ್ಕದ್ದಿದ್ದು, ದಿನವು ಮೊತ್ತಿಗಳಿಗೆ ದೊಡ್ಡ ದುರ್ಘಟವಾಗಿ ಪರಿಣಮಿಸಿದೆ.

ಗದಗನಲ್ಲಿ ಖೊಟ್ಟಿ ನೋಟುಮಾಡುತ್ತಿದ್ದಂಥ ಇಬ್ಬರನ್ನು ಹಿಡಿದಿದ್ದಾರೆ, ಇವರ ಮನೆಯಲ್ಲಿ ಝಡತಿ ಮಾಡಿದಾಗ ಕೆಲ ನೋಟುಗಳು ಹೊಂಟವು

ಜಾಹೀರ ವ್ಯಾಖ್ಯಾನ.

(೦)

ಧಾರವಾಡ ನಗರಸಭೆಯು ಶಿಕ್ಷಕ ಶಿಕ್ಷಿಕೆಯರಿಗೋಸ್ಕರ ಏರ್ಪಡಿಸಿದ ವ್ಯಾಖ್ಯಾನಮಾಲೆಯ ೧೩ನೇ ವ್ಯಾಖ್ಯಾನವನ್ನು ಶ್ರೀಯುತ ದ. ರಾ ಬೇಂದ್ರೆ ಬಿ ಎ ಇವರು ತಾರೀಖು ೧೩-೬-೧೯೩೧ ನೇ ದಿವಸ ೪-೪೫ ಘಂಟೆಗೆ ಸರಿಯಾಗಿ ಮುನಸಿಪಲ ಹಾಲಿನಲ್ಲಿ "ಕನ್ನಡ ಕವಿತೆ" ಎಂಬ ವಿಷಯದ ಮೇಲೆ ಕೊಡುವರು. ಯಾವತ್ತು ಜನರಿಗೆ ಬರಲಿಕ್ಕೆ ಪರವಾನಗಿ ಇರುತ್ತದೆ.

ತಾ|| ೧೧-೬-೧೯೩೧ ಇಸ್ವಿ

ಸಹಿ- ವಿ ಬಾ. ಜೋಶಿ ಚೇರಮನ್
ಸ್ಕೂ. ಬೋರ್ಡ ಧಾ. ಮು.

ಜಾಹೀರ ನೋಟೀಸು

ನಾನು ಕೆಳಗೆ ಸಹಿ ಮಾಡಿದವಳು ಈ ನೋಟೀಸ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನಂದರೆ-

ಧಾರವಾಡ ಜಿಲ್ಹಾ ಕೋಡ ತಾಲ್ಲೂಕ ಮೋಜೆ ದೂದಿಹಳ್ಳಿ ಗ್ರಾಮದಲ್ಲಿ ನನ್ನ ಕಬಜಾ ಮಾಲ್ಕಿ ವಹಿವಾಟಿಯೊಳಗಿರುವ ಕೆಳಗೆ ಬರೆದ ಸರಕಾರಿ ನಂಬರಗಳು ವ ಮನೆಗಳು ವ ಹಿತ್ತಲ ಜಾಗಾಗಳು-

ರಿ|| ಸ|| ನಂ||	ಖುಷ್ಕಿ	ಆಕಾರ
೮೯/೯	೩-೨೧	೪-೧೦-೦
೧೮೧/೩	೪-೩೪	೪-೫-೦
೨೦೧/೪	೧- ೬	೩-೩-೦
೨೦೧/೯	೦-೨೬	೦-೯-೬
೨೧೨/೧	೧-೨೨	೧-೧೨-೦
೨೩೮/೧	೦-೨೪	೧-೧೩-೦
೨೩೮/೩	೧- ೦	೩-೯-೦

ಅಂಕಿತ ೧೩-೧೩ ೧೯-೧೩-೬

೧ ಹಂಚಿನ ಮನೆ ವ ಹಲ್ಲ ಮನಿ ಮತ್ತು ಹಂಚಿನ ಪೇತಾ ವ ಹಿತ್ತದ ಜಾಗಾಗಳು ಸಹಾ ಇವು ನನ್ನ ತಾಯಿಯ ತವರುಮನಿಯಿಂದ ಬಂದವು ಇದ್ದು ಆಕಿಯ ಪಶ್ಚಾತ್ತ ಸದರ ಆಸ್ತಿಗೆ ಹಿಂದೂಲಾದ ಪ್ರಕಾರ ನಾನೇ ಸಂಳ ವ ಸಮೀಪದ ವಾರಸದಾರಳಿರುತ್ತೇನೆ ಆ ಪ್ರಕಾರ ಇಲ್ಲಿಯವರೆಗೆ ಅನುಭೋಗ ಮಾಡಿಕೋತಾ ಸಹಾ ಇರುತ್ತೇನೆ; ಆದರೆ ನಾನು ಅಲ್ಪವಯ ಇದ್ದು ನನ್ನ ಗಂಡನ ಮನಿಯಾದ ಆಲದಕಟ್ಟಿ ಗ್ರಾಮದಲ್ಲಿದ್ದದರಿಂದಾ ನನ್ನ ಪತಿಯಿಂದ ನನ್ನ ಅಣ್ಣನಾದ ಕಲ್ಲಪ್ಪ ಬಿನ್ನ ಭರಮಪ್ಪ ಹೊಟ್ಟಿ ಸಾ|| ಹಾದರಿಹಳ್ಳಿ ಇವನು ಇಲ್ಲಿವರೆಗೆ ವಹಿವಾಟ ಮಾಡಿಕೋತಾ ಬಂದಾ ಈಗ ನಾನು ವಯಸ್ಸಿಗೆ ಬಂದಿದ್ದು ಸದರ ಆಸ್ತಿ ಯಾವತ್ತೂ ನನ್ನ ಮಾಲ್ಕಿ ವಹಿವಾಟಿಯಲ್ಲಿರುತ್ತದೆ; ಆದರೆ ನನ್ನ ಅಣ್ಣನಾದ ಕಲ್ಲಪ್ಪಾ ಈತನು ನನಗೆ ವಂಚಿಸಿ ಸದರ ಆಸ್ತಿ ಯಾವತ್ತೂ ಎರಡನೇದವರಿಗೆ ಮಾರಾಟ ಮಾಡುವದರಲ್ಲಿರುತ್ತಾನೆಂತ ಕೇಳುತ್ತೇನೆ ಅವನು ಸದರ ಆಸ್ತಿಗೆ ಯಾವ ರೀತಿಯಿಂದಲೂ ಮಾಲೀಕನಲ್ಲ. ಜರ ಅವನ ಭುಲತಾಪಿಯಿಂದ ಯಾರಾದರು ಖರೀದಿ ವಗೈರೆ ಮಾಡಿಸಿಕೊಂಡರೆ ಅದರಿಂದಾಗುವ ಲುಕ್ಸಾನಕ್ಕೆ ನೀವೇ ಬಾಧ್ಯರಿರುತ್ತೀರಿ

ತಾರೀಖು ೧೦-೬-೧೯೩೧

ಈ. ಯ. ಹೆ ಗು. ಸಾಂತ್ರೆವ್ವಾ ಕೋಂ ಭರಮಪ್ಪಾ ಕರೇಗೌಡರ ಸಾ|| ಆಲದಕಟ್ಟಿ ತಾಲ್ಲೂಕ ಕೋಡ ಈಕಿ ಮಾಡಿದ್ದು ಅದೆ

The Asian Life Assurnance Co. Ltd
Bombay. Branch office Hubli.

ಅನಾವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು
ಸೌಖ್ಯದಿಂದರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೭೫೦ ರೂ ಗಳನು ಕೊಡುವಂಥ **ಗೋಲ್ಡನ್** (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಒಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦, ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೨೫,೦೦೦,೦೦ ಕಂತದ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರಿಗಿ ಕೊಟ್ಟದ್ದು ೧೦,೦೦,೦೦೦

ಜಿಂದಿಗಿ ೨೩,೦೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಮಬಾಗಕರ ಮತ್ತು ಕೆ. ವ್ಹಿ. ಹುಲಸೋಗಿ, ಬಿ. ಎ.
ಕುಲಕರ್ಣಿ. ಧಾರವಾಡದ ಏಜಂಟರು ಕರ್ನಾಟಕದ ಬ್ರಾಂಚ ಮ್ಯಾನೇಜರ
ಬಿ. ಎಚ್. ಪಾಟೀಲ ಹುಬ್ಬಳ್ಳಿಯ ಏಜಂಟರು
ಹಾವೇರಿಯ ಚೀಫ ಏಜಂಟರು. ಶ್ರೀ. ಎಸ್. ಎಮ್. ದೊಡ್ಡವಾಡ ಮತು
ಶ್ರೀ. ಬಿ. ಟಿ ಶಿರೋಳಕರ.

ಚಂದಾದಾರರಿಗೆ ಸೂಚನೆ

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗ ವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. P. 1143.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ. ಹುಬ್ಬಳ್ಳಿ

ವರ್ಷ ೧೭ ಧಾರವಾಡ ಶನಿವಾರ ತಾರೀಖು ೧೩ ನೇ ಜೂನ ೧೯೩೧ (ಸಂಚಿಕೆ ೧೩೩

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ ಶಿದ್ಧಾಪರೂಪರ ಅಸರ್ಜಿ, ಶ್ರೀ. ಆರೂಢಸ್ವಾಮಿಗಳ ಕೈಫಿಯತ್ತು ಮತ್ತು ಮುನಸಫರಾದ ಶ್ರೀ. ನಟನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕ ಳ ಸು ಅಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸ ಮೆನಿಸುವವು. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕೊಳ್ಳುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚು ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಒಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂವರೇ ಆಣೆ ಇಂಗ್ಲಿಷ ಪತಿಯೊಂದು ಪಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಒಳಗಿನ ಪತ್ರಿಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ಎಳ ತೊಲೆಯ ಸೇರು	೧ಕ್ಕೆ	೨—೦—೦
ಕೃಷ್ಣ ಪಾರಿಜಾತ ಅತ್ತರು ತೊಲೆ	೧ಕ್ಕೆ	೪—೦—೬

೧೯—೧೧—೨೯ ಮೈಸೂರ ಸ್ಟೋರ,
ಬೆಳಗಾವಿಯವರಗಲ್ಲಿ
ಹುಬ್ಬಳ್ಳಿ

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಏಂಟು ಲಕ್ಷದ ಮೇಲುಂಟು, ಚಾಲ್ತಿ ಕಾಂತಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨/೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ತಾರೀಖು ೧೩-೬-೧೯೩೧ನೇ ಇಸ್ವಿ

ಹಿಂದುಸ್ಥಾನದಲ್ಲಿಯ ಪಾದ್ರಿಗಳು ಮತ್ತು ಅವರ ಧರ್ಮ ಪ್ರಸಾರ

ಹಿಂದುಸ್ಥಾನದಲ್ಲಿ ಸ್ವರಾಜ್ಯ ಸ್ಥಾಪನೆಯಾಯಿತೆಂದರೆ ಕ್ರಿಶ್ಚನ್ನ ಧರ್ಮವು ಈ ದೇಶದಲ್ಲಿ ಈಗಿನಂತೆ ಉಳಿಯುವದೇ ಎಂಬ ಚಿಂತೆಯು ವಿಲಾಯತಿಯ ಮಿಶನರಿಗಳಿಗೆ ಹುಟ್ಟಿಗುತ್ತದೆ. ಹಿಬ್ಬ ಪಾದ್ರಿಯವರು ಈ ವಿಷಯವಾಗಿ ಲಂಡನದಲ್ಲಿ ಒಂದು ನಿಬಂಧ ಓದಿದರು. ನಾಮದಾರ ಶ್ರೀನಿವಾಸ ಶಾಸ್ತ್ರಿ ಮೊದಲಾದವರು ಈ ಸಭೆಗೆ ಹೋಗಿದ್ದರು. ಮಿಶನರಿಗಳು ತಮಗೆ ಎಡ್ಡಂಗಾಟ ಬರುವದೆಂದು ಈಗಲೇ ಹೆದರಿಕೊಳ್ಳುವದು ಸ್ವಾಭಾವಿಕವು. ತುರ್ಕಸ್ಥಾನದಲ್ಲಿ ನಡೆದ ಕೃತ್ಯವು ಅವರ ಕಣ್ಮುಂದೆ ಕಟ್ಟುತ್ತದೆ. ಪಾದ್ರಿಗಳು ಬರೇ ಧರ್ಮ ಪ್ರಸಾರಕರಲ್ಲ. ಕೊಳ್ಳೇ ಹಚ್ಚ ಕರ್ತರೆಂದು ಸರ್ವ ಸಾಧಾರಣವಾಗಿ ತಿಳಕಳವಾಗಿದೆ. ಹಿಂದುಸ್ಥಾನದಲ್ಲಿ ಇಂಗ್ರೇಜಿ ರಾಜ್ಯವಾದ ಬಳಿಕ ಮಿಶನರಿಗಳು ಬಂದರು. ಆದ್ದರಿಂದ ಅವರ ದೆಸೆಯಿಂದ ರಕ್ತಪಾತವಾಗುವ ಸಮಯವಾಗಲ್ಲ. ಚೀನದಲ್ಲಿ ಇವರ ದೆಸೆಯಿಂದ ಅನೇಕ ಸಾರೆ ರಕ್ತದ ಕಾಲುವೆ ಹರಿಸಿದ್ದಾರೆ. ಇದು ಸೈನ್ಯವಾದ ಧರ್ಮ ಪ್ರಸಾರವಲ್ಲ. ರಕ್ತದ ಕಾಲುವೆ ಹರಿಸಿ, ಧರ್ಮ ಪ್ರಚಾರ ಮಾಡಿಸಬೇಕೆಂಬದು ಏಸೂಕ್ರಿಸ್ತನಮತವಾಗಿದ್ದರೆ ಆತನು ಎಂದಿಗೂ ಗಲ್ಲಿಗೆ ಹೋಗುತ್ತಿದ್ದಿಲ್ಲ.

ಹಿಂದುಸ್ಥಾನದಲ್ಲಿ ಬೌದ್ಧ ಧರ್ಮವಾಯಿತು. ಅದರಂತೆ ಹಲವು ಉಪ ಧರ್ಮಗಳುಂಟಾದವು. ಅವು ಯಾವವೂ ಕ್ರಿಶ್ಚನ್ನ ಪಾದ್ರಿಗಳ ಕುಟಿಲ ನೀತಿಯನ್ನನುಸರಿಸಲಿಲ್ಲ. ತುರ್ಕಸ್ಥಾನದಲ್ಲಿ ಅಂಗೋರಾ ಸರಕಾರದವರು ಯಾವ ಉದ್ದೇಶ್ಯವಾಗಿ ಅವರ ಪ್ರಾಥಮಿಕ ಮತ್ತು ಹಾಯಸ್ಕೂಲುಗಳನ್ನು ಬಂದು ಮಾಡಿಸುವರೋ ಅದೇ ಉದ್ದೇಶ್ಯವಾಗಿ, ಹಿಂದುಸ್ಥಾನದಲ್ಲಿ ಸ್ವರಾಜ್ಯವಾದ ಬಳಿಕ ಇವರ ಶಾಲೆ-ಕಾಲೇಜಗಳನ್ನು ಬಂದು ಮಾಡಿಸಬಹುದು. ಆದರೆ ಇವರಿಗೆ ಬೀದಿ ಬೀದಿಗೆ ಹೋಗಿ, ಬಾಯಿ ಬಲ್ಲಿನ ಉಪದೇಶ ಮಾಡಲಿಕ್ಕೆ ಅಡ್ಡಬರಲಾರರು. ಯಾಕೆಂದರೆ ಎಲ್ಲಾ ಧರ್ಮಗಳಿಗೆ ಸರಿಯಾದ ಸ್ವಾತಂತ್ರ್ಯ ಕೊಡುವದೇ ಕಾಂಗ್ರೆಸದ ಧ್ಯೇಯವಾಗಿರುತ್ತದೆ.

ಮಿಶನರಿಗಳು ಕಳೆದ ನೂರು ವರ್ಷಗಳಲ್ಲಿ ಹಿಂದೂ ಜನರ ಮತ್ತು ಹಿಂದೂ ದೇವಾನುದೇವತೆಗಳ ನಿಂದೆಯನ್ನು ಅಷ್ಟಿಷ್ಟು ಮಾಡಿಲ್ಲ. ಹಿಂದೂ ಧರ್ಮದ ಕುತ್ಸಿತವಂತೂ ಅವರ [illegible]ಗ್ರಂಥಗಳಲ್ಲಿ ತುಂಬಿ ಹೋಗಿರುತ್ತದೆ. ಹಿಂದೂ ಜನರಂತೆ ಮುಸಲಮಾನರೂ ಪರಧರ್ಮಿಗಳಾಗಿದ್ದಾರೆ. ಆದರೆ ಅವರ ಹಾದಿಗೇ ಹೋಗುವದಿಲ್ಲ. ಮುಸಲಮಾನನು ಇಂದು ಕ್ರಿಶ್ಚನ್ನನಾದರೆ ನಾಳೆ ಮತ್ತೆ ಮುಸಲಮಾನನಾಗುವನು. ಧರ್ಮಾಂತರವು ದೊಡ್ಡ ಪ್ರಶ್ನೆಯಾಗಿರುವದಿಲ್ಲ. ಹಿಂದೂ ಜನರು ಒಮ್ಮೆ ಕೆಟ್ಟರೆಂದರೆ - ತಿರುಗಿ ಹಿಂದೂ ಆಗಲಾರರಾದ್ದರಿಂದಲೇ ಅವರ ಮೇಲೆ ಹಾವಳಿ ಕರುತ್ತಾರೆ: ಈ ಹಾವಳಿಯನ್ನು ತಡೆಯುವದಕ್ಕಾಗಿ ಶುದ್ಧೀಸಂಘ ಹೊರಟಿರುತ್ತದೆ.

ಸ್ವರಾಜ್ಯದಲ್ಲಿ ಮಿಶನರಿಗಳಿಗೆ ಈಗಿನಂತೆ ಚಳ್ಳಾಟ ಮಾಡಲು ಅನುವು ದೊರೆಯಲಾರದು. ಅಮೇರಿಕೆ ಮುಂತಾದ ಪಂಚಖಂಡ ಪ್ರದೇಶಗಳಿಗೆ ಹೋಗಿ, ಹಿಂದೂ ಧರ್ಮ, ಹಿಂದೂ ದೇವರ ಅವಹೇಲನೆ ಮಾಡಿ, ಅದರ ಹೆಸರಿನಿಂದ ಫಂಡು ಕೂಡಿಸುವಂಥ ಪಾದ್ರಿ ಭಟ್ಟರಿಗೆ ತಿರುಗಿ ಹಿಂದುಸ್ಥಾನಕ್ಕೆ ಬರಲು ಪಾಸಪೋರ್ಟ ದೊರೆಯಲಾರದು. ಹಿಂದೂ, ಶೀಖ, ಜೈನ, ಬೌದ್ಧ ಮುಂತಾದ ಯಾವ ಧರ್ಮದವರನ್ನು ಹೊನ್ನು ಹೆಣ್ಣು ಮಣ್ಣಿನ ಆಶೆಯಿಂದ ಕುಲಗೆಡಿಸುವ ಸ್ವಾತಂತ್ರ್ಯ ದೊರೆಯದು. ತಾವು ಗುರುಗಳು ಮತ್ತು ತಮ್ಮ ಶಿಷ್ಯರು ಎಂದು ಸುಖವಾಗಿ ವಾಸವಾಗಿರಲು ಯಾವ ಆತಂಕವೂ ಇರುವದಿಲ್ಲ.

ಹರಿಕಿಶನನನ್ನು ಗಲ್ಲಿಗೆ ಹಾಕಿದರು

ಪಂಜಾಬ ಯುನಿವ್ಹರ್ಸಿಟಿಯ ಪದವಿದಾನದ ಸಮಾರಂಭ ಕಾಲದಲ್ಲಿ ಗವ್ಹರ್ನರಸಾಹೇಬರ ಮೇಲೆ ಗುಂಡು ಹಾಕಿದ ಹರಿಕಿಶನನನ್ನು ಮುಲ್ತಾನದ ತುರಂಗದಲ್ಲಿ ಗಲ್ಲಿಗೆ ಹಾಕಿದರು. ಗಲ್ಲಿಗೆ ಹಾಕುವಾಗ ಆತನ ಆಪ್ತೇಷ್ಟರಿಗಾರಿಗೂ ಭೆಟ್ಟಿಯಾಗಗೊಡಲಿಲ್ಲ. ತುರಂಗದ ಅಧಿಕಾರಿಗಳೇ ಆತನ ಶವಕ್ಕೆ ತುರಂಗದ ಒಂದು ಸಿಟ್ಟಿನಲ್ಲಿ ಅಗ್ನಿ ಸಂಸ್ಕಾರ ಮಾಡಿದರು. ಗಲ್ಲಿಗೆ ಹಾಕಬೇಡಿರಿ; ಪ್ರೀವ್ಹಿ ಕೌನ್ಸಿಲಕ್ಕೆ ಅಪೀಲು ಮಾಡುತ್ತೇವೆಂದು ಮಾಡಿದ ಅರ್ಜಿಯನ್ನು ನಾಮಂಜೂರ ಮಾಡಿದರು. ಗಲ್ಲಿನ ದೆಸೆಯಿಂದ ಲಾಹೋರಿನ ಹಿಂದೂ ಜನರು ಹರತಾಳ ಮಾಡಿ, ದೊಡ್ಡನೆತ್ತಿಯ ಮೆರವಣಿಗೆ ತೆಗೆದರು.

ಮೈಸೂರ ರಾಜ್ಯದ ರೈತರ ಗೋಳು

ಮೈಸೂರ ಸಂಸ್ಥಾನದ ಪ್ರಜಾ ಪ್ರತಿನಿಧಿ ಸಭೆಯಲ್ಲಿ ರೈತರ ಪಟ್ಟಿಯನ್ನು ನೂರಕ್ಕೆ ಕನಿಷ್ಠ ೩೦ ಅಥವಾ ೨೫ರಷ್ಟು ಕಡಿಮೆ ಮಾಡಬೇಕೆಂದು ಬಂದ ಠರಾವು ರೈತರಿಗೆ ಅನುಕೂಲವಾಗಿ ಪಾಸಾದರೂ, ಸರಕಾರದವರು ಅದನ್ನು ಅಂಗೀಕರಿಸಲಿಲ್ಲ. ಇಂಗ್ರೇಜಿ ರಾಜ್ಯದಲ್ಲಿ ಇಂಥ ಠರಾವು ಗವ್ಹರ್ನರರಿಗೆ ಸರ್ಟಿಫಿಕೇಟ ಕೊಡುವ ಅಧಿಕಾರವುಂಟು. ಅಂಥ ಲೋಕವಿಲಕ್ಷಣ ಅಧಿಕಾರವು ಮೈಸೂರಿನ ಗವ್ಹರ್ನರರಿಂದ ದಿವಾನರಿಗಿರುವದಿಲ್ಲ. ಆದರೆ ಇದಕ್ಕೂ ಹೆಚ್ಚಿನ [illegible] ಅಧಿಕಾರವುಂಟು. ನೀವು ಸರ್ವಾನುಮತದಿಂದ ಅಥವಾ ಬಹುಮತದಿಂದ ಠರಾವು ಪಾಸಮಾಡಿದರೂ, ನಾವೇನೂ ಅದರಂತೆ ಮಾಡತಕ್ಕವರಲ್ಲೆಂದು ದಿವಾನರು ಮೆಂಬರರಿಗೆ ಸ್ಪಷ್ಟವಾಗಿ ಹೇಳಿದರು.

ಸರಕಾರದ ಈ ಕೃತ್ಯವನ್ನು ನಿಷೇಧಿಸಲು ಮೈಸೂರಲ್ಲಿ ಶ್ರೀ. ಹೊಸಕೊಪ್ಪದ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನೆರೆತ. ಪ್ರಜಾಪ್ರತಿನಿಧಿ ಸಭೆಯು ಸ್ಥಾಪನೆಯಾಗಿ ೫೦ ವರ್ಷವಾದರೂ ಅದು ಹೆಚ್ಚಿಗೆ ಅಧಿಕಾರ ಪಡೆಯದೆ ಇದ್ದಕ್ಕಿದ್ದಂತೆ ಮೋಟನದವಾಗಿರತಕ್ಕದೆಂದು ಕೆಲ ಮೆಂಬರರು ಭಾಷಣ ಮಾಡಿ, ತಮಗೆ ಹೆಚ್ಚಿಗೆ ಅಧಿಕಾರಗಳು ದೊರೆಯಲೇ ಬೇಕೆಂದು ನುಡಿದರು. ಪ್ರತ್ಯಕ್ಷದಲ್ಲಿ ರೈತರು ಎಂಥ ದುಃಖಕ್ಕೆ ಗುರಿಯಾಗಿದ್ದಾರೆಂಬದನ್ನು ಸಭೆಯಲ್ಲಿ ಹೇಳಿದರು. ಒಂದೂರ ಹೆಣ್ಣುಮಕ್ಕಳು ನೀರಿಗಾಗಿ ಬಾವಿಗೆ ಹೋದರು. ಅಲ್ಲಿ ಗ್ರಾಮಸ್ಥರು ಇವರನ್ನು ತರುಬಿ - ನಿಮ್ಮ ಮನೆಯ ಗಂಡಸರಿಗೆ ಪಟ್ಟಿ ಕೊಡಲಿಕ್ಕೆ ಹೇಳಿರಿ. ಇಲ್ಲವಾದರೆ - ನಿಮಗೆ ಬಾವಿಗೆ ಬರದಂತೆ ಮಾಡುವೆವೆಂದು ಭಯ ಹಾಕಿದರೆಂದು ಒಬ್ಬರು ಹೇಳಿದರು.

ಲಷ್ಕರೀ ಕಾಯದೆಯಂಥ ಹುಕುಮು ಪಂಜಾಬದಲ್ಲಿ ಡಾಯರಶಾಹಿಯ ಕಾಲದಲ್ಲಿ ಜನರನ್ನು ಹಣ್ಣಿಗೆ ತರಲು - ಅಮೃತಸರದವರಿಗೆ ಊರೊಳಗೆ ನಳದ ನೀರೇ ಬಿಡುವದಿಲ್ಲೆಂದು ಭಯ ಹಾಕಿದರು. ಹಿಂದಕ್ಕೆ ಬತ ರೈತರನ್ನು ಬಗ್ಗಿಸಿ, ಅವರ ಬೆನ್ನ ಮೇಲೆ ಪಟ್ಟಿ ಕೊಡುವತನಕ ಕಲ್ಲು ಹೇರುತ್ತಿದ್ದರು. ಕಲ್ಲು ಹೋದರೂ ನೀರಿಗೆ ಬರಗೊಡವಲ್ಲೆಂದು ಹೇಳುವದು ಗುಲಾಮಗಿರಿಯ ಬೇರೊಂದು ಪ್ರಕಾರವಾಗಿದೆ. ಇಂಥ ವಿವೇಕ ಶೂನ್ಯ ಗ್ರಾಮಸ್ಥರಿಗೆ ಶಿಕ್ಷೆ ಮಾಡಬೇಕಲ್ಲದೆ, ರೈತರ ಅಪಮಾನ ಮಾಡಿಸುವಂಥ ಯಾವ ಕೃತ್ಯವನ್ನೂ ಮಾಡಕೂಡದೆಂದು ಗ್ರಾಮಸ್ಥರಿಗೆ ಕಟ್ಟಪ್ಪಣೆ ಮಾಡುವದು ಸರಕಾರದ ವಿಹಿತ ಧರ್ಮವಾಗುತ್ತದೆ.

ಲಾಹೋರಿನ ಒಳಸಂಚಿನ ಆರೋಪಿಗಳ ಸತ್ಯಾಗ್ರಹ

ಲಾಹೋರಿನಲ್ಲಿ ನಡೆದ ಒಳಸಂಚಿನ ಆರೋಪಿಗಳು ತಮ್ಮ ವಕೀಲರ ಖಾತನ್ನು ಫೀ ಕೊಡದ ತನಕ ಕೋರ್ಟಿಗೆ ಬರುವದಿಲ್ಲೆಂದು ಸತ್ಯಾಗ್ರಹ ಮಾಡಿದ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ. ಅಷ್ಟರು ಇವರನ್ನು ಕೋರ್ಟಿನಲ್ಲಿ ತಂದು ನಿಲ್ಲಿಸಬೇಕೆಂದು ಜೇಲ ಅಧಿಕಾರಿಗಳಿಗೆ ವಾರಂಟು ಕಳಿಸಲು ಇವರಲ್ಲಿ ಇಬ್ಬರು ಕೋರ್ಟಿಗೆ ಬಂದು ತಮ್ಮ ದೂರುಗಳನ್ನು ಹೇಳಿಕೊಂಡರು.

೧ ನಮ್ಮ ವಕೀಲರಿಗೆ ಸರಕಾರವು ದಿನಾಲು ೧೦ ರೂಪಾಯಿ ಫೀ ಕೊಡುತ್ತದೆ. ಇದು ಅಲ್ಪವದೆ ಮುಕ್ಕೂರು ರೂಪಾಯಿ ಕೊಡಬೇಕು ಕೋರ್ಟಿನವರು ದಯವಿಟ್ಟು ಹಾಗೆ ಅಭಿಪ್ರಾಯಪಟ್ಟರೂ, ಸರಕಾರವು ಈ ವಿಷಯವಾಗಿ ಉಪೇಕ್ಷೆ ಮಾಡಿದೆ.

೨ ನಮ್ಮಲ್ಲಿ ಒಬ್ಬರಾದ ಶ್ರೀ. ಸುಖದೇವರನ್ನು ಯಾವ ಕಾರಣವಿಲ್ಲದೆ ತುರಂಗದಲ್ಲಿ ಬೇರೆಕಡೆಯಲ್ಲಿಟ್ಟಿದ್ದಾರೆ.

೩ ಭಗತಸಿಂಗ ಮತ್ತು ಆತನ ಇಬ್ಬರು ಸಂಗಡಿಗರು ನಮ್ಮ ಪ್ರಕರಣದಲ್ಲಿ ಮಹತ್ವದ ಸಾಕ್ಷಿದಾರರಾಗಿದ್ದರು, ಆದರೆ ಸರಕಾರದವರು ಅವರನ್ನು ಗಲ್ಲಿಗೆ ಹಾಕಿ, ನಮ್ಮ ಪುರಾವೆ ಕೆಡಿಸಿದರು.

೪ ಸರಕಾರವು ತನ್ನ ಕೋರ್ಟಿನ ಹುಕುಮನ್ನು ತಾನೇ ಮುರಿಯುತ್ತದೆ. ಇದು ಕಾಯದೆ, ನ್ಯಾಯ, ದಾಕ್ಷಿಣ್ಯ ಮುಂತಾದವುಗಳ ಕಾಳಜಿಯನ್ನೇ ಮಾಡುತ್ತದಿಲ್ಲ. ಸರಕಾರವು ತನ್ನ ಕೃತ್ಯದಿಂದಲೇ ನಮಗೆ ಕಾಯದೆಭಂಗ ಮಾಡಲಿಕ್ಕೆ ಕಲಿಸುತ್ತದೆ.

೫ ಪ್ರಸ್ತುತದ ಕೋರ್ಟಿನ ವಿರುದ್ಧ ನಮ್ಮದು ಯಾವ ತಕರಾರು ಇರುವದಿಲ್ಲ. ನಮ್ಮ ಮೇಲಿನ ತಕರಾರುಗಳನ್ನು ದೂರ ಮಾಡಿದರೆ ನಾವು ಕೋರ್ಟಿಗೆ ಬರಲು ಸಿದ್ಧರಿದ್ದೇವೆ.

ತಿರಪೂರ ಮ್ಯುನಿಸಿಪಾಲಿಟಿಯ ಸ್ತುತ್ಯ ಕೆಲಸ.

—(೦)—

ಗಡಂಗಗಳ ಮುಂದೆ ಪಿಕೆಟಿಂಗ ಮಾಡುವದಕ್ಕೆ ಧನಸಹಾಯ.

—(೦)—

ಖಾದಿಯ ದೆಸೆಯಿಂದ ಜಗತ್ಪ್ರಸಿದ್ಧವಾದ ತಿರಪೂರ ಮ್ಯುನಿಸಿಪಾಲಿಟಿಯಲ್ಲಿ ಗಡಂಗಗಳ ಮುಂದೆ ಪಿಕೆಟಿಂಗ ಮಾಡುವದಕ್ಕಾಗಿ ಮ್ಯುನಿಸಿಪಾಲಿಟಿಯವರು ಸ್ವಯಂಸೇವಕರಿಗೆ ಐನೂರು ರೂಪಾಯಿಗಳ ಸಹಾಯ ಮಾಡಬೇಕೆಂದೂ, ಮ್ಯುನಿಸಿಪಾಲಿಟಿಯ [illegible] ಅಂಗೀಕರಿಸಬಾರದೆಂದೂ ಎರಡು ಠರಾವು ಬಂದವು. ಎರಡೂ ಠರಾವುಗಳು ಸರ್ವಾನುಮತದಿಂದ ಪಾಸಾದವು. ಈ ಮ್ಯುನಿಸಿಪಾಲಿಟಿಯ ಅನುಕರಣವನ್ನು ಬೇರೆ ಮ್ಯುನಿಸಿಪಾಲಿಟಿಗಳು ಅವಶ್ಯವಾಗಿ ಮಾಡಬೇಕು ಸ್ವಬುದ್ಧಿಯಿಂದ ಮಾಡದಿದ್ದರೂ, ಪರ ಬುದ್ಧಿಯಿಂದ ಮಾಡಿದರೂ ಸ್ತುತ್ಯವೇ ಆಗುತ್ತದೆ.

ಕಲೆಕ್ಟರರ ಜೀವವುಳಿಸಿದವರಿಗೆ ಗಲ್ಲಿನ ಶಿಕ್ಷೆ

—(೦)—

ಸೋಲಾಪೂರದಲ್ಲಿ ಶಿಕ್ಷೆಹೊಂದಿ ಶ್ರೀ ರಾಜವಾಡೆ, ಆಠತ್ರೀಕರ ಮೊದಲಾದ ಮುಖಂಡರು ಪುಣೆಗೆ ಬಂದರು. ಸಾರ್ವಜನಿಕ ಸಭೆ ಯಾತಿ, ನಾಗರಿಕರು ಇವರ ಗೌರವ ಮಾಡಿದರು ಬೇರೆ ಬೇರೆ ಜನರು ಇವರ ಕೊರಳೊಳಗೆ ಹಾಕಿದ ಮಾಲೆಗಳಿಗಂತೂ ಸಂಖ್ಯೆಯೇ ಇರಲಿಲ್ಲ.

ಗಲ್ಲಿಗೆ ಹೋದ ಮಲ್ಲಪ್ಪ ಧನಶೆಟ್ಟಿಯವರು ಕಲೆಕ್ಟರಸಾಹೇಬರ ಜೀವ ಉಳಿಸಿದರೆಂಬುದು ಎಲ್ಲರಿಗೂ ಗೊತ್ತಿದ್ದ ಮಾತು. ಆ ಸಂಗತಿಯನ್ನು ಅಧಿಕಾರವಾಣಿಯಿಂದ ಶ್ರೀ. ರಾಜವಾಡೆಯವರು ಪುಣೆಯಲ್ಲಿ ಹೇಳಿದರು. ಜೀವದಾನ ಕೊಟ್ಟವರ ಜೀವ ತಕ್ಕೊಂಡಂಥ ವಿಚಿತ್ರನ್ಯಾಯವು ಜಗತ್ತಿನಲ್ಲೆಲ್ಲಿಯೂ ಇರಲಾರದು. ಸೋಲಾಪೂರವೇಕೆ? ಇಡೀ ಹಿಂದುಸ್ಥಾನವು ಉಪಕಾರಕ್ಕೆ ಅಪಕಾರ ಮಾಡಿದ ಈ ಸಂಗತಿಯನ್ನೆಂದಿಗೂ ಮರೆಯಲಾರದು,

ಸ್ವರಾಜ್ಯವಾಯಿತೆಂದರೆ-ಪ್ರಜರಿಗೆ ಹೆಚ್ಚು ರಾಜಕೀಯ ಸ್ವಾತಂತ್ರ್ಯ ದೊರೆಯುವದು ಆಗ ಸೋಲಾಪೂರದವರು ಗಲ್ಲಿಗೆ ಹೋದಂಥ ನಾಲ್ವರ ಶಿಲಾಮೂರ್ತಿಗಳನ್ನು ಮಾಡಿಸಿ ಅವನ್ನು ಕಲೆಕ್ಟರ ಕಚೇರಿಯಲ್ಲಿಯೋ ಯಾವದಾದರು ಮಹತ್ವದ ಸ್ಥಳದಲ್ಲಿ ಸ್ಥಾಪಿಸಿದರೆ-ನ್ಯಾಯ ನಿಜವಾದ ಸ್ಮಾರಕಮಾಡಿದಂತಾಗುತ್ತದೆ.

ಬಹುಪತ್ನಿತ್ವದ ವಿರುದ್ಧ ಚಳವಳಿಯು

ಮಲಿವಾಳದ ಸಂಯುಕ್ತ ಜನಾಂಗದಲ್ಲಿ ಬೇಕಾದಷ್ಟು ಜನ ಹೆಂಡಂದಿರನ್ನು ಮಾಡಿಕೊಳ್ಳುವ ರೂಢಿಯು ಪ್ರಚಾರದಲ್ಲಿರುತ್ತದೆ. ಒಬ್ಬ ೫೦ ವರ್ಷದ ಮುದುಕನು. ಅವನಿಗೆ ಇಬ್ಬರು ಹೆಂಡರು. ಹೆಣ್ಣು ಗಂಡು ಸೇರಿ ಆರು ಜನ ಮಕ್ಕಳು. ಆದರೂ ಆತನು ೧೬ ವರ್ಷದ ಮೂರನೆಯವಳನ್ನು ಮದುವೆಯಾಗಲು ಸರ್ವ ವಿಚಾರಗಳನ್ನು ಮಾಡಿದನು. ಆ ಜನಾಂಗದ ತರುಣ ಸುಧಾರಕರು ಏಕಪತ್ನಿತ್ವದ ಪ್ರಸಾರ ಮಾಡಲು ಟೊಂಕ ಕಟ್ಟಿದ್ದಾರೆ. ಇವರು ಮೊದಲು ಆ ವೃದ್ಧ ವರನ ಮನೆಗೆ ಹೋಗಿ, ಮದುವೆಯ ಮುದಿಹುಚ್ಚು ಬಿಡೆಂದು ಬಹುವಾಗಿ ಬೇಡಿಕೊಂಡರು. ನನ್ನ ಮನಸನ್ನು ಪ್ರತ್ಯಕ್ಷ ಕೊಟ್ಟರೂ ಮದುವೆ ಬಿಡುವದಿಲ್ಲೆಂದನು ಇಲ್ಲಿ ನಿರಾಶರಾದ ಬಳಿಕ, ವಧುವಿನ ಮನೆಗೆ ಹೋಗಿ, ಅವಳ ತಂದೆ ತಾಯಿಗಳ ಮನವೊಲಿಸಹೋದರು. ಆದರೂ ಪ್ರಯತ್ನ ವ್ಯರ್ಥವಾಯಿತು. ವರನು ಗುಪ್ತವಾಗಿ ಬಂದು, ಪುರೋಹಿತನಿಂದ ಮಂಗಳಾಷ್ಟಕವನ್ನಿಸಿಕೊಂಡು, ವಧುವನ್ನು ಅಂಗೀಕರಿಸಿ ಅಷ್ಟಭುಜನಾದನು.

ಮಹಾತ್ಮರಿಗೆ ಸರ್ವಾಧಿಕಾರ

ಕಾಂಗ್ರೆಸವು ಬೇಕೆಂದು ರೌಂಡ ಟೇಬಲಿಗೆ ಬರಲಿಲ್ಲೆಂದೆನಿಸಿಕೊಳ್ಳದಂಥ ರೀತಿಯಿಂದ ಒಡಂಬಡಿಕೆಯ ಪ್ರಕಾರ ಸರಕಾರವು ನಡೆದರೆ- ಮಹಾತ್ಮರು ಕಾಂಗ್ರೆಸದ ಪಕ್ಷದಿಂದ ಸರ್ವಾಧಿಕಾರಿಯಾಗಿ ಲಂಡನಕ್ಕೆ ಹೋಗಬೇಕೆಂದು ಮುಂಬಯಿಯಲ್ಲಿ ಕೂಡಿದ ಕಾಂಗ್ರೆಸ ವರ್ಕಿಂಗ ಕಮಿಟಿಯವರು ಠರಾವು ಮಾಡಿದ್ದಾರೆ. ಸರಕಾರವು ಒಡಂಬಡಿಕೆಯ ಶರ್ತುಗಳನ್ನು ಪೂರ್ಣ ಮಾಡಿದ ಹೊರತು ಮಹಾತ್ಮರು ಲಂಡನಕ್ಕೆ ಹೋಗುವದು ಸಂಶಯಾಸ್ಪದವಾಗಿದೆ. ಮಹಾತ್ಮರು ಈ ವಿಷಯವಾಗಿ ಲಾರ್ಡ ವಿಲಿಂಗಡನ್ನಸಾಹೇಬರ ಕೂಡ ಮಾತಾಡಲು ಸಿಮಲಾಕ್ಕೆ ಹೋಗುವರು.

ಇಂಗ್ಲಂಡದ ಮಂತ್ರಿಗಳಿಗೆ ಬಂದ ದಪ್ಪಟ

—(೦)—

ಇಂಗ್ಲಂಡದ ಮಂತ್ರಿಗಳು ಭೂಮಿಯ ಕರ ಕಂದಾಯದ ವಿಷಯವಾಗಿ ಪಾರ್ಲಮೆಂಟ ಸಭೆಯಲ್ಲಿ ತಂದ ಬಿಲ್ಲನ್ನು ಲಿಬರಲ ಪಕ್ಷದವರು ವಿರೋಧಿಸಿ, ಇದರ ಪ್ರವರ್ತಕರಾದ ಮಿ. ಸ್ನೋಡನ್ನ ಸಚಿವರನ್ನು ಅಧಿಕಾರದಿಂದ ದೂರ ಮಾಡಿರೆಂದು ಮಂತ್ರಿಗಳಿಗೆ ಹೇಳಿದ್ದಾರೆ. ನೀವು ನಮ್ಮ ವಿರುದ್ಧ ನಡೆದು, ನಮಗೆ ಪ್ರತಿಕೂಲವಾಗಿ ಹೋಟು ಕೊಟ್ಟರೆ-ನಾವು ದಿವಾನಗಿರಿ ಬಿಡುವದು ದೊಡ್ಡ ಆಶ್ಚರ್ಯವಲ್ಲ. ಹಿಂದುಸ್ಥಾನದ ರೌಂಡಟೇಬಲ, ಪ್ರಬಲ ದೇಶಗಳ ಶಸ್ತ್ರ ಕಡಿಮೆ ಮಾಡುವ ವಿಚಾರ, ಮತದಾನ ಮೇರೆ ಮುಂತಾದ ಮಹತ್ವದ ವಿಷಯಗಳು ಅರಗಿತ್ತಾಗಿ, ಸಾಮ್ರಾಜ್ಯದ ದೃಷ್ಟಿ ಹಾನಿಯಾಗುವದು ಮತ್ತು ನೀವು ನಮಗೆ ಪ್ರತಿಕೂಲ ಹೋಟು ಕೊಡುವರೆಂದರೆ ನಮ್ಮಲ್ಲಿ ವಿಶ್ವಾಸವಿಲ್ಲೆಂದು ನಿಂದಾವ್ಯಂಜಕ ಠರಾವು ತರುವದಾಗುತ್ತದೆ. ಕಾರಣ ಈ ಬಗ್ಗೆ ಪೂರ್ಣ ವಿಚಾರ ಮಾಡಿರೆಂದು ಮಂತ್ರಿಗಳು ಮಿ. ಲಾಯಿಡ ಜಾರ್ಜಸಾಹೇಬರಿಗೆ ಪತ್ರ ಬರೆದು ತಿಳಿಸಿದ್ದಾರೆ. ಈ ವಿಷಯವು ಮಂಗಳವಾರ ದಿವಸ ಪಾರ್ಲಮೆಂಟ

ದೇಶದ ಸೇವೆಗೆ ಮೆಚ್ಚುವಂಥ ಸ್ವಾರ್ಥತ್ಯಾಗ

ಇದಕ್ಕಿಂತ ಹೆಚ್ಚಿನ ಸ್ವಾರ್ಥತ್ಯಾಗವು ಇನ್ನಾವದುಂಟು?

ಹಾನಗಲ್ಲ ತಾಲೂಕ ತಿಳವಳ್ಳಿಗ್ರಾಮದಲ್ಲಿರುವ ಶ್ರೀ [illegible] ಎಂಬುವರು ಈ ಮೊದಲು [illegible] ಅಂಗಡಿಗಳ ಮಾರ್ಫತ್ ಮಾಡಿ ಪ್ರತಿ ವರ್ಷ ೧೦-೧೫ ಸಾವಿರ ರೂಪಾಯಿ ಲಾಭ ಪಡೆಯುತ್ತಿದ್ದರು. ಹೋದ ವರ್ಷ ಶ್ರೀ [illegible] ಇನ್ನು ಮೇಲೆ [illegible] ಮಾಡಿ [illegible] ಇಡುವದಿಲ್ಲೆಂದು ವಚನ ಕೊಟ್ಟರು. ಈ ವರ್ಷ [illegible] ಹೋದ ವರುಷ [illegible] ಮತ್ತು [illegible] ತಮ್ಮ [illegible] ಬಿಸಿ ಮಾಡಿ, [illegible] ಸ್ವರಾಜ್ಯ [illegible] ಎಂದಿಗೂ [illegible] ಖಂಡಿತವಾಗಿ ಹೇಳಿದರು. [illegible] ಇನ್ನು [illegible] ಅನುಕರಣವನ್ನು ಮಾಡಿ [illegible] ಮಕ್ಕಳ [illegible] ಭಾರತ ಮಾತೆಯ ಆಶೀರ್ವಾದವನ್ನು ಪಡೆಯಲಿ!

ತಮ್ಮ

ರಾ. ಕೃ. ಕುಲಕರ್ಣಿ

೧೧-೬-೧೯೩೦ } ಸೆಕ್ರೆಟರಿ ಹಿರೇಕೆರೂರ ತಾ. ಕಾ. ಕಾಂಗ್ರೆಸ ಕಮೀಟಿ

ವಂದೇ ಮಾತರಂ

ಹಿಂದುಸ್ಥಾನೀ ಸೇವಾದಲ ಸ್ವಯಂಸೇವಕ ಶಿಕ್ಷಣ ಶಿಬಿರ ಬೆಳಗಾಂವ.

....(೦)....

ತಾರೀಖು ೧೦ನೇ ಮೇ ತಿಂಗಳಲ್ಲಿ ಪ್ರಾರಂಭವಾದ ಹಿಂ. ಸೇ. ದಲದ ಬೆಳಗಾಂವ ಜಿಲ್ಲಾ ಶಿಬಿರವು ಶಹಾಪುರದಲ್ಲಿ ಈ ವರೆಗೆ ಈ ಜಿಲ್ಲೆಯ ಎಲ್ಲ ತಾಲೂಕುಗಳ ೩೨ ಸ್ವಯಂಸೇವಕರಿಗೆ ಶಿಕ್ಷಣ ಕೊಟ್ಟಿರುತ್ತದೆ. ಈ ಶಿಬಿರ ಸಮಾರೋಪ

The Asian Life Assurance Co. Ltd

Bombay. Branch office Hubli.

ಆಸುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮಾ [illegible] ಗಳನ್ನು ಕಾಯುವಂಥ ಗೋಲ್ಡನ್ (ಸುವರ್ಣ) [illegible] ರಂತಹಗಳ ಪಣ ತೀರ ಸ್ವಲ್ಪ [illegible] ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ

ಏಶಿಯನ್ ಅಶ್ಯೂರನ್ಸ್ ಕಂಪನಿ [illegible]

(ಸ್ಥಾಪನೆ ೧೯೧೧, [illegible])

ಇದು ದೇಶೀಯ ಸ್ವದೇಶಿ ಕಂಪನಿಯು. [illegible] ಕಂಪನಿಯು

ವಿಮೆಯ ರಕಮು ರೂ ೧,೨೫,೦೦೦,೦೦ [illegible] ೭೦೦,೦೦೦

ವಿಮಾ ಹಣ [illegible] ೧೦,೦೦,೦೦೦

[illegible] ೩೩,೦೮,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು [illegible]

[illegible] - ವ್ಹಿ. ಪಿ. [illegible]

[illegible] ಕರ್ನಾಟಕದ [illegible] ಮ್ಯಾನೇಜರ

ಪಿ. ಎಚ್. ಪಾಟೀಲ [illegible]

ಧಾರವಾಡ ಜಿಲ್ಲಾ ಏಜಂಟರು ಶ್ರೀ ಎಸ್. ಎಸ್. [illegible]

ಶ್ರೀ ಬಿ. ಟಿ. [illegible]

ದಲ್ಲಿ ಶ್ರೀ. ನಾರಾಯಣರಾವ ಜೋಶಿಯವರ ಅಧ್ಯಕ್ಷತೆಯಲ್ಲಿ ಜರಗುವದು.

ಹಾವಿಗೆ ಗರುಡನ ಗತಿ ತೋರಿಸುವ ಭಯ

—(೦)—

ಪೇಶಾವರ ಪ್ರಾಂತದಲ್ಲಿ ಫ್ರಂಟಿಯರ ಗಾಂಧಿಯವರ ಪ್ರಚಂಡ ಸ್ವಯಂಸೇವಕ ಸೈನ್ಯವಾಗಿದೆಯಷ್ಟೇ! ಅದರ ಭಯ ತೋರಿಸುವದಕ್ಕೂ ಅಲ್ಲಿಯ ಜಮೀನದಾರರು ತಮ್ಮದೊಂದು ಹಸಿರಂಗಿಯ ಪಡೆಯನ್ನು ಕಟ್ಟಬೇಕೆಂದಿದ್ದಾರೆ. ಸ್ಪೇನದ ರಾಜನ ವಶದಲ್ಲಿ ಹತ್ತೆಂಟು ಲಕ್ಷ ಸೈನ್ಯವಿದ್ದರೂ, ಕೆಂಪು ನಿಶಾನೆಯುವರ ಮುಂದೆ ಆತನ ಆಟವೇ ಸಾಗಲಿಲ್ಲೆಂಬುದನ್ನು ಈ ಜಮೀನದಾರರು ತಿಳಕೊಂಡು, ಕಾಲಕ್ಕೆ ಸರಿಯಾಗಿ ನಡೆದರೇ - ಬಾಳಿವೆಯಾಗುತ್ತದೆ.

[illegible]

[illegible] ಸಿದ್ಧಗೊಳಿಸಿದ [illegible] ಬೇಕು,



ಈ ವಿಷಯವಾಗಿ ಕೆಳಗಿನ ಪತ್ತೆಯ ಮೇಲೆ ಪತ್ರವ್ಯವಹಾರ ಮಾಡಬೇಕು

ಹನುಮಂತ ಜೀವಾಜಿ ಕುಲಕರ್ಣಿ

ಮುಕ್ಕಾಂ-ಯಕ್ಕುಂಡಿ

ಪೋ-ಯಕ್ಕುಂಡಿ

ಜಿ. ಬೆಳಗಾವ ತಾ. ಸವದತ್ತಿ

ಈ ಪತ್ರವನ್ನು [illegible] ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ

R. N. B. 1443.

ವಿಜಯ

ಸಂಪಾದಕರು.— ಅಣ್ಣಾಚಾರ್ಯ ಬಾಳಾಚಾರ್ಯ ಜೋಶಿ.

ವರ್ಷ ೧೬ ಧಾರವಾಡ ರವಿವಾರ ತಾರೀಖು ೧೪ ನೇ ಜೂನ ೧೯೩೧ (ಸಂಚಿಕೆ ೧೩೪

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಸ್ತೋತ್ರದ ಪಾಡಿಯು ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಿದ್ದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ ಅದನ್ನು ಪ್ರಕಟಿಸುತ್ತಿದೆ. ಇದರಲ್ಲಿ ವಾದೀ ಶ್ರೀ ಸಿದ್ಧಾರೂಢರ ಅಜೀ ಜೀ, ಶ್ರೀ. ಗುರುನಾಥಸ್ವಾಮಿಗಳು ಮತ್ತು ಸುಬೇದಾರರಾದ ಶ್ರೀ. ಸಿದ್ಧೇಶ ಇವರ ತೀರ್ಪು ಕೊಡಲ್ಪಟ್ಟ ದಿನದ, ಸ್ವಾಮಿ, ಹಾಗು ಮುನಸಫರ ಭಾವಚಿತ್ರಗಳನ್ನು ಕೊಟ್ಟಿರುತ್ತದೆ. ಪುಸ್ತಕವು ನರ ಅಗ್ರದ ಸಾಧನವು ಹೋದರೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿದ್ದಾರೆ. ಇದರ ಒಂದೇ ಸಾವಿರ ಪ್ರತಿಗಳನ್ನು ತೆಗೆದಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇವು ಪ್ರತಿಗಳು ತೀರ ಬೇಗ ಮಾರಿಹೋಗುವವು. ಅದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ಸಾಡೆಕ್ಕೆ ಆಣೆ, ಹತ್ತು ಪ್ರತಿ ಕೊಳ್ಳುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ ಪಿ ಖರ್ಚು ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಪಾವಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಒಂದು ಪ್ರತಿ ಬೇಡುವವರು ಮುಂಗಡ ಹಣವನ್ನು ಕಳಿಸಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದೂ ವರೆ ಆಣೆ ಇಂಗ್ಲಿಷ ಪಂಕ್ತಿಯೊಂದು ಪಂಕ್ತಿಗೆ ಎರಡು ಆಣೆ ಸರಕಾರಿ ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಪಂಕ್ತಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಒಳಗಿನ ಪತ್ರಿಕೆಗೆ ಪತ್ರವ್ಯವಹಾರ ಮಾಡತಕ್ಕದ್ದು

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು	೧ಕ್ಕೆ	೩—೦—೦
ಕೃಷ್ಣ ಪಾರಿಜಾತ ಅಕ್ಷರು ತೊಲೆ	೧ಕ್ಕೆ	೪—೦—೬

೧೯-೧೧-೩೯ ಮೈಸೂರ ಸ್ಟೋರ,

ಬೆಳಗಾವಿಯವರಗಲ್ಲಿ

ದಿ ಧಾರವಾಡ ಅರ್ಬನ ಕೋ

ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಅಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಎಂಟು ಲಕ್ಷದ ಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀರದಾರ,

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ		ರೂ. ೧೨/೮-೦
೬	,,	೭-೦-೦
೩	,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ		೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ತಾರೀಖು ೧೪-೬-೧೯೩೧ನೇ ಇಸ್ವಿ

ಇನ್ನೂ ಸಿರ್ಸಿ-ಸಿದ್ದಾಪುರದ ದಬ್ಬಾಳಿಕೆ ಹೋಗಿಲ್ಲ.

ಗಾಂಧಿ - ಆಯರ್ವಿನ ಒಪ್ಪಂದದಂತೆಯೇ ದಿವಾಕರ-ಸ್ಲ್ಯಾಟರ್ ಒಪ್ಪಂದವಿದೆ [illegible] ಒಡಂಬಡಿಕೆಯಾಗಿದೆ. ಈ ಒಡಂಬಡಿಕೆಗೆ ನಡುವೆ ಒಬ್ಬ ಪಂಚನೂ ಇದ್ದಾರೆ. ಆದರೆ ಅಧಿಕಾರಿಗಳು ಆ ಪ್ರಕಾರ ನಡೆಯುವದೇ ಇಲ್ಲ. ರೈತರು ಒಂದು ಹಪ್ತೆ ಕೊಡಬೇಕು. ಎರಡನೆಯ ಹಪ್ತೆಯ ಬಗ್ಗೆ ರೈತರು ಅರ್ಜಿ ಮಾಡಬೇಕು. ಅಧಿಕಾರಿಗಳು ಅದರ ಯೋಗ್ಯ ವಿಚಾರಣೆ ಮಾಡಬೇಕೆಂದು ಈ ಕರಾರಿನಲ್ಲಿದೆ. ಬರೇ ಅಧಿಕಾರಿಗಳಲ್ಲ. ಸರಕಾರಕ್ಕೆ ವಿಶ್ವಾಸ ಹುಟ್ಟುವಂತೆ ಕೌನ್ಸಿಲ ಮೆಂಬರಂಥವರು ಕೂಡಿದ ಪಂಚರು ಈ ಬಗ್ಗೆ ನಿರ್ಣಯ ಮಾಡಿಕೊಳ್ಳಬೇಕೆಂದು, ಕಾಂಗ್ರೆಸದವರು ಗೊತ್ತು ಮಾಡಿಕೊಳ್ಳಬೇಕಾಗಿತ್ತು. ಅರ್ಜಿ ತೆಗೆದುಕೊಳ್ಳುವವರು, ವಿಚಾರದ ಫೈಸಲ್ ಮಾಡುವವರು, ರಿಪೋರ್ಟು ಹೇಳುವವರು, ಜಪ್ತಿಯಿಂದ ಹಪ್ತೆ ವಸೂಲ ಮಾಡುವಂಥವರು ಎಲ್ಲರೂ ಸರಕಾರೀ ಅಮಲದಾರರೇ ಆಗಿರುವದರಿಂದ, ಯಾರೂ ಅವರ ಕೈ ಹಿಡಿಯದಂತಾಗುತ್ತದೆ.

ಸರಕಾರೀ ಅಮಲದಾರರಿಂದ ಹೇಗೆ ಅನ್ಯಾಯ ನಡೆದಿದೆಂಬ ವಿಷಯವಾಗಿ ಎರಡು ಉದಾಹರಣೆಗಳನ್ನು ಹೇಳುತ್ತೇವೆ.

ಸಿರ್ಸಿ ತಾಲೂಕಿನಲ್ಲಿ ಗಣಪತಿ ಸೀತಾರಾಮ ಹೆಗಡೆ ಎಂದೋರ್ವ ಅಲ್ಪವಯಿಯು ತಾಯಿಯು [illegible]ಳಾಗಿದ್ದಾಳೆ. ಇವಳು ಒಂದನೆಯ ಹಪ್ತೆ ಕೊಟ್ಟು, ಎರಡನೆಯದನ್ನು ಕೊಡುವದಕ್ಕೆ ತ್ರಾಣವಿಲ್ಲೆಂದು ಹೇಳಿಕೊಂಡ ಅರ್ಜಿ ಕೊಟ್ಟಿದ್ದಳು. ಆದರೂ ಸರ್ಕಲ ಇನ್ಸಪೆಕ್ಟರರು ಇವಳ ಮನೆಗೆ ಜಪ್ತೀ ಹೋಗಿ; ಅಡಿಗೆಯ ಪಾತ್ರೆಗಳನ್ನು ಜಪ್ತ ಮಾಡಿಕೊಂಡು ಹೋದರು.

ಸಿರ್ಸಿಗಿಂತ ಸಿದ್ದಾಪುರದ ಸಂಗತಿಯು ಹೆಚ್ಚಿನದಾಗಿದೆ. ಹಪ್ತೆ ಕೊಡಲಿಲ್ಲೆಂದು ಮುಲಕೀ ಅಮಲದಾರರು ಜಪ್ತ ಮಾಡಿದ ಭಕ್ತ ಕುಂಬಾರದ ಜೇನಸುಗಳನ್ನು ಒಟ್ಟಿದ ಇದರ ವಯಾರಕ್ಕೆ ನಿಲಾವು ಇದಾಗಲೇ ಬಾಡಿಗೆ ಗೊತ್ತು ಮಾಡಿದ್ದಾರೆ. ಜಪ್ತ ಮಾಡಿ ತಾವು ಲಿಲಾವು ಮಾಡಲಿಕ್ಕೆ ಆಲಸ್ಯ ಮಾಡಿದ್ದೊಂದು ತಡಗಳೆಯಿತು. ತಮ್ಮ ಆಲಸ್ಯದ ಪ್ರಾಯಶ್ಚಿತವನ್ನು ರೈತರಿಗೇ ಕೊಟ್ಟಿದ್ದಾರೆ. ಜಪ್ತಾದ ಸಾಮಾನುಗಳನ್ನು ಮಹಾಲಿನ ಬಾಡಿಗೆಗೆಂದೇ ಲಿಲಾವು ಮಾಡಿಬಿಟ್ಟರು. ಬಡ್ಡಿಗೇ ಅಸ್ತಿ ಹೋಯಿತು, ಗಂಟು ಹಾಗೇ ಎದೆಯ ಮೇಲೆ ಕೂತಿಕೆಂಬಂತಾಯಿತು.

ಸಿದ್ದಾಪುರವು ದೊಡ್ಡ ಪಟ್ಟಣವಲ್ಲ. ರೂಪಾಯಿ ಎರಡು ರೂಪಾಯಿ ಬಾಡಿಗೆ ಕೊಟ್ಟರೆ ಬೇಕಾದಂಥ ದೊಡ್ಡ ಮನೆ ಸಿಗುತ್ತದೆ. ಅಲ್ಲಿ ಇತ್ತಿಪ್ಪತ್ತು ಜನರ ಜಪ್ತಿಯ ಸಾಮಾನುಗಳನ್ನಿಡಬಹುದು. ಒಬ್ಬರ ಮಟ್ಟಿಗೆ ದಿನಕ್ಕೆ ಐದಾಣೆಯ ಆಕಾರ ಮಾಡುವದೆಂದರೆ - ಇದೊಂದು ಅಪೂರ್ವ ದಂಡವೆಂದೇ ಹೇಳುವಂತಾಗುತ್ತದೆ.

ಸಿರ್ಸಿ ಸಿದ್ದಾಪುರದ ರೈತರ ದಾರಿದ್ರ್ಯ ಪರಿಹಾರ

ಬಿಕ್ಷೆಯಿಂದ ಜೀವನಕ್ಕೆ ಸಹಾಯ

—(೦)—

ಹುಕ್ಕೇರಿಯಲ್ಲಿ ಕೂಡಿದ್ದ ಕರ್ನಾಟಕ ಪ್ರಾಂತಿಕ ಪರಿಷತ್ತಿನಲ್ಲಿ ಈ ತಾಲೂಕುಗಳ ಜನರ ದಾರಿದ್ರ್ಯ ವಿಮೋಚನೆಗಾಗಿ ಹತ್ತು ಸಾವಿರ ರೂಪಾಯಿಗಳ ಫಂಡು ಮಾಡಬೇಕೆಂದು ಠರಾವಾಗಿರುತ್ತದಷ್ಟೇ, ಹತ್ತು ಸಾವಿರ ಸಾಲದು. ೩೦ ಸಾವಿರ ಬೇಕೆಂದು ಈಗ ಗೊತ್ತು ಮಾಡಿ, ಪಂಡಿತರು ಯಾಚನೆ ಮಾಡಿದ ಒಂದು ವಿನಂತಿ ಪತ್ರವನ್ನು ಪ್ರಸಿದ್ಧ ಪಡಿಸಿದ್ದಾರೆ. ರಶಿಯಾದಲ್ಲಿ ಪ್ರತಿಯೊಬ್ಬನ ಹೊಟ್ಟೆಯ ನೆತ್ತಿಯನ್ನು ಸರಕಾರವೇ ನೋಡುವದು. ಇಂಗ್ಲಂಡದಲ್ಲಿ ಕೆಲಸ ಇಲ್ಲದವನಿಗೂ ರಿಲೀಫ ಫಂಡು ಕೊಡುವರು. ಹಿಂದುಸ್ಥಾನದಲ್ಲಿ ಜೇಲಿನಿದ್ದವನಿಗೆ ತಪ್ಪದೆ ಊಟ ಕೊಡುವರು. ಅನ್ನ ಎಂತಹ ಮಾದರಿಯದೆಂಬ ಪ್ರಶ್ನವಲ್ಲ. ಆಗ್ಗಾದರೂ ತಪ್ಪದ ದೊರೆಯುವದು. ಹೀಗೆ ಪ್ರಜರ ದೆಸೆಯಿಂದಿರುವದಿಲ್ಲ. ರಶಿಯಾ-ಇಂಗ್ಲಂಡದಂತೆ ಅವರ ಯೋಗಕ್ಷೇಮ ಕೇಳುವದಿಲ್ಲ. ಆದ್ದರಿಂದ ಊರವರು ಬಿಕ್ಷೆ ಬೇಡಿ, ಅವರ ರಕ್ಷಣೆ ಮಾಡಬೇಕಾಗುತ್ತದೆ. ಫಂಡು ಎಂಬದರ ಅರ್ಥವು ಭಿಕ್ಷೆಯಾಗದಿದ್ದರೂ, ಅದೊಂದು ಮಾದರಿಯ ತಿರಿಕೆಯೇ ಸರಿ.

ಮುಂಬಯಿ ಡೊಂಗರಿಯಲ್ಲಿ ಪಂಡಿತ ಜವಾಹರಲಾಲ, ಡಾಕ್ಟರ ಅನಸಾರಿ ಮೊದಲಾದವರು ವ್ಯಾಖ್ಯಾನ ಕೊಡುವಾಗ ಕೆಲ ಕುಂಟ ಮುಸಲಮಾನರು ದಂಗೆ ಮಾಡಿದರು. ಆಗೊಬ್ಬನು ಪನ್ನಾಲಾಲನೆಂಬವನ ಹೊಟ್ಟೆಯಲ್ಲಿ ಚೂರಿ ಇರಿದನು. ಇದರಿಂದ ಪನ್ನಾಲಾಲನು ಸತ್ತೇ ಹೋದನು!

ಧಾರವಾಡದಲ್ಲಿ ಪ್ರಚಂಡ ಪಿಕೇಟಿಂಗು.

ಇಷ್ಟು ದಿನಗಳ ವರೆಗೆ ಪರದೇಶಿ ಬಟ್ಟೆಯ ಬಹಿಷ್ಕಾರದ ಕೆಲಸವನ್ನು ಇಲ್ಲಿನ ವ್ಯಾಪಾರಿ ಸಂಘದವರ ಕಡೆಗೆ ಒಪ್ಪಿಸಲಾಗಿತ್ತು. ಅವರ ಗುಪ್ತ ರೀತಿಯಿಂದ ಪೇಟೆಯಲ್ಲಿ ಪರದೇಶೀ ವಸ್ತ್ರದ ಬಿಕರಿ ನಡೆದಿದೆಂದು [illegible] ಕೆಲಸವು ಅವರಿಂದ [illegible] ಪಾರೀ ಸಂಘದ ಅಧ್ಯಕ್ಷ [illegible] "ಆ ಕೆಲಸವು ತಮ್ಮಿಂದಾಗದು. ನಿಮ್ಮ ಕರಾರಂತೆ ನಡೆಯಲು ಶಕ್ಯವಿಲ್ಲ. ಕಾಂಗ್ರೆಸ್ಸಿನವರು ಪಿಕೇಟಿಂಗ ಮಾಡಬಹುದು" ಎಂದು ಸ್ಪಷ್ಟವಾಗಿ ಹೇಳಿದ್ದರಿಂದ ಕಾಂಗ್ರೆಸ ಕಮಿಟಿಯವರು ಪಿಕೇಟಿಂಗ ನಡೆಸ ಬೇಕಾಯಿತು. ಈಗ [illegible] ಪಿಕೇಟಿಂಗ ಪ್ರಾರಂಭವಾಗಿ [illegible] ದಿವಸಗಳಾದವು [illegible] ಗೋಳದಬೋಳೆ, ಪುನರ್ವಾ[illegible] ಅವರ ಅಂಗಡಿಗಳ ಮುಂದೆಯೂ [illegible] ಸಾರವಾಡ [illegible] ಪಿಕೇಟಿಂಗ ನಡೆದಿದೆ [illegible] ಪ್ರಲ್ಲಿಪ್ತ ಯಾವತ್ತು [illegible] ವಾಲನ್ನು [illegible] ಹ ಕೊಳುವವರಿಗೂ [illegible] ಸವನೇ ಪಿಕೇಟಿಂಗು ನಡೆ[illegible] ಟಿಸುವರು ನಿರ್ಧರಿಸಿದ್ದಾರೆ [illegible] ದ ಎಲ್ಲ ಬಂಧುಭಗಿನಿಯರು [illegible] ದಿನಾಲು [illegible] ಕೆಲ್ಲವಿದ್ದಷ್ಟು [illegible] ಪಿಕೇಟಿಂಗಕ್ಕೆ ಸಹಾಯ ಮಾಡಬೇಕೆಂದು [illegible] ದ್ದಾರೆ.

ಸ್ವಯಂಸೇವಕರ ಸ್ವಯಂಸೇವಿಕೆಯರೂ

ಈ ಊರಲ್ಲಿ ಪಿಕೇಟಿಂಗಕ್ಕಾಗಿ [illegible] ಯಿಂದ ಕೆಲವು ಸ್ವಯಂಸೇವಕರೂ ಮತ್ತು ಬೇರೆ ಬೇರೆ ಕಡೆಯಿಂದ ಸ್ವಯಂಸೇವಕರೂ ಬಂದಿದ್ದಾರೆ. ಇನ್ನೂ ಬರತಕ್ಕವರಿದ್ದಾರೆ. ಸ್ಥಾನಿಕ ಸ್ವಯಂಸೇವಕರು ಸಾಕಷ್ಟು ದೊರೆತಿಲ್ಲ. ಇದು ಧಾರವಾಡದ ನಾಗರಿಕ [illegible] ಭೂಷಣವಲ್ಲ. ಕರ್ನಾಟಕದ ಗಂಡು ಮೆಟ್ಟಿನಂಥ, ಗೊತ್ತಾದೊಂದು ಇಂಗ್ಲೀಷ ಕಾಲೇಜೂ, ನಾಲ್ಕೈದು ಹಾಯಸ್ಕೂಲುಗಳೂ, ಕನ್ನಡ ಕಾಲೇಜೂ, ಎಷ್ಟೋ ಶಾಲೆಗಳೂ ಉಳ್ಳ ಈ ಊರಲ್ಲ ಎಲ್ಲಿಂದರೂ ೧೦೦ ಮಂದಿ ಸ್ವಯಂಸೇವಕರು ಪಿಕೇಟಿಂಗಕ್ಕೆ ಸಿದ್ಧರಾಗದಿದ್ದರೆ ಇಡೀ ಕರ್ನಾಟಕಕ್ಕೆ ಕಲಂಕ ಬರುತ್ತದೆ. ಆದ್ದರಿಂದ ಬೇಗನೇ ಎಲ್ಲ ಬಂಧುಭಗಿನಿಯರು ಪಿಕೇಟಿಂಗಕ್ಕೆ ಒಂ

ದು ಧಾರವಾಡದ ಮರ್ಯಾದೆ ಉಳಿಸಬೇಕು.

ಪೊಳ್ಳು ಬೆದರಿಕೆ

ಪಿಕೆಟಿಂಗು ನಡೆದ ಅಂಗಡಿಕಾರರೊಬ್ಬರು ಸ್ವಯಂಸೇವಕರಿಗೆ ಹಾನಿ ಮಾಡುವನು ಹೀಗೆ ಮಾಡುವೆನೆಂದು ಹೇಳಿ ಪೊಳ್ಳು ಬೆದರಿಕೆ ಹಾಕಿದನು. ಪಾಪ! ವ್ಯಾಪಾರವಾಗುವದಿಲ್ಲೆಂಬ ಸಂಕಟದಿಂದ ಆ ಸ್ವಯಂಸೇವಕರು "ಸತ್ಯಾಗ್ರಹ ವೀರರು ಪ್ರಾಣವನ್ನು ಕೊಡಲಿಕ್ಕೆ ಸಿದ್ಧರಿದ್ದಾರೆಂಬುವದನ್ನು ಮರೆಂತ ಕಾರಣ" ಅಷ್ಟರಲ್ಲಿಯೇ "ಬಾಯಿಗೆ ಸ." ದವ [illegible] ?

ಯುವಜಾಗೃತಿ

[illegible] ಸ್ಥಾನದ ಕೋರ್ಟಿನ್ಯಾಯಾಧಿ ಜನರ ಒಡ ಕರನ್ನು ಹಿಂಗಿಸುವದಕ್ಕಾಗಿ ಕಾಂಗ್ರೆಸಿನವರು ಪಿಕೆಟಿಂಗ ಹಚ್ಚಿ ಒಪ್ಪಂದದ ಕಾರ್ಯವನ್ನು ನಡೆಸಿದ ಬಳಿಕ ನ್ಯಾ ಇಂಟಿಲ್ಲ ಸ್ವಯಂ ಸೇವಕರು ತ ಸ್ಟ ಅಂಗಡಿಗೂ ಬಂದು ಪಿಕೆಟಿಂಗು ಮಾಡಿದರೆ ಮಾಡಲೆನ್ನ ಬರೆಂಬುವದನ್ನು ಅಂಥ ಪ ಸಂಗದಲ್ಲಿ ಎಲ್ಲ ಮೇಲೆ ಕಂಡುಕೊಳ್ಳುವದೆಂದ ನಾಯಕರು ಮಾತಾಡುತ್ತಿದ್ದರೆಂದೂ ತಿಳಿದು. ಶ್ರೀ ಜೀ. ಎಸ್. ಕಟಕರ್ಣಿಯವರು ಮುಜಾಗೃತಿ ವ್ಯಾಪಾರಕ್ಕಾಗಿ ತಮ್ಮ ಸ್ವಾರ್ಥವನ್ನು ಬಿಟ್ಟು ಕಾಂಗ್ರೆಸ್ಸಿನ ಸ್ವಾತ್ಮ ಕಾರ್ಯಕ್ಕೆ ಅಡ್ಡ ಬರಬಾರದೆಂದು ತಿಂಡು ತಮ್ಮಲ್ಲಿರುವ ಎಲ್ಲ ಪರದೇಶಿ ವಸ್ತುಗಳನ್ನು ಕಟ್ಟಿ ಕಾಂಗ್ರೆಸಿನವರಿಂದ ಮೊಹರು ಹಾಕಿಸಿದ್ದಾರೆಂದು ತಿಳಿಯುತ್ತದೆ. ಬಾಪು!!

ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆಯಲ್ಲಿ ಸೆಕ್ಷ ಉಳಿತಾಯ

—(೦)—

ಈ ರೇಲ್ವೆಯಲ್ಲಿ ವೆಚ್ಚ ಉಳಿತ ಆ ವೆಂದು ಬರುವ ಗಿನಿಯು ಶಾಯಿಮಿನಿಂದ ಧಾರವಾಡಕ್ಕೆ ಅಪರಾತ್ರಿ ಯಲ್ಲಿ ೨-೩ ಸಮಯದಲ್ಲಿ ಬರುವ ಬೆಂಗಳೂರು ಮೇಲ್ ವ್ಯಾಸಂಜರ ಬಂಡಿಗಳನ್ನು ಒಂದು ಮಾಡುವರು. ಸಣ್ಣ ಸಣ್ಣ ಸ್ಟೇಶನಗಳಲ್ಲಿಯ ಕರನ್ನು ಕಡಿಮೆ ಮಾಡುವರು. ವರ್ಕಶಾಪಗಳಲ್ಲಿಯ ಅನೇಕ ಕೂಲಿಕಾರರನ್ನೂ ತೆಗೆಯುವರು. ಕಚೇರಿಗಳಲ್ಲಿ ಹೊಸ್ತಾಗಿ ಜನರನ್ನು ಭರ್ತಿಮಾಡಿಕೊಳ್ಳರು.

ವರ್ಕಶಾಪಿನಲ್ಲಿನ ಕೂಲಿಕಾರರು ಬಹುವಾಗಿ ತೆಗೆಯಲ್ಪಡುವದರಿಂದ, ಕೆಲಸಗಾರರಿಗೆ ಕೆಲಸದ ಮಿತ್ತಿ ಮೇಲೆ ಸಂಬಳದ ಅಧಿಕಾರ [illegible] ಸಂಬಳಕ್ಕೆ ಬರದೆಂಬ ದೊಡ್ಡ ಚಿಂತೆಯು ಪ್ರಶ್ನವಾದ. ಮೈಸೂರ ಸರಕಾರದ ರೇಲ್ವೆಯಲ್ಲಿ ಒಮ್ಮೆ ತೆಗೆಯುವರೆಂದು ತಿಳಿದು ಬಂದ ಕೂಡಲೆ-ಎಲ್ಲಾ ಕೆಲಸಗಾರರು ಸಂಪೂ ಸತ್ಯಾಗ್ರಹ ಮಾಡಿ, ಕೆಲಸ ಬಿಟ್ಟು ಕೂಡಲೆ ಸರಕಾರದವರು ಎರಡೇ ದಿವಸಗಳಲ್ಲಿ ಇವರ ಕೂಡ ರಾಜಿಯಾದರು. ಆ ಪ್ರಕಾರ ಎಲ್ಲಾ ಕೆಲಸಗಾರರು ಬೇಗ ಟು ಹಿಡಿದರೆ ಕಂಪನಿಯು ತಾನಾಗಿ ಒಪ್ಪಂದಕ್ಕೆ ಬರುವದೆಂದು ಇವರ ಸಂಘದ ಉಪಾಧ್ಯಕ್ಷರಾದ ಶ್ರೀ. ಗಿರಿಯವರು ಹೇಳುತ್ತಾರೆ.

ಕಂಪನಿಯವರು ದೊಡ್ಡ ಸಂಬಳಗಾರರ ಸಂಬಳ ಕಡಿಮೆ ಮಾಡಬೇಕ. ಮತ್ತು ಕಡಿಮೆ ಸಂಬಳಗಾರರಿಗೆ ಬಿನಾಬು ಸರಿಯು ಮೇಲೆ ಕೆಲಸ ಮಾಡ ಲಿಕ್ಕೆ ಹೇಳಬೇಕು. ಜರ್ಮನಿಯಲ್ಲಿ ಆಂತಹ ವ್ಯವಸ್ಥೆಯಾಗಿದ್ದಾರೆ. ಇಲ್ಲಿಯೂ ಹೀಗೆ ಮಾಡುವದರಿಂದ ಎಲ್ಲರ ಅನುಕೂಲವು ಆಗುವದು.

ಗಿರ ಸಾಯದ ನ್ಯಾಯಾಧೀಶರು ಅವಹೇಳನ ಮಾಡಿ ಕೋರ್ಟಿನಿಂದ ಎದ್ದು ಹೋದರು.

ಹಿಂದುಸ್ಥಾನದ ಅವಹೇಳನವನ್ನು ತಮ್ಮ ರಿಪೋರ್ಟಿನಲ್ಲಿ ದೂಷಿಸಿದಂಥ ಸರ ಸಾಯಮನ್ನ ಸಾಹೇಬರು ಸರ್ಕಾರಕ್ಕೆ ಕೋರ್ಟಿಗೆ ಕರಿಯ ಹೊದಿಕೆಯ ಮನೆಯ ದಾರಿ ಹಿಡಿದರು. ವರ್ತಮಾನ ಕೇಳಿ, ವಾಚಕರು ಆಶ್ಚರ್ಯಚಕಿತರಾಗಬಹುದು. ಲಂಡನದ ಗಿಲ್ಡಹಾಲ ಪೋಲೀಸ ಕೋರ್ಟಿನಲ್ಲಿ ರಾಯಲ ಮೇಲ ಸ್ಟೀಮ ಪ್ಯಾಕೆಟ ಸಂಘದ ಚೇರಮನ್ನ ಮತ್ತು ಆಡಿಟರರು ಠೇವಣಿದಾರರ ಸಂಗಡ ಇವರು ಅಧಾವೆ ಪತ್ರಿಕೆಯನ್ನು ಸುಳ್ಳು ಅಂಕಿಗಳಿಂದ ಒರೆದಿದ್ದಾರೆಂದು ಆರೋಪ ಹೊತ್ತು, ಅವರ ವಿಚಾರಣೆ ನಡೆದಿದೆ. ಇವರ ಪರವಾಗಿ ಸರ ಸಾಯಮನ್ನಸಾಹೇಬರೂ, ನಾಲಿನಿ ಬಡರಾಗಿದ್ದ ಸರ ಪಾಟ್ರಿಕ ಹೇಸ್ಟಿಂಗ್ಸಸಾಹೇಬರೂ ಬ್ಯಾರಿಸ್ಟರರಾಗಿದ್ದಾರೆ. ಇವರು ಪ್ರಸಿದ್ಧ ಅಕೌಂಟಂಟರಾದ ಸರ ಉಯಿಲಿಯಮ್ಸ್ ಮ್ಯಾಂಕ ರಿಂದ ರಿಗೆ ಪ್ರಶ್ನೆ ಕೇಳುವಾಗ ಇವರೇ ಲೆಕ್ಕವನ್ನು ಮಾಡುತ್ತಿರುವ ಬೇರೆ ಬೇರೆ ಕಂಪನಿ ಮತ್ತು ಬ್ಯಾಂಕುಗಳ ಆಡಳಿತದ ವಿಷಯವಾಗಿ ಸವಾಲು ಮಾಡಿದರು. ನಿಮ್ಮ ಕಂಪನಿಯ ಪಟ್ಟಿಗೆ ಪ್ರಶ್ನೆ ಹಾಕಿರಿ; ಬೇರೆ ಕಂಪನಿಗಳ ಸಂಬಂಧ ಕರಬೇತರಿಂದು ಮ್ಯಾಜಿಸ್ಟ್ರೇಟರು ಇವರಿಗೆ ಹೇಳಲು- ಸಾಹೇಬರ್ದ್ಯಯರು ಹೀಗೆ ಸವಾಲಿಗೆ ಪ್ರತಿಬಂಧ ಮಾಡಿದರೆ- ನಾವು ಮುಂದೆ ಕೆಲಸ ನಡಿಸುವದಿಲ್ಲೆಂದು ಹೇಳಿ, ಕೋರ್ಟಿಗೆ ಕರಿಯ ಹೊದಿಕೆಯ ಮನೆಯ ದಾರಿ ಹಿಡಿದರು.

ಧರ್ಮೋವಿಜಯತೆ

ಅಖಿಲ ಬ್ರಹ್ಮವೃಂದಕ್ಕೆ ವಿಜ್ಞಾಪನೆ.

——(೦)——

ಈಗ ೮-೧೧ ದಿವಸಗಳ ಈಗಾಗಲೇ ಮತ್ತು ಗಲಾರ ಪೇಟೆಯ ಶ್ರೀ. ವಿಠ್ಠಲದೇವರ ಗುಡಿಯಲ್ಲಿ ದಿನಾಲು ಸಾಯಂಕಾಲದಲ್ಲಿ ೬|| ಯಿಂದ ೮ ರ ವರೆಗೆ ಶ್ರೀಯುತ ಕೃಷ್ಣಾಚಾರ್ಯ ಪಾಯಿ ಇವರು ಶ್ರೀಮದ್ಭಾಗವತ ಸಾರೋದ್ಧಾರ ಪ್ರವಚನೆಯನ್ನು ಮಾಡಲಿಕ್ಕೆ ಹತ್ತಿರುತ್ತಾರೆ.

ಈ ಪ್ರವಚನೆಯು ಕೇವಲ ಮನೋರಂಜಕ ವಲ್ಲದೆ ವೈಷ್ಣವ ತತ್ವದ ಪ್ರಚಾರವನ್ನು ಮಾಡುವದು ಮತ್ತು ನಮ್ಮ ಪೂರ್ವಜರ ಅಸಾಧಾರಣ ತತ್ವಜ್ಞಾನ, ಸ್ವಾರ್ಥತ್ಯಾಗ ಆತ್ಮೋನ್ನತಿ, ನಿಷ್ಠೆ ಇಂಥ ಅನೇಕ [illegible] ಗುಣಗಳ ವಿಮರ್ಶೆಯಿಂದ ನಮ್ಮ ಮುಖ್ಯ ಕರ್ತವ್ಯದ ಬಗ್ಗೆ ನಮ್ಮಲ್ಲಿ ಜಾಗರೂಕತೆಯನ್ನುಂಟುಮಾಡುವದು. ಇದರಿಂದ ನಾಸ್ತಿಕ, ಭ್ರಾಂತ ವಿಪರೀತ ವಿಚಾರಗಳನ್ನು ದೂರ ಮಾಡುವದರಲ್ಲಿ ಉಪಕಾರವಾಗುವದು. ಕಾರಣ ಆತ್ಮಹಿತ ಬಯಸುವ ಈ ಗಾಯಕರು ತಮ್ಮ ಕೆಲಸದ ತಮ್ಮ ಅನೇಕ ಸ್ಥಳದ ಕಾಲಕ್ಷೇಪಗಳಲ್ಲಿ ಇದನ್ನು ಇಟ್ಟುಕೊಂಡು ಶ್ರೀ ಆಚಾರ್ಯರವರ ಅಸ್ಖಲಿತ ಸಂಸ್ಕೃತಿಯುಕ್ತ ಮತ್ತು ಹಿತೋಪದೇಶಕವಾದ ಪ್ರವಚನದ ಲಾಭವನ್ನು ಹೊಂದಬೇಕಾಗಿ ವಿನಂತಿ.

ಗಾಯತ್ರಾಚಾರ್ಯ ಮೊದಲು,
ಗೊಲ್ಲಾಪುರಿರಾವ ಜಿ ಬಿ.ಡಿ.

ಅಕ್ಕ ಸತ್ತರೆ ಅಮವಾಸ್ಯೆ ನಿಲ್ಲದು

—(೮)—

ಮುಂಬಯಿಯಲ್ಲಿರುವ ಟಾಪ್ರೆಸ ಹಾಲಿನಲ್ಲಿ ಒಂದು ದೊಡ್ಡ ಸಭೆ ಶೀ ಕೇಟ್ಕರ - ಅಲ್ಲಿ ಸಭೆ ಮಾಡಗೊಡುವರು ಪಾರ್ಸಿ ರಾಜಕೀಯ ಸಭೆಯವರು ಶ್ರೀ ಕೇಟ್ಕರ ಸವಾಲಿಗಿ ಬೇಡಿದರು. ಮೊದಲು ಶ್ರೀ ಕಾರ್ಯಕರ್ತರು, ಅಜೀರಗೆ ಸವಾಲಿಗಿ ಇಲ್ಲೆಂದರು. ಸೆನಾಪತಿ ಅವರಿಯು ವರ ವೃದ್ಧ ತಾಯಿಗೆ ಜೀವನ್ನಾಶ ಮಾಡಿ ಕೂಡಬೇಕೆಂದು ಈ ಸಭೆ ಕರೆದಿದ್ದರು. ಇದು ಆಕರದ ಕಣ್ಣಿಗೆ ಬಿತ್ತು, ಆದ್ದರಿಂದ ಕೂಡಲಿಲ್ಲ. ಪಾರ್ಸಿಗಳು ತಮ್ಮಲ್ಲಿ ಬರೂ ಸಭೆ ಮಾಡುವರು. ಯಾರೂ ಅವನ್ನು ತಡೆಯಲಾರರು. ಇದ್ದರಿಂದಲೇ ಅಕ್ಕ ಸತ್ತರೆ ಅಮವಾಸ್ಯೆ ನಿಲ್ಲಲೊಲ್ಲದು ಹೇಳುವ

ಕನ್ನಡಿಗರಲ್ಲಿ ಬಿನ್ನಹ.

—(೦)—

ಹಿಗೆರಡು ವರುಷಗಳಿಂದ ನಮ್ಮ ಬಿನ್ನಹವು ಪತ್ರಿಕೆಗಳಲ್ಲಿ ಬರುತ್ತಲೆ ಇದೆ. ಅದರಲ್ಲಿ ನಮ್ಮ ಮುಖ್ಯ ಉದ್ದೇಶವು ಯಥಾರ್ಥವಾದ ಅಯನಾಂಶವನ್ನು ಕಂಡು ಹಿಡಿಯುವದೇ ಆಗಿದೆ. ನಮ್ಮ ಆ ಪ್ರಯತ್ನಕ್ಕೆ ಇದುವರೆಗೂ ಕಿಂಚಿತ್ತಾದರೂ ಸಾಫಲ್ಯ ಕರ್ನಾಟಕದ ಅಭ್ಯುದಯ ಚಿನ್ಹವು ತೋರಲಿಲ್ಲ. ಕನ್ನೊಳಕರ ಭಾರತದ ಯಥಾರ್ಥವಾದ ಅಯನಾಂಶವನ್ನು ಕಂಡು ಹಿಡಿಯದ ಹೊರತು ಜೋತಿಶಾಸ್ತ್ರದ ಉಪಯೋಗವು ಸಾಕಷ್ಟು ಆಗಲಾರದು. ಶ್ರೀ ಲೋಕಮಾನ್ಯರು ಗ್ರಂಥದ ವೇದ ಆಧಾರಗಳ ಬಹುಮತದಿಂದ ರೈವತ ಪಕ್ಷದ ಅಯನಾಂಶವು ಯಥಾರ್ಥವೆಂದು ಅದನ್ನು ಪ್ರೋತ್ಸಾಹಿಸಿದರು ನಮಗಾದರೋ ಪ್ರತ್ಯಕ್ಷ ಪ್ರಮಾಣಗಳಿಂದ ಇದನ್ನು ಮನಗಾಣದೆ ಬರೀ ಇಷ್ಟರಿಂದಲೇ ತೃಪ್ತಿಯಾಗಲಿಲ್ಲ. ಶ್ರೀ. ಲೋಕಮಾನ್ಯರ ಶಿಷ್ಯರೆಂದು ಪ್ರಸಿದ್ಧರಾದ ಪಟವರ್ಧನ ರಘುನಾಥ ಶಾಸ್ತ್ರಿಗಳು, ಪ್ರೋಫೆಸರ ನಾಯಕ ಮುಂತಾದ ಮಹಾರಾಷ್ಟ್ರದ ಜ್ಯೋತಿರ್ವಿದರು ಶ್ರೀ. ಲೋಕಮಾನ್ಯರು ಸಾಗ ಮಾಡಿದ ಈ ಕಾರ್ಯವನ್ನು ಅಲ್ಪ ಸಂತುಷ್ಟತೆಯಿಂದ ಮುಂದೆ ಸಾಗಿಸದೆ ಬಿಟ್ಟು ಬಿಟ್ಟಿದ್ದಾರೆ. ಪ್ರತ್ಯಕ್ಷ ನಿದರ್ಶನವೆಂದರೆ ಫಲ ಜ್ಯೋತಿಷ್ಯ ಶಾಸ್ತ್ರದ ದೃಷ್ಟಿಯಿಂದಲೇ ನೋಡಬೇಕು ತಾವು ಹೇಳಿದ ಭವಿಷ್ಯವು ನಿಜವಾಯಿತೆಂದರೆ ಅದು ಪ್ರತ್ಯಕ್ಷ ಅನುಭವವೆಂದು ಸರ್ವಥಾ ತಿಳಿಯಬಾರದು. ಪ್ರತ್ಯಕ್ಷವೆಂದರೆ ಕಣ್ಣಿಗೆ ಕಾಣುವಂಥಾದ್ದೇ ಎಂದು ನಾವು ಭಾವಿಸುತ್ತೇವೆ. ಮತ್ತು ಅದೇ ಮಾರ್ಗದಲ್ಲಿ ಪ್ರಯತ್ನಿಸುತ್ತಿರಲು ನಮಗಾದರೂ ಪ್ರಹಜ್ಞಾತದ ಯುಕ್ತಿಯು ಗೋಚರವಾಯಿತು. ಇದನ್ನು ಎಲ್ಲ ಜೋತಿಷಿಗಳು ಅಂಬರೂ ಇದರ ಮಹತ್ವವನ್ನು ಭಾವಿಸಲಿಲ್ಲವಲ್ಲ ಎಂಬದೇ ವ್ಯಸನವನ್ನುಂಟು ಮಾಡುವದು. ನಾವು ಯಾರಿಗೂ ಗೊತ್ತಿಲ್ಲದ್ದನ್ನು ಹುಡುಕಿ ತೆಗೆದಿದ್ದೇವೆಂದು ಗರ್ವಿತರಾಗುವದಿಲ್ಲ. ನಮ್ಮ ಕನ್ನಡ ಬಂಧುಗಳು ನಮಗೆ ಬೇಕಾದ ಅಲ್ಪ ಸಹಾಯವನ್ನು ದಯಪಾಲಿಸಿದರೆ ಕರ್ನಾಟಕವು ಜೋತಿಃಶಾಸ್ತ್ರದ ಪ್ರಗತಿಗೆ ಜೋಡಲಕೊಟ್ಟ ಕೀರ್ತಿಗೆ ಪಾತ್ರವಾಗುವದು.

ಇಷ್ಟು ನಮಗೆ ಬೇಕಾದ ಸಹಾಯವನ್ನಿಷ್ಟು ಕೇಳಿಕೊಳ್ಳುತ್ತೇವೆ. ದಿನಾಲು ಕರ್ನಾಟಕದಲ್ಲಿ ಎಷ್ಟೋ ಶಿಶುಗಳು ಜನನವಾಗುತ್ತವೆ. ಅವುಗಳನ್ನೆಲ್ಲ ಬಿಟ್ಟು ಕೆಲ ವಿಶಿಷ್ಟ ದಿನಗಳಲ್ಲಿ ಹುಟ್ಟಿದ ಶಿಶುಗಳ ವೃತ್ತಾಂತವು ನಮಗೆ ತಿಳಿಯಬೇಕಾದುದು. ಸದ್ಯಕ್ಕೆ ಈ ತಿಂಗಳಲ್ಲಿಯ ಕೆಲ ದಿನಗಳನ್ನು ಮಾತ್ರ ಆರಿಸಿದ್ದೇವೆ. ಮುಂದೆ ಆಗಸ್ಟ ಹಾಗು ಸಪ್ಟಂಬರ ತಿಂಗಳಲ್ಲಿಯೂ ಕೆಲ ದಿನಗಳು ಹೋಲುವವು. ಅವನ್ನು ಆಯಾಗಲೆ ಪ್ರಸಿದ್ಧ ಮಾಡುವೆವು. ಸದ್ಯಕ್ಕೆ ಈ ಜೂನ ತಿಂಗಳ ೧೬ ರಿಂದ ೨೦ ತಾರೀಖಿನ ವರೆಗೆ ಐದು ದಿನಗಳಲ್ಲಿ ಹುಟ್ಟಿದ ಶಿಶುಗಳಿಗೆ ದೇಹದ ಯಾವದಾದರೂ ಅವಯವದಲ್ಲಿ "ಮಚ್ಚೆ"ವು (ಒಣ್ಣದ ಕಲೆಗಳು) ಇರಬೇಕೆಂದು ತಿಳಿಯುವದು ಅದು ಅದಯೋ ಇಲ್ಲವೋ ಚನ್ನಾಗಿ ಪರೀಕ್ಷಿಸಿ ನಮಗೆ ತಿಳಿಸಬೇಕು ಮತ್ತು ಅದು ಇರುವ ಸ್ಥಾನ, ಆಕಾರ, ವರ್ಣ, ಶಿಶುವು ಜನಿಸಿದ ತಾರೀಖು ವೇಳೆ, ಗ್ರಾಮ ಸಹಿತ ತಿಳಿಸುವದಾದರೆ ಬಹಳ ಉಪಕಾರವಾಗುವದು ಈ ಮಚ್ಚೆಗಳು ಪ್ರತ್ಯಕ್ಷ ಅನುಭವಕ್ಕೆ ಬರುವ ವಸ್ತುಗಳೆಂಬ ಮಾತಿಗೆ ಸಂಶಯವೇ ಇಲ್ಲ

ಎಲ್ಲ ಪತ್ರವ್ಯವಹಾರವನ್ನು ದಾರವಾಡದ ಕನ್ನಡಿಗರ ಕೂಟದೊಡನೆ ಮಾಡಬೇಕು.

ತುರಂಗ ಒಡೆದು ನೂರು ಕೈದಿಗಳ ಪಲಾಯನ

—(೦)—

ರಂಗೂನದ ಹತ್ತಿರುವ ಒಂದು ತುರಂಗದಲ್ಲಿಗುವ ನೂರು ಕೈದಿಗಳು ತುರಂಗ ಒಡೆದು. ಅಲ್ಲಿಯ ಕತ್ತಿ, ಬಂದೂಕು, ಕಾಡತೂಸು ತಕ್ಕೊಂಡು, ದಾರಿಯಲ್ಲಿ ಪ್ರವಾಸಿಗಳಿಗೆ ಗುಂಡು ಹಾಕಿ, ಮುಂದೆ ಕಂಡವರ ಮೇಲೆ ಗುಂಡು ಹಾಕುತ್ತಾ ನೂರಾರು ಕೊಲೆಗಳನ್ನು ಮಾಡುತ್ತಾ ಒಂದು ಗಾರದನ್ನು ಕೂಡಿಕೊಂಡರೆಂಬ ಭಯಂಕರ ಸುದ್ದಿ ಬಂದಿದೆ.

ಮಹಾತ್ಮರಿಗೆ ಬೆಳ್ಳಿಯ ಚರ್ಖದ ಕಾಣಿಕೆ

—(೦)—

ಮುಂಬಯಿಯ ಶ್ರೀ. ಗಂಗಾಬಾಯಿ ಎಂಬವರ ಗುಜರಾಥಿ ಹೆಣ್ಣು ಮಗಳು ಎರಡುಸಾವಿರ ರೂಪಾಯಿ ಬೆಲೆಬಾಳುವ ಬೆಳ್ಳಿಯ ಚರ್ಖಯನ್ನು ಕಾಣಿಕೆಯಾಗಿ ಕೊಟ್ಟಿದ್ದಾಳೆ.

ಚಂದಾದಾರರಿಗೆ ಸೂಚನೆ

—(೦)—

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಜಾಹೀರ ನೋಟೀಸು

ನಾನು ಸೀತವ್ವಾ ಕೋಂ ಫಕೀರಪ್ಪಾ ಬಿನ್ನ ದುಂಡಪ್ಪಾ ಕಮತ ಈ ಜಾಹೀರ ನೋಟೀಸಿನಿಂದ ಯಾವತ್ತೂ ಜನರಿಗೆ ತಿಳಿಸುವದೇನಂದರೆ –

ನನ್ನ ಗಂಡ ಫಕೀರಪ್ಪಾ ಬಿನ್ನ ದುಂಡಪ್ಪಾ ಇವನು ೧೫–೨೦ ವರ್ಷಗಳ ಹಾಗಾಯಿತು ನನ್ನ ಸಂಗಡ ಚಲೋ ರೀತಿಯಿಂದ ಬಾಳ್ವೆ ಮಾಡಿಕೋತಾ ಒಂದಿದ್ದು ಈಗ ಎರಡು ವರ್ಷ ಆಗಾಯಿತು ಆಗದೀ ಭ್ರಮಿಷ್ಟನಾಗಿರುತ್ತಾನೆ ಅವನಿಗೆ ಯಾವದೇ ತರಹದ ಜ್ಞಾನವು ಈಗ ಉಳಿದಿರುವದಿಲ್ಲಾ ಅವನಿಂದ ನನ್ನ ಹೊಟ್ಟೀಲೆ ೨ ಗಂಡು ೧ ಹೆಣ್ಣು ಹೀಗೆ ಮೂರು ಹುಡುಗರು ಇದ್ದು ಅವು ತೀರ ಅಜ್ಞಾನ ಸ್ಥಿತಿಯಲ್ಲಿರುತ್ತವೆ ಸದರೀ ನನ್ನ ಗಂಡನ ಭ್ರಮಿಷ್ಟತರದ ಫಾಯದೇ ತಗೊಂಡು ಜನರು ಅವನ ಕಡಿಯಿಂದ ಹೊಲಾ ವ ಮನಿ ವಗೈರೆ ಆಸ್ತಿಯ ವಿಲ್ಹೆವಾಟ ಮಾಡಿಸಲು ಪ್ರಯತ್ನ ನಡಿಸಿಪ್ಪಾರೆ ಕಾರಣಾ ಈ ನೋಟೀಸು ಕೊಡುವ ಭಾಗ ಬತ್ತು ಅವನ ಕಡಿಯಿಂದ ಮನಿ, ಹೊಲಾ ವಗೈರೆ ಯಾವದೇ ಆಸ್ತಿಯನ್ನು ಮತ್ತೀ ಖರೀದಿ ವಗೈರೆ ತೆಗೆದುಕೊಳ್ಳಬಾರದು ಜರ ತಗೊಂಡರೆ ಅವುಗಳ ಮೇಲೆ ಖರೀದಿ ವ ಪತ್ತೀದಾರರ ಹಕ್ಕು ನಡಿಯಲಾರದು ಮತ್ತು ಸದರೀ ವ್ಯವಹಾರದಿಂದ ಈ ನನ್ನ ಅಜ್ಞಾನ ಹುಡುಗರು ಯಾವದೇ ರೀತಿಯಿಂದ ಬಾಂಧಯಿ ಸಲಾರರು ತಿಳಿಯುವದು ತಾ|| ೧೪–೬–೧೯೨೧ ನೇ ಇಸ್ವಿ

ಈ ಎಡಗೈ ಹೆಬ್ಬೆರಳಿನ ಗುರ್ತ ಸೀತವ್ವಾ ಕೋಂ ಫಕೀರಪ್ಪಾ ಕಮತ ಸಹೀ ಕಲ್ಲೇಶ್ವರ ಇಕೆ ಕೈದು ಇರುತ್ತದೆ

ಜಾಹೀರಾತು

ಕಲ್ಲಿನ ಕೆತ್ತನೆ ಶಿಲೆಯಲ್ಲಿ ಸಿದ್ಧಗೊಳಿಸಿದ ಹನುಮಂತದೇವರ ಮೂರ್ತಿ ಬೇಕು.

ಈ ವಿಷಯವಾಗಿ ಕೆಳಗಿನ ಪತ್ತೆಯ ಮೇಲೆ ಪತ್ರ ವ್ಯವಹಾರ ಮಾಡಬೇಕು

ಹನುಮಂತ ಜೀವಾಜಿ ಕುಲಕರ್ಣಿ
ಮುಕ್ಕಾಂ–ಯಕ್ಕುಂಡಿ
ಪೋ–ಯಕ್ಕುಂಡಿ
ಜಿ. ಬೆಳಗಾವ ತಾ. ಸವದತ್ತಿ

ಈ ಪತ್ರವನ್ನು ಅಣ್ಣಾಚಾರ್ಯ ಭಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨, ಧಾರವಾಡ ಸೋಮವಾರ ತಾರೀಖು ೧೫ ನೇ ಜೂನ ೧೯೩೧ (ಸಂಚಿಕೆ ೧೩೫

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯು ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ ಶಿದ್ಧಾಪದಾಕರ ಅಸೀ ಜಿ. ಶ್ರೀ. ಆರೂಢಸ್ವಾಮಿಗಳ ಕೃಪಿಯಿತ್ತು ಮತ್ತು ಮುನಸಫರಾದ ಶ್ರೀ. ಸಟನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕ ಬ ಹಳ ಅಗ್ರಹದ ಸಜ್ಜನರ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ಮುಗಿದುಹೋಗುವವು. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕೊಳ್ಳುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚು ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಯಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂ ವರೆ ಆಣೆ ಇಂಗ್ಲಿಷ ಪತಿಯೊಂದು ಪಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನ ದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು. ಒಳಗಿನ ಪತ್ರಿಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ ೨—೦—೦.
ಕೃಷ್ಣ ಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦

೮—೧೧—೩೯ ಮೈಸೂರ ಸ್ಟೋರ,
ಬೆಳಗಾವಿಯವರಗಲ್ಲಿ
ಹುಬ್ಬಳ್ಳಿ

ದಿ ಧಾರವಾಡ ಅರ್ಬನ ಕೋ

ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಹುಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಎಂಟು ಲಕ್ಷದ ಮೇಲುಂಟು. ಹಳ್ಳಿ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಬಳಾಡಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳ ಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ತಾರೀಖು ೧೫-೬-೧೯೩೧ನೇ ಇಸ್ವಿ

ಧಾರವಾಡ ಜಿಲ್ಲೆಯ ಸ್ಕೂಲಬೋರ್ಡು

ಸಿಕ್ಕಲ್ಲಿ ತಿಕ್ಕಿದಂತೆ ಮತ್ತಷ್ಟು ತಪ್ಪು !!

——(೦)——

ಧಾರವಾಡ ಜಿಲ್ಲೆಯ ಸ್ಕೂಲಬೋರ್ಡಿನ ವಿಷಯವಾಗಿ ವಿಜಯದಲ್ಲಿ ಒಂದು ಲೇಖವನ್ನೋದಿ ಕಂಡು, ಬೋರ್ಡಿನವರು ತಮ್ಮ ತಪ್ಪು ಒಪ್ಪಿಕೊಂಡು, ಅದನ್ನು ತಿದ್ದಿ ಕೊಂಡು, ವ್ಯೊನದಿಂದ ಪ್ರಶಂಸನೀಯವಾಗುವಂಥ ವ್ರತಧಾರಣ ಮಾಡಬೇಕಾಗಿತ್ತು. ಆದರೆ ಕರ್ನಾಟಕ ಟಾಯಿಮ್ಸದ ಖಾಂತರವಾಗಿ ಉತ್ತರ ಕೊಡಹೋದದ್ದು ಒಂದು ತಪ್ಪು ಮುಚ್ಚಿಕೊಳ್ಳುವದಕ್ಕಾಗಿ ಮತ್ತೊಂದು ತಪ್ಪು ಮಾಡಿದಂತಾಗಿರುತ್ತದೆ. ಪ್ರತ್ಯಕ್ಷ ಪ್ರಮಾಣವಾಗಿ ಕರ್ನಾಟಕ ಟಾಯಿಮ್ಸದ ಮುಂದಿನ ಎರಡು ಅವತರಣಗಳೇ ಸಾಕು. ಇದರ ೫ನೇ ಜೂನ ಸಂಚಿಕೆಯಲ್ಲಿ

ತಾ|| ೩೧ ೫-೩೧ ನೆಯ ಪತ್ರದಲ್ಲಿ ವಿಜಯಕಾರರು ೫೦೦ ಶಿಕ್ಷಕರ ವರ್ಗಾವರ್ಗಿಗಳಾಗುವವೆಂದು ಒರೆದಿರುವರು. ಆದರೆ ಆ ಹೊತ್ತಿಗೆ ೬೧ ವರ್ಗಾವರ್ಗಿಗಳಾಗಿದ್ದವೆಂದು ನಮಗೆ ವಿಶ್ವಸನೀಯವಾದ ಆಧಾರಗಳಿಂದ ಗೊತ್ತಾಗಿರುತ್ತದೆ. ವರ್ಗಾವರ್ಗಿಯ ಕೆಲಸವು ಈಗ ಪೂರಾ ಮುಗಿದು ಹೋಗಿದೆಯಾದರೂ ಒಟ್ಟು ೨೦೬ ವರ್ಗಾವರ್ಗಿಗಳಾಗಿರುತ್ತವೆಂದು ನಮಗೆ ತಿಳಿದಿದೆ.

೧೦ ನೆಯ ತಾರೀಖಿನ ಸಂಚಿಕೆಯಲ್ಲಿ ವಿಜಯಕ್ಕೆ ಅವ್ಹಾಹನವೆಂದು—

ಸ್ಕೂಲಬೋರ್ಡಿನವರು ಇನ್ನೂ ೬೧ ವರ್ಗಾವರ್ಗಿಗಳನ್ನು ಮಾಡಿರುವಾಗ ೫೦೦ ವರ್ಗಾವರ್ಗಿಗಳನ್ನು ಮಾಡಿರುವರೆಂದು ಅಸತ್ಯ ಸಂಗತಿಯನ್ನು ಪ್ರಕಟಿಸಿದ್ದೇಕೆ ?

ಮೊದಲು ವರ್ಗಾವರ್ಗಿಗಳು ೬೧, ಆದರಲ್ಲಿ ಒಟ್ಟು ೨೦೦ ವರ್ಗಾವರ್ಗಿಗಳಾದವೆಂದು ಮೊದಲು ಛಾಪಿ ಜವಾಬು ಕೊಟ್ಟು, ಅನಂತರ ಒಂದೇ ೬೧ ವರ್ಗಾವರ್ಗಿಗಳಾದವೆಂದು ಒರೆಯುವದು ತನ್ನ ಕೈ ತಾನೇ ಕಟ್ಟಿಸಿಕೊಂಡಂತಾಗುತ್ತದೆ. ಟಾಯಿಮ್ಸಕಾರರು ಬರೆಯುವಾಗ ೬೧ ಆಗಿದ್ದವು. ಅಂಥವು ಇಂದಿಗೆ ನೂರು ಆಗಿವೆಂದು ಬೇಕೊಬ್ಬ ವಿಶ್ವಾಸದ ಗೃಹಸ್ಥರು ನಮಗೆ ಹೇಳುತ್ತಾರೆ. ವರ್ಗಾವರ್ಗಿ ಎಂದರೆ-ಶಾಲೆಯಲ್ಲಿ ಹುಡುಗರು ಹೊಡೆಯುವ ಹಲಪಿಯಂತಾಗುತ್ತದೆ. ಒಂದು ವರ್ಗಕ್ಕೆ ಬಾಳೆಯ ಮರಿಯಂತೆ ಹಲವು ಉಪವರ್ಗಗಳಾಗುತ್ತವೆಂಬದನ್ನ ಕರ್ನಾಟಕ ಟಾಯಿಮ್ಸಕಾರರು ಮೊದಲು ಒಪ್ಪಿ, ಎರಡನೆಯ ಲೇಖದಲ್ಲಿ ಅದನ್ನು ಪೂರಾ ಹಾರಿಸಿ ಕೊಂಡಿದ್ದಾರೆ. ಒಂದು ವರ್ಗಕ್ಕೆ ಎಷ್ಟು ಟೊಂಗೆಗಳೊಡೆದವೆಂಬದನ್ನು ಟಾಯಿಮ್ಸಕರ್ತರು ತಿಳಕೊಳ್ಳಬೇಕು. ಬ್ಯಾಂಕಿನಲ್ಲಿ ದಿನಾಲು ಲಕ್ಷಾವಧಿ ರೂಪಾಯಿಗಳು ಖರ್ಚಿಗೆ ಬೀಳುತ್ತವೆ. ಸಾಯಂಕಾಲದಲ್ಲಾದ ಒಟ್ಟು ಬೇರೀಜಿನಿಂದ ಒಂದೇ ಖರ್ಚು ಬಿತ್ತೆಂದು ಹೇಳುವದು ಎಷ್ಟು ಮೂರ್ಖತನವೋ ? ಟಾಯಿಮ್ಸಕರ್ತರು ಅನಕ್ಕೆಂದು ಹೇಳುತ್ತಾ, ಕಪೋಲಿ ಕೂಡುತ್ತಾ, ೬೧ ವರ್ಗಾವರ್ಗಿಗಳಾದವೆಂದು ಬಾಯಿಬಡಿಯುವದೂ ಅಷ್ಟೇ ಹೇಳಿ ಮಾಡಿಸಿದಂಥ ಮೂರ್ಖತನವಾಗುತ್ತದೆ.

" ವಿಜಯಕಾರರು ಉಜ್ವಲ ರಾಷ್ಟ್ರಭಕ್ತರಂತೆ ನಟಿಸುತ್ತಿದ್ದು, ಜನತೆಯಿಂದ ನಡಿಸಲ್ಪಡುವ ಸ್ಕೂಲಬೋರ್ಡಿನಲ್ಲಿ ಕೈ ಹಾಕಬೇಕೆಂದು ಸರಕಾರಕ್ಕೆ ಅಂಗಲಾಚಿ ಬೇಡಿಕೊಂಡರೇಕೆ? " ಎಂಬದೊಂದು ತಿಳಿಗೇಡಿ ಮತ್ತು ತಾಳಗೆಟ್ಟ ಪ್ರಶ್ನೆ ಮಾಡಿದ್ದಾರೆ. ಜನತೆಯ ಕೈಯ್ಯಲ್ಲಿ ಯಾವದೊಂದು ಅಧಿಕಾರ ಕೊಟ್ಟ ಕೂಡಲೆ- ಅದಕ್ಕೆ ಬಾರಾಖೂನಿಯ ಮಾಫಿಯು ದೊರೆಯಿತೆಂದು ತಿಳಿಯಬೇಕೇ? ಅದಕ್ಕೆ ಅಧಿಕಾರ ಕೊಟ್ಟ ಒನತೆಗೆ ಅದರ ತಪ್ಪುಗಳ ವಿಷಯವಾಗಿ ಜವಾಬು ಕೇಳುವ ಅಧಿಕಾರವು ನಿಸರ್ಗದತ್ತವಾಗಿರುತ್ತದೆ. ಅದರಂತೆ ಬೋರ್ಡು ಗುರ್ದಂಡ ತಪ್ಪು ಮಾಡಿದರೆ- ಅದರ ವಿರುದ್ಧ ಯೋಗ್ಯ ಅಧಿಕಾರಿಗಳ ಮುಂದೆ ದೂರುಕೊಳ್ಳುವದು ಎಂದಿಗೂ ತಪ್ಪಾಗುವದಿಲ್ಲ. ಆ ಅಧಿಕಾರಸ್ಥರು ಸದ್ಯದಲ್ಲಿ ವಿದ್ಯಾಖಾತೆಯವರಾಗಿದ್ದು, ಅವರ ಮುಂದೆ ಬೋರ್ಡಿನ ತಕರಾರತಿಯನ್ನೊಯ್ಯುವದು ವರ್ತಮಾನಪತ್ರಕಾರರ ಸಹಜ ಧರ್ಮವಾಗಿರುತ್ತದೆ ಸ್ವರಾಜ್ಯವಾದ ಬಳಿಕ, ಕಾಂಗ್ರೆಸ ಕಮೀಟಿಗೆ ಅಪೀಲಧಿಕಾರ ಬಂದರೆ- ಕಾಂಗ್ರೆಸದ ಮುಂದೇ ದೂರುಕೊಳ್ಳುವರು. ವಿಜಯಕಾರರಂತೆ ಕರ್ನಾಟಕ ಟಾಯಿಮ್ಸಕರ್ತರೂ, ಬೋರ್ಡಿನವರೂ ಕಾಂಗ್ರೆಸದ ಅನುಯಾಯಿಯಾಗಿ, ಶ್ರೀ. ಹೊಸಮನಿ ವಕೀಲರಂಥ ಉಚ್ಚ ದೇಶಭಕ್ತರಾಗಿದ್ದರೆ- ಅವರಿಂದ ಹೀಗೆಂದೂ ಬೇಜವಾಬದಾರಿ ಹಿಯಾಳಿಸಿಕೊಳ್ಳುವಂಥ ಕೃತ್ಯವೇ ಆಗುತ್ತಿದ್ದಿಲ್ಲ.

ವಿಜಯಕಾರರು ಸತ್ಯವೋ? ಬೋರ್ಡಿನವರು ಸತ್ಯವೋ? ಎಂದು ಕೊನೆಯ ತೀರ್ಪು ಪಡೆಕೊಳ್ಳಲಿಕ್ಕೆ ವಿಜಯಕಾರರು ಸಿದ್ಧರಾಗಿ ನಿಂತಿದ್ದಾರೆ. ವೀರಶೈವರಾದಂದ ಶ್ರೀ. ಹೊಸಮನಿ ವಕೀಲ, ಶ್ರೀ. ಹ್ವಿ ಹ್ವಿ ಪಾಟೀಲ, ಶ್ರೀ ಹೊನ್ನಾಪೂರಮಠ ವಕೀಲ, ಶ್ರೀ ಗದಿಗೆಪ್ಪ ಹಳ್ಳಿಕೇರಿ, ಶ್ರೀ ಪುರಾಣಿಕ ಸಂಪಾದಕ ಲೋಕಮತ, ಇವರದೊಂದು ಕಮೀಟಿ ನೇಮಿಸಲಿ, ಅವರು ಎರಡೂ ಪಕ್ಷಗಳ ತಕರಾರು ಕೇಳಿಕೊಂಡು ನಿರ್ಣಯವು ಹೇಳಲಿ ವಿಜಯಕಾರರು ಅದನ್ನು ಶಿರಸಾಮಾನ್ಯ ಮಾಡುವರು ಇದಕ್ಕೆ ಬೋರ್ಡು ಮತ್ತು ಕರ್ನಾಟಕ ಟಾಯಿಮ್ಸಕಾರರು ಸಿದ್ಧರಿರುವರೇ?

——

ವರ್ಗಾವರ್ಗಿಯ ಒಂದು ಕೌತುಕದ ಮಾದರಿಯು.

ಒಂದೇ ಅಗಳು ಹಿಚಿಕಿದರೆ ಅನ್ನ ಸಾದದ್ದು ತಿಳಿಯುತ್ತದೆ.

ಜಡಕೋಡದ ಶ್ರೀ ತ್ರಿಯಂಬಕ ಶಿವರಾವ ದೇಶಪಾಂಡೆಯವರು ತಮ್ಮೂರ ವರ್ಗಾವರ್ಗಿಯನ್ನು ಕುರಿತು ಮುಂದೆ ಕಿಳಿಟ್ಟಂತೆ ಹೇಳುತ್ತಾರೆ

ನಮ್ಮೂರಲ್ಲಿ ಶ್ರೀ ಕಟ್ಟಿ ಎಂಬುವರು ಹೆಡ್ಡಮಾಸ್ತರರಿದ್ದರು. ಇವರು ಮೂರನೆಯ ವರ್ಷದ ಟ್ರೇಂಡರು. ಇವರು ಏಳನೆಯ ಇಯತ್ತೆಯನ್ನಿಟ್ಟು ಮುಲಕೀ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಕಳಿಸುತ್ತಿದ್ದರು. ನೂರಕ್ಕೆ ೭೬ರಂತೆ ಪಾಸಾಗುತ್ತಾ ಬಂದಿದ್ದಾರೆ. ಇವರನ್ನು ಊರು ಬಿಡಿಸಿರೆಂದು ಊರವರು ಅರ್ಜೀ ಮಾಡಲಿಲ್ಲ. ಮತ್ತು ವರ್ಗಮಾಡುವ ಅವಶ್ಯಕತೆಯೂ ಇರಲಿಲ್ಲ.

ಇವರ ಸ್ಥಳದಲ್ಲಿ ಎರಡನೆಯ ವರ್ಷದ ಶ್ರೀ. ಗಣ ಚಾರಿ ಎಂಬುವರನ್ನು ತಂದಿದ್ದಾರೆ ಇವರ ಕೈಕೆಳಗೆ ಶ್ರೀ. ಆಪಟ್ಟಿ ಮತ್ತು ಸೂಲವಿ ಶ್ರೀ. ದೇಶಪಾಂಡೆಯವರಿಬ್ಬರು ಅಸಿಸ್ಟಂಟರಾಗಿದ್ದಾರೆ. ಹೆಡ್ಡ ಮಾಸ್ತರರಂತೆ ಇವರೂ ಎರಡನೆಯ ವರ್ಷದ ಟ್ರೇಂಡರೇ. ಇದರಲ್ಲಿ ಜವ ತ್ಕಾರವೇನಂದರೆ- ಹೆಡ್ಡ ಮಾಸ್ತರರಾದ ಶ್ರೀ. ಗಣಚಾರಿಯವರು ಶ್ರೀ ಆಪಟ್ಟಿಯವರ ಕೈಕೆಳಗೆ ಹೆಬ್ಬಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದವರು. ಶ್ರೀ. ಗಣಚಾರಿಯವರಿಗಿಂತ ಇವರ ಸರ್ವೀಸ ಹೆಚ್ಚು ಮತ್ತು ಸಂಬಳ ಹೆಚ್ಚು ಇವರು ಟ್ಟೆಯವರಿಗೆ ೪೭ ರೂಪಾಯಿ ಸಂಬಳ. ಶ್ರೀ. ಗಣಚಾರಿಯವರಿಗೆ ೪೨ ರೂಪಾಯಿ !! ಆದರೂ ಇವರು ಗುರುವಿನ ಮೇಲೆ ಗುರುವಾದರು. ಹೀಗೆ ಗುರುವಿನ ತಲೆಯಮೇಲೇರಿಸಿ ಕೂಡ್ರಿಸುವಂಥ ಅಸ

ಧಾರಣ ಕರ್ತೃತ್ವವೂ ಇವರಲ್ಲಿಲ್ಲ. ಆ್ಯಡಿಮಿನಿಸ್ಟ್ರೇಟರಾದ ಎ. ನಾಯಕರವರು ಇವರ ವಿಷಯವಾಗಿ ಕೇಗೂರ ಶಾಲೆಯಲ್ಲಿ ಯಾವ ತರಾ ಬರೆಯುತ್ತಿರೆಂಬದನ್ನೂ, ಮುಗದದಿಂದ ಕೇಗೂರಿಗೇ ಈ ವರ್ಗವಾಗಿ ಬಂದರೆಂಬದನ್ನೂ (ಶಿಕ್ಷಾಕರೇ ಇವ್ರೋ? ಇಚ್ಛಾಕರೇಇವ್ರೋ?) ಕರ್ನಾಟಕದ ಟಾಯಿಮ್ಸದವರಾಗಲೀ, ಬೋರ್ಡಿನವರಾಗಲೀ ದಯವಿಟ್ಟು ಹೇಳಲಿ

ಇನ್ಸ್ಪೆಕ್ಟ ಅಸಿಸ್ಟಂಟರಾದ ಶ್ರೀ ದೇಶಪಾಂಡೆಯವರು ನೂರು ಮೈಲಿನಿಂದ ವರ್ಗವಾಗಿ ಬಂದಿದ್ದಾರೆ ಅವರಿಗೆ ೧೫ ರೂಪಾಯಿ ಸಂಬಳ. ಶ್ರೀ. ಗಣಾಚಾರಿಯವರಿಗೆ ೪೦ ರೂಪಾಯಿ. ಸರ್ವಿಸ ಮತ್ತು ಸಂಬಳದಿಂದ ಸೀನಿಯರರಾದಂಥವರ ಮೇಲೆ ಜೂನಿಯರರನ್ನು ನೇಮಿಸುವದು ಅನ್ಯಾಯದ ದೊಡ್ಡ ಪೇಟಿಯಾಗುತ್ತದೆ. ನನಗೆ ಬಲ್ಲ ಸಂಗತಿಯನ್ನು ತಿಳಿಸಿದ್ದೇನೆ ನನ್ನಂತೆ ಬೇರೆಯವರೂ ಬೋರ್ಡಿನಲ್ಲಿ ನಡೆದ ಅನ್ಯಾಯಗಳನ್ನು ಬೈಲಿಗೆ ತಂದರೆ - ಬೋರ್ಡ ಮೈತುಂಬ ಕಣ್ಣುಳ್ಳದ್ದಾಗಿ, ಆ ವಿಚಾರ, ಲಕ್ಷ್ಯ, ಅನ್ಯಾಯವೆನಿಸುವಂಥ ಕೃತ್ಯ ಮಾಡಲಾರದೆಂದು ನಿಸಂದೇಹವಾಗಿ ಹೇಳುತ್ತೇನೆ

ಇಂಗ್ಲೀಷ ತರುಣ-ತರುಣಿಯರಿಗೆ ಮಹಾತ್ಮರ ಉಪದೇಶ

ಮುಂಬಯಿಯಲ್ಲಿ ೨೦ ಜನ ಇಂಗ್ಲೀಷ ತರುಣ (೧೬) ತರುಣಿಯರು (೪) ಮಹಾತ್ಮರನ್ನು ಕಾಣಲಿಕ್ಕೆ ಬಂದಿದ್ದರು. ಮಹಾತ್ಮರು ಇವರ ಕೂಡ ೧೫ ನಿಮಿಷಗಳ ತನಕ ಮಾತಾಡಿದರು. ಇವರಿಗೆ ಮಹಾತ್ಮರು ಹೇಳಿದ್ದೇನಂದರೆ -

ಇಂಗ್ಲಿಷರ ಕೂಡ ದ್ವೇಷ ಮಾಡಬೇಕೆಂದು ಕಾಂಗ್ರೆಸದ ಪ್ರವೃತ್ತಿಯಾಗಿರುವದಿಲ್ಲ ಅದು ಸ್ನೇಹದ್ದೇ ಆಗಿದೆ. ಕಾಂಗ್ರೆಸದ ಮೂಲ ಪ್ರವರ್ತಕರಾದ ಮಿ ಹ್ಯೂಮಸಾಹೇಬರು ಇಂಗ್ಲಿಷ ಗೃಹಸ್ಥರಿದ್ದು, ಪಾರ್ಲಮೆಂಟದ ಮೆಂಬರರು ಇದರ ಅಧ್ಯಕ್ಷರಾಗಿದ್ದರು. ನೀವು ೧೫೦ ವರ್ಷಗಳಿಂದ ಹಿಂದುಸ್ಥಾನದಲ್ಲಿ ಅಸಮಾನವಾದಂಥ ಸ್ವಾತಂತ್ರ್ಯ ಮತ್ತು ವ್ಯಾಪಾರ ವಿಷಯಕವಾದ ಹಕ್ಕುಗಳನ್ನು ಉಪಯೋಗಿಸಿದ್ದೀರಿ. ಈ ನಂತರ ಅಂಥ ಹಕ್ಕು ಸಿಗಲಾರದು. ಒಬ್ಬರು ಹೆಚ್ಚು - ಒಬ್ಬರು ಕಡಿಮೆ ಹೀಗೆಂಬುವದು ನಿಜವಾದ ಸ್ನೇಹವಾಗುವದಿಲ್ಲ. ಇಬ್ಬರೂ ಸಮಾನ ದರ್ಜೆಯವರಾಗಬೇಕು. ನೀವು ಕಾಂಗ್ರೆಸ ವಿಷಯವಾಗಿ ಸಹಾನುಭೂತಿಯುಳ್ಳವರಾಗಿದ್ದರೆ - ಅದರಲಿ - ನೀವು ಬೇಕು. ವ್ಯಾಪಾರ ಮತ್ತು ರಾಜಕೀಯ ವಿಷಯವಾಗಿ ಈಗ ಬೇಡುತ್ತಿರುವಂಥ ಹಕ್ಕುಗಳು ಸಮಂಜಸವಾಗಿರುವದಿಲ್ಲ. ಹಾಗೆ ಬೇಡುವದು ನಿಮ್ಮ ಧರ್ಮವೂ ಅಲ್ಲ. ಕಾಂಗ್ರೆಸವು ನಿಮ್ಮ ದ್ವೇಷ ಮಾಡುವದಿಲ್ಲವಷ್ಟೇ ಅಲ್ಲ. ನಿಮ್ಮ ಸಂಧಿ ಮತ್ತು ಸಹಾಯವನ್ನೂ ಅಪೇಕ್ಷಿಸುತ್ತದೆ ನೀವು ಇಂಗ್ಲಿಷ ಜನರು ನಿಮ್ಮ ರಾಜ್ಯದಲ್ಲಿ ಪೂರ್ಣ ಹಕ್ಕುಗಳನ್ನು ಅಪೇಕ್ಷಿಸುವಂತೆ ನಾವು ಹಿಂದುಸ್ಥಾನದಲ್ಲಿ ನಿಮ್ಮಂತೆ ಹಕ್ಕು ಸ್ವಾತಂತ್ರ್ಯ ಅನುಭೋಗಿಸಬೇಕನ್ನುವದು ಸಹಜ ಧರ್ಮ ವಾಗಿರುತ್ತದೆಂಬವನ್ನು ತಿಳಿಯಿರಿ

ಯುದ್ಧದ ದೆಸೆಯಿಂದಲೇ ಸಿದ್ಧತೆಯಲ್ಲ ಸ್ವಾಭಾವಿಕ ಸಿದ್ಧತೆಯು.

ಪಂಡಿತ ಜವಾಹರಲಾಲರ ಭಾಷಣ.

..(೦)...

ಮುಂಬಯಿಯಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಪಂಡಿತ ಜವಾಹರಲಾಲರು ಅಂದಿದ್ದೇನಂದರೆ-

ನಮ್ಮ ಕೈ ಸಳ ಸಳ ಅಸ್ವಸ್ಥವೆಂದು ನಾವು ಯುದ್ಧ ಮಾಡುವದಕ್ಕೆ ಹುರಿಗಟ್ಟಿರುವದಿಲ್ಲ ಆದರೆ ಆ ಪ್ರಕಾರದ ಸಿದ್ಧತೆ ಮಾಡಬೇಕಾಗುತ್ತದೆ. ಸಮಯ ಬಂದರೆ- ನಮ್ಮ ಸಿದ್ಧತೆ ಇರಬೇಕು. ಮಹಾಯುದ್ಧದ ನಂತರ ಇಂಗ್ಲಂಡ, ಫ್ರಾನ್ಸ, ಜರ್ಮನಿ ಮುಂತಾದ ಯುರೋಪದ ದೇಶಗಳು ಪ್ರಚಂಡ ಸೇನಾ ಸಿದ್ಧತೆಯನ್ನು ಮಾಡಿಕೊಂಡಿರುವದಿಲ್ಲವೇ? ಹಿಂದುಸ್ಥಾನವು ಸ್ವಾತಂತ್ರ್ಯ ಸಂಪಾದಿಸಲಿಕ್ಕೂ, ಆ ಸ್ವಾತಂತ್ರ್ಯ ಕಾಯ್ದುಕೊಳ್ಳುವದಕ್ಕೂ, ಅನ್ನ ದಂಡನ್ನೂ ಸಿದ್ಧವಾಗಿಟ್ಟುಕೊಂಡಿರಬೇಕಾಗುತ್ತದೆ

ಮಹಾತ್ಮರು ಲಂಡನಕ್ಕೆ ಹೋದ ಕೂಡಲೆ- ಹಿಂದುಸ್ಥಾನಕ್ಕೆ ಸ್ವರಾಜ್ಯ ತರುತ್ತಾರೆಂದು ತಿಳಿಯಬೇಡಿರಿ. ಅವರಿಗೆ ಪ್ರಚಂಡ ಬೆಂಬಲವಿದ್ದು, ಆ ಬೆಂಬಲದ ನೆರವಿನಿಂದ ಒಪ್ಪಂದ ಅಥವಾ ಯುದ್ಧ ಮಾಡುವ ಸ್ವೀಕಾರಯುಂಟಾಗುವಂತೆ ನಮ್ಮ ಸಿದ್ಧತೆ ಇರಬೇಕು. ಸಂಪೂರ್ಣ ಸ್ವರಾಜ್ಯವೇ ಹಿಂದುಸ್ಥಾನದ ಧ್ಯೇಯವಾಗಿದ್ದು, ಆ ಧ್ಯೇಯಸಾಧನೆಯ ಪೂರ್ಣ ಸಿದ್ಧತೆಯು ನಮ್ಮಲ್ಲಿರಬೇಕೆಂಬುದನ್ನೂ, ಆ ಕೆಲಸವಾಗಿ ನಮ್ಮ ಪ್ರಯತ್ನವಾಗಿರಬೇಕೆಂಬವನ್ನೂ ಧ್ಯಾನದಲ್ಲಿಡಿರಿ.

ನಮ್ಮ ಮದ್ದು ಯಾವಾಗಲು ಒಣಗಿದ್ದಿರಬೇಕು.

—)(–(೦)—)(—

ಶ್ರೀ. ಸೇನಗುಪ್ತರ ಹೇಳಿಕೆ.

—(೦)—

ಪಂಡಿತ ಜವಾಹರಲಾಲರ ನಂತರ ಶ್ರೀ. ಸೇನಗುಪ್ತರು ಹೇಳಿದ್ದೇನಂದರೆ-

ಇಂದು ಕಾಂಗ್ರೆಸಕ್ಕೆ ಬಂದ ಯೋಗ್ಯತೆಯು ಅದ್ಭುತವಾಗಿ ಮಾಡಿದ ಸ್ವಾರ್ಥತ್ಯಾಗದ ಪರಿಣಾಮದಿರುತ್ತದೆ. ಭೀಷಣವಾದ ದಬ್ಬಾಳಿಕೆಯಿಂದ ತಮಗೆ ಯಾವ ಫಲೋತ್ಪತ್ತಿಯೂ ಇರುವದಿಲ್ಲೆಂದು ಸರಕಾರಕ್ಕೆ ತಿಳಿದು ಹೋಗಿದೆ. ಈಗಿನ ಯುದ್ಧ ನಿಲ್ಲಿಸುವಿಕೆಯು ಭಾವೀ ಒಡಂಬಡಿಕೆಯ ಮಾತು ಕಥೆಯ ಮಟ್ಟಿಗೆ ಇರುತ್ತದೆ. ಈ ಮಧ್ಯಕಾಲದ ಕೊನೆಯಲ್ಲಿ ದೇಶದಲ್ಲಿ ಸ್ಥಿರಚಿತವಾದ ಶಾಂತತೆಯುಂಟಾಗಬೇಕು. ಅಥವಾ ಯುದ್ಧದ ರಣಗಾಳಿ ಹಿಡಿಸಬೇಕೆಂದಿರುತ್ತದೆ. ಅದ್ದರಿಂದ ಯಾವಾಗಲು ನಮ್ಮ ಮದ್ದು ಒಣಗಿದ್ದೇ ಇರಬೇಕು. ಇಂಗ್ಲಿಷ ಜನರು ಲಂಡನದಲ್ಲಿ ಮಹಾತ್ಮರ ಹೇಳಿಕೆ ಬೇಡಿಕೆಗಳನ್ನು ಸ್ವೀಕರಿಸದಿರಲಿ- ಹಿಂದುಸ್ಥಾನದ ಯಾವ ಇಂಗ್ಲಿಷ ಮನುಷ್ಯನೂ ಒಂದು ಕಾಸು ದುಡಿಯಲಾರನೆಂದೂ, ಸರಕಾರದ ಯಾವ ಕಿಂತೆಯ ಕೆಲಸವೂ ಸಾಗಲಾರದೆಂದೂ ಖಂಡಿತವಾಗಿ ತಿಳಿಯಿರಿ. ಈ ನಂತರ ಹಿಂದುಸ್ಥಾನವು ಕಶಬುದಾರರಾದಂಥ ಇಂಗ್ಲಿಷ ಮನುಷ್ಯರಿಗೆ ಕಮ್ಯುಲು ಕೆಲಸವಾರದೆಂಬದನ್ನು ಮಿ ಚರ್ಚಿಲ್ಲ ಸಾಹೇಬರು ತಿಳಿಯಲಿ.

ನಿಲಾಯತಿಯ ಅರಿವೆಯನ್ನು ಕೊಳ್ಳುವ ಕಂಪನಿಯ ಕರಾರುಗಳು

—(೦)—

ಮುಂಬಯಿಯಲ್ಲಿ ಸ್ಥಾಪಿಸಲ್ಪಟ್ಟ ವಿಲಾಯತಿಯ ಅರಿವೆಯ ಕಂಪನಿಯವರು, ಈ ಅರಿವೆಯನ್ನು ಮೂಲ ಬೆಲೆಗೆ ಕೊಂಡು ನೂರಕ್ಕೆ ೯೦ ರೂಪಾಯಿಯಂತೆ ಕೊಡುವರು. ಈ ನಂತರ ಪರದೇಶಿ ಅರಿವೆ ತರಿಸುವದಿಲ್ಲೆಂಬ ಶರ್ತ ಪೂರ್ಣ ಮಾಡಿದ್ದನ್ನು ನಂಬಿಗೆಯಾಗಿ ತೋರಿಸುವತನಕ ಈ ಹತ್ತು ರೂಪಾಯಿಗಳನ್ನು ತಾರಣವಾಗಿಟ್ಟುಕೊಳ್ಳುವರು. ಈ ಪ್ರಕಾರ ಕರಾರ ಪತ್ರ ಬರಕೊಟ್ಟು, ಪರದೇಶಿ ಅರಿವೆಯನ್ನು ಕಂಪನಿಯ ವಶ ಮಾಡಿ, ಪಿಕೆಟಿಂಗದ ತಾಪ ತಪ್ಪಿಸಿಕೊಳ್ಳುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ಇದರಿಂದ ವ್ಯಾಪಾರವೂ ದೇಶಸೇವೆಯೂ ಆಗುವದುಂಟು.

ಶ್ರೀಮದ್ವಿದ್ಯಾರಣ್ಯ ಪುಣ್ಯತಿಥಿಯ ಮಹೋತ್ಸವ.

ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರ ಶ್ರೀಮದ್ವಿದ್ಯಾರಣ್ಯರ ಪುಣ್ಯತಿಥಿಯ ಮಹೋತ್ಸವವು ರವಿವಾರ ಜ್ಯೇಷ್ಠ ಕೃಷ್ಣ ತ್ರಯೋದಶಿಯು (ತಾ|| ೧೪-೬-೩೧) ದಿನ ಧಾರವಾಡದಲ್ಲಿ ಬಹು ಉತ್ಸಾಹದಿಂದ ಸಾಗಿತು.

ಮುಂಜಾವಿನಲ್ಲಿ ಕನ್ನಡಿಗರ ಕೂಟದ ಸಭಾಸದರು ಕರ್ನಾಟಕ ಭಾವನೆ, ಅಭಿಮಾನ ಇವುಗಳಿಂದ ತುಂಬಿ ತುಳುಕಿದ ಉತ್ಕಟ ಪದಗಳನ್ನು ಹಾಡುತ್ತಾ ಊರಲ್ಲಿಯ ಪ್ರಮುಖ ಬೀದಿಗಳಲ್ಲಿ ತಿರುಗಿದರು. ಗಾಂಧೀ ಕೂಟಿನಲ್ಲಿ ಧ್ವಜವಂದನೆಯು ಶ್ರೀ. ಮುದವೀಡು ಕೃಷ್ಣರಾಯರ ಹಸ್ತದಿಂದ ಸಾಗಿತು. ನಂತರ ವಿದ್ಯಾರಣ್ಯ ಹೈಸ್ಕೂಲಿನ ಜನರಲ ಹಾಲಿನಲ್ಲಿ ಕೂಟದ ವಾರ್ಷಿಕ ಸಮಾರಂಭವು ಶ್ರೀ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಆಯಿತು. ಕೂಟದ ವಾರ್ಷಿಕ ವರದಿಯನ್ನೂ ಲೆಕ್ಕವನ್ನೂ ಶ್ರೀ ಕಡ್ಡಣರ ಪ್ರಲ್ಹಾದರಾಯರು ಸಭೆಯಲ್ಲಿ ಓದಿದರು. ಶ್ರೀ ಮುದವೀಡು ಕೃಷ್ಣರಾಯರು ಈ ಕೂಟದವರು ಮಾಡುವ ಕಾರ್ಯಕಲಾಪಗಳ ಬಗ್ಗೆ ಪ್ರೋತ್ಸಾಹಕಾರಕವಾದ ಮಾತುಗಳನ್ನಾಡಿದರು. ವಿದ್ಯಾರಣ್ಯರ ಭಾವಚಿತ್ರದ ಆರತಿ ಪೂಜಾದಿಗಳು ಆದ ನಂತರ ಆ ದಿನ ಕಾರ್ಯಕ್ರಮವು ಮುಗಿಯಿತು.

ಸಾಯಂಕಾಲ ಶ್ರೀ ಶಾಂತೇಶ ವಾಚನಾಲಯದಲ್ಲಿ ಕರ್ನಾಟಕ ಇತಿಹಾಸ ಸಂಶೋಧಕರಾದ ಶ್ರೀ ರಾಜಪುರೋಹಿತ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ನಡೆಯಿತು. ಶ್ರೀ ಮುದವೀಡು ಕೃಷ್ಣರಾಯರು ವಿದ್ಯಾರಣ್ಯರ ಕಾಲದಲ್ಲಿಯ ಭಾರತವಾಸಿಯ ಗುಣ ಪರಿಸ್ಥಿತಿಯನ್ನು ವರ್ಣಿಸಿ ಅಂಥ ಬಿಕ್ಕಟ್ಟಿನ ಸಮಯದಲ್ಲಿ ಶ್ರೀ ವಿದ್ಯಾರಣ್ಯರು ಭಾರತ ಸಂಸ್ಕೃತಿಯನ್ನು ಹಿಂದೂ ಧರ್ಮವನ್ನೂ ಸಂರಕ್ಷಿಸಲು ಮಾಡಿದ ದೀರ್ಘ ಪ್ರಯತ್ನಗಳನ್ನು ಹೇಳಿದರು.

ಶ್ರೀ ಬೆಳಗಾವಿ ರಾಮರಾಯರು ಮಾತನಾಡಿದ ನಂತರ ಅಧ್ಯಕ್ಷರು ಸಮಾರೋಪ ಭಾಷಣವನ್ನು ಮಾಡಿದರು. ವಿದ್ಯಾರಣ್ಯರ ಆರತಿ ಅಕ್ಷತೆಗಳಿಂದ ಆಂದಿನ ಸಭೆಯು ಮುಗಿಯಿತು.

ರಾಣೇಬೆನ್ನೂರ ತಾಲೂಕ ಕಾಂಗ್ರೆಸ್ ಕಮಿಟಿಯ ಸಾಧಾರಣ ಸಭೆಯು.

—(೧)—

ಕಾಂಗ್ರೆಸ್ ಸಂಸ್ಥೆಗಳು ೧೯೩೦ನೇ ಸನ್ನಿನ ಮೇ ತಿಂಗಳಲ್ಲಿ ಬೇಕಾಯದೇಶೀರ ಆದಂದಿನಿಂದಾ ರಾಣೇಬೆನ್ನೂರ ತಾಲೂಕ ಕಾಂಗ್ರೆಸ್ ಕಮಿಟಿಯು ಪುನಃ ಆಗಿಲ್ಲ. ಅದನ್ನು ಪುನಃ ಸುರುವು ಮಾಡುವ ಉದ್ದೇಶ್ಯ ರಾಣೇಬೆನ್ನೂರ ತಾಲೂಕ ಕಾಂಗ್ರೆಸ್ ಮೆಂಬರರು ತಾ|| ೨೮-೬-೩೧ನೇ ರವಿವಾರ ಸಾಯಂಕಾಲ ೫ ಘಂಟೇಕ್ಕೆ ಬ್ಯಾಡಿಗಿ ಕಾಂಗ್ರೆಸ್ ಕಚೇರಿಯಲ್ಲಿ ಕೂಡಬೇಕಾಗಿ ವಿನಂತಿ.

ವಿಷಯಗಳು.

೧) ತಾಲೂಕ ಕಾಂಗ್ರೆಸ್ ಕಮಿಟಿಯ ಸ್ಥಳವನ್ನು ಗೊತ್ತುಪಡಿಸುವದು

೨) ಮುಂದಿನ ಕಾರ್ಯಕ್ರಮದ ವಿಚಾರ

ತಾ|| ೧೨-೬-೩೧

ಗು. ಹಳ್ಳಿಕೇರಿ
ಕಾರ್ಯದರ್ಶಿ
ಧಾರವಾಡ ಜಿಲ್ಲಾ ಕಾಂಗ್ರೆಸ್ ಕಮಿಟಿ, ಹಾವೇರಿ.

ಧಾರವಾಡ

ಮೊನ್ನೆ ಮಧ್ಯಾಹ್ನದಿಂದ ಮಳೆಯು ಹೊರಟಾಗಿ, ಸದ್ಯ ಮಳೆಯಾಗುವಂಥ ಯಾವ ಲಕ್ಷಣವೂ ಆಕಾಶದಲ್ಲಿ ಕಾಣಿಸದಾಗಿದೆ.

ನಿನ್ನೆ ಆಯಾರ ಸಂತೆ. ಬಹುತೇಕ ಜನರ ಅಂಗಡಿಗಳ ಮುಂದೆ ಪಿಕೆಟಿಂಗ ನಡೆಯಿತು.

ಇಲ್ಲಿಯ ಸೆಕೆಂಡ ಸಬ್ ಇನ್ಸಪೆಕ್ಟರರಾದ ಮಿ. ಗುಡಿಯವರಿಗೆ ಗದಗ್ಗೆ ವರ್ಗವಾಯಿತು.

ಚಂದಾದಾರರಿಗೆ ಸೂಚನೆ

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾದ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಜೋಶಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

The Asian Life Assurance Co. Ltd
Bombay. Branch office Hubli.

ಅನುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು
ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೨೦೦ ರೂ. ಗಳನು ಕೊಡುವಂಥ ಗೋಲ್ಡನ್ (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ವಿಷಯದ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್ ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗಬೇಡಿರಿ. ಈ ಕಂಪನಿಯು

ವಿಮೆಯ ರಕಮು ರೂ. ೧,೨೫,೦೦೦,೦೦ ಕಂತದ ಉತ್ಪನ್ನ ರೂ ೭೦೦,೦೦೦
ವಿಮೆಯ ಹಣ ತಿರುಗಿ ಕೊಟ್ಟದ್ದು ೧೦,೦೦,೦೦೦
ಜಿಂದಿಗಿ ೨೩,೨೮,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕುಲಕರ್ಣಿ. ಧಾರವಾಡದ ಏಜಂಟರು

ಕೆ. ವ್ಹಿ. ಹುಲಸೋಗಿ, ಬಿ. ಎ. ಕರ್ನಾಟಕದ ಬ್ರಾಂಚ ಮ್ಯಾನೇಜರ

ಬಿ. ಎಚ್. ಪಾಟೀಲ ಹುಬ್ಬಳ್ಳಿಯ ಏಜಂಟರು—

ಹಾವೇರಿಯ ಚೀಫ ಏಜಂಟರು. ಶ್ರೀ. ಎಸ್. ಎಮ್. ದೊಡ್ಡವಾಡ ಮತ್ತು
ಶ್ರೀ. ಬಿ. ಟಿ. ಶಿರೋಳಕರ.

R. N. B.

ವಿಜಯ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ (೧೨) ಧಾರವಾಡ ಬುಧವಾರ ತಾರೀಖು ೧೭ ನೇ ಜೂನ ೧೯೩೧ (ಸಂಚಿಕೆ ...

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ಲಾವಣಿಯ ಶೀರ್ಷ.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಿನ ಲಾವಣಿಯ ಶೀರ್ಷನ್ನು ಪುಸ್ತಕರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧವಾಡಲಾಗಿದೆ. ಇದರಲ್ಲಿ ಪಾದೀ ಶ್ರೀ ಸಿದ್ಧಾರೂಢರ ಆಸೇಜರ, ಶ್ರೀ. ಗುರುನಾಥಸ್ವಾಮಿಗಳ ಕೃಪೆಯುತ್ತು ಮತ್ತು ಮುದ್ರಣದ ಶ್ರೀ. ಸಾ. ಸಿ. ಇವರ ಶೀರ್ಷ ಕೊಡಲ್ಪಟ್ಟಿದೆ. ಪಾದ, ಪ್ರತಿಪಾದಿ, ಹಾಗೂ ಮುನಸೂರ ಭಾವಚಿತ್ರಗಳನ್ನು ಕೊಟ್ಟಿರುತ್ತದೆ. ಭಕ್ತರ ಜನರ ಅಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧವಾಗಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ಲಾವಣಿಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ಶೀಘ್ರ ಖರ್ಚಾಗುವವು. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕೊಳ್ಳುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚು ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಯಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಗಿಯು ಎಂಟು ಲಕ್ಷದ ಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡೈರೆಕ್ಟರ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂ ವರೆ ಆಣೆ ಇಂಗ್ಲಿಷ ಪಕ್ತಿಯೊಂದು ಪಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಹಲವು ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಒಳಗಿನ ಪತ್ರಿಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಿಗೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ತೆಲ ತೊಲೆಯ ಸೇರು	೧ಕ್ಕೆ	೨—೦—೦
ಕೃಷ್ಣ ಪಾರಿಜಾತ ಅತ್ತರು ತೊಲೆ	೧ಕ್ಕೆ	೪—೮—೬

೧೯—೧೧—೩೫

ಮೈಸೂರ ಸ್ಟೋರ,
ದೇಸಾಯಿಯವರಗಲ್ಲಿ
ಹುಬ್ಬಳ್ಳಿ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨/೨-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ತಾರೀಖು ೧೭-೬-೧೯೩೧ನೇ ಇಸ್ವಿ

ಮಹಾತ್ಮರು ವತನದಾರ ಇನಾಮುದಾರರಿಗೆ ಹೇಳಿದ ಕೆಲವು ಮಾತುಗಳು

ಇಲ್ಲಿ ಕೂಡಿದ್ದ ವತನದಾರ ಮತ್ತು ಇನಾಮದಾರರ ಸಂಘದ ಪರಿಯಿಂದ ಏಳು ಜನರು ಮಹಾತ್ಮರನ್ನು ಕಂಡು, ಅವರ ಮುಂದೆ ತಮ್ಮ ವಿದ್ಯಮಾನ ಹಾಗೂ ಭಾವೀ ಪರಿಸ್ಥಿತಿಯನ್ನು ಕುರಿತು ತಮ್ಮ ವಿಚಾರಗಳನ್ನು ನಿವೇದಿಸುವದಕ್ಕೆ ಮುಂಬಯಿಗೆ ಹೋಗಿದ್ದರು. ಕರ್ನಾಟಕದಿಂದ ಶ್ರೀ. ದೇಶಪಾಂಡೆ ಗಂಗಾಧರರಾಯರು, ಶ್ರೀ. ಕಲ್ಲಾಪೂರದ ದೇಸಾಯಿ ನರಸಿಂಗರಾಯರು ಮತ್ತು ಧಾರವಾಡದ ಶ್ರೀ ದೇಸಾಯಿ ಹಣಮಂತರಾಯರು ಹಾಗೂ ಮಹಾರಾಷ್ಟ್ರದಿಂದ ಐವರು ಹೋಗಿದ್ದರು. ಮಹಾತ್ಮರು ಇವರಿಗೆ ಸುಸ್ವಾಗತವನ್ನಿತ್ತು, ಇವರಿಗೆ ಸಂತೋಷವೆನಿಸುವಂಥ ಉತ್ತರಗಳನ್ನೇ ಹೇಳಿದರು. ವತನದಾರ ಇನಾಂಮದಾರರ ಹಕ್ಕು ಸ್ವಾತಂತ್ರ್ಯದಲ್ಲಿ ನಾವೆಂದೂ ಕೈ ಹಾಕುವದಿಲ್ಲ. ಕಾಂಗ್ರೆಸವು ರೈತರ ಹಸ್ತೆಯು ಈಗಿನ ಪದ್ಧತಿಯನ್ನೇ ತೆಗೆದು ಹಾಕುವದು. ಪ್ರತಿ ವರ್ಷದ ಉತ್ಪನ್ನದ ಮೇಲೆ ತೆರಿಗೆ ಕೂಡ್ರಿಸುವದು, ನೀವು ರೈತರ ದುಡ್ಡಿನ ಮೇಲೆ ಡಲ್ಲಾಟವಾಡುವಂಥವರೆಂದು ತಿಳಿಯುವೆ, ಅವರ ಪಾಲನಕರ್ತರೂ, ಪೋಷಕರ್ತರೂ ಆಗಿರುತ್ತೀರೆಂದು ತಿಳಿಯಿರಿ. ಈ ಪ್ರಾಂತದ ಅಯೋಧ್ಯಾ ಪ್ರಾಂತದಲ್ಲಿ ಜಮೀನದಾರ ಮತ್ತು ರೈತರ ನಡುವೆ ಭಯಂಕರ ಮನಸ್ತಾಪವಾಗಿ ಅನರ್ಥ ನಡೆದಿದೆ. ಅಂಥ ಪ್ರಸಂಗವನ್ನು ನಿಮ್ಮ ದೇಶದಲ್ಲಿ ತಂದುಕೊಳ್ಳಬೇಡಿರಿ. ರೈತರ ಹಿತವೇ ನಿಮ್ಮ ಹಿತವೆಂದು ತಿಳಿದುಕೊಳ್ಳಿರಿ.

ನಿಮ್ಮ ಪರಿಸ್ಥಿತಿಯು ಸೂಕ್ಷ್ಮವಾಗಿರುತ್ತದೆಂಬದನ್ನು ನಾನು ಬಲ್ಲೆನು. ಕಾಂಗ್ರೆಸಕ್ಕೆ ಸಹಾಯ ಮಾಡುವದಕ್ಕೆ ನಿಮ್ಮ ಮನಸಿದ್ದರೂ, ಪರಿಸ್ಥಿತಿಯು ಮೂಲಕ ಹಾಗೆ ಮಾಡಲಾರಿರಿ. ನೀವೇ ಅಲ್ಲ. ನಿತ್ಯಂತೆ ಬಿಕ್ಕಟ್ಟಿನ ಕಾಲಕ್ಕೆ ನಿಕ್ಕಟವು ಹೀಗೆ ಸಹಾಯ ಮಾಡದಿದ್ದರೂ ನಮ್ಮ ದಾರಿಯಲ್ಲಿ ಅಡ್ಡ ಬಾರದಿದ್ದರೆ ಸಾಕು. ದೈರ್ಶಾಲಿಗಳು ನಮಗೆ ಸಹಾಯಕರಾಗಿ ಬಂದು, ಆಳರಸರ ಕೋಪಾನಲದ ದೆಸೆಯಿಂದ ವತನ ಕಳಕೊಂಡರೆ - ನಮ್ಮ ಕಯ್ಯಲ್ಲಿ ರಾಜ್ಯಾಧಿಕಾರ ಬಂದ ಬಳಿಕ, ನಾವು ಅವರಿಗೆ ಅವರ ವತನವನ್ನು ತಿರುಗಿ ಕೊಡುತ್ತೇವೆ.

ಮಹಾತ್ಮರ ಈ ಭಾವದ ಭಾಷಣವಾಗಿ ಬೇರೆ ಪ್ರಶ್ನೋತ್ತರಗಳು ಅರ್ಧತಾಸಿನ ತನಕ ನಡೆದ ಬಳಿಕ, ಶಿಷ್ಟ ಮಂಡಲದವರು ಮಹಾತ್ಮರಿಗೆ ವಂದನೆ ಮಾಡಿ, ಹೊರಡುವಂಥವರಾದರು.

ತಿರುಪತಿಯು ದೇವಸ್ಥಾನದ ಹೊಸ ಕಾಯಿದೆ

ತಿರುಪತಿಯ ದೇವಸ್ಥಾನದ ಮೇಲ್ವಿಚಾರಣೆಗಾಗಿ ಒಳ್ಳೆಯ ಶ್ರೀ. ರಂಗನಾಥ ಮೊದ್ಲಿಯಾರರವರು ಮದ್ರಾಸದ ಕೌನ್ಸಿಲದಲ್ಲಿ ಒಂದು ಬಿಲ್ಲು ತರಕೊಳ್ಳಲಿದ್ದಾರೆಂಬ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ. ಆ ಬಿಲ್ಲಿನ ಉದ್ದೇಶ ಪತ್ರಿಕೆಯು ಈ ವಾರದಲ್ಲಿ ಪ್ರಸಿದ್ಧವಾಗಿರುತ್ತದೆ.

ಬಹಳದಿಂದ ಮಹಂತರು ದೇವಸ್ಥಾನದ ಒಡೆಯರಾಗಿದ್ದರು, ಅವರು ದೇವಸ್ಥಾನದ ದ್ರವ್ಯವನ್ನು ಅಪಹಾರ, ಅವ್ಯವಸ್ಥೆ ಹಾಗು ದುಂದುಗಾರಿಕೆಯಿಂದ ಹಾಳುಮಾಡಲಾರಂಭಿಸಲು-ಅರ್ಚಕರಿಗೂ ಇವರಿಗೂ ಕಲಹಬಂತು. ಭಗವಾನದಾಸರೆಂಬವರು ಗರುಡಗಂಬದ ಬುಡುಕಿನ ಹೊನ್ನು ತೆಗೆದುಕೊಂಡು, ತಾಮ್ರದ ತಗಡು ಹಾಕಿ, ಅದನ್ನೆಲ್ಲ ಹಾಳುಮಾಡಿ, ಈ ಅಪರಾಧಕ್ಕಾಗಿ ತುರಂಗವಾಸಿಯಾದರು. ಆಗ ಸರಕಾರದವರು ಒಂದು ಕಮಿಟಿ ನೇಮಿಸಿದರು, ಮಹಂತರ ಸಾರೋದ್ಧಾರ ಅಧಿಕಾರ ಹೋಗಿ, ಬರೇ ವಿಚಾರಣಾಕರ್ತರಾದರು. ಸದ್ಯದ ಬಿಲ್ಲಿನಿಂದ ಈ ವಿಚಾರಣಾಕರ್ತತೆಂಬದೂ ಕೈ ಬಿಟ್ಟು ಹೋಗುವದು.

ಮಹಂತರ ಮುಲಕೀ ಅಧಿಕಾರವನ್ನು ಪೂರಾ ತೆಗೆದು, ಬರೇ ಧಾರ್ಮಿಕ ವಿಧಿಗಳನ್ನು ಮಾತ್ರ ಅವರಿಗೆ ಒಪ್ಪಿಸುವರು. ಮುಲಕೀ ಕಾರಭಾರ ನೋಡುವದಕ್ಕಾಗಿ ತಿಂಗಳಿಗೆ ಸಾವಿರ ರೂಪಾಯಿ ಪಗಾರ ಸಂಬಳ ಕೊಟ್ಟು, ಸರಕಾರದವರು ಧರ್ಮದಾಯ ಕಮಿಟಿಯ ವಿಚಾರದೊಂದಿಗೆ ಒಬ್ಬ ಕಾರುಭಾರಿಯನ್ನು ನೇಮಿಸಬೇಕು ಈ ಕಾರುಭಾರಿಗೆ ದೇವಸ್ಥಾನ ವಿಷಯವಾಗಿ ಆಗಾಗ್ಗೆ ಆಲೋಚನೆ ಹೇಳುವದಕ್ಕಾಗಿ ಒಂದು ಆಲೋಚನಾ ಕಮಿಟಿಯ ಸಹಾಯವನ್ನು ಕೊಡುವರು.

ಈ ಬಿಲ್ಲಿನಿಂದ ದೇವಸ್ಥಾನ ವಿಷಯವಾಗಿ ಮಹಂತರ ಮೊದಲಿನ ಎಲ್ಲ ಕಾರುಭಾರಗಳು ಶ್ರೀ ವ್ಹೀ ಕೌನ್ಸಿಲದ ಕಮಿಟಿಗೆ ಒಪ್ಪುವವು.

ದೇವಸ್ಥಾನದ ಎಲ್ಲ ... ... ವೆಚ್ಚಗಳಾಗಿ, ಉಳಿದ ಹಣದಲ್ಲಿ ಮೊದಲು ... ಪ್ರಿಲಕ ಸುಖ ಸೋಯಿಗಳ ದೆಸೆಯಿಂದ ವಿವಿಧ ವಿಷಯಗಳು ಮಾಡುವರು. ಮತ್ತು ದೇವಸ್ಥಾನದ ಆದಾಯದಿಂದ ಉತ್ಪನ್ನದಿಂದ ವಿಶ್ವವಿದ್ಯಾಲಯವೆನಿಸುವಂಥ ಸಂಸ್ಕೃತ ಪಾಠಶಾಲೆಯಿಟ್ಟು, ವೇದವೇದಾಂತಗಳನ್ನು ಕಲಿಸುವದು ಇದರಂತೆ ಪ್ರಾಚೀನ ಮತ್ತು ಅರ್ವಾಚೀನ ಚಿತ್ರಕಲೆಯನ್ನು ಕಲಿಸಲು ಬೇರೆ ಬೇರೆ ವರ್ಗಗಳನ್ನು ಇಡುವರು.

ಕೋರ್ಟಿಗೆ ಕಳಿಸಿದ ಅರ್ಜಿಯನ್ನು ಜೇಲಿನವರು ಮುಚ್ಚಿಟ್ಟರು.

—(೦)—

ಆರೋಪಿಯು ಲಾಹೋರ ಪ್ರಕರಣದಲ್ಲಿಯ ಆರೋಪಿಯಾದ ಸುಖದೇವನು. ಒಂದು ಅರ್ಜಿ ಬರೆದು ಜಡ್ಜರ ಕಡೆಗೆ ಕಳಿಸಬೇಕೆಂದು ಜೇಲರ ಕಯ್ಯಲ್ಲಿ ಕೊಟ್ಟನು ಆದರೆ ಅವರು ಅದನ್ನು ಮುಂದೆ ಕಳಿಸಲಿಲ್ಲ. ಈ ಅರ್ಜಿಯು ಜಡ್ಜರ ಕೈಗೆ ಬಿದ್ದ ಹೊರ್ತು ತಾನು ಕೋರ್ಟಿಗೇ ಬರತಕ್ಕವನಲ್ಲೆಂದು ಸುಖದೇವನು ಸತ್ಯಾಗ್ರಹ ಮಾಡಿದನು. ಆಗ ಅನಿವಾರ್ಯವಾಗಿ ಸರಕಾರೀ ವಕೀಲರು ತುರಂಗಕ್ಕೆ ಹೋಗಿ, ಆ ಅರ್ಜಿಯನ್ನು ತಂದರು ಇದನ್ನು ಸದ್ಯ ಗುಪ್ತವಿಟ್ಟಿದ್ದಾರೆ "ಇದನ್ನು ಫಯಿಲ ಮಾಡಬೇಕೇ? ನಾಶ ಮಾಡಬೇಕೇ? ಎಂಬ ವಿಚಾರವು ಒಂದೆರಡು ದಿವಸಗಳಲ್ಲಾಗತಕ್ಕದ್ದಿದೆ

ವಿಕಪಾರಿಯಾದ ಮಾಫೀ ಸಾಕ್ಷೀದಾರನು

—(೦)—

ಭೋಜರಾಜನ ಕಾಲದಲ್ಲಿ ವಿಕಪಾರಿಯಿಂದ ಸವಮಾರಿಗಳ ತನಕ ಕವಿಗಳಿದ್ದರು ಇಂಗ್ರೇಜಿ ರಾಜ್ಯದಲ್ಲಿ ಬಾಯಿಮಾರ ತಪ್ಪಿದ್ದರೂ ಈಗೊಬ್ಬ ವಿಕಪಾರಿಯು ಮುಂದೆ ಬಂದಿದ್ದಾನೆ ಲಾಹೋರದ ಒಳಸಂಚಿನ ಪ್ರಕರಣದಲ್ಲಿ ಮಾಫೀ ಸಾಕ್ಷೀದಾರನಾದ ಖಾತರಾಮನು ಪೋಲೀಸರ ಮುಂದೆ ಕೊಟ್ಟಂಥ ಜವಾಬನ್ನೇ, ಒಂದೂವರೇ ತಿಂಗಳ ನಂತರ ಮ್ಯಾಜಿಸ್ಟ್ರೇಟರ ಮುಂದೆ ಕೊಟ್ಟಿದ್ದಾನೆ ಒಂದಕ್ಷರದ ಹೆಚ್ಚು ಕಡಿಮೆಯಿಲ್ಲ. ಈ ವಿಸ್ತಾರಿ, ಪುನಃ ರಿಗೆ ಪಾಟೀಸವಾಲು ಹಾಕಲು ಆರೋಪಿಗಳ ವಕೀಲರು ಅರ್ಜಿ ಮಾಡಿದರು, ಜಡ್ಜರು ಸವಾಲು ಹಾಕಬೇಕೆಂದು ನಿರ್ಣಯ ಹೇಳಿದ್ದಾರೆ.

ಲಖನೌದ ಸುಪ್ರಸಿದ್ಧ ಕಾಂಗ್ರೇಸ್ ಕರ್ತರ ಆರಸರ ತಮ್ಮನನ್ನು ಪೋಲಿಸರು ಪ್ರತಾಪಗಡದಲ್ಲಿ ದಸ್ತಗಿರಿ ಮಾಡಿದ್ದಾರೆ. ಕಾರಣ ತಿಳಿಯುವದಿಲ್ಲ.

ಗುರ್ರೆಂದ ಗೌಡನೇ ಗೌಡನಾದನು

....(೦)....

ಗುಜರಾಥಕ್ಕೆ ಸೇರಿದ ಅಕೋಟ ಗ್ರಾಮದ ಕಾಯಿದೆಭಂಗದ ಗೌಡನಿಗೆ ಪುನಃ ಕೆಲಸ ಕೊಡಲು - ಕಾಯಿದೆಭಂಗದ ವೇಳೆಯಲ್ಲಿ ಸರಕಾರದಿಂದ ನೇಮಿಸಲ್ಪಟ್ಟ ಗೌಡನು ಆತನಿಗೆ ಚಾರ್ಜ ಕೊಡದ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ. ಹೊಸಬನಾದ ಗೌಡನಿಗೆ ಚಾರ್ಜ ಕೊಡಿಸಲು - ಡೆಪ್ಯುಟಿ ಕಲೆಕ್ಟರ ಮತ್ತು ಪೋಲಿಸ ಸುಪರಿಂಟೆಂಡೆಂಟ ಸಾಹೇಬರು ಅಲ್ಲಿಗೆ ಹೋದರು. ಅಲ್ಲಿ ಅವರಿಗೆ ಒಂದು ವಿಚಿತ್ರ ಪ್ರಕಾರ ಕಂಡು ಬಂತು. ಕಾಯಿದೆಭಂಗದ ಗೌಡನ ಕಡೆಗೆ ಸರಕಾರೀ ಗೌಡನ ಹೆಂಡತಿಯು ಹೋಗಿ, ನನ್ನ ಮನೆಯ ಮೇಲೆ ೧೩ ಜನರು ಕಲ್ಲೊಗೆದರೆಂದು ಫಿರ್ಯಾದಿ ಕೊಟ್ಟಳು. ಆದರೆ ಅವನು ಫಿರ್ಯಾದಿ ಹಿಡಿಯುವದೊಂದು ಕಡೆಗಿರಲಿ, ನೀನು ದೇಶದ್ರೋಹಿಯಾಗಿರುತ್ತೀಯೆಂದು ಹೇಳಿ, ಇವಳ ಮೇಲೆ ನೀರು ಸಿಂಪಡಿಸಿ ಶುದ್ಧ ಮಾಡಿದನು. ಇವೆರಡೂ ಕಸ್ಸಿಗಾಗಿ ಡೆಪ್ಯುಟಿ ಕಲೆಕ್ಟರರು ದೇಶಭಕ್ತನಿಗೆ ಸಸ್ಪೆಂಡ ಮಾಡಿ, ದೇಶದ್ರೋಹಿಗೆ ಪುನಃ ಕೆಲಸ ಕೊಟ್ಟರು.

ಖೈರಪೂರದ ನವಾಬರಿಗೆ ಸ್ಥಾನಚ್ಯುತಿ

...(೦)....

ಸಿಂಧ ದೇಶದಲ್ಲಿರುವ ಖೈರಪೂರದ ನವಾಬ ಸಾಹೇಬರು ಸಂಸ್ಥಾನದಲ್ಲಿ ಬೇಬಂದಶಾಹಿ ಮತ್ತು ದುಂದುಗಾರಿಕೆ ನಡೆಸಿದ್ದಾರೆಂದು ಕಳೆದೆರಡು ವರ್ಷಗಳಿಂದ ದೂರಲ್ಪಟವಾಗಿದೆ. ದುಂದುಗಾರಿಕೆಯಲ್ಲದೆ ತಮ್ಮ ನಾಡಿನಲ್ಲಿರದೆ ಪಂಜಾಬ ಮತ್ತು ಬೇರೆ ಪ್ರಾಂತಗಳಲ್ಲಿ ಹೋಗಿರುತ್ತಾರೆಂಬ ತರೋಪ ಹೊರಿಸಿ ಸರಕಾರದವರು ನವಾಬಸಾಹೇಬರಿಗೆ ಪೆನಶನ ಕೊಟ್ಟು, ಸಂಸ್ಥಾನದ ಕಾರಭಾರ ನೋಡಲು ಒಬ್ಬ ಆಡಳಿತಗಾರನನ್ನು ನೇಮಿಸುವರು.

ವಿಮಾನದ ಮಾರ್ಗವಾಗಿ ವಿಲಾಯತಿಗೆ ಕಾರ್ಡುಗಳನ್ನು ಕಳಿಸುವ ಏರ್ಪಾಡು ಮಾಡಿದ್ದು, ಅದಕ್ಕೆ ನಾಲ್ಕಾಣೆಯ ಟಿಕೇಟು ಹಚ್ಚಬೇಕಾಗುತ್ತದೆ. ಕಾರ್ಡಿನಂತೆ ಪಾರ್ಸಲು ಕಳಿಸುವ ವ್ಯವಸ್ಥೆಯೂ ಆಗಿದೆ.

ಪೆಷ್ಟವೃತಕಾಯವೆಂದು ಅಲ್ಲಾಬಾದ ಸರಕಾರದವರು ಇಲಾಖೆಯಲ್ಲಿರುವ ಎಲ್ಲ ಸ್ಕಾಲರಶಿಪ್ಪುಗಳ ದ್ರವ್ಯವನ್ನು ಅರ್ಧ ಮಾಡಿದರು. ಮತ್ತು ವಿಲಾಯತಿಯ ಎಲ್ಲ ಸ್ಕಾಲರಶಿಪ್ಪುಗಳನ್ನು ಬಂದು ಮಾಡಿದರು.

ವಿಲಾಯತಿಯ ಸುದ್ದಿಗಳು

ಹಿಂದುಸ್ಥಾನದ ಬಹಿಷ್ಕಾರದ ದೆಸೆಯಿಂದ
ಇಂಗ್ಲಂಡದ ದೊಡ್ಡ ಗಿರಣಿಯು
ದಿವಾಳಿ ಹೊಂಟಿತು.

ಇಂಗ್ಲಂಡದಲ್ಲಿ ಗ್ಲಾಸಗೊದಲ್ಲಿರುವ ಉಡ್ಡ ಬ್ರದರ್ಸ ಎಂಬವರ ಒಂದು ದೊಡ್ಡ ಗಿರಣಿಯು ಬಹಳ ಹಳೆಯದೂ, ಹೆಸರಾದದ್ದೂ ಇರುತ್ತದೆ. ಹಿಂದುಸ್ಥಾನದ ಅಸಹಕಾರ ಮತ್ತು ಬಹಿಷ್ಕಾರದ ದೆಸೆಯಿಂದ ಗ್ಲಾನಿ ಹೊಂದುತ್ತಾ ಬಂದ ವ್ಯಾಪಾರದ ಕಡೆವು ಈ ಗಿರಣಿಗೆ ಕೂತಿತು. ಈ ಗಿರಣಿ ಒಂದಾಗಬಾರದೆಂದು ಬ್ಯಾಂಕಿನವರು ಇದಕ್ಕೆ ಬೇಕಾದಷ್ಟು ರೂಪಾಯಿಗಳನ್ನು ಬಡ್ಡಿಯಿಲ್ಲದೆ ಸಾಲ ಕೊಡಲೂ ಸಿದ್ಧರಾದರು. ಎಂಟು ಶತಕಗಳಿಂದ ಹೊಂದುವಷ್ಟು ನೂಲನ್ನು ಒಂದು ಮಗ್ಗದ ಕ್ಷಣೀ ತುರಿಸಿದರೆ ಗಿರಣಿ ನಡೆಯುವದೆಂದು ವೃದ್ಧ ಬಂಧುಗಳು ಅಂದುಕೊಂಡರು. ಇದಕ್ಕೆ ಕೂಲಿಕಾರರು ಒಪ್ಪದ್ದರಿಂದ ಗಿರಣಿಯ ಬಾಗಿಲವನ್ನೇ ಬಂದು ಮಾಡಬೇಕಾಯಿತು. ಇದರಲ್ಲಿ ಮೂರು ಸಾವಿರ ಕೂಲಿಕಾರರು ದುಡಿಯುತ್ತಿದ್ದರು. ಹೀಗೆ ಹೊಟ್ಟೆಗಿಲ್ಲದವರ ಸಂಖ್ಯೆಯು ಬೆಳೆಯಿತು.

ಸ್ಪೇನದಲ್ಲಿ ರಾಜಪಕ್ಷ ಮತ್ತು ಪ್ರಜಾಪಕ್ಷಕ್ಕೆ
ಹೊಡೆದಾಟ.

—(೦)—

ಸ್ಪೇನ ದೇಶಕ್ಕೆ ಸೇರಿದ ಅವಾಕಾಟವೆಂಬ ಗ್ರಾಮದಲ್ಲಿ ರಾಜಪಕ್ಷೀಯರು ಸಭೆ ಮಾಡಿದ್ದರು. ಪ್ರಜಾಪಕ್ಷೀಯರು ಇವರ ಸಭೆಗೆ ಹೋಗಿ, ಹೇಕರಿಸಿ, ಕಿಸಿ ಕಿಸಿ ನಕ್ಕು, ಹುಯಿಲೋ ಮಾಡಿದರು. ಇದನ್ನು ಕಂಡು ರಾಜಪಕ್ಷೀಯರು ಕಿಸೆಯೊಳಗಿನ ರಿವಾಲ್ವರ ತೆಗೆದು, ಅವರ ಮೇಲೆ ಗುಂಡು ಹಾಕಿದರು. ಆಗ ಪ್ರಜಾಪಕ್ಷೀಯರೆಲ್ಲರೂ ಇವರನ್ನು ಹುರಿಮೊರೆಯಲು ಇವರು ಒಂದು ಮನೆಯಲ್ಲಿ ಹೊಕ್ಕು ಅಡಗಿಕೊಂಡರು. ಪೋಲೀಸರು ಗೊಂದಲ ನಿಲ್ಲಿಸಿದರು. ಆವರೂ ಪ್ರಜಾಪಕ್ಷೀಯರು ಇವರ ಎರಡು ಮೋಟಾರುಗಳನ್ನು ಸುಟ್ಟರು.

ಸಾಂದ್ರಿಧಟ್ಟರ ಅಜ್ಞಾತವಾಸ
ಮತ್ತು
ರಾಜಕೀಯ ಗುಪ್ತ ಕಾರಸ್ಥಾನ

—(೦)—

ಸ್ಪೇನದ ರಾಜಪಕ್ಷೀಯರಾದ ಪ್ರಿಮೋರಿಯಾದ ಬಿಶಪ್ಪರು ಕ್ರಾಂತಿಕಾಲದಲ್ಲಿ ಸ್ಪೇನಕ್ಕೆ ಕರ ಗುಪ್ತವಾಗಿ ಮರಳಿ ಬಂದು ಪ್ರತಿಕ್ರಾಂತಿಯು ಗೊಂದಲವೆಬ್ಬಿಸುತ್ತಿದ್ದಾರೆಂಬ ವರ್ತಮಾನ ಕೇಳಿ, ಇವರನ್ನು ಪೋಲೀಸರು ಹುಡುಕತೊಡಗಿದ್ದಾರೆ.

ಹಡಗಗಳ ಸಾಗಿಗೆಗೂ ಮಂದಿ ಬಂತು

—(೦)—

ಜಗತ್ತಿನಲ್ಲಿ ವ್ಯಾಪಾರದ ಮಂದಿಯಾದ ಮೂಲಕ ಇಂಗ್ಲಂಡ, ಫ್ರಾನ್ಸ, ಜರ್ಮನಿ, ಅಮೇರಿಕೆಯ ಕೆ ದೊಡ್ಡ ದೊಡ್ಡ ಹಡಗ ಕಂಪನಿಗಳು ತಮ್ಮ ವ್ಯಾಪಾರದ ಕೆಲ ಹಡಗಗಳ ಸಾಗಿಗೆಯನ್ನು ನಿಲ್ಲಿಸುವರು. ಕೆಲಸ ಇಲ್ಲದವರ ಸಂಖ್ಯೆ ಹೆಚ್ಚುವದಕ್ಕೆ ಮತ್ತಿಷ್ಟು ಕಾರಣ -

ಜರ್ಮನಿಯು ಕೋಶದಲ್ಲಿ ಆಕಾಶ ಉಳಿಯುವದೇ?

—(೦)—

ಜರ್ಮನಿಯಲ್ಲಿ ದುರ್ದಿನ ತಿಟಬಟಿಯಾಗಿದೆ. ನಾವು ಮಾಡಿದ ಕಾಯಿದೆ ಮತ್ತು ಕಟ್ಟುಕಟ್ಟಳೆಗಳನ್ನು ಪ್ರಜರು ಮನ್ನಿಸಬೇಕೆಂದು ಸರಕಾರದವರು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ-ಮುನ್ಸಿ ಬ್ಯಾಂಕು ಬಡ್ಡಿಯ ದರ ಹೆಚ್ಚು ಮಾಡಿತು. ಸಣ್ಣ ಬ್ಯಾಂಕುಗಳು ಪರದೇಶ ಮತ್ತು ಪರದೇಶದ ಬ್ಯಾಂಕುಗಳಲ್ಲಿರುವ ತಮ್ಮ ನಿಧಿಯನ್ನು ತರಿಸಿಕೊಳ್ಳುತ್ತಿರುವವು. ಈ ಬಗ್ಗೆ ಆಲೋಚನೆ ಮಾಡಲು ಸರಕಾರದವರು ವಾಶಿಂಗಟನ್ನ, ರೋಮ ಮತ್ತು ಪಾರೀಸದಲ್ಲಿರುವ ತಮ್ಮ ರಾಯಭಾರಿಗಳನ್ನು ಬರ್ಲಿನಕ್ಕೆ ಕರಿಸಿಕೊಂಡಿದ್ದಾರೆ.

ಸಂಭ್ರಮದ ಬದಲು ಸಾವು ಬಂತು

—(೦)—

ಹಡಗ ಮುಣುಗಿ ಮುನ್ನೂರು ಜನರು ಸತ್ತರು.

—(೦)—

ಇಂಗ್ಲಂಡದ ಒಂದು ದಂಡೆಯ ಮುನ್ನೂರು ಜನರು ವಸಂತ ಕಾಲದ ವಿಹಾರಕ್ಕಾಗಿ ಒಂದು ಹಡಗದಲ್ಲಿ ಕೂತು ಹೋದರು. ಆ ರಾತ್ರಿಯನ್ನು ಅವರು ಹಡಗದಲ್ಲಿ ಆನಂದೋಲ್ಲಾಸದಿಂದ ಕಳೆಯತಕ್ಕವರಿದ್ದರು. ಆದರೆ ವಿಧಿಯೇ ಅವರನ್ನು ಅಲ್ಲಿಗೆಳೆದುಕೊಂಡು ಹೋಯಿತು. ಹಡಗಕ್ಕೆ ಅಪಘಾತವಾಗಿ ಆ ಜನರೆಲ್ಲರೂ ಜಲಸಮಾಧಿ ಹೊಂದಿದರು.

ಫಿರೋಜಪೂರದ ಒಂದು ಮದ್ದು ಗುಂಡು ಮಾಡುವ ಅಂಗಡಿಯೊಳಗಿನ ೨೫೦೦ ಕಾಡತೂಸುಗಳು ಕಳವಾಗಿ ಹೋಗಿವೆ. ಪೋಲಿಸರು ಇದರ ಹೊಣೇಗಾರನನ್ನು ದಸ್ತಗೀರ ಮಾಡಿದ್ದಾರೆ.

ಆತನನ್ನು ಒಂದು ಗುಡಿಸಲದಲ್ಲಿ ಹಾಕಿ ಅದಕ್ಕೆ ಉರಿ ಹಚ್ಚಿದರು. ಇವನನ್ನು ಯಾರೂ ಉಳಿಸಿಕೊಳ್ಳಲಿಕ್ಕೆ ಬರದಂತೆ ಸುತ್ತಲು ಕಾವಲಿಟ್ಟಿದ್ದರು.

ಕಲಕತ್ತೆಯಲ್ಲಿ ಬಿಸಿಲಿನಿಂದ ಬವಳಿ ಬಂದು ನೂರು ಯುರೋಪಿಯನ್ನರು ಸತ್ತರು.

ವ...ರಿಗೆ ಮೋಸ ಮಾಡಿದರೆಂದು ಅವ್ಯ ಕಸರದಲ್ಲಿ ...ಗೆ ಮಗ ಸಹಿತ ಇಬ್ಬರು ಜನರನ್ನು ಹಿ... ದ್ದಾರೆ.

... ಮುಸಲೋನಿಯವರು ತಮ್ಮ ದೇಶಕ್ಕೆ ...ನ ಲಾಭ ಕೊಡಬೇಕೆಂದು ಮಹಾತ್ಮರಿಗೆ ಆ...ತ್ರಣ ಕಳಿಸಿದ್ದಾರೆ.

ಪಿಕೆಟಿಂಗ

ಪರದೇಶೀ ಮಾಲನ್ನು ಮುಟ್ಟಬೇಡಿರಿ!!

—)(-(○)—)(—

ಅಗ್ಗದ ಆಶೆಗೆ ಹೋಗಿ - ಬಡವರ ಕೊರಳಿಗೆ ಹಗ್ಗ ಹಾಕಬೇಕೆನ್ನುವಿರಾ? ಪರದೇಶೀ ಮಾಲಿನ ಮೇಲೆ ಮೋಹ ಮಾಡಿ ನಮ್ಮ ದೇಶ ಬಾಂಧವರನ್ನು ಕೊಲ್ಲಬೇಕೆನ್ನುವಿರಾ?

ಬೇಡ!

ಪರದೇಶೀ ಮಾಲನ್ನು ಕೊಳ್ಳುವದೂ ಬೇಡ!! ಪರದೇಶೀ ಮಾಲನ್ನಿಟ್ಟ ಅಂಗಡಿಗಳಲ್ಲಿ ಕಾಲಿನ್ನಿಡುವದೂ ಬೇಡ!!!

ಹಾಗಾದರೆ -

ಸ್ವಯಂಸೇವಕರು ಪಿಕೆಟಿಂಗ ಮಾಡುತ್ತಿರುವ ಅಂಗಡಿಗಳಲ್ಲಿ ಯಾರೂ ವ್ಯಾಪಾರ ಮಾಡಬೇಡಿರಿ!

ಮಹಾತ್ಮಾ ಗಾಂಧಿಯವರು ಪರದೇಶೀ ಬಟ್ಟೆಯನ್ನು ಮುಟ್ಟಬೇಡಿರೆಂದೂ, ಮಾರಬೇಡಿರೆಂದೂ ಒಂದು ವರ್ಷದಿಂದ ಸಾರಿಸಾರಿ ಹೇಳುತ್ತಿದ್ದರೂ ಈ ಊರಲ್ಲಿಯ ಎಷ್ಟೋ ಅಂಗಡಿಕಾರರು ಇನ್ನೂವರೆಗೆ ಪರದೇಶೀ ಬಟ್ಟೆಯ ವ್ಯಾಪಾರವನ್ನು ಬಿಡಲಿಲ್ಲವಾದ್ದರಿಂದ ಕಾಂಗ್ರೆಸ ಕಮೀಟಿಯವರು ಪಿಕೇಟಿಂಗ ಮಾಡಬೇಕಾಗಿದೆ. ಆದ್ದರಿಂದ ಎಲ್ಲ ಬಂಧುಭಗಿನಿಯರೂ ಪಿಕೇಟಿಂಗ ನಡೆದ ಪರದೇಶೀ ಬಟ್ಟೆಗಳ ಅಂಗಡಿಗಳಲ್ಲಿ ಅವರು ಪರದೇಶೀ ಮಾಲನ್ನು ಗಂಟುಕಟ್ಟುವವರೆಗೂ ಯಾವ ವ್ಯಾಪಾರವನ್ನೂ ಮಾಡಬಾರದು.

ಗಂಟು ಕಟ್ಟಿಟ್ಟ ಅಂಗಡಿಗಳು

೧) ಅಂಬಾದಾಸ ಬ್ರದರ್ಸ ದತ್ತಾತ್ರೇಯ ಗುಡಿಯ ಹತ್ತರ,

೩) (ಕದಂದೀಕರ) ಕರ್ನಾಟಕ ಸ್ವದೇಶೀ ಸ್ಟೋರ.

೩) ಪಾಂಡುರಂಗರಾವ ಟಿಕಾರೆ ಎಳೆ ಗಡಗಡೆ ಭಾವಿಯ ಹತ್ತರ.

೪) ಆರ್. ಎಲ್. ಬೆಳವಳ್ಳಿ (ಉಲ್ಲಾಳ ಬ್ರದರ್ಸ) ಕಾಯಿಪಲ್ಲೆ ಮಾರ್ಕೆಟ.

೫) ಆರ್. ಎನ್ ಕುಲಕರ್ಣಿ. ಗಾಂಧೀಚೌಕ

ಈ ಅಂಗಡಿಕಾರರು ತಮ್ಮಲ್ಲಿದ್ದ ಎಲ್ಲ ಪರದೇಶೀ ಮತ್ತು ಬಹಿಷ್ಕೃತ ಬಟ್ಟೆಯನ್ನು ಗಂಟು ಕಟ್ಟಿಟ್ಟಿದ್ದಾರೆ.

ಸೂಚನೆ - ಪಿಕೇಟಿಂಗಕ್ಕೆ ಹೆಸರು ಕೊಡಲಿಚ್ಛಿಸುವವರು ಕಾಂಗ್ರೆಸ ಕಮೀಟಿಯಲ್ಲಿ ಕೊಡಿರಿ.

ಧಾರವಾಡ ಕಾರ್ಯದರ್ಶಿ
ತಾ||೧೬-೬-೧೯೩೧ ತಾ. ಕಾ. ಕಮೀಟಿ

The Asian Life Assurnance Co. Ltd Bombay. Branch office Hubli.

ಅನುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು ಸೌಖ್ಯದಿಂದರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೩೭೫ ರೂ ಗಳನು ಕೊಡುವಂಥ ಗೋಲ್ಡನ್ (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ ಕಂತುಗಳಾದರೂ ಇಷ್ಟಿಷ್ಟೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೆಳಗಿನ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್ ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೩೪,೦೦೦,೦೦ ಕಂತದ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರಿಗಿ ಕೊಟ್ಟದ್ದು ೧೦,೦೦,೦೦೦

ಜಿಂದಿಗಿ ೩೩,೨೮,೧೭೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕೆ. ಹ್ಹಿ. ಹುಲಸೋಗಿ, ಬಿ ಎ.
ಕುಲಕರ್ಣಿ. ಧಾರವಾಡದ ಏಜಂಟರು ಕರ್ನಾಟಕದ ಬ್ರಾಂಚ ಮ್ಯಾನೇಜರ
ಬಿ. ಎಚ್. ಪಾಟೀಲ ಹುಬ್ಬಳ್ಳಿಯ ಏಜಂಟರು—
ಹಾವೇರಿಯ ಚೀಫ ಏಜಂಟರು. ಶ್ರೀ. ಎನ್. ಎಮ್. ಜೋಡ್ಡವಾಡ ಮತು
ಶ್ರೀ. ಬಿ. ಟಿ. ಶಿರೋಳಕರ.

ಜಾಹೀರಾತು

ಕಲ್ಲೋಳಿಯ ಶಿಲಿಯಿಂದ ಸಿದ್ಧಗೊಳಿಸಿದ ಹಣುಮಂತದೇವರ ಮೂರ್ತಿ ಬೇಕು.

ಈ ವಿಷಯವಾಗಿ ಕೆಳಗಿನ ಪತ್ತೆಯ ಮೇಲೆ ಪತ್ರ ವ್ಯವಹಾರ ಮಾಡಬೇಕು

ಹನುಮಂತ ಜೀವಾಜಿ ಕುಲಕರ್ಣಿ
ಮುಕ್ಕಾಂ-ಯಕ್ಕುಂಡಿ
ಪೋ-ಯಕ್ಕುಂಡಿ
ಜಿ. ಬೆಳಗಾವ ತಾ. ಸವದತ್ತಿ

ಈ ಪತ್ರವನ್ನು ಆನಂದಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ನಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨ | ಧಾರವಾಡ ಗುರುವಾರ ತಾರೀಖು ೧೮ ನೇ ಜೂನ ೧೯೩೧ (ಸಂಚಿಕೆ ೧೩೭

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ ಸಿದ್ಧಾರೂಢರ [illegible] ಶ್ರೀ. [illegible]ಸ್ವಾಮಿಗಳ ಕೃಪೆಯನ್ನು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ [illegible] ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತೇವೆ. [illegible] ಅಗ್ರಹದ [illegible] ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ [illegible] ವಾಗಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ಕಡಿಮೆಯಿರುವವು. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ, ಹತ್ತು ಪ್ರತಿ ಕೊಳ್ಳುವವರಿಗೆ ಒಂದು [illegible] ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. [illegible] ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಒಂದಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಹತ್ತು ಪ್ರತಿ ಬೇಡುವವರು ಮುಂಗಡ ಮನಿಆರ್ಡರ ಮಾಡಬೇಕು. ವ್ಹಿ. ಪಿ. ಯಿಂದ [illegible] ಬೇಡುವವರು ೧/೪ ಹಣವನ್ನು ಮುಂಗಡ ಮನಿಆರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಇಂದಿಗೆಯೂ ಎಂಟು ಲಕ್ಷದ ಮೇಲೆ ಉಂಟು. ಹುಂಡಿ ಮಾರಲಿಕ್ಕಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಸಾಲುಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂದೂವರೆ ಆಣೆ ಇಂಗ್ಲೀಷ ಪ್ರತಿಯೊಂದು ಸಾಲಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಸಾಲುಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಒಳಗಿನ ಪತ್ರಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ,

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಒಳ್ಳೆ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಿಗೆಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು	೧ಕ್ಕೆ	೨—೦—೦
ಕೃಷ್ಣ ಪಾರಿಜಾತ ಅತ್ತರು ತೊಲೆ	೧ಕ್ಕೆ	೪—೦—೦

೧೯-೧೧-೩೧

ಮೈಸೂರ ಸ್ಟೋರ್ಸ,
ಬೆಳಗಾವಿಯವರಗಲ್ಲಿ
ಹುಬ್ಬಳ್ಳಿ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	ರೂ. ೧೨/೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೯-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿ.

ಮ್ಯಾ ವಿಜಯ ಧಾರವಾಡ

ವಿಜಯ.

ತಾರೀಖು ೧೮-೬-೧೯೩೧ನೇ ಇಸ್ವಿ

ಮಹಾತ್ಮರು ಸರ್ವಂಟ ಆಫ ಇಂಡಿಯಾ ಸೊಸಾಯಟಿಗೆ ಬರೆದ ಪತ್ರ.

(೦)

ಹೋದ ಶುಕ್ರವಾರ ದಿವಸ ಪುಣೆಯಲ್ಲಿ ಮಹಾಳರ ಸರ್ವಂಟ ಆಫ ಇಂಡಿಯಾ ಸೊಸಾಯಟಿ ಎಂದರೆ- ಭಾರತಸೇವಾ ಸಂಘದ ವಾರ್ಷಿಕ ಸಮಾರಂಭವಾಯಿತು. ಈ ಸಮಾರ-ಭಕ್ಕೆ ಅಗತ್ಯವೂರ್ವಕವಾಗಿ ಬರುವದಾಗಬೇಕೆಂದು ಸಂಘದವರು ಮಹಾತ್ಮರಿಗೆ ವಿನಂತಿ ಮಾಡಿಕೊಂಡರು. ಅದಕ್ಕೆ ಅವರು ಮುಂದೆ ಕೊಟ್ಟಂತೆ ಉತ್ತರ ಕಳಿಸಿದ್ದಾರೆ.

"ನಾನು ನಿಮ್ಮ ಸಭೆಗೆ ಈ ಮೊದಲು ಯಾವಾಗಲು ಬರಲಿಲ್ಲೆಂಬ ಸಂಗತಿಯಿಂದ, ನಾನು ನಿಮ್ಮೊಳಗಿಂದ ಪ್ರತ್ಯೇಕನಾಗಿರುತ್ತನೆಂದು ನೀವು ಸಹಸಾ ತಿಳಿಯಕೂಡದು. ಉಭಯತರ ವಿಚಾರಗಳು ಎರಡು ಧ್ರುವಗಳಷ್ಟು ಅಂತರವುಳ್ಳದ್ದಾಗಿದ್ದರೂ, ನಾವು ಉಭಯತರು ಸೇರಿ ಒಂದೇ ಪ್ಲಾಟಫಾರ್ಮಿನ ಮೇಲೆ ನಿಂತು ಕೆಲಸ ಮಾಡದಿದ್ದರೂ, ನಾವಿಬ್ಬರೂ ಒಂದೇ ಅಂತಃಕರಣದವರಾಗಿ, ಒಬ್ಬನೇ ಗುರುವಿನ ಶಿಷ್ಯರಾಗಿದ್ದೇವೆಂಬದನ್ನು ನಾನು ಯಾವಾಗಲು ಮರೆಯುವದಿಲ್ಲ."

ಇವರ ಗುರುವೆಂದರೆ- ನಾಮದಾರ ಗೋಖಲೆ. ಮಹಾತ್ಮರು ಒಂದು ಕಾಲದಲ್ಲಿ ನಾಮದಾರ ಗೋಖಲೆಯವರನ್ನು ಅನುವರ್ತಿಸಿದರು. ನಾಮದಾರ ಗೋಖಲೆ ಅಥವಾ ಸರ್ವಂಟ್ಸ ಆಫ ಇಂಡಿಯಾ ಸೊಸಾಯಟಿಯವರ ಒಟದಿಂದ ಹಿಂದುಸ್ಥಾನದ ಗುಲಾಮಗಿರಿಯು ಹೋಗಲಾರದೆಂದು ಮನವರಿಕೆಯಾಗಲು- ಲೋಕಮಾನ್ಯ ಟಿಳಕರ ಪಂಥ ಸೇರಿದರು. ಮುಂದೆ ಲೋಕಮಾನ್ಯರಿಗಿಂತ ಹೆಚ್ಚು ಧಡಾಡಿಯಿಂದ ಓಡುತ್ತಿದ್ದಾರೆ. ಲೋಕಮಾನ್ಯರ ಪ್ರತಿಯೋಗಿ ಸಹಕಾರದ ಬದಲು- ಹಿಂದುಸ್ಥಾನವು ಸಂಪೂರ್ಣ ಸ್ವತಂತ್ರವಾಗಬೇಕೆಂಬ ಧ್ಯೇಯದವರಾಗಿದ್ದು, ಆ ಧ್ಯೇಯವನ್ನು ನಾಮದಾರ ಗೋಖಲೆ ಅಥವಾ ಲೋಕಮಾನ್ಯ ಟಿಳಕ ಶಿಷ್ಯರು ಇನ್ನೂ ಅಂಗೀಕರಿಸದವರಾಗಿದ್ದಾರೆ.

ಇವರ್ಗೆ ಇಬ್ಬರ ಶಿಷ್ಯರಾಗಿರೆಂದರೆ- ಕತೆಕನೆ ಅವರ ಹಳೇ ಗ್ರಂಥಗಳನ್ನೇ ತಿರುವಿ ಹಾಕುತ್ತ ಕೂಡ್ರುವದು ಮಾನವನ ಪ್ರಗತಿಯ ಲಕ್ಷಣವಾಗುವದಿಲ್ಲ. ಭಾರತಸೇವಾ ಸಂಘದವರು ಇಂದಿಗೂ ಸ್ವದೇಶಿಗೆ ಶಕ್ಯವಾದಷ್ಟು ಉತ್ತೇಜನ ಕೊಡಬೇಕೆಂಬ ಆಳಬುರುಕ ಮತದವರಾಗಿದ್ದರಲ್ಲದೆ, ಪಿಕೆಟಿಂಗ ಬಹಿಷ್ಕಾರ ಮುಂತಾದವು ಅವರ ಕಿವಿಗೆ ಕೇಳಿಸುವದೇ ಇಲ್ಲ. ಅನಧಿಕಾರಿಗಳಲ್ಲಿ ಗಣನಾದರು ವೇದ ಮಂತ್ರ ಶ್ರವಣ ಮಾಡಿದರೆ ಆತನ ಕಿವಿಯಲ್ಲಿ ಸೀಸು ಕಾಸಿ ಹೊಯ್ಯುತ್ತಿದ್ದರೆಂದು ಪುರಾತನ ಕಾಲದಂತಕಥೆಯುಂಟು. ಪಿಕೆಟಿಂಗ ಮತ್ತು ಬಹಿಷ್ಕಾರ ಶಬ್ದಗಳು ತಮ್ಮ ಕಿವಿಯಲ್ಲಿ ಬಿದ್ದರೆ-ಪರಕೀಯರು ತಮ್ಮ ಕಿವಿಗಳನ್ನೂ ಎಲ್ಲಿ ಸುಡುವರೆಂದು ಇವರು ಹೆದರಿಕೊಂಡಂತೆ ತೋರುತ್ತದೆ.

ಪ್ರತಿಯೋಗಿ ಸಹಕಾರಿಗಳ ಮುಖಂಡರಾದ ಶ್ರೀ. ಕೇಳಕರ ಜಯಕರರು ಕಾಂಗ್ರೆಸಕ್ಕೆ ಹೋಗುವದನ್ನು ಕೂಡ ವರ್ಜ ಮಾಡಿದ್ದಾರೆ. ಸ್ವದೇಶಿಯ ಮಾಲೋತ್ಪತ್ತಿಯು ಪುಣೆಯಲ್ಲಾಯಿತು. ಇದರ ಗುರುಗಳಾದ ಸಾರ್ವಜನಿಕ ಕಾಕಾನವರನವರು ಸೀರೆಯನ್ನು ಹರಿಸಿ, ಉದ್ದಂಗಿ ಬಗಲಂಗಿ ಹೊಲಿಸಿಕೊಂಡು, ಅವನ್ನು ತೊಟ್ಟರು. ಆ ಕಾಕಾ ಶಿಷ್ಯರೂ ಅನುಯಾಯಿಗಳೂ, ಇಂದು ಖಾದೀ ಧರಿಸಲಿಕ್ಕೆ ನಾಚುತ್ತಿದ್ದಾರೆ. ಪುಣೆಯು ರಾಜಕಾರಣದ ಕೇಂದ್ರ, ಅಲ್ಲಿಂದಲೇ ರಾಜ್ಯಸೂತ್ರಗಳಾದ್ಯತ್ತವೆಂಬ ಬಿರುದನ್ನೇ ಕಳೆದು ಬಿಟ್ಟರು.

ಇಂಥ ಮಹಾತ್ಮರ ಪತ್ರಗಳಂತೆಯೇ ಜನರು ನಡೆಯುವರೆಂದು ಹೇಳಲಿಕ್ಕಾಗವದಿಲ್ಲ ಏಕೆಂದರೆ-ಪಂಡಿತ ಜವಾಹರಲಾಲರ ಸೋಸಿಯಲಿಸ್ಟ ಪಂಥವು ಬೆಳೆಯದೆ ಹೋಗದು. ವಿದ್ಯಮಾನಪರಿಸ್ಥಿತಿಯಲ್ಲಿ ಎಲ್ಲಕ್ಕೂ ಹೆಚ್ಚಿನ ರಾಜಕಾರಣ ಸಂಪಾದಿಸುವದೇ ಮನುಷ್ಯನ ಅಂತಿಮಧ್ಯೇಯವಾಗಿರತಕ್ಕದ್ದು. ಕ್ರಮೇಣ ರಾಜ್ಯದಾಡಳಿತೆಯಲ್ಲಿ ಬದಲಾಗಬೇಕೆಂಬ ಸ್ವರಾಜ್ಯವಾದಿಗಳ ಮತ್ತು ಹೋಮರೂಲು ನನ್ನ ಜನ್ಮಸಿದ್ಧ ಹಕ್ಕೆಂದು ಲೋಕಮಾನ್ಯರ ಮತವು. ಕಾಂಗ್ರೆಸವು ಇವೆರಡೂ ಮತಗಳನ್ನು ಹಿಂದೆ ಹಾಕಿದೆ. ಮಧ್ಯಾಳೂ, ಪ್ರತಿಯೋಗಿ ಸಹಕಾರಿಗಳೂ ನಮ್ಮ ಅಜ್ಜ ಹೀಗಿದ್ದನೆಂದು ಹೇಳಿಕೊಳ್ಳುವದರಲ್ಲಿ ಪುರುಷಾರ್ಥವಿಲ್ಲ. ಹಾಗೆ ಅಂದುಕೊಳ್ಳುವದೆಂದರೆ ಮೋಟಾರ ಮತ್ತು ವಿಮಾನಗಳ ಕಾಲದಲ್ಲಿ ಎತ್ತಿನ ಬಂಡಿಯಲ್ಲಿಯೇ ಕೂತು, ಕುದುರೆಗಳ ಬೆನ್ನಿನ ಮೇಲೇ ಕಟ್ಟಿ ಹೇರಿಕೊಂಡು ದೇಶಾಟನ ಮಾಡುವಂಥ ಹಾಸ್ಯಾಸ್ಪದವೇ ಸೈ.

ಸಭೆ ಬಿಟ್ಟು ಹೋಗುವದು ಎಂದಿಗೂ ಅಪರಾಧವಲ್ಲ.

ಮೈಸೂರಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಹಸ್ತೆಯನ್ನು ಕಡಿಮೆ ಮಾಡುವ ವಿಷಯವಾಗಿ ಪಾಸಾದ ಠರಾವನ್ನು ಅಂಗೀಕರಿಸುವದು ದಿವಾನರ ಕರ್ತವ್ಯವಾಗಿತ್ತು. ಹೀಗೆ ಮಾಡುವದು ಶಕ್ಯವೇ ಇಲ್ಲೆಂದು ದಿವಾನರು ದುಡುಕಾಸೆಗೆಂತೆ ಉತ್ತರ ಕೊಡಲು ಮಾನವಂತರಾದ ಮೆಂಬರರು ಸಭೆಬಿಟ್ಟು ಬಂದರು. ಈ ಪ್ರಕಾರ ಸಭೆಬಿಟ್ಟು ಬಂದವರನ್ನು ಬಿಟ್ಟು ಉಳಿದ ಎಲ್ಲ ಮೆಂಬರರಿಗೆ ಪ್ರವಾಸದ ಹಾಗು ದಿವಸದ ಭತ್ತೆ ಕೊಟ್ಟರು. ಎದ್ದು ಹೋದವರೆಲ್ಲರು ನಮ್ಮ ಭತ್ತೆ ಎಂದು ಕೇಳುವದಕ್ಕಾಗಿ ದಿವಾನರನ್ನು ಕಾಣಲಿಕ್ಕೆ ಹೋದಾಗ, ನೀವು ಸಭೆ ಬಿಟ್ಟು ಎದ್ದು ಹೋಗಿ ಕೆಲಸಕ್ಕೆ ವ್ಯತ್ಯಯ ತಂದಿರಿ. ಆದ್ದರಿಂದ ನಿಮಗೆ ನಿಮ್ಮ ಭತ್ತೆ ದೊರೆಯಲಾರದೆಂದು ನುಡಿದಲು ನಿಷ್ಠುರವಾಡಿ, ಹಿಂದುಗಡೆ, ಈ ಸಾರೆ ತಕರಾರು ಮಾಡಿ ಮುಂದೆ ಈ ತರವಾಗಿ ನಿಮ್ಮ ವರ್ತನವಾದರೆ ಭತ್ತೆ ದೊರೆಯಲಾರದೆಂದು ಬೆದರಿಸಿ ಕಳಿಸಿದರು, ಮೆಂಬರರು ಹೀಗೆ ಮಾತಾಡಿಸಿಕೊಂಡು ಭತ್ತೆ ತಕ್ಕೊಂಡದ್ದು ಗೌಣ ಕೃತ್ಯವಾಯಿತು.

ವಿಲಾಯತಿಯಲ್ಲಿ ಇಂಥ ಪ್ರಸಂಗಗಳು ಆಗಾಗ್ಗೆ ಬರುತ್ತವೆ ಎಷ್ಟೋ ಮೆಂಬರರು ಸಭೆಯಲ್ಲಿ ಸತ್ಯಾಗ್ರಹಮಾಡಿ, ಬಾಕುಗಳಿಗೆ ಅಂಟಿಕೊಂಡು, ಪ್ರಾಣಹೋದರೂ ಬೀಳುತ್ತಾರೆ ಪೋಲಿಸರು ಇವರನ್ನು ಬಾಕು ಸಹಿತ ಅನಾಮತ ಎತ್ತಿ, ಸಭಾಮಂದಿರದ ಹೊರಗೆ ತರುತ್ತಾರೆ. ಸರಕಾರದವರು ಇವರ ಭತ್ತೆಯನ್ನು ನಿಲ್ಲಿಸಿದಂತೆ ಒಂದೂ ಉದಾಹರಣೆಯಾಗಿಲ್ಲ. ವಿಲಾಯತಿಯ ರಾಜ್ಯಪದ್ಧತಿಯ ಶಿಕ್ಷಣ ಪಡೆದ ದಿವಾನರು ಭತ್ತೆಯ ಬೆದರಿಕೆ ಹಾಕುವದು ಸಂಪೂರ್ಣ ಅಪಕ್ವವಾಗುತ್ತದೆ.

ಮೆಂಬರರು ಸತ್ಯಾಗ್ರಹ ಮಾಡಿ, ಅಥವಾ ನಿಷೇಧವೆಂದು ಸಭೆ ಬಿಟ್ಟು ಬಂದರೆ- ಅವರಿಗೆ ಊಟಕ್ಕೆ ಹಾಕಬಾರದು. ಊರಿಂದ ಬಂದ ಮತ್ತು ತಿರುಗಿ ಊರಿಗೆ ಹೋಗುವ ವೆಚ್ಚವನ್ನು ಕೊಡಬಾರದೆಂದು ಪ್ರಜಾಪ್ರತಿನಿಧಿಯ ಸಭೆಯ ನಿಯಮವಿಲ್ಲ. ದಿವಾನರ ಸ್ವೇಚ್ಛಾಚಾರದಿಂದಲೇ ಸಭೆಯ ಕೆಲಸ ನಡೆಯಬೇಕಾದರೆ- ಸಭೆಯ ಥಾಮಾರ್ಥದೂ ಏತಕ್ಕೆ ಬೇಕು ?

ಮೆಂಬರರು ದರಿದ್ರರಿರುವದಿಲ್ಲ. ಶ್ರೀಮಂತರೇ ಇರುತ್ತಾರೆ. ಚುನಾವಣೆಯ ಕಾಲದಲ್ಲಿ ಸಾವಿರಾರು ರೂಪಾಯಿಗಳನ್ನು ಹುಣಸೀ ಪಕ್ಕದಂತೆ

ನ್ನು ತವರಿಗಿಂತ ಕಡಿಮೆ ಪಡೆಯುವಂಥವರು ಸಭೆಯ ಹತ್ತೆಂಟು ದಿವಸಗಳ, ದೆಸೆಯಿಂದ ಸರಕಾರದ ಹಂಗಿನೊಳಗೇ ಇರಬೇಕು. ಎಷ್ಟೋ ನೂರು ವರ್ಷಗಳ ವರೆಗೆ ಪಾರ್ಲಮೆಂಟಿನ ಮೆಂಬರರಿಗೆ ಭತ್ತೆ ಕೊಡುತ್ತಿದ್ದಿಲ್ಲ. ಅದು ಪ್ರಾರಂಭವಾಗಿ ೨೫-೩೦ ವರ್ಷವಾಗಿದೆ. ಮೆಂಬರರು ಗೃಹಕೃತ್ಯಕ್ಕಾಗಿ, ಕೋರ್ಟು ಕಛೇರಿಗಾಗಿ, ದಸರೆಯ ದರಬಾರಕ್ಕಾಗಿ ಸ್ವಂತ ವೆಚ್ಚದಿಂದ ಮೈಸೂರಿಗೆ ಬಂದು ಹೋಗುವರು. ಅದೇ ತೆರವಾಗಿ ಪ್ರಜಾಪ್ರತಿನಿಧಿಗೆ ಬಂದು, ದಿವಾನರ ಹಂಗನ್ನೇ ತಪ್ಪಿಸಿಕೊಳ್ಳಬೇಕು. ಹೀಗೆ ನಡೆಯುವದರಿಂದ ಮೆಂಬರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ಸ್ವತಂತ್ರರಾಗುವದಲ್ಲದೆ, ದಿವಾನರಿಗೆ ಇವರ ವಿಷಯವಾಗಿ ಒಂದು ಪ್ರಕಾರದ ಭಯವೂ ಹುಟ್ಟುತ್ತದೆ.

ಮಹಾತ್ಮರು ಲಂಡನಕ್ಕೆ ಹೋಗುವಾಗ ಬಡವರ ಬೀದಿಯಲ್ಲಿಳಿಯುವರು.

ಮೊದಲಿನ ರೌಂಡ ಟೇಬಲಿಗಾಗಲಿ, ಯಾವದೊಂದು ರಾಜಕಾರಣಕ್ಕಾಗಿ ಬ್ರಿಟಿಶ ಸರಕಾರದ ಅತಿಥಿಗಳಾಗಿ ಹೋದಾಗಾಗಲಿ, ಹಿಂದೀ ಪ್ರತಿಷ್ಠಿತರು ಲಂಡನದಲ್ಲಿ ಅರಮನೆಯಂತಿರುವ ಹೊಟೇಲಗಳಲ್ಲಿಳಿಯುವರು. ಮಹಾತ್ಮರು ಇಂಥ ಭವ್ಯ ಮಂದಿರಗಳಲ್ಲಿಳಿಯದಿದ್ದರೂ, ಮಹಾತ್ಮರ ಮಿತ್ರರಾದ ಕಲಕತ್ತೆಯ ಶ್ರೀ. ಬಿರ್ಲಾನವರು ಧರ್ಮದಂತೆ ನಡೆಯುವವರಿಗಾಗಿ ಕಟ್ಟಿಸಿದ ಆನಂದಭವನದಲ್ಲಿಳಿಯಬಹುದೆಂದು ಊಹೆಯಾಗಿತ್ತು.

ಮಹಾತ್ಮರು ಲಂಡನದಲ್ಲಿರುವ ಮಿತ್ರರಿಗೆ ಪತ್ರ ಬರೆದು ತಾವು ತೀರ ಬಡಜನರು ವಾಸವಾಗಿರುವಂಥ ಪಟ್ಟಣದ ಪೂರ್ವಭಾಗದಲ್ಲಿಳಿದುಕೊಳ್ಳುವೆನೆಂತ ತಿಳಿಸಿದ್ದಾರೆ. ನಾನು ದರಿದ್ರ ನಾರಾಯಣನು. ದರಿದ್ರ ನಾರಾಯಣರ ಸೇವೆಯೇ ನನ್ನ ಧರ್ಮವು. ಆದ್ದರಿಂದ ದರಿದ್ರರು ವಾಸವಾಗಿರುವಂಥಲ್ಲಿಯೇ ಇಳಿದುಕೊಳ್ಳುವೆನೆಂದೆಂದಿದ್ದಾರೆ.

ಈ ಭಾಗದಲ್ಲಿ ರಾಜಕಾರಣಕ್ಕಾಗಿ ಹದ್ದುಪಾರಾದಂಥ ಅಥವಾ ತಾವಾಗಿ ದೇಶಾಂತರ ಮಾಡಿದಂಥ ಪರದೇಶಿಯರು ಬಂದಿರುತ್ತಿದ್ದರು. ರಶಿಯಾದ ಡಿಕ್ಟೇಟರನಾದ ಲೆನಿನಸಾಹೇಬನೂ, ಟ್ರಾಟ್ಸ್ಕಿಯೂ, ಬೇರೆ ದೊಡ್ಡ ಜನರೂ ಇಲ್ಲಿಯೇ ಕೆಲ ಕಾಲ ಕಳೆದರು. ಹಿಂದುಸ್ಥಾನದ ಲೆನಿನರಾಗದಿದ್ದರೂ, ಜಾರ್ಜವಾಶಿಂಗಟನ್ನರಂಥ ಸತ್ಯಾರ್ಥಿಯಾದ ಮಹಾತ್ಮರು ಬಡವರ ಬಳಗದವರಾಗುವದೇನಾಶ್ಚರ್ಯ!!

ಶಿಕಾರಪೂರ ಮ್ಯುನಿಸಿಪಾಲಿಟಿಯ ಮೇಲೆ ಸುದರ್ಶನ ಚಕ್ರ.

—(೦)—

ಸಿಂಧ ಪ್ರಾಂತದಲ್ಲಿರುವ ಶಿಕಾರಪೂರ ಮ್ಯುನಿಸಿಪಾಲಿಟಿಯ ಆಡಳಿತವು ತೀರ ಹದಗೆಟ್ಟಿದ್ದು ಸರಕಾರದವರು ಇದಕ್ಕೆ ಸಸ್ಪೆಂಡ ಮಾಡುವ ಭಯ ಹಾಕಿದ್ದಾರೆ ಕಾರಣಗಳು.-

೧ ಕಳೆದ ಒಂಭತ್ತು ವರ್ಷಗಳಿಂದ ಮ್ಯುನಿಸಿಪಾಲಿಟಿಯ ಅಂದಾಜ ಪತ್ರಿಕೆಯಲ್ಲಿ ಕೊರತೆಯೇ ಬರುತ್ತಿತ್ತು, ಅದು ಇಂದಿಗೆ ಮೂರು ಲಕ್ಷವಾಗಿದೆ.
೨ ರಿಝರ್ವ ಫಂಡೆಲ್ಲ ವೆಚ್ಚವಾಗಿ ಹೋಗಿದೆ.
೩ ವಸೂಲಿಯು ನೆಟ್ಟಗಾಗುವದಿಲ್ಲ.
೪ ಜಕಾತಿ ವಸೂಲಿಯ ವೆಚ್ಚವು ಉತ್ಪನ್ನಕ್ಕಿಂತ ಹೆಚ್ಚಿರುತ್ತದೆ.
೫ ಸ್ಯಾನಿಟರಿಯು ಸಮಾಧಾನಕರವಾಗಿರುವದಿಲ್ಲ. ಹರಾಂಬಖೋರರ ಸಂಬಳವು ಆದಾಯಕ್ಕಿಂತ ಹೆಚ್ಚಿರುತ್ತದೆ.
೬ ಮ್ಯುನಿಸಿಪಾಲಿಟಿಯ ಎಲ್ಲ ಕಟ್ಟಡಗಳು ಶಿಥಿಲವಾಗಿವೆ. ಮತ್ತು ನೂರಾರು ಪ್ಲಾಟು ಹಾಗು ಬಾಡಿಗೆ ಕೊಟ್ಟ ಪದ್ಧತಿಯು ಮ್ಯುನಿಸಿಪಾಲಿಟಿಗೆ ಹಾನಿಯನ್ನು ತರುವದಾಗಿರುತ್ತದೆ
೭ ಮ್ಯುನಿಸಿಪಾಲಿಟಿಯ ಕೆಲಸಗಾರರು ನಾಲಾಯಖರಿದ್ದಾರೆ.

ಬೇಗನೆ ತಾರು ಮುಟ್ಟುವ ವ್ಯವಸ್ಥೆ

——(೦)——

ಟೆಲಿಫೋನಿನಿಂದ ತಾರು

—(೦)—

ತಾರನ್ನು ಕಳಿಸುವದೆಂದರೆ - ತಾರಿಗೆ ಸದ್ಯ ಸೆಂಟ್ರಲ ಆಫೀಸಿನಲ್ಲಿ ಕೆಲ ಹೊತ್ತು ವ್ಯಯ ಮಾಡಬೇಕಾಗುತ್ತದೆ ಇದರಿಂದ ತಾರು ಮುಟ್ಟಲಿಕ್ಕೆ ಅವಕಾಶವಾಗುತ್ತದೆ. ತಾರಿನಗುಂಟ ಟೆಲಿಫೋನವಿದ್ದಲ್ಲಿಗೆ ಒಮ್ಮೆಯಲೇ ಟೆಲಿಫೋನಿನಿಂದಲೇ ಹೇಳಬೇಕು. ಅವರು ಅದನ್ನು ತಾರಿನಂತೆ ಬರೆದುಕೊಂಡು ಪತ್ರಗಾರರಿಗೆ ಕಳಿಸಬೇಕು. ಮತ್ತು ದೊಡ್ಡ ಪಟ್ಟಣದಲ್ಲಿ ಟೆಲಿಫೋನು ತೆಗೆದುಕೊಂಡವರ ಮನೆಗೆ ಅದರಿಂದಲೇ ತಾರಿನ ವರ್ತಮಾನ ತಿಳಿಸಬೇಕು. ಸಿವಾಯಿ ಕಳಿಸುವ ಕಾರಣವಿಲ್ಲ; ಹೀಗೆ ಮುಂಬಯಿಯ ಪೋಸ್ಟ ಮಾಸ್ತರ ಜನರಲ್ಲರು ಹೊಸ ಏರ್ಪಾಡು ಮಾಡಿದ್ದಾರೆ.

ಸಿರ್ಸಿ ಸಿದ್ದಾಪೂರದ ಬಡವರ ಸಹಾಯಕ್ಕಾಗಿ ಮುಂಬಯಿಯಲ್ಲಿ ಕನ್ನಡಿಗರ ಸಭೆ

—(೦)—

ಸಿರ್ಸಿ ಮತ್ತು ಸಿದ್ದಾಪೂರ ತಾಲೂಕುಗಳ ಮಧ್ಯಾನ್ನಕ್ಕೆ ಅಭಾವರಾದ ಜನರ ದೆಸೆಯಿಂದ ಘೋರನ ಎತ್ತುಗಡೆ ಮಾಡುವ ಕಮಿಟಿಯು ಏರ್ಪಡಿಸಿದಷ್ಟೇ; ಇದೇ ಉದ್ದಿಶ್ಯವಾಗಿ ಮುಂಬಯಿಯ ವಾಸವಾಗಿರುವ ಕನ್ನಡಿಗರದೇ ಒಂದು ಸಭೆ ಕೂತು ಅಲ್ಲಿಯ ಸ್ಥಿತಿಯನ್ನು ಪ್ರತ್ಯಕ್ಷ ನೋಡಿ ಹೋದ ಶ್ರೀ. ಜಮುನಾಲಾಲ ಬಜಾಜ ಅಧ್ಯಕ್ಷರಾಗಿರು. ಶ್ರೀ. ದೇಶಪಾಂಡೆ ಗಂಗಾಧರರಾಯರು ಮುಖ್ಯ ಭಾಷಣಕರ್ತರಾಗಿದ್ದರು. ಶೇಟಜಿಯವರು ಈ ಸಭೆಗೆ ಒಂದು ನೂರು ರೂಪಾಯಿ ಕೊಟ್ಟರು. ಕನ್ನಡಿಗರಲ್ಲಿ ವರ್ಗಣಿ ಕೂಡಿಸುವದು ನಡೆದಿದೆ.

ಸರಹದ್ದಿನ ಭಟ್ಟಿ ಬಹುವಾಗಿ ಕೆಟ್ಟಿತು

—(೦)—

ವಾಯುವ್ಯ ಸರಹದ್ದಿನ ಭಟ್ಟಿಯು ಬಹಳವಾಗಿ ಕೆಟ್ಟಿದ್ದರಿಂದ ಮಹಾತ್ಮರು ಅಲ್ಲಿಗೆ ಹೋಗಲು ಪಾಸಪೋರ್ಟ ಬೇಕಾಗುತ್ತದೆ. ಈ ಮೊದಲು ಸರಕಾರದವರು ಪಾಸಪೋರ್ಟ ಕೊಟ್ಟಿದ್ದಿಲ್ಲ. ಈ ಸಾರೆ ಹೇಗೆ ಮಾಡುವರೆಂಬದನ್ನು ನೋಡಬೇಕಾಗಿದೆ.

ಗಡಂಗದಲ್ಲಿ ಬಾಂಬು ಹಾರಿ ಇಬ್ಬರು ಸತ್ತರು

—(೦)—

ಬಂಗಾಲಕ್ಕೆ ಸೇರಿದ ಜನಪೂರಮೊಟಲ್ಲಿಯ ಗಡಂಗದಲ್ಲಿ ಬಾಂಬು ಹಾರಿ, ಇಬ್ಬರು ಸತ್ತರು ನಾಲ್ವರು ಘಾಯವಾಗಿದ್ದಾರೆ.

ವಿವಿಧ ವರ್ತಮಾನಗಳು

ಶ್ರೀಮನ್ಮಹಿಸೂರ ಮಹಾರಾಜರು ಕೈಲಾಸ ಪರ್ವತ ಮತ್ತು ಮಾನಸ ಸರೋವರದ ದರ್ಶನಕ್ಕಾಗಿ ಹೋಗುವರು. ಟಿಬೇಟಕ್ಕೆ ಹೋಗರೆಂದು ದರಬಾರದಿಂದ ಪ್ರಸಿದ್ಧ ಮಾಡಲ್ಪಟ್ಟಿದೆ.

ಮಹಾರಾಷ್ಟ್ರ ದೇಶದಲ್ಲಿ ಪ್ರಸಿದ್ಧ ಲೇಖಕರಾಗಿದ್ದ ಶ್ರೀ. ಅಚ್ಯುತ ಬಳವಂತ ಕೋಲ್ಹಟಕರರು ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ದಕ್ಷಿಣ ಆಫ್ರಿಕೆಯಲ್ಲಿ ಮೂಲನಿವಾಸಿಗಳ ತಂಟೆಗಳಿಗೆ ಹೊಸದಾಡಿದರು. ಒಂದು ಬಿಳಿಯರು ಮತ್ತೊಂದು ಬಾರದ ಮುಖಂಡನನ್ನು ಹಿಡಿದ

...ಕೊಡುವರೆಂದು ವ. ಶಾಸ್ತ್ರ ಸೇಕ್ರೆಟರಿ . ದೇಸಾಯಿಯವರು ವ್ಯಾಂಚೆಸ್ಟರ ಗಾರ್ಡಿಯ ಪತ್ರದ ಪ್ರತಿನಿಧಿಗೆ ತಿಳಿಸಿದ್ದಾರೆ.

ನೋಟೀಸು

...(೦)....

ಹಜರತಸಾಹೇಬ ಶಿಕಸ್ತ್ರಿರ ಮಾರ್ಕೆಟ ಕಿ ಣಿ ದುಕಾನ ಶಹರ ಹುಬ್ಬಳ್ಳಿ ಇವನಿಗೆ—

ಮುಕ್ತುಂಬಿ ಕೋಂ ಹಜ ತಸಾಹೇಬ ಶಿ ...ರ ಸಾಕೀನ ನೂಲವಿ ಹಾಲಿವಸ್ತಿ ಕುಂದಗೋಳ ಇವಳು ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಉಶಕಿಯ ಗಂಡನಾಗಬೇಕು ... ನು ನನ್ನನ್ನು ಬಿಟ್ಟು ನಾಲ್ಕು ವರ್ಷವಾಯಿತು ... ನು ನನ್ನನ್ನು ಗೋವೆಗೆ ಕರಕೊಂಡು ಹೋಗಿದ್ದಿ ... ಹೊಡದು ಬಡದು ಮಾಡಿ ದಂಗೀನೆ ಕಸ ... ಕೊಂಡು ಅಲ್ಲಿಂದಲೇ ಹೊರಗೆ ಹಾಕಿದಿ ಅಲ್ಲಿಂದ ... ನು ತಾಯಿಕಡೆಯ ಮನೆಗೆ ಬಂದೆನು ಅವ ... ಬಡವರಿದ್ದದರಿಂದ ನಾನು ಕುಂದಗೋಳಕ್ಕೆ ... ಬಂದೆನು ಅಲ್ಲಿಯೂ ಕೂಲಿ ಕುಂಬಳಿಯು ಹುಟ್ಟ ... ದಿಂದ ನಿನ್ನ ಹೆಸರಿನಿಂದ ಸಾವುಕಾರರಲ್ಲಿ ಸಾಲಾ ... ಮಾಡಿ ಹೊಟ್ಟೀ ತುಂಬಿಕೊಂಡೆನು ಈಗ ಸಾಲ ... ರವು ತಗಾದಿಯಾಗಿದೆ ಕಾರಣ ನಿನಗೆ ಈ ... ನೋಟೀಸು ಕೊಡುವ ಭಾಗ ಬಿತ್ತು ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನ ... ದ ಸಾಲ ತಸ್ಕೂರು ರೂಪಾಯಿ ತೀರಿಸಿ ಜ ... ರೀತಿಯಿಂದ ಬಾಳವೆ ಮಾಡತ್ತೀನೆಂದು ಪು ... ರ ಜಾಮೀನು ಕೊಟ್ಟು ನನ್ನನ್ನು ಕರಕೊಂಡು ಹೋಗಬೇಕು ಬರ ಇದಕ್ಕೆ ತಪ್ಪಿದರೆ ನಾನು ಮುಂದೆ ನನ್ನ ಪ್ರಪಂಚ ಸಾಗುವದಕ್ಕಾಗಿ ಎರಡನೆ ... ಮವನನ್ನು ಉಡಿಕೆ ಮಾಡಿಕೊಳ್ಳುವೆನು ಅನಂತರ ... ನ್ನ ಹಕ್ಕು ನನ್ನ ಮೇಲೆ ಮತ್ತು ನನ್ನ ಉಡಿಕೆಯ ಗಂಡನ ಮೇಲೆ ಬಿಲಕೂಲ ನಡೆಯಲಾರದು ಇ ... ದೇ ನೋಟೀಸು ಸೋಡಪತ್ರವೆಂದು ತಿಳಿಯಬೇಕು ಮತ್ತು ನಿನ್ನ ಹೆಸರಿನಿಂದಾದ ಸಾಲದ ಹಣದ ಬಾ ... ಬಕು ೨೫೦ ರೂಪಾಯಿಕ್ಕೆ ನಿನ್ನ ಮೇಲೆ ಕಾಯ ... ದಾ ಇಲಾಜ ಮಾಡಿ ಕೋರ್ಟಿನ ಖರ್ಚಸಹಿತ ವಸೂಲ ಮಾಡುವೆನು ಈ ನೋಟೀಸಿನ ಖರ್ಚ ... ತಲೆಯಮೇಲುಂಟು ತಿಳಿಯುವದು.

...ಯು ೧೭ ಜುಲೈ ೧೯೩೧ ಸಹಿ ಇತ್ತಿ

... ಈ ಎಡಗೈ ಹೆಬ್ಬೆಟ್ಟಿನ ಗುರ್ತ ಮಕ್ತುಂ ... ಕೋಂ ಹಜರತಸಾಹೇಬ ಶಿಕಸ್ತ್ರಿರ ಹಾಲಿವ ...

[illegible]

The Asian Life Assurnance Co. Ltd Bombay. Branch office Hubli.

ಆಸುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು
ಸೌಖ್ಯದಿಂದರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೭೭೦ ರೂ. ಗಳನು ಕೊಡುವಂಥ **ಗೋಲ್ಡನ್** (ಸುವರ್ಣ) **ಪಾಲಿಸಿ**ಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಎಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೧; ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗ ಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೫೫,೦೦೦,೮೦ ಕಂತದ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರಿಗಿ ಕೊಟ್ಟದ್ದು ೧೦,೦೦,೦೦೦

ಬಂದಿಗಿ ೫೫,೦೮,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕೆ. ಹ್ವಿ. ಹುಲಸೋಗಿ, ಬಿ. ಎ. ಕುಲಕರ್ಣಿ. ಧಾರವಾಡದ ಏಜಂಟರು ಕರ್ನಾಟಕದ ಬ್ರಾಂಚ ಮ್ಯಾನೇಜರ

ಬಿ. ಎಚ್. ಪಾಟೀಲ ಹುಬ್ಬಳ್ಳಿಯ ಏಜಂಟರು—

ಹಾವೇರಿಯ ಚೀಫ ಏಜಂಟರು. ಶ್ರೀ. ಎಸ್. ಎಮ್. ದೊಡ್ಡಮಾಡ ಮತು

ಶ್ರೀ. ಬಿ. ಟಿ ಶಿರೋಳಕರ.

ಬೇಕು!

—(೦)—

ಕನ್ನಡ ಭಾಷೆಯ ಪ್ರಸಾರಕ್ಕಾಗಿ ೧೮ ವ ರುಷದ ಮೇಲ್ಪಟ್ಟ ೩೦ ವರ್ಷದೊಳಗಿನ ವಯಸ್ಸಿನ ತರುಣರು ಬೇಕಾಗಿದ್ದಾರೆ. ಕನ್ನಡವನ್ನು ಚನ್ನಾಗಿ ಬಲ್ಲವರೂ ಅಲ್ಪಸ್ವಲ್ಪ ಇಂಗ್ಲೀಷಿನ ಪರಿಚಯುಳ್ಳವರೂ ಬೇಕು. ಪರೀಕ್ಷೆಯ ನಿರ್ಬಂಧ ವಿಲ್ಲ. ಯೋಗ್ಯತೆಯ ಪ್ರಕಾರ ೩೦ ರಿಂದ ೩೦೦ ವರೆಗೆ ಸಂಬಳವನ್ನು ಕೊಡಲಾಗುವದು. ಇಚ್ಛಿಸು ವವರು ತಮ್ಮ ಜಾತಿ, ಶಿಕ್ಷಣ, ವಯಸ್ಸು, ಲಗ್ನ, ಮೊದಲಾದವುಗಳನ್ನು ತಿಳಿಸಿ ಅರ್ಜಿಮಾಡಿಕೊಳ್ಳ ಬೇಕು. ಉತ್ತರವನ್ನಪೇಕ್ಷಿಸುವವರು ಒಂದಾಣೆ ಅಂಚೆ ತಿಕೀಟು ಕಳಿಸತಕ್ಕದ್ದು.

ವಿಳಾಸ— ಕಾರ್ಯದರ್ಶಿ

[illegible]

ಶಿರೇ! ಪತ್ತಲ!! ಲಕಿಗ!!!

ಶ್ರೀ ದತ್ತವೀವಿಂಗ ಮಿಲ್ ಹುಬ್ಬಳ್ಳಿ.

ಕರ್ನಾಟಕದಲ್ಲಿ ಇದೇ ಮೊದಲನೆಯ
ಶೀರೆಯ ಮಿಲ್ಲು.

ಇದೇಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಶೀರೆಗಳು ಹಾಗೂ ಪತಲಗಳು ತಯಾರಾಗುತ್ತವೆ. ಮತ್ತು ಯೋಗ್ಯದರದಿಂದ ಸಿಗುತ್ತವೆ. ಚಪಕತಿ ಮಾಡಿ, ನಿಮಗೆ ಬೇಕಾದ ಮಾಲು ಕೊಂಡು ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ, ಬಣ್ಣ ಹೋದರೆ - ಮಾಲು ತಿರಿಗಿ ತಕ್ಕೊಳ್ಳುವೆವು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿ...

R. N. B. 1443.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೩ ಧಾರವಾಡ ಶುಕ್ರವಾರ ತಾರೀಖು ೧೯ ನೇ ಜೂನ ೧೯೩೧ (ಸಂಚಿಕೆ ೧೩

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ವಾದಿ ಶ್ರೀ ಶಿವಾನಂದ [illegible], ಶ್ರೀ ಆರೂಢಸ್ವಾಮಿಗಳ ಫೋಟೋಗಳು ಮತ್ತು ಮುನಸಫರಾದ ಶ್ರೀ [illegible] ಇವರ ತೀರ್ಪು ಕೊಡಲ್ಪಟ್ಟಿದೆ. ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಭಕ್ತರ [illegible] ಅಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅವಸರವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಈ ಪ್ರತಿಗಳು ಬೇಗ [illegible]. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ [illegible]ಗೆ ಒಂದು ಪ್ರತಿ [illegible] ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. [illegible] ಒಂದೆರಡು ಪ್ರತಿಗಳನ್ನು ಬೇಕಾದವರು ಪ್ರತಿಯೊಂದಕ್ಕೆ [illegible] ಪೋಸ್ಟ ಸ್ಟ್ಯಾಂಪುಗಳನ್ನು [illegible] ಬೇಕು. [illegible] ಪ್ರತಿ ಬೇಕಾದವರು ಮುಂಗಡ [illegible] ಮಾಡಬೇಕು. ವ್ಹಿ. ಪಿ. ಯಿಂದ [illegible] ೧/೪ ಹಣವನ್ನು ಮುಂಗಡ [illegible] ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ

ನೋಟೀಸಿನ ದರಗಳು

೩೦೭ ಲ [illegible] ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದೂ ವರೆ ಆಣೆ ಇಂಗ್ಲಿಷ ಪಂಕ್ತಿಯೊಂದು ಪಂಕ್ತಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನ [illegible] ಕನ್ನಡದಲ್ಲಿ ಹಾಕುವದಿದ್ದರೆ ಅದು [illegible] ಕಾಲಮಿನ ಪಂಕ್ತಿಗೆ ಇಮ್ಮಡಿ [illegible] ಜಾಹಿರಾತುಗಳನ್ನು ಕೊಡುವವರು [illegible] ಪತ್ರಿಕೆ ಪತ್ರವ್ಯವಹಾರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಿಗೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ	೨—೦—೦
ಕೃಷ್ಣ ಪಾರಿಜಾತ ಅತ್ತರು ತೊಲೆ ೧ಕ್ಕೆ	೪—೦—೬

೧೯-೧೧-೩೧ ಮೈಸೂರ ಸ್ಟೋರ್ಸ್, ಬೆಳಗಾವಿಯವರಲ್ಲಿ

ಧಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಿಗೆಯು ಎಂಟು ಲಕ್ಷದ ಮೇಲುಂಟು. ಪತ್ರ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ವು ಮಾಡಲ್ಪಡುವದು. ಕಾಯಮು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಟಿ. ಅಣ್ಣಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ಪಿಕ್ತ ಪತ್ರಿಕೆ

೧೨ ತಿಂಗಳಿಗೆ	ರೂ. ೧೨/೮-೦
೬ „	೭-೦-೦
೩ „	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಕೊಳ್ಳಿರಿ.

ಮ್ಯಾ ವಿಜಯ ಧಾರವಾಡ.

ವಿಜಯ.

ತಾರೀಖು ೧೯-೬-೧೯೩೧ನೇ ಇಸ್ವಿ

ಬೋವರ ಯುದ್ಧ.

ಬೆಂಕಿಯ ಬಾಯಿಯಲ್ಲಿ ಬಿದ್ದು, ಸರಕಾರಕ್ಕೆ ಸಹಾಯ ಮಾಡಿದ ಮಹಾತ್ಮರು.

ಮಾನವರ ಹಿತಬಯಸುವ ಮಿ. ಅಂಡ್ರ್ಯೂಜ ಸಾಹೇಬರು ಪ್ರಸ್ತುತದಲ್ಲಿ ಇಂಗ್ಲಂಡದಲ್ಲಿದ್ದು, ರೌಂಡ ಟೇಬಲಿಗಾಗಿ ಬರುವ ಮಹಾತ್ಮರಿಗೆ ಸಹಾಯ ಮಾಡಲು- ಪೂರ್ವೋಪಾಯಗಳನ್ನೂ, ಸಿದ್ಧತೆಗಳನ್ನೂ ಮಾಡುತ್ತಲಿದ್ದಾರೆ. ಅಲ್ಲಿ ಮಹಾತ್ಮರ ವಿಷಯವಾಗಿ ಇವರಿಗೊಂದು ಉಪನ್ಯಾಸ ಮಾಡುವ ಸಮಯ ಬಂತು. ಮಹಾತ್ಮರು ಬೋವರ ಯುದ್ಧದಲ್ಲಿ ರಣರಂಗದಲ್ಲಿ ಘಾಯ ಹೊಂದಿದವರನ್ನು ಗುಂಡಿನ ಮಳೆಯನ್ನು ಲೆಕ್ಕಿಸದೆ, ಸ್ಟ್ರೆಚರವೆಂಬ ತೊಟ್ಟಿಲಿನ ಮೇಲೆ ಮಲಗಿಸಿಕೊಂಡು, ಸುರಕ್ಷಿತ ಸ್ಥಳಕ್ಕೆ ಮುಟ್ಟಿಸುವ ಭಾರ ಹೊತ್ತಿದ್ದರು ಸರ್ವ ಸೇನಾಧಿಪತಿಯಾದ ಲಾರ್ಡ ರಾಬರ್ಟ್ಸ್‌ಸಾಹೇಬರ ಒಬ್ಬನೇ ಮಗನು ಕೊಲೆನ್ಸೋದ ಕಾಳಗದಲ್ಲಿ ಮಡಿದನು. ಆ ಕಾಲದಲ್ಲಿ ಅವರು ಬೆಂಕಿಯ ಬಾಯಿಯಲ್ಲಿದ್ದರೆಂದು ಸಾಹೇಬರು ಹೇಳಿದರು. ಈ ಸಂಗತಿಯು ಪೂರಾ ಸುಳ್ಳಿರುತ್ತದೆಂದು ಕೊಲೆನ್ಸೋದ ಯುದ್ಧದಲ್ಲಿದ್ದ ಜನರಲ ಗಾಲವೆಸಾಹೇಬರು ಅಂದು ಮಹಾತ್ಮರಿಗಾಗಲಿ, ಅವರ ಅನುಯಾಯಿಗಳಿಗಾಗಲಿ, ನಾವು ಯಾವಾಗಲು ತೋಫಿನ ಬಾಯಿಗೆ ಬೀಳುವಂಥ ಕೆಲಸ ಹೇಳಲಿಲ್ಲೆಂದು ಉತ್ತರ ಕೊಟ್ಟು, ಮಿ. ಅಂಡ್ರ್ಯೂಜಸಾಹೇಬರನ್ನು ಸುಳ್ಳುಗಾರರಾಗಿ ಮಾಡಿದರು.

ಇವರಿಬ್ಬರಲ್ಲಿ ಯಾರ ಹೇಳಿಕೆಯು ನಿಜವೆಂದು ತಿಳಿಕೊಳ್ಳಲು ವರ್ತಮಾನಪತ್ರಗಳ ಸುದ್ದಿಗಾರರು ಬೋರಸಾದಿಗೆ ಹೋಗಿ ಮಹಾತ್ಮರನ್ನು ಕೇಳಿದರು. ಮಹಾತ್ಮರು ಹೇಳಿದ್ದೇನಂದರೆ-

ಕೊಲೆನ್ಸೋದ ಕಾಳಗದಲ್ಲಿ ಲಾರ್ಡ ರಾಬರ್ಟ್ಸರ ಮಗನು ಕೊಲ್ಲಲ್ಪಟ್ಟ ಕೂಡಲೆ ಹೊತ್ತಿನ ನಂತರ ಹಿಂದೀ ಪಾಡಾಳರ ೧೧೦೦ ಜನರು ಶಿವಿರ ಎಂಬಲ್ಲಿಗೆ ಹೋದರು. ಗಾಲವೆಸಾಹೇಬರು ನನಗೆ ಆ ವ್ಯಾಕನ ಪ್ರೇತವನ್ನು ಕೊಡಲೆ ರಣಮಂಡಲದಿಂದ ತರಬೇಕೆಂದು ಹೇಳಿದರು. ಅದೇ ನಾವು ನಮ್ಮ ಡೇರೆಗಳನ್ನು ಹೊಡೆಯುವ ಕೆಲಸ ಮುಗಿಯುತ್ತಾ ಬಂದಿತ್ತು. ನಾನು ಎಂಟು ಜನರನ್ನು ಕಳಿಸಿದೆನು ಅವರು ಕೂಲಿಗಳಲ್ಲ. ಕಲಿತಂಥ ಸುಶಿಕ್ಷಿತರು. ಅವರು ಪ್ರೇತ ತಂದರು. ಈ ಬಗ್ಗೆ ಗಾಲವೆಸಾಹೇಬರು ನಮ್ಮ ಆಭಾರಮನ್ನಿಸಿದರು. ಮರುದಿವಸ ಡಾಕ್ಟರ ಬೂಥಸಾಹೇಬರು ನಮ್ಮನ್ನು ಕರಿಸಿ, ನಮ್ಮ ಉಪಕಾರ ಸ್ಮರಿಸಿದರು.

ಆಗ ಗುಂಡು ಹಾರುತ್ತಿದ್ದಿಲ್ಲೆಂಬದು ನಿಜ. ಉಭಯ ಪಕ್ಷದವರು ತಂತಮ್ಮ ಸತ್ತಂಥ ಮತ್ತು ಘಾಯಹೊಂದಿದವರಂಥವರನ್ನು ಹುಡುಕಿ ತಕ್ಕೊಂಡು ಹೋಗಬೇಕೆಂದು ಯುದ್ಧ ತಹಕೂಬಾಗಿತ್ತು. ಸುರಿಯುವ ಬೆಂಕಿಯಲ್ಲಿ ಕೆಲಸ ಮಾಡಲಿಕ್ಕೆ ಸಿದ್ಧರಿದ್ದೇವೆಂದು ನಾವು ಅನ್ನುತ್ತಿದ್ದರೂ, ನಮಗೆ ಅಲ್ಲಿಗೆ ಹೋಗಗೊಡುತ್ತಿದ್ದಿಲ್ಲ. ಸ್ಪಿಯಾನ-ಕಾಪ ಎಂಬಲ್ಲಿ ಜನರಲ ಬುಲರಸಾಹೇಬರು ರಣಮಂಡಲದಿಂದ ಹಿಂದಕ್ಕೆ ಸರಿಯಬೇಕಾಯಿತು. (ಅಪಜಯವಾಯಿತು.) ಆಗ ಸ್ವತಃ ಜನರಲ ಬುಲರರು ನನ್ನ ರಾಹುಟಿಗೆ ಬಂದು, ಘಾಯವಾದಂಥ ೭೦ ಜನರನ್ನು ತರಬೇಕೆಂದು ವಿನಂತಿ ಮಾಡಿಕೊಂಡರು ನಾವು ಆ ಕೆಲಸವನ್ನು ಗುಂಡಿನ ಮಳೆಸುರಿಯುಗ್ಗೇ ಸಂತೋಷದಿಂದ ಮಾಡಿದೆವು ಘಾಯವಾದವರಲ್ಲಿ ದೊಡ್ಡ ದೊಡ್ಡ ಜನರಲರಿದ್ದರು ಅವರನ್ನು ತೊಟ್ಟಿಲ ಮೇಲೆ ಹಾಕಿಕೊಂಡು ೨೫ ಮೈಲು ದೂರ ಹೊತ್ತುಕೊಂಡು ಹೋದೆವು ದಾರಿಯಲ್ಲಿ ಇವರಿಗೆ ಅಲ್ಲಲ್ಲಿ ಔಷಧ ಪಥ್ಯವನ್ನೂ ಕೊಡಿಸಬೇಕಾಗುತ್ತಿತ್ತು. ಸ್ಪಿಯಾನಕಾಪದ ನಂತರ ಹ್ವಾಲಕ್ರಾಂಜವೆಂಬಲ್ಲಿಯೂ ನಮಗೆ ವೈರಿಯ ಗುಂಡುಗಳು ಬರುತ್ತಿರುವಂಥ ರಣಕ್ಷೇತ್ರದಲ್ಲಿ ಕೆಲಸ ಮಾಡಬೇಕಾಯಿತು ಈ ಬಗ್ಗೆ ಜನರಲ ಬುಲರಸಾಹೇಬರು ಸರಕಾರಕ್ಕೆ ಮಾಡಿದ ರಿಪೋರ್ಟನಲ್ಲಿ ನಮ್ಮ ಪ್ರಶಂಸೆ ಮಾಡಿದ್ದಾರೆ.

—

ಬೋವರ ಯುದ್ಧದಲ್ಲಿ ಇಂಗ್ಲಿಷರಿಗೆ ಜಯ ಸಿಗಲಿಲ್ಲ.

—(೦)—

ಇಂಗ್ಲಿಷರು ಜರ್ಮನರನ್ನು ಗೆದ್ದಂತೆ ಬೋವರರನ್ನು ಗೆದ್ದಿಲ್ಲ. ಟ್ರಾನ್ಸವಾಲದಲ್ಲಿ ಡಿವೆಟರೆಂಬ ಸಾಹೇಬನನ್ನು ಮಣಿಸುವದಾಗಲಿಲ್ಲ. ಅಲ್ಲಿ ಪ್ರಸಿದ್ಧ ಬೋಥಾ ಮತ್ತು ಜನರಲ ಬೋಥಾಸಾಹೇಬರನ್ನು ಮಣಿಸುವದಾಗಲಿಲ್ಲ. ಅದ್ದರಿಂದ ಟ್ರಾನ್ಸವಾಲಕ್ಕೆ ಸ್ವರಾಜ್ಯ ಕೊಟ್ಟಂತೆ, ಬೋವರರಿಗೂ ಸ್ವರಾಜ್ಯ ಕೊಟ್ಟರು ಆ ಸ್ವರಾಜ್ಯದಲ್ಲಿ ಹಿಂದೂ ಜನರಿಗೆ ಇರುವದೊಂದು ರಾಜಕೀಯ ಸ್ವಾತಂತ್ರ್ಯವಿರದೇಕೆಂಬ ಕಾರಣ ಕಾರಣವಿಲ್ಲ.

—

ಜರ್ಮನಿಯ ಯುದ್ಧದಂತೆ ಬೋವರ ಯುದ್ಧವಲ್ಲ

(೦)

ಕೆಂಪುಮೋರೆಯವರ ಕೂಡ ಕೆಂಪುಮೋರೆಯವರೇ ಯುದ್ಧ ಮಾಡಿದರು

—(೦)—

ಜರ್ಮನ ಯುದ್ಧದಲ್ಲಿ ಕೆಂಪುಮೋರೆಯವರ ಕೂಡ ಕೆಂಪುಮೋರೆಯವರೇ ಯುದ್ಧ ಮಾಡಲಿಲ್ಲ, ಜರ್ಮನಿಯ ಕಡೆಗೆ ತುರ್ಕಸ್ತಾನವಿತ್ತು. ಫ್ರೆಂಚರು ನಿಗ್ರೋ ಹಬಸಿ, ಮೊದಲಾದವರನ್ನು ತಂದರು. ಇಂಗ್ಲಿಷರು ತಮ್ಮ ಸಾಮ್ರಾಜ್ಯದ ಬೇರೆ ಬೇರೆ ಖಂಡಗಳಲ್ಲಿದ್ದ ಎಲ್ಲಾ ಜಾತಿಯ ಮತ್ತು ದೇಶದ ಜನರನ್ನು ತಂದರು. ಈ ಮೇರೆಗೆ ಬೋವರ ಯುದ್ಧದಲ್ಲಿರಲಿಲ್ಲ ಸಾಹೇಬರು ಸಾಹೇಬರ ಕೂಡ ಯುದ್ಧ ಮಾಡಬೇಕೆಂದು ಗೊತ್ತಾಯಿತು. ಮಹಾತ್ಮರು ಆ ಕಾಲದಲ್ಲಿ ಆ ದೇಶದಲ್ಲಿದ್ದರು. ಪ್ರತಿಯೊಂದು ರೀತಿಯಿಂದ ಇಂಗ್ಲಿಷ ಸರಕಾರಕ್ಕೆ ಸಹಾಯ ಮತ್ತು ಉಪಕಾರ ಮಾಡಲಿಕ್ಕೆ ಸಿದ್ಧರಾದರು ಆದರೆ ಪ್ರತ್ಯಕ್ಷ ಯುದ್ಧದಲ್ಲಿ ಇವರನ್ನು ಸೇರಿಸಿಕೊಳ್ಳದೆ, ಮೇಲೆ ಬರೆದ ಪ್ರಕಾರ ಘಾಯ ಹೊಂದಿದವರನ್ನು ತೊಟ್ಟಿಲ ಮೇಲೆ ಹೊತ್ತುಕೊಂಡು ಹೋಗುವಂಥ, ಮತ್ತು ಇದೇ ಮಾದರಿಯ ಪರೋಪಕಾರವೆನಿಸುವಂಥ ಕೆಲಸಗಳನ್ನು ಇವರಿಗೆ ಒಪ್ಪಿಸಿದ್ದರು. ಆ ಕೆಲಸವನ್ನು ಯುದ್ಧ ಮುಗಿಯುವ ತನಕ ಹೊಗಳುವಂಥ ರೀತಿಯಿಂದ ಮಾಡಿದರು. ಅದಕ್ಕೆ ಪ್ರತ್ಯುಪಕಾರವೆಂದು ಯಾವ ಫಲವೂ ಬ್ರಿಟಿಶರಿಂದ ದೊರೆಯಲಿಲ್ಲ. ಅಲ್ಲಿ ವಾಸವಾಗಿರುವ ಹಿಂದೂ ಜನರು ಇನ್ನೂ ಅಸ್ಪೃಶ್ಯಂತೆಯೇ ವಾಸವಾಗಿದ್ದಾರೆ.

—

ಬೋವರರು ಶಿವಾಜಿ ಮಹಾರಾಜನಂತೆ ಯುದ್ಧ ಮಾಡಿದರು.

— (೦)—

ಔರಂಗಜೇಬನು ಶ್ರೀ ಶಿವಾಜಿಮಹಾರಾಜನಿಗೆ ಗುಡ್ಡದೊಳಗಿನ ಇಲೀ ಎಂದು ತುಚ್ಛ ಮಾಡಿದನು ಇಂಗ್ಲಿಷ ಜನರೂ ಬೋವರರನ್ನು ಹಾಗೇ ಎಣಿಸಿದರು. ಇವರು ತಮ್ಮನ್ನು ದಂಡಿಸಲಿಕ್ಕೆ ಒಂದಿಷ್ಟು ಜನರಲ ಹ್ವಾಯಿಟಸಾಹೇಬನನ್ನು ಲೇಡಿಸ್ಮಿಥದ ಕೋಟೆಯಲ್ಲಿ ಹೂಗಿ, ಅದಕ್ಕೆ ಮುತ್ತಿಗೆ ಹಾಕಿದರು. ಇವರ ನಂತರ ಬಂದ ಜನರಲ ಬುಲರಸಾಹೇ

ಒಸಿಗೆ ಅಪಜಯದ ಮೇಲೆ ಅಪಜಯಗಳು ಬಂದವು. ಆಗ ಲಾರ್ಡ ರಾಬರ್ಟ್ಸ್ ಮತ್ತು ಲಾರ್ಡ ಕಿಚನರರು ಅಲ್ಲಿಗೆ ಹೋಗಿ ಯುದ್ಧವ್ಯೂಹವನ್ನು ರಚಿಸಲು - ಬೋವರು ಶಿವಾಜಿಯಂತೆ ಮರೆಮೋಸದ ಯುದ್ಧ ಪ್ರಾರಂಭಿಸಿದರು. ಇಂಗ್ಲಿಷ ದಂಡು ಊಗಿ ಒಂಟಿಯಲ್ಲಿ ಕೂತು ಹೋಗುವದನ್ನು ಕಂಡ ಕೂಡಲೆ- ಒಂದೆ ಕಡೆಯಿ, ದಂಡಿನ ಅಶನವಸನ, ಶಕ್ತಿ ಒಂದನ್ನ ಎಲ್ಲಾ ಕಸಕೊಂಡು ಬಿಟ್ಟು ಬಿಡುವರು. ಇಂಥ ಕೌತುಕ ಪಡುವಂಥ ಹಲವು ಸಾಹಸದ ಕೃತ್ಯ ಮಾಡಿದರು. ಪೂರಾ ಇವರನ್ನು ಗೆದೆಯುವ ಆಶೆ ತೋರ್ದದ್ದರಿಂದ ಇಂಗ್ಲಿಷರೂ ಅವರಿಗೆ ವಸಾಹಾತಿಕ ಸ್ವರಾಜ್ಯಕೊಟ್ಟು ರಾಜಿಯಾದರು.

— —

ಬ್ರಹ್ಮದೇಶದ ಬಂಡಾಯ

--(೦)—

ಸರಕಾರಕ್ಕೆ

ಪ್ರಜಾಪಕ್ಷೀಯರ ಖಂಡತುಂಡಿನ ಹೇಳಿಕೆ

....(೦)....

ಬ್ರಹ್ಮದೇಶದ ಬಂಡಾಯವು ಸಣ್ಣ ಪ್ರಮಾಣದಿಂದ ದಿನಾಲು ಬೆಳೆಯುತ್ತಲಿದೆ. ಬಂಡಿನ ಸೊಗಡು ದೇಶದ ತುಂಬ ಹಬ್ಬಿರುತ್ತದೆ. ರಂಗೂನದ ಒಂದು ದೇವಾಲಯದಲ್ಲಿ ಕೂಡ ನಾಲ್ಕು ನೂರು ಕಾಡಕೂಸು ಹೊರಟವು ಬಂಡಿನವರ ವಕ್ರದೃಷ್ಟಿಯು ಯುರೋಪಿಯನ್ನರ ಮೇಲಿಲ್ಲ. ಹಿಂದೂ, ಚೀನ ಮೊದಲಾದವರ ಮೇಲುಂಟು. ಪಾರ್ಲಮೆಂಟ ಸಭೆಯಲ್ಲಿ ಪ್ರಶ್ನೆ ಕೇಳಿದಾಗ, ಯುರೋಪಿಯನ್ನರು ಸುರಕ್ಷಿತರಾಗಿದ್ದಾರೆಂದೂ, ಹಿಂದೂ ಜನರ ಪಟ್ಟಿಗೆ ಪರಿಸ್ಥಿತಿಯು ಅಸಮಾಧಾನದ್ದಾಗಿದೆಂದೂ, ಮಿ ಬೆನ್ನವೆಜಉಡ್ಡ ಸಾಹೇಬರು ಉತ್ತರ ಕೊಟ್ಟಿದ್ದಾರೆ. ದಿನಾಲು ಕೊಲೆ, ದರೋಡೆ. ಅಗ್ನಿಪ್ರಳಯ ಮುಂತಾದ ಕೃತ್ಯಗಳು ನಡೆದಿದ್ದು, ಜರ್ಮನಿಯನ್ನು ಸೋಲಿಸಿದಂಥ ಸರಕಾರಕ್ಕೆ ಈ ಪುಟ್ಟ ಬಂಡಾಯವನ್ನು ಏಕೆ ಮುರಿಯುವದಾಗುವದಿಲ್ಲೆಂಬ ಪ್ರಶ್ನೆವು ಸಹಜವಾಗಿ ಹೊರಡುತ್ತದೆ.

ಸರಕಾರದವರು ಬಂಡಾಯವನ್ನು ಬೇಗನೆ ಮುರಿಯದಿದ್ದರೆ - ತಾವು ಸರಕಾರದ ಕೂಡ ಅಸಹಕಾರ ಮಾಡತಕ್ಕವರೆಂದು ಬ್ರಿಟಿಷ ಜನರು ಜಾಹೀರ ಮಾಡಿದ್ದನ್ನು ಈ ಮೊದಲು ಬರೆದಿದ್ದೇವೆ ಆ ಪ್ರಕಾರ ಖಂಡತುಂಡಿನ ಪತ್ರವನ್ನು ಪ್ರಜಾಪಕ್ಷೀಯರು ಈಗ ಅಲ್ಲಿಯ ಗವ್ಹರ್ನರ ಸಾಹೇಬರಿಗೆ ಬರೆದಿದ್ದಾರೆ ಅವರು ತಮ್ಮ ಪತ್ರದಲ್ಲಿ ಅಂದದ್ದೇನಂದರೆ -

ಸಾಂಪತ್ತಿಕ ಪರಿಸ್ಥಿತಿ ಮತ್ತು ನಿಮ್ಮ ಪೋಲೀಸರ ಕಡೆ ದೆಸೆಯಿಂದ ಅನವಶ್ಯಕವಾಗಿ ಯಾಗುವ ಅರ್ಥಹಾನಿ ಮತ್ತು ಪ್ರಾಣಹಾನಿಯ ದೆಸೆಯಿಂದ ನಮಗೆ ಅತ್ಯಂತವಾಗಿ ದುಃಖವಾಗುತ್ತದೆ. ಈ ಪರ್ಯಂತರ ಬಂಡಿನ ವಿಷಯವಾಗಿ ಸರಕಾರಕ್ಕೆ ಸೂಚಿಸಲ್ಪಟ್ಟಂಥ ಸಂಗತಿಗಳ ವಿಚಾರ ಮಾಡಲು ಸರಕಾರವು ತೀವ್ರವೇ ಒಂದು ಕಮಿಟಿ ನೇಮಿಸಬೇಕು. ಸರಕಾರದವರು ಈ ಪ್ರಕಾರ ಕಮೀಟಿ ಕರೆಯಲಿಕ್ಕೆ ಒಡಂಬಡದಿದ್ದರೆ -ಸರಕಾರದ ಕೂಡ ಸಹಕಾರವೆಂಬದರ ಮಾತುಸಿಂತಿತೆಂದು ನಾವು ತಿಳಿಸುತ್ತೇವೆ ಈ ಕಮೀಟಿಯಲ್ಲದೆ, ಕೌನ್ಸಿಲ ಸಭೆಯನ್ನೂ ಕೂಡಿಸಬೇಕೆಂದು ನಾವು ಸೂಚಿಸುತ್ತೇವೆ

ಸಾಧಾರಣವಾಗಿ ಮ್ಯುನಿಸಿಪಾಲಿಟಿ, ಲೋಕಲಬೋರ್ಡಿನ ಸ್ಪೇಶಲ ಜನರಲ ಕಮೀಟಿ ಕರೆಯಲಿಕ್ಕೆ ಸಹ ರಿಕ್ವಿಜೇಶನದ ನಿಯಮವಿರುತ್ತದೆ. ಹಾಗೆ ಜೀವಹೋಗುವ ಮತ್ತು ದೇಶ ಹಾಳಾಗುವ ಸಮಯದಲ್ಲಿ ಸಹ ಕೌನ್ಸಿಲ ಮೆಂಬರರಿಗೆ ರಿಕ್ವಿಜೀಶನ ಕೊಟ್ಟು, ಸ್ಪೇಶಲ ಕೌನ್ಸಿಲ ಕರೆಯುವ ಅಧಿಕಾರವಿರಬಾರದೆಂಬದು ಸಖೇದಾಶ್ಚರ್ಯ. ಇದೆಂಥ ಮಾಂಟೆಗು ಚೆಮ್ಸಫೋರ್ಡ ಸುಧಾರಣೆ?

— —

ಸ್ವರಾಜ್ಯವಾಯಿತೆಂದರೆ- ಪತಿತರಿಗೆ ದೇವಾಲಯಗಳಲ್ಲಿ ಅನಿರ್ಬಂಧ ಪ್ರವೇಶ.

—(೦)—

ಅಸ್ಪೃಶ್ಯರ ಮುಂದಾಳುವಾದ ಶ್ರೀ. ರಾಮ ಭೋಜ ಮೊದಲಾದವರು ಪುಣೆಗೆ ಬಂದು ಹೋದ ಪಂಡಿತ ಜವಾಹರಲಾಲರನ್ನು ಪುಣೆಯಲ್ಲಿ ಕಾಣಲಿಕ್ಕೆ ಹೋಗಿದ್ದರು. ಸ್ವರಾಜ್ಯದಲ್ಲಿ ಯಾವತ್ತು ದೇವಾಲಯಗಳಲ್ಲಿ ಅಸ್ಪೃಶ್ಯರಿಗೆ ಅನಿರ್ಬಂಧ ಪ್ರವೇಶ ದೊರೆಯುವದು. ಯಾವ ದೇವಾಲಯವು ಇದಕ್ಕೆ ಅಡ್ಡ ಬರುವದೋ ಅದನ್ನು ಜಪ್ತ ಮಾಡಲಾಗುವದೆಂದು ಪಂಡಿತರು ಇವರಿಗೆ ನಂಬಿಗೆ ಹೇಳಿದ್ದಾರೆ. ಇನ್ನೂ ೪೦-೫೦ ವರ್ಷ ಶಕ್ಯವಾಗದ ಮಾತನ್ನು ಪಂಡಿತರು ಹೇಳಿದರು.

— —

ಕಾಬೂಲದಲ್ಲಿ ಭೂಕಂಪ

—(೦)—

೧೫ ಜನರು ಸತ್ತರು ೫೦ ಮನೆಗಳು ನಾಶವಾದವು

—(೦)—

ಕಾಬೂಲದ ಹತ್ತಿರಿರುವ ಪಂಛಾಶೇರವೆಂಬಲ್ಲಿ ಭೂಕಂಪವಾಗಿ ೧೫ ಜನರು ಸತ್ತರು. ೫೦ ಮನೆಗಳು ನೆಲಸಮವಾದವು ಎಷ್ಟೋ ಮನೆಗಳು ಹೊಯ್ದಾಡಿರುತ್ತವೆ.

———

ಪೋಲಿಸ ಸಬ್ ಇನ್ಸಪೇಕ್ಟರರಿಗೆ ಬರತರ್ಫ

—(೦)—

ವೆ.ದಕ್ರಿಸ ಇಲಾಖೆಗೆ ಸೇರಿದ ಪೆಡ್ಡಾಪುರದಲ್ಲಿರುವ ಇಂಗ್ಲಿಷ ಶಾಲೆಯಲ್ಲಿ ಶಿಕ್ಷಣ ವಿಷಯವಾಗಿ ಓರ್ವ ಎಮ್.ಪಿ.ಯು ವ್ಯಾಖ್ಯಾನ ನಡೆಯಿತು. ಸಬ್ ಇನ್ಸಪೇಕ್ಟರರಾದ ಕೃಷ್ಣಮೂರ್ತಿ ನಾಯಡುರವರು ಈ ಸಭೆಗೆ ಹೋಗಿ, ಲಾಠಿಯಿಂದ ಅನೇಕ ಹುಡುಗರನ್ನು ಹೊಡೆದು, ಸಭೆಯನ್ನು ಮುರಿದರು. ಇದರ ಅನುಕೂಲ ವಿಚಾರವಾಗಿ, ಸರಕಾರದವರು ಇವರನ್ನು ಬರತರ್ಫ ಮಾಡಿದರು.

— —

ವಿವಿಧ ವರ್ತಮಾನಗಳು

—)(- (೦) —)(—

ಕಾನಪೂರದಲ್ಲುಂಟಾಗಿರುವ ಹಿಂದೂ ಮುಸಲಮಾನ ಮನಸ್ತಾಪವನ್ನು ಶಾಂತ ಪಡಿಸಲು ಸರಕಾರದವರು ಮಹಾತ್ಮರ ಸಹಾಯವನ್ನು ಕೋರುವರು, ದಂಗೆಯ ಕಾಲಕ್ಕೆ ಇದ್ದ ಕಲೆಕ್ಟರರಿಗೆ ರಜೆ ತಕ್ಕೊಂಡು ವಿಲಾಯತಿಗೆ ಹೋಗಲು ಅಪ್ಪಣೆ ಕೊಟ್ಟರು.

— —

ಜಮಖಂಡಿಯ ಸಂಸ್ಥಾನದ ಕಾರಭಾರಿಗೂ ದಿವಾಣರೆಂದು ಕರೆಯುವದಕ್ಕೆ ಮುಂಬಯಿ ಸರಕಾರದವರು ಸಮ್ಮತಿ ಕೊಟ್ಟರು.

— —

ಎರಡು ಲಕ್ಷ ರೂಪಾಯಿ ವೆಚ್ಚ ಮಾಡಿ ಕಾಬೂಲದಲ್ಲಿ ವಿಲಾಯತಿಯ ಪದ್ಧತಿಯ ಒಂದು ಆಸ್ಪತ್ರೆ ಕಟ್ಟುವರು.

— —

ಬಿಜಾಂಗಬಾದಿನಲ್ಲಿ ಅದ್ಭುತ ಗಾಳಿ ಬೀಸಿತು. ಒಂದು ಗುಡಿಸಲು ಜನ ಸಹಿತ ಕಿತ್ತಿ ಆಕಾಶಕ್ಕೆ ಪಾರಿವಾಳದಂತೆ ಹಾರಿ ಹೋಯಿತು. ಚಮತ್ಕಾರವೆಂದರೆ ಅದರಲ್ಲಿದ್ದ ತೊಟ್ಟಿಲದಲ್ಲಿ ಕೂಸು ಮಲಗಿತ್ತು. ಕೂಸನ್ನು ಎತ್ತಿ ಕೊಂಡು ಹೊರಗೆ ಬಂದ ಕೂಡಲೆ ಗುಡಿಸಲವು ತೊಟ್ಟಿಲ ಸಹಿತ ಹಾರಿ ಹೋಯಿತು.

— —

ಪರದೇಶಿ ಅರಿವೆಗೆ ಬಹಿಷ್ಕಾರ ಹಾಕುವದರಲ್ಲಿ ತಮ್ಮ ದೇಶಕ್ಕೆ ದುಷ್ಟ ಹೇಳುವಲ್ಲೆಂಬದನ್ನು ಮಹಾತ್ಮರು ಇಂಗ್ಲಂಡಕ್ಕೆ ಬಂದದ್ದಾದರೆ, ಲ್ಯಾಂಕಶಾಯರಕ್ಕೆ ಬಂದು, ಅಲ್ಲಿಯವರ ಮನಸಂಬಿಗೆ

ಅಹಮ್ಮದನಗರದ ಜವಳಿಯವರ ಸ್ತುತ್ಯ ಠರಾವು.

—(೦)—

ಒಂದು ವರ್ಷ ಪರದೇಶೀ ಅರಿವೆ ತರಿಸರು.

—(೦)—

ಅಹಮ್ಮದನಗರದ ಜವಳೀ ವರ್ತಕರು ಈಗ ದೇಶೀ ಅರಿವೆ ತರಿಸುವದನ್ನು ಒಂದು ವರ್ಷದವರೆಗೆ ಪರದೇಶೀ ಅರಿವೆ ತರಿಸಲಿಕ್ಕಾಗದೆಂದು ಸ್ವಲ್ಪ ಜನ ಕಮಿಟಿ ಕರೆದು, ಠರಾವು ಪಾಸ ಮಾಡಿದರು.

ಪುಣೆಯ ಮ್ಯುನಿಸಿಪಾಲಿಟಿಯಲ್ಲಿ ಶ್ರೀ ಬಾಲಗಂಗಾಧರ ತಿಲಕ ಮತ್ತು ಶಿವರಾಮ ಮಹಾದೇವ ಪರಾಂಜಪೆಯವರ ಭಾವಚಿತ್ರಗಳನ್ನು ತೆರೆಯುವ ಸಮಾರಂಭವು ಪಂಡಿತ ಮದನ ಮೋಹನ ಮಾಲವೀಯರವರಿಂದ ನೆರವೇರಿಸಲ್ಪಟ್ಟಿತು.

——

ಬೆಳಗಾವಿ

ಮೊನ್ನಿನ ದಿವಸ ಈ ಊರಲ್ಲಿ ಶಾಲೆಯ ಬಳಿಗಿನ ಗುಡಿಯಲ್ಲಿ ಹೆಂಡ ಅರುತ್ತಿದ್ದಂಥ ಒಂದು ಕಂಪನಿಯನ್ನು ಪೋಲಿಸರು ಹಿಡಿದಿದ್ದಾರೆ.

ಹಾಯಕೋರ್ಟ ವಕೀಲರಾದ ಶ್ರೀ ... ಜಾಗಿರದಾರರು ಇಲ್ಲಿಯ ಕರ್ನಾಟಕ ಹಾಯಸ್ಕೂಲಿಗೆ ನೂರು, ಕರ್ನಾಟಕ ಇತಿಹಾಸ ಮಂಡಳಿಗೆ ೫೦ ಮತ್ತು ಜಯಕರ್ನಾಟಕಕ್ಕೆ ೩೫ ರೂಪಾಯಿಗಳ ಸಹಾಯ ಮಾಡಿದ್ದಾರೆ.

ಎಮ್. ಎ. ಪರೀಕ್ಷೆಯಲ್ಲಿ ಮೆಸರ್ಸ ಗೋಕಾಕ ಮತ್ತು ಸಾಸನೂರ ಇವರು ಫಸ್ಟಕ್ಲಾಸಿನಲ್ಲಿ ಪಾಸಾಗಿದ್ದಾರೆ.

ಮೃಗನಕ್ಷತ್ರವು ಪ್ರಾರಂಭವಾಯಿತು. ಆದಾಗ್ಯೂ ಮಳೆ ಬಾರದೆ ಬಿಸಿಲು ಕಾಯುತ್ತದೆಂದು ಪಂಚಾಂಗ ಶಾಸ್ತ್ರದಲ್ಲಿ ಹೇಳಿರುವಂತೆ ಮಧ್ಯಾಹ್ನ ಹವಾಮಾನವಾಗಿದೆ.

——

ಧಾರವಾಡದಲ್ಲಿ

ಪರದೇಶೀ ಬಟ್ಟೆ ತುಂಬಿದ

ಟ್ರ್ಯಾಗಾಡಿ

—(೦)—

ಈಗ ಮೂರುನಾಲ್ಕು ದಿನಗಳಿಂದ ಧಾರವಾಡ ಶಹರದ ಕೆಲವು ಅಂಗಡಿಗಳಲ್ಲಿ ಪರದೇಶೀ ಬಟ್ಟೆಗಳಿಂದ ತುಂಬಿದ ಒಂದು ಎತ್ತಿನ ಗಾಡಿಯು ಅರಿವೆ ಮಾರುತ್ತ ತಿರುಗಾಡುತ್ತಿರುವದೆಂದು ಕೇಳಿ ಬಂದಿದೆ. ಆದುದರಿಂದ ಆ ಗಾಡಿಯಲ್ಲಿಯ ಅರಿವೆ ... ಬಗ್ಗೆ ಬಹು ಜಾಗರೂಕತೆಯಿಂದ ... ವಿಚಾರಿಸಬೇಕು. ಯಾರೂ ... ಪರದೇಶೀ ಬಟ್ಟೆಯ ವ್ಯವಹಾರವನ್ನು ಮಾಡಬಾರದು. ಹಾಗೆಯೇ ಆ ಗಾಡಿಯು ಬಂದೊಡನೆ ಅಲ್ಲಲ್ಲಿಯ ಜನರು ಕಾಂಗ್ರೆಸ ಕಮೀಟಿಗೆ ಸುದ್ದಿಯನ್ನು ತಿಳಿಸಬೇಕು. ಮತ್ತು ಆ ಗಾಡಿಗೆ ಪಿಕೇಟಿಂಗ ಮಾಡಿ ಓಣಿಯಲ್ಲಲ್ಲಿಯೂ ಪರದೇಶೀ ಬಟ್ಟೆಯ ವ್ಯವಹಾರವಾಗದಂತೆ ಮಾಡಬೇಕೆಂದು ಬಿನ್ನಹ.

೧೮ ೬-೧೯೩೦ ತಮ್ಮ

ಧಾರವಾಡ ಆ. ರಂಗಾಚಾರ್ಯ ಕಾರ್ಯದರ್ಶಿ

ತಾ. ಕಾಂ. ಕಮೀಟಿ

——

ಬೇಕು!

ಕನ್ನಡ ಭಾಷೆಯ ಪ್ರಸಾರಕ್ಕಾಗಿ ೧೮ ವಯಸ್ಸಿನ ಮೇಲ್ಪಟ್ಟ ೩೦ ವರ್ಷದೊಳಗಿನ ವಯಸ್ಸಿನ ತರುಣರು ಬೇಕಾಗಿದ್ದಾರೆ. ಕನ್ನಡವನ್ನು ಚನ್ನಾಗಿ ಬಲ್ಲವರೂ ಅಲ್ಪಸ್ವಲ್ಪ ಇಂಗ್ಲೀಷಿನ ಪರಿಚಯವುಳ್ಳವರೂ ಬೇಕು. ಪರೀಕ್ಷೆಯ ನಿರ್ಬಂಧವಿಲ್ಲ. ಯೋಗ್ಯತೆಯ ಪ್ರಕಾರ ೨೦ ರಿಂದ ೩೦ರ ವರೆಗೆ ಸಂಬಳವನ್ನು ಕೊಡಲಾಗುವದು. ಇಚ್ಛಿಸುವವರು ತಮ್ಮ ಜಾತಿ, ಶಿಕ್ಷಣ, ವಯಸ್ಸು, ಲಗ್ನ, ಮೊದಲಾದವುಗಳನ್ನು ತಿಳಿಸಿ ಅರ್ಜಿ ಮಾಡಿಕೊಳ್ಳಬೇಕು. ಉತ್ತರವನ್ನಪೇಕ್ಷಿಸುವವರು ಒಂದಾಣೆ ಅಂಚೆ ತಿಕೀಟು ಕಳಿಸತಕ್ಕದ್ದು.

ವಿಳಾಸ- ಕಾರ್ಯದರ್ಶಿ

ಕರ್ನಾಟಕ ವಾಙ್ಮಯ ಪ್ರಸಾರಣ ಸಮಿತಿ

ಹಂಬಳ ಕೋಟೆ, ಧಾರವಾಡ.

——

ಚಂದಾದಾರರಿಗೆ ಸೂಚನೆ

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾದ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

The Asian Life Assurnance Co. Ltd
Bombay. Branch office Hubli.

ಅನುವು ಆಪತ್ತು ಬಂದಾಗ, ನಿಮ್ಮ ಹೆಂಡರು ಮಕ್ಕಳು ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೭೦ ರೂ. ಗಳನು ಕೊಡುವಂಥ ಗೋಲ್ಡನ್ (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦, ಹೆಡ್ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೩೫,೦೦೯,೬೦ ಕಂತದ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರಿಗಿ ಕೊಟ್ಟದ್ದು ೧೬,೦೦,೦೦೦

ಜಿಂದಿಗಿ ೨೩,೦೮,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕೆ. ವ್ಹಿ. ಹುಲಸೋಗಿ, ಬಿ ಎ.

ಕುಲಕರ್ಣಿ. ಧಾರವಾಡದ ಏಜಂಟರು ಕರ್ನಾಟಕದ ಬ್ರ್ಯಾಂಚ ಮ್ಯಾನೇಜರ

ಜಿ. ಎಚ್. ಪಾಟೀಲ ಹುಬ್ಬಳ್ಳಿಯ ಏಜಂಟರು—

ಹಾವೇರಿಯ ಚೀಫ ಏಜಂಟರು. ಶ್ರೀ. ಎನ್ ಎಮ್. ದೊಡ್ಡವಾಡ ಮತು ಶ್ರೀ. ಬಿ. ಟಿ. ಶಿರೋಳಕರ.

R. N.

ವಿಜಯ

ಸಂಪಾದಕರು— ಅಳ್ವಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨ | ಧಾರವಾಡ ಶನಿವಾರ ತಾರೀಖು ೨೦ ನೇ ಜೂನ ೧೯೩೧ | ಸಂಚಿಕೆ ೧೩೯

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೋಳಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೋಳಿನ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ವಾದಿ ಶ್ರೀ ಶಿವಪುತ್ರಸ್ವಾಮಿ ಅಸಿ ಜಡ್ಜ, ಶ್ರೀ. ... ಇವರ ತೀರ್ಪು ... ಸ್ವಾಮಿಗಳ ಭಾವಚಿತ್ರವೂ ಮತ್ತು ಮುನಸೀಫರಾದ ಶ್ರೀ. ... ಇವರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕ ... ದೆ. ... ಪ್ರತಿವಾದಿ, ಹಾಗು ಮುನಸೀಫರ ಭಾವಚಿತ್ರಗಳನ್ನೂ ... ಸಾರ್ವಜನಿಕರ ಆಗ್ರಹದ ಸಲುವಾಗಿ ಮೋಳಿನ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿದ್ದು ... ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇವು ... ಬೇಗನೆ ... ಪ್ರತಿಗಳು ತೀರ ... ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಮೆರವಣಿಗೆಯು ಸಭಾಸ್ಥಾನಕ್ಕೆ ಬಂದ ನಂತರ, ಶ್ರೀ. ಮಹಿಷಿ ಅಶ್ವತ್ಥರಾಯರು ಶ್ರೀ. ಹೊಸ್ನಾಪುರಮಠರು ಕರ್ನಾಟಕದ ಜನತೆಯ ಮುಖ್ಯಭಾಗವಾದ ವೀರಶೈವರಲ್ಲಿ, ಲೋಕಮಾನ್ಯರ ಮೊದಲನೆಯ ಶಿಷ್ಯರಾದ್ದರಿಂದ ಲೋಕಮಾನ್ಯರ ಸ್ಮಾರಕವಾದ ಒಂದು ಸಂಸ್ಥೆಯ ಸುವರ್ಣ ಮಹೋತ್ಸವದ ದಿನ ಅಧ್ಯಕ್ಷರಾಗುವದು ಯುಕ್ತವಾದ್ದರಿಂದ ಅವರನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸುತ್ತೇನೆಂದು ಹೇಳಿದರು. ಇದಕ್ಕೆ ಅನುಮೋದನವು ದೊರೆತ ಬಳಿಕ ಅಧ್ಯಕ್ಷರು ಸ್ಥಾನಾಪನ್ನರಾದರು. ಬಳಿಕ ಸ್ವಾಗತ ಗೀತೆ ಆದವು.

ಕಾರ್ಯದರ್ಶಿಗಳು ಸಭೆಗೆ ಯಶಸ್ಸಿಂತನೆ ಮಾಡಿದವರ ಹೆಸರುಗಳನ್ನೂ, ಅವರ ಪತ್ರಗಳಲ್ಲಿಯ ಮುಖ್ಯಾಂಶಗಳನ್ನೂ ಹೇಳಿದರು. ಆ ವೇಳೆ ವಾಚನಾಲಯದ ಇತಿಹಾಸ ಸ್ಥಿತಿಗಳ ವರದಿಯನ್ನು ಇನ್ನೊಬ್ಬ ಕಾರ್ಯದರ್ಶಿಗಳು ಓದಿ ಹೇಳಿದರು.

ನಂತರ ಅಧ್ಯಕ್ಷರು ತಮ್ಮ ಅಸ್ಖಲಿತವಾಣಿಯಿಂದ ಲೋಕಮಾನ್ಯರ ಗುಣಗಳನ್ನು ಒಂದೊಂದಾಗಿ ವಿವರಿಸಿ ಹೇಳಿದರು. ಮುಖ್ಯವಾಗಿ ಅವರಲ್ಲಿಯ ಸ್ವದೇಶಾಭಿಮಾನವು ಹೇಗಿತ್ತೆಂಬದನ್ನು ಹೇಳಿದರು.

ಶ್ರೀ. ಆಲೂರ ವೆಂಕಟರಾಯರು ಲೋಕಮಾನ್ಯರ ವಾಚನಾಭಿರುಚಿ, ಅವರ ಗ್ರಂಥ ಸಂಗ್ರಹ ಇವುಗಳ ಬಗ್ಗೆ ತಮಗೆ ಪ್ರತ್ಯಕ್ಷವಾಗಿ ಬಂದ ಅನುಭವದ ಕೆಲವು ಸಂಗತಿಗಳನ್ನು ಹೇಳಿದರು. ಗೀತಾರಹಸ್ಯವನ್ನು ಭಾಷಾಂತರಿಸುವಾಗ ತಮ್ಮ ಪ್ರದರ್ಶನಕ್ಕೆ ಬಂದ ಅವರಲ್ಲಿಯ ಗ್ರಂಥ ಸಂಗ್ರಹದ ವಿಶೇಷ ದಕ್ಷತೆಯ ಬಗ್ಗೆ ಅವರ ಗುಣ ವರ್ಣನೆ ಮಾಡಿದರು.

ನಂತರ ಶ್ರೀ. ಮಂಗಳವೇಢೆಯವರು ಅತಿಥಿ ಅಭ್ಯಾಗತರ ಆಭಾರವನ್ನು ಹೇಳಿದ ಬಳಿಕ ಸಭೆಯು ಮುಕ್ತಾಯವಾಯಿತು.

ಸಭೆಗೆ ರಾ. ಸಾ. ಶಿರಹಟ್ಟಿ ರಾ. ಸಾ. ರಾಜಣ್ಣ ಮೊದಲಾದವರು ಆಗಮಿಸಿದ್ದರು.

ಮದುವೆಯ ಸುಧಾರಣೆಯು ಒಪ್ಪಳ ಸಂಬಂಧ ಒಡಿಕೆ.

—(೦)—

ಸನಾತನಿಗಳ ಬದಲು ಜಾತಿಭೇದ ನೋಡದೆ ಪ್ರೀತಿಯ ವಿವಾಹಮಾಡಿಕೊಳ್ಳುವರ ಅರ್ಜೆಂಟ ಮದುವೆಯು ಕಾಲದ ಮೇರೆಗೆ ಹೋಗುವದರಿಂದ, ಧರ್ಮಭ್ರಷ್ಟವಾಯಿತೆಂದು ಯಾರೂ ತಿಳಿಯುವದಿಲ್ಲ. ಧರ್ಮದಲ್ಲಿದ್ದವರೇ ಧರ್ಮಕ್ಕೆ ತೀರ ವಿರುದ್ಧವಾದ ಕೃತ್ಯಗಳನ್ನು ನಡೆಸುವದು ಮಾತ್ರ ಸಖೇದಾಶ್ಚರ್ಯವನೀಯುತ್ತದೆ. ಪುಣೆಯಲ್ಲಿ ವಧೂವರರ ಪಕ್ಷದ ಒಂದೇ ಗೋತ್ರವಿದ್ದರೂ, ಹೆಣ್ಣು ಗಂಡು ಮಾಡಿಬಿಟ್ಟರು. ಈ ಪರ್ಯಂತರ ಒಂದೇ ಗೋತ್ರದಲ್ಲಿ ಯಾರೂ ಲಗ್ನ ಮಾಡಿಕೊಂಡಿಲ್ಲ. ಪುರೋಹಿತ ಉಪಾಧ್ಯಾಯರು ಮಾಡಿಸಿಲ್ಲ. ತಪ್ಪಿತಪ್ಪಿ ಪ್ರಮಾದವಾದರೆ - ವರನು ವಧುವನ್ನು ತಂಗಿಯಂತೆ ತಿಳಿದು ಜೀವನಪರ್ಯಂತರ ಅದರ ಸಂರಕ್ಷಣೆ ಮಾಡಬೇಕೆಂದು ಧರ್ಮಶಾಸ್ತ್ರದಲ್ಲಿ ಹೇಳಿರುತ್ತದೆ. ಧರ್ಮಕ್ಕೆ ತೀರ ವಿರುದ್ಧವಾಗಿ ಪುಣೆಯಲ್ಲಿ ಸಗೋತ್ರದಲ್ಲಿ ಮದುವೆ ಮಾಡಿಕೊಂಡನು. ಮತ್ತು ಪುರೋಹಿತನು ವಿದ್ಯುಕ್ತ ಮದುವೆ ಮಾಡಿಸಿದನು. ಈ ಬಗ್ಗೆ ವಿಚಾರ ಮಾಡಲು ಪುಣೆಯಲ್ಲಿ ಸೇರಿದ ಶಾಸ್ತ್ರಿ ಮತ್ತು ಪಂಡಿತರ ಸಭೆಯಲ್ಲಿ ಪುರೋಹಿತನು ಪಶ್ಚಾತ್ತಾಪವನ್ನು ವ್ಯಕ್ತಪಡಿಸಿ, ಶಾಸ್ತ್ರೀಯ ಪ್ರಾಯಶ್ಚಿತ್ತ ತಕ್ಕೊಂಡು ಮತ್ತೆ ಇಂಥ ಮದುವೆ ಮಾಡಿಸುವದಿಲ್ಲೆಂದು ವಚನಕೊಟ್ಟನು. ಈತನು ಹೇಗೋ ಆಯಿತು. ಆ ವಧೂವರರ ವಿಚಾರವೇನು? ಅವರೇನು ಗಂಡ ಹೆಂಡರಾಗಿ ಪ್ರಪಂಚ ಮಾಡುವರೇ?

ಹಗಲು ಹಾಡೇ ಮುಚ್ಚಿಸಿದ ಲಟಿಯ ಆರು ಸಾವಿರ ರೂಪಾಯಿಗಳ ದರೋಡೆ

— (೦) —

ಡಂಕಾವಲ್ಲಿ ಮ್ಯುನಿಸಿಪಾಲಿಟಿಯ ದರವಾನನು ಇಂಪೀರಿಯಲ ಬ್ಯಾಂಕಿನಿಂದ ೬೩೦೦ ರೂಪಾಯಿ ತಕ್ಕೊಂಡು ಬ್ಯಾಂಕಿನ ಹೊರಗೆ ಸ್ವಲ್ಪ ಮುಂದೆ ಬಂದ ಕೂಡಲೆ. ರಿವಾಲ್ವರ, ಕತ್ತಿ ಮತ್ತು ಕಬ್ಬಿಣದ ತುಂಡ ಹಿಡಕೊಂಡು ಬಂದ ನಾಲ್ವರು ಅವನ ಕಯ್ಯಲ್ಲಿಯ ಥೈಲಿಯನ್ನು ಕಸಕೊಂಡವರೇ ಬಾಯಿಸಿಕಲ ಮೇಲೆ ಕೂತು [illegible] ಮಾಯವಾದರು.

ಮಹಾತ್ಮರೆಂದರೆ - ಏಸೂಕ್ರಿಸ್ತನ
ಸ್ವಯಂಭೂ ಮೂರ್ತಿಯು.

—)(—(೦)—)(—

ಮಹಾತ್ಮರು ಲಂಡನಕ್ಕೆ ಹೋದರೆ - ಎಂಬ ಧ್ವನಿಯು ಇನ್ನೂ ತಪ್ಪಿಲ್ಲ. ಶ್ರೀರಾಮನಿಗೆ ಪಟ್ಟಾಭಿಷೇಕವಾದರೆ ವಸಿಷ್ಠ ಮಹಾಮುನಿಗಳು ಸಾಕೆ ಬೇಗಾದವರೆಂದು ಅನ್ನುತ್ತಿದ್ದರು. ಅದೇ ಪ್ರಕಾರ ಮಹಾತ್ಮರ ವಿಚಾರಸರಣಿಗೆ ಹೊರತಾದವರಾಗಿದೆ. ಇವರಲ್ಲಿ

ಮಹಾತ್ಮರು ಲಂಡನದಲ್ಲಿ ಕಿಂಗಸೆಹಾಲಿನಲ್ಲಿ ಇಳಿಯುವರೆಂಬುದು ಖಂಡಿತವಾಗಿದೆ. ಅವರ ಪ್ರೇಮ ಪ್ರಚಾರಕರ್ತರಳಾದ ಕುಮಾರಿ ಲೆಸ್ಟರ ಎಂಬವಳು ಮಹಾತ್ಮರು, ಅವರ ತತ್ವ ಮತ್ತು ಅವರ ಸ್ವಾಗತದ ವಿಷಯವಾಗಿ ಕೆಲ ಮಹತ್ವದ ಸಂಗತಿಗಳನ್ನು ಹೇಳಿದ್ದಾಳೆ. ಅದನ್ನು ಸಂಕ್ಷಿಪ್ತವಾಗಿ ಮುಂದೆ ಕೊಡುತ್ತೇವೆ.

ಕುಮಾರಿ ಲೆಸ್ಟರ ಮತ್ತು ಅವಳ ತತ್ವದ ಪ್ರಕಾರ ನಡೆಯುವಂಥವರು ಏಸೂ ಕ್ರಿಸ್ತನಂತೆ ಅನುಯಾಯಿಗಳು. ಮಹಾಯುದ್ಧವಾಗಬಾರದೆಂದು ಸತ್ಯಾಗ್ರಹ ಮಾಡಿದ್ದರು. ಮಹಾತ್ಮರ ತತ್ವಗಳೂ ಅಹಿಂಸೆ ಅಸಹಕಾರದ ಸತ್ಯಾಗ್ರಹದ್ವಾರದಿಂದ ಇವರು ಮಹಾತ್ಮರನ್ನು ಜಗದ್ಬಂಧು ಆಗಿ ತಿಳಕೊಂಡು, ಇವರೊಂದಿಗೆ ಸ್ನೇಹ ಬೆಳೆಸಿದ್ದಾರೆ.

ಮಹಾತ್ಮರು ತಮ್ಮ ಹಾಲಿನಲ್ಲಿ ವಾಸವಾಗಿರುವದಕ್ಕೆ ಒರುವದು ಬಹು ದೊಡ್ಡ ಗೌರವವೆಂದು ಭಾವಿಸಿದ್ದಾರೆ. ಈ ಬಹುಮಾನದ ದೆಸೆಯಿಂದ ಅನೇಕರು ಇವರ ಅಭಿನಂದನ ಮಾಡಿ, ಬೇಕಾದ ನೆರವನ್ನೊದಗಿಸಿಕೊಡಲಿಕ್ಕೆ ಸಿದ್ಧರಾಗಿದ್ದಾರೆ.

ಲ್ಯಾಂಕಶಾಯರದ ಅರಿವೆಗೆ ಬಹಿಷ್ಕಾರ ಹಾಕಿದ್ದರಿಂದ ಅಲ್ಲಿಯ ವ್ಯಾಪಾರ ಮಗ್ಗಿ, ಕಗ್ಗಿ, ಜನರ ಮಗ್ಗಲು ಮುರಿದು ಹೋಗಿದೆ. ಆದರೂ ಲ್ಯಾಂಕಶಾಯರದವರು ಸಹ ಮಹಾತ್ಮರ ಆತಿಥ್ಯ ಸತ್ಕಾರಕ್ಕಾಗಿ ಬೇಕಾದ ನೆರವನ್ನು ಕೊಟ್ಟು ಕಳಿಸಲಿಕ್ಕೆ ಸಿದ್ಧರಾಗಿದ್ದಾರೆ.

ಕಿಂಗಸೆ ಹಾಲಿಗೆ ಬರುವ ಹಾಲಿನ ಕೋಡಿ ಹರಿಯುವದು ಹಣ್ಣಿನ ಗುಡ್ಡ ಬೀಳುವದು. ಪಿಸ್ತೆ ಬದಾಮುಗಳ ಕಪ್ಪರಿ ಬೀಳುವದು. ಯಾರಾದರೂ ತಕ್ಕೊಳ್ಳಲಿ; ಯಾರಾದರೂ ಭಿಡಲೆಂದು ಅವಳಿಗೆ ಬಗೀ ಹೋಗಿದೆ ದ್ರೌಪದಿಯ ಥಾಲಿಯೊಳಗಿಂದ ಬಂದ ಅನ್ನವಾದಂತೆ ಅಲ್ಲಿ ತಿನಿಸಿನ ರಾಶಿ ಬೆಳೆಯುವದು.

ಕಿಂಗಸಲಿ ಮನೆಯನ್ನು ದೇವರಿಗೆ ಅರ್ಪಿಸಿದೆ. ಇಲ್ಲಿ ವಾಸವಾಗಿರುವಂಥವರು ದೇವದೂತರಾಗಿರುತ್ತಾರೆ. ಇಂಗ್ಲಂಡದಲ್ಲಿಯೂ ಬಡವರೇ ಬಹಳ. ಶ್ರೀಮಂತರು ಏನೇ ಹೇಳಲಿ; ಬಡಜನರು ಹಿಂದುಸ್ಥಾನದವರ ಸ್ವರಾಜ್ಯ ವಿಷಯಕವಾದ ಮಹತ್ವಾಕಾಂಕ್ಷೆಯು ಪೂರ್ಣವಾಗಲೇ ಬೇಕೆಂಬ ಮತದವರಾಗಿದ್ದಾರೆ.

ಮಹಾತ್ಮರು ಅಲ್ಲಿಯ ಕಾಂಗ್ರೆಸ ಕಮಿಟಿಯ ಪಕ್ಷದಿಂದ ಸೇರುವ ಎರಡು ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡುವರು. ಒಂದು ಲಂಡನ ನಗರದಿಂದ; ಮ್ಯಾಂಚೆಸ್ಟರದಲ್ಲಿ ಸೇರುವದು. ಸಾಧ್ಯವಾದಷ್ಟು ಜನ ರಾಜಕಾರಣ ಪಟುಗಳಿಗೂ, ಇತರ ಪ್ರತಿಷ್ಠಿತರಿಗೂ, ಇದಕ್ಕೆ ದಯಮಾಡಿಸುವಂತೆ ಆಮಂತ್ರಣ ಕಳಿಸಲ್ಪಡುವದು. ವಿಷಯ ಹಿಂದುಸ್ಥಾನದ ಸ್ವಾತಂತ್ರ್ಯ.

ಪಂಡಿತ ಮಾಲವಿಯಾಯವರು
ಸ್ವದೇಶ ಸ್ವಾತಂತ್ರ್ಯಕ್ಕಾಗಿ ಧರ್ಮದ ಮೇಲೆ
ಕೆಲಕಾಲ ನೀರು ಬಿಡುವರು.

—(೦)—

ರಾವುಂಡ ಟೇಬಲಿಗೆ ಪಂಡಿತ ಮಾಲವಿಯಾಯವರೂ ಹೋಗುವದಷ್ಟೇ; ಅಲ್ಲಿ ಇವರ ಮಡಿಹುಡಿಯು ಕಡಲಿನಲ್ಲಿ ಒಡದಂತೆ ಹೋಗಿ ಬಿಡುತ್ತದೆ. ಇವರು ಅತ್ಯಂತವಾಗಿ ಧರ್ಮನಿಷ್ಠ, ಕರ್ಮನಿಷ್ಠ ಬ್ರಾಹ್ಮಣರಾಗಿದ್ದಾರೆ. ಎಷ್ಟೋ ಕಡೆಗೆ ಪ್ರಸಂಗ ಬಂದಾಗ, ಕಯ್ಯಿಂದಲೇ ಅಡಿಗೆ ಮಾಡಿಕೊಂಡ ಸ್ವಯಂಪಾಕಿ ಬ್ರಾಹ್ಮಣರಾಗಿದ್ದಾರೆ. ಇಂಥವರು ಸ್ವದೇಶ ಸ್ವಾತಂತ್ರ್ಯಕ್ಕಾಗಿ ಕೆಲಕಾಲ ಧರ್ಮದ ಬಂಧನಗಳನ್ನು ಬದಿಗಿಡಲು ಸಿದ್ಧರಾಗಿದ್ದಾರೆ. ಇವರನ್ನು ಸಾಗಗೊಡಲು ಕಾಶಿಯಲ್ಲಿ ಸಭೆಯಾಯಿತು. ಈ ಸಭೆಯಲ್ಲಿ ಪಂಡಿತರು-

ಮಾತೃಭೂಮಿಯ ದೆಸೆಯಿಂದ ನಾನು ಈ ಪರ್ಯಂತರ ನಿತ್ಯಕರ್ಮವಾಗಿ ಕಾದುಕೊಂಡಿದ್ದ ಯಾವದೊಂದು ಧಾರ್ಮಿಕ ಭಾವನೆಯನ್ನು ಬಿಟ್ಟು ಕೊಡಲಿಕ್ಕೆ ಸಿದ್ಧನಿದ್ದೇನೆ.

ಎಂಬದಾಗಿ ಉದ್ಗಾರ ತೆಗೆದಿದ್ದಾರೆ. ಭೀಷ್ಮಾಚಾರ್ಯ, ದ್ರೋಣಾಚಾರ್ಯರು ಕುರುಕ್ಷೇತ್ರದಲ್ಲಿ ಯುದ್ಧ ಮಾಡುತ್ತಿದ್ದಾಗ ಸೂರ್ಯನಿಗೆ ಅರ್ಘ್ಯ ಕೊಡುವಾಗ ನದಿಯ ಅಥವಾ ಹೊಳೆಯ ದಂಡೆಗೆ ಹೋಗಲಿಲ್ಲ. ಅಲ್ಲೇ ರಣಮಂಡಲದಲ್ಲಿಯೇ ಕೆಲ ಬಾಣಗಳಿಂದ ಅರ್ಘ್ಯ ಕೊಟ್ಟರು. ಇದು ಧರ್ಮಕರ್ಮ ಚ್ಯುತವಾಗಲಿಲ್ಲ. ಬೇಕೆಂದು ಧರ್ಮಭ್ರಷ್ಟರಾಗಬಾರದು. ಧರ್ಮದ ಸೂಕ್ಷ್ಮ ತಿಳಿದವರಿಂದ ಸಮಾಧಾನಕಾರ ಧರ್ಮದ ಕೆಲ ಕೃತ್ಯಗಳಿಗೆ ಲೋಪವಾದರೆ- ಅದಷ್ಟು ಮಾತ್ರಕ್ಕೆ ಅಧರ್ಮ ಅಥವಾ ಧರ್ಮಬಾಹ್ಯಕೃತ್ಯವಾಗುವದಿಲ್ಲ.

ರಾಯರವರ ವಿಷಯವಾಗಿ ಮುಂಬಯಿಯ
ಪೋಲೀಸರ ಗಸ್ತು ಚಿಪ್ಸ ಕಾಂಸ್ಟೇಬ

....(೦)....

ಗಾಂಧೀಶರ ವಿರುದ್ಧ ಬಂಡಾಯ ಮಾಡುವ ಸಂಚು ಮಾಡಿದರೆಂಬ ಆರೋಪದ ವಿಚಾರಕ್ಕಾಗಿ ಕಾನಪೂರದ ಮ್ಯಾಜಿಸ್ಟ್ರೇಟರು ವಾರಂಟು ಕಳಿಸಿದ ಮೇರೆಗೆ, ಅವನನ್ನು ಕಾನಪೂರಕ್ಕೆ ಕಳಿಸಿದರು.

ಮುಂಬಯಿಯಲ್ಲಿ ಅವನನ್ನು ಹಿಡಿದು ಕಾನಪೂರಕ್ಕೆ ಕಳಿಸುವದಕ್ಕೆ ಒಂದು ವಾರ ಹತ್ತಿತು. ಈ ಮಧ್ಯ ಇವನು ತನಗೆ ವಕೀಲರನ್ನು ಕಾಣಬೇಕಾಗಿದೆಂದು ಪೋಲೀಸರಿಗೆ ಬಾಯಿಯಿಂದ ಕೇಳಿದನು. ಅರ್ಜೀ ಬರೆದುಕೊಟ್ಟನು. ಇತ್ತ ವಕೀಲರು, ಶ್ರೀ ರಾಯರನ್ನು ಕಾಣಬೇಕಾಗಿದೆಂದು ಪೋಲೀಸರನ್ನು ಕಂಡು ಕೇಳಲು, ಆ ಬಗ್ಗೆ ಯಾವ ವಕೀಲರನ್ನು ಕಾಣುವ ಅಪೇಕ್ಷೆ ಇಲ್ಲೆಂದು ಪೋಲೀಸರು ವಕೀಲರ ಮೋರೆಯ ಮೇಲೆ ಹಚ್ಚಿ ಅವರನ್ನು ಹಿಂದಕ್ಕೆ ಕಳಿಸಿದರು. ಕಡೆಗೆ ರಾಯರನ್ನು ಕಾನಪೂರಕ್ಕೆ ಕಳಿಸುವದಕ್ಕೆಂದು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ತಂದಾಗ, ಪೋಲೀಸರ ಗಸ್ತು ಕೃತವೆಲ್ಲ ಹೊರಬಿತ್ತು. ವಕೀಲರಿಗೆ ಭೆಟ್ಟಿ ಮಾಡಿಸಿದ್ದರೆ ಪೋಲೀಸರ ಗಂಟೇನು ಹೋಗುತ್ತಿತ್ತು? ಇಷ್ಟೇಕೆ ಕ್ಷುದ್ರತನವೆಂಬ ಪ್ರಶ್ನವು ಸಹಜವಾಗಿ ಹೊರಡುತ್ತದೆ.

ಬಲೂಚಿಸ್ಥಾನದಲ್ಲಿ ದಬ್ಬಾಳಿಕೆ.

—(೦)—

ಇಂಗ್ರೇಜಿ ಸರಕಾರಕ್ಕೆ ಸೇರಿದ ಬಲೂಚಿಸ್ಥಾನದಲ್ಲಿ ಸ್ಥಾನಿಕ ಅಧಿಕಾರಿಗಳು ಕಾಂಗ್ರೆಸ, ಖಾದಿ, ಮದ್ಯಪಾನ ವಿರೋಧ ಮುಂತಾದ ಯಾವ ಚಳವಳಿಗೂ ಸಮ್ಮತಿ ಕೊಡುವದಿಲ್ಲ. ಇದಕ್ಕೂ ಹೆಚ್ಚಿನ ಅನ್ಯಾಯದ ದಬ್ಬಾಳಿಕೆ ಇರುವದು!

ಜಿನೇವಾದ ಪರಿಷತ್ತಿಗೆ ಹೋಗಿ ಬಂದ ಶೇಟ ವಾಲಚಂದರು ಮಹಾತ್ಮರನ್ನು ಕಂಡು "ರಾವುಂಡಟೇಬಲಿನಿಂದ ಫಲಪ್ರಾಪ್ತಿ ಯಾಗುವ ಆಶೆಯಿಲ್ಲ. ಆದರೂ ಲಂಡನದ ಯಾತ್ರೆ ಮಾಡಿರಿ" ಎಂಬದಾಗಿ ಆಲೋಚನೆ ಹೇಳಿದ್ದಾರೆ.

ರಾಷ್ಟ್ರೀಯ ಬೆಳಗಾವ ಜಿಲ್ಲೆಯ ಪ್ರತಿನಿಧಿಗಳು.

—(೧)—

ಈ ಕೆಳಗಿನವರಿಗೆ ಹೊಸದಾಗಿ ಅನುಮೋದನೆ ಬಂದಿದೆ.

೧ ದೇವಿ [illegible] ನಾರಾಯಣ
೨ [illegible] ಗಿರಿ
೩ [illegible]
೪ ಸರ ಅಲ್ಲಿ [illegible]
೫ [illegible] ಎಸ್. ಕೆ. [illegible]
೬ ಸರ [illegible]
೭ [illegible] ದಾಮೋದರ
೮ ಸರ [illegible] ಚನ್ನವಾಲಾ
೯ [illegible]
೧೦ [illegible]

ಬೆಳಗಾವ [illegible] ಸುಪ್ರಸಿದ್ಧ [illegible] ಶ್ರೀ ದಾಮೋದರಪಂತ [illegible] ವಿಷಮಜ್ವರದಿಂದ ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ. ಇವರ ಮೃತ್ಯುವಿನ ಬಗ್ಗೆ [illegible] ವಾಡುವದಕ್ಕಾಗಿ ಇಂದು [illegible] ಪೇಟಿಯು ಬಂದಾಗಿತ್ತು.

ಗವ್ಹರ್ನರ ಸಾಹೇಬರ ಮೇಲೆ ಗುಂಡು ಹಾಕಿದ ಗೋಗಟೆಯ [illegible] ಪುಣೆಯ ಪ್ರಸಿದ್ಧ ವಕೀಲರಾದ ಶ್ರೀ. ಭಡಭಡೆಯವರು ಕೆಲಸ ನಡೆಸ್ತಾರು.

ಜಾಹೀರ ನೋಟೀಸು

ಕೆಳಗೆ ಸಹಿ ಮಾಡುವವರ ಕಡೆಯಿಂದ ಜಾಹೀರ ಜನರಿಗೆ ತಿಳಿಯತಕ್ಕ ಬಗ್ಗೆ ಪ್ರಕಟಿಸುವದೇನೆಂದರೆ

ಹುಬ್ಬಳ್ಳಿ ಶಹರ ೧ ನೇ ವಾರ್ಡ [illegible] ಪ್ಲೀಟ ನಂಬರ [illegible] ನೇದ್ದು ನಮ್ಮ ಪಿತ್ರಾರ್ಜಿತ [illegible] ಮನೆಯಲ್ಲಿ [illegible] ಮಹಾದೇವಪ್ಪ [illegible] ಶಿವಪ್ಪ [illegible] ಇರುತ್ತದೆ ಎಲ್ಲಿ ಈಗಿನ ಸದರ ಮಹಾದೇವಪ್ಪನು [illegible] ಮೊದಲು ಬಿಟ್ಟುಕೊಟ್ಟು ಹೆಂಡತಿಯನ್ನು ತಿರಿಗಿ ಮನೆಗೆ ಕರೆಸಿಕೊಂಡು ಮನೆಯಲ್ಲಿ ಇಟ್ಟುಕೊಂಡು [illegible] ಬೋಧನೆಗೆ [illegible] ನನ್ನ ವ ನನ್ನ [illegible] ಮೇಲೆ ಎಂದಿನೇ ಮಾಡಹತ್ತಿದನು ಈ ಗೃಹಕಲಹದ ಮೂಲಕ ನಾನೂ ವ ನನ್ನ ತಾಯಿ ನಮ್ಮ ಜೀವನೋಪಾಯದ ಬಗ್ಗೆ ನಮ್ಮ [illegible] ಯಿದ್ದ ಸದರ ಮನೆಯನ್ನು [illegible] ತೀರಿ [illegible] ಬಂದಿರುತ್ತೇವೆ ನಾವು ಮನೆಯಲ್ಲಿ ಇಲ್ಲದ್ದನ್ನು ನೋಡಿ [illegible] ಸದರ ಮಹಾದೇವಪ್ಪನು ಕೆಲವು ದುಷ್ಟ ಜನರನ್ನು ತನ್ನೊಳಗೆ [illegible] ಮಾಡಿಕೊಂಡು ಅವರನ್ನು ಭಾಡೆದಾರರನ್ನಾಗಿ ಮಾಡಿ ಸದರ ಮನೆಯಲ್ಲಿ ಇಡಲಿಕ್ಕೆ ವ ನಮ್ಮ ಮಾಲು ಅಪಹಾರ ಮಾಡಲಿಕ್ಕೆ ಯತ್ನ ನಡಿಸಿದಂತೆ ತಿಳಿದಿದೆ ಈ ಪ್ರಕಾರ್ಯ ಮಾಡಲಿಕ್ಕೆ ಸದರ ಮಹಾದೇವಪ್ಪನಿಗೆ ಯಾವ ವಿಧದಿಂದಲೂ ಹಕ್ಕು ಸಂಬಂಧ ಇನೂ ಇರುವದಿಲ್ಲ ಈ ಬಗ್ಗೆ ಅವನು ಮಾಡಿದ ವ ನಡಿಸಬಹುದಾದ ಕೃತ್ಯಗಳಿಗೆ ನಮ್ಮ ಮೇಲೆ ಎಷ್ಟು ಮಾತ್ರವೂ ಬಾಂಧಾಯಿಸಲಾರವು [illegible] ಸದರ ಮಹಾದೇವಪ್ಪನ [illegible] ಪಟ್ಟು ಅವನಿಗೆ ಅವರ ಕೃತ್ಯದಲ್ಲಿ ಮದತ ಮಾಡಿದವರಾರೂ ಶಿಕ್ಷಕ್ಕೆ ಗುರಿಯಾಗಬಾರದೆಂದು ಈ ನೋಟೀಸು ಕೊಟ್ಟಿರುತ್ತದೆ. ನಾನ ನಮ್ಮ ತಾಯಿಯವರು ಶೀಘ್ರವಾಗಿಯೇ ನಮ್ಮ [illegible] ಯಿರುವ ಸದರ ಮನೆಗೆ ಹೋಗತಕ್ಕವರಿದ್ದೇವೆ ನಮ್ಮ ಹಿಸೆ ವ ಪೋಟಗೀ ಬಗ್ಗೆ [illegible] ಕೆಲಸ ನಡಿಸತಕ್ಕವರಿ ತಿಳಿಯಬೇಕು

ತಾರೀಖು [illegible] ಇಸ್ವಿ

ಫಕೀರಪ್ಪ ಮಹಾದೇವಪ್ಪ [illegible]

The Asian Life Assurance Co. Ltd Bombay. Branch office Hubli

ಏಶಿಯನ್ ಲೈಫ್ ಅಶ್ಯೂರನ್ಸ್ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್ ಆಫೀಸ ಮುಂಬಯಿ)

[illegible] ಕಂಪನಿಯು. [illegible] ಕಂಪನಿಯು

[illegible] ೧,೫೭,೦೦೦.೦೦ [illegible] ರೂ. ೬೦೦,೦೦೦

[illegible] ೧೦,೦೦,೦೦೦

[illegible] ೨೨,೨೦,೦೦೦

[illegible] ಪತ್ರವ್ಯವಹಾರ.

[illegible] ಮತ್ತು ಕೆ. ಪಿ. [illegible], ಬಿ. ಎ.

[illegible] ಕರ್ನಾಟಕದ ಬ್ರಾಂಚ ಸೆಕ್ರೆಟರಿ

[illegible] ಹುಬ್ಬಳ್ಳಿ [illegible]

[illegible] ಶ್ರೀ ಎಸ್. ಎಮ್. [illegible]

ಶ್ರೀ ಬಿ. ಬಿ. [illegible].

[illegible] ನಿಮ್ಮ [illegible] ಮಾಡುವ

ಒಂದೇ ಒಂದು ಉಪಾಯವು

[illegible] ಪಾಲಿಸಿಯನ್ನು ತೆಗೆದುಕೊಳ್ಳಿ [illegible] ಮಾತ್ರ. ಈ ಪಾಲಿಸಿಯು [illegible] ಕೊಡಲಿಕ್ಕೆ [illegible] ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ [illegible] ಕಂಪನಿಯೊಂದೇ [illegible]

ಈ ಪತ್ರವನ್ನು [illegible] ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ವಿಜಯ

ಸಂಪಾದಕರು:- ಆಲ್ಲೂರು ವೆಂಕಟರಾಯರು ಬಿ. ಎ. ಎಲ್. ಎಲ್. ಬಿ.

ವರ್ಷ ೧೨) ಧಾರವಾಡ ಶುಕ್ರವಾರ ತಾರೀಖು ೭ ನೇ ಆಗಸ್ಟ್ ೧೯೩೧ (ಸಂಚಿಕೆ ೬೭

ಜೋಶಿ, ಗುಂಜೀಕರ ಮತ್ತು ಕಂಪನಿ

ಶುಕ್ರವಾರಪೇಟೆ ಧಾರವಾಡ

ಇವರನ್ನು

ಮುಂಬೈ ಪ್ರಾವ್ಹಿನ್ಶಿಯಲ್ ಕೋ. ಇನ್ಶ್ಯೂರನ್ಸ ಕಂಪನಿ, ಲಿ.

ಇವರು

ಧಾರವಾಡ ಜಿಲ್ಲೆಯ

ಚೀಫ್ ಏಜಂಟ

ರನ್ನು ನಿಯಮಿಸಿದ್ದಾರೆ.

ಈಗ ಜಿಲ್ಲೆಯ ಎಲ್ಲ ಮುಖ್ಯ ಸ್ಥಳಗಳಲ್ಲಿ ಸಬ್ ಏಜಂಟ ರನ್ನು ನಿಯಮಿಸುವದಿದೆ. ಈ ಕೆಲಸ ಮಾಡಲಿಚ್ಛಿಸುವವರು ತಮ್ಮ ಖಾತ್ರಿಯ ಬಗ್ಗೆ ಎಲ್ಲ ಮಾಹಿತಿ ಕೊಟ್ಟು ಚೀಫ್ ಏಜಂಟರಿಗೆ ಬರೆಯಬೇಕು. ಖಾತ್ರಿಯಿಂದ ಕೆಲಸ ಮಾಡುವವರಿಗೆ ಪೂರ್ಣ ಕಮೀಶನ ಸಿಗುವದು.

ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆ ಕಂಪನಿ ಲಿಮಿಟೆಡ್

(ಇಂಗ್ಲಂಡದಲ್ಲಿ ಇನ್ಕಾರ್ಪೊರೇಟೆಡ್ ಮಾಡಿದ್ದು.)

ನೋಟೀಸು

ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆ ಕಂಪನಿಯ ಏಜಂಟರವರು, ಇದೇ ಆಗಸ್ಟ ತಿಂಗಳ ೨೫ ನೇ ತಾರೀಖು ಮಂಗಳವಾರ ದಿನ ಮಧ್ಯಾಹ್ನ ಮೂರು ಗಂಟೆಯ ವರೆಗೆ ಮದ್ರಾಸಿನ ಪೆರಂಬೂರಿನಲ್ಲಿ ತಮ್ಮ ರೇಲ್ವೆಯಲ್ಲಿಯ ಬಳಸಿ ಬಿಟ್ಟಿರುವ ಸಾಮಾನುಗಳ ಅಂದರೆ ಸ್ಕ್ರ್ಯಾಪ್ ಮೆಟಲ್, ಮತ್ತು ಸೆಕಂಡ ಹ್ಯಾಂಡ ಹಾಗೂ ಕೆಲಸಕ್ಕೆ ನಿರುಪಯೋಗವಾದಂಥ ಎಲ್ಲ ತರದ ಉಕ್ಕು, ಬೀಡು, ತಬ್ಬಿಣಗಳ ತುಂಡುಗಳು, ಯಂತ್ರಸಾಮಗ್ರಿ, ಗರ್ಡರ ಸಾಮಾನುಗಳು, ಉಕ್ಕಿನ ಸ್ಲೀಪರಗಳು ಹಳೇ ರೇಲ್ವೆ ಹಳಿಗಳು ಮಾರ್ಕೀ ಕಬ್ಬಿಣದ ಪೀಪಿಗಳು, ಇವೇ ಮುಂತಾದವುಗಳನ್ನು ಹುಬ್ಬಳ್ಳಿಯ, ಸ್ಟೋರ್ಸ ಡಿಪೋದಲ್ಲಿ ಮಾರಲಿಕ್ಕೆ ಕೊಳ್ಳುವ ಬಗ್ಗೆ ಟೆಂಡರಗಳನ್ನು ಸ್ವೀಕರಿಸುವರು.

ಮಾರಾಟಕ್ಕೆ ಸಿದ್ಧವಾಗಿರುವ ಸಾಮಾನುಗಳ ಯಾದಿ ಸಹಿತವಾಗಿ ಟೆಂಡರ ಫಾರ್ಮ ಒಂದು ರೂಪಾಯಿ ಕೊಟ್ಟು, ಎಮ್. ಎಸ್. ಎಮ್. ರೇಲ್ವೆಯ ಪೆರಂಬೂರದಲ್ಲಿಯ ಕಂಟ್ರೋಲರ ಆಫ ಸ್ಟೋರ್ಸ ಇವರಿಂದ ಪಡೆಯಬಹುದು. ಇದರ ರಕಮು ತಿರಿಗಿ ಸಿಗಲಾರದು.

ಟೆಂಡರ ಫಾರ್ಮುಗಳು ಹ್ಯಾಗಿದ್ದರೂ ಸೇವಾಬಲದಿಂದ ಗೊತ್ತಿಯಾಗುತ್ತವೆ.

A. C. TURNER.
Controller of Stores.

ದಿ ಧಾರವಾಡ ಅರ್ಬನ ಕೋ.
ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

೧೯೧೨ ಕೋಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠತೆಯ ಸ್ಥಾನ.

ಬಂಡವಲು ಎರಡು ಲಕ್ಷದಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ವು ಮಾಡಲ್ಪಡುವದು. ಕಾಲೀಮು ಮತ್ತು ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕಾಗದ ಬರೆದು ಇಲ್ಲವೆ ಬಂದು ತಿಳಿದುಕೊಳ್ಳಬೇಕು.

ಪುಟ್ಟರಾಜ ವಿ. ಬಳಾಸೆ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ಬಿಡಿ ಪ್ರತಿಗೆ

೧೨ ತಿಂಗಳಿಗೆ	ರೂ. ೧-೫-೦
೬ ,,	೦-೧೨-೦
೩ ,,	೦-೭-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಿರಿ.

ಮ್ಯಾನೇಜರು ವಿಜಯ ಧಾರವಾಡ,

ವಿಜಯ.

ತಾರೀಖು ೭-೮-೧೯೩೧ನೇ ಇಸ್ವಿ

ಮುಂಬಯಿ ಕೌನ್ಸಿಲ

ಸಂಬಳ ಕಡಿಮೆ ಮಾಡುವ ಕುರಿತು

ಶ್ರೀ. ಜೋಗ ವಕೀಲರ ಠರಾವಿನ ಚರ್ಚೆ

—(೧)—

ಈ ಮೊದಲು ಪ್ರಸಿದ್ಧ ಮಾಡಿದ ಮೇರೆಗೆ ಶ್ರೀ. ಜೋಗ ವಕೀಲರು ಕೌನ್ಸಿಲದಲ್ಲಿ ಸಂಬಳ ಕಡಿಮೆ ಮಾಡುವ ವಿಷಯವಾಗಿ ಸರಕಾರಕ್ಕೆ ಶಿಫಾರಸ್ಸು ಠರಾವಿನ ವಾದವಿವಾದಕ್ಕೆ ಸೋಮವಾರ ದಿವಸ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಶ್ರೀ ಜೋಗರು ಮಾಡಿದ ಭಾಷಣದ ಸಾರಾಂಶವು—

ಕೆಲವು ವರ್ಷಗಳಿಂದ ಮುಂಬಯಿ ಸರಕಾರಕ್ಕೆ ಪ್ರತಿ ವರ್ಷ ಹಾನಿಯಾಗುತ್ತಲೇ ಬಂದಿದೆ. ಹಿಂದಿನ ಎರಡು ವರ್ಷಗಳಲ್ಲಂತೂ ಆದಾಯ ವೆಚ್ಚವನ್ನು ಹೊಂದಿಸುವದು ಅಶಕ್ಯವಾಯಿತು. ೧೯೩೦-೩೧ರಲ್ಲಿ ಗಳಿಕೆಯು ೧೪ ಕೋಟಿ ೮ ಲಕ್ಷವೆಂದೂ, ಒಳಿಕೆಯು ೧೫ ಕೋಟಿ ೯ ಲಕ್ಷವೆಂದೂ, ಅಂದಾಜು ಮಾಡಲ್ಪಟ್ಟು, ೫೯ ಲಕ್ಷದ ಕೊರತೆ ಬಿದ್ದಿದೆ. ನಿಮ್ಮ ವೆಚ್ಚವನ್ನು ಕಡಿಮೆ ಮಾಡಿರೆಂದು ಕೌನ್ಸಿಲದಲ್ಲಿ ಆಗಾಗ್ಗೆ ಸರಕಾರಕ್ಕೆ ಎಚ್ಚರಿಕೆಯ ಸೂಚನೆ ಮಾಡಿದರೂ, ಸರಕಾರವು ನಿಶ್ಚಿಂತತೆಯ ಧೋರಣವನ್ನೇ ಸ್ವೀಕರಿಸುತ್ತ ಬಂತು. ಈ ಬಗ್ಗೆ ಸಪ್ರಮಾಣ ಅಂಕಿ ಸಂಖ್ಯೆಗಳನ್ನು ಕೊಡಿಸಿ ಕೊಡಿರೆಂದು ನಾವು ಕೇಳಿದರೂ, ಸರಕಾರವು ಲಕ್ಷ್ಯಕ್ಕೆ ಮನಗೊಡುವದಿಲ್ಲ. ಮುಂಬಯಿಯ ಬ್ಯಾಕ ಬೇ ದಂಥ ನಿರುಪಯೋಗಿ ಕೆಲಸದಲ್ಲಿ ದ್ರವ್ಯ ಹಾಕಿತು. ಅದರಲ್ಲಿ ಅಪಜಯ ಬಂದು, ಅದರಿಂದ ಸರಕಾರವು ಸಾಲದ ದೊಡ್ಡ ಹೊರೆಯನ್ನು ಮಾತ್ರ ಹೊರಿಸುವ ಮೇಲೆ ಹೊತ್ತಂತಾಗಿರುತ್ತದೆ. ಇದಕ್ಕಾಗಿ ೧೪ ಕೋಟಿ ರೂಪಾಯಿ ವೆಚ್ಚವಾಗಿದ್ದು ಇದರ ಬಡ್ಡಿಯು ಪ್ರತಿ ವರ್ಷ ಆದಾಯ ಸರಿ ಮಗಳನ್ನು ತಿಂತೆ ಬೆಳೆಯುತ್ತ ನಡೆದಿದೆ. ಸರಕಾರೀ ನೌಕರರ ಸಂಬಳವು ಹೆಚ್ಚುತ್ತಿರುವಂತೆಯೂ ಕಂಡು ಬರುತ್ತದೆ. ಪಬ್ಲಿಕ ವರ್ಕ್ಸ ಖಾತೆಯಲ್ಲಿ ಮಾಡತಕ್ಕ ಕೆಲಸಗಳನ್ನು ಬಂದು ಮಾಡಿ, ಉಳಿತಾಯ ತೋರಿಸಿದ್ದಾರೆ. ಆದರೆ ಅದು ನಿಜವಾದ ಉಳಿತಾಯವಲ್ಲ. ಕೌನ್ಸಿಲವು ಸೂಚಿಸಿದ ಸೂಚನೆಗಳನ್ನು ತೆಕ್ಕ ಉಳಿತಾಯದಲ್ಲಿ ತೋರಿಸಿದ್ದಾರೆ. ಇದೇನು ಉಳಿತಾಯದ ಪದ್ಧತಿಯೋ! ನೌಕರದಾರರ ಸಂಬಳದಲ್ಲಿ ಯೋಗ್ಯವಾದ ಕಡಿಮೆ ಮಾಡಿದ ಹೊರತು, ನಿಜವಾದ ವೆಚ್ಚ ಕಡಿಮೆಯಾಗುವದೇ ಇಲ್ಲ. ೧೫ ವರ್ಷಗಳ ಹಿಂದೆ ಮುಂಬಯಿ ಸರಕಾರದ ಗಳಿಕೆಯು ೯ ಕೋಟಿ ೩೨ ಲಕ್ಷ ಮತ್ತು ವೆಚ್ಚವು ೮ ಕೋಟಿ ೩೧ ಲಕ್ಷವಾಗಿತ್ತು. ಅದು ಈಗ ೧೫ ಕೋಟಿ ೮೯ ಲಕ್ಷವಾಗಿರುತ್ತದೆ. ನೌಕರದಾರರ ಸಂಬಳದ ಅಂಕಿಗಳನ್ನು ನೋಡಿದರೆ ಒಂದು ಕೋಟಿ, ೫೭ ಲಕ್ಷ ಹೋಗಿ, ೫ ಕೋಟಿ ೩೭ ಲಕ್ಷವಾದಂತೆ ಕಂಡುಬರುತ್ತದೆ. ವರಿಷ್ಠ ಮತ್ತು ಕನಿಷ್ಠ ನೌಕರದಾರರ ಅದ್ಭುತವಾಗಿ ಬೆಳೆದ ಸಂಬಳವನ್ನು ಕಡಿಮೆ ಮಾಡಿದ ಹೊರತು ನಿಜವಾದ ವೆಚ್ಚ ಕಡಿಮೆ ಮಾಡಲಿಕ್ಕಾಗುವದೇ ಇಲ್ಲ. ೧೯೨೪-೨೫ ರಲ್ಲಿ ಲೀ ಕಮೀಶನದವರು ಮಾಡಿದ ಶಿಫಾರಸ್ಸಿನ ಮೇರೆಗೆ ಕನಿಷ್ಠ ವರ್ಗದವರ ಸಂಬಳವನ್ನು ೧೦೦ ಕ್ಕೆ ೧೦೫ ರಂತೆ ಹೆಚ್ಚಿಸಿತೆಂದು ಸರಕಾರ ಪಕ್ಷದವರು ಹೇಳಬಹುದು. ಅದನ್ನು ಸೂಕ್ಷ್ಮ ದೃಷ್ಟಿಯಿಂದ ನೋಡುವಲ್ಲಿ ಸಿಪಾಯರಿಗೆ ೧೬, ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ ಎಂಟು ಮತ್ತು ಕಾರಕೂನರಿಗೆ ೩೦ ರಿಂದ ೩೫ ರ ತನಕ ಸಂಬಳವಿರುತ್ತಿತ್ತು. ಎಷ್ಟೋ ವರ್ಷಗಳ ವರೆಗೆ ಇವರಿಗೆ ಬಡತಿಯು ದೊರೆಯುತ್ತಲೇ ಇದ್ದಿಲ್ಲ. ಶ್ರೇಷ್ಠ ವರ್ಗದವರ ಸಂಬಳವಷ್ಟೇ ಹೆಚ್ಚಾಗದೆ, ಅವರಿಗೆ ಬೇರೆ ಬೇರೆ ಪ್ರಕಾರದ ಭತ್ತೆಯೂ ದೊರೆಯಲಾರಂಭಿಸಿತು. ಮಂತ್ರಿಗಳದೇ ವಿಚಾರ ಮಾಡಿರಿ. ಕೌನ್ಸಿಲರನಿಗೆ ೫೪೪೪ ರೂಪಾಯಿ ಸಂಬಳ ವಾದರೆ ಮಂತ್ರಿಗೆ ೪೦೦೦ ರೂಪಾಯಿ !! ಬೇರೆ ದೇಶಗಳಲ್ಲಿ ಸಂಬಳದ ಪ್ರಮಾಣವು ನೂರಕ್ಕೆ ನಾಲ್ವತ್ತೈದು. ಜಪಾನದಲ್ಲಂತೂ ನೂರಕ್ಕೆ ಇಪ್ಪತ್ತೈದು. ಬೇಕಾದಷ್ಟು ದೊಡ್ಡ ಕಾಮದಾರನಾಗಲಿ; ಅವನಿಗೆ ತಿಂಗಳಿಗೆ ಸಾವಿರಕ್ಕಿಂತ ಹೆಚ್ಚು ಸಂಬಳ ದೊರಕದೆಂದು ಜಪಾನದ ಕಾಯದೆಯು. ಕಾಂಗ್ರೆಸದ ವರ್ಕಿಂಗ ಕಮೀಟಿಯವರೂ ಇದೇ ಪ್ರಕಾರ ಠರಾವು ಮಾಡಿದ್ದಾರೆ. ಸದ್ಯ ಬೇರೆ ದೇಶದವರಂತೆ ಸಂಬಳಕ್ಕೆ ಕತ್ರಿ ಹಾಕಲಿಕ್ಕಾಗದಿದ್ದರೂ, ನಾನು ಹೇಳುವ ರೀತಿಯಾಗಿ ಕತ್ರೀ ಹಾಕಿದರೆ ೫೦ ಲಕ್ಷದ ಉಳಿತಾಯವಾಗುತ್ತದೆ. ಕಮೀಟಿಯವರು ಕಾಟಕ್ಕಾಗಿ [illegible] ಕೂಡಿಸಿದ್ದು ನನಗೆ ಎಷ್ಟು ಮಾತ್ರವೂ ಸಮ್ಮತವಿಲ್ಲ. ನೌಕರದಾರರ ಸಂಬಳವನ್ನು ಕಡಿಮೆ ಮಾಡಿದರೇ — ಗಳಿಕೆ ಬಳಕೆಗಳು ಹೊಂದಿಕೊಳ್ಳುವವು.

ಈ ತರಹದ ಮೇಲೆ ಯುರೋಪಿಯನ ರಾಷ್ಟ್ರ ಶ್ರೀ. ಕ್ರೀಟಸಾಹೇಬರು ಭಾಷಣ ಮಾಡುತ್ತಿದ್ದಾರೆ—

ವೆಚ್ಚ ಉಳಿತಾಯದ ಕಮೀಟಿಯವರು ಶಿಕ್ಷಣ ಖಾತೆಯಲ್ಲಿ ಕತ್ರಿ ಹಾಕಿದ್ದನ್ನು ಕಂಡು ನನಗೆ ಆಶ್ಚರ್ಯವೆನಿಸಿತು. ಅಸ್ಪೃಶ್ಯ ಮತ್ತು ಹಿಂದುಳಿದವರ ಶಿಕ್ಷಣಕ್ಕೆ ಪ್ರಾರಂಭ ಮಾಡುವದರಲ್ಲಿಯೇ ಕಮೀಟಿಯವರು ಇದರ ಶಿಕ್ಷಣದ ಮೇಲೆ ಬಾಯಿ ಹಾಕಿದ್ದಾರೆ. ಇಂಗ್ಲಂಡ ಮತ್ತು ಜರ್ಮನಿಯ ಸಾಂಪತ್ತಿಕ ಸ್ಥಿತಿಯು ಎಷ್ಟೇ ಕೆಟ್ಟರೂ, ಅಲ್ಲಿ ಶಿಕ್ಷಣದ ಮೇಲೆ ಕತ್ರಿ ಹಾಕುವದಿಲ್ಲ. ಆರ್ಥಿಕ ಸ್ಥಿತಿಯು ತೀರ ನಿಕೃಷ್ಟವಾದಾಗ ಸಹ ಶಾಲೆ ಕಾಲೇಜಗಳ ಫೀಯನ್ನು ಕಡಿಮೆ ಮಾಡಿದ ಉದಾಹರಣೆಗಳುಂಟು— ಹಿಂದುಸ್ಥಾನದಲ್ಲಿ ಪ್ರಜಾಪ್ರಭುತ್ವದ ತತ್ವದ ಮೇರೆಗೆ ರಾಜ್ಯಪದ್ಧತಿಯು ಸ್ಥಾಪನೆಯಾಗತಕ್ಕದ್ದಿದೆ. ಇಂಥ ಸಮಯದಲ್ಲಿ ಶಿಕ್ಷಣ ಪ್ರಸಾರಕ್ಕೆ ವಿಘ್ನ ತರುವದೆಂದರೆ— ಮತದಾನದ ಸಸಿಯನ್ನು ನೀರು ಹಾಕಿ ಬೆಳೆಸುವದರ ಬದಲು— ಅದನ್ನು ಕಮರಿಸುವಂತಾಗುತ್ತದೆ. ಪ್ರಾಥಮಿಕ ಶಿಕ್ಷಣದ ಗ್ರಾಂಟನ್ನು ಕಡಿಮೆ ಮಾಡಿದರೆ— ಶಿಕ್ಷಣ ವಿಷಯಕವಾದ ಪ್ರಯತ್ನದ ಬೆಳಗೆಯು ಕುಂಠಿತ ಹೋಗುವದೆಂದು ವಿದ್ಯಾಖಾತೆಯ [illegible] ರೆಕ್ಟರಸಾಹೇಬರು ತಮ್ಮ ರಿಪೋರ್ಟಿನಲ್ಲಿ ಸ್ಪಷ್ಟವಾಗಿ ಬರೆದಿರುತ್ತಾರೆ.

ಡಾಕ್ಟರ ಗಿಲ್ಡರ (ಘಾಸಿ)

ವೆಚ್ಚ ಉಳಿತಾಯದ ಕಮೀಟಿಯವರು ಮಾಡಿದ ಕಸರತ್ತು ನೋಡಿರಿ. ೩೦ ಸಾರೆ ಕಮೀಟಿ ಕೂಡಿಸಿದರು. ಕಮೀಟಿ ಕೂಡಿದಾಗ ಎಂಟೆಂಟು ತಾಸುಗಳ ತನಕ ಚರ್ಚೆ ಮಾಡಿ, ಪತ್ರ [illegible] ರಿಪೋರ್ಟ ಮಾತ್ರ ಬರೆದಿದ್ದಾರೆ. ಅದರಲ್ಲಿ [illegible] ಕೊಡಬೇಕಾದ ವೆಚ್ಚ ಹಾಕದ ಪರೀಕ್ಷೆ ತೋರಿಸಿದ್ದಾರೆ. ಶಿಕ್ಷಣ ಮತ್ತು ವೈದ್ಯಕ ಖಾತೆಗಳ ಬಾಯಿಗೆ ಗುದ್ದೀ ಹಾಕಿದ್ದಾರೆ. ಆಸ್ಪತ್ರೆಯಲ್ಲಿ ರೋಗಿಗಳ ಆಸ್ತಿಕೆಯ ಸಂಖ್ಯೆ ಕಡಿಮೆ ಮಾಡಿದ್ದಾರ [illegible] ದಸರಿಂದಲೇ! ಯುರೋಪಿಯನ್ನರ ಸರಕಾರ್ಯಗಳಿಗೆ [illegible] ಆಸ್ಪತ್ರೆಗಳಲ್ಲಿ ಯುರೋಪಿಯನ್ನರ ಅನ್ನಸೀರಿಸ [illegible] ಮಾಡಿರುವ ವ್ಯವಸ್ಥೆಯ ಕಡೆಗೆ ಕಮೀಟಿಯವರು ಹಣಕಿ ಸಹ ಹಾಕಿಲ್ಲ. ಹಿಂದೀ ಜನರ ಸಹಾಯಕ [illegible] ಕತ್ರಿ ಹಾಕಿದ್ದಾರೆ. ಶ್ರೀಮಂತರಿಗೆ ಸಹಾಯ ಮಾಡಬೇಕು; ಬಡವರ ಅನ್ನದ ಮೇಲೆ ಕಾಲು ಹಾಕಬೇಕೆಂಬ ಪದ್ಧತಿಯು ಫ್ರಾನ್ಸದಲ್ಲಿ ರಾಜ್ಯಕ್ರಾಂತಿಯ ಮುಂದೆ ನಡೆದಿತ್ತು. ಕಮೀ

ಟಿಸುವರು ಗುಸ್ತು ತೋರಿ ಇಳೀ ತೆಗೆದಿದ್ದಾರೆ.

ಈಶ್ವರ ಸೈತಂವಾಯನ -

ಬರೇ ಸಂಬಳದ ಖಾತೆಗಾಗಿಯೇ ಉತ್ಪನ್ನದ ಬಹು ದೊಡ್ಡ ಭಾಗವು ವೆಚ್ಚವಾಗಿ ಹೋಗುತ್ತಿರುವದರಿಂದ ಲೋಕೋಪಯೋಗಿ ಖಾತೆಗಳು ಉಪವಾಸ ವನವಾಸ ಭೋಗಿಸುತ್ತಿವೆ. ಹಿಂದುಸ್ಥಾನದಲ್ಲಿ ಕಡಿಮೆ ಸಂಬಳದ ಮೇಲೆ ಬೇಕಾದಷ್ಟು ಜನ ಯೋಗ್ಯತಾಸಂಪನ್ನರಾದ ಪದವೀಧರರು ದೊರೆಯುತ್ತಿರುವಾಗ, ಭಾರೀ ಸಂಬಳ ಕೊಟ್ಟು ಪರಕೀಯರನ್ನು ನಮ್ಮ ಮೇಲೆ ಹೇರುತ್ತೀರಿ. ಎಲ್ಲ ಸಂಬಳಗಳ ಪುನರ್ವಿಚಾರಣೆ ಮತ್ತು ಸಂಘಟನೆ ಮಾಡಿ, ಪರಿಷ್ಕರಣ ಮಾಡುವ ಇನ್ನೂರಿಂದ ೧೫೦೦ ರ ವರೆಗೆ ಬೇಕೆಂಬ ಏರ್ಪಾಡು ಮಾಡಬೇಕು. ವರ್ತಮಾನಪತ್ರಕಾರರ ಹಾಗೂ ತಜ್ಞಜನರ ಕಮೀಟಿ ಕೂಡಿಸಿ, ಅವರ ಆಲೋಚನೆಯ ಪ್ರಕಾರ ವ್ಯವಸ್ಥೆ ಮಾಡಬೇಕು. ಕಮೀಟಿಯವರ ಕೆಲಸ ತೃಪ್ತಿಕರವಾಗಿಯಾಗಲಿಲ್ಲ. ಕಮೀಟಿಯಲ್ಲಿ ಅನುಭವವಿಲ್ಲದ ಜನರಿದ್ದರು. ಅವರು ಸರಕಾರೀ ಕಾಮದಾರರು ಹೇಳಿದ ಕಿವಿ ಮಂತ್ರದಂತೆಯೇ ನಡೆದಿದ್ದಾರೆ. ಈ ವಿಷಯವಾಗಿ ಇನ್ನೊಮ್ಮೆ ವಿಚಾರವಾಗಬೇಕು.

ಹೊತ್ತು ಆದ್ದರಿಂದ ಇಂದು ವಾದವಿವಾದವು ಆಗಲಿಲ್ಲ. ಮುಂದಿನ ಭಾಷಣಗಳನ್ನು ಇನ್ನೊಂದು ಸಂಚಿಕೆಯಲ್ಲಿ ಬರೆಯುವೆವು.

ಸ್ವಾತಂತ್ರ್ಯ ತರುವದಕ್ಕಾಗಿ ಪಂಡಿತ ಮಾಲವೀಯರು ಲಂಡನಕ್ಕೆ ಹೋಗುವರು!

—(೦)—

ಅಲ್ಲಾಹಾಬಾದಿನಲ್ಲಾದ ಸಭೆಯಲ್ಲಿ ಪಂಡಿತರು ಮುಂದೆ ಕೊಟ್ಟಂತೆ ಭಾಷಣ ಮಾಡಿದ್ದಾರೆ.

ಇಂಗ್ಲಿಷ ಜನರು ಇಂಗ್ಲಂಡದಲ್ಲಿ, ಫ್ರೆಂಚರು ಫ್ರಾನ್ಸದಲ್ಲಿ, ಜರ್ಮನರು ಜರ್ಮನಿಯಲ್ಲಿ ಜಪಾನರು ಜಪಾನದಲ್ಲಿ, ಅಮೇರಿಕೆಯವರು ಅಮೇರಿಕೆಯಲ್ಲಿ ಉಪಭೋಗಿಸುತ್ತಿರುವಂಥ ಸ್ವಾತಂತ್ರ್ಯದಂತೆ ನಾವು ಹಿಂದುಸ್ಥಾನದಲ್ಲಿ ಉಪಭೋಗಿಸುವಂಥ ಸ್ವರಾಜ್ಯ ಸ್ವಾತಂತ್ರ್ಯವೇ ನಮಗೆ ಬೇಕಾಗಿರುತ್ತದೆ. ಅದರಲ್ಲಿ ಒಂದಿಷ್ಟು ಕಡಿಮೆಯಾದರೂ ನಾವು ಒಪ್ಪುವದಿಲ್ಲ.

ನಾವು ಸಾಯಮನ್ನ ಕಮೀಶನಕ್ಕೆ ಬಹಿಷ್ಕಾರ ಹಾಕಿದಾಗ, ಲಾರ್ಡ ಆಯರ್ವಿನ್ನಸಾಹೇಬರು ನೀವು ಇಂಗ್ಲಂಡಕ್ಕೆ ಹೋಗುವಿರಾ ಎಂದು ನನಗೆ ಪ್ರಶ್ನಮಾಡಿದರು. ನಮ್ಮ ಹೋಗುವಿಕೆಯು ನೀವು ನಮಗೆ ಕಳಿಸುವ ಆಮಂತ್ರಣದ ರೀತಿಯನ್ನವಲಂಬಿಸುತ್ತದೆಂದು ನಾನು ಅವರಿಗೆ ಆಗ ಉತ್ತರ ಕೊಟ್ಟೆನು. ಸಾಯಮನ್ನಸಾಹೇಬರು ಬರೆದ ರಿಪೋರ್ಟಿನ ಮಟ್ಟಿಗೇ ವಿಚಾರ ಮಾಡುವದಾದರೆ-ನಾವು ಬರುವದಿಲ್ಲ. ಹಿಂದುಸ್ಥಾನದ ರಾಜ್ಯಘಟನೆಯನ್ನು ಗೊತ್ತುಪಡಿಸುವದಕ್ಕಾಗಿ ಮಂತ್ರಿ ಮಂಡಲದಿಂದ ಆಮಂತ್ರಣ ಬಂದರೆ-ನಾನೂ ಬರುವೆನು. ಪಂಡಿತ ಮೋತಿಲಾಲರೂ ಮಹಾತ್ಮರೂ ಬರುವರೆಂದು ನಾನು ಆ ಸಾಹೇಬರಿಗೆ ಖಂಡಿತವಾದ ಮಾತು ಹೇಳಿದೆನು. ಮೋತಿಲಾಲರಂತೂ ಪರಲೋಕವಾಸಿಯಾದರು. ಈಗ ಮಂತ್ರಿಗಳಿಂದ ಆಮಂತ್ರಣ ಬಂದಿದೆ. ನಾನೂ ಹೋಗುವೆನು. ಮಹಾತ್ಮರೂ ಬರುವರು. ನಾವು ಬರುತ್ತೇವೆಂದು ಯಾರಿಗೂ ಬೇಡಿಕೊಳ್ಳಲಿಲ್ಲ. ಅರ್ಜಿ ಮಾಡಲಿಲ್ಲ. ನಾನು ಹೋಗಿ, ಮಹಾತ್ಮರು ಉಳಿಯುವದು; ಮಹಾತ್ಮರು ಹೋಗಿ, ನಾನು ಹಿಂದುಳಿಯುವದು ಶಕ್ಯವಿಲ್ಲ. ಇಬ್ಬರೂ ಹೋಗಲೇ ಬೇಕಾಗಿದೆ.

ಹಿಂದೂ ಮುಸಲಮಾನ ಒಡಂಬಡಿಕೆಯಾಗದೆ, ಸ್ವರಾಜ್ಯ ಶಕ್ಯವಿಲ್ಲ. ಸ್ವರಾಜ್ಯವಾಗದೆ, ಹಿಂದೂ ಮುಸಲಮಾನ ಒಗ್ಗಟ್ಟು ಶಕ್ಯವಿಲ್ಲೆಂದು ಹೇಳುವಂತೆ ಪರಿಸ್ಥಿತಿಯುಂಟಾಗಿರುತ್ತದೆ. ಈ ವಿಷಯವಾಗಿ ನಾವು ಶಕ್ಯವಾದ ಎಲ್ಲ ವಿಚಾರಗಳನ್ನು ಮಾಡಲೇ ಬೇಕು

ಮಹಾತ್ಮರೇ- ಇನ್ನಾದರೂ ವಿಲಾಯತಿಗೆ ಹೋಗುವಿರಾ?

....(೦)....

ಮಹಾತ್ಮರು ಪುಣೆಯಲ್ಲಿ ಆಕ್ಟಿಂಗ ಗವರ್ನರರಾದ ಸರ ಹಾಟಸನ್ನಸಾಹೇಬರ ಕೂಡ ಸರಾಸರಿ ನಾಲ್ಕು ತಾಸುಗಳ ತನಕ ಮಾತಾಡಿ ಹೊರಗೆ ಬಂದ ಬಳಿಕ, ವರ್ತಮಾನ ಪತ್ರಗಳ ಸುದ್ದಿಗಾರರು- ಮಹಾತ್ಮರೇ- ಇನ್ನಾದರೂ ನೀವು ವಿಲಾಯತಿಗೆ ಹೋಗುವದು ಖಂಡಿತವಾಯಿತೇ ಎಂದು ಪ್ರಶ್ನ ಮಾಡಲು- ಇನ್ನೂ ನಿಶ್ಚಿತವಾಗಿಲ್ಲೆಂದು ಉತ್ತರ ಕೊಟ್ಟರು. ಬಾರಡೋಲಿಯ ಪರಿಸ್ಥಿತಿಯು ಸಮಾಧಾನಕರವಂತಾಯಿತೇ ಎಂದು ಮತ್ತೊಂದು ಅಡ್ಡಗಾಲಿನ ಪ್ರಶ್ನ ಕೇಳಲು-ನಗುತ್ತಾ, ಏನೂ ಹೇಳಲಾರೆನೆಂದು ಉತ್ತರ ಕೊಟ್ಟರು.

ಧ್ವನಿವಾಹಕ, ಗ್ರಾಮೋಫೋನು ಮೊದಲಾದ ಅನೇಕ ಅಗಾಧಶೋಧಗಳನ್ನು ಮಾಡಿದ ಎಡಿಸನ್ನಸಾಹೇಬರಿಗೆ ಬಹಳ ಜಡ್ಡಾಗಿರುತ್ತದೆ.

ಕಲಕತ್ತೆಯಲ್ಲಿ ಪೋಲಿಸ ಇನ್ಸಪೆಕ್ಟರ ತಾರಿಣಿ ಮುಖರ್ಜಿಯನ್ನು ಕೊಂದ ರಾಮಕೃಷ್ಣ [illegible]ನನ್ನು ಗಲ್ಲಿಗೆ ಹಾಕಿದರು.

ಅಬಕಾರೀ ಕಮೀಶನರ ಚಿತ್ತ ಶುದ್ಧಿಯಾಯಿತು.

— (೦) —

ಮದ್ರಾಸ ಇಲಾಖೆಯ ಅಬಕಾರಿ ಕಮೀಶನರಸಾಹೇಬರು ತಮ್ಮ ಬುದ್ಧಿಯ ಉಪಯೋಗ ಮಾಡಿ, ಗಾಂಧೀ ಆಯರ್ವಿನ್ನ ಪ್ಯಾಕ್ಟ ಪ್ರಕಾರ ಕಾಂಗ್ರೆಸದವರು ಗಡಂಗುಗಳ ಮುಂದೆ ಪಿಕೆಟಿಂಗ ಮಾಡಲಿ; ಆದರೆ ಗುತ್ತೆಯ ಸವಾಲಿನ ಕಾಲದಲ್ಲಿ ಮಾಡಲಿಕ್ಕಾಗುವದಿಲ್ಲೆಂದು ಮಲ್ಲಿನಾಥಿ ಮಾಡಿ, ಕಾಂಗ್ರೆಸದವರ ಪಿಕೆಟಿಂಗಕ್ಕೆ ವಿಘ್ನ ತಂದರು. ಈ ಬಗ್ಗೆ ಶ್ರೀ. ರಾಜಗೋಪಾಳಾಚಾರ್ಯರು ಗವ್ಹರ್ನರ ಸಾಹೇಬರಿಗೆ ಪತ್ರ ಬರೆಯಲು- ಸಾಹೇಬರು, ಎಲ್ಲಾದರೂ ಪಿಕೆಟಿಂಗ ಮಾಡಬಹುದು. ಅದು ಶಾಂತವೃತ್ತಿಯದಾಗಿರಬೇಕು. ಶಾಂತತಾಭಂಗವಾದರೆ ಕಾಯದೆ ಪ್ರಕಾರ ಕೆಲಸ ನಡಿಸಲಾದೀತೆಂದು ಆಚಾರ್ಯರಿಗೆ ಉತ್ತರ ಕಳಿಸಿದ್ದಾರೆ. ಹೀಗೆ ಕಮೀಶನರಸಾಹೇಬರ ದಿ[illegible]ರಿಯು ಹೋಗಿ, ಚಿತ್ತ ಶುದ್ಧಿಯಾಯಿತು.

ಬಂಗಾಲದಲ್ಲಿ ಬಾಂಬುಗಳು ಪಿಟ್ಲ ಕೊಳವಿಯು ಕಾಲ ಕಸವಾಗಿವೆ.

—(೦)—

ಪಾಟಣಾದಲ್ಲಿಂದು ಮನೆಯಲ್ಲಿ ಬಾಂಬು ಹಾರಿತು. ಒಬ್ಬನ ಕೈಗೆ ಭಯಂಕರ ಘಾಯವಾಗಲು- ಆಸ್ಪತ್ರೆಯಲ್ಲಿ ಈತನ ಕಯ್ಯನ್ನೇ ಕೊಯ್ದು ತೆಗೆದರು. ಇದೇ ಪ್ರಕಾರ ಅಲ್ಲಿ ಎಲ್ಲಾದರೊಂದು ಸ್ಥಳದಲ್ಲಿ ಬಾಂಬು ಹಾರಿದಂತೆ ದಿನಾಲು ತಾರಿನ ವರ್ತಮಾನ ಬರುತ್ತದೆ. ಶ್ರಾವಣಮಾಸದಲ್ಲಿ ಈ ದೇಶದಲ್ಲಿ ಹುಡುಗರು ಪಿಟ್ಲಕೊಳವೆ ಹಾರಿಸುತ್ತಾರೆ. ಆ ಮೇರೆಗೆ ಅಲ್ಲಿ ಬಾಂಬುಗಳಾಗಿವೆಂದು ತೋರುವಂತಾಗಿರುತ್ತದೆ.

ಧಾರವಾಡ ಹುಬ್ಬಳ್ಳಿಯ ನಡುವೆ ಡಾಂಬರಿನ ರಸ್ತೆ.

....(೦)....

ಮುಂಬಯಿಯ ಕೌನ್ಸಿಲಿನಲ್ಲಿ ಧಾರವಾಡ ಮತ್ತು ಹುಬ್ಬಳ್ಳಿಯ ನಡುವಿನ ಸೈನ ದಾರಿಯು ಕಟ್ಟಿದ್ದು ನಿಜವೇ? ಈ ದಾರಿಯನ್ನು ಡಾಂಬರದಿಂದ ನೆಲಗಟ್ಟಣೆ ಮಾಡುವರೆಂಬ ವರ್ತಮಾನವು ನಿಜವೇ? ಎಂದು ಶ್ರೀ ಜೋಗರು ಕೇಳಿದ ಪ್ರಶ್ನಕ್ಕೆ ದಿವಾನ ಬಂಬಳೆಯವರು ದಾರಿ ಕಟ್ಟಿದ್ದು ನಿಜ. ಕೆಲ ಭಾಗವನ್ನು ಡಾಂಬರದಿಂದ ಗಟ್ಟಿಮಾಡುವ ವಿಚಾರವುಂಟೆಂದು ಉತ್ತರ ಕೊಟ್ಟಿದ್ದಾರೆ.

THE ANKALIGI BANK LTD.

Head Office
Kamankatta Dharwar
Branches
Ranebennur & Hirekerur
5%
Interest allowed on
ANNA SAVINGS BANK
DEPOSIT

Dharwar 3—1—1927 } K. B. ANKALIGI Managing Director

(ರ) ಪತ್ತೆ ಶಿರಗಿ

ಶ್ರೀ ದತ್ತ ವೀವ್ಹಿಂಗ ಮಿಲ್ ಹುಬ್ಬಳ್ಳಿ.

ಕರ್ನಾಟಕದಲ್ಲಿ ಇದೇ ಮೊದಲನೆಯ ನೇರೆಯ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಸೀರೆಗಳು ಹಾಗೂ ಪಲಗಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ. ಜವಳಿ ನೋಡಿ, ನಿಮಗೆ ಬೇಕಾದ ಮಾಲು ಕೊಂಡು, ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ. ಬಣ್ಣ ಹೋದರೆ - ಮಾಲು ತಿರುಗಿ ತಕ್ಕೊಳ್ಳುವೆವು.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲ ...

... ೩—೦—೦
... ೦—೬

The Asian Life Assurance Co. Ltd
Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗಬೇಡಿರಿ. ಈ ಕಂಪನಿಯು

ವಿಮೆಯ ರಕಮು ರೂ. ೧,೩೯,೦೦೦,೦೦ ಕಂಟದ ಉತ್ಪನ್ನ ರೂ. ೭೦೦,೦೦೦
ವಿಮೆಯ ಹಣ ತಿರಿಗಿ ಕೊಟ್ಟದ್ದು ೧೦,೦೦,೦೦೦
ಜಿಂದಿಗಿ ೩೩,೦೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ಬಾಗಲಕೋಟಕರ ಮತ್ತು ಕುಲಕರ್ಣಿ. ಧಾರವಾಡದ ಏಜಂಟರು ಬಿ. ಎಚ್. ಪಾಟೀಲ ಹಾವೇರಿಯ ಚೀಫ ಏಜಂಟರು.

ಕೆ. ವ್ಹಿ. ಹೊಸಮನಿ, ಬಿ. ಎ. ಕರ್ನಾಟಕದ ಬ್ರಾಂಚ ಮ್ಯಾನೇಜರ ಹುಬಳ್ಳಿಯ ಏಜಂಟರು— ಶ್ರೀ. ... ಗೋಡ್ಡವಾಡ ಮತ್ತು ಶ್ರೀ. ಬಿ. ಟಿ. ಶಿರೋಳಕರ.

ಆಸುವು ಅವಸ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೭೦ ರೂ. ಗಳನ್ನು ಕೊಡುವಂಥ ಗೋಲ್ಡನ್ (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯಂದರೆ ಏಶಿಯನ್ನ ಕಂಪನಿಯೊಂದೇ ಆಗಿರುತ್ತದೆ.

ನೋಟೀಸಿನ ದರಗಳು

....(೦)....

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂವರೇ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಂತೆ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅದು ಆಣೆ ಡಬಲ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಒಳಗಿನ ಪತ್ರಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ

....(೦)....

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾದ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ಶನಿವಾರ ತಾರೀಖು ೮ ನೇ ಅಗಸ್ಟ ೧೯೩[illegible] ಸಂಚಿಕೆ ೧೫೦

ಜೋಶಿ, ಗುಂಜೀಕರ ಮತ್ತು ಕಂಪನಿ

ಶುಕ್ರವಾರಪೇಟೆ ಧಾರವಾಡ

ಇವರನ್ನು

ಮುಂಬೈ ಪ್ರಾವಿನ್ಶಿಯಲ್ ಕೋ. ಇನ್ಶುಅರನ್ಸ ಕಂಪನಿ. ಲಿ.

ಇವರು

ಧಾರವಾಡ ಜಿಲ್ಹೆಯ

ಚೀಫ್ ಏಜಂಟ

ರಾಗಿ ನಿಯಮಿಸಿದ್ದಾರೆ.

ಈಗ ಜಿಲ್ಹೆಯ ಎಲ್ಲ ಮುಖ್ಯ ಸ್ಥಳಗಳಲ್ಲಿ

ಸಬ್ ಏಜಂಟ

ರನ್ನು ನಿಯಮಿಸುವದದೆ. ಈ ಕೆಲಸ ಮಾಡಲಿಚ್ಛಿಸುವವರು ತಮ್ಮ ಖಾತ್ರಿಯ ಬಗ್ಗೆ ಎಲ್ಲ ಮಾಹಿತಿ ಕೊಟ್ಟು ಚೀಫ್ ಏಜಂಟರಿಗೆ ಬರೆಯಬೇಕು. ಖಾತ್ರಿಯಿಂದ ಕೆಲಸ ಮಾಡುವವರಿಗೆ ಪೂರ್ಣ ಕಮೀಶನ ಸಿಗುವದು.

ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆ ಕಂಪನಿ ಲಿಮಿಟೆಡ್

(ಇಂಗ್ಲಂಡದಲ್ಲಿ ಇನ್ಕಾರ್ಪೊರೆಟೆಡ್ ಮಾಡಿದ್ದು)

ನೋಟೀಸು

ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆ ಕಂಪನಿಯ ಏಜಂಟರವರು, ಇದೇ ಅಗಸ್ಟ ತಿಂಗಳ ೨೫ ನೇ ತಾರೀಖು ಮಂಗಳವಾರ ದಿನ ಮ. ಧ್ಯಾನ್ಹ ಮೂರುಗಂಟೆಯ ವರೆಗೆ ಮದ್ರಾಸಿನ ಪಾರ್ಕಟೌನಿನಲ್ಲಿ ತಮ್ಮ ರೇಲ್ವೆಯಲ್ಲಿಯ ಬಹು ಬೆಲೆಯುಳ್ಳ ಸಾಮಾನುಗಳ ಅಂದರೆ ಸ್ಕ್ರ್ಯಾಪಮೆಟಲ್, ಮತ್ತು ಸೆಕಂಡ ಹ್ಯಾಂಡ ಹಾಗೂ ಕೆಲಸಕ್ಕೆ ನಿರುಪಯೋಗವಾದಂಥ ಹಲವು ತರದ ಉಕ್ಕು, ಬೀಡು, ಕಬ್ಬಿಣಗಳ ತುಂಡುಗಳು, ಯಂತ್ರಸಾಮಗ್ರಿ, ಗರ್ಡರ ಸಾಮಾನುಗಳು, ಉಕ್ಕಿನ ಸ್ಲೀಪರಗಳು ಹಳೇ ರೇಲ್ವೆ ಹಳಿಗಳು ಖಾಲೀ ಕಬ್ಬಿಣದ ಪೀಪೆಗಳು, ಇವೇ ಮುಂತಾದವುಗಳನ್ನು ಹುಬ್ಬಳ್ಳಿಯ ಸ್ಟೋರ್ಸ ಡಿಪೋದಲ್ಲಿ ಮಾರಲಿಕ್ಕೆ ಕೊಳ್ಳುವ ಬಗ್ಗೆ ಟೆಂಡರಗಳನ್ನು ಸ್ವೀಕರಿಸುವರು.

ಮಾರಾಟಕ್ಕೆ ಸಿದ್ಧವಾಗಿರುವ ಸಾಮಾನುಗಳ ಯಾದಿ ಸಹಿತವಾಗಿ ಟೆಂಡರ ಫಾರ್ಮು ಐದು ರೂಪಾಯಿ ಕೊಟ್ಟು, ಎಮ್. ಎಸ್. ಎಮ್. ರೇಲ್ವೆಯ ಪೆರಂಬೂರದಲ್ಲಿಯ ಕಂಟ್ರೋಲರ ಆಫ್ ಸ್ಟೋರ್ಸ ಇವರಿಂದ ಪಡೆಯಬಹುದು. ಇದರ ರಕಮು ತಿರುಗಿ ಸಿಗಲಾರದು.

ಟೆಂಡರ ಫಾರ್ಮುಗಳು ಪ್ಯಾಕ್ಟ್ಯ ಪೇಯಬಲದಿಂದ ದೊರೆಯಲಾರವು.

A. C. TURNER.
Controller of Stores.

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

[illegible] ಪೇಟೆ ಧಾರವಾಡ.

[illegible]

[illegible]

[illegible]

[illegible]

[illegible]

ವಿಶೇಷ [illegible] ಬಂದ ತಿಳಕೊಳ್ಳಬೇಕು.

[illegible]
[illegible]

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆಗೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	३-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ತಾರೀಖು ೮-೮-೧೯೩೧ನೇ ಇಸ್ವಿ

ಎರಡನೇ ರೌಂಡ ಟೇಬಲಿನ ಪ್ರತಿನಿಧಿಗಳು.

—(೦)—

ಹಿಂದುಸ್ಥಾನ ಮತ್ತು ಇಂಗ್ಲಂಡ ಸರಕಾರದವರು ಸೇರಿ, ಹಳೇ ರೌಂಡ ಹಾಗು ಮುಂದಿನ ಹೊಸ ರೌಂಡಟೇಬಲಿನ ಪ್ರತಿನಿಧಿಗಳ ಹೆಸರುಗಳನ್ನು ಪ್ರಸಿದ್ಧ ಮಾಡಿದ್ದಾರೆ. ಹಿಂದಿನ ಪರಿಷತ್ತಿನಲ್ಲಿ ೮೯ ಪ್ರತಿನಿಧಿಗಳಿದ್ದರು. ಈ ಸಾರೆ ಅವರು ೧೦೩ ಆಗುತ್ತಾರೆ. ಸಂಸ್ಥಾನಿಕರು, ಹಿಂದೂ, ಮುಸಲಮಾನ, ಕ್ರಿಶ್ಚನ್ನ ಮತ್ತು ಬ್ರಿಟಿಶ ಜನರಲ್ಲಿ ಇಷ್ಟು ಜನರನ್ನು ನೇಮಿಸಿದ್ದಾರೆ ಆದರೆ ಶೀಖರಲ್ಲಿ ಒಬ್ಬರನ್ನೂ ನೇಮಿಸಿಲ್ಲ. ಇವರಲ್ಲಿ ಒಕ್ಕಟ್ಟಿರದ್ದೇ ಕಾರಣವೆಂದು ನೆವನ ಹೇಳುವರು. ಇಂಗ್ಲಂಡದಲ್ಲಿ ಸರ ಸಾಯಮನ್ನ ಸಾಹೇಬರನ್ನು ಕಮೀಶದಲ್ಲಿ ತೂಗಿಸಬೇಕೆಂದು ಕಾನ್ಸರವೇಟಿವ್ಹರು ವಿಶ್ವಪ್ರಯತ್ನ ಮಾಡಿದರು. ಇಂದಿಗೂ ಪರಿಷತ್ತನ್ನು ಮುರಿದು ಹಾಕುವ ಭಯ ತೋರಿಸುತ್ತಿದ್ದಾರೆ, ಆದರೂ ಮಂತ್ರಿಗಳು ಇವರನ್ನು ಸೇರಿಸಿಕೊಳ್ಳಲಿಲ್ಲ. ಇಂಗ್ಲಂಡದಲ್ಲಿ ತೋರಿಸಿದಂಥ ಧೈರ್ಯವನ್ನು ಹಿಂದುಸ್ಥಾನದಲ್ಲಿ ತೋರಿಸಲಿಲ್ಲ. ಡಾಕ್ಟರ ಅನಸಾರಿ ಮತ್ತು ಸರ ಅಲ್ಲಿ ಇಮಾಮರನ್ನು ಕರೆದರೆ- ನಾವು ಬರುವದಿಲ್ಲೆಂದು ಥವರ್ಾಂಥ ಮುಸಲಮಾನರು ಸರಕಾರಕ್ಕೆ ಭಯ ಹಾಕಿದರು. ಅದಕ್ಕೆ ರಾಜ್ಯಕರ್ತರು ಪೂರಾ ಹೆಳೆದರೂಗಿದಂತೆ ಅಂದರೆ- ಆ ಮುಸಲಮಾನರಿಗೆ ಹೆದರಿದಂತೆ ಸ್ಪಷ್ಟವಾಗಿ ಕಂಡು ಬಂದಿದೆ. ಡಾಕ್ಟರ ಅನಸಾರಿಯವರಿಗೆ ಆಮಂತ್ರಣ ಕೊಡಲೇ ಇಲ್ಲ. ಸರ ಅಲ್ಲಿ ಇಮಾಮರಿಗೊಬ್ಬರಿಗೆ ಕೊಟ್ಟಿದ್ದಾರೆ. ಈ ರಾಷ್ಟ್ರೀಯ ಮುಸಲಮಾನರಿಗೆ ವಿರುದ್ಧವಾಗಿ ಮಾ. ಶೌಕತಲ್ಲಿಯವರ ಪಕ್ಷದ ನಾಲ್ವರನ್ನು ನೇಮಿಸಿದ್ದಾರೆ. ತಮಗೆ ಅನುಕೂಲವಾಗುವಂಥ ಮುಸಲಮಾನರ ಸಂಖ್ಯೆ ಬೆಳೆಯಿಸಿದಂತೆ, ಉಳಿದವರ ಸಂಖ್ಯೆಯನ್ನೂ ಹೆಚ್ಚಿಸಿದ್ದಾರೆ ಕೂಲಿಕಾರರ ಹಿತ ಸಂಬಂಧಗಳನ್ನು ತೀವ್ರತೆ ಮತ್ತು ತೀಕ್ಷ್ಣತೆಯಿಂದ ನೋಡಿಕೊಳ್ಳುವರು ದಿವಾನ ಚಮನಲಾಲರೆಂದು ಜಗತ್ಪ್ರಸಿದ್ಧವಾದದ್ದು ಇವರನ್ನು ಬಿಟ್ಟು ಮವಾಳಕರ ಶ್ರೀ. ಗಿರಿಯವರನ್ನು ನೇಮಿಸಿದ್ದಾರೆ. ಸರ ಪೆನ್ನಜಿ ಜೆನ್ನವಾಲಾ ಇವರ ಗೆಸೆಯಿಂದ ಲೋಕವ, ತನ್ನ ಏನು ಅನುಕೂಲವಿಲ್ಲ. ವ್ಯಾಪಾರಿ ವರ್ಗದಲ್ಲಿ ಕಲಕತ್ತೆಯ ಶ್ರೀ. ಬಿರ್ಲಾ ಮತ್ತು ಮಿ. ಜಾನ ಮಥಾಯರನ್ನು ಪೂರಾ ತೂರಿಸಿದ್ದಾರೆ. ಸ್ತ್ರೀಯರಲ್ಲಿ ದೇವಿ ಸರೋಜಿನಿಯವರನ್ನು ಗೊತ್ತು ಮಾಡಿದ್ದು ಎಲ್ಲರಿಗೂ ಸಮ್ಮತವಾಗಿರುತ್ತದೆ. ದಾಂಡಿಯಲ್ಲಿ ಇವರನ್ನು ಹಿಡಿಯುವಾಗ- ಪೋಲಿಸ ಅಧಿಕಾರಿಗಳು- ತುರಂಗವು ನಿಮ್ಮ ಸ್ಥಳವಲ್ಲ. ರೌಂಡ ಟೇಬಲವೇ ಯೋಗ್ಯಸ್ಥಳವೆಂದಿದ್ದರು. ಆ ಸ್ಥಳವು ಈಗ ಇವರಿಗೆ ದೊರೆತಂತಾಯಿತು. ಕೇವಲೊಂದು ಧ್ಯೇಯಕ್ಕಾಗಿಯೇ ಪಂಡಿತ ಮಾಲವಿಯಾ ಮೊದಲಾದವರು ಸರಕಾರದ ಹಿಂದಿನ ಆಮಂತ್ರಣ ಸ್ವೀಕಾರ ಮಾಡಲಿಲ್ಲ. ಮಹಾತ್ಮರು ಇವತ್ತಿಗೂ ಮನೆಗೆದ್ದು ಮಾರು ಗೆಲಿಯುವದೆಂದಿದ್ದಾರೆ. ಸ್ಥಾನಿಕ ಅಧಿಕಾರಿಗಳು ಜನರಿಗೆ ಕೊಡುತ್ತಿರುವ ಕೀಟಲೆ ಕೋಪದ್ರವಗಳನ್ನೇ ನಿಲ್ಲಿಸಲಾರರೆಂದ ಬಳಿಕ, ರೌಂಡ ಟೇಬಲಿನಲ್ಲಿ ದೊಡ್ಡ ದೊಡ್ಡ ಸ್ವಾತಂತ್ರ್ಯ ಕೊಡುವರೇನೆಂದು ಮಹಾತ್ಮರು ಸಂಶಯ ತಳೆದ್ದಿದ್ದರೆ, ಆಶ್ಚರ್ಯವೇನು? ಕಿರು ಕೆ ಮಾತುಗಳಿಗೆ ಮಹತ್ವ ಕೊಡಬೇಡಿರಿ. ಲಂಡನಕ್ಕೆ ಅವಶ್ಯವಾಗಿ ಬನ್ನಿರೆಂದು ಪಂ. ಅಂಡ್ರ್ಯೂಜ ಮತ್ತು ಮಿ ಪೋಲಾಕ ಸಾಹೇಬರು ಒಂದು ದೊಡ್ಡ ತಾರನ್ನು ಮಹಾತ್ಮರಿಗೆ ಕಳಿಸಿದ್ದಾರೆ. ಅದರ ಒಳ್ಳೇ ಪರಿಣಾಮವು ಇವರ ಮೇಲಾಗಿದೆಂದು ಹೇಳುವರು. ಒಟ್ಟಿನಿಂದ ನೋಡಿದರೆ- ಸರಕಾರ ಪಕ್ಷಕ್ಕೆ ಅನುಕೂಲರಾಗಿರುವಂಥ ಮೌಲಾನಾ ಶೌಕತಲ್ಲಿಯವರ ಬಣಕ್ಕೇ ಅನುಕೂಲವಾಗುವಂಥ ಮುಸಲಮಾನರ ಸಂಖ್ಯೆಯೇ ದೊಡ್ಡದಾಗಿದ್ದು, ಕಾಂಗ್ರೆಸದವರ ಜನವು ತೀರ ಕುಸುವಾಗುತ್ತದೆ ಆದರೂ ಮಹಾತ್ಮರು ಬ್ರಿಟಿಶ ತೇಜಿಸೀ ಒಲವೆಂಬ ಆತ್ಮ ತೇಜದಿಂದ ಅಲ್ಲಿ ಹೋರಾಡುವರಾದ್ದರಿಂದ ಅವರ ಮಾತಿಗೇ ಅಗ್ರಮಾನದೊರೆಯುವದೆಂದು ಭಾವಿಸಬೇಕು.

ಪಾರ್ಲಮೆಂಟದ ಮೆಂಬರರು ದಂಡ ಕೊಡದೆ ತುರಂಗಕ್ಕೆ ಹೋದರು.

—(೦)—

ಒಂದು ತಿಂಗಳ ಹಿಂದೆ ಪಾರ್ಲಮೆಂಟ ಸಭೆಯಲ್ಲಿ ಗೊಂದಲ ಹಾಕಿದ್ದ ಮ್ಯಾಕಗೋವ್ಹರ್ನ ಸಾಹೇಬರು ಕಾಯದೆ ಪ್ರಕಾರ ಪರವಾನಗಿ ಪಡೆ ಕೊಳ್ಳದೆ, ಗ್ಲಾಸಗೋದಲ್ಲಿ ವ್ಯಾಖ್ಯಾನ ಕೊಟ್ಟರು. ಈ ಅಪರಾಧಕ್ಕಾಗಿ ಮ್ಯಾಜಿಸ್ಟ್ರೇಟರು ಇವರಿಗೆ ಮೂರು ಪವಂಡು ದಂಡ ಇಲ್ಲವೆ ೨೦ ದಿವಸ ಸಾದಾ ಕೈದಿನ ಶಿಕ್ಷೆ ವಿಧಿಸಿದರು. ಸಾಹೇಬರು ದಂಡ ಕೊಡದೆ, ಕಾಯದೆಭಂಗ ಮಾಡಿ, ತುರಂಗಕ್ಕೆ ಹೋದರು.

ಬಾಗಲಕೋಟೆಯು ಕಾಂಗ್ರೆಸದ ದಂಡಿನ ಕಾಲೇಜವಾಗಬೇಕು.

....(೦)....

ಹಿಂದುಸ್ಥಾನದ ಸರ್ವಸೇನಾಧ್ಯಕ್ಷ ಫೀಲ್ಡ ಸರ ಚೇಟವುಡ್ಡ ಸಾಹೇಬರು ಪುಣೆಗೆ ಬಂದು ಅಲ್ಲಿ ಲಷ್ಕರೀ ಕಾಲೇಜನ್ನು ಸ್ಥಾಪಿಸಬಹುದೇ ಹೇಗೆಂದು ನೋಡಿಕೊಂಡು ಹೋದರು. ಇಂಗ್ರೇಜಿ ಕಾಲೇಜವೆಲ್ಲಿಯೇ ಆಗಲಿ, ಕಾಂಗ್ರೆಸದ ಹಿಂದುಸ್ಥಾನಿ ಸೇವಾದಳವನ್ನು ಸಿದ್ಧ ಮಾಡುವ ಕಾಲೇಜವು ಬಾಗಲಕೋಟೆಯಲ್ಲಾಗಬೇಕೆಂದು ಅಲ್ಲಿಯವರು ಅಪೇಕ್ಷಿಸಿದಾರೆ. ಹೋದ ೧ನೆಯ ತಾರೀಖಿನ ದಿವಸ ಅಲ್ಲಿನ ವ್ಯಾಯಾಮ ಮಂದಿರದ ತೃತೀಯ ವಾರ್ಷಿಕ ಸಭೆಯಲ್ಲಿ "ಕರ್ನಾಟಕವು ಈ ಸೇವಾದಳದ ವ್ಯಾಯಾಮ ಮಂದಿರಕ್ಕೆ ಮನಃಪೂರ್ವಕ ಸಹಾಯ ಮಾಡಬೇಕೆಂದೂ, ಕಾಂಗ್ರೆಸ ವರ್ಕಿಂಗ ಕಮೀಟಿಯವರು ಬಾಗಲಕೋಟೆಯನ್ನು ಕಾಂಗ್ರೆಸದ ಸ್ಯಾಂಡಹರ್ಸ್ಟ ಕಾಲೇಜದ ಕೇಂದ್ರ ಮಾಡುವಂತೆಯೂ ಡಾಕ್ಟರ ಹರ್ಡೀಕರರು ಮುನ್ನಡೆಸಿಕೊಳ್ಳಬೇಕೆಂದೂ" ಠರಾವು ಮಾಡಿದ್ದಾರೆ.

ಸರಹದ್ದಿನಲ್ಲಿ ಪೋಲಿಸ ಮತ್ತು ಜಿಲ್ಹಾಧಿಕಾರಿಗಳ ಜುಲುಮ

—(೦)—

ಕಾಂಗ್ರೆಸದವರ ನಗಾರಿ ಸಹ ಹರಿದರು

....(೦)....

ಖುದಾಯಿ ಖಿದಮತಗಾರರೆಂದರೆ- ಕೆಂಪಂಗಿಯ ಸ್ವಯಂಸೇವಕರು ಮಿ ಸೈಫುಲ ಮಲಿಕಖಾನರ ನೇತೃತ್ವದಲ್ಲಿ ಕ್ಯಾಂಬೆಲಪೂರ ಜಿಲ್ಹೆಗೆ ಸೇರಿದ ಬಾಕಪೆಂಬ ಗ್ರಾಮಕ್ಕೆ ಕಾಂಗ್ರೆಸದ ಪ್ರಚಾರ ಮಾಡಲಿಕ್ಕೆ ಹೋದರು ಆವರೆ ಕಲೆಕ್ಟರ ಮತ್ತು ಪೋಲಿಸಸಾಹೇಬರು ಪೋಲಿಸ ಪಡೆಯೊಂದಿಗೆ ಇವರನ್ನು ದಾರಿಯಲ್ಲಿಯೇ ತರುಬಿ, ಮುಂದೆ ಹೋಗದಂತೆ ೧೪೪ ಕಲಮಿನ ಹುಕುಮು ಕೊಟ್ಟರು. ಕಾಂಗ್ರೆಸಿನವರು ಈ ಹುಕುಮನ್ನು ಮನ್ನಿಸದಾಗಲು ಸಾಹೇಬರು ಪೋಲಿಸರನ್ನು ಹಚ್ಚಿ, ಇವರನ್ನು ದಿಕ್ಕಾಪಾಲು ಮಾಡಿದರು. ಆ ಗಲಭೆಯಲ್ಲಿ ಅನೇಕ ಸ್ವಯಂಸೇವಕರು ಪೆಟ್ಟು ತಿಂದು ಘಾಯವಾದರು. ಪೋಲಿಸರು ಸ್ವಯಂಸೇವಕರ ಸಭೆ ಕರೆಯುವ ನಗಾರಿಯನ್ನೂ ಹರಿದು, ಸ್ವಸಾಮರ್ಥ್ಯ ತೋರಿಸಿದರು.

ಶ್ರೀ ಜೋಗ ವಿಶ್ವನಾಥರಾಯರ ಠರಾವನ್ನು ಸಂಪೂರ್ಣವಾಗಿ ವಿಚಾರ ಮಾಡುತ್ತೇವೆಂದು ಸರಕಾರದವರು ಆಶ್ವಾಸನ ಕೊಟ್ಟ ಮೂಲಕ ಇವರು ಆ ಠರಾವನ್ನು ತಿರುಗಿ ತಕ್ಕೊಂಡರು.

ಕ. ಪ್ರಾಂ. ಕಾಂಗ್ರೆಸ ಕಮಿಟಿಯ ಕಾರ್ಯಕಾರೀ ಮಂಡಲದ ಸಭೆಯು

....)(—(o)—)(

(ಧಾರವಾಡ ತಾ. ೪-೮-೧೯೪೧ ಸಂಜೆಯ ೪ ಘಂಟೆ)

ಈ ಸಭೆಗೆ ಶ್ರೀಯುತರಾದ ೧) ಸದಾಶಿವರಾವ ಕರ್ನಾಡ. ೨) ರಾ. ಶ್ರೀ. ಹುಕ್ಕೇರಿಕರ, ೩) ಟೇಕೂರ ಸುಬ್ರಹ್ಮಣ್ಯಂ. ೪) ರಾಮನಾಯ್ಕ ಬಾಸ್ಕೇಡ, ೫) ರಂಗನಾಥ ದಿವಾಕರ, ೬) ರಾ. ಕೃ. ಶೆಟ್ಟಿ, ಸಾ. ಗು. ಜೋಶಿ, ೮) ಹ. ಶಿ. ರಾಜಲಿಗಿಯವರು ಬಂದಿದ್ದರು.

ಆಗ ಸರ್ವಾನುಮತದಿಂದ ಗೊತ್ತಾದ ನಿರ್ಣಯಗಳೇನಂದರೆ:—

೧) ನಿರಲಸವಾಗಿ ರಾಷ್ಟ್ರಕಾರ್ಯವನ್ನು ಮಾಡುತ್ತಿದ್ದ ಮತ್ತು ಪೋನ್ನಿನ ಸತ್ಯಾಗ್ರಹ ಸಮರದಲ್ಲಿ ವೀರರಂತೆ ಹೋರಾಡಿ ಕಾರಾಗೃಹ ವಾಸವನ್ನು ಭೋಗಿಸಿದ ಕ. ಪ್ರಾಂ. ಕಾಂ. ಕಮಿಟಿಯ ಸಭಾಸದರಾದ ಶ್ರೀ. ಹಣಮಂತರಾವ ನಾಯಿಕ ಸಂಡಗಡ ಮತ್ತು ಶ್ರೀ. ದಾಮೂ ಅಣ್ಣಾ ಕೇಂಗಡೆ ಇವರ ಅಕಾಲಿಕ ನಿಧನದ ಬಗ್ಗೆ ಈ ಸಭೆಯು ವಿಷಾದವನ್ನು ವ್ಯಕ್ತಪಡಿಸುವದು. ಮತ್ತು ಅವರ ಆತ್ಮಕ್ಕೆ ಶಾಂತಿಯು ದೊರೆಯಲೆಂದು ದೇವರನ್ನು ಪ್ರಾರ್ಥಿಸುವದು.

೨) ಮುಂಬಯಿ ಗವರ್ನರರಾದ ಹಾಟಸನ್ ಸಾಹೇಬರನ್ನು ಕೊಲ್ಲುವ ಪ್ರಯತ್ನ ಮತ್ತು ಅದೇ ಬಗೆಯ ಅತ್ಯಾಚಾರಗಳನ್ನು ಈ ಸಭೆಯು ನಿಸ್ಸಂದಿಗ್ಧವಾಗಿ ನಿಷೇಧಿಸುವದು ಮತ್ತು ಈ ಬಗೆಯ ಕೃತ್ಯಗಳಿಂದ ರಾಷ್ಟ್ರಕಾರ್ಯಕ್ಕೆ ಕುಂದು ಬರುವದೆಂದು ಅಭಿಪ್ರಾಯ ಪಡುವದು.

೩) ಕರ್ನಾಟಕದಲ್ಲಿ ಅಸ್ಪೃಶ್ಯನಿವಾರಣೆಯನ್ನು ಹೇಗೆ ಹಾಗೂ ಎಷ್ಟರ ಮಟ್ಟಿಗೆ ಮುಂದುವರಿಸ ಬಹುದೆಂಬುದನ್ನು ಶ್ರೀ. ದಿವಾಕರರು ವಿಚಾರಿಸಿ, ಆ ಬಗ್ಗೆ ವೆಚ್ಚದ ಪಟ್ಟಿಯನ್ನಾದರೂ ಬರುವ ಕೌನ್ಸಿಲಿನಲ್ಲಿ ಸಭೆಯ ಮುಂದೆ ಇಡಬೇಕೆಂದು ಈ ಸಭೆಯು ಅವರಿಗೆ ವಿನಂತಿ ಮಾಡಿಕೊಳ್ಳುತ್ತದೆ.

೪) ರಾಷ್ಟ್ರೀಯ ಸಭೆಯ ಕಾರ್ಯಕಾರೀ ಮಂಡಲದವರು ಹಿಂದುಸ್ತಾನೀ ಸೇವಾದಲದ ಬಗ್ಗೆ ಜುಲೈ ೬ನೇ ತಾರೀಖಿನ ಅಧಿವೇಶನದಲ್ಲಿ ಮಾಡಿದ ಗೊತ್ತುವಳಿಯನ್ನು ಈ ಸಭೆಯು ಆನಂದದಿಂದ ಸ್ವೀಕರಿಸುತ್ತದೆ. ಮತ್ತು ತನ್ನ ಗೊತ್ತುವಳಿಯಿಂದ ಹಿಂ. ಸೇ. ದಲದವರು ಇದು ವರೆಗೆ ಮಾಡಿದ ಸೇವೆಯನ್ನು ಸಾರ್ಥಕಗೊಳಿಸಿದ್ದಕ್ಕಾಗಿಯೂ ಕರ್ನಾಟಕವನ್ನೇ ಸೇವಾದಲದ ಮುಖ್ಯ ಕಾರ್ಯಕ್ಷೇತ್ರವನ್ನು ಮಾಡಿದುದಕ್ಕಾಗಿಯೂ ಕಾರ್ಯಕಾರೀ ಮಂಡಲಕ್ಕೆ ಈ ಸಭೆಯು ಧನ್ಯವಾದಗಳನ್ನು ಅರ್ಪಿಸುತ್ತದೆ. ಅದೇ ಕಾಲಕ್ಕೆ ಪೂರ್ವದಂತೆ ಸೇವಾದಲದ ಕಾರ್ಯದಲ್ಲಿ ಸಹಕರಿಸಲು ಸಿದ್ಧವಿದ್ದೇವೆಂದೂ ಹೇಳುತ್ತಿದೆ.

ಹೀಗೆ ಕಾಂಗ್ರೆಸ ಕಾರ್ಯಕಾರೀ ಮಂಡಲದ ನಿರ್ಣಯವನ್ನು ಸ್ವೀಕರಿಸುವಾಗ ಈ ಸಭೆಯು ಅದಕ್ಕೆ ಕೆಳಗೆ ಕಂಡಂತೆ ಸೂಚನೆಗಳನ್ನಾದರೂ ಮಾಡುತ್ತದೆ—

ಅ) ಹಿ. ಸೇ. ದಲದ ಬಗ್ಗೆ ಕಾರ್ಯಕಾರೀ ಮಂಡಲದವರು ನೇಮಿಸಿದ ಮುಖ್ಯವಾದ ಇಬ್ಬರು ಅಧಿಕಾರಿಗಳನ್ನು ಕನಿಷ್ಟ ೫ ವರ್ಷಗಳವರೆಗಾದರೂ ಬದಲು ಬದಲು ಮಾಡಬಾರದು.

ಆ) ಕಾರ್ಯಕಾರೀ ಮಂಡಲದವರು ಮನ್ನಣೆ ಕೊಡದ ಯಾವ ಸ್ವಯಂಸೇವಕ ಸಂಘವಾದರೂ ಜಾತಿತತ್ವವನ್ನು ಅವಲಂಬಿಸಿರಬಾರದು; ಹಾಗೂ ಕಾಂಗ್ರೆಸ ಧ್ಯೇಯ ಮತ್ತು ಕಾರ್ಯಕ್ರಮಕ್ಕೆ ವಿರುದ್ಧವಾಗಿ ವರ್ತಿಸಬಾರದು.

೫) ಪುಣೆಯ ಟಿಳಕ ಸ್ಮಾರಕ ನಿಧಿಯಿಂದ ಕರ್ನಾಟಕ ಪ್ರಾಂತಕ್ಕೆ ಸಿಗಬಹುದಾದ ಸುಮಾರು ೧೨೦೦ ರೂಪಾಯಿಗಳನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಗೆ ಒಪ್ಪಿಸಿ ಅದರ ಮುಖಾಂತರವಾಗಿಯೇ ವೆಚ್ಚ ಮಾಡಬೇಕೆಂದು ಕರ್ನಾಟಕ ಟಿಳಕ ಸ್ಮಾರಕ ನಿಧಿಯ ಟ್ರಸ್ಟೀಯವರಿಗೆ ಈ ಸಭೆಯು ಬಿನ್ನವಿಸುತ್ತದೆ.

೬) ಕರ್ನಾಟಕದಲ್ಲಿ ಮದ್ಯಪಾನ ಪ್ರತಿಬಂಧಕ ಕಾರ್ಯದ ಬಗ್ಗೆ ಮುದ್ರಣ ಮುಂತಾದ ವೆಚ್ಚಕ್ಕಾಗಿ ಈ ಸಭೆಯು ೫೫ ರೂಪಾಯಿಗಳನ್ನು ಮಂಜೂರು ಮಾಡುತ್ತದೆ.

೭) ಆಯಾ ಜಿಲ್ಲೆಗಳಲ್ಲಿ ನಡೆದ ಕಾಂಗ್ರೆಸ್‌ಕಾರ್ಯ ಮತ್ತು ಇನ್ನಿತರ ಸಂಗತಿಗಳನ್ನು ಒಳಗೊಂಡ ಒಂದು ಪತ್ರಿಕೆಯನ್ನು ಕ. ಪ್ರಾಂ. ಕಾಂ. ಕಮಿಟಿಯ ಕಾರ್ಯಾಲಯದವರು ಪ್ರತಿ ತಿಂಗಳು (ಸದ್ಯಕ್ಕೆ ಮೂರು ತಿಂಗಳ ಮಟ್ಟಿಗೆ) ಹೊರಡಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.

೮) ಮೈಸೂರ ಸಂಸ್ಥಾನದಲ್ಲಿ ರಾಷ್ಟ್ರಧ್ವಜದ ಬಗ್ಗೆಯೂ ಸ್ವಯಂಸೇವಕರ ಬಗ್ಗೆಯೂ ತೆಗೆದ ದಬ್ಬಾಳಿಕೆಯ ಹುಕುಮುಗಳನ್ನು ಈ ಸಭೆಯು ನಿಷೇಧಿಸುತ್ತದೆ; ಬನ್ನಿ ಮಿಲ್ಲಿನ ಕೂಲಿಕಾರರ ಮೇಲೆ ೧೮-೭-೪೧ ನೇ ದಿವ ಮಾಡಿದ ಗೋಳೀಬಾರನ್ನು ಈ ಸಭೆಯು ನಿಷೇಧಿಸುತ್ತದೆ. ಅದೇ ರೀತಿ ಶಿಕಾರಪುರ ತಾಲೂಕಿನಲ್ಲಿಯ ಶಿರಾಳಕೊಪ್ಪ ಮುಂತಾದ ಹಳ್ಳಿಗಳ ರೈತರ ಮೇಲೆ ನಡೆಸಿದ ಅತಿಕ್ರಮಗಳನ್ನು ನಿಷೇಧಿಸುವದಲ್ಲದೆ ಆ ರೈತರ ಆರ್ಥಿಕ ಕಷ್ಟಗಳ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ

೯) ಪ್ರಾಂತಿಕ ಸರಕಾರದವರು ಒಪ್ಪಂದದ ಶರ್ತುಗಳನ್ನು ಸಂಪೂರ್ಣ ಹಾಗೂ ಸರಿಯಾಗಿ ಅಮಲಿನಲ್ಲಿ ತಂದಿಲ್ಲವೆಂದು ಈ ಸಭೆಯ ಅಭಿಪ್ರಾಯವಿದೆ. ಆದ್ದರಿಂದ ಈ ಶರ್ತುಗಳನ್ನು ಅಕ್ಷರಶಃ ಹಾಗೂ ಆ ಒಪ್ಪಂದವನ್ನು ಮಾಡುವಾಗಿನ ಭಾವನೆಯಂತೆ ದೇಶದ ಎಲ್ಲ ಪ್ರಾಂತಗಳಲ್ಲಿಯೂ ಸರಕಾರದವರು ಅಮಲಿನಲ್ಲಿ ತರುವವರೆಗೆ ವರ್ತುಲ ಪರಿಷತ್ತಿಗೆ ಹೋಗುವದು ಹಿತಕರವೂ ಫಲಕಾರಿಯೂ ಆಗಲಾರದೆಂದು ಈ ಸಭೆಯ ಮತವುಂಟು.

೧೦ ಶ್ರೀ ದಿವಾಕರರು ಕ. ಪ್ರಾ. ಕಾಂ. ಕಮಿಟಿಯ ಕಾರ್ಯದರ್ಶಿಯ ಪದಕ್ಕೆ ಕೊಟ್ಟ ರಾಜೀನಾಮೆಯನ್ನು ಸ್ವೀಕರಿಸಿ, ಅವರ ಸ್ಥಳದಲ್ಲಿ ಮಂಗಳೂರಿನ ಶ್ರೀ ರಂಗಯ್ಯ ಬಾಳಿಗಾರ ಇವರು ರಾಜೀನಾಮೆ ಕೊಟ್ಟ ಬಗ್ಗೆ ಮಂಗಳೂರ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಆರಿಸಿದ ಶ್ರೀ ಬಿ ಕ ಭಂಡಾರಿಯವರನ್ನು ಕಾರ್ಯದರ್ಶಿಗಳನ್ನಾಗಿ ನೇಮಿಸುತ್ತದೆ.

ಕರ್ನಾಟಕದಲ್ಲಿ ಕಾಂಗ್ರೆಸಕಾರ್ಯವು ಅವ್ಯಾಹತವಾಗಿ ನಡೆಬೇಕಾದರೆ ಕಾಂಗ್ರೆಸದ ಅಭಿಮಾನಿಗಳು ೩೦೦ ರೂ. ಮೀರಿದ ತಮ್ಮ ವಾರ್ಷಿಕ ಉತ್ಪನ್ನದಲ್ಲಿ ೧೦೦ಕ್ಕೆ ೧ರಂತೆ ಕಾಂಗ್ರೆಸ ನಿಧಿಗೆ ಕರವನ್ನು ಕೊಡಬೇಕೆಂದೂ ಮತ್ತು ಈ ನಿರ್ಣಯವನ್ನು ಎಲ್ಲ ಕಾಂಗ್ರೆಸ್ ಕಮಿಟಿಗಳು ಕೂಡಲೇ ಕಡ್ಡಾಯವಾಗಿ ಅಮಲಿನಲ್ಲಿ ತರಬೇಕೆಂದೂ ನಿರ್ಣಯವಾಯಿತು.

ಧಾರವಾಡ — ಸದಾಶಿವರಾವ ಕರ್ನಾಡ

೪-೮-೧೯೪೧ — ಅಧ್ಯಕ್ಷರು

ಬ್ಯಾಡಗಿಯ ಪತ್ರ

—(o)—

ನಮ್ಮಲ್ಲಿಯ ಶ್ರೀ ಶಿವಯೋಗೀಶ್ವರ [illegible]
ಕೃಪೆ ಬೋರ್ಡಿಂಗಿನ ೬ ನೆಯ ವರ್ಷದ ಸಭೆ.
ಶ್ರೀ ಲಿಂಗರಾಜ ವಾಚನಾಲಯದ ೧೦ ನೆಯ ವ
ರ್ಷದ ಸಭೆಯೂ ಬರುವ ಶ್ರಾವಣ ಶುದ್ಧ ಬುಧ
ದಿವಸ ಸಾಯಂಕಾಲ ೫ ಕ್ಕೆ ಶ್ರೀಮಂ[illegible]
ಬುಳ್ಳಪ್ಪ ಒಗನಂತರಾವ ಮಾ[illegible] ಅಧ್ಯ
ಸಂಸ್ಥಾನ ಹಿಂದಿಗನೂರ [illegible]
ಕ್ಷತೆಯಲ್ಲಿ ನೆರವೇರಿಸಲ್ಪ[illegible]
ಸರ್ವರೂ ಆಗ[illegible]
ಶೋಭೆ

ಈ ಸವ್ಣೂರದಲ್ಲಿ ಹಗಲು ಹಾಡೇ ಮೂವರು ತ ಸ್ಕರರು ಒಂದು ಅಂಗಡಿಯಲ್ಲಿ ರಗವು ತಕ್ಕೊಂಡ ದೀವಾನನ ಕಲ್ಯಾಳ್ಲಿಯ ಥೈಲಿಯನ್ನು ಕಸಕೊ ಳ್ಳಲೆತ್ನಿಸಿದರು. ಆಗ ಇಬ್ಬರು ದಿವಾನನನ್ನು ಬಿಡಿ ಸಿಕೊಳ್ಳಲಿಕ್ಕೆ ಬರಲು- ತರುಣರು ಗುಂಡು ಹಾರಿ ಸಿ ಅವರನ್ನು ಘಾಯಪಡಿಸಿದರು. ಬೀದಿಯಲ್ಲಿ ಜನ ಕೂಡಿದಲು- ಇಬ್ಬರು ಪಲಾಯನ ಹೇಳಿಸಿದರು. ಮೂರನೆಯವನು ಸಿಕ್ಕನು ವೈಘ್ನಾತಿ ಮಾಡಿ- ದಾಗ, ಅವನ ಟೊಂಕದಲ್ಲಿ ಇನ್ನೊಂದು [illegible] ಬ್ಲುರ ದೊರೆಟಿತು.

ಧಾರವಾಡ

ಇಲ್ಲೆರಡು ದಿವಸ ಜಡಿಮಳೆ ಹತ್ತಿತ್ತು. ಆದರೆ ಸ್ಥಿರ [illegible] ಇಲ್ಲ ನಿನ್ನೆ ಸಾಯಂಕಾಲದಿಂದ ಮಳೆಯು ಹೋಗಿದೆ.

ನೋಟೀಸ

ಶಿವಪ್ಪ ತಂದಿ ಧರಮಪ್ಪ ಸುಣಗಾರ ಸಾ॥ ಹೊಸೂರ ತಾ॥ ಕಲಘಟಗಿ ಇವನಿಗೆ-

ಕೆಳಗೆ ಹೆಬ್ಬೆಟ್ಟಿನ ಗುರುತಾ ಮಾಡುವ ನಾ ಗವ್ವಾ ಕೋಂ ಶಿವಪ್ಪ ಸುಣಗಾರ ಸಾ॥ ಹೊಸೂರ ನಾನು ನಿನಗೆ ತಿಳಿಸುವದೇನಂದರೆ. ನೀನು ನನ್ನ ಲಗ್ನದ ಗಂಡನಿದ್ದು ನನ್ನನ್ನು ಬಿಟ್ಟಿರುತ್ತೀ. ಈ [illegible] ನೋಟೀಸು ನಿನಗೆ ವಿಜಯ ಪತ್ರ ದಲ್ಲಿ ೧೯೩೦ ನೇ ಇಸ್ವಿಯ ಅಕ್ಟೋಬರ ೭ನೇ ತಾರೀಖಿನ ಪತ್ರಿಕೆಯಲ್ಲಿ ಕೊಟ್ಟಿದ್ದೆನು ಅದರಂತೆ ನೀನು ನಡೆಸಲಿಲ್ಲ. ಮತ್ತು ನಾನು [illegible] ಸಂಬಾ ಮಾಡಿದ್ದನ್ನು [illegible] ಹೋಗಲಿಲ್ಲ. ನೀನು ಕರಕೊಂಡು ಹೋ [illegible] ಅಲ್ಲಿಯವರೆಗೂ [illegible] ನಿನ್ನ ಹೆಸರಿನ ಮೇಲೆ [illegible]. ನೀನು [illegible] ಭರವಸೆ [illegible] ಕಾರಣ [illegible] ನೋಟೀಸು ಕೊಡುವ [illegible] ಈಗ ನಾನು ನಿನ್ನ ದಕಿಂದ ಭರವಸೆ ಮಾಡಿ [illegible] ನನ್ನ ಹೆಬ್ಬೆಟ್ಟ [illegible] ನನಗೆ [illegible] ನೂರು ರೂಪಾಯಿ ಸಾಲವಾಗಿರುತ್ತದೆ ಮೊದಲಿಂದನ್ನು [illegible] ೨೦೦ ರೂಪಾಯಿ ಸಾಲವಾಗಿರುತ್ತದೆ. ಆದರೆ ಈಗ ನನಗೆ ಮುಂದೆ ಸಾಲ ಹುಟ್ಟವಲ್ಲದು ಮತ್ತು ಹಿಂದಿನ ಸಾಲಗಾರರ ಪಗಾರಿ ಬಹಳೇ [illegible] ಅದನ್ನು ಮುಟ್ಟಿಸದ ಹೊರತ ಗತ್ಯಂ ತರವಿಲ್ಲ. ಕಾರಣ ನಿನಗೆ ಈ ನೋಟೀಸಿನ ಮೂಲ ಕ ತಿಳಿಸುವದೇನಂದರೆ ನೀನು ಈ ನೋಟೀಸು ಮು ಟ್ಟಿದ [illegible] ದಿವಸಗಳಲ್ಲಿ ನಾನು ಮಾಡಿದ ಸಾಲಾ ೨೦೦ ರೂಪಾಯಿ ಮುಟ್ಟಿಸಿ ನನ್ನ ಸಂರಕ್ಷಿಸು ಬಗ್ಗೆ ನಾಲ್ಕು ಜನ ಸಂಭಾವಿತರ [illegible] ಕೊಟ್ಟು ಕರಕೊಂಡು ಹೋಗಬೇಕು [illegible] ತಪ್ಪಿದರೆ ನಾನು ನನ್ನ ಹಿಂದಿನ ಸಾಲದ [illegible] ಗಿಯೂ ಮತ್ತು ನನ್ನ ಮುಂದಿನ ಹೊಟ್ಟೆ [illegible] ಉಪಜೀವನದ [illegible] ಎಂದರೆ [illegible] ಉಪಶಿವನಾಗುವೆನು. ಅನಂತರ ನಿನ್ನದು ನನ್ನ ಮೇಲೂ ಮತ್ತು ನನ್ನ [illegible] ಗಂಡನ ಮೇಲೂ ಯಾವತರದ ಹಕ್ಕು ಉಳಿಯುವದಿಲ್ಲ. ನನ್ನ ನಿನ್ನ ನಂಟ ಹೆಂಡರೆಂಬ ಹಕ್ಕು ಇರುವದಿಲ್ಲ. ಇದೇ ನೋಟ ಪತ್ರ ಅಂತಾ ತಿಳಿಯಬೇಕು. ಅಂತಾ ಕೊಟ್ಟ ನೋಟೀಸು ತಾ॥ ೭-೮-೧೯೩೧ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರುತಾ ನಾಗವ್ವಾ ಕೋಂ ಶಿವಪ್ಪ ಸುಣಗಾರ ಸಾ॥ ಹೊಸೂರ ತಾ॥ ಕಲಘಟಗಿ ಅಕ್ಷರ ಸ್ಥಿದು ಇರುತ್ತದೆ.

The Asian Life Assurance Co. Ltd
Bombay. Branch office Hubli

ಏಶಿಯನ್ ಲೈಫ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್ ಆಫೀಸ ಮುಂಬಯಿ)

ಅದರ ಮುಖ್ಯ [illegible] ಮರುಳಾಗ ಬೇಡಿರಿ. [illegible]
ವಿಮೆಯ [illegible] ,೦೦೦,೦೦೦ ರೂ. ೬೦೦,೦೦೦
ವಿಮೆಯ [illegible] ,೦೦,೦೦೦
ಜಿಂದಗಿ [illegible]

ಕರ್ನಾಟಕದಲ್ಲಿ [illegible] ಅಂದೇ ಪತ್ರ ಬರೆಯಿರಿ.

ಮೆಸರ್ಸ ರಾಮಚಂದ್ರ ಮತ್ತು ಕೆ. ಪ್ರಿ. ಹುಲಸೋಗಿ, ಬಿ. ಎ.
ಕುಲಕರ್ಣಿ, ಧಾರವಾಡದ ಏಜಂಟರು [illegible] ಬ್ರ್ಯಾಂಚ ಮ್ಯಾನೇಜರ
ಡಿ. ಎಚ್. ಪಾಟೀಲ ಹುಬ್ಬಳ್ಳಿಯ ಏಜಂಟರು-
[illegible] ಏಜಂಟರು ಶ್ರೀ. ಎಸ್. ಎಮ್. ದೊಡ್ಡಮನಿ ಮತ್ತು
ಶ್ರೀ ವಿ. ಡಿ. [illegible]

[illegible] ಬಂದಾಗ, [illegible]
[illegible] ಮಾಡುವ

ಒಂದೇ ಒಂದು ಉಪಾಯ

[illegible]

ಬಿಂದಾ [illegible]

(೯)

[illegible] ಹೊಸ [illegible] ಪತ್ರದ [illegible] ಕಳಿಸುವೆನು. [illegible] ಸ್ವೀಕಾರಮಾಡಿ [illegible] ಪ್ರೋತ್ಸಾಹಿಸಬೇಕೆಂದು ವಿನಂತಿಯು

ಈ ಪತ್ರವನ್ನು [illegible] ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. P. 1443.

ವಿಜಯ

ಸ್ಥಾಪಕರು: [illegible]

ವರ್ಷ ೧೨) ಧಾರವಾಡ ರವಿವಾರ ತಾರೀಖು ೭ ನೇ ಆಗಸ್ಟ್ [illegible] (ಸಂಚಿಕೆ [illegible]

ಜೋಶಿ, ಗುಂಜೀಕರ ಮತ್ತು ಕಂಪನಿ

ಶುಕ್ರವಾರಪೇಟೆ ಧಾರವಾಡ

ಇವರನ್ನು

[illegible] ಕಮರ್ಶಿಯಲ್ [illegible] ಕಂಪನಿ, ಲಿ.

ಇವರು

ಧಾರವಾಡ ಜಿಲ್ಲೆಯ

ಚೀಫ್ ಏಜಂಟ

ರಾಗಿ ನಿಯಮಿಸಿದ್ದಾರೆ.

ಈಗ ಜಿಲ್ಲೆಯ ಎಲ್ಲ ಮುಖ್ಯ ಸ್ಥಳಗಳಲ್ಲಿ

ಸಬ್ ಏಜಂಟ

ರನ್ನು ನಿಯಮಿಸುವದಿದೆ. ಈ ಕೆಲಸ ಮಾಡಬಲ್ಲವರು ತಮ್ಮ [illegible] ಬಗ್ಗೆ ಎಲ್ಲ ಮಾಹಿತಿ ಕೊಟ್ಟು ಚೀಫ್ ಏಜಂಟರಿಗೆ [illegible]. [illegible] ಕೆಲಸ ಮಾಡುವವರಿಗೆ [illegible] ಕಮೀಶನ ಸಿಗುವದು.

[illegible] ಮತ್ತು ಸದರ್ನ [illegible] ಕಂಪನಿ ಲಿಮಿಟೆಡ್

(ಇಂಗ್ಲಂಡದಲ್ಲಿ [illegible] ಮಾಡಿದ್ದು)

ನೋಟೀಸು

[illegible] ಮತ್ತು [illegible] ರೇಲ್ವೆ ಕಂಪನಿಯ [illegible], [illegible] ತಾರೀಖು ಮಂಗಳವಾರ ದಿನ ಮಧ್ಯಾಹ್ನ [illegible] ಗಂಟೆಯ ಮುಂಚೆ [illegible] ತಮ್ಮ [illegible] ಬೆಲೆಯುಳ್ಳ ಸಾಮಾನುಗಳ [illegible], ಮತ್ತು [illegible] ಉಕ್ಕು, [illegible], [illegible] ಯಂತ್ರಸಾಮಗ್ರಿ, [illegible] ಸಾಮಾನುಗಳು, ಉಕ್ಕಿನ [illegible] ರೇಲ್ವೆ [illegible] ಇವೇ ಮುಂತಾದವುಗಳನ್ನು [illegible] ಸ್ಟೋರ್ಸ ಡಿಪೋದಲ್ಲಿ [illegible] ಟೆಂಡರಗಳನ್ನು ಸ್ವೀಕರಿಸುವರು.

[illegible] ಸಾಮಾನುಗಳ [illegible] ಟೆಂಡರ ಫಾರ್ಮ್ [illegible] ಎಮ್. ಎಸ. ಎಮ್. ರೇಲ್ವೆಯ [illegible] ಕಂಟ್ರೋಲರ ಆಫ ಸ್ಟೋರ್ಸ ಇವರಿಂದ ಪಡೆಯಬಹುದು. [illegible] ರಕಮು ತಿರುಗಿ ಸಿಗಲಾರದು.

ಟೆಂಡರ ಫಾರ್ಮುಗಳು ಹ್ಯಾಂಡ [illegible] ದಿಂದ [illegible].

A. C. TURNER.
Controller of Stores.

ದಿ ಧಾರವಾಡ ಅರ್ಬನ ಕೋ

ಆಪರೇಟಿವ್ಹ ಬ್ಯಾಂಕ ಲಿಮಿಟೆಡ

[illegible]

[illegible] ಸರ್ಟಿಫಿಕೇಟ [illegible]

[illegible] ಪತ್ರಗಳ [illegible].

[illegible] ಬ್ಯಾಂಕಿನ [illegible]

[illegible]

[illegible]

[illegible]

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ಬಿಡಿ ಪ್ರತಿಗೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೪
೩ ,,	೪-೮-೨
ವಾರ ಪತ್ರಿಕೆ ೧ ವರ್ಷಕ್ಕೆ	३-೧೨-೦

ಹೆಚ್ಚಿನ ಮಾಹಿತಿ ಕೆಳಗಿನ ವಿಳಾಸಕ್ಕೆ [illegible] ತಿಳಿಯಿರಿ.

ಮ್ಯಾನೇಜರು, ವಿಜಯ, [illegible]

ವಿವಿಧ ವಿಷಯ ಸಂಗ್ರಹ

ಬಾಗಲಕೋಟೆಯ ಮ್ಯುನಸಿಪಾಲಟಿಯಲ್ಲಿ ಅನ್ಯಾಯಕಥನ

—(೦)—

ಬಾಗಲಕೋಟೆಯ ಕಾಂಗ್ರೆಸ ಭಕ್ತರು ಬಾಗಲಕೋಟೆಯ ಕಾಂಗ್ರೆಸ ಸೇವಾದಳದ ಸೈನ್ಯದ ಕುಸ್ತಿ ತಾಲೀಮುವಾಗಬೇಕೆಂದು ಹಾತೊರೆಯುತ್ತಾಗ, ಆ ಬಾಗಲಕೋಟೆಯ ಹೆಸರಿಗೆ ಕಲಂಕ ಹಚ್ಚಬೇಕೆಂದು ಮ್ಯುನಸಿಪಾಲಟಿಯ ಬಹುಮತ ಪಕ್ಷದವರು ಆದಕ್ಕೆಷ್ಟು ಬೇಕಾದಷ್ಟು ಅನ್ಯಾಯ, ಅಕ್ರಮ ಮತ್ತು ಅಪದ್ಧಗಳ ಜೋಡಣೆಯನ್ನು ಮಾಡುತ್ತಿದ್ದಾರೆ. ಇವರು ಕಮೀಟಿ ಎಂದರೆ ತಾವೇ ತಾವೆಂದು ಕಮೀಟಿಯನಾಗಿ ಭಾವಿಸಿದ್ದಾರೆ. ಹೇಳುವ ಅರಿಗಿಲ್ಲ; ಕೇಳುವ ಪ್ರಭೃತಿಯಿಲ್ಲೆಂದೆನಿಸು ವಷ್ಟು ಗರ್ವ ತಾಳಿದ್ದಾರೆ. ಕಲೆಕ್ಟರ ಸಾಹೇಬರು ಇವರ ಉದ್ದಾಮತನದ ಎಲ್ಲ ಪ್ರಕಾರಗಳನ್ನು ಬಲ್ಲರು. ಆದರೂ, ಅವರಿಗೆ ಬುದ್ಧಿ ಹೇಳಿದಂಥ ಒಂದು ಪತ್ರವಾದರೂ, ಮ್ಯುನಸಿಪಾಲಟಿಗೆ ಬಂದಿಲ್ಲ, ಜನರಲ ಕಮೀಟಿ ಸಹ ಕೂಡಿಸದೆ ಮನೆಯಲ್ಲಿಯೇ? ಅನ್ನೆಲ್ಲಿಯೋ? ಜನರಲ ಕಮೀಟಿಯ ಠರಾವುಗಳನ್ನು ಬರೆದರು. ಒಬ್ಬ ಮೆಂಬರರು ಆ ಕಾಗದವನ್ನು ಚೀಫ ಆಫೀಸರ ಕೈಯಲ್ಲಿ ಕೊಟ್ಟವರೇ ಕುದುರೆಯಂತೆ ಓಡಿ ಹೋದರೆಂದು ಹೇಳುವರು. ಈ ಹೂದರಿಯ ಅನ್ಯಾಯಕಥನವೆಲ್ಲಿಯೂ ನಡೆದಿಲ್ಲ. ಸರಕಾರದವರು ಕಣ್ಣು ಮುಚ್ಚಿಕೊಂಡು ಕೂತರೆ– ನಾಗರಿಕರು ತಮ್ಮ ಕೈಯಲ್ಲಿಯ ಅಧಿಕಾರದ ಸದುಪಯೋಗ ಮಾಡಬೇಕು? ನೀವು ಬುದ್ಧಿ ಗಲಿಸುವ ತನಕ, ನಾವು ಕರ ಪಟ್ಟಿ ಕೊಡುವದಿಲ್ಲೆಂದು ಸತ್ಯಾಗ್ರಹ ಮಾಡಬೇಕು. ಹೀಗೆ ಎಂಟು ದಿವಸ ಮಾಡಲಿ; ಈಗ ದುಸುದುಸು ಉರಿಯುತ್ತಿರುವಂಥವರು ಭಕ್ತಿಯನ್ನು ಮತ್ತಗಾಗಿ ಕಲ್ಲಿಗೆ ಬರುವರು.

ಎರಡನೆಯ ರೌಂಡಟೇಬಲಪ್ರ ಮೊದಲಿನ ದರಂತೆ ಬಾದಶಹರ ಜೇಮ್ಸ ಅರಮನೆಯಲ್ಲಿಯೇ ನಡೆಯುವದು– ಆದರೆ ಬಾದಶಹರ ಭಾಷಣ ಮೊದಲಾದ ಆಡಂಬರಗಳೇನೂ ನಡೆಯಲಾರವು.

ಹಿಂದುಸ್ಥಾನ ಸರಕಾರದವರು ಡಾಕ್ಟರ ಅನಸಾರಿಯವರಿಗೆ ಆಮಂತ್ರಣ ಕೊಡದಿದ್ದರೂ, ಭೋಪಾಳದ ನವಾಬಸಾಹೇಬರು ಇವರನ್ನು ಸಂಗಡ ಕರಕೊಂಡು ಹೋಗುವರು.

ಹುಬ್ಬಳ್ಳಿಯ ಸ್ವಯಂಸೇವಕರಿಗೆ ದಂಡ

—(೦)—

ದಂಡ ಕೊಡದೆ ತುರಂಗಕ್ಕೆ ಹೋದರು.

—(೦)—

ಹುಬ್ಬಳ್ಳಿಯಲ್ಲಿ ಸ್ವಯಂಸೇವಕರಾದ ಮರಿಬಸಪ್ಪಾ ಮತ್ತು ಭರಮಪ್ಪಾ ಶಿರಗುಪ್ಪಿ ಇವರು ಪರದೇಶೀ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುವಾಗ ಶಾಂತತಾಭಂಗ ಮಾಡಿದರೆಂಬ ಆರೋಪದ ಮೇಲಿಂದ, ಪೋಲೀಸರು ಇವರ ಮೇಲೆ ಪ್ರಕರಣ ಹಾಕಿದ್ದರಷ್ಟೇ? ಅದರ ವಿಚಾರಣೆಯಾಗಿ, ಇವರೀರ್ವರಿಗೂ ಮ್ಯಾಜಿಸ್ಟ್ರೇಟರು ೨೦ ರೂಪಾಯಿ ದಂಡ ಇಲ್ಲವೆ ೧೫ ದಿವಸಗಳ ಸಾದಾ ಕೈದಿನ ಶಿಕ್ಷೆ ಹೇಳಿದರು. ಮ್ಯಾಜಿಸ್ಟ್ರೇಟರು ದಂಡ ಕೊಡುವದಕ್ಕೆ ೧೫ ದಿವಸಗಳ ಅವಕಾಶ ಕೊಟ್ಟಿದ್ದರು. ಆದರೆ ಇವರೀರ್ವರು ದಂಡ ಕೊಡದೆ ತುರಂಗಕ್ಕೆ ಹೋದರು.

ಕಲಬುರ್ಗೆಯಲ್ಲಿ ಕರ್ನಾಟಕ ಸಹಕಾರಿ ಸಂಘ

....(೦)....

ನಿಜಾಮ ರಾಜ್ಯದಲ್ಲಿರುವ ಕರ್ನಾಟಕ ಭಾಗದ ಮಟ್ಟಿಗೆ ಸಹಕಾರ ಸಂಘ ಸ್ಥಾಪನೆ ಮಾಡುವ ಸಮಾರಂಭವು ಕಲಬುರ್ಗೆಯಲ್ಲಿ ನಡೆಯಿತು. ಈ ಸಭೆಗಾಗಿ ಮೈಸೂರಿಂದ ಶ್ರೀ ರಾಮಯ್ಯನವರನ್ನು ಕರಿಸಿಕೊಂಡಿದ್ದರು. ಡಾಯರೆಕ್ಟರ್‌ನ ಜಸ್ಟಿಸರಾದ ರಾಜಾ ಗಿರಿರಾವ ಬಹಾದ್ದೂರವರು ಉಪಕ್ರಮದ ಭಾಷಣ ಮಾಡತಕ್ಕವರಿದ್ದರು. ಕಾರ್ಯಬಾಹುಳ್ಯದ ಮೂಲಕ ಬರುವದಾಗದ್ದರಿಂದ, ಅವರ ಭಾಷಣವನ್ನು ಕಲಬುರ್ಗೆಯ ಸುಭೆಸಾಹೇಬರು ಓದಿದರು. ಕರ್ನಾಟಕದ ದೆಸೆಯಿಂದ ಸ್ವತಂತ್ರವಾಗಿ ಸಹಕಾರ ಸಂಘವನ್ನು ಸ್ಥಾಪಿಸಬೇಕೆಂದು ಗೊತ್ತಾದುದಲ್ಲದೆ, ಈ ಕೆಲಸವನ್ನು ಸನ್ಮಾನ್ಯವಾಗಿ ಕೂಡಿದವರಿಗೆ ಬಹುಮಾನ ಮಾಡಬೇಕೆಂದೂ ಠರಾವು ಪಾಸಾಯಿತು.

ಸಿಂಧ ಪ್ರಾಂತವನ್ನು ಸ್ವತಂತ್ರ ಮಾಡಬೇಕೆಂದು ರೌಂಡಟೇಬಲಿನ ಮುಂದೆ ಹೇಳಿಕೊಳ್ಳುವದಕ್ಕಾಗಿ ಅಲ್ಲಿಯ ಹಿಂದೂ ನಿವಾಸಿಗಳ ಮೂವರು ಪ್ರತಿನಿಧಿಗಳು ಪ್ರಯಾಣ ಬೆಳಸುವರು.

ಮೈಸೂರ ರಾಜ್ಯದಲ್ಲಿ ಕಾಂಗ್ರೆಸ ಮತ್ತು ಮುಸಲಮಾನರ ರಾಜಕೀಯ ನಿಶಾನೆಗಳನ್ನು ಹಚ್ಚಬಾರದೆಂದು ದರಬಾರಿನವರು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

ಇಂಗ್ರೇಜ ಕಂಪನಿಗಳ ಚಹಾಕ್ಕೆ ಬಹಿಷ್ಕಾರ

—(೦)—

ನೀಲಗಿರಿಯಲ್ಲಿ ಇಂಗ್ಲಿಷ ಜನರ ಎಷ್ಟೋ ಚಹಾದ ತೋಟಗಳಿವೆ. ಅಲ್ಲಿಯ ಇಂಗ್ಲಿಷ ಚಹಾಕ್ಕೆ ಮುಂಬಯಿ ಇಲಾಖೆಯಲ್ಲಿ ಬಹಿಷ್ಕಾರ ಬಿದ್ದದರಿಂದ, ಚಹಾದ ಮಾರಾಟವಿಲ್ಲದೆ ಹೋಗಿವೆ. ಆದ್ದರಿಂದ ಕಂಪನಿಯವರು ತಮ್ಮ ತೋಟಗಳಲ್ಲಿರುವ ಕೂಲಿಕಾರರನ್ನು ತೆಗೆಯಬೇಕೆಂದಿದ್ದಾರೆ. ಕೂಲಿಕಾರರ ಹೊಟ್ಟೆಯ ಮೇಲೆ ಕಲ್ಲು ಕೊಡುವದರ ಬದಲು–ಇವನ್ನು ಹಿಂದೀ ಕಂಪನಿಗಳಿಗೆ ಮಾರಿದರೇನು ತಪ್ಪು? ಚೇಳು ಎಷ್ಟೇ ಚಿಟ್ಟ ನೋವಾದರೂ, ತಾನು ಸತ್ತುವದನ್ನು ಬಯಸುತ್ತದೆ. ಯುರೋಪಿಯನ್ನ ಕಂಪನಿಗಳು ತಾವು ಅಲ್ಪಸ್ವಲ್ಪ ನಷ್ಟಕ್ಕೆ ಗುರಿಯಾದರೂ ಅಡ್ಡಿಯಿಲ್ಲ. ಸಾವಿರಾರು ಜನ ಬಡವರು ಹೊಟ್ಟೆಗೆ ಕೇರು ಹಾಕಿಕೊಳ್ಳುವಂಥ ಕಷ್ಟ ಕಾಲ ತರಬಾರದು.

ಮಂತ್ರಿ ಮೌಲ್ವಿ ರಫಿಯುದ್ದೀನ ಸಾಹೇಬರ ಅಭ್ರಮ ಸುಭ್ರಮ

....(೦)....

ಮುಂಬಯಿ ಕೌನ್ಸಿಲದಲ್ಲಿ ಮಂತ್ರಿಯಾಗಿರುವ ಮೌಲ್ವಿ ರಫಿಯುದ್ದೀನ ಸಾಹೇಬರಿಗೆ ಆಗಾಗ್ಗೆ ಚಿತ್ತ ವಿಭ್ರಮವಾಗುವಂತೆ ತೋರುತ್ತದೆ. ಯಾರಾದರೊಂದು ಪ್ರಶ್ನೆ ಕೇಳಿದರೆ– ತಮಗೇ ಕೇಳಿದರೆಂದು ಚಟ್ಟನೆ ಎದ್ದವರೇ ಏನಾದರೊಂದು ಉತ್ತರ ಕೊಡುತ್ತಾರೆ. ಇದರಿಂದ ಕೌನ್ಸಿಲದ ತುಂಬ ನಗೆಯಾಗಿ, ಸಾಹೇಬರ ಉಪಹಾಸವಾಗುತ್ತದೆ. ಅಧ್ಯಕ್ಷರು ಆಗಾಗ್ಗೆ ಇವರಿಗೆ ಎಚ್ಚರಿಕೆ ಹೇಳಬೇಕಾಗುತ್ತದೆ. ಎಲ್ಲಕ್ಕೂ ಮೊದಲು ಇವರ ಖಾತೆಯ ಪ್ರಶ್ನೋತ್ತರಗಳನ್ನು ನಡಿಸಬೇಕು, ಇವರಾದ ಬಳಿಕ ಇವರನ್ನು ಹಿಂದೆ ಕೂಡಿಸಬೇಕು. ಅಂದರೆ ಆಗಾಗ್ಗೆ ಇವರ ಫಜೀತಿಯಾಗಲಾರದು.

ದಿಲ್ಲಿಯ ಮ್ಯುನಿಸಿಪಾಲಿಟಿಯ ಮೆಂಬರರು ಕಮೀಟಿ ಬಿಟ್ಟು ಎದ್ದು ಹೋದರು.

—(೦)—

ದಿಲ್ಲಿಯ ಮ್ಯುನಿಸಿಪಾಲಿಟಿಯ ಸೀಮೆಯಲ್ಲಿರುವ ಮತ್ತು ಮ್ಯುನಿಸಿಪಾಲಿಟಿಯ ನೆಚ್ಚದಿಂದ ನಡೆಯುವ ಆಸ್ಪತ್ರೆಗಳಲ್ಲಿ ಡಾಕ್ಟರರನ್ನು ಖಾತೆಯ ಇನ್ಸಪೆಕ್ಟರ ಜನರಲ್ಲರು ತಮ್ಮ ಮನಸಿಗೆ ಬಂದಂತೆ ವರ್ಗ ಮಾಡುವರು. ಹೀಗೆ ಮಾಡಬಾರದು; ಮ್ಯುನಿಸಿಪಾಲಿಟಿಯ ಮತವನ್ನು ಲೋಕಹಿತ ದೃಷ್ಟಿಯಿಂದಾದರೂ ಕೇಳಬೇಕೆಂದು ಮೆಂಬರರು ಸೂಚನೆ ಮಾಡಲು–ಇನ್ಸಪೇಕ್ಟರ ಜನರಲ್ಲ ಸಾಹೇಬರು ನಾನೇನು ನಿಮ್ಮ

ಅಧಿಕಾರಕೊಡಲ್ಪಟ್ಟಿಲ್ಲ. ವರ್ಗಾವರ್ಗಿಯಲ್ಲಿ ನಿಮ್ಮ ಮಾತು ಕೇಳತಕ್ಕ ಕಾರಣವಿಲ್ಲೆಂದು ದಿಗರುತ್ತರ ಕೊಟ್ಟರು. ಮೆಂಬರರು ಶಾಂತಿಯಿಂದ ನಡೆಯ-ಬೇಕೆಂದು ಎಷ್ಟು ಪ್ರಯತ್ನ ಮಾಡಿದರೂ ಅಧ್ಯಕ್ಷರಾದ ಯುರೋಪಿಯನ್ ಸಾಹೇಬರು ತನ್ನ ಪಕ್ಷದ ಜನರ ಲ್ಲಾರಂಭಿಸಿ ಪ್ರತಿಧ್ವನಿ ತೆಗೆಸುವ ..ಮಾಡಿದರು ನಾಪ ನೇಟಿವ್ ಮೆಂಬರರ ಹೊರತು, ಎಲ್ಲ ಮೆಂಬರರು ಕಮಿಟಿಗೆ ರಾಜೀನಾಮೆ ಕೊಟ್ಟು ಹೊರಬಿದ್ದು ಬಂದರು.

ರಾಮಕೃಷ್ಣ ಪರಮಹಂಸರನ್ನು ಗಲ್ಲಿಗೆ ಹಾಕಿದ್ದಕ್ಕಾಗಿ ಕಾಲೇಜದ ವಿದ್ಯಾರ್ಥಿಗಳ ಸಂಪು

...(೦)....

ಪೋಲಿಸ ಇನ್ಸಪೆಕ್ಟರ ತಾರಿಣಿ ಮುಖರ್ಜಿಯವರನ್ನು ಕೊಂದ ಆರೋಪಕ್ಕಾಗಿ ರಾಮಕೃಷ್ಣ ವಿಶ್ವಾಸನನ್ನು ಗಲ್ಲಿಗೆ ಹಾಕಿದ ದಿವಸ ಕಲಕತ್ತೆಯಲ್ಲಿ ಎಷ್ಟೋ ಅಂಗಡಿಕಾರರು ಹರತಾಳ ಮಾಡಿದರು. ಗಲ್ಲಿನ ಸುದ್ದಿಯು ಕಾಲೇಜಕ್ಕೆ ಹೋದ ಕೂಡಲೆ ಆ ಲೇಜದ ವಿದ್ಯಾರ್ಥಿಗಳು ಶಾಲೆಗೆ ರಜೆ ಕೊಡಿರೆಂದು ಪ್ರಿನ್ಸಿಪಾಲರಿಗೆ ಹೇಳಿದರು. ಸಾಹೇಬರು ಇದಕ್ಕೊಪ್ಪದಾಗಲು- ಸಂಪು ಮಾಡಿ, ಕಾಲೇಜಕ್ಕೆ ಕ... ಹೊಡೆದು, ಹೊರಗೆ ಬಂದರು. ಸಾಯಂಕಾಲದಲ್ಲಿ ಕಾಲೇಜದ ಬಳಂಗಳದಲ್ಲಿಯೇ ಸಭೆ ಮಾಡಿ, ಸರಕಾರದ ಕೃತ್ಯವನ್ನು ನಿಷೇಧಿಸಿದರು.

ಗಿರಣಿಗಳ ಮುಂದೆ ಸ್ತ್ರೀಯರ ಪಿಕೆಟಿಂಗ.

....(೦)....

ಸೋಲಾಪೂರದಲ್ಲಿರುವ ಐದೂ ಗಿರಣಿಗಳ ಕೂಲಿಕಾರರು ಸಂಪು ಮಾಡಿ ಒಂದು ವಾರದ ಮೇಲಾಯಿತು ಐದು ಸಾವಿರಕ್ಕಿಂತ ಹೆಚ್ಚು ಕೂಲಿಕಾರರಿದ್ದಾರೆ ಇವರಲ್ಲಿ ಡೊಂಬಗಾರಗಿಯರಾದವರು ನೂರಿನಷ್ಟು ಜನರೇ! ಕಂಪನಿಯವರು ಕೂಲಿಕಾರರಿಗೆ ಮೋಹದ ಮಾತು ಹೇಳಿ, ಮೋಸ ಪಡಿಸುವರೆಂಬ ಸಂಶಯ ಬಂದು, ಕೂಲಿಕಾರರ ಸಂಘದವರು ಗಿರಣಿಗಳ ಮುಂದೆ ಸ್ತ್ರೀಯರನ್ನು ಪಿಕೆಟಿಂಗಕ್ಕೆ ನಿಲ್ಲಿಸುವ ಏರ್ಪಾಡು ಮಾಡಿದ್ದಾರೆ. ಹೆಂಗಸರು ಗಾದರೂ ಡೊಂಬಗಾರಗಿಗಳು ನಾಚಲೆಂಬ ತಾತ್ಪರ್ಯ

ಆಜ ಪತ್ರದ ಸಂಪಾದಕರಿಗೆ ದಂಡ;

ದಂಡ ಕೊಡದಿದ್ದರೆ ಶಿಕ್ಷೆ.

—(೦) —

ಕಾಶಿಯಲ್ಲಿ ಶ್ರೀ. ಬಾಬುರಾವ ವಿಷ್ಣುರಾವ ಪರಾಡಕರರೆಂಬವರು ಆಜವೆಂದರೆ ಇಂದು ಎಂಬ ಪತ್ರದ ಸಂಪಾದಕರಾಗಿದ್ದಾರೆ. ಇವರ ಮೇಲೆ ರಾಜದ್ರೋಹದ ಆರೋಪ ಬಂತು. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಇವರಿಗೆ ಒಂದು ಸಾವಿರ ರೂಪಾಯಿ ದಂಡವಮಾಡಿ, ಅದನ್ನು ಮೂರು ತಿಂಗಳೊಳಗೊಮ್ಮೆ ಮೂರು ಹಪ್ತೆಯಿಂದ ಕೊಡಲಿಕ್ಕೆ ಸವಡು ಕೊಟ್ಟರು. ದಂಡ ಕೊಡದಿದ್ದರೆ- ಆರು ತಿಂಗಳ ಶಿಕ್ಷೆ ಎಂದೂ ಹೇಳಿದರು. ಶ್ರೀ. ಪರಾಡಕರರು ದಂಡ ಕೊಡದೆ ಸೆರೆಮನೆಯ ದಾರಿ ಹಿಡಿದರು.

ಹೆಂಡತಿಯ ವಿರುದ್ಧ ಸುಳ್ಳು ಆಡಿದ್ದಕ್ಕೆ ಗಂಡನಿಗೆ ಶಿಕ್ಷೆ.

—(೦) —

ಕಲಕತ್ತೆಯಲ್ಲಿ ಹಾರ್ಕಾರ್ಟನೆಂಬ ಸಾಹೇಬನು. ಈತನ ಹೆಂಡತಿಯು ಗಂಡನ ಮೇಲೆ ಜೀವನಪತ್ರದ ದಾವೆ ತಂದಳು. ದಾವೆಯು ಪಂಚರ ಕಡೆಗೆ ನಿರ್ಣಯಕ್ಕಾಗಿ ಹೋಯಿತು. ಹೆಂಡತಿಯು ತನಗೆ ಬ್ಯಾಂಕಿನಿಂದ ಆಗಾಗ್ಗೆ ಹಣ ತಂದು ಕೊಟ್ಟಿದ್ದಾಳೆಂದ ಈತನು ಪಂಚರ ಮುಂದೆ ಪ್ರತಿಜ್ಞೆಯಿಂದ ಜವಾಬು ಕೊಟ್ಟನು. ಈ ಹೇಳಿಕೆಯು ಸುಳ್ಳೆಂದು ಬ್ಯಾಂಕಿನ ಲೆಕ್ಕದಿಂದ ಕಂಡು ಬಂತು. ಬುದ್ಧಿಪೂರ್ವಕವಾಗಿ ಪ್ರತಿಜ್ಞೆಯಿಂದ ಸುಳ್ಳು ನುಡಿದನೆಂದು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ವಿಚಾರಣೆಯಾಗಿ ಆರು ತಿಂಗಳ ಸಕ್ತ ಶಿಕ್ಷೆಗೆ ಗುರಿಯಾದನು

ಲಂಡನದಲ್ಲಿ ಯಾವ ದೃಷ್ಟಿಯಿಂದ ಮಹಾತ್ಮರ ಸ್ವಾಗತವಾಗುವದು?

....(೦)...

ಮಹಾತ್ಮರು ಇಂಗ್ಲಂಡಕ್ಕೆ ದೊಡ್ಡ ಸಾಧುವಿನಂತೆ ಬರುವದಿಲ್ಲ. ರಾಜ್ಯಕ್ರಾಂತಿಕಾರಕರೆಂದೂ ಬರುವದಿಲ್ಲ. ಕರ್ತವ್ಯವನ್ನರಿತು ಕ್ರಿಯಾಸಿದ್ಧಿವಂತರಾದಂಥ ರಾಜನೀತಿ ವಿಶಾರದರಂತಾಗಿ ಬರುವರು. ಆ ದೃಷ್ಟಿಯಿಂದಲೇ ಇವರ ಸ್ವಾಗತ ಮಾಡಲ್ಪಡುವದು. ಮಹಾತ್ಮರು ಲಾರ್ಡ ಆಯರ್ವಿನ ಸಾಹೇಬರ ಕೂಡ ಮಾತಾಡಿದ ಮೇರೆಗೆ ಬ್ರಿಟಿಶರ ಇರುವಿಕೆಯದೂ, ನಡುವೆ ರಾಜಿಯನ್ನು ಮಾಡಿಕೊಂಡು ಹೋಗಲಾರರೆಂದೂ, ಲಂಡನದ ಟಾಯಿಮ್ಸ ಪತ್ರವು ಬರೆದಿರುತ್ತದೆ.

ಲಂಡನದ ಕಾಂಗ್ರೆಸ ಕಮೀಟಿಗೆ ಬಹಿಷ್ಕಾರ.

....(೦)....

ಲಂಡನದ ಕಾಂಗ್ರೆಸ ಕಮೀಟಿಯಲ್ಲಿ ಇಬ್ಬಣವಾಗಿದೆ. ಶ್ರೀ ಶಕಲಾತವಾಲಾನವರು ಸಂಪೂರ್ಣ ಸ್ವಾತಂತ್ರ್ಯವಾದಿಯಾಗಿದ್ದಾರೆ. ಇವರು ಮಹಾತ್ಮರ ಸ್ವಾಗತಕ್ಕೆ ಕೂಡ ವಿರೋಧ ಬೆಳೆಸಿದ್ದಾರೆ. ನಾವು ಆ ಹಿಂದಿನ ಕಾಂಗ್ರೆಸದಲ್ಲಿ ಪಾಸಾದ ಗೊತ್ತುವಳಿಯ ಮೇರೆಗೆ ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯವನ್ನಿಟ್ಟುಕೊಂಡು ಆ ಮೇರೆಗೆ ಚಳವಳ ನಡೆಸುತ್ತೇವೆಂದೆನ್ನುತ್ತಾರೆ. ಇವರ ವರ್ತನವು ಸದ್ಯದ ಕಾಂಗ್ರೆಸ ತತ್ವ ಹಾಗು ಗಾಂಧಿ ಆಯರ್ವಿನ್ನ ಒಪ್ಪಂದಗಳಿಗೆ ವಿರುದ್ಧವಾಗಿರುತ್ತದೆಂದು ಮುಂಬಯಿಯಲ್ಲಿ ಕೂಡಿದ್ದ ಕಾಂಗ್ರೆಸ ವರ್ಕಿಂಗ ಕಮಿಟಿಯವರು ಲಂಡನದ ಕಮಿಟಿಯನ್ನು ತಮ್ಮ ಲಿಸ್ಟಿನಿಂದ ತೆಗೆದು ಹಾಕಿದರು.

ಅದ್ಭುತ ಮಳೆ.

ಬೀದಿಗಳಲ್ಲಿ ಹುಡುಗರು ಈಜಿದವು.

.(೦) ...

ಇಂಗ್ಲಂಡದಲ್ಲಿ ಮೊದಲು ಪ್ರಚಂಡ ಗಾಳಿ ಬೀಸಿತು. ಅನಂತರ ಭಯಂಕರವಾಗಿ ಮೋಡಗಳೆದ್ದು, ಅದ್ಭುತವಾಗಿ ಮಳೆ ಸುರಿಯಲಾರಂಭಿಸಿತು. ಮಳೆಯಿಂದ ಎಲ್ಲ ವ್ಯವಹಾರ ಕಟ್ಟಾಯಿತು, ಅನೇಕ ಮನೆಗಳಿಗೆ ಸಿಡಿಲು ಬಡೆಯಿತು ಬೀದಿಗಳಲ್ಲಿ ಐದು ಫೂಟು ಎತ್ತರದ ತನಕ ನೀರು ನಿಂತಿತು. ಹುಡುಗರು ಇದೊಂದು ಮೋಜೆಂದು ತಿಳಿದು, ಈಜುವ ಆಟ ನಡೆಸಿದರು.

ಸರೋವರದ ಒಡ್ಡು ಒಡೆದು ೫೦ ಸಾವಿರ ಜನರು ನಿರಾಶ್ರಿತರಾದರು.

—(೦)—

ಚೀನದಿಂದ ಬರುವ ಸುದ್ದಿಗಳೆಲ್ಲ ಅದ್ಭುತರಾದುವುಗಳಾಗಿಯೇ ಇರುತ್ತವೆ. ಹ್ಯಾಂಕಾವಿನ ಹತ್ತರಿರುವ ದೊಡ್ಡ ಸರೋವರದ ಒಡ್ಡು ಒಡೆದು, ಅದರ ನೀರು ಹತ್ತೆಂಟು ಮೈಲು ವ್ಯಾಪಿಸಿ, ಎತ್ತ ನೋಡಿದತ್ತ ನೀರೇ ನೀರಾಗಿರುತ್ತದೆ. ೫೦ ಸಾವಿರ ಜನರು ನಿರಾಶ್ರಿತರಾಗಿ ಹ್ಯಾಂಕಾವು ಪಟ್ಟಣದಲ್ಲಿ ಗುಳೇ ಬಂದಿದ್ದಾರೆ ಇದರಿಂದ ರೋಗೋದ್ಭವವಾಗುವದೆಂಬ ಭಯವಾಗಿರುತ್ತದೆ.

ಕರಾಚಿಯಲ್ಲಿ ನಾವಲಿಗರ ಪಿಕೆಟಿಂಗ.

ಕರಾಚಿಯಲ್ಲಿ ಕ್ಷೌರದ ಅಂಗಡಿಗಳನ್ನಿಟ್ಟವರು ಈ ಅಗ್ಗಳಿಕೆಯ ಕಾಲದಲ್ಲಿ ತಮ್ಮ ದರವನ್ನು ಅರ್ಧ ಮಾಡಿದರು. ಇದರಿಂದ ತಮ್ಮ ಉಪಜೀವನ ಸಾಗದಂತೆ ಬೀದಿಯಲ್ಲಿ ಕೂತು ಮನೆ ಮನೆಗೆ ಕೆಲಸಕ್ಕೆ ಹೋಗತಕ್ಕವರು ಸಲೂನದವರ ವಿರುದ್ಧ ಪಿಕೆಟಿಂಗ ಪ್ರಾರಂಭಿಸಿ, ಅರ್ಧ ಆಣೆಗೆ ಕಷ್ಟ ಮಾಡಲಾರಂಭಿಸಿದ್ದಾರೆ; ಅಗ್ಗದಾಶೆಯಲ್ಲಿ ಎಷ್ಟೋ ಜನರಿಗೆ ಕ್ಷೇತ್ರಕ್ಷೌರವೂ ಆಯಿತು.

ಪಂಡಿತ ಮಾಲವಿಯಾಯವರಿಗೆ ದಾರಿಯಲ್ಲಿ ಅಲ್ಲಲ್ಲಿ ಹಡಗ ನಿಲ್ಲುವ ಬಂದರಗಳಲ್ಲಿ ಆಕಳ ಹಾಲನ್ನೊದಗಿಸಿಕೊಡುವ ವ್ಯವಸ್ಥೆಯಾಗಿದೆ. ಪಂಡಿತರು ಆತ್ಮಶುದ್ಧಿ, ಸ್ಥಳಶುದ್ಧಿಗಾಗಿ ಸಂಗಡ ಭಾಗೀರಥಿಯನ್ನು ಒಯ್ಯುವರು.

THE ANKALIGI BANK LTD.

Head Office
Kamanlatta Dharwar
Branches
Ranebennur & Hirekerur
5%
Interest allowed on
ANNA SAVINGS BANK
DEPOSIT

Dharwar 3—1—1927 | K. B. ANKALIGI, Managing Director

ಶೀರೆ!! ಪತ್ತಲ!! ಶೀರೆಗಳು!!

ಶ್ರೀ ದತ್ತವೀವ್ಹಿಂಗ ಮಿಲ್ ಹುಬ್ಬಳ್ಳಿ

ಕರ್ನಾಟಕದಲ್ಲಿ ಇದೇ ಮೊದಲನೆಯ ಶೀರೆಯ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಶೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ ಚವಕಶಿ ಮಾಡಿ, ನಿಮಗೆ ಬೇಕಾದ ಮಾಲು ಕೊಂಡು, ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ. ಬಣ್ಣ ಹೋದರೆ - ಮಾಲ ತಿರುಗಿ ತಕ್ಕೊಳ್ಳುತ್ತೇವೆ.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨ನೆ ತೊಲೆಯ ಸೇರು ೧ಕ್ಕೆ ೩—೦—೦
ಕೃಷ್ಣ ಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦

೧೯-೧೧-೨೬ ಮೈಸೂರ ಸ್ಟೋರ್,
ಬೆಳಗಾವಿಯವರಗಲ್ಲಿ
ಹುಬ್ಬಳ್ಳಿ

The Asian Life Assurnance Co. Ltd Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೧; ಹೆಡ್ ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗಬೇಡಿರಿ. ಈ ಕಂಪನಿಯು

ವಿಮೆಯ ರಕಮು ರೂ. ೧,೩೫,೦೦೦,೦೦ ಕಂತದ ಉತ್ಪನ್ನ ರೂ. ೭,೦೦,೦೦೦
ವಿಮೆಯ ಹಣ ತಿರುಗಿ ಕೊಟ್ಟದ್ದು ೧೦,೦೦,೦೦೦
ಜಿಂದಿಗಿ ೩೩,೨೮,೦೨೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕುಲಕರ್ಣಿ. ಧಾರವಾಡದ ಏಜಂಟರು
ಬಿ. ಎಚ್. ಪಾಟೀಲ ಹಾವೇರಿಯ ಚೀಫ ಏಜಂಟರು.

ಕೆ. ವ್ಹಿ. ಹುಲಸೋಗಿ, ಬಿ ಎ. ಕರ್ನಾಟಕದ ಬ್ರಾಂಚ ಮ್ಯಾನೇಜರ
ಹುಬ್ಬಳ್ಳಿಯ ಏಜಂಟರು— ಶ್ರೀ. ಎಸ್. ಎಮ್. ದೊಡ್ಡವಾಡ ಶ್ರೀ. ಬಿ. ಟಿ. ಶಿರೋಳಕರ.

ಆಸುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೩೬೦ ರೂ.. ಗಳನ್ನ ಕೊಡುವಂಥ ಗೋಲ್ಡನ್ (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ ಕಂತುಗಳಾದರೂ ಇಷ್ಟೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ ಏಶಿಯನ್ಸ ಕಂಪನಿಯೊಂದೇ ಆಗಿರುತ್ತದೆ.

ನೋಟೀಸಿನ ದರಗಳು

....(೦)....

ಸಿಂಗಲ ಕಾಲಮಿನ ಪಕ್ತಿ ವಳಿಗೆಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂ ವರೇ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ, ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಂತೆ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅದು ಆಣೆ ಹೆಚ್ಚು ಕಾಲಮಿನ ವಳಿಗಳಿಗೆ ಇವ್ವಾಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಒಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ

....(೦)....

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಜೋಶೀ.

ವರ್ಷ ೧೨) ಧಾರವಾಡ ಸೋಮವಾರ ತಾರೀಖು ೧೦ ನೇ ಅಗಸ್ಟ್ ೧೯೩೧ (ಸಂಚಿಕೆ ೧೫೨

ಜೋಶಿ, ಗುಂಜೀಕರ ಮತ್ತು ಕಂಪನಿ

ಶುಕ್ರವಾರಪೇಟೆ ಧಾರವಾಡ

ಇವರನ್ನು

ಮುಂಬೈ ಪ್ರಾವ್ಹಿನ್ಶಿಯಲ್ ಕೋ. ಇನ್ಶುರನ್ಸ ಕಂಪನಿ ಲಿ.

ಇವರು

ಧಾರವಾಡ ಜಿಲ್ಹೆಗೆ

ಚೀಫ್ ಏಜಂಟ

ರಾಗಿ ನಿಯಮಿಸಿದ್ದಾರೆ.

ಈಗ ಜಿಲ್ಹೆಯ ಎಲ್ಲ ಮುಖ್ಯ ಸ್ಥಳಗಳಲ್ಲಿ

ಸಬ್ ಏಜಂಟ

ರನ್ನು ನಿಯಮಿಸುವದಿದೆ. ಈ ಕೆಲಸ ಮಾಡಲಿಚ್ಛಿಸುವವರು ತಮ್ಮ ಖಾತ್ರಿಯ ಬಗ್ಗೆ ಎಲ್ಲ ಮಾಹಿತಿ ಕೊಟ್ಟು ಚೀಫ್ ಏಜಂಟರಿಗೆ ಬರೆಯಬೇಕು. ಖಾತ್ರಿಯಿಂದ ಕೆಲಸ ಮಾಡುವವರಿಗೆ ಪೂರ್ಣ ಕಮೀಶನ ಸಿಗುವದು.

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ ಶಿದ್ಧಾನಂದರೂಪಿ ಅಸಲರ್ಜಿ, ಶ್ರೀ. ಆರೂಢಸ್ವಾಮಿಗಳ ಕೈಫಿಯತ್ತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ವಾದಿ, ಪ್ರತಿವಾದಿ, ಹಾಗು ಮುನಸಫರ ಛಾಯಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು, ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚು ಬೇರೆ. ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ್ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಬಳಾಳ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ		ರೂ. ೧೨-೮-೦
೬	,,	೭-೦-೦
೩	,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ		೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ತಾರೀಖು ೧೪-೮-೧೯೩೧ನೇ ಇಸ್ವಿ

ಮಹಾತ್ಮರ ಮಹತ್ವದ ವಚನ

ತಮ್ಮ ದೆಸೆಯಿಂದ ಇಂಗ್ಲೀಷರು ಹೆದರಬೇಕಿಲ್ಲ.

—(೦)—

ತಾವು ಲಂಡನಕ್ಕೆ ಹೋದಾಗ ರಾವುಂಡ ಟೇಬಲಿನಲ್ಲಿ ಯಾವ ರೀತಿಯ ವರ್ತನವಿಡಬಹುದೆಂಬ ಧೋರಣವನ್ನು ಮಹಾತ್ಮರು ಪ್ರಸಿದ್ಧ ಮಾಡಿದ್ದಾರೆ. ನಾನು ಯಾವದೇ ಒಂದು ಮಾತಿನ ಅದಲುಬದಲು ಮಾಡಿಕೊಂಡು, ಹಿಂದುಸ್ಥಾನದ ಹಿತಸಂಬಂಧಗಳನ್ನು ಅನ್ಯರಿಗೆ ಮಾರುವದಿಲ್ಲ. ಇಂಗ್ಲಿಷ ಜನತೆಯ ಮುಂದೆ ಕಾಂಗ್ರೆಸದ ತತ್ವಗಳನ್ನು ಸಮಂಜಸ ಮತ್ತು ನ್ಯಾಯವಾದ ಪದ್ಧತಿಯಿಂದಲೇ ಇಡುವೆನು. ಇವಕ್ಕೆ ಪುನಃ ಪ್ರಶ್ನೆಗಳೂ ತರ್ಕಗಳೂ ಒಂದರೆ- ಅವನ್ನು ಉತ್ತರಗಳಿಂದಲೇ ಸಮಾಧಾನಪಡಿಸುವೆನು. ಎಷ್ಟೋ ಇಂಗ್ಲೀಷ ಜನರು ನಾನು ತಮ್ಮ ವೈರಿಯಾಗಿದ್ದೇನೆಂಬು ಕಲ್ಪಿಸಿಕೊಂಡಿದ್ದಾರೆ. ಅವರು ಹಾಗೆ ತಿಳಿಯತಕ್ಕದ್ದಿಲ್ಲ. ಹೆದರಿಕೊಳ್ಳತಕ್ಕದ್ದಿಲ್ಲ. ನಾನು ಎಲ್ಲರ ಪ್ರೀತಿ ವಿಶ್ವಾಸಗಳನ್ನಿಟ್ಟುಕೊಂಡೇ ರಾವುಂಡ ಟೇಬಲಿನಲ್ಲಿ ಚರ್ಚೆ ಮಾಡುವೆನು ಮತ್ತು ರಾವುಂಡ ಟೇಬಲವು ಯಶಸ್ವಿಯಾಗುವಂತೆ ಮಾಡತಕ್ಕಂಥ ಎಲ್ಲ ಪ್ರಯತ್ನೋಪಾಯಗಳನ್ನು ಮಾಡುವೆನೆಂದು ಹಿಂದೀ ಮತ್ತು ಇಂಗ್ಲೀಷ ಜನಾಂಗಗಳಿಗೆ ವಚನ ಕೊಟ್ಟಿದ್ದಾರೆ. ಲಂಡನಕ್ಕೆ ಹೋದ ಬಳಿಕ, ಏನಾದರೊಂದು ನೆಟ್ಟನೆವನ ತೆಗೆದು ರಾವುಂಡ ಟೇಬಲ ಮುರಿದು ಹೋಗುವದೆಂದು ದುರಾಗ್ರಹಿಗಳಾದ ಕಾನ್ಸರ್ವೇಟಿವ್ಹರು ಈವರೆಗೆ ಪಾಂಚಜನ್ಯ ಮಾಡುತ್ತಾ ಬಂದಿದ್ದಾರೆ ಅವರಿಗೆ ಈ ಪರ್ಯಂತರ ಅದೇ ತರದ ಉತ್ತರ ಕೊಡುತ್ತಾ ಬಂದಿದ್ದಾರೆ. ಮನೆಯಲ್ಲಿ ಮಾತಾಡುವದು ಬೇರೆ; ರಣಮಂಡಲದಲ್ಲಿ ಮಾತಾಡುವದು ಬೇರೆಯಾಗುತ್ತದೆ ಮಹಾತ್ಮರು ಶಕ್ಯವಾದಷ್ಟು ಶಾಂತ ಮತ್ತು ಗಂಭೀರ ವೃತ್ತಿಯಿಂದ ನಡೆಯುವರು. ಅದಕ್ಕೆ ತಕ್ಕಂತೆ ಕಾನ್ಸರ್ವೇಟಿವ್ಹರು ಸ್ವೈರವೃತ್ತಿ ಬಿಟ್ಟು, ಮಹಾತ್ಮರಂತೆ ಶಾಂತ ರೀತಿಯಿಂದ ನಡೆಯುವದಾದರೆ- ರಾವುಂಡ ಟೇಬಲದ ಕೆಲಸವು ಸರಳವಾಗಿ ನಡೆಯುವದು

ಶೀಖರ ಅಸಂತೋಷ.

....(೦)....


ವಿಜಯ

ಸಂಪಾದಕರು:— ಅನಂತಾಚಾರ್ಯ ಬಾಳಾಚಾರ್ಯ ಹೊಸಳ್ಳೀ.

ವರ್ಷ ೧೩ ಧಾರವಾಡ ಶನಿವಾರ ತಾರೀಖು ೧೫ ನೇ ಆಗಸ್ಟ ೧೯೩೧ (ಸಂಚಿಕೆ ೧೪೬

ಜೋಶಿ, ಗಂಜೀಕರ ಮತ್ತು ಕಂಪನಿ

ಶುಕ್ರವಾರಪೇಟೆ ಧಾರವಾಡ

ಇವರನ್ನು

ಮುಂಬೈ ಪ್ರಾವಿನ್ಶಿಯಲ್ ಕೋ. ಇನ್ಶುಅರನ್ಸ ಕಂಪನಿ, ಲಿ.

ಇವರು

ಧಾರವಾಡ ಜಿಲ್ಲೆಯ

ಚೀಫ್ ಏಜಂಟ

ರಾಗಿ ನಿಯಮಿಸಿದ್ದಾರೆ.

ಈಗ ಜಿಲ್ಲೆಯ ಎಲ್ಲ ಮುಖ್ಯ ಸ್ಥಳಗಳಲ್ಲಿ

ಸಬ್ ಏಜಂಟ

ರನ್ನು ನಿಯಮಿಸುವ [illegible] ಮಾಡಬಿಚ್ಛಿಸುವವರು ತಮ್ಮ ಖಾತ್ರಿಯ ಬಗ್ಗೆ ಎಲ್ಲ ಮಾಹಿತಿ ಕೊಟ್ಟು ಚೀಫ್ ಏಜಂಟರ [illegible] ಖಾತ್ರಿಯಾದ ಕೆಲಸ ಮಾಡುವವರಿಗೆ ಪೂರ್ಣ ಕಮೀಶನ [illegible]

ಜಾಹೀರ ನೋಟೀಸು

ಸುಸಮಯ  ಸುಸಮಯ

ನಮ್ಮ ಕೆಳಗೆ ಕಾಣಿಸಿದ ಮೋಟರಗಳು ಮಾರತಕ್ಕವುಗಳು ಇರುತ್ತವೆ. ಮೋಟರಗಳು ಉತ್ತಮ ರನಿಂಗ ಆರ್ಡರದಲ್ಲಿ ಇರುತ್ತವೆ. ಗ್ರಾಹಕರು. ಮೋಟಾರ ತಕ್ಕೊಳ್ಳಬೇಕಿದ್ದಲ್ಲಿ. ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಅಗರ ಸಮಕ್ಷಮ ಭೆಟ್ಟಿಯಾಗಿ ತಿಳಕೊಳ್ಳಬೇಕು

೧ ಟನ್ ಫೋರ್ಡ ಲಾರಿ. ನಂ X ೪೪೯೧

೧ ಟನ್. ಶೆವ್ಹರಲೆಟ್ ಲಾರಿ. ನಂ Z ೩೯೩೦

ಟೂರಿಂಗ ಕಾರ ಬ್ರಿಕ್ರ್ಯಾ (ಮೇಕರ)

ಈ ಪ್ರಕಾರ ಮೂರು ಗಾಡಿಗಳು ಮಾರತಕ್ಕವು ಇರುತ್ತವೆ.

ಪಿ. ಬಿ. ಹಂಪಣ್ಣವರ

ಸವಣೂರು.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರ ಭಂಡವಲು ಎಂಟು ಲಕ್ಷದಮೇಲುಂಟು. [illegible] ಹುಂಡಿ [illegible] ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ಕರೇಂಟ ಮತ್ತು [illegible] ಡಿಪಾಜಿಟ [illegible] ಬಡ್ಡಿ ದೊರೆಯುವದು

[illegible] ಸಂಗತಿಗಳನ್ನು ಕೆಳಗೆ ಸಹಿ ಮಾಡಿದವ[illegible]

ಮಂಜುನಾಥ ಬಿ. [illegible],

ಮ್ಯಾನೇಜಿಂಗ [illegible]

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	ರೂ. ೧೨-೦-೦
೬ ,,	೬-೦-೦
೩ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ತಾರೀಖು ೧೫-೮-೧೯೩೧ನೇ ಇಸ್ವಿ

ಪಂಡಿತ ಮಾಲವಿಯಾಯವರು ಲಂಡನಕ್ಕೆ ಹೋಗುವದು ಧಳಮಳಿಸಿತು.

ಮಹಾತ್ಮರ ಹಾಗು ಸರ ಹಾಟಸನ್ನ ಸಾಹೇಬರ ನಡುವೆಯುಂಟಾದ ಮತಭೇದವು ಬಹಳ ದೀರ್ಘಕ್ಕೆ ಹೋಗಿದೆ. ಗವ್ಹರ್ನರಸಾಹೇಬರು ಕ್ಯಾಂಪ ಇವ್ಹಿನ್ಯು ಕೋಡನ್ನು ಮುಂದೆ ಚಾಚಿ ಮಹಾತ್ಮರನ್ನು ಸಮಾಧಾನಪಡಿಸಲೆತ್ನಿಸಿದ್ದು ಪೂರಾ ವ್ಯರ್ಥವಾಯಿತು. ಮಹಾತ್ಮರು ಬರೇ ಕೇಳಿಕೆಯ ಅಥವಾ ಕಲ್ಪನೆಯ ದುಃಖತಾಪಗಳನ್ನು ಸಾಹೇಬರ ಮುಂದೆ ಹೇಳಿಲ್ಲ. ಸೂರ್ಯ ಮತ್ತು ಜಯದ್ರಥನನ್ನಂಥ ಸಂಗತಿಗಳನ್ನೇ ಹೇಳಿದ್ದಾರೆ. ಈ ಪ್ರಕಾರ ತಮ್ಮದು ಸಸ್ಪಷ್ಟವಿದ್ದು, ಈ ಪಕ್ಷದ ಜಯವಾದ ಹೊರ್ತು ತಾವು ವಿಲಾಯತಿಗೆ ಹೊರಡುವದು ಶಕ್ಯವೇ ಆಗಲಾರದೆಂದು ಲಾರ್ಡ ವಿಲಿಂಗಡನ್ನ ಸಾಹೇಬರಿಗೆ ತಾರಿನಿಂದ ತಿಳಿಸಿದ್ದು ಆಶ್ಚರ್ಯವಾಗಿರುವದಿಲ್ಲ.

ಪಂಡಿತ ಮಾಲವಿಯಾ, ದೇವಿ ಸರೋಜಿನಿ ಇವರಿಗೆ ಸ್ವತಂತ್ರವಾಗಿ ಆಮಂತ್ರಣ ಬಂದಿದ್ದರೂ ಅವರು ಕಾಂಗ್ರೆಸದವರೇ ಆಗಿದ್ದಾರೆ. ನನ್ನನ್ನು ಬಿಟ್ಟು ಮಹಾತ್ಮರದು ಸಾಗಲಾರದು; ಮಹಾತ್ಮರನ್ನು ಬಿಟ್ಟು ನನ್ನದು ಸಾಗಲಾರದೆಂದು ಪಂಡಿತ ಮಾಲವಿಯಾಯವರು ಈ ಮುಂದಾಗಿ ಆಡಿ ತೋರಿಸಿದ್ದಾರೆ. ಈ ಮೇರೆಗೆ ಉಂಟಾಗಿರುವ ಪರಸ್ಪರ ಸಂಬಂಧದ ಮೂಲಕ ಮಹಾತ್ಮರು ಪ್ರಯಾಣ ನಿಲ್ಲಿಸಿದರೆ- ತಮಗೂ ಹಾಗೆ ಮಾಡಬೇಕಾದೀತೆಂದು ಪಂಡಿತರು ಜಾಹೀರ ಮಾಡಿದ್ದಾರೆ. ನೀವಾದರೂ ವಿಲಾಯತಿಗೆ ಹೋಗುವಿರಾ ಎಂಬದಾಗಿ ಮಾಡಿದ ಪ್ರಶ್ನೆಕ್ಕೆ-

ಸಮಯ ಬಹಳೇ ಕಠಿಣವಾಗಿದೆ. ಸರಕಾರದವರು ಗುಜರಾಥದಲ್ಲಿ ವಿಶ್ವಾಸಘಾತ ಮಾಡಿದ್ದಾರೆ.

ಎಂದು ಪಂಡಿತರು ಅಚ್ಚ ಕೆಚ್ಚಿನ ಉತ್ತರ ಹೇಳಿದ್ದಾರೆ. ಪಂಡಿತರು ಆಯಾದೆ ಪಂಡಿತರಾದಂತೆ ರಾಜಕೀಯ ಸ್ಥಿತಿಯನ್ನು ಬಲ್ಲವರು. ಸರಕಾರದವರು ಗುಜರಾಥದಲ್ಲಿ ವಿಶ್ವಾಸಭಂಗ ಮಾಡಿದರೆಂದು ಹೇಳ್ವ ಪದರಿಂದ ಸರ ಹಾಟಸನ್ನ ಸಾಹೇಬರು ಮಹಾತ್ಮರಿಗೆ ಸಿನಲಕೋಡನ್ನು ತೋರಿಸಿದ್ದು, ಮುತ್ಸದ್ದಿತನಕ್ಕೆ ಶೋಧಿಸುವಂಥದಾಗಲಿಲ್ಲೆಂದು ಧಾರಾಳವಾಗಿ ಹೇಳುವಂತಾಗುತ್ತದೆ.

ಸರ ಸಿ. ಪಿ. ರಾಮಸ್ವಾಮಿಯವರು ಲಾರ್ಡ ವಿಲಿಂಗಡನ್ನ ಸಾಹೇಬರ ಪ್ರಭಾವಳಿಯಲ್ಲಿರುವ ಕಾಯದೆ ಖಾತೆಯ ಮೆಂಬರರಾಗಿದ್ದಾರೆ. ಇವರು ಮದ್ರಾಸದಿಂದ ಸಿಮ್ಲಾಕ್ಕೆ ಹೋಗುವಾಗ ದಾರಿಯಲ್ಲಿ ಮುಂಬಯಿಯಲ್ಲಿಳಿದು, ಮಹಾತ್ಮರನ್ನು ಕಂಡು ಇದೇ ವಿಷಯವಾಗಿ ಮಾತಾಡಿ, ತಾವು ಸಿಮ್ಲಾಕ್ಕೆ ಹೊರಟು ಬರಬಹುದೇ? ಅಥವಾ ಸದ್ಯ ಈ ವಾದ ಮುಗಿಯುವ ತನಕ ಮುಂಬಯಿಯಲ್ಲಿಯೇ ಇರಬೇಕೇ? ಎಂಬದಾಗಿ ಲಾರ್ಡ ವಿಲಿಂಗಡನ್ನ ಸಾಹೇಬರಿಗೆ ತಾರಿನಿಂದ ಕೇಳಿದ್ದಾರೆ. ಇವರಿಗೆ ಬರುವ ಉತ್ತರ ಅಥವಾ ಮಹಾತ್ಮರಿಗೆ ಬರುವ ಪೂರ್ಣ ಉತ್ತರದಿಂದ ಮುಂದಿನ ಕೆಲಸಗಳು ಅವಲಂಬಿಸಿರುತ್ತವೆ. ಮಹಾತ್ಮರು ಮಾಡಿದ ತಾರಿಗೆ ನಿಮ್ಮ ತಾರು ಮುಟ್ಟಿತೆಂದಿಷ್ಟೇ ಉತ್ತರ ಬಂದಿದ್ದು, ಸರ ಹಾಟಸನ್ನ, ಲಾರ್ಡ ವಿಲಿಂಗಡನ್ನ ಮತ್ತು ಮಿ ಬೆನ್ನ ವೆಜ್ಜವುಡ್ಡ ಸಾಹೇಬರ ನಡುವೆ ಇದೇ ವಿಚಾರವಾಗಿ ತಾರಿನ ಮೇಲೆ ತಾರುಗಳು ಓಡಾಡುತ್ತವೆಂದು ನಿನ್ನೆ ಸಾಯಂಕಾಲದಲ್ಲಿ ಬಂದ ಸಮಾಚಾರವಾಗಿದೆ.

ರಾವುಂಡ ಟೇಬಲ

ಬಂಗಾಲದ ವಾಟರಪ್ರೂಫ ಉದ್ದಂಗಿಗಳನ್ನು ಮಾಡುವ ಕಂಪನಿಯವರು ಮಹಾತ್ಮರ ವಿಲಾಯತಿಯ ಪ್ರವಾಸಕ್ಕಾಗಿ ಒಂದು ಅಂಗಿಯನ್ನು ಮಾಡಿ, ಅವರಿಗೆ ಕಾಣಿಕೆ ಕೊಟ್ಟಿದ್ದಾರೆ. ಇಂಥ ಇನ್ನೊಂದು ಅಂಗಿಯನ್ನು ಪಂಡಿತ ಮಾಲವಿಯಾಯವರಿಗೆ ಕೊಡತಕ್ಕವರಿದ್ದಾರೆ.

ನಮ್ಮ ಅಪೇಕ್ಷೆಯ ಪ್ರಕಾರ ನೀವು ನಮ್ಮ ಪಕ್ಷದಿಂದ ಮೂವರನ್ನು ಕಳಿಸಲಿಲ್ಲ. ಆದ್ದರಿಂದ, ನಾವು ರಾವುಂಡ ಟೇಬಲಿಗೆ ಬಹಿಷ್ಕಾರ ಹಾಕಿದ್ದೇವೆ. ಅಲ್ಲಿ ನಮ್ಮ ಪ್ರತಿನಿಧಿಗಳಿಲ್ಲದೆ, ಪಾಸಾಗುವ ಯಾವದೇ ನಿರ್ಣಯಕ್ಕೆ ನಾವು ಜವಾಬದಾರರಲ್ಲ, ಅದಕ್ಕೆ ಕಟ್ಟುಬಿಟ್ಟು ಕೊಳ್ಳಲಾರೆವೆಂದು ಮುಂಬಯಿಯ ವರ್ಕರ ಸಂಘದವರು ಲಾರ್ಡ ವಿಲಿಂಗಡನ್ನ ಸಾಹೇಬರಿಗೆ ತಿಳಿಸಿದ್ದಾರೆ.

ದೊಡ್ಡ ದೊಡ್ಡ ಮಹಾರಾಜರು ವಹಿಸುತ್ತಿರುವ ಸಂಯುಕ್ತ ಹಿಂದುಸ್ಥಾನದ ವಿಚಾರದ ಕೂಡ ಚಿಕ್ಕ ದೊಡ್ಡ ಸಂಸ್ಥಾನಿಕರ ಹಿತಸಂಬಂಧಗಳ ವಿಚಾರ ವಿಷಯ ಮಾಡಲು- ಸಾಂಗಲಿಯ ಅಧಿಪರ ಮುಂದಾಳುತ್ವದಲ್ಲಿ ಪುಣೆಯಲ್ಲಿ ಒಂದು ಪರಿಷತ್ತು ಕೂಡಿದೆ.

ಮಹಾತ್ಮರು ವಿಲಾಯತಿಗೆ ಬಂದಾಗ, ಸಾರ್ವಜನಿಕವಾಗಿ ವ್ಯಾಖ್ಯಾನಗಳನ್ನು ಮಾಡಿಸಿದರೆ- ರಾವುಂಡ ಟೇಬಲದಲ್ಲಿ ನಡೆಯುವ ವಿಚಾರಗಳಿಗೆ ಅನಿಶ್ಚಿತವಾದ ಸ್ವರೂಪ ಬರುವ ಮೂಲಕ, ಇವರ ವ್ಯಾಖ್ಯಾನಗಳನ್ನು ಮಾಡಿಸಬಾರದೆಂದು ಮಂತ್ರಿಗಳು ಅಲ್ಲಿಯ ಮಹಾತ್ಮರ ಸ್ವಾಗತ ಕಮಿಟಿಗೆ ತಿಳಿಸಿದ್ದಾರೆ ಹಿಂದಿನ ಸಾರೆ ಬಂದವರು ವ್ಯಾಖ್ಯಾನ ಕೊಟ್ಟಿಲ್ಲ? ಈಗೇಕೆ ಈ ಅಡ್ಡಗಾಲು ಹಾಕುತ್ತೀರೆಂದು ಕಮಿಟಿಯವರು ಮಂತ್ರಿಗಳಿಗೆ ತಿರುಗಿ ಪ್ರಶ್ನೆ ಕೇಳಿದ್ದಾರೆ.

ಮಹಾತ್ಮರು ಲಂಡನಕ್ಕೆ ಬಂದಾಗ, ದರಿದ್ರನಾರಾಯಣರು ವಾಸವಾಗಿರುವಲ್ಲಿಳಿದುಕೊಳ್ಳಬಾರದು. ಶ್ರೀಮಂತರಿರುವಲ್ಲಿಯೇ ಇರಬೇಕೆಂದು ಲಿಬರಲ್ಲರ ಕಾಲದಲ್ಲಿ ಮಂತ್ರಿಯಾಗಿದ್ದವರೊಬ್ಬರು ಮೆತ್ತಗಿನ ಸೂಚನೆ ಮಾಡಿದ್ದಾರೆ.

ಹಿಂದೂ ಮುಸಲಮಾನ ವಾದವು ತಿರಾಯಿತರಾದ ಪಂಚರಿಂದ ತೀರಿಸಿಕೊಳ್ಳಬೇಕು. ಅಥವಾ ರಾಜ್ಯಕರ್ತರೆಂಬ ಜವಾಬದಾರಿಯ ದೆಸೆಯಿಂದ ಬ್ರಿಟಿಶ ಸರಕಾರದವರೇ ನ್ಯಾಯನಿರ್ಣಯ ಹೇಳಬೇಕೆಂದು ಮ್ಯಾಂಚೆಸ್ಟರ ಗಾರ್ಡಿಯನ್ನ ಪತ್ರವು ಸೂಚನೆ ಮಾಡಿರುತ್ತದೆ.

ಪ್ರಕೃತದ ರಾವುಂಡ ಟೇಬಲಿನಲ್ಲಿ ಮುಸಲಮಾನರ ಸಂಖ್ಯೆ ಬೆಳೆಸಿದಂತೆ, ಹಿಂದೂ ಮುಸಲಮಾನ ವಾದದ ರಣರಂಗವಾದ ಪಂಜಾಬದ ಹಿಂದೂ ಜನರಿಗೆ ಆಮಂತ್ರಣ ಕೊಡಲಿಲ್ಲ. ಆದದರಿಂದ ಹಿಂದೂ ಮುಸಲಮಾನರ ಜಗಳ ತೀರಲು ಯಾವದೊಂದು ಗೊತ್ತುವಳಿ ಮಾಡಲು ರಾವುಂಡ ಟೇಬಲವು ಸಮರ್ಥವಾಗಲಾರದು. ಆದ್ದರಿಂದ, ಅದರಲ್ಲಿ ತಮ್ಮ ವಿಶ್ವಾಸವಿಲ್ಲೆಂದು ಪಂಜಾಬದ ಹಿಂದೂ ಜನರು ಅರ್ಜಂಟ ಸಭೆ ಕೂಡಿಸಿ, ಠರಾವು ಪಾಸುಮಾಡಿದ್ದಾರೆ.

ಹೆಂಡತಿಯ ಒಕ್ಕಲಗಿತ್ತಿಯಾಗಳು!

ಲಂಡನದ ಒಂದು ಕೋರ್ಟಿನಲ್ಲಿ ಗಂಡ ಹೆಂಡತಿಯ ಸೋಡಪತ್ರದ ದಾವೆ ನಡೆಯಿತು. ಗಂಡನು ಹೆಂಡತಿಯ ವಿಷಯವಾಗಿ ಜವಾಬು ಕೊಡುವಾಗ- ಇವಳು ಮನೆಗೆಲಸದಲ್ಲಿ ಜಾಗೃತಳು ಸ್ವಚ್ಛವಿಡುವಳು. ಪಾಲುಮಾಡಿಕೆಯಿಲ್ಲ- ಎಂಬದಾಗಿ ಹೇಳಿದನು- ಇವೆಲ್ಲ ಒಕ್ಕಲಗಿತ್ತಿಯ ಪ್ರಶಂಸೆ ಮಾಡುವಂಥವು. ಹೆಂಡತಿ ಎಂಬವಳ ಪ್ರಶಂಸೆಯಾಗುವದಿಲ್ಲೆಂದ- ಜಡ್ಜರು ಅಭಿಪ್ರಾಯ ಪಟ್ಟಿರುತ್ತಾರೆ.

ಹಿಂದೂ ಮುಸಲಮಾನ ಭಯಂಕರ ದಂಗೆ

ಹಿಂದೂ ಜನರ ನಾಲ್ಕನೂರು ಮನೆಗಳು ಸುಟ್ಟವು.

....(೦)....

ಅನೇಕ ಹಿಂದೂ ಜನರು ಸತ್ತರು.

—(೦)—

ವಾಯುವ್ಯ ಸರಹದ್ದಿನಲ್ಲಿರುವ ಡೇರಾಇಸ್ಮಾಯಿಲಖಾನ ಪಟ್ಟಣದಲ್ಲಿ ಹಿಂದೂ ಮುಸಲಮಾನ ದಂಗೆಯಾಗಿದೆ. ದಂಗೆ ನಿಂತ ವರ್ತಮಾನ ಬಂದಿಲ್ಲ ಡಂಗೆ ಮುರಿಯಲು ಲಾಹೋರಿನಿಂದ ದಂಡು ಹೋಗಿದೆ. ಹಿಂದೂ ಜನರ ನಾಲ್ಕುನೂರು ಮನೆಗಳು ಸುಟ್ಟವೆಂದೂ, ಅನೇಕರು ಯಮಸದನ ಕಂಡರೆಂಬೂ ಹೃದಯದ್ರಾವಕ ಸುದ್ದಿ ಬಂದಿದೆ.

ವರ್‍ಹಾಡ ಪ್ರಾಂತದ ಭವಿತವ್ಯ

....(೦....)

ವರ್‍ಹಾಡ ಪ್ರಾಂತವು ಮರಳಿ ತಮಗೆ ಬೇಕೆಂದು ಹೈದರಾಬಾದಿನ ನಿಜಾಮಸಾಹೇಬರು ಇಂಗ್ರೇಜಿ ಸರಕಾರದ ಬೆನ್ನು ಹತ್ತಿದ್ದಾರೆ. ಈ ಪ್ರಾಂತವು ರಾಜ್ಯಕಾರಭಾರದ ದೆಸೆಯಿಂದ ಸ್ವತಂತ್ರವಾಗಬೇಕೇ ನಾಗಪೂರಕ್ಕೇ ಸೇರಬೇಕೇ? ಎಂಬ ವಿಚಾರ ನಡೆದಿದೆ ನಾಗಪೂರದ ಗವ್ಹರ್ನರಸಾಹೇಬರು ಈ ವಾರದಲ್ಲಿ ಅಮರಾವತಿಗೆ ಹೋಗಿದ್ದರು. ಈ ಬಗ್ಗೆ ಅಲ್ಲಿಯ ಪ್ರತಿಷ್ಠಿತರ ಅಭಿಪ್ರಾಯ ಕೇಳಿಕೊಂಡರು. ನಮ್ಮ ಗಳಿಕೆ-ಉಳಿಕೆಯನ್ನು ನಾಗಪೂರ ಪ್ರಾಂತದ ಜಿಲ್ಹೆಗಳು ಸ್ವಾಹಾಮಾಡುತ್ತವೆಂದು ಬಲವರು ಸಾಹೇಬರ ಮುಂದೆ ಗುಣಗಟ್ಟಿದರು.

ಕಬೂಲಿ ಜವಾಬಿಗಾಗಿ ಅಮೇರಿಕೆಯ ಪೋಲಿಸರು ಆರೋಪಿಗಳಿಗೆ ಕೊಡುವ ಕ್ರೂರಹಿಂಸೆಗಳು

—(೦)—

ಸಿನೇಟವೆಂದರೆ-ಪಾರ್ಲಮೆಂಟ ಸಭೆಯ ಮೆಂಬರರ ಪ್ರಯತ್ನದಿಂದ ಭಯಂಕರ ಅಪರಾಧಗಳು ಹೇಗೆ ಮುಚ್ಚುತ್ತವೆಂಬದನ್ನೂ, ಕಳ್ಳರು ಪ್ರತಿಷ್ಠಿತರಾಗಿ ಹೇಗೆ ಮೆರೆಯುತ್ತಾರೆಂಬದನ್ನೂ ಹಿಂದಿನ ಲೇಖದಲ್ಲಿ ಬರೆದಿರುತ್ತೇವೆ. ಇದೇ ವಿಚಾರವಾಗಿ ಕೂತ ವಿಕರ್‍ಶ್ಯಾಮ ಕಮೀಟಿಯವರು ಪೋಲಿಸರು ಆರೋಪಿಗಳಿಂದ ಗುನ್ಹೆಗಳ ಕಬೂಲಿ ಮಾಡಿಸಕೋಳ್ಳುವಾಗ ಇಂಥ ನಿಂದ್ಯ ಮತ್ತು ಘೋರ ಕೃತ್ಯಗಳನ್ನು ಮಾಡುತ್ತಾರೆಂಬದನ್ನು ಬೈಲಿಗೆ ತಂದಿದ್ದಾರೆ ಅವಾವವೆಂದರೆ-

೧ ಕಬೂಲ ಮಾಡುವ ತನಕ ಮಲಗಗೊಡದಿಲ್ಲ. ಕುಸು ನಿದ್ದೆ ಹತ್ತಿತೆಂದು ತೋರಿದರೆ ಕಟಕಟಿ ಮಾಡಿ ಎಚ್ಚರ ಮಾಡುತ್ತಾ ತ್ರಾಸ ಕೊಡುವರು.

೨ ಹೊಡೆಯುವರು.

೩ ಹೆಣಗಳ ಮೇಲೆ ಮಲಗಿಸಿ, ಪ್ರಶ್ನ ಕೇಳುವರು.

೪ ಕೈದಿಗಳಿಗೆ ಬೇಡಿ ಹಾಕಿ, ಅಂಗಾತ ಕೆಡವಿ, ಮೂಗು ಬಾಯಿ ತೆರಿಸಿ, ಗಂಟಲದಲ್ಲೆ ನೀರ ಹೊಯ್ಯುವರು

ಇಂಥ ಹಲವು ಅಮಾನುಷ ಕೃತ್ಯಗಳನ್ನು ಮಾಡುವರು.

ಅಮೇರಿಕೆಯಂತೆ ಸ್ವತಂತ್ರ ಆಯರ್ಲಂಡವು.

....(೦)....

ಅಮೇರಿಕೆಯಲ್ಲಿ ನಡೆವ ಅತ್ಯಾಚಾರಗಳಂತೆ ಸ್ವತಂತ್ರ ಆಯರ್ಲಂಡದಲ್ಲಿಯೂ ಪ್ರಜಾಹಿಂಸೆ ನಡೆದಿದೆ. ಇದರಲ್ಲಿ ಪೋಲೀಸರಿಲ್ಲ. ಪಟ್ಟಣಿಗರೇ ಸೇರಿದ್ದಾರೆ ಇವರು ಅನೇಕವಾದ ಪಾಪದ ಕೃತ್ಯಗಳನ್ನು ಮಾಡುವರು. ಪೋಲೀಸರು ಖಟ್ಲೆ ಹೂಡಿದರೆ- ವಿರೋಧಿಗಳು ಅಪರಾಧಿಗಳೆಂದು ಮಾತ ಹೇಳಬಾರದು. ಹೇಳಿದರೆ ನಿಮ್ಮ ನಿಃಪಾತ ಮಾಡುವೆವೆಂದು ಜಹ್ಮಿರ ಸಿಗೆ ಭಯ ಹಾಕುತ್ತಾರೆ. ಯಾವದೊಂದು ಅಪರಾಧವಾದದ್ದನ್ನು ಜನರು ಕಂಡರೂ ಯಾವದೇ ರೀತಿಯಿಂದ ಪೋಲೀಸರಿಗೆ ಸಹಾಯ ಮಾಡಲಿಕ್ಕೆ ಹೆದರುತ್ತಾರೆ. ಆದ್ದರಿಂದ ಪೋಲೀಸರು ಕರ್ತವ್ಯಹೀನರಾಗುತ್ತಾರೆ. ಹಿಂಸೆಯನ್ನು ನಿಲ್ಲಿಸಲು ನ್ಯಾಯಖಾತೆಯ ಮಂತ್ರಿಯು ಉಗ್ರ ಉಪಾಯ ಕೈಕೊಳ್ಳಬೇಕೆಂದಿದ್ದಾನೆ. ಕೆಲ ವಿಚಾರಣೆಗಳಲ್ಲಿ ಜ್ಯೂರಿಯನ್ನು ತೆಗೆದು ಹಾಕುವರು· ಸಂಶಯ ಬಂದ ಅಪರಾಧಿಗಳನ್ನು ಸಜಾ ಬಂದಿಯಲ್ಲಿಡುವರು. ಕೆಲವು ಪ್ರಸಂಗಗಳಲ್ಲಿ ಗಲ್ಲಿನ ಶಿಕ್ಷೆಯನ್ನೂ ವಿಧಿಸುವರು.

ಫ್ರಾನ್ಸದಲ್ಲಿ ರೇಲ್ವೆಯ ಹೊಟ್ಟೆಯ ಮೇಲೆ ಕಾಲುಬಂತು.

ಫ್ರಾನ್ಸದೇಶದಲ್ಲಿ ಮೋಟಾರಗಳ ಸುಳವಾಟವು ಬಹಳವಾದ್ದರಿಂದ ರೇಲ್ವೆಗಳ ಉತ್ಪನ್ನಕ್ಕೆ ಅರಿದಾಳ ಬಡೆದಿರುತ್ತದೆ. ಆದ್ದರಿಂದ ಫ್ರೆಂಚ ಸರಕಾರದವರು ಸಾವಿರಾರು ಸ್ಟೇಶನಗಳನ್ನು ತೆಗೆದು ಹಾಕುವರು. ೨೦ ಮೈಲುಗಳ ಅಂತರದಲ್ಲಿ ಯಾವ ಸ್ಟೇಶನವಿರುವದಿಲ್ಲ. ಈ ಅಂತರದ ನಡುವಿನ ಸ್ಟೇಶನಗಳ ಪ್ರಯಾಣವನ್ನು ಮೋಟಾರದಿಂದ ಮಾಡಬೇಕೆಂದು ಗೊತ್ತುಮಾಡಿದ್ದಾರೆ.

ನೋಟಿಸು

ಯಾವತ್ತು ಜನರಿಗೆ ಈ ನೋಟೀಸಿನಿಂದ ತಿಳಿಸುವದೇನಂದರೆ ನಮ್ಮ ತಂದಿ ಬಸನಗೌಡಾ ಕಲ್ಲನಗೌಡಾ ಪಾಟೀಲ ಡ.ಕ್ಯಿ ಇವರು ತೀರಿಕೊಂಡ ಬಳಿಕ ಘರಾಣೇದ ಮ್ಯಾನೇಜಮೆಂಟ ನಮ್ಮ ಅಣ್ಣಾ ನಿಂಗನಗೌಡಾ ಈತನ ಕಡೆಗೆ ಇತ್ತು ಈತನು ಘರಾಣೆದ ಹಿತ ಬಯಸದ್ದರಿಂದ ಘರಾಣೇದಲ್ಲಿ ಮಡಳು ಹುಟ್ಟಿ ಬೇರೆ ಬೇರೆ ಆದಿವಿ ನಮ್ಮ ತಂದೆಗೆ ಇಬ್ಬರು ಕುಟುಂಬವಿದ್ದು ಹಿರೇ ಹೆಂಡತಿ ಸಾಂತವ್ವಾ ಇವರ ಹೊಟ್ಟೇಲಿ ನಿಂಗನಗವಡಾ ವ ನಾನು ಅಂದರೆ ಕಲ್ಲನಗವಡಾ ಎರಡನೇ ಕಟಂಬ ಗಂಗವ್ವಾ ಇವರ ಹೊಟ್ಟೇಲಿ ರುದ್ರಗೌಡಾ ವ ಮಲ್ಲಿಕಾರ್ಜುನಗೌಡಾ ವ ಶೇಖರಗೌಡಾ ವ ಗಂಗನಗೌಡಾ ಈ ಪ್ರಕಾರ ಇರುತ್ತೇವೆ ನಮ್ಮ ತಂದೆಯ ಘರಾಣೇದ ಲೇವಾದೇವಿ ಬಗ್ಗೆ ರಾ| ಸಾ| ಶಿವಪ್ಪಾ ದಂಡಪ್ಪಾ ಮಾನ್ವಿಯವರಲ್ಲಿ ದೇಣೇ ಮಾಡಿರುತ್ತಾರೆ ಸದರೀಯವರ ದೇಣಿಕ್ಕೆ ಅಲ್ಪವಯಿ ಮಲಕಾರ್ಜುನಗೌಡಾ ವ ಶೇಖರಗೌಡಾ ವ ಗಂಗನಗೌಡಾ ಯಿವರ ಅ| |ವಾರ ನಾತೆಯಿಂದ ಖಾಸತಾಯಿ ಗಂಗವ್ವಾ ವ ನಿಂಗನಗೌಡಾ ವ ರುದ್ರಗೌಡಾ ಯಿವರು ಮತ್ತು ಕಲ್ಲನಗೌಡಾ ನಾನು - ಪ್ರಮೇಸರಿ ನೋಟು ಬರಕೊಟ್ಟ ಸಹಿ ಮಾಡಿರುತ್ತೇವೆ ಘರಾಣೇದ ಸಮ್ಮಂಧಿ ಲೇವಾದೇವಿ ಇದ್ದು ಅದು ನಮ್ಮ ಲೆಖ್ಖದಲ್ಲಿ ನಮೂದ ಅದೆ ನಮ್ಮ ಲೆಖ್ಖದ ಹೊರ್ತಾಗಿ ರಾ| ಸಾ| ಶಿವಪ್ಪಾ ಮಾನ್ವಿ ಗದಗ ಯಿವರ ಲೇಖ್ಖದ ಹೊರ್ತಾಗಿ ಎರಡನೇ ಕಡೆ ಕೊಡೋ ದೇಣೆಕ್ಕೆ ನಾವು ಪಾತ್ರರಲ್ಲಾ ನನ್ನ ಅಣ್ಣಾ ನಿಂಗನಗೌಡಾ ಈತಾ ನನಗೆ ಅಬ್ಬಿಗೇರಿ ಗ್ರಾಮದಲ್ಲಿ ಹಿಸೆಮಾಡಿ ಕೊಟ್ಟಾ ಬಾಕಿ ಗ್ರಾಮದ್ದೂ ಮಾಡಿ ಕೊಡಲಿಕ್ಕೆ ಕೇಳಲು- ದರವೆಂದು ನೆಂಬರದಲ್ಲಿ ಅರ್ಧದಂತೆ ತಗೋಬೇಕು ಮತ್ತು ನಮ್ಮ ತಾಯಿ ಸಾಂತವ್ವನ ಹೊಟ್ಟೆ ಬಗ್ಗೆ ನೆರೆತಗ್ಗಿನ ಕೇರಿ ಹೊಲಾ ಚೌತ್ರಮೇಲಿನ ತುಂಡು ರತ್ತಮ್ಮನ್ನ ವ ಬೆಂಣಿಮಾನ್ನ ಹೀಗೆ ಕೊಡಬೇಕೆಂದು ಕರಾರು ಆಯಿತು ಬರೇ ಜಮೀನಿಯಲ್ಲಿ ಅರ್ಧಾ ನಾನು ತಗೋಬೇಕು ಅಂತಾ ಕರಾರ ಹೇಳಿ ಕಾಗದ ಪತ್ರ ಮಾಡಿಕೊಡಲು ಕೇಳಲು - ಮನಿ ಬಿಟ್ಟು ಕೆಲ ದುಷ್ಟಜನರನ್ನು ಕಟ್ಟಿಕೊಂಡು ಬೆಳಗಾವ ಬೈಲಹೊಂಗಲ ಹೊಸಪೇಟೆ ವಗೈರೆ ಕಡೆಗೆ ಹೋಗಿ ಸಿಕ್ಕಂತೆ ಸಾಲಾ ಮಾಡಿದಂತೆ ಸುದ್ದಿ ಕೇಳುತ್ತೇನೆ ಆದರೆ ಈಗ ನಮ್ಮ ಘರಾಣೇದ ಯಾವತ್ತು ಆಸ್ತಿ ಹಂಚಿಕೊಂಡಿದ್ದು ದೇಣೆ ಮಾತ್ರ ಹಂಚಿಕೊಂಡಿಲ್ಲ ಮತ್ತು ಕೆಲವರಿಗೆ ಜಮೀನು ಮಾರಿ ಬರಕೊಡು

THE ANKALIGI BANK LTD.

Head Office
Kamankatta Dharwar
Branches
Ranebennur & Hirekerur

5%
Interest allowed on
ANNA SAVINGS BANK
DEPOSIT

Dharwar 8—1—1937 } K. B. ANKALIGI Managing Director

ಪರಮಾದ ಮೇಲೆ ರಾಮಬಾಣ ಔಷಧವು

೭ ದಿವಸಗಳಲ್ಲಿ — ಬೇಕಾದಷ್ಟು ಹಳೆಯದು ಮತ್ತು ಅಂಟಿಕೊಂಡು ಮನೆ ಮಾಡಿಕೊಂಡದ್ದು ಮತ್ತು ತ್ರಾಸದಾಯಕವಾದ ಪರಮಾ ರೋಗವು ೭ ದಿವಸಗಳಲ್ಲಿ ಗುಣವಾಗುತ್ತದೆ. ಈ ಔಷಧದ ಒಂದೇ ಭಾಗ ಕೊಟ್ಟರೆ ಸಾಕು. ಮೂತ್ರದಲ್ಲಿಯ ಉರಿಯು ತೀರಿಯೂ ಒಂದಾಗಿ, ಮೂತ್ರವು ಸ್ವಚ್ಛವಾಗುತ್ತದೆ. ಮತ್ತು ನಾಲ್ಕು ಭಾಗ ಕೊಟ್ಟ ಒಳಕ ರೋಗವು ಪೂರಾ ಹೋಗಿ, ಶೀಘ್ರ ಒಮ್ಮೆ ಪೂರಾ ಬಂದಾಗುತ್ತದೆ. ಇದರಿಂದ ಹಳೇ ಮತ್ತು ಹೊಸ ರೋಗವು ನಿಲ್ಲದೆ ಹೋಗುವದಿಲ್ಲ. ಇಂಥ ಗುಣಕಾರಕ ಔಷಧದ ಉಪಯೋಗ ಮಾಡುವದರಿಂದ, ಯಾರೂ ಸಂತೋಷವಾಗದೆ ಹೋಗರು. ಈ ಔಷಧವು ಪೂರ್ಣ ಗುಣಕಾರಿಯಾಗಿರುತ್ತದೆಂದು ಹೆಮ್ಮೆಯಾಗಿ ಹೇಳುತ್ತೇವೆ. ಒಂದು ಬಾಟ್ಲಿಯ ಬೆಲೆ ಒಂದು ರೂಪಾಯಿ, ವ್ಹಿ. ಪಿ. ಖರ್ಚು ಬೇರೆ.

ಡಾಕ್ಟರ ರಹಿಮತುಲ್ಲಾ ಸುಲೇಮಾನಜಿ, ಗೋಲಪಿಠ ಹಾಟೆಲ್ಲದ ಹತ್ತರ, ಪ್ರೇರಾಕ್ಸ, ಗ್ರ್ಯಾಂಟ ರೋಡ ಮುಂಬಯಿ

ಶೇರ! ಪತ್ತು... ಶೇರಗಿ!!

ಶ್ರೀ ದತ್ತಸ್ಪಿನ್ನಿಂಗ ಮಿಲ್
ಹುಬ್ಬಳ್ಳಿ.

ಕರ್ನಾಟಕದಲ್ಲಿ ಒಂದೇ ಮೊದಲನೆಯ
ಸ್ವದೇಶಿ ಮಿಲ್ಲು,

ಇದೇ ಮಿಲ್ಲಿನಲ್ಲಿ ಒಳ್ಳೆ ಬಣ್ಣದ ನಮೂನೆಗಳ ಸುಂದರ ಖಣಗಳು ಹಾಗೂ ಪಟಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ. ಖಾತರಿ ಮಾಡಿ, ನಿಮಗೆ ಬೇಕಾದ ಮಾಲು ಕೊಂಡು, ಖಾತ್ರಿ ಮಾಡಿಕೊಳ್ಳಿರಿ.

ಒಳ್ಳೆ ಪಕ್ಕಾ, ಒಳ್ಳೆ ಹೋದರೆ - ಮಾಲ ತಿರುಗಿ ತಕ್ಕೊಳ್ಳುವೆವು.

ಮೈಸೂರು ಊದುಬತ್ತಿ

ಪಕ್ಕಾ ಊದುಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿನ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ಐದು ತೊಲೆಯ ಸೇರು ೧ಕ್ಕೆ ೩—೦—೦
ಶ್ರೇಷ್ಠ ಹಾಲಿನಾಕ ಅತ್ತರು ತೊಲೆ ೧ಕ್ಕೆ ೪—೦—೦

೧೯-೧-೩೭ ಮೈಸೂರ ಸ್ಟೋರ,
ಬೆಳಗಾವಿಯವರಗಲ್ಲಿ
ಹುಬ್ಬಳ್ಳಿ

The Asian Life Assurance Co. Ltd
Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್ಡಾಫೀಸ ಮುಂಬಯಿ)

ಇದು ಹಳೆ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗಬೇಡಿರಿ. ಈ ಕಂಪನಿಯು

ವಿಮೆಯ ರಕಮು ರೂ. ೧,೩೫,೦೦೦,೦೦ ಕಂತಿನ ಉತ್ಪನ್ನ ರೂ. ೭,೦೦,೦೦೦
ವಿಮೆಯ ಹಣ ತಿರುಗಿ ಕೊಟ್ಟದ್ದು ೧೦,೦೦,೦೦೦
ಜಿಂದಗಿ ೨೩,೧೮,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರ ಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕೆ. ವ್ಹಿ. ಹುಲಸೋಗಿ, ಬಿ. ಎ.
ಕುಲಕರ್ಣಿ, ಧಾರವಾಡದ ಏಜಂಟರು ಕರ್ನಾಟಕದ ಬ್ರಾಂಚ ಮ್ಯಾನೇಜರ
ಬಿ. ಎಚ್. ಪಾಟೀಲ ಹುಬ್ಬಳ್ಳಿಯ ಏಜಂಟರು—
ಹಾವೇರಿಯ ಚೀಫ ಏಜಂಟರು. ಶ್ರೀ. ಎಸ್. ಎಮ್. ದೊಡ್ಡಮಾದ ಮತ್ತು
ಶ್ರೀ. ಬಿ. ಪಿ. ಶಿರೋಳಕರ.

ಅನುಪ್ರಾಪ್ತ ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೨೫೦ ರೂ. ಗಳನ್ನು ಕೊಡುವಂಥ ಗೋಲ್ಡನ್ (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ ಕಂತುಗಳಾದರೂ ಇಷ್ಟಷ್ಟೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ ಏಶಿಯನ್ನ ಕಂಪನಿಯೊಂದೇ ಆಗಿರುತ್ತದೆ.

ಈ ಪತ್ರವನ್ನು ಅಣ್ಣಾಚಾರ್ಯ ಪಾಂಡುರಂಗಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. No. B. 1443.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ರವಿವಾರ ತಾರೀಖು ೧೬ ನೇ ಅಗಸ್ಟ್ ೧೯೩೧ (ಸಂಚಿಕೆ ೧೪[illegible]

ಜ್ಯೋತಿ, ಗಂಜೀಫ ಮತ್ತು ಕಂಪನಿ

ಬುಕ್ಸೆಲರ್ಸ. ಧಾರವಾಡ

[illegible]

ಧಾರವಾಡ [illegible]

ಬೆಸ್ಟ್ [illegible]

[illegible]

[illegible]

ಜಾಹೀರ ನೋಟೀಸು

ಗುಣಮಯ  ಸುಖಮಯ

[illegible] ಮೋಟರಗಳು [illegible] ಅಡ್ಡರದಲ್ಲಿ ಇರುತ್ತವೆ. [illegible] ವಿಕಾರಕ್ಕೆ ಪತ್ರವ್ಯವಹಾರ [illegible]

೧॥ ಟನ್ ಫೋರ್ಡ ಲಾರಿ. ನಂ X ೪೪೯೧

೧ ಟನ್. ಸೆವ್ಹರಲೇಟ್ ಲಾರಿ. ನಂ Z ೩೯೩೦

ಟೂರಿಂಗ ಕಾರ ಪ್ರಿನ್ಸ್ (ಪೋಕರ)

ಈ ಪ್ರಕಾರ ಮೂರು ಗಾಡಿಗಳು ಮಾರತಕ್ಕವು ಇರುತ್ತವೆ.

ಸಿ. ಬಿ. ಹಂಪಣ್ಣವರ

ಸವದತ್ತಿ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ್ಹ ಕ್ರೆಡಿಟ್ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹಿಂದಿಗೆಯು ಎಂಟು ಲಕ್ಷದಮೇಲಿರುಂಟು. ಚಕ್ರಾಂತಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರಗಳು ಮಾಡಲ್ಪಡುವವು. ಕಾಯಮು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚೆನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗಿ[illegible]

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ತಾರೀಖು ೧೬-೮-೧೯೨೬ನೇ ಇಸ್ವಿ

ಹಾವೇರಿ ಮ್ಯುನಿಸಿಪಾಲಿಟಿಯ ಚುನಾವಣೆಯು

ಯಾರು ಛಲಿಗೆ ಒಂಟರು?

—(೦)—

ಹಾವೇರಿ ಮ್ಯುನಿಸಿಪಾಲಿಟಿಯ ಚುನಾವಣೆಯಲ್ಲಿ ಪಂಚರ ವಿರುದ್ಧ ಉಮೇದವಾರರಾಗಿ ನಿಂತವರಲ್ಲಿ ಒಬ್ಬರ ಹೊರ್ತು ಉಳಿದವರು ಉಮೇದವಾರಿಯನ್ನು ಹಿಂದಕ್ಕೆ ತಕ್ಕೊಂಡರು. ಇದರ ಶ್ರೇಯೋಭಾಗವೆಲ್ಲ ಪಂಚರಿಗೇ ಇರುತ್ತದೆಂದು ವರ್ತಮಾನಪತ್ರಗಳಲ್ಲಿ ಲೇಖಗಳು ಬಂದಿವೆ. ವಸ್ತುಸ್ಥಿತಿಯು ಹಾಗಿರುವದೇ ಇಲ್ಲ. ಎಲ್ಲ ಕೀರ್ತಿಯು ಶ್ರೀಯುತರಾದ ದಿವಾಕರ ಮತ್ತು ಹುಕ್ಕೇರಿಕರ ಇವರಿಗೇ ಇರುತ್ತದೆ.

ಕುರುಕ್ಷೇತ್ರದ ಯುದ್ಧವಾದಬಳಿಕ ಪ್ರತಿಯೊಬ್ಬರು ತಮ್ಮ ಶೂರತನದ ಸ್ತುತಿಮಾಡಿಕೊಳ್ಳ ಪ್ರಾರಂಭಿಸಿದರು, ಆಗೋರ್ವ ಯೋಗಿಯು ಯಾರು ಹೆಸರಾದ ಶೂರರೆಂಬದನ್ನು ಆ ಗಿಡದಮೇಲೆ ಕೂತ ಹಕ್ಕಿಯನ್ನು ಕೇಳಿರೆಂದೆನ್ನಲು - ಆ ಪ್ರಕಾರ ಅದಕ್ಕೆ ಪ್ರಶ್ನ ಮಾಡಿದರು. 'ಸುದರ್ಶನ ಚಕ್ರ ತಿರುಗುತ್ತಿತ್ತು. ರುಂಡಗಳು ಬೀಳುತ್ತಿದ್ದವು' ಎಂಬದಾಗಿ ಅದು ಕಂಡದ್ದನ್ನು ಹೇಳಿತು. ಅದೇ ರೀತಿಯಾಗಿ ಶ್ರೀ. ದಿವಾಕರ ಹುಕ್ಕೇರಿಕರರಿಂದಲೇ ರಾಜಿಯಾಗಿ ನಿಜವಾದ ಶ್ರೇಯವು ಅವರಿಗಿರುತ್ತದೆ. ಆದರೂ ಯಾರೂ ಇವರ ಸ್ತುತಿ ಸ್ತೋತ್ರ ಮಾಡದೆ, ಪಂಚರ ಸ್ತುತಿಯನ್ನೇ ಮಾಡುತ್ತಿರುವದು ಸೋಜಿಗವಲ್ಲವೇ?

ಈ ಚುನಾವಣೆಯು ಗೊಂದಲದ ರಾಜಿಯಾಗದೇಕೆಂದೇ ಮೊದಲಿನಿಂದ ವಿಜಯಕಾರರ ಅಭಿಪ್ರಾಯವಾಗಿತ್ತು. ಉಮೇದವಾರಿಯನ್ನು ತಿರುಗಿ ತಕ್ಕೊಳ್ಳಬೇಕೆಂಬ ಕರಾರಿನಿಂದಲೆ ವಿಜಯದಲ್ಲಿ ಶ್ರೀ. ರಿತ್ತಿಯವರ ಪತ್ರವನ್ನು ಮುದ್ರಿಸಿದೆವೆಂದು ಈಗ ಬಹಿರಂಗವಾದಲಿಕ್ಕೆ ನಮಗಾವ ಅಡ್ಡೀ ತೋರುವದಿಲ್ಲ. ಶ್ರೀ. ದಿವಾಕರ ಮತ್ತು ಹುಕ್ಕೇರಿಯವರು ಅಲ್ಲಿಗೆ ತಾವಾಗಿ ಹೋಗಲಿಲ್ಲ. ಕಾರಣಿಂದ ಕರಿಸಿಕೊಂಡ ಬಳಿಕ ಹೋದರು. ಅವರಿಗೆ ಅಲ್ಲಿಯ ಸ್ಥಿತಿಯು ಸಮಾಧಾನವಾಗಿ ತೋರಲಿಲ್ಲ. ಅದನ್ನು ಸ್ಪಷ್ಟವಾಗಿ ತಮ್ಮಿಬ್ಬರ ಸಹಿಗಳಿಂದ ಪ್ರಸಿದ್ಧ ಮಾಡಿದ್ದಾರೆ. ಬಸವರಾಜವು ವಿಜಯವನ್ನಾಡಿಕೊಳ್ಳುವ ಮೊದಲು - ಈ ಮಹನೀಯರ ಪತ್ರವನ್ನು ಮುದ್ರಿಸಬೇಕಾಗಿತ್ತು. ಪಂಚರಿಗೆ ಕಲಂಕ ಹತ್ತುವದೆಂದು ಬಸವರಾಜವು ಹಿಡಿಯಲ್ಲಿ ಪಂಕವಿಡಿದು ಮೇಲೆ ತೂಗಿದಂತೆ ವರ್ತಿಸಿದೆ. ಇದೇ ಕಾರಣಕ್ಕಾಗಿ ಈ ಪತ್ರ ಮುದ್ರಿಸಲಿಲ್ಲೆಂದು ಯಾರಾದರೂ ಸಹಜವಾಗಿ ತರ್ಕಮಾಡಬಹುದು. ಮೂಲ ಕಾರಣ ಕರ್ತರನ್ನು ಬಿಟ್ಟು ಜನರು ತಂತಮ್ಮ ಪರಿಯಾಗಿ ಆತ್ಮಪೌರುಷ ಮಾಡಿಕೊಳ್ಳುವದು ಹಾಸ್ಯಾಸ್ಪದವೇ ಸೈ.

ಗಂಡ ಹೆಂಡರು ಆತ್ಮಹತ್ಯೆಕ್ಕಾಗಿ ಅಫೂ ತಕ್ಕೊಂಡರು.

—(೦)—

ನಿಜಾಮರ ಹೈದರಾಬಾದಿನಲ್ಲಿ ನಗರ ಸುಧಾರಣೆಯ ಖಾತೆಯಲ್ಲಿರುವ ನಾರಾಯಣಸ್ವಾಮಿ ಎಂಬವನು ಖಜೇನಿಗೆ ಹೋಗಿ ೩೦೦೦ ರೂಪಾಯಿ ತುಂಬ ಬೇಕಾಗಿತ್ತು. ಆಗ ಈತನಿಗೆ ಸಾಲ ಕೊಟ್ಟ ಮಿತ್ರನಾದ ಒಬ್ಬ ಕೋಮಟಿಗನು ಬಂದನು. ಗೆಳೆಯನಾದ ಇವನಿಗೆ ಮೂರುಸಾವಿರ ರೂಪಾಯಿ ಕೊಟ್ಟು, ಖಜೇನಿಯಲ್ಲಿ ತುಂಬಲಿಕ್ಕೆ ಹೇಳಿ, ತನ್ನ ಪ್ರಮಾಣಿಸಿಕೊಂಡನು. ಕೋಮಟಿಗನು ಈ ಹಣವನ್ನು ತನ್ನ ಮನೆಗೆ ಒಯ್ದು ತನ್ನ ಸಾಲ ಮುಟ್ಟಿತೆಂದನು. ಸರಕಾರದ ದ್ರವ್ಯದ ದುರ್ಗತಿಯು ಈ ಪ್ರಕಾರವಾದ್ದರಿಂದ, ತನಗೆ ಕಾರಾಗೃಹವಾಸ ತಪ್ಪದೆಂದು ನಾರಾಯಣಸ್ವಾಮಿಯು ಅಂದುಕೊಂಡು, ತನ್ನ ಹೆಂಡತಿಗೆ ನಡೆದ ಸಂಗತಿ ಹೇಳಿದನು. ಗಂಡನ ಮೇಲೆ ಹೆಂಡತಿಗೆ ಬಹಳ ಪ್ರೇಮ. ಇಬ್ಬರೂ ಅಫೂ ತಿಂದು ಸಾಯಬೇಕೆಂದು ನಿರ್ಧರಿಸಿದರು. ಅಫೂ ತಂದು ಇಬ್ಬರೂ ತಕ್ಕೊಂಡರು. ನೆರೆಯವರಿಗೆ ಈ ಸಂಗತಿ ತಿಳಿಯಿತು. ಉಪಚಾರ ಮಾಡುವಷ್ಟರಲ್ಲಿ ಗಂಡನು ಸತ್ತನು. ಹೆಂಡತಿಯು ಬದುಕಿದಳು. ಅನರ್ಥಕ್ಕೆ ಕಾರಣನಾದ ಕೋಮಟಿಗನನ್ನು ಪೋಲೀಸರು ಚತುರ್ಭುಜ ಮಾಡಿದ್ದಾರೆ.

ಬೆಂಗಳೂರ ಜಿಲ್ಲೆಯ ಡಿ|| ಲೋ|| ಬೋರ್ಡಿನ ಅಧ್ಯಕ್ಷರಾದ ಶ್ರೀ. ಪುಟ್ಟಸ್ವಾಮಿಯವರು ಇಂಗ್ಲಂಡದಲ್ಲಿರುವ ಸ್ಥಾನಿಕ ಸ್ವರಾಜ್ಯದ ಬಗೆಯನ್ನು ಅಭ್ಯಾಸಲು ವಿಲಾಯತಿಗೆ ಪ್ರಯಾಣ ಬೆಳಿಸಿದ್ದಾರೆ.

ಗಿರಣಿಗಳಲ್ಲಿ ಸಂಬಳ ಕಡಿಮೆ ಮಾಡುವಿಕೆ

...(೦)....

ಕಾಂಗ್ರೆಸದ ಹೇಳಿಕೆಯ ಪ್ರಕಾರ ಪರದೇಶಿ ನೂಲಿನ ಉಪಯೋಗ ಮಾಡುವದಿಲ್ಲೆಂದು ಕರಾರಪತ್ರ ಬರಕೊಟ್ಟಂಥ ಕೆಲ ಗಿರಣಿಯವರು ಕೂಲಿಕಾರರ ಸಂಬಳವನ್ನು ಕಡಿಮೆ ಮಾಡಬೇಕೆಂದಿದ್ದಾರೆ. ಕೂಲಿ ಕಡಿಮೆಯಾಗುವದೆಂಬ ವರ್ತಮಾನ ಕೇಳಿ, ಕೂಲಿಕಾರರಲ್ಲಿ ಅಸಂತೋಷ ಹೆಚ್ಚುವದು ಸಹಜವಾದದ್ದು. ಈ ಪ್ರಕಾರ ಅಸಂತೋಷಕ್ಕೆ ಆಸ್ಪದ ಕೊಡದೆ, ಅವರನ್ನು ಸಂತೋಷದಲ್ಲಿಡಿರೆಂದು ಮಹಾತ್ಮರು ಈ ಗಿರಣಿಯವರಿಗೆ ತಿಳಿಸಿದ್ದಾರೆ.

ಜಡ್ಜರು ಸಂಬಳ ಬಿಡರು.

....(೦)....

ಆಸ್ಟ್ರೇಲಿಯಾದ ಕಾಮನವೆಲ್ಥ ಸರಕಾರದವರು ಹಾಯಕೋರ್ಟಿನ ಜಡ್ಜರಿಗೆ ಸಂಬಳ ಕಡಿಮೆ ಮಾಡಿಕೊಳ್ಳಲಿಕ್ಕೆ ಹೇಳಿದರು. ಕಾಯದೆಯಿಂದ ಸಂಬಳ ಬಿಡಲಿಕ್ಕಾಗುವದಿಲ್ಲ. ಆದರೆ ಪ್ರವಾಸದ ಭತ್ತೆ ಬಿಡುತ್ತೇವೆಂದು ಇವರು ಉತ್ತರ ಕೊಟ್ಟಿದ್ದಾರೆ. ಇದರ ತರುವಾಯ ಸರಕಾರಕ್ಕೆ ಉಪಕಾರವೆಂದು ಮೂವರು ಜಡ್ಜರು ನೂರಕ್ಕೆ ೨೫ ರಂತೆ ತಿರುಗಿ ಕೊಡುವಂತೆ ಗೊತ್ತು ಮಾಡಿದ್ದಾರೆ. ಹಿಂದುಸ್ಥಾನದ ಜಡ್ಜರೇನು ಮಾಡುವರು?

ಕದ್ದು ಸರೆ ತರುವವನಿಗೆ ಕಠಿಣ ಶಿಕ್ಷೆ.

(....೦) ...

ಅಮೇರಿಕೆಯಲ್ಲಿ ಮದ್ಯಪಾನ ಭಕ್ತರು ಹೊರಗಿನಿಂದ ಕದ್ದು ಸರೆ ತರಿಸುವರು. ಇವರಲ್ಲಿ ಜಾಕ ಡಾಯಮಂಡ ಸಾಹೇಬನ ಹಿರಿದಿನವನು. ಪೋಲೀಸರು ಈತನನ್ನು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಮ್ಯಾಜಿಸ್ಟ್ರೇಟರು ನಾಲ್ಕು ವರ್ಷ ಕೈದು ಮತ್ತು ೧೧,೦೦೦ ಡಾಲರ ದಂಡದ ಶಿಕ್ಷೆ ವಿಧಿಸಿದರು. ಇದರ ಮೇಲೆ ಜಾಕಸಾಹೇಬನು ಅಪೀಲು ಮಾಡಿದ್ದು, ೧೫೦೦೦ ಡಾಲರಗಳ ಜಾಮೀನದ ಮೇಲೆ ಬಿಡುಗಡೆ ಹೊಂದಿದ್ದಾನೆ.

ಅಮೇರಿಕೆಯವರು ಹೆಚ್ಚಾದ ಅರಳೆ ಸುಡುವರು

—(೦)—

ಅಮೇರಿಕೆಯಲ್ಲಿ ಅರಳೆಯ ಧಾರಣೆಯು ಬಹಳವಾಗಿಳಿದದ್ದರಿಂದ, ಮತ್ತು ಹಿಂದಿನ ವರ್ಷದ್ದು ಬಹಳೇ ಸಿಲಕು ಬಿದ್ದದರಿಂದ, ಜಗತ್ತಿನ ವ್ಯವಹಾರಕ್ಕೆ ಸಾಲುವಷ್ಟು ಇಟ್ಟು ಉಳಿದದ್ದನ್ನು ಸುಡಬೇಕೆಂದು ಒಕ್ಕಲಿಗರ ಸಂಘದವರು ಅರಳೆ ಬೆಳೆಯುವ ೧೪ ಇಲಾಖೆಯ ಗವರ್ನರರಿಗೆ ತಿಳಿಸಿದ್ದಾರೆ.

ವಿಜಯ.

ತಾರೀಖು ೧೬-೮-೧೯೩೧ನೇ ಇಸ್ವಿ

ಹಾವೇರಿ ಮ್ಯುನಿಸಿಪಾಲಿಟಿಯ ಚುನಾವಣೆಯು

ಯಾರು ಛಲಿಗೆ ಒಂಟರು?

—(೦)—

ಹಾವೇರಿ ಮ್ಯುನಿಸಿಪಾಲಿಟಿಯ ಚುನಾವಣೆಯಲ್ಲಿ ಪಂಚರ ವಿರುದ್ಧ ಉಮೇದವಾರರಾಗಿ ನಿಂತವರಲ್ಲಿ ಒಬ್ಬರ ಹೊರ್ತು ಉಳಿದವರು ಉಮೇದವಾರಿಯನ್ನು ಹಿಂದಕ್ಕೆ ತಕ್ಕೊಂಡರು. ಇದರ ಶ್ರೇಯೋಭಾಗವೆಲ್ಲ ಪಂಚರಿಗೇ ಇರುತ್ತದೆಂದು ವರ್ತಮಾನಪತ್ರಗಳಲ್ಲಿ ಲೇಖಗಳು ಬಂದಿವೆ ವಸ್ತುಸ್ಥಿತಿಯು ಹಾಗಿರುವದೇ ಇಲ್ಲ. ಎಲ್ಲ ಕೀರ್ತಿಯು ಶ್ರೀಯುತರಾದ ದಿವಾಕರ ಮತ್ತು ಹುಕ್ಕೇರಿಕರ ಇವರಿಗೇ ಇರುತ್ತದೆ.

ಕುರುಕ್ಷೇತ್ರದ ಯುದ್ಧವಾದಬಳಿಕ ಪ್ರತಿಯೊಬ್ಬರು ತಮ್ಮ ಶೂರತನದ ಸ್ತುತಿಮಾಡಿಕೊಳ್ಳ ಹಾರಂಭಿಸಿದರು, ಆಗೋರ್ವ ಯೋಗಿಯು ಯಾವ ಹೆಸರಾದ ಶೂರರೆಂಬದನ್ನು ಆ ಗಿಡದಮೇಲಿನ ಪಕ್ಷಿಯನ್ನು ಕೇಳಿರೆಂದೆನ್ನಲು - ಆ ಪ್ರಕಾರ ಅದಕ್ಕೆ ಪ್ರಶ್ನ ಮಾಡಿದರು. ಸುದರ್ಶನ ಚಕ್ರ ತಿರುಗುತ್ತಿತ್ತು. ರುಂಡಗಳು ಬೀಳುತ್ತಿದ್ದವು' ಎಂಬದಾಗಿ ಅದು ಕಂಡದ್ದನ್ನು ಹೇಳಿತು. ಅದೇ ರೀತಿಯಾಗಿ ಶ್ರೀ. ದಿವಾಕರ ಹುಕ್ಕೇರಿಕರರಿಂದಲೇ ರಾಜಿಯಾಗಿ ನಿಜವಾದ ಶ್ರೇಯವು ಅವರಿಗಿರುತ್ತದೆ. ಆದರೂ ಯಾರೂ ಇವರ ಸ್ತುತಿ ಸ್ತೋತ್ರ ಮಾಡದೆ, ಪಂಚರ ಸ್ತುತಿಯನ್ನೇ ಮಾಡುತ್ತಿರುವದು ಸೋಜಿಗವಲ್ಲವೇ?

ಈ ಚುನಾವಣೆಯ ಗೊಂದಲದ ರಾಜಿಯಾಗಬೇಕೆಂದೇ ಮೊದಲಿನಿಂದ ವಿಜಯಕಾರರ ಅಭಿಪ್ರಾಯವಾಗಿತ್ತು. ಉಮೇದವಾರಿಯನ್ನು ತಿರುಗಿ ತಕ್ಕೊಳ್ಳಬೇಕೆಂಬ ಕಾರಣದಿಂದಲೆ ವಿಜಯದಲ್ಲಿ ಶ್ರೀ. ರಿತ್ತಿಯವರ ಪತ್ರವನ್ನು ಮುದ್ರಿಸಿದೆವೆಂದು ಈಗ ಬಹಿರಂಗಮಾಡಲಿಕ್ಕೆ ನಮಗಾವ ಅಡ್ಡಿ ತೋರುವದಿಲ್ಲ. ಶ್ರೀ, ದಿವಾಕರ ಮತ್ತು ಹುಕ್ಕೇರಿಯವರು ಅಲ್ಲಿಗೆ ತಾವಾಗಿ ಹೋಗಲಿಲ್ಲ. ಹಾರನಿಂದ ಕರಿಸಿಕೊಂಡ ಬಳಿಕ ಹೋದರು. ಅವರಿಗೆ ಅಲ್ಲಿಯ ಸ್ಥಿತಿಯು ಸಮಾಧಾನವಾಗಿ ತೋರಲಿಲ್ಲ. ಅದನ್ನು ಸ್ಪಷ್ಟವಾಗಿ ತಮ್ಮೀರ್ವರ ಸಹಿಗಳಿಂದ ಪ್ರಸಿದ್ಧ ಮಾಡಿದ್ದಾರೆ. ಬಸವರಾಜವು ವಿಜಯವನ್ನು ಟೀಕೊಳ್ಳುವ ಮೊದಲು - ಈ ಮಹನೀಯರ ಪತ್ರವನ್ನು ಮುದ್ರಿಸಬೇಕಾಗಿತ್ತು. ಪಂಚರಿಗೆ ಕಲಂಕ ಹತ್ತುವದೆಂದು ಬಸವರಾಜವು ಹಿಡಿಯಲ್ಲಿ ಪಂಕವಿಡಿದು ಮೇಲೆ ತೋಳದಂತೆ ವರ್ತಿಸಿವೆ. ಇದೇ ಕಾರಣಕ್ಕಾಗಿ ಈ ಪತ್ರ ಮುದ್ರಿಸಲಿಲ್ಲೆಂದು ಯಾರಾದರೂ ಸಹಜವಾಗಿ ತರ್ಕ ಮಾಡಬಹುದು. ಮೂಲ ಕಾರಣ ಕರ್ತರನ್ನು ಬಿಟ್ಟು ಜನರು ತಂತಮ್ಮ ಸರಿಯಾಗಿ ಆತ್ಮಶ್ಲಾಘನೆ ಮಾಡಿಕೊಳ್ಳುವದು ಹಾಸ್ಯಾಸ್ಪದವೇ ಸೈ.

ಗಂಡ ಹೆಂಡರು ಆತ್ಮಹತ್ಯೆಕ್ಕಾಗಿ ಅಫೂ ತಕ್ಕೊಂಡರು.

—(೦)—

ನಿಜಾಮ ಹೈದರಾಬಾದಿನಲ್ಲಿ ನಗರ ಸುಧಾರಣೆಯ ಖಾತೆಯಲ್ಲಿರುವ ನಾರಾಯಣಸ್ವಾಮಿ ಎಂಬವನು ಖಜೇನಿಗೆ ಹೋಗಿ ೩೦೦೦ ರೂಪಾಯಿ ತುಂಬ ಬೇಕಾಗಿತ್ತು. ಆಗ ಈತನಿಗೆ ಸಾಲ ಕೊಟ್ಟ ಮಿತ್ರನಾದ ಒಬ್ಬ ಕೋಮಟಿಗನು ಬಂದನು. ಗೆಳೆಯನಾದ ಇವನಿಗೆ ಮೂರುಸಾವಿರ ರೂಪಾಯಿ ಕೊಟ್ಟು, ಖಜೇನಿಯಲ್ಲಿ ತುಂಬಲಿಕ್ಕೆ ಹೇಳಿ, ತನ್ನ ಶ್ರಮವುಳಿಸಿಕೊಂಡನು. ಕೋಮಟಿಗನು ಈ ಹಣವನ್ನು ತನ್ನ ಮನೆಗೆ ಒಯ್ದು ತನ್ನ ಸಾಲ ಮುಟ್ಟಿತೆಂದನು. ಸರಕಾರದ ದ್ರವ್ಯದ ದುರ್ಗತಿಯು ಈ ಪ್ರಕಾರವಾದ್ದರಿಂದ, ತನಗೆ ಕುರಂಗವಾಸ ತಪ್ಪದೆಂದು ನಾರಾಯಣಸ್ವಾಮಿಯು ಅಂದುಕೊಂಡು, ತನ್ನ ಹೆಂಡತಿಗೆ ನಡೆದ ಸಂಗತಿ ಹೇಳಿದನು. ಗಂಡನ ಮೇಲೆ ಹೆಂಡತಿಗೆ ಬಹಳ ಪ್ರೇಮ. ಇಬ್ಬರೂ ಅಫೂ ತಿಂದು ಸಾಯಬೇಕೆಂದು ನಿರ್ಧರಿಸಿದರು ಅಫೂ ತಂದು ಇಬ್ಬರೂ ತಕ್ಕೊಂಡರು. ನೆರೆಯವರಿಗೆ ಈ ಸಂಗತಿ ತಿಳಿಯಿತು. ಉಪಚಾರ ಮಾಡುವಷ್ಟರಲ್ಲಿ ಗಂಡನು ಸತ್ತನು, ಹೆಂಡತಿಯು ಬದುಕಿದಳು. ಅನರ್ಥಕ್ಕೆ ಕಾರಣನಾದ ಕೋಮಟಿಗನನ್ನು ಪೋಲೀಸರು ಚತುರ್ಭುಜ ಮಾಡಿದ್ದಾರೆ.

ಬೆಂಗಳೂರ ಜಿಲ್ಲೆಯ ಡಿ॥ ಲೊ॥ ಬೋರ್ಡಿನ ಅಧ್ಯಕ್ಷರಾದ ಶ್ರೀ. ಪುಟ್ಟಸ್ವಾಮಿಯವರು ಇಂಗ್ಲಂಡದಲ್ಲಿರುವ ಸ್ಥಾನಿಕ ಸ್ವರಾಜ್ಯದ ಬಗೆಯನ್ನು ಅಭ್ಯಾಸಲು ವಿಲಾಯತಿಗೆ ಪ್ರಯಾಣ ಬೆಳೆಸಿದ್ದಾರೆ.

ಗಿರಣಿಗಳಲ್ಲಿ ಸಂಬಳ ಕಡಿಮೆ ಮಾಡ ಎಳೆ

....(೦)....

ಕಾಂಗ್ರೆಸದ ಹೇಳಿಕೆಯ ಪ್ರಕಾರ ಪರದೇಶಿ ನೂಲಿನ ಉಪಯೋಗ ಮಾಡುವದಿಲ್ಲೆಂದು ಕರಾರಪತ್ರ ಬರಕೊಟ್ಟಂಥ ಕೆಲ ಗಿರಣಿಯವರು ಕೂಲಿಕಾರರ ಸಂಬಳವನ್ನು ಕಡಿಮೆ ಮಾಡಬೇಕೆಂದಿದ್ದಾರೆ. ಕೂಲಿ ಕಡಿಮೆಯಾಗುವದೆಂಬ ವರ್ತಮಾನ ಕೇಳಿ, ಕೂಲಿಕಾರರಲ್ಲಿ ಅಸಂತೋಷ ಹೆಚ್ಚುವದು ಸಹಜವಾದದ್ದು. ಈ ಪ್ರಕಾರ ಅಸಂತೋಷಕ್ಕೆ ಆಸ್ಪದ ಕೊಡದೆ, ಅವರನ್ನು ಸಂತೋಷದಲ್ಲಿಡಿರೆಂದು ಮಹಾತ್ಮರು ಈ ಗಿರಣಿಯವರಿಗೆ ತಿಳಿಸಿದ್ದಾರೆ.

ಜಡ್ಜರು ಸಂಬಳ ಬಿಡರು.

....(೦)....

ಅಸ್ಟ್ರೇಲಿಯಾದ ಕಾಮನವೆಲ್ಥ ಸರಕಾರದವರು ಹಾಯಕೋರ್ಟಿನ ಜಡ್ಜರಿಗೆ ಸಂಬಳ ಕಡಿಮೆ ಮಾಡಿಕೊಳ್ಳಲಿಕ್ಕೆ ಹೇಳಿದರು. ಕಾಯದೆಯಿಂದ ಸಂಬಳ ಬಿಡಲಿಕ್ಕಾಗುವದಿಲ್ಲ. ಆದರೆ ಪ್ರವಾಸದ ಭತ್ತೆ ಬಿಡುತ್ತೇವೆಂದು ಇವರು ಉತ್ತರ ಕೊಟ್ಟಿದ್ದಾರೆ. ಇದರ ತರುವಾಯ ಸರಕಾರಕ್ಕೆ ಉಪಕಾರವೆಂದು ಮೂವರು ಜಡ್ಜರು ನೂರಕ್ಕೆ ೨೦ ರಂತೆ ತಿರುಗಿ ಕೊಡುವಂತೆ ಗೊತ್ತು ಮಾಡಿದ್ದಾರೆ. ಹಿಂದುಸ್ಥಾನದ ಜಡ್ಜರೇನು ಮಾಡುವರು!

ಕದ್ದು ಸರೆ ಮಾರುವವನಿಗೆ ಕಠಿಣ ಶಿಕ್ಷೆ.

(....೦) ...

ಅಮೇರಿಕೆಯಲ್ಲಿ ಮದ್ಯಪಾನ ಭಕ್ತರು ಹೊರಗಿನಿಂದ ಕದ್ದು ಸರೆ ತರಿಸುವರು. ಇವರಲ್ಲಿ ಜಾಕ ಡಾಯಮಂಡ ಸಾಹೇಬನ ಹಿರಿದಿನವನು. ಪೋಲಿಸರು ಈತನನ್ನು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಮ್ಯಾಜಿಸ್ಟ್ರೇಟರು ನಾಲ್ಕು ವರ್ಷ ಕೈದು ಮತ್ತು ೧೧,೦೦೦ ಡಾಲರ ದಂಡದ ಶಿಕ್ಷೆ ವಿಧಿಸಿದರು ಇದರ ಮೇಲೆ ಜಾಕಸಾಹೇಬನು ಅಪೀಲು ಮಾಡಿದ್ದು, ೧೫೦೦೦ ಡಾಲರಗಳ ಜಾಮೀನದ ಮೇಲೆ ಬಿಡುಗಡೆ ಹೊಂದಿದ್ದಾನೆ.

ಅಮೇರಿಕೆಯವರು ಹೆಚ್ಚಾದ ಅರಳೆ ಸುಡುವರು

—(೦)—

ಅಮೇರಿಕೆಯಲ್ಲಿ ಅರಳೆಯ ಧಾರಣೆಯು ಬಹಳವಾಗಿಳಿದದ್ದರಿಂದ, ಮತ್ತು ಹಿಂದಿನ ವರ್ಷದ್ದು ಬಹಳೇ ಸಿಲಕು ಬಿದ್ದದರಿಂದ, ಜಗತ್ತಿನ ವ್ಯವಹಾರಕ್ಕೆ ಸಾಲುವಷ್ಟು ಇಟ್ಟು ಉಳಿದದ್ದನ್ನು ಸುಡಬೇಕೆಂದು ಒಕ್ಕಲಿಗರ ಸಂಘದವರು ಅಲ್ಲಿ ಬೆಳೆಯುವ ೧೪ ಇಲಾಖೆಯ ಗವ್ಹರ್ನರರಿಗೆ ತಿಳಿಸಿದ್ದಾರೆ.

ಕಾಂಗ್ರೆಸದ ಜಗಳ ಎಲ್ಲಿಗೆ ನಿಂತಿತು?

....(೦)....

ಮಹಾತ್ಮರು ಲಾರ್ಡ ವಿಲಿಂಗಡನ್ನ ಸಾಹೇಬರಿಗೆ ಕಳಿಸಿದ ತಂತಿಯ ಉತ್ತರ ಬಂದಿದೆ. ಸಾಹೇಬರು ಜಗಳ ತೀರಿಸುವ ಮಾರ್ಗಾವಲಂಬನೆ ಮಾಡದೆ, ಸರ ಹಾಟ್ಸನ್ನ ಸಾಹೇಬರ ಕಡೆಗೇ ಒಲೆದಂತೆ ಉತ್ತರಕೊಟ್ಟಿದ್ದಾರೆ. ಈ ವಾದವು ಒಂದೆರಡು ಮಾತುಗಳಿಂದ ಬಗೆ ಹರಿಯುವಂತಹದಲ್ಲ. ಚರ್ಚೆಯ ಮೇಲೆ ಚರ್ಚೆಯಾಗಿ, ಬಗೆ ಹರಿಯುವಂಥ ವಿಷಯ ಎಂದು ಹೇಳಿದಂತೆ ಪ್ರಸಿದ್ಧವಾಗಿದೆ. ಸಾಹೇಬರಿಂದ ಮಹಾತ್ಮರಿಗೆ ಉತ್ತರ ಬಂದಂತೆ- ಸರ ರಾಮಸ್ವಾಮಿಯಯ್ಯಂಗಾರರಿಗೂ ಇದೇ ಉತ್ತರ ಬಂತು. ಕೂಡಲೆ ಇವರು ಮಹಾತ್ಮರನ್ನು ಕಂಡು, ಅವರ ಕೂಡ ಮಾತಾಡಿ, ಸಿಮುಲಾಕ್ಕೆ ಪ್ರಯಾಣ ಬೆಳೆಸಿದರು.

ಒಡಂಬಡಿಕೆಯಾದ ಬಳಿಕ ಮಹಾತ್ಮರು ಸರಕಾರಕ್ಕೆ ಸಾಮಾನ್ಯ ಸಹಾಯ ಮಾಡಿಲ್ಲ. ಕಾಯದೆ ಭಂಗ ಮಾಡಿ, ಹಪ್ತೆ ಕೊಡಬಾರದೆಂದವರು ೧೯ ಲಕ್ಷದ ತೆರಿಗೆ ಕೊಟ್ಟಿದ್ದಾರೆ. ಇಷ್ಟು ತೆರಿಗೆ ನ್ಯಾಯವಾದದ್ದಿದ್ದು, ಇದಕ್ಕೂ ಹೆಚ್ಚಿಗೆ ವಸೂಲ ಮಾಡಿದ್ದನ್ನು ತಿರಿಗಿ ಕೊಡಿರೆಂದೂ, ಆ ಕಾಲದಲ್ಲಿ ರಾಜೀನಾಮೆ ಕೊಟ್ಟಿದ್ದ ಗೌಡ ಶಾನಭೋಗರನ್ನು ಗೋತೀ ತಿನಿಸದೆ, ಅವರವರ ಕೆಲಸಗಳನ್ನು ಅವರಿಗೆ ಕೊಡಿರೆಂದೂ ಮಹಾತ್ಮರು ಅನ್ನುತ್ತಾರೆ. ಇದರಲ್ಲಿ ಯಾವದು ಸರಕಾರದ ಗೌರವ ಪ್ರತಿಷ್ಠೆಗೆ ಕುಂದು ತರುವದಾಗುತ್ತದೆಂಬದು ತಿಳಿಯುವದಿಲ್ಲ.

ಸರ ರಾಮಸ್ವಾಮಿಯವರು ಸಿಮುಲಾಕ್ಕೆ ಹೊರಡುವಾಗ ಮಹಾತ್ಮರು ಇನ್ನೂ ವಿಚಾರಮಾಡಿ, ಪ್ರಯಾಣ ಬೆಳೆಸುವರೆಂಬ ಭಾವದ ಒಂದು ಪತ್ರವನ್ನು ಬರೆದಿಟ್ಟು ಹೋದರು. ಈ ಪತ್ರದ ಪರಿಣಾಮವೇನೂ ಆಗಲಿಲ್ಲ. ಈ ಪತ್ರದ ನಂತರ ಕಾಂಗ್ರೆಸದ ವರ್ಕಿಂಗ ಕಮೀಟಿ ಕೂಡಿಸಿ, ಒಡಂಬಡಿಕೆ ಮುರಿದ ಬಗ್ಗೆ ಎರಡು ನಾಲ್ಕು ತಾಸು ಚರ್ಚೆ ಮಾಡಿದರು. ಅನಂತರ- ಪಂಡಿತ ಮಾಲವಿಯಾ ಮತ್ತು ದೇವಿ ಸರೋಜನಿಯವರು ಹಡಗ ಕಂಪನಿಗೆ ಪತ್ರ ಬರೆದು, ನಾವು ಹೊರಡುವದಿಲ್ಲ. ಟೀಕೀಟು ರದ್ದು ಮಾಡಿರೆಂದು ತಿಳಿಸಿದ್ದಾರೆ.

ತ್ರಾವಣಕೋರದ ಮಹಾರಾಜರಿಗೆ ನವ್ಹಂಬರ ತಿಂಗಳ ೧೬ನೆಯ ತಾರೀಖಿನ ದಿವಸ ಪಟ್ಟಾಭಿಷೇಕವಾಗುವದು. ಇವರು ಈಗ ಹಿಂದುಸ್ಥಾನದಲ್ಲಿ ಸಂಚಾರ ಮಾಡಿ, ರಾಜಧಾನಿ ತಲ್ಪಿದ್ದಾರೆ.

ಒಡಂಬಡಿಕೆ ಮುರಿಯಿತು

ಕಾಂಗ್ರೆಸ ಕಮೀಟಿಯವರು ಕೊನೆಯ ತನಕ ವಿಚಾರ ಮಾಡಿ, ಗಾಂಧಿ- ಆಯರ್ವಿನ್ನ ಒಡಂಬಡಿಕೆ ಮುರಿಯಿತು. ಮಹಾತ್ಮರು ಲಂಡನಕ್ಕೆ ಹೋಗುವದಿಲ್ಲೆಂದು ಜಾಹೀರ ಮಾಡಿದರು. ಕಾಂಗ್ರೆಸದ ಠರಾವಿನ ನಿರ್ಣಯ ಕೇಳಲಿಕ್ಕೆ ಮಣಿಭವನದ ಮುಂದೆ ನಿಂತಿದ್ದ ಸಾವಿರಾರು ಜನರು ನಿರ್ಣಯ ಕೇಳಿದ ಕೂಡಲೆ ಕಾಂಗ್ರೆಸದ ಜಯ ಜಯಕಾರ ಮಾಡಿದ ಧ್ವನಿಯಿಂದ ದಿಶಾಮಂಡಲ ವ್ಯಾಪಿಸಿದರು.

ನಾನು ಲಂಡನಕ್ಕೆ ಹೋಗದಾದದ್ದು ನನ್ನ ಎದೆಗೆ ಬಾಣ ಬಡಿದಂತಾಯಿತು. ಈ ವರ್ತಮಾನ ಕೇಳಿ, ಲಾರ್ಡ ಆಯರ್ವಿನ್ನ ಸಾಹೇಬರಿಗೆ ಬಹುವಾಗಿ ಕಡಕೆನಿಸುವದೆಂದು ಮಹಾತ್ಮರು ಉದ್ಗಾರ ತೆಗೆದಿದ್ದಾರೆ.

ಕಾಂಗ್ರೆಸದ ಠರಾವಿನ ಸಂಗತಿ ತಿಳಿದ ಕೂಡಲೆ- ಸಿಮುಲಾದಲ್ಲಿ ಲಾರ್ಡ ವಿಲಿಂಗಡನ್ನ ಸಾಹೇಬರು ಕೌನ್ಸಿಲ ಸಭೆ ಕೂಡಿಸಿದರು. ಈ ಸಭೆಗೆ ಸರ್ವಸೇನಾಧಿಪತಿಯವರೂ ದಯಮಾಡಿಸಿದ್ದರು.

ನಾನು ಸಿಮುಲಾಕ್ಕೆ ಹೋಗಿ ಲಾರ್ಡ ವಿಲಿಂಗಡನ್ನ ಸಾಹೇಬರ ಕೂಡ ಮಾತಾಡಿ, ಯಾವದೊಂದು ಕೊನೆಯ ಮಾತು ಹೇಳುವ ತನಕ, ಕಾಂಗ್ರೆಸ ವರ್ಕಿಂಗ ಕಮೀಟಿಯ ನಿರ್ಣಯವನ್ನು ಪ್ರಸಿದ್ಧ ಮಾಡಬೇಡಿರೆಂದು ಸರ ರಾಮಸ್ವಾಮಿಯವರು ಮಹಾತ್ಮರಿಗೆ ತಿಳಿಸಿದಂತೆ ಪ್ರಸಿದ್ಧವಾಗಿದೆ.

ರಾಜಿಯ ಮೂಲ ಪ್ರವರ್ತಕರಾದ ಸರ ಸಪ್ರು ಮತ್ತು ಬ್ಯಾರಿಸ್ಟರ ಜಯಕರರು ಅತ್ಯಂತವಾಗಿ ನಿರುತ್ಸಾಹರಾಗಿ, ನಾವು ಮತ್ತೆ ಮಧ್ಯಸ್ಥಿಕೆ ಮಾಡುವೆವು. ಅದಕ್ಕೆ ಸಮಯ ಕೊಡಿರೆಂದು ಲಾರ್ಡ ವಿಲಿಂಗಡನ್ನ ಸಾಹೇಬರಿಗೆ ತಾರಿನಿಂದ ವಿನಂತಿ ಮಾಡಿಕೊಂಡಿದ್ದಾರೆ.

ಕಾಂಗ್ರೆಸದ ವರ್ಕಿಂಗ ಕಮೀಟಿಯವರು ಹಾಯಕೋರ್ಟಿನ ಇಬ್ಬರು ಜನರನ್ನು ನೇಮಿಸಿ ನ್ಯಾಯ ತೀರಿಸಿಕೊಳ್ಳಬೇಕೆಂದು ಸೂಚನೆ ಮಾಡಿದ್ದರು. ಆದರೆ ಹಿಂದುಸ್ಥಾನ ಸರಕಾರದವರು ಇದಕ್ಕೆ ಒಪ್ಪಲಿಲ್ಲ.

ವಿಲಾಯತಿಯ ಲೋಕಮತವು.

ಮಹಾತ್ಮರು ವಿಲಾಯತಿಗೆ ಬರುವದಿಲ್ಲೆಂಬ ತಾರಿನ ವರ್ತಮಾನ ಕೇಳಿ ಇಂಗ್ಲಂಡದಲ್ಲಾದ ಲೋಕಮತವು.

ನಾಮದಾರ ಶಾಸ್ತ್ರಿ- ಕಿರುಕಳ ವಾದದ ದೆಸೆಯಿಂದ ಮುಖ್ಯ ಮುದ್ದೆಯನ್ನು ಬಿಟ್ಟರು. ಇನ್ನೂ ಸಮಯವಿದೆ. ಸರಕಾರದವರು ತಿ ರಾಯತರ [illegible] ಮಾನ ಈ ಜಗಳ ತೀರಿಸಿಕೊಳ್ಳಬೇಕು. ಇದರಲ್ಲಿ ಎರಡೂ ಪಕ್ಷಗಳ ತಪ್ಪಿರುತ್ತದೆ.

ಮಾರ್ನಿಂಗ ಪೋಸ್ಟ

ಮಿ- ಗಾಂಧಿಯವರು ಲಂಡನಕ್ಕೆ ಬರುವದಿಲ್ಲೆಂಬ ವರ್ತಮಾನ ಕೇಳಿ, ಇಂಗ್ಲಂಡದಲ್ಲಿರುವ ಅನೇಕರಿಗೆ ಸಮಾಧಾನವಾಯಿತು. ಮಿ. ಗಾಂಧಿಯವರಿಗೆ ಅವಶ್ಯವಾಗಿ ತಿಳಿಸಬೇಕು. ಇವರು ಇಲ್ಲಿಗೆ ಬಂದರೆ- ಎಲ್ಲರೂ ಪ್ರೀತಿಯಿಂದಲೇ ಇವರ ಸ್ವಾಗತ ಮಾಡುವರೆಂಬ ನಿಯಮವಿಲ್ಲ. ರಾವುಂಡ ಟೇಬಲಿನಲ್ಲಿ ಇವರ ಸ್ಥಳವು ತೆರವಾಗುವದೇ ವಿಹಿತವೆಂದು ಬಹು ಜನರಿಗನಿಸುವದೇ ದಿಟ.

ಡೇಲಿಹೆರಾಲ್ಡ

ಮಹಾತ್ಮರು ರಾವುಂಡಟೇಬಲಕ್ಕೆ ಬರುವದಿಲ್ಲೆಂಬ ವರ್ತಮಾನ ಕೇಳಿ, ಇಂಗ್ಲಂಡದ ಮುತ್ಸದ್ದಿಗಳಿಗೆ ವಿಷಾದವಾಗದಿರಲಾರದು. ಪರಿಷತ್ತಿನ ವೇಳೆ ಪುನ: ಮೋಡಗವಿದು ಬಂದು ಬ್ರಿಟಿಶ ಸರಕಾರದ ಕಾರ್ಯವು ಹೆಚ್ಚು ಕಠಿಣವಾಗುವದು.

ಲಾರ್ಡ ಆಯರ್ವಿನ್ನ-

ಹಿಂದುಸ್ಥಾನದ ಪರಿಸ್ಥಿತಿಯು ಅತ್ಯಂತವಾಗಿ ಸೂಕ್ಷ್ಮವಾಗಿರುವದರಿಂದ ಈ ವಿಷಯವಾಗಿ ನಾನು ಈಗಾವದನ್ನೂ ಹೇಳಬಯಸುವದಿಲ್ಲ.

ಪಂಡಿತ ಮಾಲವಿಯಾಯವರು ಹೋದದ್ದಾಯಿತು. ದೇವಿ ಸರೋಜನಿಯವರ ವಿಚಾರವೇನೆಂದು ಮಹಾತ್ಮರಿಗೆ ಪ್ರಶ್ನೆ ಮಾಡಲು- ಎಲ್ಲರೂ ಒಂದೇ ಮಾಲೆಯೊಳಗಿನ ಮಣಿಯೆಂದು ಉತ್ತರಕೊಟ್ಟರು

ಮಹಾತ್ಮರು ಲಂಡನಕ್ಕೆ ಬಂದಿದ್ದರೂ, ಮೊದಲು ಗೊತ್ತಾದ ವೇಳೆಗೆ ರಾವುಂಡಟೇಬಲ ಸೇರುವದೆಂದು ವಿಲಾಯತಿಯಿಂದ ಸುದ್ದಿ ಬಂದಿದೆ.

THE ANKALIGI BANK LTD.

Head Office

Kamankatta Dharwar

Branches

Ranebennur & Hirekerur

5%

Interest allowed on

ANNA SAVINGS BANK

DEPOSIT

Dharwar 3—1—1927 | K. B. ANKALIGI Managing Director

ಪರಮಾದ ಮೇಲೆ ರಾಮಬಾಣ ಔಷಧವು

೭ **7** ದಿನದಲ್ಲಿ ಗುಣ. ಬೇಕಾದಷ್ಟು ಹಳೆಯದು ಮತ್ತು ಅಂಟಿಕೊಂಡು ಮನೆ ಮಾಡಿಕೊಂಡದ್ದು ಮತ್ತು ತ್ವರಿತವಾದ ಪರಮಾ ರೋಗವು ಏಳೇ ದಿವಸಗಳಲ್ಲಿ ಗುಣವಾಗುತ್ತದೆ. ಈ ಔಷಧದ ಒಂದೇ ಭಾಗ ಕೊಟ್ಟರೆ ಸಾಕು. ಮೂತ್ರದಲ್ಲಾಗುವ ಉರಿಯೂ ತಿಂಡಿಯೂ ಬಂದಾಗಿ, ಮೂತ್ರವು ಸ್ವಚ್ಛವಾಗುತ್ತದೆ. ಮತ್ತು ನಾಲ್ಕು ಭಾಗ ಕೊಟ್ಟ ಬಳಿಕ ರೋಗವು ಪೂರ್ಣ ಹೋಗಿ, ಕೀವು ಬರುವದು ಪೂರಾ ಬಂದಾಗುತ್ತದೆ. ಇದರಿಂದ ಹಳೇ ಮತ್ತು ಹೊಸ ರೋಗವು ನಿಲ್ಲದೆ ಹೋಗುವದಿಲ್ಲ. ಇಂಥ ಗುಣಕಾರಕ ಔಷಧದ ಉಪಯೋಗ ಮಾಡುವದರಿಂದ, ಯಾರೂ ಸಂತೋಷವಾಗದೆ ಹೋಗರು. ಈ ಔಷಧವು ಪೂರ್ಣ ಗುಣಕಾರಿಯಾಗಿರುತ್ತದೆಂದು ಹೊಣೆಯಾಗಿ ಹೇಳುತ್ತೇವೆ. ಒಂದು ಬಾಟ್ಲಿಯ ಬೆಲೆ ಒಂದು ರೂಪಾಯಿ. ವ್ಹಿ. ಪಿ. ಪೋಸ್ಟ ಬೇರೆ.

ಡಾಕ್ಟರ ರಹೆಮತುಲ್ಲಾ ಸುಲೇಮಾನಜಿ. ಗೋಲಪಿಠ ಹಾಟಲ್ಲದ ಹತ್ತರ, ಫೋರಾಸ, ಗ್ರ್ಯಾಂಟ ರೋಡ **ಮುಂಬಯಿ**

ಶೀಘ್ರ! ಶಕ್ತಿ!! ಕೀರ್ತಿ!!

ಶ್ರೀ ದತ್ತವೀವ್ಹಿಂಗ ಮಿಲ್ ಹುಬ್ಬಳ್ಳಿ.

ಕರ್ನಾಟಕದಲ್ಲಿ ಇದೇ ಮೊದಲನೆಯ ಸೀರೆಯ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಸೀರೆಗಳು ಹಾಗೂ ಪಟಗಳು ತಯಾರಾಗುತ್ತವೆ. ಮತ್ತು ರೇಶ್ಮೆಯ ಸೀರೆಗಳು ಸಿಗುತ್ತವೆ. ಜವಳಿ ನೋಡಿ, ನಿಮಗೆ ಬೇಕಾದ ಮಾಲು ಕೊಂಡು, ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ. ಬಣ್ಣ ಹೋದರೆ - ಮಾಲು ತಿರುಗಿ ತಕ್ಕೊಳ್ಳುವೆವು.

ಮೈಸೂರು ಊದುಬತ್ತಿ

ಶುದ್ಧ ಊದುಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ ೩—೦—೦

ಕೃಷ ಪಾರಿಜಾತ ಅಷ್ಟರು ತೊಲೆ ೧ಕ್ಕೆ ೪—೦—೬

೧೯-೧೧-೨೬ ಮೈಸೂರ ಸ್ಟೋರ್ಸ, ಬೆಳಗಾವಿಯವರಗಲ್ಲಿ ಹುಬ್ಬಳ್ಳಿ

The Asian Life Assurnance Co. Ltd Bombay. Branch office Hubli

(ಸ್ಥಾಪನೆ ೧೯೧೦; ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗಬೇಡಿರಿ. ಈ ಕಂಪನಿಯು

ವಿಮೆಯ ರಕಮು ರೂ. ೧,೩೨,೦೦೦,೦೦ ಕಂತದ ಉತ್ಪನ್ನ ರೂ. ೭೦೦,೦೦೦

ವಿಮೆಯು ಹಣ ತಿರುಗಿ ಕೊಟ್ಟದ್ದು ೧೦,೦೦,೦೦೦

ಜಿಂದಿಗಿ ೨೪,೦೮,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರ ಬರೆಯಿರಿ.

ಮೆಸರ್ಸ ರಾಂಬಾಗಕರ ಮತ್ತು ಕುಲಕರ್ಣಿ. ಧಾರವಾಡದ ಏಜಂಟರು ಬಿ. ಎಚ್. ಪಾಟೀಲ ಹಾವೇರಿಯ ಚೀಫ ಏಜಂಟರು.

ಕೆ. ಪ್ಹಿ. ಮುಲಗುಂದ, ಬಿ. ಎ. ಕರ್ನಾಟಕದ ಬ್ರಾಂಚ ಮ್ಯಾನೇಜರ

ಹುಬಳಿಯ ಏಜಂಟರು— ಶ್ರೀ. ಎಸ್. ಎಮ್. ದೊಡ್ಡವಾಡ ಮತ್ತು ಶ್ರೀ. ಬಿ. ಟಿ. ವಿರೋಳಕರ.

ಅನುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು ಸೌಖ್ಯದಿಂದರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೩೦೦ ರೂ. ಗಳನ್ನ ಕೊಡುವಂಥ **ಗೋಲ್ಡನ್** (ಸುವರ್ಣ) **ಪಾಲಿಸಿಯನ್ನು** ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ ಏಶಿಯನ್ನ ಕಂಪನಿಯೊಂದೇ ಆಗಿರುತ್ತದೆ.

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

ಈ ಪತ್ರವನ್ನು ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

K. N. B. 1443.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ಸೋಮವಾರ ತಾರೀಖು ೧೭ ನೇ ಅಗಸ್ಟ ೧೯೩೧ (ಸಂಚಿಕೆ ೧೪೮

ಜೋಶಿ, ಗಂಜೀಕರ ಮತ್ತು ಕಂಪನಿ

ಶುಕ್ರವಾರಪೇಟ ಧಾರವಾಡ

ಇವರನ್ನು

ಮುಂಬೈ ಪ್ರಾವ್ಹಿನ್ಶಿಯಲ್ ಕೋ. ಇನ್ಶುಅರನ್ಸ ಕಂಪನಿ, ಲಿ.

ಇವರು

ಧಾರವಾಡ ಜಿಲ್ಲೆಯ

ಚೀಫ್ ಏಜಂಟ

ರಾಗಿ ನಿಯಮಿಸಿದ್ದಾರೆ.

ಈಗ ಜಿಲ್ಲೆಯ ಎಲ್ಲ ಮುಖ್ಯ ಸ್ಥಳಗಳಲ್ಲಿ

ಸಬ್ ಏಜಂಟ

ನ್ನು ನಿಯಮಿಸುವದಿದೆ ಈ ಕೆಲಸ ಮಾಡಲಿಚ್ಛಿಸುವವರು ತಮ್ಮ ಖಾತ್ರಿಯ ಬಗ್ಗೆ ಎಲ್ಲ ಮಾಹಿತಿ ಕೊಟ್ಟು ಚೀಫ್ ಏಜಂಟರಿಗೆ ಬರೆಯಬೇಕು ಖಾತ್ರಿಯಿಂದ ಕೆಲಸ ಮಾಡುವವರಿಗೆ ಪೂರ್ಣ ಕಮೀಶನ ಸಿಗುವದು

ಜಾಹೀರ ನೋಟೀಸು

ಸುಸಮಯ  **ಸುಸಮಯ**

ನಮ್ಮ ಕೆಳಗೆ ಕಾಣಿಸಿದ ಮೋಟರಗಳು ಮಾರಾಟಕ್ಕವುಗಳು ಇರುತ್ತವೆ ಮೋಟರಗಳು ಉತ್ತಮ ರನ್ನಿಂಗ ಆರ್ಡರದಲ್ಲಿ ಇರುತ್ತವೆ. ಗ್ರಾಹಕರು. ಮೋಟಾರ ತಕ್ಕೊಳ್ಳುವದಿದ್ದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಅಗರ ಸಮಕ್ಷಮ ಭೆಟ್ಟಿಯಾಗಿ ತಿಳಕೊಳ್ಳಬೇಕು.

೧॥ ಟನ್ ಫೋರ್ಡ ಲಾರಿ. ನಂ X ೪೪೯೧

೧ ಟನ್. ಸಿವ್ಹರಲೆಟ್ ಲಾರಿ. ನಂ Z ೩೯೩೦

ಟೂರಿಂಗ ಕಾರ ಬ್ರಿಸ್ಕೋ (ಪೇಕರ)

ಈ ಪ್ರಕಾರ ಮೂರು ಗಾಡಿಗಳು ಮಾರಾಟಕ್ಕವೆ ಇರುತ್ತವೆ.

ಸಿ. ಬಿ. ಹಂಪಣ್ಣನವರ

ಸವದತ್ತಿ.

ದಿ ಧಾರವಾಡ ಅರ್ಬನ ಕೋ

ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಬ ಲಕ್ಷಣವೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಠಾರ,

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ಒಕ್ಕ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨.೨-೧
೬ ,,	೬-೦-೦
೩ ,,	೪ ೮-೨
ಎರಡ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳ ಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ತಾರೀಖು ೧೭-೮-೧೯೩೧ನೇ ಇಸ್ವಿ

ಕೆನ್ನೆಗೆ ಬಂತೆಂದು ಕುತ್ತಿಗೆ ಕೊಯ್ಯಬಾರದು

ಒಂದು ಸಮಯದಲ್ಲಿ ರಾಜಾ ಸರ ಟಿ. ಮಾಧವರಾಯರು ಬ್ರಿಟಿಶ ರಾಜನೀತಿಯನ್ನುದ್ದೇಶಿಸಿ ಟೀಕೆಮಾಡುವಾಗ “ಕೆನ್ನೆಗೆ ಬಂತೆಂದು ಕುತ್ತಿಗೆಯನ್ನೇ ಕೊಯ್ದು ಹಾಕಬಾರದೆಂದು” “ಅಭಿಪ್ರಾಯಪಟ್ಟದ್ದು, ಪ್ರಕೃತದ ಬ್ರಿಟಿಶ ರಾಜ್ಯಕರ್ತರ ಕಾಂಗ್ರೆಸ ವಿಷಯಕವಾದ ಧೋರಣದ ದೆಸೆಯಿಂದ ನೆನಪಾಗುತ್ತದೆ. ರಾಜಾ. ಸರ ಟಿ ಮಾಧವರಾಯರಂತೆ ಮದ್ರಾಸದವರೇ ಆದ ಇನ್ಸ್ಪೆಕ್ಟರ ಮುತ್ಸದ್ದಿ ನಾಮದಾರ ಶ್ರೀ: ಶ್ರೀನಿವಾಸಶಾಸ್ತ್ರಿಯವರೂ ಕಾಂಗ್ರೆಸದ ರಾಜನಿಷ್ಠೆಯ ದೆಸೆಯಿಂದ ಅಭಿಪ್ರಾಯಪಟ್ಟಿರುತ್ತಾರೆ ಕೆಲವು ಸಂಗತಿಗಳಿಗೆ ಅನವಶ್ಯಕ ಮಹತ್ವಕೊಟ್ಟು ದೇಶಸಂಬಂಧವಾದ ಮಹತ್ವದ ಕಾರ್ಯಗಳ ಆಹುತಿಕೊಟ್ಟಂತಾಗಿರುತ್ತದೆ, ಸರಕಾರವು ವಿಚಾರ ವಿನಿಮಯ ಮಾಡಿಕೊಂಡು ತಮ್ಮ ಪತಿಯಿಂದ ಯಾರನ್ನಾದರೂ ನೇಮಿಸಿ, ಬಿಂಡವನ್ನು ಮುಗಿಸಿಕೊಳ್ಳಬೇಕೆಂದು ನಾಮದಾರರು ಅಂದಿದ್ದಾರೆ. ಈ ಮೊದಲು ಶಿಷ್ಟಾಯಿ ಮಾಡಿದಂಥ ಸರ ತೇಜ ಬಹಾದ್ದೂರ ಸಪ್ರು ಮತ್ತು ಬ್ಯಾರಿಸ್ಟರ ಜಯಕರರು ಸರಕಾರ ಮತ್ತು ಕಾಂಗ್ರೆಸದ ನಡುವೆ ರಾಜಿಯಾಗುವಂಥ ಕೆಲ ಮಧ್ಯದ ಮಾರ್ಗಗಳನ್ನು ಲಾರ್ಡ ವಿಲಿಂಗಡನ್ನ ಸಾಹೇಬರಿಗೆ ತಾರಿನಿಂದ ತಿಳಿಸಿದ್ದಾರೆ. ಈ ತರದ ಸಮಾಧಾನ ಮತ್ತು ಸಾವಧಾನವೃತ್ತಿಯು ಕಾಂಗ್ರೆಸದ ದ್ವೇಷ ಮಾಡುವ ಇಂಗ್ಲಿಷ ಜನ ಮತ್ತು ಇಂಗ್ಲಿಷ ಪತ್ರಕಾರರಿಗಿಲ್ಲ. ಮಹಾತ್ಮರು ಬಂದಿದ್ದರೆ ಬಹಳೇ ಸಂತೋಷವೆಂದು ಕೆಲವರು, ಮಹಾತ್ಮರೊಬ್ಬರೇ ಹಿಂದುಸ್ಥಾನದ ನಿಯಾಮಕರಲ್ಲೆಂದು ಕೆಲವರು ಟೀಕೆಮಾಡಿ, ಕಾಂಗ್ರೆಸ ಮತ್ತು ಮಹಾತ್ಮರ ಮಹತ್ವ ಕಡಿಮೆಮಾಡಲೆತ್ನಿಸಿ ಸೂರ್ಯನ ಮೇಲೆ ಮಣ್ಣು ತೂರಿ, ತಮ್ಮ ಕಣ್ಣಿಗೇ ಹಾಕಿಕೊಂಡಂಥ ಹೀನ ವೃತ್ತಿಯನ್ನವಲಂಬಿಸಿದ್ದಾರೆ. ಆದರೆ ಅವರಿಗೆ ಗಾಂಧಿ- ಆಯ ರ್ವಿನ್ನ ಒಡಂಬಡಿಕೆಯ ಮೂಲಕರಾರವೇ ಗೊತ್ತಿಲ್ಲ. ಕಾಂಗ್ರೆಸದವರು ಪರಿಷತ್ತಿನಲ್ಲಿ ಭಾಗತಕ್ಕೊಳ್ಳಬೇಕೆಂಬ ಕರಾರಿನಿಂದಲೇ ಕಾಯದೆಭಂಗನಿಂತು, ಮಹಾತ್ಮರೇ ಮೊದಲಾಗಿ ೫೦-೬೦ ಸಾವಿರ ಜನರು ಬಂಧಮುಕ್ತರಾಗಿದ್ದಾರೆ. ಕಾಂಗ್ರೆಸದವರು ಬರಲಿ; ಬರದಿರಲಿ; ರಾವುಂಡಟೇಬಲ ನಡೆಯುವದೆಂದು ಈಗ ಆಡರಾರಂಭಿಸಿದಂಥ ಭಾಷೆಯು ಮೂಲಕರಾರಕ್ಕೆ ಬಾಧೆತರುತ್ತದೆಂದು ಹಿಂದುಸ್ಥಾನ ಮತ್ತು ವಿಲಾಯತಿಯ ರಾಜ್ಯಕರ್ತರು ಧ್ಯಾನಕ್ಕೆ ತಂದರೆ ಕಾಂಗ್ರೆಸನ್ನು ಹೊರ್ತು ಪಡಿಸಿ, ರಾವುಂಡಟೇಬಲದ ಜೋಗುಳಹಾಡಬಾರದು.

ಜಗಳವಾದರೂ ದೊಡ್ಡ ವಿಶೇಷವಲ್ಲ. ಇಬ್ಬರ ಜಗಳ ಬಗೀ ಹರಿಯದಿದ್ದರೆ - ಮೂರನೆಯವರು ಅದನ್ನು ತೀರಿಸುವದು ಜಗತ್ತಿನ ಪ್ರಾರಂಭದಿಂದ ನಡೆದು ಬಂದದ್ದಾಗಿದೆ. ಹಿಂದುಸ್ಥಾನ ಮತ್ತು ಇಂಗ್ಲಂಡದ ನಡುವೆ ಸ್ವರಾಜ್ಯದ ವಾದ ಬಗೀ ಹರಿಯದಿದ್ದರೆ - ರಾಷ್ಟ್ರಸಂಘದ ಮುಖಾಂತರ ಅದನ್ನು ತೀರಿಸಿಕೊಳ್ಳಬೇಕೆಂದು ಮ್ಯಾಂಚೆಸ್ಟರ ಗಾರ್ಡಿಯನ್ನ ಪತ್ರವು ಸೂಚಿಸಲು - ನಮ್ಮ ಜಗಳವನ್ನು ನಾವೇ ತೀರಿಸಿಕೊಳ್ಳತಕ್ಕವರೆಂದು ಬ್ರಿಟಿಶ ಮುತ್ಸದ್ದಿಗಳು ಅಭಿಮಾನದಿಂದ ಹೇಳಿಕೊಂಡಿದ್ದಾರೆ. ಆ ಮಾತಿನ ಪ್ರಕಾರ ಅಗ್ಗೆ ನಡೆಸಬಾರದು? ಇದೇ ಬಾರ್ಡೋಲಿ, ಬೋರಸಾದದ ತೀರ್ವೆಯ ವಿಚಾರಿಣೆಯಲ್ಲಿ ಸರಕಾರದವರು ಇಬ್ಬರು ಜಡ್ಜರನ್ನು ನೇಮಿಸಿ, ಅವರ ನಿರ್ಣಯವನ್ನು ಅಂಗೀಕರಿಸಿದ್ದಾರೆ ಅದೇ ಮೇರೆಗೆ ಹಾಯಕೋರ್ಟಿನ ಇಬ್ಬರು ಜಡ್ಜರನ್ನು ನೇಮಿಸಿರಿ. ಅವರು ಕೊಡುವ ತರಾವಿನಂತೆ ಉಭಯತರೂ ನಡೆಯುವಾ ಎಂಬದಾಗಿ ಮಹಾತ್ಮರು ಕೇಳಿದ್ದಾರೆ. ಇದಕ್ಕೆ ಸರ ಹಾಟಸನ್ನ ಸಾಹೇಬರು ಸಿದ್ಧರಿಲ್ಲ. ಲಾರ್ಡವಿಲಿಂಗಡನ್ನ ಸಾಹೇಬರೂ ಸಿದ್ಧರಿಲ್ಲ. ಹಪ್ತೆಯ ರಿವಿಜನ್ನದ ಒಗ್ಗಿ ತಮ್ಮ ಪಾಲಿಗೆ ಅಪಯಶ ಬಂದಂತೆ ಸದ್ಯದ ವಸೂಲಿಯಲ್ಲಿಯೂ ಹಿಂಸೆಯ ಆರೋಪ ಹೊರುವದೆಂಬ ಭಯದಿಂದ ಮುಂಬಯಿ ಸರಕಾರದವರು ಪಂಚಾಯತಿಗೆ ಒಡಂಬಡುವದಿಲ್ಲೆಂದು ಸ್ಪಷ್ಟವಾಗಿ ಅನ್ನಬೇಕಾಗುತ್ತದೆ ಲಂಡನದಲ್ಲಿ ಕೂತ ನಾಮದಾರ ಶಾಸ್ತ್ರಿಯವರಿಗೆ ಇದು ಅನವಶ್ಯಕವಾದ ಕ್ಷುದ್ರ ವಿಷಯವೆನಿಸಬಹುದು. ಮಹಾತ್ಮರು ಹೇಳುವಂತೆ ರೈತರ ಜೀವದ ಹಾಗೂ ನ್ಯಾಯಾನ್ಯಾಯದ ತಳಹದಿಯಾಗಿದ್ದು, ತಳಗಟ್ಟಿಯಾದ ಒಳಿಕೆ, ಗೋಡೆ ಎಬ್ಬಿಸಬೇಕಾಗುತ್ತದೆಂಬದನ್ನು ರಾಜ್ಯಕರ್ತರು ಮರೆಯಲಾಗದು. ನಿನ್ನಿನ ಶನಿವಾರ ತಪ್ಪಿದರೂ, ಮುಂದಿನ ಶನಿವಾರ ಹೊರಡುವಷ್ಟು ಅವಕಾಶವುಂಟು. ಅಷ್ಟರಲ್ಲಿ ರಾಜಿಯಾಗುವದು ಉಭಯ ಪಕ್ಷಕ್ಕೂ ಕ್ಷೇಮ.

ಕಾಂಗ್ರೆಸದ ವರ್ಕಿಂಗ ಕಮಿಟಿಯ ಠರಾವುಗಳು

--(೦)--

ದಿಲ್ಲಿಯಲ್ಲಾದ ಒಡಂಬಡಿಕೆಯ ಕರಾರುಗಳ ಪ್ರಕಾರ- ಹಿಂದುಸ್ಥಾನ ಸರಕಾರ, ಮ. ಗಾಂಧಿ ಹಾಗು ಮುಂಬಯಿ ಸರಕಾರದ ನಡುವೆ ನಡೆದ ಪತ್ರವ್ಯವಹಾರದ ವಿಚಾರವಾಗಿ ವರ್ಕಿಂಗ ಕಮಿಟಿಯು ಎಲ್ಲ ರೀತಿಯಿಂದಲೂ ವಿಚಾರಮಾಡಲಾಗಿ ಪ್ರಾಂತಿಕ ಸರಕಾರದಿಂದ ದಿಲ್ಲಿಯ ಒಡಂಬಡಿಕೆಯನ್ನು ಮುರಿಯುವದು ಅತ್ಯವಶ್ಯವಾಗಿ ಸತತವಾಗಿ ನಡೆದಿರುತ್ತದೆಂದು ತೋರಿಸುವದಕ್ಕೆ ವಿಷಾದವೆನಿಸುತ್ತದೆ ಒಡಂಬಡಿಕೆಯ ಕರಾರುಗಳ ವಿಚಾರ ಮಾಡುವದಕ್ಕೂ, ಕೊನೆಯ ನಿರ್ಣಯ ಹೇಳುವದಕ್ಕೂ, ಪಂಚರನ್ನು ನೇಮಿಸಬೇಕೆಂದು ಕಾಂಗ್ರೆಸದ ಪತಿಯಿಂದ ಮಹಾತ್ಮರು ಸರಕಾರಕ್ಕೆ ವಿನಂತಿ ಮಾಡಿಕೊಂಡರು. ಇದು ರೈತರ ಆಗ್ರಹದ ಹೋಗಿ ಏನ ಪ್ರಶ್ನವಿದ್ದರೂ, ಸರಕಾರದವರು ಈ ಸಹಜವಾದ ಪ್ರಶ್ನವನ್ನು ದೂರೀಕರಿಸಿದರು. ಈ ಪರಿಸ್ಥಿತಿಯಲ್ಲಿ ಒಪ್ಪಂದದ ಕರಾರುಗಳ ಪ್ರಕಾರ ಮತ್ತು ರಾಷ್ಟ್ರಹಿತದ ದೆಸೆಯಿಂದ ಕಾಂಗ್ರೆಸವು ರಾವುಂಡ ಟೇಬಲಿನಲ್ಲಿ ಭಾಗ ತಕ್ಕೊಳ್ಳಬಾರದು.

ವರ್ತಮಾನಪತ್ರದವರ ಮುಂದೆ ಮಹಾತ್ಮರು ಹೇಳಿದ್ದು

—(೦)—

ಮೋರೆನರಾವು ಪ ಸಾದ ಕಡೆಗೆ, ಬಾಗಿಲದಲ್ಲಿ ಕಾದುಕೊಂಡಿದ್ದ ವರ್ತಮಾನಪತ್ರಕಾರರ ಪ್ರತಿನಿಧಿಗಳು ಮಹಾತ್ಮರನ್ನು ಕಾಣಲಿಕ್ಕೆ ಬಂದರು. ಅವರನ್ನು ಉದ್ದೇಶಿಸಿ, ಅಂದದ್ದೇನಂದರೆ-

ನಾನು ಲಂಡನ್ನಕ್ಕೆ ಹೋಗದಂತಾದದ್ದು ಎದೆಗೆ ಗುಂಡು ಒಡೆದಂತಾಗಿರುತ್ತದೆ ಲಂಡನದಲ್ಲಿರುವ ನನ್ನ ಅನೇಕ ಮಿತ್ರರಿಗೂ, ಲಾರ್ಡ ಆಯರ್ವಿನ್ನ ಸಾಹೇಬರಿಗೂ ಈ ಸುದ್ದಿ ಕೇಳಿ, ಬಹಳೇ ಖೇದವೆನಿಸಬಹುದು ಒಳ್ಳೇ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸರಕಾರದವರು ನನ್ನ ನ್ಯಾಯವಾದ ಬೇಡಿಕೆಯನ್ನು ಪೂರ್ಣ ಮಾಡುವರೆಂದು ನಾನು ಆಶೆಯುಳ್ಳವನಾಗಿದ್ದೆನು. ನನ್ನ ಬೇಡಿಕೆಯು ಸಾದಾ ಆಗಿತ್ತು. ಸರಕಾರವಾಗಲಿ, ಇನ್ನಾರಾಗಲಿ, ಒಡಂಬಡಿಕೆಯ ಭಂಗವಾದರೆ- ಒಡಂಬಡಿಕೆಯ ಎಲ್ಲ ಕರಾರುಗಳ ಮೇರೆಗೆ ವಿಚಾರವಾಗುವದು ಯೋಗ್ಯವಾಗುತ್ತದೆ ಏಕಂದರೆ - ಇದು ಸರ್ವಸತ್ತಾಧಾರಿಯಾದ ಸರಕಾರ ಮತ್ತು ರಾಷ್ಟ್ರದಲ್ಲಿ ಪ್ರಜಾಪ್ರತಿಷ್ಠಿತ ಸಂಸ್ಥೆಯ ನಡುವೆಯಾದ ಒಡಂಬಡಿಕೆಯಾದದ್ದಿರುತ್ತದೆ. ಸರಕಾರಕ್ಕೆ ಪಂಚರನ್ನು ನೇಮಿಸಿರೆಂದು ಹೇಳಿದೆನ್ನು.

ಸರಕಾರವು ಇದಕ್ಕೆ ಚಿಟ್ಟಿ ಹಾಕಿತು. ಇಂಥ ಪರಿಸ್ಥಿತಿಯಲ್ಲಿ ತಿಗರಿಯ ಪರಿಷತ್ತಿನಲ್ಲಿ ಭಾಗ ತೆಗೆದುಕೊಳ್ಳುವದು ಕಾಂಗ್ರೆಸದ ಪ್ರತಿಷ್ಠೆಗೆ ಯೋಗ್ಯವೆನಿಸುವದಿಲ್ಲ. ಕಾಂಗ್ರೆಸದವರು ಈ ವಿಷಯಕವಾದ ಎಲ್ಲ ಪತ್ರವ್ಯವಹಾರವನ್ನು ಬೇಗನೆ ಪ್ರಸಿದ್ಧಪಡಿಸುವರು ಇದರಿಂದಲೇ ಒಳಿಕ ಸರಕಾರ ಮತ್ತು ಕಾಂಗ್ರೆಸದ ನಡುವೆ ಎಲ್ಲಿ ಭೇದ ಬುದ್ಧಿ ಹುಟ್ಟಿತೆಂಬುದು ತಿಳಿಯುವದು.

ಪ್ರಶ್ನೆ- ಕಾಂಗ್ರೆಸದವರು ಪುನಃ ಕಾಯದೆ ಭಂಗದ ಚಳವಳಿ ಹೂಡುವರೇ ?

ಉತ್ತರ- ಕಾಂಗ್ರೆಸವು ಮುಂದಾವ ಕಾರ್ಯಕ್ರಮವನ್ನು ಮಾಡುವದೆಂಬದನ್ನು ನನಗೆ ಇಂದೇ ಹೇಳಲಿಕ್ಕೆ ಬರುವದಿಲ್ಲ, ಸರಕಾರವು ಅಂಗೀಕರಿಸುವಂಥ ಧೋರಣದ ಮೇಲೆ ಮುಂದಿನ ಕಾರ್ಯಕ್ರಮವು ಅವಲಂಬಿಸುವದು. ಕಾಂಗ್ರೆಸವು ಅವಸರ ಮಾಡಿ. ಯಾವ ಚಳವಳಿಯನ್ನೂ ಹೂಡುವದಿಲ್ಲೆಂಬದನ್ನು ಧ್ಯಾನದಲ್ಲಿಡಿರಿ. ಇನ್ನು ಒಡಂಬಡಿಕೆಯು ಮುರಿದೇ ಹೋಯಿತೆಂದು ತಿಳಿಯಬೇಡಿರಿ. ಒಡಂಬಡಿಕೆಯ ಕರಾರುಗಳನ್ನು ಶಕ್ಯವಾದ ರೀತಿಯಿಂದ ನಡೆಸಲು ಕಾಂಗ್ರೆಸವು ಸ್ವಾಭಿಮಾನದಿಂದ ಸಿದ್ಧವಿರುವದು. ಸರಕಾರದಿಂದ ಅಸಹ್ಯವಾದ ವರ್ತನವಾದರೆ - ಕಾಂಗ್ರೆಸವು ಆತ್ಮರಕ್ಷಣೆಯ ಉಪಾಯಗಳನ್ನು ಕೈಕೊಳ್ಳುವದು. ಈ ವಿಷಯಕವಾದ ಎಲ್ಲ ಪತ್ರವ್ಯವಹಾರವನ್ನು ಪ್ರಸಿದ್ಧ ಮಾಡಲು, ಹ್ಯಾಮಿಸರಾಯರ ಸಮ್ಮತಿಯನ್ನು ಕೇಳಿದ್ದೇವೆ.

ಮಹಾತ್ಮರು ವಿಲಾಯತಿಯಿಂದ ಬಂದ ತಾರಿಗೆ ತಾರಿನಿಂದ ಉತ್ತರ ಕಳಿಸಿದ್ದು

....(೦)....

ನ್ಯೂಜ ಕ್ರಾನಿಕಲ ಪತ್ರದಿಂದ ಬಂದ ತಾರು.- ಕಾಂಗ್ರೆಸ ವರ್ಕಿಂಗ ಕಮಿಟಿಯ ಗೊತ್ತುವಳಿಯ ವರ್ತಮಾನ ಕೇಳಿ, ಇಂಗ್ಲಂಡದ ಬಹು ಭಯಂಕರ ಚಳವಳಿಯುಂಟಾಗಿ, ನಿರಾಶೆಯ ವಾತಾವರಣವುಂಟಾಗಿರುತ್ತದೆ. ಆದರೂ ನೀವು ಇಂಗ್ಲಂಡಕ್ಕೆ ಬರಬಹುದೇ?

ಉತ್ತರ- ನನಗೆ ಲಂಡನಕ್ಕೆ ಬರಲು ಈಗ್ಯೂ ಉತ್ಸುಕತೆಯುಂಟು. ನನ್ನ ವಿಚಾರ ದೃಷ್ಟಿಯಿಂದ ಎಲ್ಲ ವಿಘ್ನಗಳನ್ನು ದೂರ ಮಾಡಲು ಪ್ರಯತ್ನಿಸಿದೆನು. ಆದರೆ ನಾನು ಲಂಡನದ ಪರಿಷತ್ತಿಗೆ ಹೋಗಬೇಕೆಂದು ಆಳರಸರ ಮನಸ್ಸಿನಲ್ಲಿದ್ದಂತೆ ತೋರುವದಿಲ್ಲ. ಸರಕಾರವು ಹಾಕಿದ ಶರ್ತುಗಳು ಕಾಂಗ್ರೆಸಕ್ಕೆ ಮಾನ್ಯವಿಲ್ಲದ್ದರಿಂದ, ನನಗೆ ವಿಲಾಯತಿಗೆ ಬರಲಿಕ್ಕಾಗುವದಿಲ್ಲ. ಇದರಿಂದ ನನ್ನ ರಜೆಗೆ ಮಾರ್ಗವುಂಟು.

ಮಹಾತ್ಮರು ಅಹಮದಾಬಾದಿಗೆ ಹೋದರು.

ಸರಕಾರದವರು ಹಿಡಿಯುವ ತನಕ ಅಲ್ಲಿರುವರು.

—(೦)—

ಕಾಂಗ್ರೆಸ ವರ್ಕಿಂಗ ಕಮಿಟಿಯ ಠರಾವಾದ ಕೂಡಲೆ- ಮಹಾತ್ಮರು ಅಹಮದಾಬಾದಿಗೆ ಪ್ರಯಾಣ ಬೆಳೆಸಿದರು. ಸ್ವರಾಜ್ಯ ಸಿಗುವತನಕ ಅವರು ಸಾಬರಮತಿಯ ಆಶ್ರಮಕ್ಕೆ ಹೋಗರಾದ್ದರಿಂದ, ಗುಜರಾಥ ವಿದ್ಯಾಪೀಠದಲ್ಲಿಳಿದುಕೊಂಡರು. ಸರಕಾರದವರು ತಮ್ಮನ್ನು ಹಿಡಿದು ತುರಂಗದಲ್ಲಿ ಹಾಕುವ ತನಕ ಅಲ್ಲಿಯೇ ಇರತಕ್ಕವರೆಂದು ಜಾಹೀರಮಾಡಿದ್ದಾರೆ.

ಸಪ್ರು- ಜಯಕರರ ಶಿಷ್ಟಾಯಿ ಹಳಸಿತು.

....(೦)....

ಸರ ಸಪ್ರು ಜಯಕರರು ಪುನಃ ಮಧ್ಯಸ್ಥಿಕೆ ಮಾಡಬೇಕೆಂದಿದ್ದರಷ್ಟೇ; ಇದು ತಕ್ಕದ ಪ್ರಶ್ನವು. ರಾಜಕೀಯ ವಿಚಾರದಂಥ ಪ್ರಶ್ನವಲ್ಲ. ಕಾರಣ ನಿಮ್ಮ ಮಧ್ಯಸ್ಥಿಕೆ ಯುಂಟಾಗುವದಿಲ್ಲೆಂದು ಲಾರ್ಡ ವಿಲ್ಲಿಂಗಡನ್ನ ಸಾಹೇಬರಿಂದ ಇವರಿಗೆ ಉತ್ತರ ಬಂತು. ಹೀಗೆ ನಿರಾಶಜನಕ ಉತ್ತರ ಬಂದರೂ ಇವರು ವಿಲಾಯತಿಗೆ ಹೊರಟು ಹೋದರು.

ವಿಲಾಯತಿಗೆ ಹೋದವರು.

....(೦)....

೧ ಸರ ಸಪ್ರು, ೨ ಬ್ಯಾರಿಸ್ಟರ ಜಯಕರ, ೩ ಡಾಕ್ಟರ ಮುಂಜೆ, ೪ ಎನ್. ಎಮ್. ಜೋಶಿ ೫ ಮೌ. ಶೌಕತಲ್ಲಿ ೬ ಶ್ರೀ. ರಂಗಸ್ವಾಮಿ ಅಯ್ಯಂಗಾರ, ೭ ಮೌಲಾನಾ ಶೌಕತಲ್ಲಿ, ೮ ಡಾಕ್ಟರ ಅಂಬೇಡಕರ, ೯ ಸಾಂಗಲಿಯ ಚೀಫರು ೧೦ ಮೌ. ಶೌಕತಲ್ಲಿ ಇವರೇ ಮೊದಲಾದವರು

ವ್ಯಾಯಾಮ-ಶಾಲೆ ಮತ್ತು ವಾಚನಾಲಯಗಳಿಗೆ ದ್ರವ್ಯ ಸಹಾಯ

—(೦)—

ಇಲ್ಲಿಯ ಮ್ಯುನಿಸಿಪಾಲಿಟಿಯವರು ವ್ಯಾಯಾಮ ಸಂಘ ಮತ್ತು ಪುಸ್ತಕಾಲಯಗಳಿಗೆ ಉಚಿತವಾಗಿ ಕೊಡಲು ಕೆಲ ರಕಮನ್ನು ತೆಗೆದಿಟ್ಟಿದ್ದಾರೆ. ತಮಗೆ ಈ ರಕಮಿನ ಲಾಭ ಪಡೆಯಬೇಕೆನ್ನುವಂಥವರು ಸ್ಟ್ಯಾಂಡಿಂಗ ಕಮಿಟಿಯ ಚೇರಮನ್ನರ ಕಡೆಗೆ ಅರ್ಜಿಯನ್ನು ಮಾಡಬೇಕು. ಅರ್ಜಿಯ ಪ್ರಕಾರ:-

೧ ಸಂಸ್ಥೆಯು ಸಾರ್ವಜನಿಕವೋ ?
೨ ಸಂಸ್ಥೆಯ ವಾರ್ಷಿಕ ಆದಾಯವೆಷ್ಟು
೩ ಧರ್ಮಾರ್ಥವೋ ? ವರ್ಗಣಿಯಿಂದಲೋ ?
೪ ಹಿಂದೆ ಮಾಡಿದ ಕಾರ್ಯ ಮತ್ತು ಮುಂದೆ ಮಾಡಬೇಕಾದ ಕಾರ್ಯ
೫ ಸಂಸ್ಥೆಯಿಂದ ಎಷ್ಟು ಜನರು ಲಾಭ ಹೊಂದುತ್ತಿದ್ದಾರೆ.
೬ ಸಂಸ್ಥೆಯ ಸದ್ಯಃಸ್ಥಿತಿಯು; ಇತ್ಯಾದಿ

ಕರ್ನಾಟಕದ ಮಾರಿಕಾ ಬೇನೆಯು.

—(೦)—

ಈ ಬೇನೆಯು ಪ್ರಾರಂಭವಾಗಿ ಮೂರು ತಿಂಗಳಾಯಿತು ಧಾರವಾಡ, ಬೆಳಗಾವಿ, ಮತ್ತು ವಿಜಾಪೂರ ಜಿಲ್ಲೆಗಳು ಬೇನೆಯ ಮುಖ್ಯ ಸ್ಥಳಗಳಾಗಿವೆ. ಬೇನೆ ಬಂದವರ ಮತ್ತು ಸತ್ತವರ ವಿವರವು.

ಜಿ	ಬ	ಸ
ಧಾರವಾಡ	೪೪೫೩	೨೨೪೭
ಬೆಳಗಾವ	೫೧೬೩	೨೪೬೭
ವಿಜಾಪೂರ	೨೮೭೫	೧೧೩೮
ತಿಂಗಳ ಪ್ರಕಾರ ಒಟ್ಟು ಮರಣ		
ಮೇ.	೧೦೫೦	೪೮೨
ಜೂನ.	೩೭೭೭	೧೬೫೯
ಜುಲೈ.	೫೪೫೯	೩೪೧೯

ಧಾರವಾಡ ಜಿಲ್ಹೆಯಲ್ಲಿ ಆಗಸ್ಟ ತಿಂಗಳ ಮೊದಲನೆಯ ವಾರದಲ್ಲಿ ಬೇನೆ ಬಿಟ್ಟಿರುವ ಲಕ್ಷಣ ತೋರಿತು. ೫೦೭ ಜನರಿಗೆ ಬಂದು, ೩೦೦ ಜನರು ಸತ್ತಿದ್ದಾರೆ. ಹುಬ್ಬಳ್ಳಿ ತಾಲೂಕಿನ ಮಾತ್ರ ಹೆಚ್ಚುತ್ತಿರುವದು. ೭೮೨ ಜನರಿಗೆ ಬಂದು, ೧೭೦ ಜನರು ತೀರಿಕೊಂಡರು.

ಮುಂಬಯಿಯಲ್ಲಿ ಒಬ್ಬ ಪಾರ್ಸಿ ಹೆಣ್ಣುಮಗಳು ಹಿಂದೂಧರ್ಮ ಸ್ವೀಕಾರಮಾಡಿ, ಹಿಂದೂ ಗೃಹಸ್ಥನ ಮದಿವೆಯಾದಳು. ಗುಲಬ ... ಎಂಬ ಫಾರ್ಸಿ ಹೆಸರಿನ ಬದಲು ಗುಲಾಬಬಾಯಿ ಎಂದು ಹಿಂದೂ ಹೆಸರಿಟ್ಟುಕೊಂಡಳು.

ರಾಣೇಬೆನ್ನೂರಿನ ಚವಳೀ ವರ್ತಕರು ಕಾಂಗ್ರೆಸದ ಆಜ್ಞೆಯ ಮೇರೆಗೆ ಪರದೇಶಿ ಚವಳಿ ಗಂಟು ಕಟ್ಟಿದ್ದರು. ಅದಿನೆಯ ಬೆಲೆ ೨೦ ಸಾವಿರವಾಗಿರುತ್ತದೆ.

ಸರ ಪ್ರಭಾಶಂಕರ ಪಟ್ಟಣಿಯವರು ಸರ ವಿಲಾಯತಿಗೆ ಹೋಗುವದನ್ನು ರಹಿತಮಾಡಿದರು.

ನಾಗಪಂಚಮಿಯ ರಜೆ —

ನಾಗಪಂಚಮಿಯ ದಿನದಿಂದ ನಾಳಿನ ದಿವಸ ಮುದ್ರಣಾಲಯಕ್ಕೆ ರಜೆ ಇರುವದರಿಂದ, ಬುಧವಾರ ದಿವಸದ ವಿಜಯವು ಪ್ರಕಟವಾಗಲಾರದು.

ಧಾರವಾಡ :

ಇಲ್ಲಿಯ ರಾಜಹಂಸ ಪತ್ರದ ಸಂಪಾದಕ ರಾಗಿದ್ದ ಶ್ರೀ. ಮಂಜುನಾಥ ನಾರಾಯಣ ಟೆಂಬೆ ಯವರು ಮೊನ್ನೆ ರಾತ್ರಿ ಪರಲೋಕವಾಸಿಯಾದ ರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ನೋಟಿಸು

ದಿ ಧಾರವಾಡ ಟೀಚರ್ಸ ಕೊ. ಅ.

ಸೊಸಾಯಟಿ ಲಿ. ಧಾರವಾಡ

—(೦)—

ಈ ಬ್ಯಾಂಕದಲ್ಲಿ ಕಾರಕೂನ ಜಾಗಾ ನಿ ಯಮಿಸತಕ್ಕದ್ದಿರುತ್ತದೆ. ಕಾರಣ ಬ್ಯಾಂಕಿಗೆ ಸಂ ಬಂಧಪಟ್ಟ ಯಾವತ್ತು ಕಾಗದ ಪತ್ರ ಮತ್ತು ಜ ಮಾಖರ್ಚಿನ ಮಾಹೀತಿಯುಳ್ಳವರು (ಬ್ಯಾಂಕಿಗೆ ಸಂಬಂಧಿಸಿದ ಯಾವದಾದರೊಂದು ಪರೀಕ್ಷೆಯಾ ದವರು) ಮತ್ತು ಟಾಯಪಿಂಗ ಬರತಕ್ಕವರು ಇ ದ್ದರೆ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳಬ ಹುದು. ಯೋಗ್ಯವಾದ ಪಗಾರವು ಕೊಡಲ್ಪ ಡುವದು. ಅರ್ಜಿ ಮಾಡುವವರು ಸಪ್ಟ ೧೯೩೧ ನೇ ಇಸ್ವಿ ಅಗಸ್ಟ ತಿಂಗಳ ಕೊನೆಯ ಒಳಗಾಗಿ ಅರ್ಜಿ ಮಾಡತಕ್ಕದ್ದು.

ತಾ|| ೧೬ನೇ ಅಗಸ್ಟ ೧೯೩೧ ನೇ ಇಸ್ವಿ

ಸ್ಹಿ. ಬಿ. ಹಳ್ಳಿಯಾಳ.

ಚೇರಮನ್ ಟೀಚರ್ಸ ಕೊ. ಅ. ಸೊ. ಲಿ

ಧಾರವಾಡ.

ನೋಟೀಸಿನ ಉತ್ತರಾ

ತಿಪ್ಪಣ್ಣಾ ಫಕೀರಪ್ಪ ಹೂಗಾರ ಸಾ|| ಗುಡಗೇರಿ ಇವರಿಗೆ–

ನಾನು ಕೆಳಗೆ ಸಹಿ ಮಾಡಿದವಳು ಈ ನೋಟಿ ಸಿನ ಉತ್ತರದಿಂದ ತಿಳಿಸುವದೇನಂದ್ರೆ

ನೀನು ಧಾರವಾಡದ ವಿಜಯ ವರ್ತಮಾನ ಪತ್ರದಲ್ಲಿ ತಾರೀಖು ೬-೮-೧೯೩೧ ನೇ ಇಸ್ವಿ ದಿ ವಸ್ಸ ಕೊಟ್ಟ ನೋಟಿಸು ನನಗೆ ಮುಟ್ಟಿ ಮಜಕೂರ ತಿಳಿಯಿತು. ಅದರಲ್ಲಿ ಬರೆದ ಯಾವತ್ತೂ ಮಜ ಕೂರ ಸುಳ್ಳು ವ ಖೋಟಿ ಇರುವದಲ್ಲದೇ ಮತ ಲಬಿಯಿಂದ [illegible] ಸವರೀ ಯಾವತ್ತೂ ಮಜ ಕೂರಿಗೆ ನನ್ನ ಕಬೂಲಿ ಇಲ್ಲಾ.

ನೀನು ನನ್ನ ಲಗ್ನದ ಗಂಡನು ಇದ್ದದ್ದು ಖರೆ ಅಂದ್ರೆ ನೀನು ನನ್ನನ್ನು ಛಲೋ ರೀತಿಯಿಂದ ಇಟ್ಟಕೊಂಡು ಬಾಳ್ವೆ ಮಾಡಿದ್ದು ನಿನ್ನಿಂದಾ ನೇ ನಾನು ಈಗ ಬಸರಾಗಿರುತ್ತೇನೆ. ಮತ್ತು ಏಳ ಕಡಿಗೆ ನೀನು ಪಬ್ಬ ರಂಡಿಗೆ ಇಟ್ಟುಕೊಂಡು ನನ್ನ ಮೇಲೆ ದೇಮಾರ್ಜಿ ಮಾಡಿ ನನಗೆ ಅಂದ್ರೆ (ಬಸರ ಹೆಂಗಸಿಗೆ) ಹೊಡಬಡಾ ಬಡಬಡಾ ಮಾಡಿ ಚಲೋ ರೀತಿಯಿಂದ ನಡಿಸಿ ಕೊಳ್ಳದಲೇ ನನಗೆ ಬಹಳೇ ತ್ರಾಸ ಕೊಡಲಿಕ್ಕೆ ಹತ್ತಿದಿ. ನಂತರಾ ನನಗೆ ಹಡಿ ಯುವ ದಿವಸಗಳು ಸಮೀಪಿಸಿದ್ದರಿಂದ ನೀನೇ ನನ್ನ ಹಡಿಯುವದರ ಬಗ್ಗೆ ಕರಕೊಂಡು ಬಂದು ನನ್ನ ತವರಮನಿಗೆ ಕಳ್ಸಿಕೊಟ್ಟು ಹೋದಿ ನಂತರಾ ನೀನು ವ ನಿನ್ನ ಇಟ್ಟುಕೊಂಡ ರಂಡೀ ವಗೈರೇರು ಮಂದಾ ಗಿ ಈಗ ಈ ತರದ ಸುಳ್ಳು ಮಜಕೂರಿನ ನೋಟೀ ಸು ಕೊಟ್ಟಿರುತ್ತೀದಿ–

ಮತ್ತೂ ನೀನು ನೋಟೀಸಿನಲ್ಲಿ ಬರೆದಂತೆ ನನ್ನ ಮೈಮೇಲೆ ಯೇನೂ ದಾಗೀನೆ ಹಾಕದೇ ಹಾಗೇ ನನ್ನನ್ನು ಕಳ್ಸಿರುತೀನಿ ಯೇನಡಿ ದಾಗೀನ ನನ್ನ ಮೈ ಮೇಲೆ ಇರುವದಿಲ್ಲಾ ಯಾವತ್ತೂ ಸು ಳ್ಳು ಅದೆ. ಉಲ್ಟ ನನ್ನ ತವರಮನೆಯಿಂದ ತಂ ದಂಥಾ ನನ್ನ ದಾಗೀನೆ ಸಹಾ ನಿನ್ನ ಹತ್ತರವೇ ಅದೆ ನಾನು ನಿನಗೆ ಬಾಯಿಲೇಮೀ ನೋಡಸಕ್ರ ಕೊಟ್ಟಿರುವದಿಲ್ಲಾ ಇದು ಸುಳ್ಳು ಅದೆ. ಮತ್ತು ನಿನ್ನಿಂದಲೇ ಬಸರಾದ ನಾನು ಹಡದ ಕೂಸಿಗೆ ಬ ನಸ ತಂದಿ ಹೆಸರು ನಿನ್ನದೇ ಹಚ್ಚುತ್ತೇನೆ. ಮ ತ್ತು ನಾನು ಹಡದು ನನ್ನ ಬಾಣಂತೀತನಾ ಪೂರಾ ಆದ ಮೇಲೆ ನೀನು ನನ್ನನ್ನು ಸಂಭಾವಿತ ಜನರನ್ನ ಜಾಮೀನು ಕೊಟ್ಟು ಹುಟ್ಟಿದ ಕೂಸು ಸಹಿತಾ ಛಲೋ ರೀತಿಯಿಂದ ಬಾಳ್ವೇ ಮಾಡತ್ತೇನೆಂಬ ಬಗ್ಗೆ ಖಾತ್ರಿ ಮಾಡಿಕೊಟ್ಟು ಕರಕೊಂಡು ಹೋಗಬೇಕು. ಈ ಪ್ರಕಾರ ಮಾಡಲಿಕ್ಕೆ ತಪ್ಪದಲ್ಲಿ ಜರ ನನ್ನ ಹೊಟ್ಟೀಲೆ ಈಗ ಹೆಣ್ಣು ಕೂಸು ಹುಟ್ಟಿದರೆ ಆ ಕೂಸಿನ ಸಂರಕ್ಷಣೆಯ ಖರ್ಚಿನ ಬಗ್ಗೆ ವ ನನ್ನ ಹೊಟ್ಟೆಯ ಉಪಜೀವನದ ಬಗ್ಗೆ ನಿನ್ನ ಮೇಲೆ ಇಯಾದೇಶೀರ ಕೋರ್ಟಿನಲ್ಲಿ ಇಲಾಜ ಮಾಡುತ್ತೇ ನೆ. ಜರ ಗಂಡು ಹುಡುಗ ಹುಟ್ಟಿದರೆ ನನ್ನ ಪೋ ಟಗಿ ಬಗ್ಗೆ ಇಲಾಜ ಮಾಡುವದಲ್ಲದೇ ಆ ಹು ಡುಗನ ಹಿಶೇದ ಬಗ್ಗೆ ಇಲಾಜ ಮಾಡಲಾಗುವದು. ಮತ್ತು ಸದರೀ ನಮ್ಮ ಘರಾಣೇದ ಆತ್ಮಗೆ ಹಿಂ ದೂ ಧರ್ಮ ಶಾಸ್ತ್ರದ ಪ್ರಕಾರ ಅವನು (ಹುಟ್ಟಿದ ಹುಡುಗನು.) ತಾಯಿದೆಶೀರ ಮಾಲಕನು ವ ಹಕ್ಕ ದಾರನು ಇರುತ್ತಾನೆ. ಮತ್ತು ಈಗ ಬಾಣಂತೀ ಆಗಲಿಕ್ಕೆ ಬೇಕಾಗುವ ಖರ್ಚಿಗೆ ೫೦-೦-೦ ರೂಪಾಯಿ ಬೇಕು. ಇವೂ [illegible] ನೋಟೀ ಸು ಮುಟ್ಟಿದ ಏಳು ದಿವಸಗಳ [illegible] ಕೊಡ ಬೇಕು. ಇಲ್ಲದೇ ಇದ್ದರೆ [illegible] ಕಾಯ ದೇಶೀರ ಇಲಾಜ ಮಾಡಲಾಗುವದು. ವ ನನ್ನ ತವರ ಮನೆಯಿಂದ ತಂದ [illegible] ಸ್ತ್ರೀ ಧನದ ದಾಗೀನೇದ ಬಗ್ಗೆ ಸಹಾ ಇಲಾಜ ಮಾಡಲಾಗು ವದು. [illegible] ತಾ|| ೧೬-೮-೩೧ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತ ಕಾಳವ್ವಾ ಕೋಂ ತಿಪ್ಪಣ್ಣಾ ಹೂಗಾರ ಇವರದು ಅದೆ.

ಪರಮಾದ ಮೇಲೆ ರಾಮಬಾಣ ಔಷಧವು

೭ ದಿವಸದಲ್ಲಿ ಬೇಕಾದಷ್ಟು ಹಳೆಯದು ಮತ್ತು ಅಂಟಿಕೊಂಡು ಮನೆ ಮಾಡಿಕೊಂಡದ್ದು ಮತ್ತು ತ್ವರಿತವಾದ ಪರಮಾ ರೋಗವು ಎರಡೇ ದಿವಸಗಳಲ್ಲಿ ಗುಣವಾಗುತ್ತದೆ. ಈ ಔಷಧದ ಒಂದೇ ಭಾಗ ಕೊಟ್ಟರೆ ಸಾಕು. ಮೂತ್ರದಲ್ಲಾಗುವ ಉರಿಯೂ ಕಡಿಮೆಯೂ ಬಂದಾಗ, ಮೂತ್ರವು ಸ್ವಚ್ಛವಾಗುತ್ತದೆ. ಮತ್ತು ನಾಲ್ಕು ಭಾಗ ಕೊಟ್ಟ ಬಳಿಕ ರೋಗವು ಪೂರಾ ಹೋಗಿ, ಕೀವು ಬರುವದು ಪೂರಾ ಬಂದಾಗುತ್ತದೆ. ಇದ ರಿಂದ ಹಳೇ ಮತ್ತು ಹೊಸ ರೋಗವು ನಿಲ್ಲದೆ ಹೋಗುವದಿಲ್ಲ. ಇಂಥ ಗುಣಕಾರಕ ಔಷಧದ ಉಪಯೋಗ ಮಾಡುವದರಿಂದ, ಯಾರೂ ಸಂತೋಷವಾಗದೆ ಹೋಗರು. ಈ ಔಷಧವು ಪೂರ್ಣ ಗುಣಕಾರಿಯಾಗಿರುತ್ತದೆಂದು ಹೊಣೆಯಾಗಿ ಹೇಳುತ್ತೇವೆ. ಒಂದು ಬಾಟ್ಲಿಯ ಬೆಲೆ ಒಂದು ರೂಪಾಯಿ. ವ್ಹಿ. ಪಿ. ವೆಚ್ಚ ಬೇರೆ.

ಡಾಕ್ಟರ ರಹೆಮತುಲ್ಲಾ ಸುಲೇಮಾನಜಿ. ಗೋಕುಲ ಹಾಟೆಲ್ಲದ ಹತ್ತರ, ಕ್ಲೇರಾವುಸು ಗ್ರ್ಯಾಂಟ ರೋಡ ಮುಂಬಯಿ

ಮೈಸೂರಿನ ಊದಿನಕಡ್ಡಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾ ಸನೆಯುಳವದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆ ಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂ ಲವಾಗಿದೆ.

ಬೆಲೆ ೨ಳ ತೊಲೆಯ ಸೇರು ೧ಕ್ಕೆ ೨—೦—೦

ಕೃಷ್ಣ ಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦

೧೯-೧೧-೨೯ ಮೈಸೂರ ಸ್ಟೋರ್ಸ, ಬೆಳಗಾವಿಯವರಗಲ್ಲಿ ಹುಬ್ಬಳ್ಳಿ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾ ಚಾರ್ಯ ಹೊಸಳೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨] ಧಾರವಾಡ ಗುರುವಾರ ತಾರೀಖು ೩೦ ನೇ ಅಗಸ್ಟ ೧೯೩೧ [ಸಂಚಿಕೆ ೧೮೯

ಜೋಶಿ, ಗಂಜೀಕರ ಮತ್ತು ಕಂಪನಿ

ಶುಕ್ರವಾರಪೇಟ ಧಾರವಾಡ

ಇವರನ್ನು

ಮುಂಬೈ ಪ್ರಾವ್ಹಿನ್ಸಿಯಲ್ ಕೋ. ಇನ್ಶುರನ್ಸ ಕಂಪನಿ ಲಿ.

ಇವರು

ಧಾರವಾಡ ಜಿಲ್ಹೆಯ

ಚೀಫ್ ಏಜಂಟ

ರಾಗಿ ನಿಯಮಿಸಿದ್ದಾರೆ.

ಈಗ ಜಿಲ್ಹೆಯ ಎಲ್ಲ ಮುಖ್ಯ ಸ್ಥಳಗಳಲ್ಲಿ

ಸಬ್ ಏಜಂಟ

ರನ್ನು ನಿಯಮಿಸುವದಿದೆ. ಈ ಕೆಲಸ ಮಾಡಲಿಚ್ಛಿಸುವವರು ತಮ್ಮ ಯೋಗ್ಯತೆಯ ಬಗ್ಗೆ ಎಲ್ಲ ಮಾಹಿತಿ ಕೊಟ್ಟು ಚೀಫ್ ಏಜಂಟರಿಗೆ ಬರೆಯಬೇಕು. ಯೋಗ್ಯತೆಯಿಂದ ಕೆಲಸ ಮಾಡುವವರಿಗೆ ಪೂರ್ಣ ಕಮೀಶನ ಸಿಗುವದು.

ಜಾಹೀರ ನೋಟೀಸು

ಸುಸಮಯ  ಸುಸಮಯ

ನಮ್ಮ ಕಡೆಗೆ ಸಾರಿಗೆಯ ಮೋಟರಗಳು ಮಾರತಕ್ಕವುಗಳು ಇರುತ್ತವೆ ಮೋಟರಗಳು ಉತ್ತಮ ರನಿಂಗ ಆರ್ಡರದಲ್ಲಿ ಇರುತ್ತವೆ. ಗ್ರಾಹಕರು ಮೋಟಾರ ತಕ್ಷಣ್ಯಕ್ಕೆ ಬೇಕಾದಲ್ಲಿ, ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಅಗರ ಸಮಕ್ಷಮ ಭೆಟ್ಟಿಯಾಗಿ ತಿಳಕೊಳ್ಳಬೇಕು.

೧॥ ಟನ ಫೋರ್ಡ ಲಾರಿ. ನಂX ಳಳಗ

೧ ಟನ್. ಸವ್ರಲೇಟ್ ಲಾರಿ ನಂZ ೯೩೦

ಟೂರಿಂಗ ಕಾರ ಕ್ರಿಸ್ಲ್ಯ (ಸೀಕರ)

ಈ ಪ್ರಕಾರ ಮೂರು ಗಾಡಿಗಳು ಮಾರತಕ್ಕವು ಇರುತ್ತವೆ.

ಸಿ. ಬಿ. ಹಂಪಣ್ಣವರ
ಸವದತ್ತಿ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಷ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಸಂದಿಗೆಯು ಎಂಟು ಲಕ್ಷದಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀರ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ಸಿಕ್ಕ ಪತ್ರಿಕೆ

೧೨ ತಿಂಗಳಿಗೆ	ರೂ. ೧-೨-೦
೬ ,,	೭-೦-೦
೩ ,,	೪-೮-೦
ಏರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ತಾರೀಖು ೨೦-೮-೧೯೩೧ನೇ ಇಸ್ವಿ

ಧಾರವಾಡ ಜಿಲ್ಲೆಯ ಕಾಂಗ್ರೆಸ ಕಮಿಟಿ ಮತ್ತು ಧಾರವಾಡದ ಕಲೆಕ್ಟರಸಾಹೇಬರು.

ಸಾಹೇಬರ ಪತ್ರದಲ್ಲಿರುವ ದುರಾಗ್ರಹ ಶಬ್ದದ ಬಗ್ಗೆ ಆಕ್ಷೇಪಣೆ.

....(೦)....

ಗಾಂಧಿ ಆಯರ್ವಿನ್ನ ಒಡಂಬಡಿಕೆಯ ಮೇರೆಗೆ ನಡೆಯುವ ವಿಷಯವಾಗಿ ಇಲ್ಲಿಯ ಕಲೆಕ್ಟರಸಾಹೇಬರಿಗೂ ಕಾಂಗ್ರೆಸ ಕಮಿಟಿಯವರಿಗೂ ಆಗಾಗ್ಗೆ ಪತ್ರವ್ಯವಹಾರ ನಡೆದಿದೆ. ಒಬ್ಬ ವತನದಾರನ ವತನವನ್ನು ತಿರುಗಿ ಕೊಡುವ ವಿಷಯವಾಗಿ ಮ. ಕಲೆಕ್ಟರಸಾಹೇಬರಿಗೂ, ಶ್ರೀ. ಹುಕ್ಕೇರಿಯವರಿಗೂ ಸಂಭಾಷಣೆಯಾಗಿ, ಸಾಹೇಬರು ಈ ವಿಚಾರವಾಗಿ ಸಹಾನುಭೂತಿಯಿಂದ ನಡೆಯುವಂತೆ ನಂಬಿಗೆ ಹೇಳಿದ್ದನ್ನು ಬರೆದಿದ್ದೇವೆ ಸಾಹೇಬರು ಬಹುತರವಾಗಿ ಮ. ಅಬಾಟಸಾಹೇಬರಂತೆ ಸಹಾನುಭೂತಿಯಿಂದಲೇ ನಡೆಯುತ್ತ ಬಂದಿದ್ದಾರೆ. "ಹಾಸ್ತು ಹೋಗುವದಕ್ಕೆ ಚಿಂತೆ ಮಾಡಬೇಡಿರಿ. ನನ್ನ ಸ್ಥಳದಲ್ಲಿ ಬಂದಿರುವ ಸಾಹೇಬರು ಒಳ್ಳೆಯವರಾಗಿದ್ದಾರೆಂದು ಮ. ಅಬಾಟಸಾಹೇಬರು ಜ ಹೀಗೆ ರೀತಿಯಿಂದ ಹೇಳಿದ್ದಾರೆ. ಇಂಥ ಸಾಹೇಬರ ಬಾಯಿಯಿಂದ ಮತ್ತು ಕಾಗದಪತ್ರಗಳಲ್ಲಿ ಕಾಂಗ್ರೆಸದವರಿಗೆ "ದುರಾಗ್ರಹಿ" ಎಂಬ ಅಪಮಾನಕಾರಕವಾದ ಕಿತಾಬು ಕೊಟ್ಟಿದ್ದನ್ನು ಓದಿ ಮನಸ್ಸಿಗೆ ಬಹಳವಾಗಿ ವಿಷಾದವಾಗುತ್ತದೆ. ನಾವು ಕಾಂಗ್ರೆಸದವರು ದುರಾಗ್ರಹಿಗಳಲ್ಲ; ಅಂಥ ಅಗೌರವದ ಶಬ್ದೋಚ್ಚಾರವನ್ನು ಪುನಃ ಮಾಡಬೇಡಿರೆಂದು ಕಾಂಗ್ರೆಸದ ಸೇಕ್ರೆಟರಿಯವರು ಸಾಹೇಬರಿಗೆ ಪತ್ರ ಬರೆದಿದ್ದಾರೆ. ಅದರ ಸಾರಾಂಶವು ಮುಂದೆ ಕೊಟ್ಟಿರುತ್ತದೆ.

"ನೀವು ನಮಗೆ ಬರೆದ ತಾರೀಖು ೯-೮-೩೧ ನೆಯ ಪತ್ರದಲ್ಲಿ ನಮಗೆ ದುರಾಗ್ರಹಿ ಎಂದಿದ್ದೀರಿ ವ್ಯಕ್ತಿವಿಚಾರದಿಂದ ಯಾರಾದರೂ ಏನಾದರೊಂದು ಶಬ್ದವನ್ನು ಅದರ ಕಾರ್ಯಕಾರಣ್ಯದ ದೆಸೆಯಿಂದ ಉಪಯೋಗಿಸಿದರೆ- ಕಾಂಗ್ರೆಸವು ಅದನ್ನು ಲಕ್ಷಿಸುವದಿಲ್ಲ. ಆದರೆ ತಮ್ಮಂಥ ದೊಡ್ಡ ಕಾಮದಾರರು ಮಾತಿನಲ್ಲಿಯೂ, ಪತ್ರಗಳಲ್ಲಿಯೂ ದುರಾಗ್ರಹವೆಂಬ ಶಬ್ದವನ್ನು ಪ್ರಯೋಗಿಸಿದರೆ- ಕಾಂಗ್ರೆಸದ ಬಗ್ಗೆ ದ್ವೇಷಭಾವವನ್ನು ವ್ಯಕ್ತಪಡಿಸಿದಂತಾಗುತ್ತದೆ. ಪ್ರಕೃತದಲ್ಲಿ ಸರಕಾರ ಮತ್ತು ಕಾಂಗ್ರೆಸವು ಒಡಂಬಡಿಕೆಯ ಶರ್ತಿನ ಪ್ರಕಾರ ಶಾಂತತೆಯನ್ನು ಕಾಯತಕ್ಕಂಥ ಕಾಲದಲ್ಲಿ ದುರಾಗ್ರಹ ಶಬ್ದೋಚ್ಚಾರ ಮಾಡುವದು ಯುಕ್ತವಲ್ಲ. ಸಾರ್ವಜನಿಕ ಮಹತ್ವದ ದೆಸೆಯಿಂದ ಇದನ್ನು ನಿಮ್ಮ ಲಕ್ಷ್ಯಕ್ಕೆ ತರುವದು ನಮಗೆ ಯೋಗ್ಯ ಕಂಡದ್ದರಿಂದ, ಈ ಪತ್ರ ಬರೆಯಬೇಕಾಯಿತು. ನಿಮ್ಮ ಸ್ವಂತ ವ್ಯಕ್ತಿಯ ವಿಷಯವಾಗಿ ಅನ್ಯಥಾ ತಿಳಿಯಬೇಡಿರೆಂದು ವಿನಂತಿ ಮಾಡಿಕೊಳ್ಳುತ್ತೇವೆ.

ರಾವುಂಡ ಟೇಬಲಿನ ಬಗ್ಗೆ ಮಹಾತ್ಮರ ಮಹತ್ವದ ವಿಚಾರಗಳು.

ಮಹಾತ್ಮರು ಅನ್ನುವದೇನಂದರೆ-

೧೫ ನೆಯ ತಾರೀಖಿನ ದಿವಸ ನಾನು ಹೊರಡುವೆನೆಂದು ಎಲ್ಲರೂ ನಂಬಿದ್ದರು. ಹಿಂದುಸ್ಥಾನ, ಇಂಗ್ಲಂಡ ಮತ್ತು ಬೇರೆ ದೇಶಗಳ ಅನೇಕ ಜನರು ನಾನು ಲಂಡನಕ್ಕೆ ಹೋಗಬೇಕೆಂದು ಚಿಂತಾತುರರಾಗಿ ನನ್ನ ಪ್ರಯಾಣದ ಮಾರ್ಗನಿರೀಕ್ಷಣೆ ಮಾಡುತ್ತಿದ್ದರು. ಆದರೆ ದೇವರ ಇಚ್ಛೆಯ ಪ್ರಕಾರವೇ ಎಲ್ಲವೂ ನಡೆಯತಕ್ಕದ್ದಲ್ಲವೇ? ಲಾರ್ಡ ವಿಲಿಂಗ್ಡನ್ನಸಾಹೇಬರು ನನಗೆ ಬರೆದ ಪತ್ರದಲ್ಲಿ ದೇವರ ಕೈಸೇರಿದಂತೆ ನನ್ನ ಕಣ್ಣಿಗೆ ಕಾಣಿಸುತ್ತದೆ ರಾವುಂಡ ಟೇಬಲಿನಲ್ಲಿ ಭಾಗ ತಕ್ಕೊಳ್ಳಬೇಕೆಂದು ನಾನು ಕಾಯಾ ವಾಚಾ ಮನಸಾ ಪ್ರಯತ್ನ ಮಾಡಿದನೆಂದಿಷ್ಟು ಮಾತ್ರ ಹೇಳುವೆನು. ನಾನು ಅದಕ್ಕೆ ಹೋಗದಿದ್ದರೂ, ಅದರಲ್ಲಿಯೇ ಹಿಂದುಸ್ಥಾನದ ಭವಿತವ್ಯವಿರುತ್ತದೆಂದು ನನ್ನ ದೃಢವಾದ ತಿಳುವಳಿಕೆ ಇರುತ್ತದೆ. ನನ್ನ ಮಟ್ಟಿಗೆ ವಿಚಾರ ಮಾಡಿದರೆ ನಾನು ಇಂಗ್ಲೇಜ ಮುತ್ಸದ್ದಿ ಮತ್ತು ಹಿಂದುಸ್ಥಾನದ ಸಿವ್ಹಿಲ ಸರ್ವಂಟ ಇವರ ನಡುವೆ ಭೇದವೆಣಿಸುವದಿಲ್ಲ. ಎಲ್ಲಾ ಉತ್ಸಾಹ ಮತ್ತು ಶಕ್ತಿಯನ್ನು ಉಪಯೋಗಿಸಿದಾಗ್ಯೂ ಅಲ್ಪಕಾರ್ಯಗಳಲ್ಲಿ ಯಶ ಪಡೆಯದಾದ ಬಳಿಕ, ಲಂಡನದಲ್ಲಿ ಆ ಮಹಾಕಾರ್ಯಗಳನ್ನು ಸಾಧ್ಯಮಾಡಿಕೊಳ್ಳುವದು ಅಶಕ್ಯವಾಗುತ್ತದೆ. ಹಿಂದುಸ್ಥಾನದಲ್ಲಿ ಬಂದ ಅನುಭವದ ಪ್ರತಿಧ್ವನಿಯೇ ಇಂಗ್ಲಂಡದಲ್ಲಿ ಕೇಳಿ ಬರುವದು ಈ ವಿಚಾರಸೃಷ್ಟಿಯು ಸರಿಯಾದರೆ- ನಾನು ಕಾಂಗ್ರೆಸದ ಪ್ರತಿನಿಧಿಯಾಗಿ ಇಂಗ್ಲಂಡಕ್ಕೆ ಹೋಗದಿರುವದೇ ವಾಸಿಯು; ಇದರಿಂದ ಜನರ ಮೇಲೆ ಮಾತ್ರ ದೊಡ್ಡ ಜವಾಬದಾರಿ ಬಂತು. ಅವರು ಇದಕ್ಕೂ ಹೆಚ್ಚಿನ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಬೇಕಾಗುತ್ತದೆ."

ಸಾಬರಮತಿಯಲ್ಲಿಯ ಮತವು

....(೦)....

ಗುರುವಿನಂತೆ ಶಿಷ್ಯ

ಸಾಬರಮತಿಯ ಆಶ್ರಮದಲ್ಲಿ ಈಗ ಎರಡು ನೂರು ಜನರಿದ್ದಾರೆ ಹೊಸಬರೂ ಸೇರಿರುವರು. ಇವರು ಅನ್ನುವದೇನಂದರೆ -

"ನಮ್ಮ ಗುರುವಿನ ನಿರ್ಣಯವೇ ನಮ್ಮ ನಿರ್ಣಯ! ಒಡೆಪ್ಪುಬ್ಬರದಾಗಿ ನಮ್ಮ ಮತವೇನೂ ಇರುವದಿಲ್ಲ. ನಾವು ಗುರುವಿನ ಆಜ್ಞಾಧಾರಕ ಸೇವಕರಾಗಿದ್ದೇವೆ ಗುರುವಿನಲ್ಲಿ ನಮ್ಮ ಅವಿಕಲ್ಪ ವಿಶ್ವಾಸವುಂಟು."

ಬರೇ ಸಾಬರಮತಿಯವರು ಮಾತ್ರವಲ್ಲ. ಹಿಂದುಸ್ಥಾನದ ಕೋಟ್ಯವಧಿ ಜನರು ಈ ತರದ ಶ್ರದ್ಧೆ ಮತ್ತು ಸ್ವಾರ್ಥತ್ಯಾಗ ಮಾಡಲು - ಸಿದ್ಧರಿರುವಂತೆ ಬೇಗನೆ ಜಾಹೀರಮಾಡುವ ಕಾಲವು ತೀರ ಸನಿಯವಾಗಿರುತ್ತದೆ.

ಸ್ವಾರ್ಥತ್ಯಾಗ ಮಾಡಲೇ ಬೇಕು.

ಸಾಬರಮತಿಯ ಆಶ್ರಮದಲ್ಲಿ ಒಬ್ಬರು ಮಹಾತ್ಮರಿಗೆ - "ಯುದ್ಧ ಮಾಡಿದ ವಿನಹ ಸ್ವರಾಜ್ಯವು ಶಕ್ಯವಿಲ್ಲವೇ" ಎಂಬದಾಗಿ ಪ್ರಶ್ನೆ ಮಾಡಲು - ಮಹಾತ್ಮರು "ಬಹಳ ಯುದ್ಧ ಮಾಡಬೇಕಾಗುವದು. ಆ ಪ್ರಸಂಗ ಬಂದರೆ - ಎಲ್ಲರೂ ಸಿದ್ಧರಿರಬೇಕು" ಎಂಬದಾಗಿ ಉತ್ತರ ಕೊಟ್ಟಿದ್ದಾರೆ.

ಮಹಾತ್ಮರ ಅಪೇಕ್ಷೆಯ ಪ್ರಕಾರ ಒಬ್ಬ ಜಡ್ಜರನ್ನು ನೇಮಿಸಿ, ಅವರು ವಿಚಾರಣೆಗೆ ಹೊರಡುವಂತೆ ಮಾಡಬೇಕೆಂದು ಹಿಂದುಸ್ಥಾನ ಸರಕಾರದಲ್ಲಿ ವಿಚಾರ ನಡೆದಿದೆ ಒಬ್ಬರ ಬದಲು ಮೂವರದೊಂದು ಕಮೀಟಿ ನೇಮಿಸಬೇಕೆಂದು ಸರ ಪಟ್ಟಾಣಿಯವರು ಅನ್ನುತ್ತಾರೆ.

ಹಿಂದುಸ್ಥಾನ ಸರಕಾರದವರು ಕೆಲ ಕಾಗದ ಪತ್ರಗಳನ್ನು ತಾವಾಗಿ ಪ್ರಸಿದ್ಧ ಮಾಡಿದ್ದು, ಅವುಗಳಲ್ಲಿ ಕೆಲವು ಮಹತ್ವದ ಪತ್ರಗಳನ್ನು ಪ್ರಸಿದ್ಧ ಮಾಡಿಲ್ಲೆಂದು ಮಹಾತ್ಮರು ಹೇಳುತ್ತಾರೆ.

ಕೊಲ್ಹಾಪೂರದ ತುರಂಗದಲ್ಲಿ ಕೈದಿಗಳ ಅನ್ನತ್ಯಾಗ

....(೦)....

ಕೊಲ್ಹಾಪೂರದಲ್ಲಿ ಶ್ರೀಮಂತ ಶಾಹು ಮಹಾರಾಜರ ಮೂವತ್ತೈದನೆಯ ವರ್ಷದ ಜಯಂತ್ಯುತ್ಸವದ ದಿವಸದಂದು ತುರಂಗದಲ್ಲಿರುವ ನಾಲ್ಕೈಂಟು ಜನ ಕೈದಿಗಳಿಗೆ ಮಾಫಿಯೂ, ಕಡಿಮೆ ಶಿಕ್ಷೆಯೂ ಅಂಥದ್ದೂ ದೊರೆಯಿತು. ಎಲ್ಲಾ ಕೈದಿಗಳಿಗೆ ಅವರವರ ಶಿಕ್ಷೆಯ ಕಾಲದ ಮೇರೆಗೆ ಸವಲತ್ತುಗಳು ದೊರೆಯಬೇಕೆಂದು ೨೫ ಜನ ಕೈದಿಗಳು ಅನ್ನತ್ಯಾಗ ಮಾಡಿ, ಸತ್ಯಾಗ್ರಹ ಹೂಡಿದ್ದಾರೆ.

---

೨೫ ವರ್ಷಗಳ ಕಂತದಿಂದ ರೈತರಿಗೆ ಸಾಲ

....(೦)....

ಸಾಲದ ಭಾರದಿಂದ ರೈತರ ಕುಬ್ಬ ಕೊಲ್ಲು ಹೋಗಿದೆ. ಆಗಾಗಿ, ಮಾರ್ಗೇಜ ಬ್ಯಾಂಕು ಇವುಗಳಿಂದ ಅವರ ಉದ್ಧಾರವಾಗುವದಿಲ್ಲ. ಆದ್ದರಿಂದ ಸೋಸಾಯಿಟಿ ಬಡ್ಡಿಯಿಂದ ೨೫ ವರ್ಷಗಳ ಕಂತ ಕರಾರಿನಿಂದ ಅವರ ಹೊಲಗಳ ಹೊಣೆಯಿಂದ ಸರಕಾರದವರೇ ಸಾಲಕೊಡಬೇಕೆಂದು ಮದ್ರಾಸದ ಕೌನ್ಸಿಲಲ್ಲಿ ಠರಾವು ಬಂತಕ್ಕದೆ.

ಹಿಂದೂ ಧರ್ಮಾಂತರದ ಸೋಜಿಗದ ಮತ್ತು ಮಹತ್ವದ ವಾದಗ್ರಸ್ತ ಪ್ರಶ್ನವು.

—(೦)—

ನಿಜಾಮ ಹೈದರಾಬಾದಿನಲ್ಲಿ ಒಬ್ಬ ಹಿಂದುವಿನ ಹೆಂಡತಿಯು ಮುಸಲಮಾನ ಧರ್ಮ ಸ್ವೀಕಾರ ಮಾಡಿ, ಮುಸಲಮಾನನನ್ನು ನಿಕಾ ಮಾಡಿಕೊಂಡಳು. ಮದಿವೆಯ ಹೆಂಡತಿಯನ್ನು ಓಡಿಸಿಕೊಂಡು ಹೋದನೆಂದು ಹಿಂದೂವು ಮುಸಲಮಾನನ ಮೇಲೆ ಫಿರ್ಯಾದಿ ಮಾಡಿದನು. ಇದು ಹೇಗೋ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಮುಸಲಮಾನನ ಹಾಯಿತು. ಇದರ ಮೇಲೆ ಅಪೀಲು ಮಾಡಲು ಜಡ್ಜರು ಆರೋಪ ಸಿದ್ಧಮಾಡಿ, ಶಿಕ್ಷೆವಿಧಿಸಿದರು. ಈ ತೀರ್ಪಿನ ಮೇಲೆ ಹಾಯಕೋರ್ಟಿಗೆ ಅಪೀಲು ಗಿದ್ದು, ಮೊದಲು ಮುಸಲಮಾನ ಧರ್ಮ ಸ್ವೀಕಾರ ಮಾಡಿದ ಬಳಿಕ, ಹಿಂದೂ ಗಂಡನ ಅಧಿಕಾರ ಹಾರಿಹೋಗುತ್ತದೆಂದು ಅಪೀಲು ಮಾಡಿದ ವಕೀಲರ ಮತವಾಗಿದೆ. ಇದು ಕಾಯದೆಯ ಮಹತ್ವದ ಪ್ರಶ್ನವಾಗಿರುವದರಿಂದ ಜಡ್ಜರು ಯಾವ ನಿರ್ಣಯ ಹೇಳುವರೆಂಬದನ್ನು ಜನರು ನಿರೀಕ್ಷಿಸುತ್ತಿದ್ದಾರೆ.

ಹಿಂದೂಸ್ಥಾನಿ ಸೇವಾದಳದ ರಾಷ್ಟ್ರಧ್ವಜದಿನಕ್ಕೆ ಅಖಿಲ ಭಾರತ ಕಾಂಗ್ರೆಸ ಕಮಿಟಿಯ ಅಪ್ಪಣೆಯು

ಇದೇ ತಿಂಗಳ ೩೦ ನೇ ತಾರೀಖಿನ ದಿವಸ ನಾವೆಲ್ಲರೂ ಹಿಂದೂಸ್ಥಾನದ ಹೊಸ ರಾಷ್ಟ್ರಧ್ವಜವನ್ನು ಮುಂಜಾನೆ ಸರಿಯಾಗಿ ೭ ಘಂಟೆ ಏರಿಸಿ ಅದಕ್ಕೆ ವಂದಿಸುವದಲ್ಲದೆ ಆ ಇಡೀ ದಿನವನ್ನು ಧ್ವಜದ ಚಿಂತನೆಯಲ್ಲಿ ಕಳೆಯಬೇಕೆಂದು ಅಖಿಲ ಭಾರತ ಕಾಂಗ್ರೆಸ ಕಮಿಟಿಯು ಅಪ್ಪಣೆಯಾಗಿದೆ.

ಹಿಂದೂಸ್ಥಾನಿ ಸೇವಾದಳದಿಂದ ಗೊತ್ತು ಮಾಡಲ್ಪಟ್ಟ ಧ್ವಜವಂದನೆಯ ಕಾಲವು (ಮುಂಜಾನೆ ೮ ಘಂಟೆ) ಹೆಚ್ಚು ಕಡಿಮೆಯಾಗಿ ಮುಂಜಾನೆ ೭ ಘಂಟೆಯೆಂದು ನಿಶ್ಚಯಿಸಲ್ಪಟ್ಟದೆ ಆದರೆ ದಿವಸವು ಮಾತ್ರ ತಿಂಗಳ ಕೊನೆಯ ರವಿವಾರವೆಂದೇ ಇರುವುದು.

ಅಖಿಲ ಭಾರತ ಚರಕ ಸಂಘದ ಶಾಖೆಗಳಿಗೆ ಮತ್ತು ಖಾದಿ ಅಂಗಡಿಗಳಿಗೆ ವಿನಂತಿ ಮಾಡಿಕೊಂಡು ಅವುಗಳಲ್ಲಿ ಯಾರಿಗೂ ಭಾರವಾಗದಂಥ ಬೆಲೆಗೆ ದೊರೆಯುವಂತೆ ಎಲ್ಲಾ ಅಳತೆಯ ಹೊಸ ರಾಷ್ಟ್ರೀಯ ಧ್ವಜಗಳು ಇಡಲ್ಪಡುವಂತೆ ವ್ಯವಸ್ಥೆಯನ್ನು ಮಾಡಿದ್ದೇವೆ. ಮಾದರಿಯ ಹೊಸ ರಾಷ್ಟ್ರೀಯ ಧ್ವಜಗಳು ಎಲ್ಲಾ ಪ್ರಾಂತ್ಯಗಳಿಗೆ ಈಗಾಗಲೆ ಕಳುಹಿಸಲ್ಪಟ್ಟವೆ

ರಾಷ್ಟ್ರೀಯ ಧ್ವಜವಂದನೆಯ ವಿಷಯದಲ್ಲಿ ಗೊತ್ತುಮಾಡಿರುವ ಪದ್ಧತಿಯನ್ನು ಯಾರೂ ಮರೆಯಬಾರದು. ಸೇವಾದಲದ ಮುಂಬಯಿ ಮತ್ತು ಹುಬ್ಬಳ್ಳಿ ಕಚೇರಿಗಳಲ್ಲಿ ಎರಡು ಆಣೆ ಬೆಲೆಗೆ ದೊರೆಯುವ ರಾಷ್ಟ್ರಧ್ವಜ ಎಂಬ ಪುಸ್ತಕವನ್ನು ಓದಿದರೆ ಈ ಪದ್ಧತಿಯು ಪರಿಚಯವು ಚನ್ನಾಗಿ ಆಗುವದು. ಧ್ವಜವಂದನೆಯ ವ್ಯವಸ್ಥಾಪಕರೆಲ್ಲರು ಅದರಂತೆಯೇ ನಡೆಸುವರಾಗಿ ನಂಬುತ್ತೇವೆ. ದೇಶದಲ್ಲಿಯ ಎಲ್ಲಾ ಕಾಂಗ್ರೆಸ ಸಂಸ್ಥೆಗಳಿಗೆ ಧ್ವಜವಂದನೆಯ ಸವಿಸ್ತಾರವಾದ ಸಂಗತಿಗಳು ಕಳುಹಿಸಲ್ಪಡುವುದರಲ್ಲಿ ಬರುವುದು.

ಧ್ವಜವಂದನೆಯ ಕಾರ್ಯವನ್ನು ಮಾಡುವುದಕ್ಕೆ ಎಲ್ಲಾ ಕಾಂಗ್ರೆಸ ಸಂಸ್ಥೆಗಳು ಓರ್ವ ಅಧಿಕಾರಿಯನ್ನು ನಿಯಮಿಸಬೇಕೆಂದು ವಿನಂತಿ ಇದೆ.

ದಳಪತಿಯಿಂದ ಅಥವಾ ಕಾಂಗ್ರೆಸದ ಪತಿಯಿಂದ ಧ್ವಜಕಾರ್ಯಕ್ಕಾಗಿ ನಿಯಮಿಸಲ್ಪಟ್ಟ ಅಧಿಕಾರಿಯು ಆ ದಿವಸ ತಮ್ಮಲ್ಲಿ ನಡೆಸಿದ ಕಾರ್ಯದ ಸಂಕ್ಷಿಪ್ತ ವರದಿಯನ್ನು ಹುಬ್ಬಳ್ಳಿ ಸೇವಾದಲ ಕಚೇರಿಗೆ ಕಳುಹಿಸಬೇಕು.

ಮುಂಬಯಿ — ನಾ. ಸು. ಹರ್ಡೀಕರ

೧೪-೮-೧೯೩೧ — ಸಂಘಟನಾ ಕಾರ್ಯದರ್ಶಿ

ಜಡ್ಜ ಸಾಹೇಬರು ಕೋರ್ಟಿನಲ್ಲಿಯೇ ಚೀರಿ ನೆಲಕ್ಕೆ ಬಿದ್ದರು.

—(೦)—

ಲಾಹೋರಿನ ಕೋರ್ಟಿನಲ್ಲಿ ಗವರ್ನರರ ಮೇಲೆ ಗುಂಡು ಹಾಕಿದ ಆರೋಪಿಯ ವಿಚಾರಣೆ ನಡೆಯುತ್ತಿರುವದು. ಗವರ್ನರ ವಾಕರಸಾಹೇಬರು ಸಾಕ್ಷ್ಯದ ಪ್ರಕಾರ ಶನಿವಾರ ದಿವಸ ಕೋರ್ಟಿಗೆ ಬಂದು, ನ್ಯಾಯಾಸನವನ್ನೇರುವಾಗ ಒಮ್ಮೆಂದೊಮ್ಮೆ ಹೆದರಿಕೊಂಡವರಂತೆ ಚೀರಿ ನ್ಯಾಯಾಸನದ ಗದ್ದಿಗೆಯಿಂದ ಎಚ್ಚರದಪ್ಪಿ ಧೊಪ್ಪನೆ ಕೆಳಗೆ ಬಿದ್ದರು. ಕಚೇರಿಯವರೂ, ಪೋಲೀಸರೂ ಕೂಡಲೆ ಸಾಹೇಬರಿಗೆ ಪ್ರಥಮೋಪಚಾರ ಮಾಡಿದರು. ಮುಂದೆ ಡಾಕ್ಟರರು ಬಂದು, ಔಷಧೋಪಚಾರ ನಡೆಸಿದರು. ಸಾಹೇಬರಿಗೆ ಇನ್ನೂ ಎಚ್ಚರಿಕೆ ಹುಟ್ಟಿದ ವರ್ತಮಾನ ಬಂದಿಲ್ಲ.

ಅಲ್ಸ್ಟರದಲ್ಲಿ ಧರ್ಮದ್ವೇಷ

....(೦)....

ರೋಮನ ಕ್ಯಾಥಲಿಕರ ಮೇಲೆ ಪ್ರೊಟೆಸ್ಟಂಟರ ಹಾವಳಿಯು

....(೦)....

ಆಯರ್ಲಂಡದ ಭಾಗವಾಗಿ ಪ್ರೊಟೆಸ್ಟಂಟ ಧರ್ಮ ರಕ್ಷಣೆಗಾಗಿಯೇ ಆಯರ್ಲಂಡದಿಂದ ಅಗಲಿತ ಅಲ್ಸ್ಟರದವರು ಅಲ್ಪಸಂಖ್ಯಾಕರಾದ ರೋಮನ ಕ್ಯಾಥಲಿಕರ ಮೇಲೆ ಆಗಾಗ್ಗೆ ಧರ್ಮದ್ವೇಷ ಸಾಧಿಸುವರು. ಈ ವಾರದಲ್ಲಿ ಇವರು ರೋಮನ ಕ್ಯಾಥಲಿಕರ ಅಂಗಡಿಗಳಲ್ಲಿ ಹೊಯ್ಮಾಲಿತನ ಮಾಡಿ, ಅಂಗಡಿಗಳ ಕಿಟಕಿಗಳನ್ನು ಒಡೆದು, ನಷ್ಟವು ಮಾಡಿದರು. ಒಂದು ದೇವಾಲಯದಲ್ಲಿ ಹೊಕ್ಕು, ಅನೇಕವಾಗಿ ಹೋಳಿ ಹಾಕಿದರು. ಒಬ್ಬ ವಿಧವೆಯ ಅಂಗಡಿಯನ್ನು ಸುಟ್ಟರು ಒಂದು ಸಭಾಗೃಹದ ಮೇಲೂ ದಾಳಿ ಮಾಡಿದರು. ಇಷ್ಟೆಲ್ಲ ಪುಂಡಾಟಿಕೆ ನಡೆದರೂ, ಪೋಲೀಸರು ಒಬ್ಬನ ಮೇಲೂ ಗುಂಡು ಹಾರಿಸಲಿಲ್ಲ. ಸಂಗೀನದ ಉಪಯೋಗ ಮಾಡಲಿಲ್ಲ. ಬಂದೂಕಿನ ಹಿಂಬದಿಯಿಂದಲೇ ಜನರನ್ನು ಚದರಿಸಿದರು.

ಬರುವ ೧ನೆಯ ಸಪ್ಟಂಬರದಿಂದ ಚೀನದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಮುತ್ಸದ್ದಿಯಾದ ಸ್ವರ್ಗವಾಸಿ ಸನ್‌ಯತಸೇನ ಮುಖದ ಛಾಯೆಯನ್ನು ಹಾಕಿದ ಪೋಸ್ಟ ಟಿಕೀಟಗಳನ್ನು ಪ್ರಚಾರದಲ್ಲಿ ತರಬೇಕೆಂದು ಚೀನ ಸರಕಾರದವರು ಗೊತ್ತುಮಾಡಿದ್ದಾರೆ.

ಧಾರವಾಡ–
ನಾಳಿನ ದಿವಸವೇ ಈಯೂರಲ್ಲಿ ಮ್ಯುನಿಸಿಪಾಲಿಟಿಯ ಚುನಾವಣೆಗಾಗಿ ಉಮೇದವಾರರಾಗ ಬೇಕೆನ್ನುವವರು ಅರ್ಜಿಯನ್ನು ಕೊಡತಕ್ಕ ಕೊನೆಯ ದಿವಸವಿರುತ್ತದೆ

ನೋಟೀಸು

ಅಬ್ದುಲ್ಲಸಾಬ ಮಾಳಿ ಸಾಕೀನ ಸಿಗ್ಗಾವಿ ಇವರಿಗೆ:—

ಕೆಳಗೆ ಸಹಿ ಮಾಡಿದ ಬೀಬೀಮಾ ಕೋಂ ಅಬ್ದುಲ್ಲಸಾಬ ಮಾಳಿ ತಿಳಿಸುವದೇನಂದರೆ–

ನೀನು ನನ್ನ ಮದವಿ ಗಂಡನು ಇದ್ದು ನೀನು ಒಬ್ಬ ಚಾಲು ಸಾಧಕನಾಯಿರುತ್ತೀದಿ ಫ ... ಗರ ಮಾತು ಕೇಳಿ ನನ್ನನ್ನು ಈಗ ಅಜಮಾಸ ... ಮೂ ವರ್ಷಗಳ ಕೆಳಗೆ ತವರ ಮನಿ ನೆವ ಮಾಡಿ ಕಳಿಸಿದವನು. ಯಾವದಕ್ಕೂ ಕರಕೊಂಡು ಹೋ ... ಇಲ್ಲಾ ... ನೋಟೀಸಿನಿಂದ ತಿಳಿಸು ... ದೇನಂದರೆ ನಿನ್ನ ... ಮನಿ ಬಿಟ್ಟು ಒಂದು ... ಯ

... ನೇದವರಲ್ಲಿ ... ಜೀವನ ... ರೂಪಾಯಿ ಮತ್ತು ಕೆಳಗೆ ... ದ ... ಡಾಗೀನೆಗಳು ಸಹ ಯೀ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ಬಂದು ನನ್ನನ್ನು ಕರಕೊಂಡು ಹೋಗಿ ಒಳ್ಳೇರೀತಿಯಿಂದ ಬಾಳ್ವೆ ಮಾಡಬೇಕು ... ದಕ್ಕೆ ತಪ್ಪಿದರೆ ನಾನು ನನ್ನ ವರ್ಜಿನ್ಸ್ರೀಯ ಪ್ರಂತಿ ಮಾಡಿಕೊ ... ತ್ತೀನೆ ಮುಂದೆ ನನ್ನ ಮೇಲೆ ವ ನನ್ನ ವ್ಯಾಜ್ಯ ... ಮೇಲೆ ನಡ ... ನಡಿಯಲಾರದು ... ಮತ್ತು ನನ್ನ ... ಕಳೆದ ... ದ ಒಗ್ಗೆ ... ಕೋರ್ಟ ಪ್ರಕಾರ ... ಮಾಡುವೆನು ... ನೋಟೀಸ ... ಯೀ ನೋಟೀಸಿಯ ಖರ್ಚ ನಿನ್ನ ಮೇಲೆ ಅದೆ ತಾ ರೀಖು ೪-೮-೧೯೩೧ ಇಸ್ವಿ

ಸಾಮಾನು ವಿವರ

೧ ಭಂಗಾರದ ಗುಂಡಿನ ಟೀಕಿ ಅಜಮಾಸ ಕಿ ಮ್ಮತ್ತು ರೂಪಾಯಿ ೬೪ ೨ ಸರಗಳ ಟೀಕಿ ಅ ಜಮಾಸ ಕಿಮ್ಮತ್ತು ೬೬ ೩ ಬುಗುಡಿ ಜೋಡು ಅಜಮಾಸ ಕಿಮ್ಮತ್ತು ೨೦ ೪ ಬೆಳ್ಳಿ ... ೮|೬| ರೂಪಾಯಿ ೧೦ ೫ ನತ್ತು ... ೮|೬| ರೂಪಾಯಿ ೧೦ ಅಪ್ರಕಾರ ೧೪೦ ರೂಪಾಯಿಗಳ ಕಿಮ್ಮತ್ತಿನ ಡಾಗೀನೆಗಳು ಇರುತ್ತವ

ಈ ಎಡಸ್ತೆ ಹೆಬ್ಬಟ್ಟಿನ ಗುರ್ತಾ ಬೀಬೀಮಾ ಕೋಂ ಅಬ್ದುಲಸಾಬ ಮಾಳಿ ಯಿತಿಯದು ಇರುತ್ತದೆ

ವೆಂಕಟೇಶ ತಿರಕೋ ಕುಲಕರಣಿ ಗಳಗನಾಥ

—ಇವರು ಬರೆಯುತ್ತಿರುವ—

ರಹಸ್ಯ ಪ್ರಕಾಶವಾದ ಸಚಿತ್ರ ಮಹಾಭಾರತವ್ಯಾಖ್ಯ

ಆದಿ ಪರ್ವ

ಲೇಖನ ವ್ಯವಸಾಯದ ನಲವತ್ತು ವರ್ಷಗಳ ಅನುಭವದಿಂದ ಈ ಅತಿ ಗೌರವದ ಪ್ರಚಂಡ ಪುಸ್ತಕವನ್ನು ಬರೆಯತೊಡಗಿದ್ದೇವೆ. ಆದಿಪರ್ವವು ಈಗ ಮಾರಾಟಕ್ಕೆ ಸಿದ್ಧವಾಗಿರುವದು ಅದರ ಬೆಲೆ ೩-೮-೦ ಟಪಾಲಿನಿಂದ ತರಿಸುವವರ ಖರ್ಚ ಸಾಮೇತ ಹಾಕಿ ೩-೬-೦ ಗೆ ವಿ ಪಿ ಮಾಡಲಿತ್ತು ವಿ. ಪಿ. ತಕ್ಕೊಳ್ಳುವವರು ೩-೮-೦ ಕೊಟ್ಟರೆ ತೀರಿತು. ಒಟ್ಟು ಪುಸ್ತಕಗಳು ಏಳು ಅಥವಾ ಎಂಟು ಆಗಬಹುದು. ಇಡಿಯ ಭಾರತದ ಬೆಲೆ ೧೫ ರಿಂದ ೨೦ ರೂಪಾಯಿಗಳ ವರೆಗೆ ಬೀಳಬಹುದು. ಇದರಲ್ಲಿ ಬರೆಯುತ್ತಿರುವ ರಹಸ್ಯಗಳು ಅತಿ ಗೌರವವಾಗಿರುವವು. ರಾಜಕೀಯ ವಿಚಾರದ ಈ ಪ್ರಚಂಡ ಗ್ರಂಥವನ್ನು ಈಗಿನಕಾಲದಲ್ಲಿ ಓದಲೇಬೇಕು. ಈಗ ಚಂದಾದಾರರಾಗುವವರಿಗೆ ಮುಂದಿನ ಪುಸ್ತಕಗಳು ಮುಕ್ಕಾಲು ಬೆಲೆಗೆ ಸಿಗುವವು. ನಮ್ಮ ಪರಿಚಯವು ಕನ್ನಡಿಗರಿಗಿರುವದರಿಂದ ಹೆಚ್ಚು ಬರೆಯುವ ಕಾರಣವಿಲ್ಲ. ಇಡಿಯ ಭಾರತದ ೫೦೦೦ ಪ್ರತಿಗಳಿಗೆ ೩೦-೩೫ ಸಾವಿರ ರೂಪಾಯಿ ವೆಚ್ಚವಾಗುವವು. ಕಾರ್ಯಕ್ಕೆ ... ಕನ್ನಡಿಗರೂ ನಮ್ಮನ್ನೋಲಿಸ ... ಸಹಾಯ ಮಾಡತಕ್ಕದ್ದು. ಅಲ್ಲದೆ ನಮ್ಮಲ್ಲಿಯ ಈಗ ಸಿಲಕ್ಕು ಇರುವ ಕೆಳಗಿನ ಪುಸ್ತಕಗಳಲ್ಲಿ ಬೇಕಾದವನ್ನು ತಕ್ಕೊಂಡು ... ನಮ್ಮ ಈ ದೊಡ್ಡ ಕಾರ್ಯಕ್ಕೆ ಸಹಾಯ ಮಾಡಬಹುದು.

—ಪುಸ್ತಕಗಳ ಹೆಸರು ಮತ್ತು ಕ್ರಯದ ಪಟ್ಟಿ—

೧ ಮಾಧವ ಕರಣಾವಿಲಾಸ	೩	೧೨	೦	೧೧ ಕುರುಕ್ಷೇತ್ರ	೧	೦	೦
೨ ಮಹಾಭಾರತವ್ಯಾಖ್ಯ (ಆದಿಪರ್ವ)	೩	೮	೦	೧೨ ಕಾಲ್ಪನಿಕಲೇಖ	೧	೦	೦
೩ ಕೈವಲ್ಯ ಧಾರ್ಣವ	೩	೮	೦	೧೩ ಸಂಸಾರಸುಖ	೧	೦	೦
೪ ಭಾಗವತ ಕಾವ್ಯಕ	೩	೮	೦	೧೪ (೧೧)ನೇ (೧೨) ನೇ ಸ್ಕಂದ ಭಾಗವತ	೧	೦	೦
೫ ಶ್ರೀ ತುಲಸೀ ರಾಮಾಯಣ	೩	೦	೦	೧೫ ರಾಣಾ-ರಾಜಸಿಂಹ	೦	೧೨	೦
೬ ರಾಣೀ-ಮೃಣಾಲಿನಿ	೧	೮	೦	೧೬ ಗುರುಪ್ರಸಾದ	೦	೧೨	೦
೭ ಧಾರ್ಮಿಕಲೇಖ	೧	೮	೦	೧೭ ಸದ್ಗುರು ಪ್ರಭಾವ	೦	೧೨	೦
೮ ಕರ್ಮಕಥೆ	೧	೮	೦	೧೮ ಸುಂದರಲೇಖ ಸಮುಚ್ಚಯ	೦	೮	೦
೯ ಈಶ್ವರೀಸೂತ್ರ	೧	೦	೦	೧೯ ಭಗವತೀ ಕಾತ್ಯಾಯನಿ	೦	೮	೦
೧೦ ಗೃಹಕಲಹ	೧	೦	೦	೨೦ ನಿರ್ಯಾಣಮಹೋತ್ಸವ	೦	೮	೦

ಸದ್ಗುರು ಆಫೀಸು
ಹಾವೇರಿ

ನಿಮ್ಮ
ವೆಂ. ತಿ. ಕುಲಕರಣಿ, ಗಳಗನಾಥ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨ ಧಾರವಾಡ ಶುಕ್ರವಾರ ತಾರೀಖು ೨೧ ನೇ ಅಗಸ್ಟ ೧೯೩೧ (ಸಂಚಿಕೆ ೧೯೦

ಜೋಶಿ, ಗುಂಜೀಕರ ಮತ್ತು ಕಂಪನಿ

ಶುಕ್ರವಾರಪೇಟೆ ಧಾರವಾಡ

ಇವರನ್ನು

ಮುಂಬೈ ಪ್ರಾವಿನ್ಶಿಯಲ್ ಕೋ. ಇನ್ಶ್ಯೂರನ್ಸ ಕಂಪನಿ, ಲಿ

ಇವರು

ಧಾರವಾಡ ಜಿಲ್ಹೆಯ

ಚೀಫ್ ಏಜಂಟ

ರಾಗಿ ನಿಯಮಿಸಿದ್ದಾರೆ

ಈಗ ಜಿಲ್ಹೆಯ ಎಲ್ಲ ತಾಲೂಕುಗಳಲ್ಲಿ

ಸಬ್ ಏಜಂಟ

ರನ್ನು ನಿಯಮಿಸುವದಿದೆ ಈ ಕೆಲಸ ಮಾಡಲಿಚ್ಛಿಸುವವರು ತಮ್ಮ ಪಾತ್ರತೆಯ ಬಗ್ಗೆ ಎಲ್ಲ ಮಾಹಿತಿ ಕೊಟ್ಟು ಚೀಫ್ ಏಜಂಟರಿಗೆ ಬರೆಯಬೇಕು. ಪಾತ್ರರಿಂದ ಕೆಲಸ ಮಾಡುವವರಿಗೆ ಪೂರ್ಣ ಕಮೀಶನ ಸಿಗುವದು

ಜಾಹೀರ ನೋಟೀಸು

ಸುಸಮಯ  **ಸುಸಮಯ**

ನಮ್ಮ ಕೆಳಗೆ ಕಾಣಿಸಿದ ಮೋಟರಗಳು ಮಾರತಕ್ಕವುಗಳು ಇರುವವು ಮೋಟರಗಳು ಉತ್ತಮ ರನಿಂಗ ಆರ್ಡರದಲ್ಲಿ ಇರುತವೆ. ಗ್ರಾಹಕರು ಮೋಟಾರ ತಕ್ಕೊಳ್ಳುವದಿದ್ದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಅಗರ ಸಮಕ್ಷಮ ಭೆಟ್ಟಿಯಾಗಿ ತಿಳಕೊಳ್ಳಬೇಕು

೧॥ ಟನ್ ಫೋರ್ಡ ಲಾರಿ. ನಂ X ೪೪೯೧

೧ ಟನ್, ಷೆವ್ರಲೆಟ ಲಾರಿ ನಂ Z ೨೯೨೦

ಟೂರಿಂಗ ಕಾರ ಬ್ಯೂಸಿಕ್ (ಮೋಟರ)

ಈ ಪ್ರಕಾರ ಮೂರು ಗಾಡಿಗಳು ಮಾರತಕ್ಕವು ಇರುತ್ತವೆ.

ಸಿ. ಬಿ. ಹಂಪಣ್ಣವರ

ಸವದತ್ತಿ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರಿಂದಿಗೆಯು ಎಂಟು ಲಕ್ಷದಮೇಲುಂಟು. ಚೆಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ಕೊಡಿಸುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಲ್ಹಾರರಾವ ಬಿ ಜಹಾಗೀರದಾರ,

ಮ್ಯಾನೆಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ಸ್ಥಳ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ "	೬-೧-೦
೩ "	೪-೮-೦
ಪರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾ.

ವಿಜಯ.

ತಾರೀಖು ೨೧-೮-೧೯೩೧ನೇ ಇಸ್ವಿ

ದುರಾಗ್ರಹ ಶಬ್ದವು ಎಲ್ಲಿ ಹುಟ್ಟಿತು?

ದುರಾಗ್ರಹ ಶಬ್ದದ ಬಗ್ಗೆ ಇಲ್ಲಿಯ ಕಾಂಗ್ರೆಸ ಕಮೀಟಿಯವರು ಮಿ. ಕಲೆಕ್ಟರ ಸಾಹೇಬರಿಗೆ ಬರೆದದ್ದರ ಬಗ್ಗೆ ನಿನ್ನಿನ ಸಂಚಿಕೆಯಲ್ಲಿ ಬರೆದಿದ್ದೇವಷ್ಟೇ? ಆ ಶಬ್ದದ ಪೂರ್ವ ಇತಿಹಾಸವಾದದ್ದೇನೆಂದರೆ-

ಹಾವೇರಿ ತಾಲೂಕಿನಲ್ಲಿ ಯಲಗಚ್ಚ ಎಂಬ ಗ್ರಾಮವು ಕರಜಗಿ ಮತ್ತು ಹೊಸರಿತ್ತಿಯ ಮಧ್ಯದಲ್ಲುಂಟು. ಈ ಗ್ರಾಮದವರು ಕೌನ್ಸಿಲ ಚುನಾವಣೆಗೆ ಸಂಪೂರ್ಣ ಬಹಿಷ್ಕಾರ ಹಾಕಿದರು. ಬಹಿಷ್ಕಾರವನ್ನು ಲೆಕ್ಕಿಸದೆ ಗೌಡರಾದ ಹಣಮಂತರಾಯರು ಶ್ರೀ. ಜೋಗ ವಕೀಲರಿಗೆ ಓಟು ಕೊಟ್ಟರು. ಊರವರೆಲ್ಲ ಒಂದಾಗಿ ಸುಳಕವ್ವನ [illegible] ಕಂಡು, ಗ್ರಾಮವಾಸಿಗಳು ಇವರಿಗೆ ಸಾಮಾಜಿಕ ಬಹಿಷ್ಕಾರ ಹಾಕಿದರು. ಬಹಿಷ್ಕಾರ ಹೋದ ಹೊರ್ತು ಹಣಮಂತರಾಯರ ಪ್ರಪಂಚ ಸಾಗದಾಯಿತು. ಓಟು ಹಾಕಿಸಿದಂಥವರಂತೂ ಇಲ್ಲ; ಒಲ್ಲದ್ದ ಸರಕಾರ ಕೂಡ ಸಾಮಾಜಿಕ ಬಹಿಷ್ಕಾರ ತೆಗೆಸುವದೆಂತು? ಕಾಂಗ್ರೆಸದ ಕ್ಷಮೆ ಬೇಡಿಕೊಂಡ ಹೊರ್ತು, ಹಣಮಂತರಾಯನಿಗೆ ಅನ್ಯ ಮಾರ್ಗವೇ ಇರಲಿಲ್ಲ. ಆದ್ದರಿಂದ ಈತನು ತನ್ನಿಂದಾದ ಅಕ್ಷಮ್ಯ ಅಪರಾಧದ ಸಲುವಾಗಿ ಕಾಂಗ್ರೆಸದ ಕ್ಷಮೆ ಬೇಡಿಕೊಂಡನು. ಈ ಕ್ಷಮಾಪತ್ರವನ್ನು ಆಗ್ಗೆ ವಿಜಯದಲ್ಲಿ ಮುದ್ರಿಸಿದ್ದೇವೆ.

ಸರಕಾರೀ ಜವಾಬದಾರನಾದ ಶಾನುಭೋಗನು ಕಾಂಗ್ರೆಸದ ಮುಂದೆ ತನ್ನಿಂದ ತಪ್ಪಾಯಿತೆಂದು ಹೇಳಿಕೊಂಡು ಬಹಿಷ್ಕಾರದ ಸೂತಕ ಕಳಕೊಂಡದ್ದು ಪ್ರಾಂತ ಅಧಿಕಾರಿಗೆ ಸರಿಬರಲಿಲ್ಲ. ಬ್ರಿಟಿಶ ಸಾಮ್ರಾಜ್ಯದ ಪ್ರತಿಷ್ಠೆಗೆ ಕುಂದು ಬಂದಂತಾಯಿತು. ವಾಸ್ತವಿಕವಾಗಿ ಸಾಹೇಬರು ಯಲಗಚ್ಚಕ್ಕೆ ಹೋಗಿ, ಈತನ ಬಾಳುವೆ ಸಾಗುವಂತೆ ಎಲ್ಲಾ ರೀತಿಯಿಂದ ಸಹಾಯ ಮಾಡಬೇಕಾಗಿತ್ತು. ಹಾಗೆ ಆಪದ್ಬಾಂಧವನಾಗಿ ನಡೆದದ್ದರಿಂದಲೇ ಮಾಫಿಯ ಸಮಯ ಬಂತು. ಸಾಹೇಬರು ಹೀಗೆ ತಾರಕರಾಗದೆ ಮಾರಕರಾಗಿ "ದುರಾಗ್ರಹಕ್ಕೆ ತನ್ನ ಹಕ್ಕನ್ನು ಉಪಯೋಗಿಸಿದ್ದಕ್ಕಾಗಿ ಕಾಂಗ್ರೆಸದ ಮಾಫೀ ಬೇಡಿಕೊಂಡವನು ಶಾನುಭೋಗನಾಗುವದು ಯೋಗ್ಯವಲ್ಲವಾದ್ದರಿಂದ ಆತನ ಗೌಡಕಿಯನ್ನು ತೆಗೆದು ಹಾಕಿದೆನು" ಹುಕುಮು ತೆಗೆದರು. ಇದರ ಮೇಲೆ ಹಣಮಂತರಾಯನು ಕಲೆಕ್ಟರರಾದ ಮಿ. ಹಾರ್ಟಶಾರ್ನ ಸಾಹೇಬರ ಕಡೆಗೆ ಅಪೀಲು ಮಾಡಿದನು. ಸಾಹೇಬರು ಬರೆದ ರರಾವು-

ಅಪೀಲದಾರನು ನಡೆದ ಸಂಗತಿ ಒಪ್ಪಿದ್ದಾನೆ. ಈ ಬಗ್ಗೆ ಹೆಚ್ಚಿಗೆ ಹೇಳಿಕೊಳ್ಳುವದನ್ನು ಕೇಳುವ ಅಗತ್ಯವಿಲ್ಲ. ಹಣಮಂತರಾಯನು ದುರಾಗ್ರಹಿಗಳಿಂದ ಫೌಜದಾರಿಯಾಗುವಂಥ ಹಿಂಸೆಗೆ ಗುರಿಯಾದದ್ದು ನಿಸ್ಸಂಶಯ. ಈತನು ತನ್ನಿಂದ ಕ್ಷಮಾ ಪತ್ರ ಬರಸಿಕೊಳ್ಳಲಿಕ್ಕೆ ಒತ್ತಾಯ ಮಾಡಿದ ಜನರ ಮೇಲೆ ಫೌಜದಾರಿ ಫಿರ್ಯಾದಿ ಮಾಡಬೇಕಾಗಿತ್ತು. ಆದರೆ ಹಾಗೆ ಮಾಡದೆ, ಕೇವಲ ಪರರ ದಾಸನಂತೆ ವರ್ತಿಸಿದನು. ಅನಂತರ ಮಾಮಲೇದಾರರ ಮುಂದೆ ಜವಾಬು ಕೊಡುವಾಗ ಮೊದಲಿನ ಮಾತು ತಿರುಗಿಸಿ ಹೇಳಿದನು. ಆದ್ದರಿಂದ ಪ್ರಾಂತ ಅಧಿಕಾರರು ಮಾಡಿದ ಹುಕುಮು ಯೋಗ್ಯವಾಗಿರುತ್ತದೆ."

ಸಾಹೇಬರ ಹುಕುಮಿನ ಮೇಲೆ ಹಣಮಂತರಾಯನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಗೆ ತನ್ನ ಕೆಲಸ ಕೊಡಿಸಬೇಕೆಂದೂ, ತನ್ನ ಮೇಲಿನ ಪ್ರಸಂಗವು ಗಾಂಧಿ- ಆಯರ್ವಿನ ಸಂಧಿ ಸಂಧಾನದಲ್ಲಿ ಬರುತ್ತದೆಂದೂ ಅರ್ಜಿ ಮಾಡಿಕೊಂಡಿರುತ್ತಾನೆ

ಮಹಾತ್ಮರು ಹೇಳುವಂತೆ ಹಿಂದುಸ್ಥಾನ ಸರಕಾರದವರು ಅಲಹಾಬಾದ ಇಲಾಖೆಗೆ ಸಂಬಂಧಿಸಿದ ಎಲ್ಲ ಪತ್ರಗಳನ್ನು ಪ್ರಸಿದ್ಧ ಮಾಡಿಲ್ಲ. ಎರಡು ಕಾಗದಗಳನ್ನು ಮಾತ್ರ ಪ್ರಸಿದ್ಧ ಮಾಡಿದ್ದಾರೆ. ಇವು ಬೇಕಿಲ್ಲದಂಥವು. ಮಹತ್ವದ ಕಾಗದಗಳನ್ನು ಪ್ರಸಿದ್ಧ ಮಾಡಿಲ್ಲೆಂದು ಪಂಡಿತ ಜವಾಹರಲಾಲರು ಹೇಳುತ್ತಾರೆ.

ಮುಂಬಯಿಯಲ್ಲಿ ೨೩ ನೇದು ತಾರೀಖಿನಿಂದ ೩೦ ನೆಯ ತಾರೀಖಿನ ವರೆಗೆ ಒಂದು ವಾರ ಮದ್ಯಪಾನ ಪ್ರತಿಬಂಧಕದ ದೊಡ್ಡ ಚಳವಳಿಯನ್ನು ಊರಲ್ಲೆಲ್ಲ ನಡೆಸುವರು.

ಪಂಡಿತ ಮಾಳವೀಯರವರು ಆರ್ಡಿನನ್ಸವಾದಂತೆ ಮಹಾತ್ಮರಾಗಿಲ್ಲ.

ಇನ್ನೂ ರಾವುಂಡಟೇಬಲಿಗೆ ಹೋಗುವ ಆಶೆಯುಳ್ಳವರು ಪಂಡಿತ ಮಾಲವಿಯಾಜಿಯವರು ಅಲಹಾಬಾದಿನಲ್ಲಿ ಒಂದು ಭಾಷಣದಲ್ಲಿ ಹೇಳಿದ್ದಾರೆ. ಪಂಡಿತರಂತೆ ತಾವು ಆಶಾವಾದಿಯಾಗಿಲ್ಲೆಂದು ಮಹಾತ್ಮರು ಹೇಳಿ, ಅದಕ್ಕೆ ಮುಂದೆ ಬರೆದಂತೆ ಕಾರಣ ಹೇಳುತ್ತಾರೆ

ಪಂಡಿತ ಮಾಳವಿಯಾಯವರು ಹೇಳುವ ತತ್ವವು ಕಣ್ಣ ಮಾತಿಗೆ ಒಂದಿದ್ದು ನಿಜ. ಈ ಸಣ್ಣ ಮಾತಿನ ದೆಸೆಯಿಂದ ಸರಕಾರದವರು ಒಂದು ದೊಡ್ಡ ತತ್ವವ ಬೆಳೆಸಿದ್ದಾರೆ. ಈ ತತ್ವವೇ ರಾಜಿಗೆ ಮುಖ್ಯವಾಗಿದೆ ಸರಕಾರ ಮತ್ತು ಜನರ ನಡುವೆ ಕಾಂಗ್ರೆಸ ಸಭೆಯು ಮಧ್ಯಸ್ಥಗಾರನಾಗಿರುತ್ತದೆ. ಸರಕಾರದವರು ಈ ಸಂಗತಿಯನ್ನು ಒಪ್ಪದಿದ್ದರೆ ರಾಜಿ ಎಂಬುವದು ವ್ಯರ್ಥವೇ ಸರಿ. ಸರಕಾರವು ಈ ಮಾತನ್ನು ಒಪ್ಪದೆ, ಬಾರಡೋಲಿಯ ವಿಷಯವಾಗಿ ಕರಾರು ಮುರಿದುಕೊಂಡಿತು ಸರಕಾರವು ಯಾವದೊಂದು ಕಮಿಟಿ ಅಥವಾ ಹಾಯಕೋರ್ಟಿನ ಜಡ್ಜರ ಮುಖಾಂತರ [illegible] ದಕ್ಕೆ ನಮ್ಮ ಅಭ್ಯಂತರ [illegible] ನಲ್ಲಿ ತರಬೇಕೆಂದು ನಮ್ಮ ಉದ್ದೇಶವೇ ಇಲ್ಲ."

ಮಹಾತ್ಮರ ಈ ಸ್ಪಷ್ಟೀಕರಣದಿಂದ ದುರಾಗ್ರಹವು ಯಾರ ಕಡೆಗಿರುವದೆಂಬುದು ಚನ್ನಾಗಿ ಸಿದ್ಧವಾಗುತ್ತದೆ.

ಡಾಕ್ಟರ ಮ್ಯಾನಸಾಹೇಬರ ನಿರಾಶೆ

—(೦)—

ಡಾಕ್ಟರ ಮ್ಯಾನಸಾಹೇಬರ ಹೆಸರನ್ನು ಅರಿಯದವರೇ ಇಲ್ಲ. ಇವರು ಸರಕಾರೀ ಕಾಮದಾರರಿದ್ದಾಗ ಕೂಡ ಗವಂಗಗಳ ಮುಂದೆ ಪಿಕೆಟಿಂಗ ಮಾಡಿದರು. ಇವರು ಈಗ ಲಂಡನದಲ್ಲಿದ್ದು, ಮಹಾತ್ಮರು ರಾವುಂಡಟೇಬಲಕ್ಕೆ ಬರದಿದ್ದರೆ ಟೇಬಲವು ಹಾಸ್ಯಕಾರಕ ಫಾರ್ಸ ಆಗುವದೆಂದು ಸ್ಪಷ್ಟಮತ ಹೇಳಿದ್ದಾರೆ ಹೇಗಾದರೂ ಮಾಡಿ, ಮಹಾತ್ಮರನ್ನು ಕರಿಸಿಕೊಳ್ಳಬೇಕೆಂದು ಅನೇಕ ಇಂಗ್ಲಿಷ ಗೃಹಸ್ಥರು ಮಿ. ವೆಜವುಡ್‌ಬೆನ ಸಾಹೇಬರಿಗೆ ಆಗ್ರಹಪಡಿಸುತ್ತಿದ್ದಾರೆ.

ಮದ್ರಾಸದಲ್ಲಿ ಹೋದ ವರ್ಷ ಶರಾಬಿನ ಲಿಲಾವು ಐದು ಲಕ್ಷಕ್ಕಾಗಿತ್ತು ಪಿಕೆಟಿಂಗದ ದೆಸೆಯಿಂದ ಈ ವರ್ಷ ಮೂರು ಲಕ್ಷಕ್ಕಾಯಿತು.

ಮಗನ ದೆಸೆಯಿಂದ
ಲಾರ್ಡ ಅರ್ವಿನ್ನ ಸಾಹೇಬರಿಗೆ ಒಂದ ಪೀಕಲಾಟ
....(೦)....

ಲಾರ್ಡ ಅರ್ವಿನ್ನ ಸಾಹೇಬರ ಕನಿಷ್ಠ ಚಿರಂಜೀವನು ಶಾಲೆಯಲ್ಲಿ ಕಲಿಯುತ್ತಿದ್ದಾನೆ. ಮಹಾತ್ಮಾರ ವಿಷಯವಾದ ಅಭಿಮಾನದ ದೆಸೆಯಿಂದ ಲಾರ್ಡ ಸಾಹೇಬರ ಚಿರಂಜೀವನಿಗೆ ಹುಡುಗರು ಗಾಂಧೀ ಗಾಂಧೀ ಎಂದು ಅಣಗಿಸುವರು. ಇದೊಂದು ಅವನಿಗೆ ದೊಡ್ಡ ಅಪಮಾನವೆನಿಸಿದೆ. ಅಪ್ಪಾ ಇನ್ನು ಮೇಲೆ ಈ ಗಾಂಧಿಯ ಪಾರ್ಟೀ ಬಿಡು ಎಂದು ಆತನು ತಂದೆಗೆ ಹೇಳಿಕೊಳ್ಳಹತ್ತಿದ್ದಾನೆ.

ಮಹಾತ್ಮರು ಲಂಡನಕ್ಕೆ ಹೋಗುವ ಆಸೆ
--(೦)--

ಹಿಂದುಸ್ಥಾನ ಸರಕಾರದವರು ಮಹಾತ್ಮರ ಕೋರಿಕೆಯ ಮೇರೆಗೆ ಬಾರಡೋಲಿ ರೈತರ ಅನ್ಯಾಯಗಳ ವಿಚಾರ ಮಾಡಲಿಕ್ಕಾಗಿ ನ್ಯಾಯಕೋರ್ಟಿನ ಜಡ್ಜರನ್ನು ನೇಮಿಸಲಿಕ್ಕೆ ಒಪ್ಪುವರೆಂದೂ, ಅವರು ರೌಂಡಟೇಬಲಕ್ಕೆ ಹೊರಡಬಹುದೆಂದೂ, ಆದರೆ ನಿಶ್ಚಯವಾಗದ ಸುದ್ದಿಯು ಇಂದು [illegible] ಒಂದ ವರ್ತಮಾನ [illegible]

[illegible] ಕಾಂಗ್ರೆಸ [illegible] ಶೋಧ
--(೦)--

ತಿನ್ನೆವಲ್ಲಿ [illegible] ಪಾಲಮಕೋಟೆಯಲ್ಲಿ ಕಾಂಗ್ರೆಸ [illegible] ಸುಬ್ಬಯ್ಯನೆಂಬವನು ಹೋಗಿ [illegible] ಮಾರಾಟಕ್ಕೆಂದು [illegible] ಕೊಲೆಯಾದನು. ಈತನ ಜೀವಹತ್ಯವಾಗಿರಬೇಕೆಂದಲೇ ಕಾಂಗ್ರೆಸದವರಿಗೆ ಸಂಶಯ ಬಂದು ಪೊಲೀಸ ತಪಾಸಣೆಯೂ ನಡೆಯಿತು. ಸಂಶಯದಿಂದ [illegible] ಸ್ಥಾನದಲ್ಲಿ ಒಂದು ಗೋರಿಯನ್ನು ಅಗಿಯಲು ಸುಬ್ಬಯ್ಯನ ಪ್ರೇತ ದೊರೆಯಿತು. ಈ ಪ್ರೇತವನ್ನು ಒಂದು ತಿಂಗಳ ಹಿಂದೆಯೇ ಹೂಳಿದ್ದರೆಂದು ಪಾದ್ರಿಗಳು ಅನ್ನುತ್ತಾರೆ.

ಡೇರಾ ಇಸ್ಮಾಯಿಲಖಾನದ ದಂಗೆಯಲ್ಲಿ ನಷ್ಟ ಹೊಂದಿದಂಥವರಿಗೆ ಸರಕಾರದವರು ನೂರಕ್ಕೆ ಆರು ರೂಪಾಯಿ ಬಡ್ಡೀ ದರದಿಂದ ಸಪ್ತ ಲಕ್ಷ ರೂಪಾಯಿಯ ಸಾಲ ಕೊಡುವ ವಿಚಾರ ನಡೆಸಿದ್ದಾರೆ.

ಭಾವಲಪೂರದಲ್ಲಿ ಭಯಂಕರ ಕೊಲೆ
-(೦)-
ಹೂವಿನ ಮಾಲೆಯಿಂದ ಕೊಲೆಗಡಕನ ಬಹುಮಾನ
....(೦)....

ಭಾವಲಪೂರವು ನವಾಬರ ಸಂಸ್ಥಾನವು. ಅಲ್ಲಿಯ ಪ್ರತಿಷ್ಠಿತ ಜಮೀನದಾರರಾದ ಲಾಲಾ ಮಿಲಂದರರವರು ಕುಂಬಿದ ಪೇಟೆಯಲ್ಲಿ ಹೋಗುತ್ತಿದ್ದಾಗ, ಒಬ್ಬ ಮುಸಲ್ಮಾನ ತಲೆತಿರುಕನು ಇವರ ನೆತ್ತಿಗೆ ಹರಿತವಾದ ಚೂರಿಯಿಂದ ಹೊಡೆದನು, ಅದನ್ನು ಅರ್ಧ ಸೀಳಿದನು. ಕೂಡಲೆ ಲಾಲಾಜಿಯವರು ರಕ್ತ ಒಂಬಾಳಾಗಿ ಜೀವ ಹೋಗಿ ಬಿದ್ದರು. ಕೂಡಿದ ಜನರು ಕೊಲೆಗಡಕನನ್ನು ಹಿಡಿದು ಪೋಲೀಸರ ವಶ ಮಾಡಿದರು. ಮುಂದೆ ಪೋಲೀಸರು ಆತನನ್ನು ಕರಕೊಂಡು ಹೋಗುತ್ತಿದ್ದಾಗ ದಾರಿಯಲ್ಲಿ ಮುಸಲಮಾನರು ಆತನ ಕೊರಳೊಳಗೆ ಹೂವಿನ ಮಾಲೆಗಳನ್ನು ಹಾಕಿ, ಬಹುಮಾನ ಪಡಿಸಿದರು. ಕೊಲೆಪಾತಕಿಯನ್ನು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಲು- ಏಕೆ ಕೊಲೆ ಮಾಡಿದನೆಂಬ ಕಾರಣ ಹೇಳಲಿಲ್ಲ. ಹಗಲು ಹಾಡೆ! ಈ ತೆರನಾಗಿ ಭಯಂಕರವಾದ ಕೊಲೆಯ ದೆಸೆಯಿಂದ ಜನರು ಭಯಭೀತರೂ ಚಿಂತಾಕ್ರಾಂತರೂ ಆಗಿದ್ದಾರೆ.

ಯಾವದೇ ರಾಜಕೀಯ ಸಭೆಸಮಾರಂಭರ ಬಂದುಪ್ರತಿಬಂಧ ವಿದ್ದರೂ, ಕಾಶ್ಮೀರ ದಿನವು ಆಚರಿಸಲ್ಪಟ್ಟಿತು. ಆ ಕಾಶ್ಮೀರ ದಿನದ ದ್ವೇಷವೇ ಲಾಲಾಜಿಯವರ ಕೊಲೆಗೆ ಕಾರಣವಾಗಿರಬೇಕಲ್ಲವೇ?

ಮುಸಲಮಾನ ಧರ್ಮದ ಮದಿವೆಯ
ಮುಕದ್ದಮ ದಾವೆ
....(೦)....

ಇಂದೂರಿನ ಮೌಲ್ವಿ ಸಯ್ಯದ ಮಹಮದನೆಂಬ ಶ್ರೀಮಂತನು ಲಕ್ಷ ರೂಪಾಯಿ ಮಹಾರಿನ ಹಣ ಕೊಡುವ ಕರಾರಿನಿಂದ ಜಕ್ಕಿಕಾ ಬೇಗಮಳನ್ನು ಮದಿವೆಯಾದನು. ಹತ್ತು ಸಾವಿರದ ಒಡವೆ ಮತ್ತು ಬ್ಯಾಂಕು ಹಾಗು ಕಂಪನಿಯ ಶೇರುಗಳನ್ನು ಕೊಟ್ಟನು. ಉಳಿದದ್ದನ್ನು ಕೊಡಬೇಕಾಗಿತ್ತು; ಅಷ್ಟರಲ್ಲಿ ಬೇಗಮಳು ಸತ್ತಳು. ಮಗಳ ಜೀವದಿಗೆ ತಾಯಿಯು ವಾರಸದಾರಳಾಗುವದರಿಂದ, ಮಗಳು ಸತ್ತರೂ ಆ ಲಕ್ಷ ರೂಪಾಯಿ ತನಗೆ ದೊರೆಯಬೇಕೆಂದು ತಾಯಿಯು ಮುಂಬಯಿ ಹಾಯಕೋರ್ಟಿನಲ್ಲಿ ದಾವೆ ತಂದಳು. ದಾವೆದ ನಿರ್ಣಯವಾಗುವದರೊಳಗಾಗಿ ತಾಯಿಯು ತೀರಿಕೊಂಡಳು. ಈಗ ಜಕ್ಕಿಕಾ ಬೇಗಮನ ಅಕ್ಕ ಹುಜಬಾನ ಬೇಗಮಳು ತಾನು ತಾಯಿಯ ಆಸ್ತಿಗೆ ವಾರಸದಾರಳಾಗುವದರಿಂದ, ಆ ಲಕ್ಷ ರೂಪಾಯಿ ತನಗೆ ದೊರೆಯಬೇಕೆಂದು ವಾದಿಯಾಗಿ ಮುಂದೆ ಬಂದಿದ್ದಾಳೆ. ನವಾಬನು ಹೆಚ್ಚಿನ ಬಹಾದ್ದೂರನು. ನಾನು ಜಕ್ಕಿಕಾ ಬೇಗಮಳನ್ನು ಮದಿವೆಯಾಗಿ [illegible] ಅಂಗವನ್ನು [illegible]ಗಿದ್ದಳೆಂದು ಕೃಷಿಯುಕ್ತ ತಕರಾರು ಮಾಡಿದ್ದಾನೆ.

ಡೇರಾ ಇಸ್ಮಾಯಿಲಖಾನದ ಹತ್ತರ ದಂಗೆ.
....(೦)....

ಡೇರಾ ಇಸ್ಮಾಯಿಲಖಾನದ ದಂಗೆಯ ತರುವಾಯ ಅಲ್ಲಿಂದ ೩೦ ಮೈಲುಗಳ ಮೇಲಿರುವ [illegible] ಎಂಬ ಗ್ರಾಮದಲ್ಲಿ ಹಿಂದೂ ಮುಸಲಮಾನ ದಂಗೆಯಾಗಿ ಒಬ್ಬ ಹಿಂದೂ, ಒಬ್ಬ ಮುಸಲಮಾನನು ಕೊಲ್ಲಲ್ಪಟ್ಟನು. ಅನೇಕರು ಘಾಯವಾಗಿದ್ದಾರೆ.

ವಿವಿಧ ವರ್ತಮಾನಗಳು

ಮುಂಬಯಿಯ ಲಂಕಸ್ಟರ ಕೂಟ ಇದ್ದ ನ್ಯಾಯಾಲಯವು ೫೪ ಕೋಟಿಯಷ್ಟು ಕಡಿಮೆಯಾಯಿತು. ಬಹಿಷ್ಕಾರದ ಪ್ರಭಾವವು!!

ಪುಣೆಯಲ್ಲಿ ಗೋಖಲೆ [illegible] ಚಳವಳಿಯು [illegible] ತಾರೀಖಿನಿಂದ ಪ್ರಾರಂಭವಾಗುತ್ತದೆ.

ಪೇಶಾವರದ ಹತ್ತರಿರುವ ಅಕಬರಪೂರವೆಂಬ ಗ್ರಾಮದಲ್ಲಿ ದಂಗೆ ಮಾಡಿದರೆಂದು ಪೇಶಾವರದ ಡಿ॥ ಮ್ಯಾ॥ ಸಾಹೇಬರು ಕಾಂಗ್ರೆಸದ ಒಬ್ಬ ಮುಖಂಡರಿಗೆ ೩ ವರ್ಷ ೨॥ ವರ್ಷದ ಸಖತ ಶಿಕ್ಷೆ ವಿಧಿಸಿದ್ದಕ್ಕಾಗಿ ಪೇಶಾವರದಲ್ಲಿ ಹರತಾಳ ವಾಯಿತು.

ರಾಜ್ಯಕ್ರಾಂತಿಕಾರಕರಾಗಿ ಯುರೋಪಿಯನರ ಕೊಲೆ ಮಾಡಿದಂಥ ದಿನೇಶ ಗುಪ್ತ, ವಿನಯ ಬೋಸ ಮೊದಲಾದವರ ಸ್ಮೃತಿಯ ಭಾಷಣ ಮಾಡಿದರೆಂದು ಸರಕಾರದವರು ಸಿಲಹೆಟದ ಶ್ರೀ-ಸುರೇಶ ದೇವರನ್ನು ದಸ್ತಗಿರಮಾಡಿದ್ದಾರೆ. ಮ್ಯಾಜಿಸ್ಟ್ರೇಟರು ಇವರನ್ನು ಜಾಮೀನಿನ ಮೇಲೆ ಸಹ ಬಿಡಲಿಲ್ಲ.

ಈಗಿನ ವ್ಯಾಪಾರೋದ್ಯೋಗದ ಮಂದಿಯ ಕಾಲದಲ್ಲಿ ಸಹಕಾರಿ ಬ್ಯಾಂಕುಗಳು ದಂಡದ ಬಡ್ಡಿಯನ್ನು ಬಿಡಬೇಕೆಂಬ ವಿನಂತಿ ನಡೆದಿದೆ. ಹುಬ್ಬಳ್ಳಿಯ ಅರ್ಬನ ಬ್ಯಾಂಕಿನವರು ದಂಡದ ಬಡ್ಡಿಯನ್ನು ಬಿಡಲಿಕ್ಕೆ ಒಪ್ಪದ್ದರಿಂದ, ಸಾಲಗಾರರು ಆ ಬ್ಯಾಂಕಿನ ವಿರುದ್ಧ ದೂರಿಕೊಳ್ಳಹತ್ತಿದ್ದಾರೆ.

ಜಾಹೀರ ನೋಟೀಸು

ಈ ಜಾಹೀರ ನೋಟೀಸಿನಿಂದ ಪ್ರಸಿದ್ಧ ಮಾಡುವದೇನೆಂದರೆ - ನಾನು ಧಾರವಾಡ ವಿಜಯ ಪತ್ರದಲ್ಲಿ ತಾರೀಖು ೧ ಜುಲೈ ೧೯೩೧ ನೆಯ ಇಸ್ವಿ ದಿನದ ಪತ್ರದಲ್ಲಿ ನನ್ನ ಗಂಡನಾದ ಶಿದ್ದಾಶಂದಿ ಶೀಲವಪ್ಪ ಯಾಳಕನ ಮೇಲೆ ನೋಟೀಸು ಮಾಡಿದ್ದೆನು ಸದರ ಶಿದ್ದಾ ಯಾಳಕನು ನೋಟೀಸು ತಕ್ಕೊಳ್ಳುವದಕ್ಕೆ ಬುದ್ಧ್ಯಾಪೂರ್ವಕ ಮೋಸ ತಪ್ಪಿಸುತ್ತಾನೆ ಕಾರಣ ಪರತವೆಂದು ಪೋಸ್ಟಖಾತೆಯಿಂದ ತಿರುಗಿ ಬಂದಿರುತ್ತದೆ ಇದರಿಂದ ಆತನ ಮನಸಿನಲ್ಲಿ ನನ್ನ ಕೂಡ ಬಾಳುವೆ ಮಾಡುವ ಇಚ್ಛೆ ಇದ್ದಂತೆ ತೋರುವದಿಲ್ಲ ಕಾರಣ ನನಗೆ ಉಡಿಕೆ ಮಾಡಿಕೊಳ್ಳುವದು ಅನಿವಾರ್ಯವಾಗಿರುತ್ತದೆ ಆದರೂ ಆತನಿಗೆ ಇನ್ನೊಮ್ಮೆ ತಿಳಿಸುವದು ನನ್ನ ಧರ್ಮವಾದ್ದರಿಂದ ಈ ಜಾಹೀರ ನೋಟೀಸು ಕೊಟ್ಟಿರುತ್ತೇನೆ ಮತ್ತು ಕಾರಣವಿಲ್ಲದಿದ್ದರೂ ಆತನ ಶಂದಿ ಶೀಲವಪ್ಪ ಯಾಳಕನ ಹೆಸರಲೇ ಸ್ಪೇಶಲ ರಜಿಸ್ಟರ ಮಾಡಿರುತ್ತೇನೆ ಸದರ ನನ್ನ ಗಂಡನು ಈ ನೋಟೀಸು ಜಾಹೀರಾದ ೧೫ ದಿವಸಗಳಲ್ಲಿ ನಾನಿದ್ದಲ್ಲಿಗೆ ಒಂದು ತಾರೀಖು ಒಂದನೆಯ ಜುಲೈದ ಮೊದಲನೆಯ ನೋಟೀಸಿನಲ್ಲಿ ಬರೆದ ಯಾವತ್ತು ಶರ್ತುಗಳನ್ನು ಪೂರ್ಣ ಮಾಡಬೇಕು ಆದರ ಇದಕ್ಕೆ ತಪ್ಪಿದರೆ - ಇದೇ ನೋಟೀಸು ಸೋಡಪತ್ರವೆಂದು ತಿಳಿದು ನಾನು ನನಗೆ ಯೋಗ್ಯ ಗಂಡನನ್ನು ಉಡಿಕೆ ಮಾಡಿಕೊಳ್ಳುವೆನು ಮುಂದೆಯ ಗಂಡನಿಂದ ಉಡಿಕೆಯ ಗಂಡನಿಗೆ ಯಾವ ಬೇಪ್ರಕಾರದ ತ್ರಾಸವಾಗಬಾರದೆಂದು ಈ ಜಾಹೀರಾತ ನೋಟೀಸು ಕೊಟ್ಟಿರುತ್ತೇನೆ ಇದೇ ಅಖೈರ ಸೋಡಪತ್ರವು ತಿಳಿಯುವದು ತಾರೀಖು ೨೦ ಆಗಸ್ಟ ೧೯೩೧ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಫಕೀರವ್ವಾ ಕೋಂ ಶಿದ್ದಪ್ಪಾ ನಾಯಕರ ಇವರ ಕೈದು ಇರುತ್ತದೆ

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ ೨—೦—೦
ಕೃಷ್ಣ ಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೬

೧೯-೧೧-೩೫ ಮೈಸೂರ ಸ್ಟೋರ್ಸ,
ಬೆಳಗಾವಿಯವರಗಲ್ಲಿ
ಹುಬ್ಬಳ್ಳಿ

ವೆಂಕಟೇಶ ತಿರಕೊ ಕುಲಕರಣಿ ಗಳಗನಾಥ

—ಇವರು ಬರೆಯುತ್ತಿರುವ—

ರಹಸ್ಯ ಪ್ರಕಾಶವಾದ ಸಚಿತ್ರ ಮಹಾಭಾರತಾಮೃತದ

ಆದಿ ಪರ್ವ

ಲೇಖನ ವ್ಯವಸಾಯದ ನಲವತ್ತು ವರ್ಷಗಳ ಅನುಭವದಿಂದ ಈ ಅತಿ ಗೌರವದ ಪ್ರಚಂಡ ಪುಸ್ತಕವನ್ನು ಬರೆಯತೊಡಗಿದ್ದೇವೆ. ಆದಿಪರ್ವವು ಈಗ ಮಾರಾಟಕ್ಕೆ ಸಿದ್ಧವಾಗಿರುವದು. ಅದರ ಬೆಲೆ ೩-೮-೦ ಟಪಾಲಿನಿಂದ ತರಿಸುವವರ ಖರ್ಚು ಸಾವೇ ಹಾಕಿ ೩-೬-೦ ಗೆ ವಿ ಪಿ ಮಾಡುವೆವು ವಿ. ಪಿ. ತಕ್ಕೊಳ್ಳುವವರು ೩-೮-೦ ಕೊಟ್ಟರೆ ತೀರಿತು. ಒಟ್ಟು ಪುಸ್ತಕಗಳು ಏಳು ಅಥವಾ ಎಂಟು ಆಗಬಹುದು. ಇಡೀ ಭಾರತದ ಬೆಲೆ ೧೫ ರಿಂದ ೨೦ ರೂಪಾಯಿಗಳ ವರೆಗೆ ಬೀಳಬಹುದು. ಇದರಲ್ಲಿ ಬರೆಯುತ್ತಿರುವ ರಹಸ್ಯಗಳು ಅತಿ ಗೌರವದವಾಗಿರುವವು. ರಾಜಕೀಯ ವಿಚಾರಕ್ಕೆ ಈ ಪ್ರಚಂಡ ಗ್ರಂಥವನ್ನು ಈಗಿನಕಾಲದಲ್ಲಿ ಓದಲೇಬೇಕು. ಈಗ ಚಂದಾದಾರರಾಗುವವರಿಗೆ ಮುಂದಿನ ಪುಸ್ತಕಗಳು ಮುಕ್ಕಾಲು ಬೆಲೆಗೆ ಸಿಗುವವು. ನಮ್ಮ ಪರಿಚಯವು ಕನ್ನಡಿಗರಿಗಿರುವದರಿಂದ ಹೆಚ್ಚು ಬರೆಯುವ ಕಾರಣವಿಲ್ಲ. ಇಡೀಯ ಭಾರತದ ೫೦೦೦ ಪ್ರತಿಗಳಿಗೆ ೩೦-೩೫ ಸಾವಿರ ರೂಪಾಯಿ ವೆಚ್ಚವಾಗುವವು. ಕಾರ್ಯಗೌರವವರಿತು ಎಲ್ಲ ಕನ್ನಡಿಗರೂ ನಮ್ಮಮೇಲಿನ ಅಂತಃಕರಣದಿಂದ ಸಹಾಯಮಾಡತಕ್ಕದ್ದು. ಅಲ್ಲದೆ ನಮ್ಮಲ್ಲಿಯ ಈಗ ಸಿಲಕ್ಕು ಇರುವ ಕೆಳಗಿನ ಪುಸ್ತಕಗಳಲ್ಲಿ ಬೇಕಾದವನ್ನು ತಕ್ಕೊಂಡು ಆ ದ್ವಾರದಿಂದಲೂ ನಮ್ಮ ಈ ದೊಡ್ಡ ಕಾರ್ಯಕ್ಕೆ ಸಹಾಯಮಾಡಬಹುದು.

—ಪುಸ್ತಕಗಳ ಹೆಸರು ಮತ್ತು ಕ್ರಯದ ಪಟ್ಟಿ—

೧ ಮಾಧವಕರ ಹಾವಿಲಾಸ	೩	೧೨	೦	೧೧ ಕುರುಕ್ಷೇತ್ರ	೧	೮	೦
೨ ಮಹಾಭಾರತಾಮೃತ (ಆದಿಪರ್ವ)	೩	೮	೦	೧೨ ಕ್ಷಾತ್ರತೇಜ	೧	೦	೦
೩ ಶೈವಸುಧಾರ್ಣವ	೩	೮	೦	೧೩ ಸಂಸಾರಸುಖ	೧	೦	೦
೪ ಭಾಗವತಾಮೃತ	೩	೮	೦	೧೪ (೧೧)ನೇ (೧೨) ನೇ ಸ್ಕಂದ ಭಾಗವತ	೧	೦	೦
೫ ಶ್ರೀ ತುಲಸೀ ರಾಮಾಯಣ	೩	೦	೦	೧೫ ರಾಣಾ-ರಾಜಸಿಂಹ	೦	೧೨	೮
೬ ರಾಣೀ-ಮೃಣಾಲಿನಿ	೧	೮	೦	೧೬ ಗುರುಪ್ರಸಾದ	೦	೧೨	೦
೭ ಧಾರ್ಮಿಕತೇಜ	೧	೮	೦	೧೭ ಸದ್ಗುರು ಪ್ರಭಾವ	೦	೧೨	೦
೮ ಕರ್ಮಕಥೆ	೧	೮	೦	೧೮ ಸುಂದರಲೇಖ ಸಮುಚ್ಚಯ	೦	೮	೦
೯ ಈಶ್ವರೀಸೂತ್ರ	೧	೦	೦	೧೯ ಭಗವತೀ ಕಾತ್ಯಾಯನಿ	೦	೮	೦
೧೦ ಗೃಹಕಲಹ	೧	೦	೦	೨೦ ನಿರ್ಯಾಣಮಹೋತ್ಸವ	೦	೮	೦

ನಿಮ್ಮ

ಸದ್ಗುರು ಆಫೀಸು ಹಾವೇರಿ — ವೆಂ. ತಿ. ಕುಲಕರಣಿ, ಗಳಗನಾಥ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ವಿಜಯ

ಸಂಪಾದಕರು:- ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ (೨೨) ಧಾರವಾಡ ಶನಿವಾರ ತಾರೀಖು ೨೨ ನೇ ಆಗಸ್ಟ ೧೯೩೧ (ಸಂಚಿಕೆ ೧೯೮

ಜೋಶಿ, ಗಂಜೀಕರ ಮತ್ತು ಕಂಪನಿ

ಶುಕ್ರವಾರಪೇಟೆ ಧಾರವಾಡ

ಇವರನ್ನು

ಮುಂಬೈ ಪ್ರಾವಿನ್ಸಿಯಲ್ ಕೋ. ಇನ್ಶೂರನ್ಸ ಕಂಪನಿ, ಲಿ.

ಇವರು

ಧಾರವಾಡ ಜಿಲ್ಲೆಯ

ಚೀಫ್ ಏಜಂಟ

ರಾಗಿ ನಿಯಮಿಸಿದ್ದಾರೆ.

ಈಗ ಜಿಲ್ಲೆಯ ಎಲ್ಲ ಮುಖ್ಯ ಸ್ಥಳಗಳಲ್ಲಿ

ಸಬ್ ಏಜಂಟ

ರನ್ನು ನಿಯಮಿಸುವದದೆ. ಈ ಕೆಲಸ ಮಾಡಲಿಚ್ಛಿಸುವವರು ತಮ್ಮ ಖಾತ್ರಿಯ ಬಗ್ಗೆ ಎಲ್ಲ ಮಾಹಿತಿ ಕೊಟ್ಟು ಚೀಫ್ ಏಜಂಟರಿಗೆ ಬರೆಯಬೇಕು. ಖಾತ್ರಿಯಿಂದ ಕೆಲಸ ಮಾಡುವವರಿಗೆ ಪೂರ್ಣ ಕಮೀಶನ ಸಿಗುವದು.

ಜಾಹೀರ ನೋಟೀಸು

ಗಾಸವಾಯ  ಗಾಸವಾಯ

ನಮ್ಮ ಕೆಳಗೆ ಕಾಣಿಸಿದ ಮೋಟರಗಳು ಮಾರತಕ್ಕವುಗಳು ಇರುತ್ತವೆ ಮೋಟರಗಳು ಉತ್ತಮ ರನಿಂಗ ಆರ್ಡರದಲ್ಲಿ ಇರುತ್ತವೆ. ಗ್ರಾಹಕರು. ಮೋಟಾರ ತಕ್ಕೊಳ್ಳುವದಿದ್ದಲ್ಲಿ. ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಆಗರ ಸಮಕ್ಷಮ ಭೆಟ್ಟಿಯಾಗಿ ತಿಳಕೊಳ್ಳಬೇಕು.

೧॥ ಟನ್ ಫೋರ್ಡ ಲಾರಿ. ನಂ X ೪೪೫೧

೧ ಟನ್. ಸೆವ್ಹರಲೆಟ್ ಲಾರಿ. ನಂ Z ೫೯೨೦

ಟೂರಿಂಗ ಕಾರ ಬ್ರಿಸ್ಕೊ (ಮೋಕರ)

ಈ ಪ್ರಕಾರ ಮೂರು ಗಾಡಿಗಳು ಮಾರತಕ್ಕವು ಇರುತ್ತವೆ.

ಸಿ. ಬಿ. ಹಂಪಣ್ಣವರ
ಸವದತ್ತಿ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ್ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಗೆಯು ಎಂಟು ಲಕ್ಷದಮೇಲುಂಟು. ಚೆಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜೋಶಿ;
ಮ್ಯಾನೆಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨/೮-೦
೬ ,,	೭-೦-೦
೩ ,,	४-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ತಾರೀಖು ೨೨-೮-೧೯೩೧ನೇ ಇಸ್ವಿ

ಕಾಲೇಜದಲ್ಲಿರುವ ಮಕ್ಕಳಿಗೆ ಪ್ರೀತಿಯ ವಿವಾಹ.

ಕಾಲೇಜುಗಳಲ್ಲಿ ಓದುವಂಥವರು ಪ್ರಾಪ್ತ ವಯಸ್ಕರಾಗಿರುತ್ತಾರೆ. ತರುಣ ತರುಣಿಯರು ಒಂದೆಡೆಯಲ್ಲಿ ಶಿಕ್ಷಣ ಹೊಂದುತ್ತಾರೆ. ಎಷ್ಟೋ ಜನರು ಗೆಳೆಯ ಗೆಳತಿಯರೂ ಆಗಿರುತ್ತಾರೆ. ಇಂಥವರು ಹಗಲು ಆನಂದದಿಂದ ಕಾಲ ಕಳೆಯುವರು. ಅಭ್ಯಾಸ, ಶಿಕ್ಷಣ, ಆಟನೋಟ ಮುಂತಾದ ಹಲವು ಬಗೆಗಳಿಂದ ಹಗಲು ನಿವಿಷದಂತೆ ಹೋಗುತ್ತದೆ. ರಾತ್ರಿ ಮಾತ್ರ ಬಹಳ ಕಷ್ಟವಾಗುತ್ತದೆ. ಒಬ್ಬಂಟಿಗರಾಗಿ ಮಲಗಿದರೆ ನಿದ್ದೆ ಹತ್ತುವದಿಲ್ಲ. ಇಲ್ಲದ ಕಲ್ಪನೆಗಳು ಮನಸ್ಸಿನಲ್ಲಿ ಬಂದು, ಬುದ್ಧಿಯು ಅಸ್ಥಿರವಾಗುತ್ತದೆ. ಎಷ್ಟೋ ಭ್ರಮ ವಿಕಾರಗಳಾಗುತ್ತವೆ. ಆದ್ದರಿಂದ ರಾತ್ರಿಯನ್ನೂ ಸ್ವರ್ಗತುಲ್ಯವೆನಿಸುವಷ್ಟು ಆನಂದದಿಂದ ಕಳೆಯುವಂತೆ, ತರುಣ ತರುಣಿಯರು ಯಾವಜ್ಜನ್ಮವಾಗದಿದ್ದರೂ, ಶಿಕ್ಷಣ ಪಡೆಯುವ ಕಾಲಪರ್ಯಂತರವಾದರೂ, ಸಹವಾಸದ ತಾಂತ್ರಿಕ ಮದುವೆ ಮಾಡಿಕೊಳ್ಳಬೇಕೆಂದು ವಿಲಾಯತಿಯಲ್ಲಿ ವಿಚಾರ ನಡೆದದ್ದನ್ನೂ, ಇಂಗ್ಲಂಡದಲ್ಲಿ ಆಕ್ಸಫರ್ಡ, ಕೇಂಬ್ರಿಜ ಮುಂತಾದ ವಿದ್ಯಾಪೀಠಗಳಲ್ಲಿ ಈ ಬಗ್ಗೆ ವಾದವಿವಾದ ಆದದ್ದನ್ನೂ ವಿಜಯದಲ್ಲಿ ಬರೆದಿದ್ದೇವೆ.

ವಿಲಾಯತಿಯ ಮಾತು ವಿಲಾಯತಿಯಲ್ಲಿ! ಅಲ್ಲಿಯ ನಡೆನುಡಿಗಳನ್ನು ಹಿಂದಿಯರು ಅಂಗೀಕರಿಸಬೇಕೆಂಬ ನಿಯಮವಿಲ್ಲ. ಪಾಶ್ಚಿಮಾತ್ಯರ ವಿವಾಹ ಸಂಸ್ಕಾರ ಮೊದಲ್ಗೊಂಡು ಅವರ ಅನೇಕ ಸಾಮಾಜಿಕ ಕಲ್ಪನೆಗಳು, ಆಚಾರಗಳು ಹಿಂದೂ ಜನರಿಗೆ ತ್ಯಾಜ್ಯವಾಗಿರುತ್ತವೆ. ಇಂಥ ಗರ್ಹಣೀಯವಾದಂಥವುಗಳಲ್ಲಿ ಗರ್ಹಣೀಯವಾಗಿ ಸ್ವಚ್ಛಂದ ವೃತ್ತಿಯ ತಿಖರಕ್ಕೇರುವ ಸಹವಾಸದ ಮದುವೆಯ ವಿಷಯವಾಗಿ ಈ ದೇಶದಲ್ಲಿಯ ವಿದ್ಯಾಮಂದಿರದಲ್ಲಿ ಚರ್ಚೆಗೆ ಆಸ್ಪದ ಕೊಡುವದು ಅತ್ಯಂತ ನಿಂದ್ಯವೇ ಸರಿ. ಪುಣೆಯ ಫರಗ್ಯುಸನ್ನ ಕಾಲೇಜದಲ್ಲಿ ಅಂಥದೊಂದು ವಾದವಿವಾದದ ಸಭಾವು ಮಂದಿರವುಂಟು. ಅಲ್ಲಿ ಈ ಸಹವಾಸೋತ್ತರ ಮದುವೆಯ ಖಂಡನಮಂಡನದ ವಾದವಿವಾದವಾಗುವದೆಂದೂ, ಶ್ರೀ. ಇರಾಬಾಯಿ ಕರ್ವೆಯವರು ಅಧ್ಯಕ್ಷರಾಗುವರೆಂದೂ, ಇದರಲ್ಲಿ ತರುಣಿಯರೂ ಭಾಗತೆಗೆದುಕೊಳ್ಳುವರೆಂದೂ ಜಾಹೀರಾಯಿತು. ಈ ವಿಷಯವು ಮೊದಲೇ ಮಂಗ, ಅದರಲ್ಲಿ ಆತಂಥ ಮದ್ಯ ಕುಡಿದಂತಾದದ್ದರಿಂದ, ಅಲ್ಲಿ ನಡೆಯುವ ಭಾಷಣ, ಆಗುವ ಚರ್ಚೆ, ನಡೆಯುವ ಮೋಜು, ಹೊರಡುವ ರಸ ತಿಳಕೊಳ್ಳಲು ವಿದ್ಯಾರ್ಥಿಗಳ ದೊಡ್ಡ ಗುಂಪೇ ನೆರೆಯಿತು.

ಸಭೆಯಲ್ಲಿ ಮುಂದಾವತರದ ಉತ್ಪಾತಗಳಾಗುವವೆಂಬದು ಪ್ರಾರಂಭದಲ್ಲಿಯೇ ಕಂಡು ಬಂತು. ಶ್ರೀ. ಇರಾಬಾಯಿಯವರ ಬದಲು ಹೈದರಾಬಾದಿನಲ್ಲಿ ಕೂಡಿದ್ದ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾಗಿದ್ದ ಡಾಕ್ಟರ ಕೇತಕರರು ಅಧ್ಯಕ್ಷರಾಗುವರೆಂದು ಕುಸು ಮುಂದಾಗಿ ಜಾಹೀರ ಮಾಡಿದ್ದರು. ವಾನರ ಸೈನ್ಯದಂಥ ವಿದ್ಯಾರ್ಥಿಗಳು ವಿನೀತರು ಡಾಕ್ಟರ ಕೇತಕರರನ್ನು ನೋಡಿದ ಕೂಡಲೆ- ಇವರೇ ಅಧ್ಯಕ್ಷರಾಗುವ ಕವೆಬಾಣಿ ಯು ಗ ದೇ ವಿ ಂ ಬ ಪ್ರ ಶ್ನ ಮಾ ಡಿ ದ ರು. ಸಭೆಯು ತುಂಬಾದ ನಗೆಯು ಬಣ್ಣಿಸಲಳವಲ್ಲ. ಆ ನಂತರ ನಡೆದ ವ್ಯಾಖ್ಯಾನದಲ್ಲಿ ಯಾರಿಗೂ ಕೇಳಿಸದಷ್ಟು ಗೊಂದಲವೆದ್ದಿತು. ವ್ಯಾಖ್ಯಾನ ಕೊಡುವರೆಂದು ತಿಳಿದ ತರುಣಿಯರ ಮೇಲೆ ಕಾಗದ, ಕಾಗದದ ಕೋಳಿ, ಪಾರಿವಾಳ ಮಾಡಿ, ಬಿಸಾಕಿ ಚಲ್ಲಿದರು. ಸಭೆಯಲ್ಲಿ ಸಭ್ಯತನವೆಂದಿಷ್ಟೂ ಉಳಿಯಲಿಲ್ಲ.

ಈ ಸಭೆಯ ದೆಸೆಯಿಂದ ಅಲ್ಲಿಯ ವರ್ತಮಾನ ಪತ್ರಗಳಲ್ಲಿ ನಿತ್ಯ ಟೀಕೆ ನಡೆದಿದೆ. ಅನಾಹುತದ ಆರೋಪವನ್ನು ಸಭೆಯಲ್ಲಿ ಗೊಂದಲ ಮಾಡಿದವರ ಮೇಲೆ ಹೊರಿಸಿದ್ದಾರೆ. ಸಾಧಕ ಬಾಧಕ ಟೀಕೆಗಳೂ ನಡೆದಿವೆ. ಈ ಟೀಕೆ ಮತ್ತು ಗೊಂದಲಕ್ಕೆ ಕಾರಣರಾಗಿ, ಅಂಥ ಮೂರ್ಖ ಮತ್ತು ಅಂಗರಂಗದ ವಿಷಯವಿಟ್ಟವರ ದೂಷಣೆಯನ್ನು ಇಬ್ಬರೂ ಮಾಡುವದಿಲ್ಲೆಂಬದು ಆಶ್ಚರ್ಯ!

ಮದ್ಯಪಾನಕ್ಕಾಗಿ ವ್ಯಕ್ತಿ ಸ್ವಾತಂತ್ರ್ಯ ಕೊಟ್ಟಿದ್ದೇವೆಂದು ಹೇಳುವ ಸರಕಾರವು ರಾಜಕೀಯವಾಗಿ ವಿಚಾರ ಸ್ವಾತಂತ್ರ್ಯದ ಅಧಿಕಾರ ಕೊಟ್ಟಿರುವದಿಲ್ಲ. ಅದೇ ಪ್ರಕಾರ ಜನರಿಗೆ ಮತಸ್ವಾತಂತ್ರ್ಯವಿದ್ದರೂ, ದೇಶದ ಆಚಾರ ವಿಚಾರ, ಧಾರ್ಮಿಕ ಬಂಧನ ಮುಂತಾದವುಗಳ ವಿಚಾರ ಮಾಡಿಯೇ ವ್ಯಾಖ್ಯಾನಗಳನ್ನು ಮಾಡಿಸಬೇಕಾದುದು ಅವಶ್ಯವು. ಎಲ್ಲಾ ವಿಚಾರದಿಂದಲೂ ವಿಲಾಯತಿಯವರ ಅನುಕರಣ ಮಾಡುವದರಿಂದ ಹೇಗೆ ಫಜೀತಿಯಾಗುತ್ತದೆಂಬದಕ್ಕೆ ಪುಣೆಯಲ್ಲಿ ಕಂಡು ಬಂದ ನೋಟವೇ ಪ್ರತ್ಯಕ್ಷ ಪ್ರಮಾಣವಾಗಿರುತ್ತದೆ.

ಸರಕಾರದವರು ಹೇಗೆ ಒಡಂಬಡಿಕೆಯ ಕರಾರು ಮುರಿದರು.

....(೪)....

ಮಹಾತ್ಮರು ಸ್ವತಃ ಹೇಳುವದು -

೧ ಮದ್ರಾಸ ಇಲಾಖೆಯಲ್ಲಿ ಅಬಕಾರಿ ಸವಾಲಿನ ಕಾಲದಲ್ಲಿ ಪಿಕೆಟಿಂಗ ಮಾಡಬಾರದೆಂಬದು.

೨ ಖೇಡ ಮತ್ತು ಜಲಾಲಪೂರ ತಾಲೂಕುಗಳಲ್ಲಿ ರಾಜೀನಾಮೆ ಕೊಟ್ಟಂಥ ಅನೇಕ ತಲಾಟಿಗಳಿಗೆ ಕೆಲಸಕೊಟ್ಟಿದ್ದಾರೆ ಆದರೆ ಒಬ್ಬನು ರಾಯಿದೆಭಂಗದಲ್ಲಿ ಸೇರಿದನೆಂದು ಆತನಿಗೆ ಕೆಲಸ ಕೊಡಲಿಲ್ಲ.

೩ ಚಳವಳಿಯ ಕಾಲದಲ್ಲಿ ರಾಜೀನಾಮೆ ಕೊಟ್ಟಂಥ ಇಬ್ಬರು ಡಿಪ್ಯುಟಿ ಕಲೆಕ್ಟರರಿಗೆ ತಿರುಗಿ ಕೆಲಸ ಕೊಡಬಾರದು. ಅವರು ಪೆನಶನಕ್ಕೆ ಅರ್ಜಿಯನ್ನು ಕೊಟ್ಟರೆ- ಪೆನಶನ ಕೊಡಬೇಕೆಂದು ಲಾರ್ಡ ಆರ್ವಿನ್ನ ಸಾಹೇಬರೊಂದಿಗೆ ನನ್ನ ಕರಾರವಿತ್ತು. ಆದರೆ ಅವರು ಅರ್ಜಿಮಾಡಿದಾಗ್ಯೂ ಪೆನಶನ ದೊರೆತಿಲ್ಲ.

೪ ಅಸಹಕಾರದ ದೆಸೆಯಿಂದ ಡಾಕ್ಟರ ಚುನಿಲಾಲರು ರಾಜೀನಾಮೆ ಕೊಟ್ಟರು. ಇನ್ನೊಬ್ಬ ಡಾಕ್ಟರ ಸಿಂಹರು ತುರಂಗದ ಭವಣೆಯನ್ನು ಬೈಲಿಗೆ ತಂದರು. ಸರ್ಜನ ಜೇಲರರು ಇವರಿಗೆ ಕ್ಷಮೆ ಬೇಡಿಕೊಂಡರು. ಇವರು ಕ್ಷಮೆ ಬೇಡಿಕೊಳ್ಳಲಿಲ್ಲ ಆದ್ದರಿಂದ ಇವರಿಗೆ ಕೆಲಸ ದೊರೆಯಲಿಲ್ಲ. ಇಬ್ಬರಿಗೂ ತಿರುಗಿ ಕೆಲಸ ದೊರೆಯತಕ್ಕದ್ದು.

೫ ಅಹಮದಾಬಾದ ಜಿಲ್ಲೆಗೆ ಸೇರಿದ ಧೋಲಕಾದ ೩೦ ವರ್ಷದ ವೃದ್ಧ ಶಿಕ್ಷಕನ ಪೆನಶನ್ನವನ್ನು ಫಾರಫೀಟು ಮಾಡಿದ್ದಾರೆ.

೬ ಪಂಜಾಬದಲ್ಲಿ ಭಾಯಿ ಪರಮಾನಂದಸಿಂಗನು ಗಾಂಧೀ ದಿನದ ಉತ್ಸವದಲ್ಲಿ ಭಾಗ ತಕ್ಕೊಂಡನೆಂದು ಆತನ ಪೆನಶನ್ನ ಕಸಕೊಂಡಿದ್ದಾರೆ.

೭ ಗುಂಟೂರಿನ ಡಾಕ್ಟರರಾದ ಶ್ರೀ. ಜಲ್ಲಾಪತಿರಾಯರು ಹೋದ ಆಚೆಯ ಮೇ ತಿಂಗಳಲ್ಲಿ ರಾಜೀನಾಮೆ ಕೊಟ್ಟರು. ಒಂದು ವರ್ಷದ ನಂತರ ಹೋದ ಮೇ ತಿಂಗಳಲ್ಲಿ ಇವರಿಗೆ ಕೆಲಸ ಕೊಟ್ಟರು ಕೆಲಸದ ಮೇಲೆ ಹಾಜರಾದ ಒಂದು ತಿಂಗಳನಂತರ ಚಳವಳಿಯಲ್ಲಿ ಸೇರಿದ್ದಕ್ಕಾಗಿ ದುಃಖಪ್ರದರ್ಶನ ಮಾಡಲಿಕ್ಕೆ ಮೇಲಧಿಕಾರಿಗಳು ಹುಕುಮ ಮಾಡಿದರು. ಲೇಖಿ ಹುಕುಮ ಕೊಡಿರೆಂದು ಕೇಳಲು, ಅಲ್ಲಿಗೇ ಅದರ ಕೈ ಬಿಟ್ಟರು. ಮುಂದೆ ಸ್ವಲ್ಪ ದಿವಸಗಳನಂತರ ನಿಮ್ಮ ಕೆಲಸವು ಸರಕಾರಕ್ಕೆ ಬೇಕಾಗಿಲ್ಲೆಂದು ಇವರನ್ನು ತೆಗೆದು ಹಾಕಿದರು.

೮ ಅಲ್ಲಾಬಾದಿನ ಕಾಶೀಪ್ರಸಾದನು ತನಗೆ

ಪುನಃ ಕೆಲಸ ದೊರೆಯಬೇಕೆಂದು ಅರ್ಜಿ ಮಾಡಿದನು. ಕೆಲಸ ಕೊಡಲಿಲ್ಲ. ಕಾರಣವನ್ನೂ ಹೇಳಲಿಲ್ಲ. ಈತನು ಸರಕಾರೀ ಮುದ್ರಣಾಲಯದಲ್ಲಿ ಕಾಂಪೋಝಿಟರನಾಗಿದ್ದನು.

೯ ಅನಾಮದಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ೫೦-೫೦ ರೂಪಾಯಿಗಳ ಜುಲ್ಮಾನೆ ಹೇರಿದ್ದಾರೆ. ಅಹಮದಾಬಾದಿನಲ್ಲಿ ಆ ವಿದ್ಯಾರ್ಥಿನಿ ಮತ್ತು ೧೧ ವಿದ್ಯಾರ್ಥಿಗಳನ್ನು ಚಳವಳಿಯಲ್ಲಿ ಸೇರಿದ್ದಕ್ಕಾಗಿ ಶಾಲೆಯಿಂದ ಹಾಕಿದ್ದಾರೆ.

೧೦ ಕಾರವಾರ ಜಿಲ್ಹೆಗೆ ಸೇರಿದ ಅಂಕೋಲೆಯಲ್ಲಿ ನಾಲ್ವರು ಹುಡುಗರನ್ನು ಶಾಲೆಯಿಂದ ಹೊರಗೆ ಹಾಕಿದ್ದು ಇನ್ನೂ ಅವರನ್ನು ಶಾಲೆಯಲ್ಲಿ ತಕ್ಕೊಂಡಿಲ್ಲ.

೧೧ ಅಜಮೀರ-ಮಾರವಾಡದಲ್ಲಿ ಶಿಕ್ಷಕರಾದ ಶ್ರೀ ದಾಮೋದರದಾಸ ಖನ್ನಾನವರಿಗೆ ಸರಕಾರೀ ಕೆಲಸ ಕೊಡಕೂಡದೆಂದು ಸರಕ್ಯೂಲರ ತೆಗೆದಿದ್ದಾರೆ.

೧೨ ಸಂಯುಕ್ತ ಪ್ರಾಂತ ಮತ್ತು ದಿಲ್ಲಿಯಲ್ಲಿ ಈ ನಂತರ ಚಳವಳಿಯಲ್ಲಿ ಸೇರುವದಿಲ್ಲೆಂದು ವಿದ್ಯಾರ್ಥಿಗಳಿಂದ ಪ್ರತಿಜ್ಞೆಯ ಲೇಖ ಬೇಡುತ್ತಿದ್ದಾರೆ.

೧೩ ಅನೇಕ ಹಳ್ಳಿಗಳ ಗೌಡ ಕುಲಕರ್ಣಿಯರು ರಾಜೀನಾಮೆ ಕೊಟ್ಟಿದ್ದಾರೆ. ಅದೇ ಅವರ ಅಪರಾಧವಾಗಿದೆ. ಇಂಥವರನ್ನು ಕೆಲಸದಿಂದ ತೆಗೆದು ಹಾಕಲಿದ್ದಾರೆ.

೧೪ ಸೂರತ ಜಿಲ್ಹೆಯ ಹಪ್ತೆ ವಸೂಲಿಯ ವಿಷಯವಾಗಿ ಮಹಾತ್ಮರು ಹೆಚ್ಚು ತಕರಾರು ಮಾಡಿ, ಮುಲಕೀ ಅಮಲದಾರರ ಮೇಲೆ ಅನೇಕ ಆರೋಪಗಳನ್ನು ಹೊರಿಸಿದ್ದಾರೆ.

೧೫ ಕರ್ನಾಟಕದ ಬಗ್ಗೆ ಅನ್ನುವದೇನಂದರೆ- ಬೆಳೆಯ ಅಭಾವ ಮತ್ತು ವ್ಯಾಪಾರ ಮಂದಿಯ ದೆಸೆಯಿಂದ ಸಿರ್ಸಿ ಸಿದ್ಧಾಪೂರದ ರೈತರು ತಮಗೆ ದಯದೋರಬೇಕೆಂದು ಬೇಡಿಕೊಂಡರು. ಅಲ್ಲಿ ಹಪ್ತೆ ಕೊಡಬಾರದೆಂಬ ಕಾಯದೆಭಂಗದ ಚಳವಳಿಯು ಇರಲೇ ಇಲ್ಲ. ಕೌನ್ಸಿಲ ಮೆಂಬರರಾದ ಮಿ. ಚಿಕ್ಕೋಡಿಯವರನ್ನು ಮುಂದೆ ಮಾಡಿಕೊಂಡು ಕಮಿಶನರ ಸಾಹೇಬರಿಗೆ ಅರಿಕೆ ಮಾಡಿಕೊಂಡರು. ಸರಕಾರದವರು ರಿಲೀಫದ ಆಶೆ ಹೇಳಿದರು.ಆದರೆ ತುಸು ಕೊಟ್ಟರು. ಕಾಂಗ್ರೆಸದ ಕಾರ್ಯಕರ್ತರ ಸಹಾಯದಿಂದ ತೃಪ್ತರಾಗದೆ, ಹಿಂಸೆಯ ಉಪಾಯಗಳನ್ನು ನಡಿಸಿ, ದಿನದ ಅಡಿಗೆಯ ಪಾತ್ರೆಗಳನ್ನು ಸಹ ಜಪ್ತಿಮಾಡುವ ಕ್ರಮವು ನಡಿಸಿದ್ದಾರೆ.

ಪಠಾಣದಾರರಿಗೆ ಚಳವಳಿಯಲ್ಲಿ ಸೇರುವದಿಲ್ಲೆಂದು ಶರ್ತು ಬರೆದು ಕೊಟ್ಟರೇ ಪಠಾಣ ತಿರಿಗಿ ಕೊಡುತ್ತೇವೆನ್ನುತ್ತಾರೆ.

೧೬ ಚಳವಳಿಯ ಕಾಲದಲ್ಲಿ ಜಪ್ತ ಮಾಡಿದ ಬಂದೂಕಿನ ಲಾಯಸನ್ಸಗಳನ್ನು ತಿರಿಗಿ ಕೊಟ್ಟಿಲ್ಲ.

೧೭ ಬಾರಾಬಂಕಿಯಲ್ಲಿ ಕಲೆಕ್ಟರಸಾಹೇಬರು ದಾಡ್ರಾ ಎಂಬ ಗ್ರಾಮಕ್ಕೆ ಹೋಗಿ, ಜನರಿಗೆ ಕಾಂಗ್ರೆಸದ ಸಂಬಂಧ ಬಿಡಿರಿ; ಗಾಂಧಿ ಟೊಪ್ಪಿಗೆ ಬಿಸಾಟಿರಿ; ಗಾಂಧಿ ಟೊಪ್ಪಿಗೆ ಹಾಕಿದರೆ ಎಚ್ಚರಿಕೆ ಎಂದು ಹೆದರಿಸಿದ್ದಲ್ಲದೆ, ತಮಗೆ ಕಾಂಗ್ರೆಸದ ಯಾವ ಸಂಬಂಧವಿಲ್ಲವೆನ್ನುವಂತೆ ಜನರಿಂದ ಬರೆಸಿಕೊಂಡಿದ್ದಾರೆ.

೧೮ ರಾಮನಗರದ ಪೋಲಿಸ ಸಬ್ ಇನ್ಸಪೆಕ್ಟರನು ಭುದರಿ ಎಂಬ ಗ್ರಾಮಕ್ಕೆ ಹೋಗಿ, ರಾಷ್ಟ್ರೀಯ ನಿಶಾನೆಯನ್ನು ಕೆಡವಿ, ಕಾಂಗ್ರೆಸದ ಕಾಗದ ಪತ್ರಗಳನ್ನು ಜಪ್ತಮಾಡಿ, ಮೂವರನ್ನು ದಸ್ತಗಿರ ಮಾಡಿದನು. ಕಾಂಗ್ರೆಸಕ್ಕೆ ರಾಜೀನಾಮೆ ಕೊಡದಿದ್ದರೆ- ನಿಮ್ಮನ್ನು ಹಿಡಕೊಂಡು ಹೋಗುವೆನೆಂದು ಉಳಿದವರನ್ನು ಅಂಜಿಸಿಕೊಂಡನು.

೧೯ ರಾಯಬರೇಲಿಯಲ್ಲಿ ತಾಲೂಕದಾರನ ಜನರು ಬಸುರಿದ್ದವಳೊಬ್ಬಳನ್ನು ಎಚ್ಚರದಪ್ಪುವ ತನಕ ಹೊಡೆದರು. ಮತ್ತು ಒಬ್ಬನ ಕಣ್ಣು ಒಡೆದು ಮೂಗು ಹರಿದಿದ್ದಾರೆ. ಈತನು ಆಸ್ಪತ್ರಿಯಲ್ಲಿ ಔಷಧ ಹೊಂದುತ್ತಿದ್ದಾನೆ.

೨೦ ಮಥುರೆಯ ಜಿಲ್ಹೆಯಲ್ಲಿ ಪ್ರಮುಖರಾದಂಥ ೫೦ ಕಾಂಗ್ರೆಸದವರ ಮೇಲೆ ಜಾಮೀನು ಮುಚ್ಚಳಿಕೆಯ ಕೆಲಸ ನಡಿಸಿದ್ದಾರೆ.

ಇಂಥ ನೂರಾರು ಉದಾಹರಣೆಗಳನ್ನು ಮಹಾತ್ಮರು ಕೊಟ್ಟಿದ್ದು ಸ್ಥಳಸಂಕೋಚದ ಮೂಲಕ ಕೆಲ ಸಂಗತಿಗಳನ್ನು ಮಾತ್ರ ಕೊಟ್ಟಿದ್ದೇವೆ.

ಸಿಮ್ಲೆಯಿಂದ ಅವಸರದಿಂದ ಸಿಮ್ಲಾಕ್ಕೆ ಲಾರ್ಡ ವಿಲಿಂಗಡನ್ನ ಸಾಹೇಬರ ಪ್ರಯಾಣ

....(೦)....

ಮಹಾತ್ಮರು ರಾವುಂಡಟೇಬಲಕ್ಕೆ ಹೋಗುವದಿಲ್ಲೆಂದು ಖಂಡಿತವಾದ ಬಳಿಕ ಲಾರ್ಡ ವಿಲಿಂಗಡನ್ನ ಸಾಹೇಬರು ಕಾನಪೂರಕ್ಕೆ ಬಂದು, ಅಲ್ಲಿಂದ ಕಲಕತ್ತೆಗೆ ಪ್ರಯಾಣ ಬೆಳೆಸಿದರು. ಮಹಾತ್ಮರು ಸರಕಾರದ ಮೇಲೆ ಹೊರಿಸಿದ ಆರೋಪಗಳಿಂದ ರಾಜಕಾರಣವು ಬಿಕ್ಕಟ್ಟಿನದಾಗಲು ಈ ಬಗ್ಗೆ ಕೌನ್ಸಿಲರರೊಂದಿಗೆ ವಿಚಾರ ಮಾಡಲು - ಸಾಹೇಬರು ಕಲಕತ್ತೆಯ ಕಾರ್ಯಕ್ರಮಗಳನ್ನು ಬದಿಗಿರಿಸಿ, ಅವಸರದಿಂದ ಸಿಮ್ಲಾಕ್ಕೆ ಹೊರಟಿದ್ದಾರೆ. ಇಂದು ಸಿಮ್ಲಾ ಮುಟ್ಟುವರು. ಅಲ್ಲಿ ಈ ವಿಷಯವಾಗಿ ಚರ್ಚೆ ನಡಿಸುವರು. ಒಟ್ಟಿನಿಂದ ಮಹಾತ್ಮರು ಲಂಡನಕ್ಕೆ ಹೋಗುವದು ಅಶಕ್ಯವೆಂದೇ ನಿಮ್ಮ ದಟವಾಗಿದೆ.

ಮಂತ್ರಿಗಳು ಪ್ರವಾಸದ ವೆಚ್ಚ ಕಡಿಮೆ ಮಾಡುವರು.

~ (೦) —

ಮದ್ರಾಸ ಇಲಾಖೆಯ ಮಂತ್ರಿಗಳು ವೆಚ್ಚ ಉಳಿಕೆಯಕ್ಕಾಗಿ ರೇಲ್ವೆಯಲ್ಲಿ ಪ್ರವಾಸ ಮಾಡುವಾಗ ಫಸ್ಟ ಕ್ಲಾಸಿನ ಇಡೀ ಒಂದು ಡಬ್ಬಿಯನ್ನು ರಿಝರ್ವ್ಹ ಮಾಡುವ ಬದಲು- ಬರೇ ಒಂದು ಕಂಪಾರ್ಟಮೆಂಟ ರಿಝರ್ವ್ಹ ಮಾಡುವರು. ಮಂತ್ರಿಯಾದ ದಿವಾನಬಹದ್ದೂರ ಕುಮಾರಸ್ವಾಮಿ ರಡ್ಡಿಯವರು ಈ ವಾರದಲ್ಲಿ ಮದನಪಲ್ಲಿಗೆ ಬರತಕ್ಕವರಿದ್ದು, ಪ್ರಯಾಣವನ್ನು ಸೆಕಂಡ ಕ್ಲಾಸಿನಲ್ಲಿ ಮಾಡುವರು. ಈ ಬ್ರಾಹ್ಮಣೇತರ ಮಂತ್ರಿಯ ಅನುಕರಣವನ್ನು ಮುಂಬಯಿ ಇಲಾಖೆಯ ಬ್ರಾಹ್ಮಣೇತರ ಮಂತ್ರಿಯು ಮಾಡುವರೇನು?

ಕಾಶ್ಮೀರದ ಬಟ್ಲರ ಖಾದಿರಸಾಹೇಬನಿಗೆ ಐದು ವರ್ಷದ ಶಿಕ್ಷೆ.

—(೦)—

ಶ್ರೀನಗರದ ದಂಗೆಗೆ ಕಾರಣನಾದ ಬಟ್ಲರ ಖಾದಿರಸಾಹೇಬನಿಗೆ ರಾಜದ್ರೋಹ ಮತ್ತು ಧರ್ಮಧರ್ಮಗಳಲ್ಲಿ ದ್ವೇಷ ಹುಟ್ಟಿಸುವ ಆರೋಪಕ್ಕಾಗಿ ಐದು ವರ್ಷದ ಸಕ್ತ ಶಿಕ್ಷೆಯಾಯಿತು.

ಬಂಗಾಲದಲ್ಲಿ ಬ್ರಹ್ಮಪುತ್ರಾನದಿಗೆ ಮಹಾಪೂರ ಬಂದು, ನದಿಯ ದಂಡೆಯಲ್ಲಿದ್ದ ದೇವಿ ಸರೋಜನಿಯವರ ಮನೆಯು ನದಿಗೆ ಬ್ರಹ್ಮಾರ್ಪಣವಾಯಿತು.

ವಿವಿಧ ವರ್ತಮಾನಗಳು

ಮುಸಲಮಾನೇತರರ ಹಿತಸಂಬಂಧಗಳ ವಿಚಾರಣೆ ಮಾಡಲಿಕ್ಕೆ ತ್ರಿಚನಾಪಳ್ಳಿಯಲ್ಲಿ ಮುಸಲಮಾನರನ್ನು ಹೊರತುಪಡಿಸಿ, ಹಿಂದೂ, ಕ್ರಿಶ್ಚನ, ಪಾರಸಿ, ಯಹೂದಿ, ಜೈನ, ಮೊದಲಾದವರದೊಂದು ಪರಿಷತ್ತನ್ನು ನೆರೆಯಿಸುವ ವಿಚಾರ ನಡೆದಿದೆ.

ಸಿರ್ಸಿ ಸಿದ್ಧಾಪೂರ ರಿಲೀಫ ಫಂಡು ೩೧೦೩ ರೂಪಾಯಿಯಾಗಿದೆ.

ಒಂದೇ ಸವನೆ ೧೫ ದಿವಸ ಹತ್ತಿದ ಮಳೆಯು ಹೊರಪುಗೊಟ್ಟಿದೆ. ಆದರೂ, ಎಷ್ಟೋ ಕಡೆಗೆ ಭತ್ತಕ್ಕೆ ಹೊಡೆಯಬೇಕಾದ ನೀರು ಮಳೆಯಾಗಲಿಲ್ಲ.

ನೋಟೀಸಿನ ಉತ್ತರಾ

ತಿಪ್ಪಣ್ಣಾ ಬಿನ್ ಪಿಂಟಣ್ಣಾ ಸಾ|| ಹುಬ್ಬಳ್ಳಿ ಪೋಸ್ಟ ಹೊಸಹಳ್ಳಿ ತಾ|| ರೋಣ ಇವರಿಗೆ

ಕೆಳಗೆ ಸಹಿ ಮಾಡಿದ ನಿಂಗವ್ವಾ ಕೋಂ ತಿಪ್ಪಣ್ಣಾ ಬ್ಯಾಳಿ ಸಾ|| ಹುಲ್ಲೂರ ತಾ|| ರೋಣ ನಾನು ನೋಟೀಸಿಗೆ ಉತ್ತರಾ ಕೊಡುವದೇನಂದರೆ-

ನೀನು ತಾ|| ೯-೮-೧೯೩೧ನೇ ದಿವಸ ಕೊಟ್ಟ ನೋಟೀಸ ಮುಟ್ಟಿ ಮಜಕೂರ ತಿಳಿಯಿತು. ನೀನು ನೋಟೀಸಿನಲ್ಲಿ ಬರೆದ ಮಜಕೂರು ತೀರಾ ಸುಳ್ಳು ವ ನಾಧಣಿಕೇದು ಇರುತ್ತದೆ. ಇದಕ್ಕೆ ನಾನು ಕಬೂಲ ಮಾಡುವದಿಲ್ಲ. ನೀನು ನನಗೆ ಕೊಟ್ಟ ನೋಟೀಸಿನಲ್ಲಿ ನನಗೆ ವ್ಯಭಿಚಾರಿ ಅಂತಾ ಆರೋಪ ಮಾಡಿರುತೀದಿ ನೀನು ಲಗ್ನದ ಗಂಡನು ಇದ್ದು ನಿನ್ನ ಸಂಗಾ ೬-೭ ವರ್ಷಗಳ ವರೆಗಾ ನನ್ನ ಸುರಳೀತ ಪ್ರಸಂಗ ನಡೆದು ಈಗ ಅಜ ಮಾಸ ೩ ವರ್ಷದ ಹಿಂದೆ ನಿಮ್ಮ ಮಾವಾ ವ ಕೆಂಚಪ್ಪ ವ ನಿನ್ನ ಅಣ್ಣಾ ಫಕೀರಪ್ಪ ಇವರ ಪ್ರೇರಣೆಗೆ ಒಳಪಟ್ಟು ನನ್ನನ್ನು ಬಡಿದು ಕೊಡಿದು ಉಟ್ಟ ಸೀರಿಲೇ ಹೊರಗೆ ಹಾಕಿರುತೀದಿ ನಂತರ ಅಜಮಾಸ ೭-೮ ತಿಂಗಳ ಮೇಲೆ ನಿಮ್ಮ ಮಾವಾ ಕೆಂಚಪ್ಪನು ಮನೆಯಲ್ಲಿ ನಿನಗೆ ನಿನೇ ಕನ್ನೆಯನ್ನು ತೆಗೆದು ಕನ್ನೆಯ ಮೈಮೇಲೆ ವಂದು (೧) ಜೋಡು ವಂಕಿ ವಂದು (೧) ಸರಗಿ ವಂದು (೧) ಜೋಡು ಬಳಿ ಈ ಪ್ರಕಾರ ದಾಗೀನೆಗಳನ್ನು ಇಟ್ಟಿರುತೀದಿ ದಾಗೀನೆಗಳನ್ನು ಇಡುವ ದರಿಂದ ನೀನು ನನನ್ನು ಬಿಡಬೇಕು. ಬಿಡದೆ ಇದ್ದ ಪಕ್ಷದಲ್ಲಿ ಸದ್ರಿ ದಾಗಿನೆಗಳು ತವರಮನೆಯ ವರಿಗೆ ದಕ್ಕಬೇಕು. ಅಂತಾ ಕರಾರ ಮಾಡಿರತೀದಿ ಆಗ್ಯೂ ಸಹಿತವಾಗಿ ಸದರೀ ದಾಗೀನೆಗಳು ತವರಮನೆಯಲ್ಲಿಯೇ ಇರುತ್ತವೆ. ನಾನು ನಿನ್ನ ಮನೆಬಿಟ್ಟು ಹೊರಗೆ ಬರುವಾಗ್ಯೆ ನನ್ನ ಮೈ ಮೇಲೆ ಸರಗಿ ವಗೈರೆ ೪೩೫ ರೂಪಾಯಿಗಳ ಮಾಲು ಇಟ್ಟಿರುತ್ತೇನೆ ಅಂತಾ ಬರೆದ ಮಜಕೂರು ತೀರಾ ಸುಳ್ಳು ವ ನಾಧಣಿಕೇದು ಅದೆ. ನೀನು ನನ್ನನ್ನು ಹೊರಗೆ ಹಾಕಿದ ನಂತರ ನಿನ್ನ ಸಂಗಡ ಸುರಳೀತ ಇದ್ದು ನಿಮ್ಮ ಮನೆಗೆ ಮೇಲಿಂದ ಮೇಲೆ ಬರತಾ ಇದ್ದುದರಿಂದ ನಾನು ಗರ್ಭಿಣಿಯಾಗಿ ಶ್ರೀಮಂತರಾಯರ ಸಹಿತಾ ಆಗಿದೆ. ೨ ತಿಂಗಳದ ಹಿಂದೆ ನಾನು ಗಂಡು ಕೂಸನ್ನು ಹಡೆದನು. ಅದು ಸತ್ತಿರುತ್ತದೆ. ಈ ಪೂರಾ ಹಕೀಕತು ನಿನಗೆ ಗೊತ್ತಿದ್ದು ನಿಂಮ ಮಾವ ಕೆಂಚಪ್ಪನ ಪ್ರೇರಣೆಗೆ ವಶಪಟ್ಟು ಇಲ್ಲದ್ದೊಂದು ಈ ನೋಟೀಸಿನಲ್ಲಿ ಬರೆದು ನನಗ ನೋಟೀಸಕೊಟ್ಟಿರುತೀದಿ ನಿಂನ ನೋಟೀಸಿನಲ್ಲಿ ನನಗೆ ವ್ಯಭಿಚಾರಿ ಅಂತಾ ಬರೆದ ಬಗ್ಗೆ ನಿನ್ನ ಮೇಲೆ ಮತ್ತು ನಿಂನ ಮಾವ ಕೆಂಚಪ್ಪನ ಮೇಲೆ ಮೆ. ಮಾಮಲೇದಾರ ಕಡಿಗೆ ಕ್ರಿಮಿನಲ ಮಾಣಹಾನಿ ನಿಂನ ಮನೆ ಬಿಟ್ಟನಂತರ ನಾನು ನಂನ ಹೊಟ್ಟೇ ಉಪಜೀವಕ್ಕೆ ವ ಅರಿವೆ ಅಂಚಡಿಗೆ ಕೂಡಿ ೩೦೦ ರೂಪಾಯಿ ಸಾಲಾ ಮಾಡಿದ್ದೇನೆ ಸದರೀ ಸಾಲ ತೀರಿಸಿ ನನಗೆ ಯೋಗ್ಯ ಜಾಮೀನು ಕೊಟ್ಟು ಈ ನೋಟೀಸ ಮುಟ್ಟಿದ (೮) ದಿವಸದೊಳಗಾಗಿ ಒಂದು ಕರಕೊಂಡು ಹೋಗಬೇಕು. ಅದಕ್ಕೆ ನೀನು ತಪ್ಪಿದರೆ ದಿವಾಣಿ ಕೋರ್ಟಿನಲ್ಲಿ ಫೋರ್ಟಿಗಿ ವ ಮ. ಮಾಮಲೇದಾರ ಕಡಿಗೆ ಕ್ರಿಮಿನಲ ಪ್ರಕಾರ ಫಿರ್ಯಾದಿ ಮಾಡತೇನೆ ಅಂತಾ ಕೊಟ್ಟ ನೋಟಿಸ ಸಹಿ ತಾ|| ೧೪-೮-೧೯೩೧ ಇಸ್ವಿ

ಈ ಯಡಗೈ ಹೆಬ್ಬರಳಿನ ಗುರ್ತ ನಿಂಗವ್ವಾ ಕೋಂ ತಿಪ್ಪಣ್ಣಾ ಬ್ಯಾಳಿ ಸಾ|| ಹುಲ್ಲೂರ ತಾಲ್ಲೂಕ ರೋಣ ಈಕೆ ಮಾಡಿದ್ದು ಅದೆ.

ವೆಂಕಟೇಶ ತಿರಕೊ ಕುಲಕರಣಿ ಗಳಗನಾಥ

—ಇವರು ಬರೆಯುತ್ತಿರುವ—

ರಹಸ್ಯ ಪ್ರಕಾಶವಾದ ಸಚಿತ್ರ ಮಹಾಭಾರತಾಮೃತದ

ಆದಿ ಪರ್ವ.

ಲೇಖನ ವ್ಯವಸಾಯದ ನಲವತ್ತು ವರ್ಷಗಳ ಅನುಭವದಿಂದ ಈ ಅತಿ ಗೌರವದ ಪ್ರಚಂಡ ಪುಸ್ತಕವನ್ನು ಬರೆಯತೊಡಗಿದ್ದೇವೆ. ಆದಿಪರ್ವವು ಈಗ ಮಾರಾಟಕ್ಕೆ ಸಿದ್ಧವಾಗಿರುವದು ಅದರ ಬೆಲೆ ೩-೮-೦ ಟಪಾಲಿನಿಂದ ತರಿಸುವವರ ಖರ್ಚ ಸಾವೇ ಹಾಕಿ ೩-೬-೦ ಗೆ ವಿ ಪಿ. ಮಾಡಲಾಗುವದು ವಿ. ಪಿ. ತಕೊಳ್ಳುವವರು ೩-೮-೦ ಕೊಟ್ಟರೆ ತೀರಿತು. ಒಟ್ಟು ಪುಸ್ತಕಗಳು ಏಳು ಅಥವಾ ಎಂಟು ಆಗಬಹುದು. ಇಡಿಯ ಭಾರತದ ಬೆಲೆ ೧೫ ರಿಂದ ೨೦ ರೂಪಾಯಿಗಳ ವರೆಗೆ ಬೀಳಬಹುದು. ಇದರಲ್ಲಿ ಬರೆಯುತ್ತಿರುವ ರಹಸ್ಯಗಳು ಅತಿ ಗೌರವದವಾಗಿರುವವು. ರಾಜಕೀಯ ವಿಚಾರಕ ಈ ಪ್ರಚಂಡ ಗ್ರಂಥವನ್ನು ಈಗಿನಕಾಲದಲ್ಲಿ ಓದಲೇಬೇಕು. ಈಗ ಚಂದಾದಾರರಾಗುವವರಿಗೆ ಮುಂದಿನ ಪುಸ್ತಕಗಳು ಕಡಿಮೆ ಬೆಲೆಗೆ ಸಿಗುವವು. ನಮ್ಮ ಪರಿಚಯವು ಕನ್ನಡಿಗರಿಗಿರುವದರಿಂದ ಹೆಚ್ಚು ಬರೆಯುವ ಕಾರಣವಿಲ್ಲ.

ಇಡಿಯ ಭಾರತದ ೫೦೦೦ ಪ್ರತಿಗಳಿಗೆ ೩೦-೩೫ ಸಾವಿರ ರೂಪಾಯಿ ವೆಚ್ಚವಾಗುವವು. ಕಾರ್ಯಗೌರವದಿಂದ ಎಲ್ಲ ಕನ್ನಡಿಗರೂ ನಮ್ಮಮೇಲಿನ ಅಂತಃಕರಣದಿಂದ ಸಹಾಯಮಾಡತಕ್ಕದ್ದು. ಅಲ್ಲದೆ ನಮ್ಮಲ್ಲಿಯ ಈಗ ಸಿಲಕು ಇರುವ ಕೆಳಗಿನ ಪುಸ್ತಕಗಳಲ್ಲಿ ಬೇಕಾದವನ್ನು ಕೊಳ್ಳುವದರಿಂದಲೂ ನಮ್ಮ ಈ ದೊಡ್ಡ ಕಾರ್ಯಕ್ಕೆ ಸಹಾಯಮಾಡಬಹುದು.

—ಪುಸ್ತಕಗಳ ಹೆಸರು ಮತ್ತು ಕ್ರಯದ ಪಟ್ಟಿ—

೧	ಮಾಧವಕರುಣಾವಿಲಾಸ	೩	೧೨	೦
೨	ಮಹಾಭಾರತಾಮೃತ (ಆದಿಪರ್ವ)	೩	೮	೦
೩	ಶೈವಸುಧಾರ್ಣವ	೩	೮	೦
೪	ಭಾಗವತಾಮೃತ	೩	೮	೦
೫	ಶ್ರೀ ತುಲಸೀ ರಾಮಾಯಣ	೩	೦	೦
೬	ರಾಣೀ-ಮೃಣಾಲಿನಿ	೧	೮	೦
೭	ಧಾರ್ಮಿಕತೇಜ	೧	೮	೦
೮	ಕರ್ಮಕಥೆ	೧	೮	೦
೯	ಈಶ್ವರೀಸೂತ್ರ	೧	೦	೦
೧೦	ಗೃಹಕಲಹ	೧	೦	೦
೧೧	ಕುರುಕ್ಷೇತ್ರ	೧	೮	೦
೧೨	ಕ್ಷಾತ್ರತೇಜ	೧	೦	೦
೧೩	ಸಂಸಾರಸುಖ	೧	೦	೮
೧೪	(೧೧)ನೇ (೧೨)ನೇ ಸ್ಕಂದ ಭಾಗವತ	೧	೦	೦
೧೫	ರಾಣಾ ರಾಜಸಿಂಹ	೦	೧೨	೦
೧೬	ಗುರುಪ್ರಸಾದ	೦	೧೨	೦
೧೭	ಸದ್ಗುರು ಪ್ರಭಾವ	೦	೧೨	೦
೧೮	ಸುಂದರಲೇಖ ಸಮುಚ್ಚಯ	೦	೮	೦
೧೯	ಭಗವತೀ ಕಾತ್ಯಾಯನಿ	೦	೮	೦
೨೦	ನಿರ್ಯಾಣಮಹೋತ್ಸವ	೦	೮	೦

ಸದ್ಗುರು ಆಫೀಸು
ಹಾವೇರಿ

ನಿಮ್ಮ
ವೆಂ. ತಿ. ಕುಲಕರಣಿ, ಗಳಗನಾಥ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ರವಿವಾರ ತಾರೀಖು ೨೩ ನೇ ಆಗಸ್ಟ ೧೯೩೧ (ಸಂಚಿಕೆ ೧೯೨

ನೋಟೀಸು

ದಿ ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ್ ಧಾರವಾಡ

ದಿ ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ್ ಇದರ ಶೇರ ಹೋಲ್ಡರ ಜನರ ಬಂಧತ್ತನೆಯ ವಾರ್ಷಿಕ ಸಾಧಾರಣ ಸಭೆಯು ಬ್ಯಾಂಕಿನ ಕಚೇರಿಯಲ್ಲಿ ತಾ|| ೩೦ ಅಗಸ್ಟ ೧೯೩೧ನೇ ಇಸವಿ ರವಿವಾರ ದಿವಸ ಮುಂಜಾನೆ ೯ ಗಂಟೆಗೆ ಕೂಡುವದು.

ಸಭೆಯಲ್ಲಿ ನಡೆಯುವ ಕೆಲಸದ ಯಾದಿಯು

(೧) ೧೯೩೧ ನೇ ಇಸವಿ ಮಾರ್ಚ ತಿಂಗಳ ೩೧ನೇ ತಾರೀಖಿಗೆ ಮುಗಿಯುವ ವರ್ಷದ ಬಾಬತು ಆಢಾವೆ ಮತ್ತು ಲಾಭ ಹಾನಿ ಪತ್ರಕ ಮತ್ತು ಡಾಯರೆಕ್ಟರರ ರಿಪೋರ್ಟನ್ನು ಓದಿ ಮಂಜೂರ ಮಾಡುವದು.

(೨) ಡಿವ್ಹಿಡೆಂಡ ಠರಾಯಿಸುವದು.

(೩) ಡಾಯರೆಕ್ಟರರಿಂದ ಖಾಲಿಯಾದ ಜಾಗೆ ಭರಾಯಿಸುವದು.

(೪) ಮುಂದಿನ ವರ್ಷದ ಬಗ್ಗೆ ಸರ್ಟಿಫಾಯಿಡ್ ಆಡಿಟರರನ್ನು ನೇಮಿಸುವದು ಮತ್ತು ಅವರ ಮೆಹನತಾನ ಠರಾಯಿಸುವದು.

(೫) ಚೇರಮನ್ನರು ಸಭೆಯ ಮುಂದೆ ತರುವ ಇತರ ಯಾವದಾದರೂ ವಿಷಯ

ಧಾರವಾಡ
ತಾ|| ೨೨-೮-೩೧

ಬೋರ್ಡಿನ ಅಪ್ಪಣೆಯ ಮೇರೆಗೆ
ದೇಶಪಾಂಡೆ ಮತ್ತು ಕಂಪನಿ
ಮ್ಯಾನೇಜಿಂಗ ಏಜಂಟ್ಸ

ಬ್ಯಾಂಕಿನ ಟ್ರಾನ್ಸಫರ ಪುಸ್ತಕಗಳು ತಾ|| ೨೩ ನೇ ಅಗಸ್ಟದಿಂದಾ ೬ ನೇ ಸಪ್ಟಂಬರ ೧೯೩೧ರ ವರೆಗೆ ಎರಡೂ ದಿವಸ ಕೂಡಿ ಬಂದ ಇರುತ್ತವೆ.

ಜೋಶಿ, ಗುಂಜೀಕರ ಮತ್ತು ಕಂಪನಿ

ಶುಕ್ರವಾರಪೇಟೆ ಧಾರವಾಡ

ಇವರನ್ನು

ಮುಂಬೈ ಪ್ರಾವ್ಹಿನ್ಸಿಯಲ್ ಕೋ. ಇನ್ಶುರನ್ಸ ಕಂಪನಿ, ಲಿ.

ಇವರು

ಧಾರವಾಡ ಜಿಲ್ಹೆಯ

ಚೀಫ್ ಏಜಂಟ

ರಾಗಿ ನಿಯಮಿಸಿದ್ದಾರೆ.

ಈಗ ಜಿಲ್ಹೆಯ ಎಲ್ಲ ಮುಖ್ಯ ಸ್ಥಳಗಳಲ್ಲಿ

ಸಬ್ ಏಜಂಟ

ರನ್ನು ನಿಯಮಿಸುವದದೆ. ಈ ಕೆಲಸ ಮಾಡಲಿಚ್ಛಿಸುವವರು ತಮ್ಮ ಖಾತ್ರಿಯ ಬಗ್ಗೆ ಎಲ್ಲ ಮಾಹಿತಿ ಕೊಟ್ಟು ಚೀಫ್ ಏಜಂಟರಿಗೆ ಬರೆಯಬೇಕು. ಖಾತ್ರಿಯಿಂದ ಕೆಲಸ ಮಾಡುವವರಿಗೆ ಪೂರ್ಣ ಕಮೀಶನ ಸಿಗುವದು.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ್ಸ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂದಿಗೆಯು ಎಂಟು ಲಕ್ಷದಮೇಲುಂಟು. ಕರ್ಜು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀರದಾರ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ		ರೂ. ೧೨-೮-೦
೬	,,	೭-೦-೦
೩	,,	೪-೮-೦

ವಾರ ಪತ್ರಿಕೆಗೆ ೧ ವರ್ಷಕ್ಕೆ ೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳ ಕೊಳ್ಳಿರಿ.

ಮ್ಯಾ ವಿಜಯ, ಧಾರವಾಡ

ವಿಜಯ.

ತಾರೀಖು ೨೩-೮-೧೯೩೧ನೇ ಇಸ್ವಿ

ಮಹಾತ್ಮರು ಲಂಡನಕ್ಕೆ ಹೋಗುವರೋ? ಇಲ್ಲವೋ?

ಮಹಾತ್ಮರು ಲಂಡನಕ್ಕೆ ಹೋಗುವದು ನಿಂತ ತರುವಾಯ, ಹಿಂದುಸ್ಥಾನ ಸರಕಾರದವರು ಉಭಯತರ ನಡುವೆ ನಡೆದ ಪತ್ರವ್ಯವಹಾರವನ್ನು ಪ್ರಸಿದ್ಧ ಮಾಡಿದರು. ಆದರೆ ತಮ್ಮ ಮೇಲೆ ಮಹಾತ್ಮರು ಹೊರಿಸಿದ ಆರೋಪದ ಮಾರುದ್ದ ಪತ್ರಿಯನ್ನು ಪ್ರಸಿದ್ಧ ಮಾಡಲಿಲ್ಲ. ಇದರಿಂದ ಯಾರ ಬಲವು ಹೆಚ್ಚೆಂದೂ, ಸತ್ಯವ್ಯಾವದೆಂದೂ ದೇಶದೇಶಗಳಿಗೆ ತಿಳಿಯಲು ಮಾರ್ಗವುಳಿಯಲಿಲ್ಲ. ಕಾರಣ ಮಹಾತ್ಮರು ಲಾರ್ಡ ವಿಲಿಂಗಡನ್ನ ಸಾಹೇಬರಿಗೆ ತಾರಿನಿಂದ ತಿಳಿಸಿ, ಅವರ ಒಪ್ಪಿಗೆ ಪಡಕೊಂಡು, ತಾವು ಸರಕಾರದ ಮೇಲೆ ಹೊರಿಸಿದ ಆರೋಪಗಳ ಪಟ್ಟಿಯನ್ನು ಪ್ರಸಿದ್ಧ ಮಾಡಿದರು. ಉಭಯತರ ವಿಚಾರ ಮತ್ತು ಸಮ್ಮತಿಯಿಂದ ಪ್ರಸಿದ್ಧವಾದ ಯಾದಿಯ ರಹಸ್ಯ ತಿಳಿಯದೆ, ಮಹಾತ್ಮರು ಸರಕಾರದ ಮೇಲೆ ಭಯಂಕರ ಆರೋಪ ಹೊರಿಸಿದರು; ಆದ್ದರಿಂದ ಒಡಂಬಡಿಕೆಯ ಮುಂದಿನ ಚರ್ಚೆಯ ಮಹಾದ್ವಾರಕ್ಕೆ ಬೀಗಬಿತ್ತು, ಮಹಾತ್ಮರು ವಿಲಾಯತಿಗೆ ಹೋಗುವದು ಪೂರಾ ಅಶಕ್ಯವಾಯಿತೆಂದು ಸಿಮ್ಲಾ- ಕಲಕತ್ತಾ ಮುಂತಾದ ಪಟ್ಟಣಗಳಿಂದ ತಂತಿಗಳು ದೇಶದ ತುಂಬ ಹರಡಿವು. ಈ ತಂತಿಗಳ ವರ್ತಮಾನ ಕೇಳಿ, ಮಹಾತ್ಮರ ಶಿಷ್ಯರು ಅಸ್ಥಿರರಾಗಿಲ್ಲ. ಲಾರ್ಡ ವಿಲಿಂಗಡನ್ನ ಸಾಹೇಬರ ಸಮ್ಮತಿಯಿಂದಲೇ ಆರೋಪಗಳನ್ನು ಪ್ರಸಿದ್ಧಿಗೆ ತಂದದ್ದರಿಂದ, ಆರೋಪಗಳ ದೆಸೆಯಿಂದಲೇ ಸಾಹೇಬರು ಒಡಂಬಡಿಕೆಯು ಮುರಿಯಿತೆಂದು ಹೇಳುವಷ್ಟು ಅವಿಚಾರವನ್ನೆಂದಿಗೂ ಮಾಡಲಾರರು. ಇದು ಉಭಯತರು ತಂತಮ್ಮ ಪರವಾಗಿ ಹೇಳತಕ್ಕದ್ದನ್ನು ಹೇಳಿ, ಅನ್ಯಾಯದ ಹೊರೆಯನ್ನು ತಪ್ಪಿಸಿಕೊಳ್ಳುವಂಥ ಸಂಧಿಕಾಲ. ಇಬ್ಬರು ರಣಮಂಡಲದಲ್ಲಿ ನಿಂತಿದ್ದಾರೆ. ಯುದ್ಧವಾದ ಹೊರತು ಜಯಾಪಜಯಗಳು ಹೇಗೆ ತಿಳಿಯುವದು?

ಲಾರ್ಡ ವಿಲಿಂಗಡನ್ನ ಸಾಹೇಬರು ನಿನ್ನಿನ ದಿವಸವೇ ಸಿಮ್ಲೆಗೆ ತಲ್ಪಿದರು. ಅಲ್ಲಿ ಕೂಡಲೆ ಕಾರ್ಯಕಾರಿ ಕೌನ್ಸಿಲ ಸಭೆ ಕೂಡಿಸಿ, ಮಹಾತ್ಮರು ಹೊರಿಸಿದ ಆರೋಪದ ವಿಚಾರ ಮಾಡಿರಬಹುದು. ಒಂದೇ ದಿವಸದಲ್ಲಿ ಮುಗಿಯದಿದ್ದರೆ- ನಿನ್ನೆ ಮರುದಿವಸಕ್ಕೂ ಹಾಕಿರಬಹುದು. ಈ ವಿಚಾರ ಹೇಗಿದ್ದರೂ, ಲಾರ್ಡ ವಿಲಿಂಗಡನ್ನ ಹಾಗು ಅವರ ಕೌನ್ಸಿಲರರಿಗೆ ಆರೋಪಗಳು ಹೊಸವಲ್ಲ. ಮೊದಲೇ ಗೊತ್ತಿದ್ದಂಥವು. ನಿಮ್ಮ ಆರೋಪಗಳು ಸುಳ್ಳಿರುತ್ತವೆಂದು ಹೇಳಿದರೆ- ತಾವೇ ಆರೋಪಿ, ತಾವೇ ತೀರ್ಪು ಹೇಳುವ ಜಡ್ಜರಾದಂತಾಗುತ್ತದೆ. ಆರೋಪಗಳಲ್ಲಿ ಯಾವವೂ ಸುಳ್ಳಲ್ಲ. ಪ್ರತ್ಯಕ್ಷ ಪ್ರಮಾಣದಿಂದ ತಿಥಿ, ವಾರ ನಕ್ಷತ್ರ ಸಹಿತ ಹೇಳಿದ್ದಾಗಿವೆ. ಸಾರ್ವಜನಿಕ ಸುರಕ್ಷಿತತೆಯ ದೆಸೆಯಿಂದ ಇಂಥದೊಂದು ಕಲಮನ್ನು ಅಮಲಿನಲ್ಲಿ ತಂದಿರುತ್ತಾರೆಂದು ತೆಗೆಯುವ ಜಾಹೀರನಾಮೆ ಅಥವಾ ಆರ್ಡಿನನ್ಸದಂಥ ದಬ್ಬಾಳಿಕೆಯ ಹೊರೆಯಲ್ಲಿ ನಿಂತು, ಮುಚ್ಚಿಕೊಳ್ಳುವಂಥ ರಾಜಕಾರಣವಲ್ಲ, ಸಾರಾಸಾರ ವಿಚಾರದಿಂದ ತಪ್ಪು ಕಡೆ ಒಪ್ಪುವಂಥ ವಿಷಯವು. ಲೋಕವೇ ಗಾಂಧೀ ತಪ್ಪೋ? ರಾಜ್ಯಕರ್ತರು ತಪ್ಪೋ? ಎಂದು ಡಂಗುರ ಸಾರಿದಂತೆ ಪಂಚಾಯತಿಯ ನ್ಯಾಯ ಹೇಳುವಂಥ ಸಮಯವು

ಬಹುಶಃ ಲಾರ್ಡ ವಿಲಿಂಗಡನ್ನ ಸಾಹೇಬರು ಮಹಾತ್ಮರ ಸೂಚನೆ ಅಥವಾ ಅಪೇಕ್ಷೆಯ ಮೇರೆಗೆ ಹಾಯಕೋರ್ಟಿನ ಜಡ್ಜರನ್ನು ನೇಮಿಸಿ, ವಾತಾವರಣವನ್ನು ಶಾಂತಮಾಡುವರೆಂದೇ ಹೇಳಬೇಕಾಗುತ್ತದೆ. ಹೀಗಾದರೆ- ಮಹಾತ್ಮರಿಗೆ ವಿಶ್ವಾಸ ಹುಟ್ಟುವಂಥ ಜಡ್ಜರಾರಾಗ ಬಹುದೆಂಬ ಪ್ರಶ್ನವು ಸಹಜವಾಗಿ ಹೊಂದುತ್ತದೆ. ಬಾರಡೋಲಿಯ ರಿವ್ಹಿಜನ್ನ ಕಾಲದಲ್ಲಿ ಜಡ್ಜರಾಗಿ, ಈಗ ಮುಂಬಯಿ ಹಾಯಕೋರ್ಟಿನ ಜಡ್ಜರಾಗಿದ್ದ ನ್ಯಾಯಮೂರ್ತಿ ಬ್ರೂಮಫೀಲ್ಡ ಸಾಹೇಬರ ಕಡೆಗೇ ಜನರು ಬೊಟ್ಟು ಮಾಡುತ್ತಿದ್ದಾರೆ ಸರಕಾರದವರು ಈ ಸಾಹೇಬರ ನೇಮಣೂಕು ಮಾಡಿದ್ದಾದರೆ- ಮಹಾತ್ಮರು ವಿಲಾಯತಿಗೆ ಹೊರಡುವದಕ್ಕೆ ಯಾವ ಅಭ್ಯಂತರವುಂಟಾಗಲಾರದು.

ಕಾಂಗ್ರೆಸದ ಎಚ್ಚರಿಕೆಯ ಭೇರಿಯು

ಒಡಂಬಡಿಕೆ ಮುಗಿಯಿತು; ಯುದ್ಧಕ್ಕೆ ಸಿದ್ಧರಾಗಿರಿ. ಜೋಗ್ಯತೆ ಮೀರಿ ಹಪ್ತೆ ಕೊಡಬೇಡಿರಿ; ಕಾಯದೇಭಂಗದಲ್ಲಿ ಧುಮುಕಿರಿ; ಎಂಬದಾಗಿ ಈಗಾಗಲೇ ಕಾಂಗ್ರೆಸ ವರ್ಕಿಂಗ ಕಮೀಟಿಯವರು ಉಪಕಾಂಗ್ರೆಸ ಕಮೀಟಿಗಳಿಗೆ ಗುಪ್ತ ಆಜ್ಞೆ ಕೊಟ್ಟಿದ್ದಾರೆಂದು ಮುಂಬಯಿಯ ಟಾಯಿಮ್ಸ ಮೊದಲಾಗಿ ಇಂಗ್ರೇಜಿ ವರ್ತಮಾನಪತ್ರಗಳು ಕುಚಾಳಿ ಮಾಡಿರುತ್ತವೆ. ಇವು ಕೇವಲ ನಿರಾಧಾರವಾದಂಥವು. ಕಳಿಬುಡ ಕೂಡ ಇರುವದಿಲ್ಲ. ಆದ್ದರಿಂದ ಬೀದಿಯ ಮಾತಿನಲ್ಲಿ ಯಾರೂ ನಂಬಿಗೆ ಇಡಬಾರದು, ಕಾಂಗ್ರೆಸ ಕಮೀಟಿಯಿಂದ ಹೊರಡುವ ಜಾಹೀರ ಸಂದೇಶದಂತೆಯೇ ಎಲ್ಲರೂ ನಡೆಯಬೇಕೆಂದು ಜಾಹೀರವಾಗಿರುತ್ತದೆ.

ಖಾದಿ ಮತ್ತು ಗಿರಣಿ

—(೧)—

ಮಹಾತ್ಮರ ಕೂಡ ನಡೆದ ಪ್ರಶ್ನೋತ್ತರಗಳು.

ಅಹಮದಾಬಾದಿನಲ್ಲಿ ನಿತ್ಯಕ್ರಮದಂತೆ ಸಾಯಂಕಾಲದಲ್ಲಿ ಮಹಾತ್ಮರ ಭಗವತ್ಪ್ರಾರ್ಥನೆ ಮುಗಿದಬಳಿಕ ಈ ಕೆಳಗಿನ ಪ್ರಶ್ನೋತ್ತರ ನಡೆಯಿತು.

ಪ್ರ- ಇಲ್ಲಿ ಹೊಸದಾಗಿ ಕಟ್ಟುವ ಡಜನ ಗಿರಣಿಯವರು ಇಂಗ್ಲಂಡದಿಂದ ಯಂತ್ರಗಳನ್ನು ತಂದಿದ್ದಾರೆ. ಈ ಕೃತ್ಯವು ಹಾನಿಗಾರವೆಂತಲ್ಲವೇ?

ಉ- ಇಂಗ್ಲಿಷ ಜನರು ನಮ್ಮ ವೈರಿಗಳಲ್ಲ. ಬಹಿಷ್ಕಾರ ಹಾಕಿದಾಗ ಅವರಲ್ಲಿ ಕೊಳ್ಳಬಾರದು, ಬಹಿಷ್ಕಾರ ಡಂಗುರ ಸಾರಿದ ಬಳಿಕ ಯಾರಾದರೂ ವ್ಯವಹಾರ ಮಾಡಿದರೆ ನಾವು ಗಿರಣಿಯವರನ್ನು ಬಹಿಷ್ಕರಿಸಬಹುದು. ದ್ವೇಷದಿಂದ ಸ್ವರಾಜ್ಯ ದೊರೆಯಲಾರದು ಇಂಗ್ಲಿಷ ಜನರು ನಮ್ಮನ್ನು ತಮ್ಮ ವೈರಿಯಾಗಿ ತಿಳಿದರೆ- ನಾವು ಅವರಿಗೆ ಬಾಯಕಾಟ ಮಾಡಬೇಕಾಗುವದು

ಪ್ರ- ಗಿರಣಿಯ ಸಂಖ್ಯೆ ಬೆಳೆದಂತೆ ಖಾದಿಯ ಪ್ರಸಾರ ಕಡಿಮೆಯಾಗುವದಿಲ್ಲವೇ?

ಉ- ಖಾದಿಯ ವಿಷಯವಾಗಿ ಜನರ ಪ್ರೀತಿ ಕಡಿಮೆಯಾದರೇ? ಖಾದಿಯ ಹುಟ್ಟುವಳಿಯು ಕಡಿಮೆಯಾಗುವದು. ಖಾದೀ ಪ್ರೇಮ ಹೆಚ್ಚಾಗುವ ತನಕ ಗಿರಣಿಗಳು ಬೆಳೆಯಲಿ ಗಿರಣಿಗಳು ಸಾಕನ್ನುವ ವೇಳೆಯು ಬರುವದು. ಜನರೂ ಖಾದಿಯನ್ನೇ ತೊಟ್ಟು, ಗಿರಣಿಗಳು ಹಾವಿನ ಗಿಡದಂತೆ ದೂರಾಗುವವು ಈ ಮಧ್ಯ ಗಿರಣಿಯವರು ಗಳಿಸಿಕೊಳ್ಳಲಿ.

ಪ್ರ- ಗಿರಣಿಯವರಿಗೆ ಬಿಸಿ ತಾಗಲಿಕ್ಕೆ ಹೇಳಿ, ಪರದೇಶಿ ಜವಳಿಯವರಿಗೆ ಹಾನಿ ಸಾಗಿಸಲಿಕ್ಕೆ ಹೇಳುತ್ತೀರಲ್ಲ?

ಉ- ಗಿರಣಿಗಳಿಗೆ ಬಹಿಷ್ಕಾರವಿಲ್ಲೆಂಬದನ್ನು ಲಕ್ಷದಲ್ಲಿಡಿರಿ. ಗಿರಣಿಯವರು ಗಳಿಸಿದರೆ ನಮಗೆ ದುಡ್ಡು ಕೊಡುತ್ತಾರೆ. ಅವರು ನಮ್ಮನ್ನು ಮೋಸಪಡಿಸಿ ಹೆಚ್ಚು ಲಾಭ ಪಡೆದರೆ? ಅವರನ್ನೂ ಬಾಯಕಾಟ ಮಾಡಬಹುದು.

ಪ್ರ- ಇಲ್ಲಿಯದೊಂದು ಪತ್ರವು ನಿಮಗೆ ಬೈಯ್ಯುತ್ತದೆ ಅದಕ್ಕಾವ ಪ್ರಾಯಶ್ಚಿತ್ತ ಮಾಡಬೇಕು?

ಉ- ಅದನ್ನು ಓದಲೇ ಬಾರದು.

ಬಂಗಾಲದಲ್ಲಿ ಘೋರವೃಷ್ಟಿಯಿಂದ ಮುಂದೆ ಹರಿಯುವ ಪದ್ಮಾನದಿಗೆ ಮಹಾಪೂರ ಬಂದು, ಕಲೆಕ್ಟರ ಮತ್ತು ಡಿಸ್ಟ್ರಿಕ್ಟ ಜಡ್ಜರ ಬಂಗಲೆ ಮೊದಲಾಗಿ ಊರೇ ನೀರಲ್ಲಿ ನಿಂತವೆ.

ಭಾವೀ ಸಿದ್ಧತೆಗಾಗಿ ಅಲ್ಲಾಬಾದಿನಲ್ಲಿ ಸಭೆ.

—(೦)—

ಅಲ್ಲಾಬಾದಿನಲ್ಲಿ ಕಾಂಗ್ರೆಸದ ವತಿಯಿಂದ ಸಭೆಯಾಗಿ, ಪಂಡಿತ ಜವಾಹರಲಾಲ, ಶೇರವಾನಿ ಮತ್ತು ಡಾಕ್ಟರ ಸಯ್ಯದ ಮಹಮ್ಮದ ಇವರ ಭಾಷಣಗಳಾದವು. ಸರಕಾರವು ಕಾಂಗ್ರೆಸದ ಬೇಡಿಕೆಗಳನ್ನು ಮಾನ್ಯ ಮಾಡದಿದ್ದರೆ ಜನರು ಈ ಸಂತರ ಆಗುವ ಯುದ್ಧಕ್ಕಾಗಿ ಸಿದ್ಧರಾಗಿರಬೇಕೆಂದು ಸಾರಿ ಹೇಳುವದೇ ಸಭೆಯ ಉದ್ದೇಶವಾಗಿತ್ತು.

ಟೇಲಿಮೇಲ ಪತ್ರವು ಘೋಷಿಸಿದ್ದು.

....(೦)....

ಕಾಂಗ್ರೆಸದ ವಿರುದ್ಧ ವಿಷವುಣಿಸುತ್ತಿರುವ ಲಂಡನದ ಡೇಲಿ ಮೇಲ ಪತ್ರಿಕೆಯು ಮಂತ್ರಿಗಳಿಗೆ ಎಚ್ಚರಿಕೆ ಹಾಕಿದ್ದೊಂದು ಲೇಖ ಬರೆದಿದೆ. ಮಹಾತ್ಮರು ಲಂಡನಕ್ಕೆ ಬರಬೇಕೆಂದು ಯಾವನು ಸಹ ಮನುಷ್ಯನೂ ಅನ್ನುವದಿಲ್ಲ. ಲಾರ್ಡ ಇರ್ವಿಂಗನ ಸಾಹೇಬರ ಧೋರಣದಲ್ಲಿ ಕೈಹಾಕಿದರೆ ಹಿಂದುಸ್ಥಾನದಲ್ಲಿರುವ ಬ್ರಿಟಿಶ ಪ್ರಭುತ್ವದ ಬುಡವೇ ಅಲುಗುತ್ತದೆಂದು ತಿಳಿಯಲೆಂದು ಹೇಳುತ್ತದೆ. ಈ ಲೇಖದಿಂದ ಇಂಗ್ಲಿಷ ಪ್ರಜರು ಹೆದರುವರು. ಪ್ರಜರು ಮಂತ್ರಿಗಳಿಗೆ ಅಡ್ಡ ಕಟ್ಟುವರೆಂಬುದು ಇದರ ಮುಂದೋಟವು.

ಶಕಲಾತವಾಲಾನ ಕಾತ್ಯಕನೆ

....(೦)....

ಮಹಾತ್ಮರು ಹಿಂದುಸ್ಥಾನವನ್ನು ಸಂಪೂರ್ಣ ಸ್ವಾತಂತ್ರ್ಯದ ಹಾದಿಗೊಯ್ಯದೆ, ಅದನ್ನು ಸಾಮ್ರಾಜ್ಯ ಸರಕಾರದ ಭಾಗ ಮಾಡುತ್ತಾರೆಂಬ ಆರೋಪ ಹೊರಿಸಿ, ಅವರ ವಿರುದ್ಧ ಲಂಡನದಲ್ಲಿ ಶಕಲಾತವಾಲಾ ಮೊದಲಾದವರು ಚಳವಳಿ ನಡೆಸಿದ್ದಾರೆ. ಮಹಾತ್ಮರು ಪ್ರಯಾಣವನ್ನು ನಿಲ್ಲಿಸಿದರೆಂದು ಗೊತ್ತಾದರೂ, ಈ ಜನರು ಮಹಾತ್ಮರು ಇಳಿದುಕೊಳ್ಳಬೇಕಾಗಿದ್ದ ಕಿಂಗಸ್ಲೆ ಹಾಲಿನ ಎದುರಿನಲ್ಲಿ ಗುಂಪುಗುಂಪಾಗಿ ಸೇರಿ, ಮಹಾತ್ಮರ ಚಳವಳಿಯನ್ನು ಹಳಿದು, ಬ್ರಿಟಿಶ ಸರಕಾರವು ಹಿಂದುಸ್ಥಾನದಲ್ಲಿರುವ ತನ್ನ ಸೈನ್ಯವೆಬ್ಬಿಸಬೇಕು. ರೈತ ಮತ್ತು ಕಾರ್ಮಿಕರ ಪ್ರಜಾಸತ್ತಾತ್ಮಕ ರಾಜ್ಯವಾಗಬೇಕೆಂಬ ಠರಾವು ಮಾಡಿದರು.

ರೇಲ್ವೆಯ ವಿಚಿತ್ರ ಅಪಘಾತ

—(೦)—

ಪುಣೆ ಮೀರಜೆಯ ನಡುವೆ ಧೊಂಡಜಸ್ಟೇಶನದಲ್ಲಿ ಇಂಜಿನು ಬಿಚ್ಚುವಾಗ ಆದರಿಂದುಂಟಾದ ಧಕ್ಕೆಯಿಂದ ಇಂಜಿನದ ಹಿಂದಿನ ಗುಡ್ಸಿನ ೧೬ ಡಬ್ಬಿಗಳು ಇಳುಕಲಿಗೆ ಬಿದ್ದು, ಉರುಳುತ್ತಾ ವಾಲ್ಹೆ ಸ್ಟೇಶನಕ್ಕೆ ಬಂದು, ಅಲ್ಲಿಂದಲೂ ಹಾಗೇ ಸರಿಯುತ್ತಾ ನೀರಾ ಸ್ಟೇಶನಕ್ಕೆ ಬಂದವು. ಅಲ್ಲಿ ಮುಂದಾಗಿ ತಾರು ಬಂದದ್ದರಿಂದ ಇವನ್ನು ಸಾಲಿಡಿಂಗಕ್ಕೆ ತಳ್ಳಿಕೊಂಡರು. ಏರಿಗೆ ಬಂದರೂ ಅಲ್ಲಿ ಉರುಳಿ ಬಿದ್ದವು. ಈ ಅಪಘಾತದಲ್ಲಿ ರೇಲ್ವೆಯ ಮೂವರು ಅಪಾಯ ಹೊಂದಿದ್ದಾರೆ.

ಹಿಂದೂ ಮುಸಲಮಾನ ದ್ವೇಷಕ್ಕಿಂತ ಪ್ರೊಟೆಸ್ಟಂಟ ರೋಮನ ಕ್ಯಾಥಲಿಕ ದ್ವೇಷ ಹೆಚ್ಚಿನದು

—(೦)—

ಐರ್ಲಂಡದಲ್ಲಿ ರೋಮನ ಕ್ಯಾಥಲಿಕ ಮತ್ತು ಪ್ರೊಟೆಸ್ಟಂಟರ ನಡುವಿನ ದ್ವೇಷವು ಅತರ್ಕ್ಯವಾಗಿ ಬೆಳೆದಿದೆ. ಒಬ್ಬರ ಮೇಲೊಬ್ಬರ ಮುಯ್ಯಿ ತೀರಿಸಿಕೊಳ್ಳಲು ತಂತಮ್ಮ ಮನೆಯಲ್ಲಿ ಬಾಡಿಗೆಯಿಂದಿದ್ದ ವಿರುದ್ಧ ಮತದವರನ್ನು ಮನೆ ಬಿಡಿಸಲಾರಂಭಿಸಿದ್ದಾರೆ. ಈ ಮೂಲಕ ಎರಡೂ ಮತದವರ ನಡುವೆ ರಕ್ತಪಾತವಾಗುವ ಭಯವುಂಟಾಗಿದೆ.

ಸ್ಪೇನ ದೇಶದಲ್ಲೊಂದು ಕ್ರಾಂತಿಯು

....(೦)....

ಸ್ಪೇನದಲ್ಲಿ ರಾಜರ ಕಾಲದಲ್ಲಿ ಅನೇಕ ಜನ ಅಮೀರ ಉಮರಾವರು ರಾಜನಿಗೆ ನಜರು ಕೊಟ್ಟು, ಆತನಿಂದ ಬಹುವಾಗಿ ಫಲವತ್ತಾದ ಭೂಮಿಯನ್ನು ಸಂಪಾದಿಸಿದ್ದಾರೆ. ಈ ಮಾದರಿಯ ಎಲ್ಲ ಭೂಮಿಗಳನ್ನು ಹೊಸ ಸರಕಾರಕ್ಕೆ ತಿರುಗಿ ಕೊಡಬೇಕೆಂದು ಜಾಹೀರನಾಮೆ ಹೊರಟಿರುತ್ತದೆ. ಪ್ರಸಿದ್ಧರಾದ ಮಾರ್ಕ್ವಿಸನ ವಂಶಸ್ಥರು ಐನೂರು ವರ್ಷಗಳ ಹಿಂದೆ ಆಗಿನ ರಾಜನಿಗೆ ೪೦ ಪವನು ಕೊಟ್ಟು ಬಹುವಾಗಿ ಬೆಳೆಬರುವ ಸಾವಿರಾರು ಎಕರೆ ಭೂಮಿ ಪಡೆದಿದ್ದನು. ಅದು ಈಗ ಕೈಬಿಟ್ಟು ಹೋಗುವದು.

ಪ್ರಕೃತದ ಪರಿಸ್ಥಿತಿಯ ವಿಚಾರವಾಗಿ ಲಾರ್ಡ ಆಯರ್ವಿನ್ನ ಮತ್ತು ಪಂಡಿತ ಮಾಲವಿಯಾಯವರ ನಡುವೆ ತಾರಿನಿಂದ ಮಾತು ನಡೆಯಿತು. ಈ ಬಗ್ಗೆ ಲಾರ್ಡಸಾಹೇಬರು ವಿಷಾದವನ್ನು ವ್ಯಕ್ತಪಡಿಸಿದ್ದಾರೆಂದು ಲಾಹೋರಿನ ಟ್ರಿಬ್ಯೂನ ಪತ್ರವು ಹೇಳುತ್ತದೆ.

ವಿವಿಧ ವರ್ತಮಾನಗಳು.

ಪುಣೆಯ ಸರ್ವಂಟ ಆಫ ಇಂಡಿಯಾ ಸೊಸಾಯಟಿಯು ನಡೆಸುವ ಶಾಲೆಯು ಪ್ರಮುಖರಾದ ಶ್ರೀ. ದೇವಧರರ ಜ್ಯುಬಿಲಿಯನ್ನು ಮಾಡಿ. ಸೊಸಾಯಿಟಿಯವರ ಪರವಾಗಿ ಅವರಿಗೆ ಹತ್ತು ಸಾವಿರದ ಥೈಲಿಯನ್ನು ಕಾಣಿಕೆ ಕೊಟ್ಟರು. ಈ ಫಂಡಿಗೆ ಗವರ್ನರ ಮೊದಲಾಗಿ ಸಹಸ್ರಾರು ಜನರು ಸಹಾಯ ಮಾಡಿದ್ದಾರೆ.

ಆಸ್ಟ್ರಿಯಾದ ಭಾಗವಾಗಿ ಈಗ ಸ್ವತಂತ್ರವಾಗಿರುವ ಹಂಗೇರಿಯ ಮಂತ್ರಿಗಳು ರಾಜೀನಾಮೆ ಕೊಟ್ಟರು. ಯುದ್ಧದ ನಂತರ ನಾವು ರಾಜ್ಯವಾಳಿ ಮುರಿದಿರುವೆವು. ಇನ್ನು ತರುಣರು ರಾಜ್ಯವಾಳಲೆಂದು ಇವರು ದಿವಾನಗಿರಿ ಬಿಟ್ಟರು.

ನಂಬಹದ್ದಿನ ಒಬ್ಬ ಪುರುಷನು ಕಾಲಾಖಾನನೆಂಬ ಇಂಗ್ಲಿಷರ ಸೈನಿಕನಿಗೆ ಗುಂಡುಹಾಕಿ ಕೊಂದನು.

ಮುಂಬಯಿ ಮ್ಯುನಿಸಿಪಾಲಿಟಿಯು ಚುನಾವಣೆಯಲ್ಲಿ ಕಾಂಗ್ರೆಸದವರು ತಮ್ಮ ವತಿಯಿಂದ ಉಮೇದವಾರರನ್ನು ನಿಲ್ಲಿಸಬೇಕೆಂದು ಗೊತ್ತುಮಾಡಿದ್ದಾರೆ.

ಲಾಹೋರಿನಲ್ಲಿ ಸರದಾರ ಕರಕತಿಂಗನಿಗೆ ಎರಡು ವಾರಗಳ ಸಾದಾ ಕೈದು ಮತ್ತು ೨೫ ರೂಪಾಯಿ ದಂಡವಾಯಿತು.

ಸಂಹ್ಯಾದ್ರಿಯಲ್ಲಿ ಬಹುವಾಗಿ ಮಳೆಯಾದ್ದರಿಂದ, ಅಲ್ಲಿ ಉಗಮ ಹೊಂದಿದ ಅನೇಕ ಹೊಳೆಗಳಿಗೆ ಪ್ರಚಂಡ ನೆರೆ ಬಂದಿರುತ್ತದೆ.

ಕಾಶಿಯ ತರುಣ ರಾಜರಿಗೆ ಪಟ್ಟಾಭಿಷೇಕವಾಯಿತು.

ಧಾರವಾಡ –

ನಿನ್ನೆಯಿಂದ ಮಳೆಯು ಮುರಕಳಿಸಿದಂತಾಗಿದೆ. ರೋಗ ಹೆಚ್ಚಿಸಲಿಕ್ಕೂ, ಬೆಳೆ ಕೆಡಿಸಲಿಕ್ಕೂ ಮುರಕಳಿಸಿದಂತೆ ತೋರುವಂತಾಗಿದೆ.

ನಿನ್ನೆ ಸಾಯಂಕಾಲದಲ್ಲಿ ಡ. ನಾರಾಯಣಗೆ ಅರ್ಜೀ ಕೊಡುವ ವಿಧಿ ಮುಗಿಯಿತು. ಅನೇಕ ಹೊಸ ಉಮೇದವಾರರು ಮುಂದೆ ಬಂದಿದ್ದಾರೆ. ಶ್ರೀ. ಸೌ॥ ಮುದವೀಡು ರಾಧಾಬಾಯಿಯವರಿಗೆ ಸೂಚನೆ ಉಪಸೂಚನೆ ಮಾಡಿದವರು ಶ್ರೀ ಹೊಸಟಗೇರಿ ಇದ್ದಾರೆ.

ಕಸ್ಟಗಳನ್ನು ತೊಡೆಯಬೇಕೆಂದು ವಾದಿಸಿದರು. ಸ್ತ್ರೀಯರಿಗೆ ಕೆಲಸ ಕೊಡಬಾರದೆಂದು ಬಂದ ಉಪಸೂಚನೆಯನ್ನು ಹೋಟಿಗೆ ಹಾಕಲು- ಅದು ನಾಪಾಸಾಯಿತು ಇದನ್ನು ಕಂಡು ವಿದ್ಯಾರ್ಥಿನಿಯರೂ, ಅವರಿಗೆ ಅನುಕೂಲವಿದ್ದವರೂ ಸಭೆಗೆ ಶರಣು ಹೊಡೆದರು. ಇವರು ಎದ್ದು ಹೋದ. ಬಳಿಕ ಮೂಲ ಠರಾವನ್ನು ಹೋಟಿಗೆ ಹಾಕಲು- ಸ್ತ್ರೀಯರಿಗೆ ಪುರುಷರಂತೆ ಕೆಲಸ ಕೊಡಬೇಕೆಂದೇ ಪಾಸಾಯಿತು.

ಬ್ಯಾಡಗಿಯ ಪತ್ರ

—(೦)—

ಪ್ರತಿ ವರ್ಷದ ಪದ್ಧತಿಯಂತೆ ಕಳೆದ ಬುಧವಾರ (ತಾ|| ೧೯-೮-೩೧ನೇ) ದಿವಸ ಸಮ್ಮಲ್ಲಿಯ ಶ್ರೀ. ಶಿ. ವಿ. ಬೋರ್ಡಿಂಗಿನ ೬ನೇ ವರ್ಷದ, ಹಾಗು ಶ್ರೀ. ಲಿಂಗರಾಜ ವಾಚನಾಲಯದ ೧೦ನೇ ವರ್ಷದ ಉತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು.

ಅಂದು ಪ್ರಾತಃಕಾಲ ೮ರಿಂದ ೧೦ರ ವರೆಗೆ ಶ್ರೀ ಶಿವಯೋಗೀಶ್ವರ ಪೂಜಾಸಮಾರಂಭವೂ ಆ ಮೇಲೆ ೧೨ರ ವರೆಗೆ ಗಣಾರಾಧನೆಯೂ ನಡೆಯಿತು. ಬಳಿಕ ಸಾಯಂಕಾಲ ೪ಕ್ಕೆ ಶ್ರೀ ಶಿವಯೋಗೀಶ್ವರರ ಹಾಗು ಶ್ರೀ ಲಿಂಗರಾಜ ದೇಸಾಯಿಯವರ ಭಾವಚಿತ್ರಗಳ ಮೆರವಣಿಗೆಯು ಹೊರಟು ಪುರಪ್ರದಕ್ಷಿಣೆ ಮಾಡಿಕೊಂಡು ಪುನಃ ೫|| ಘಂಟೆಗೆ ಶ್ರೀ. ಗಳವರ ಮಠವನ್ನು ಸೇರಿತು.

ಆ ಮೇಲೆ ಸಭೆಯ ಕೆಲಸವು ಪ್ರಾರಂಭವಾಯಿತು ಮೊದಲೇ ಪ್ರಸಿದ್ಧ ಮಾಡಿದ ಮೇರೆಗೆ ಶ್ರೀಮಂತ ಸರದಾರ ಬಸಪ್ಪ ಬಸವಂತರಾವ ಮಾಮಲೇ ದೇಸಾಯಿ ಸಂಸ್ಥಾನ ಹಂದಿಗನೂರ ಈ ಮಹನೀಯರೇ ಎರಡೂ ಸಭೆಗಳಿಗೂ ಅಧ್ಯಕ್ಷರಾಗಿದ್ದರು.

ಮ ಮಾ ಶ್ರೀ. ಕುಲಕರಣಿ,ಮಿ. ದಿಗ್ಗಾವಿ, ಮಿ ಮರಗಾಲ (ವಿದ್ಯಾರ್ಥಿ) ಮಿ ಮೇಲ್ಮುರಿ, ಮಿ ಕ್ಯಾತನ, ಇವರ ಭಾಷಣಗಳಾದವು. ಕೊನೆಗೆ ಅಧ್ಯಕ್ಷ ಮಹಾಶಯರ ಮಹತ್ವದ ಭಾಷಣವಾಗಿ ಪುಷ್ಪಹಾರ ತಾಂಬೂಲ ಮಂಗಲಗಳೊಡನೆ ಸಭಾ ವಿಸರ್ಜನೆಯಾಯಿತು.

ಶ್ರೀಮಂತ ಸರದಾರ ದೇಸಾಯಿಯವರು ಮರುದಿವಸ ಹೊರಡುವಾಗ ಬೋರ್ಡಿಂಗಿಗೆ ೨೫ ರೂ. ೩ ಹೇರು ಜೋಳ ಮತ್ತು ವಾಚನಾಲಯಕ್ಕೆ ೧೦ ರೂ ಗಳನ್ನು ಕೊಟ್ಟು ತಮ್ಮ ಔದಾರ್ಯವನ್ನು ವ್ಯಕ್ತಪಡಿಸಿದರು. ಇದು ಅವರಿಗೆ ಸ್ತುತ್ಯವು.

M. H. Kalkoti
ಸೆಕ್ರೆಟರಿ
ಶ್ರೀ. ಲಿಂಗರಾಜ ವಾಚನಾಲಯ

ವೆಂಕಟೇಶ ತಿರಕೊ ಕುಲಕರಣಿ ಗಳಗನಾಥ

—ಇವರು ಬರೆಯುತ್ತಿರುವ—

ರಹಸ್ಯ ಪ್ರಕಾಶವಾದ ಸಚಿತ್ರ ಮಹಾಭಾರತಾಮೃತದ

ಆದಿ ಪರ್ವ.

ಲೇಖನ ವ್ಯವಸಾಯದ ನಲವತ್ತು ವರ್ಷಗಳ ಅನುಭವದಿಂದ ಈ ಅತಿ ಗೌರವದ ಪ್ರಚಂಡ ಪುಸ್ತಕವನ್ನು ಬರೆಯತೊಡಗಿದ್ದೇವೆ. ಆದಿಪರ್ವವು ಈಗ ಮಾರಾಟಕ್ಕೆ ಸಿದ್ಧವಾಗಿರುವದು. ಅದರ ಬೆಲೆ ೩-೮-೦ ಟಪಾಲಿನಿಂದ ತರಿಸುವವರ ಖರ್ಚ ನಾವೇ ಹಾಕಿ ೩-೬-೦ ಗೆ ವಿ ಪಿ ಮಾಡುವೆವು. ವಿ. ಪಿ. ತಕ್ಕೊಳ್ಳುವವರು ೩-೮-೦ ಕೊಟ್ಟರೆ ತೀರಿತು. ಒಟ್ಟು ಪುಸ್ತಕಗಳು ಏಳು ಅಥವಾ ಎಂಟು ಆಗಬಹುದು. ಇಡಿಯ ಭಾರತದ ಬೆಲೆ ೧೫ ರಿಂದ ೨೦ ರೂಪಾಯಿಗಳ ವರೆಗೆ ಬೀಳಬಹುದು ಇದರಲ್ಲಿ ಬರೆಯುತ್ತಿರುವ ರಹಸ್ಯಗಳು ಅತಿ ಗೌರವದವಾಗಿರುವವು ರಾಜಕೀಯ ವಿಚಾರದ ಈ ಪ್ರಚಂಡ ಗ್ರಂಥವನ್ನು ಈಗಿನಕಾಲದಲ್ಲಿ ಓದಲೇಬೇಕು. ಈಗ ಚಂದಾದಾರರಾಗುವವರಿಗೆ ಮುಂದಿನ ಪುಸ್ತಕಗಳು ಮುಕ್ಕಾಲು ಬೆಲೆಗೆ ಸಿಗುವವು. ನಮ್ಮ ಪರಿಚಯವು ಕನ್ನಡಿಗರಿಗಿರುವದರಿಂದ ಹೆಚ್ಚು ಬರೆಯುವ ಕಾರಣವಿಲ್ಲ. ಇಡಿಯ ಭಾರತದ ೫೦೦೦ ಪ್ರತಿಗಳಿಗೆ ೩೦-೩೫ ಸಾವಿರ ರೂಪಾಯಿ ವೆಚ್ಚವಾಗುವವು. ಕಾರ್ಯಗೌರವವರಿತು ಎಲ್ಲ ಕನ್ನಡಿಗರೂ ನಮ್ಮಮೇಲಿನ ಅಂತಃಕರಣದಿಂದ ಸಹಾಯಮಾಡತಕ್ಕದ್ದು. ಅಲ್ಲದೆ ನಮ್ಮಲ್ಲಿಯ ಈಗ ಸಿಲಕ್ಕು ಇರುವ ಕೆಳಗಿನ ಪುಸ್ತಕಗಳಲ್ಲಿ ಬೇಕಾದವನ್ನು ತಕ್ಕೊಂಡು ಆ ದ್ವಾರದಿಂದಲೂ ನಮ್ಮ ಈ ದೊಡ್ಡ ಕಾರ್ಯಕ್ಕೆ ಸಹಾಯಮಾಡಬಹುದು.

—ಪುಸ್ತಕಗಳ ಹೆಸರು ಮತ್ತು ಕ್ರಯದ ಪಟ್ಟಿ—

೧	ಮಾರ್ಧ್ವಕರ ಹಾವಿಲಾಸ	೩	೧೨	೦
೨	ಮಹಾಭಾರತಾಮೃತ (ಆದಿಪರ್ವ)	೩	೮	೦
೩	ಕೈವಲ್ಯಧಾರ್ಣವ	೩	೮	೦
೪	ಭಾಗವತಾಮೃತ	೩	೮	೦
೫	ಶ್ರೀ ತುಳಸೀ ರಾಮಾಯಣ	೩	೦	೦
೬	ರಾಣೀ-ಮೃಣಾಲಿನಿ	೧	೮	೦
೭	ಧಾರ್ಮಿಕತೇಜ	೧	೮	೦
೮	ಕರ್ಮಕಥೆ	೧	೮	೦
೯	ಈಶ್ವರೀಸೂಕ್ತ	೧	೦	೦
೧೦	ಗೃಹಕಲಹ	೧	೦	೦
೧೧	ಕುರುಕ್ಷೇತ್ರ	೧	೦	೦
೧೨	ಕ್ಷಾತ್ರತೇಜ	೧	೦	೦
೧೩	ಸಂಸಾರಸುಖ	೧	೦	೦
೧೪	(೧೧)ನೇ (೧೨)ನೇ ಸ್ಕಂದ ಭಾಗವತ	೧	೦	೦
೧೫	ರಾಣಾ ರಾಜಸಿಂಹ	೦	೧೨	೦
೧೬	ಗುರುಪ್ರಸಾದ	೦	೧೨	೮
೧೭	ಸದ್ಗುರು ಪ್ರಭಾವ	೦	೧೨	೦
೧೮	ಸುಂದರಶೇಖ ಸಮುಚ್ಚಯ	೦	೮	೦
೧೯	ಭಗವತೀ ಕಾತ್ಯಾಯನಿ	೦	೮	೦
೨೦	ನಿರ್ಯಾಣಮಹೋತ್ಸವ	೦	೮	೦

ಸದ್ಗುರು ಆಫೀಸು
ಹಾವೇರಿ

ನಿಮ್ಮ
ವೆಂ. ತಿ. ಕುಲಕರಣಿ, ಗಳಗನಾಥ.

ನೋಟೀಸಿನ ದರಗಳು

—(೦)—

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂವರೀ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನ ಅವಾರಿಸಿ ಕನ್ನಡಗಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತಗಳನ್ನು ಕೊಡುವವರು ಒಳಗಿ ಪತ್ರಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಿಂದಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443.

ವಿಜಯ

ಸಂಪಾದಕರು:- ಆಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೨೨) ಧಾರವಾಡ ಸೋಮವಾರ ತಾರೀಖು ೨೪ನೇ ಆಗಸ್ಟ ೧೯೩೧ (ಸಂಚಿಕೆ ೧೯೩

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ

ನಾಳಮಡಿ

ಮತ್ತು ——————— ಧಾರವಾಡ

ಕಾಮನಕಟ್ಟಿ

ನಮ್ಮಲ್ಲಿ ಇಡಿ ಕರ್ನಾಟಕದಲ್ಲಿ ಆಗಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಶಾಯಿಪೆ ಸಹ) ನಕಾಶೆ ಚಿತ್ರಗಳೂ ಬರೆವಣಿಗೆ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುವವು. ಭಾಂಡಾರದ ಬೆಲೆಪಟ್ಟಿ ಬೇಕಾದವರು ೪ ಆಣೆ ಅಂಚೆ ತಿಕೀಟುಗಳನ್ನು ಕಳಿಸಿ ಬರಬೇಕು. ವ್ಯಾಪಾರಕ್ಕೆ ರಿಯಾಯತಿಯುಂಟು. ಮಾದರಿಗಾಗಿ ಕೆಲವು ಹೆಸರು ಕೆಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮ್ರಾಜ್ಯ ಸಂ. ೧,೨ ಪ್ರತಿ ೧ಕ್ಕೆ	೨- ೪-೦
೨ ಕಥೆಗಳನ್ನೊಳಗೊಂಡ ಬೀಬಲ್ಲ ಚರಿತ್ರ ಸಚಿತ್ರ	೧- ೬-೦
೩ ಛತ್ರಪತಿ ಶಿವಾಜಿ ಮಹಾರಾಜ	೨-೧೨-೦
೪. ಕರ್ನಾಟಕ ಸಿಂಹಾಸನ ಸ್ಥಾಪನೆ	೧- ೦-೦
೫. ಚರಿತ್ರ ಸಂಗ್ರಹ ಭಾ. ೧.	೧- ೮-೦
೬. ಅಳಸಿಂಗಾಚಾರ್ಯರ ರಾಮಾಯಣ ೯ ಸಂಪುಟಗಳು	೧೪-೮-೦
೭ ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	೨ -೦-೦
೮ ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩	೧೨-೦-೦
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ ಪ್ರತಿ ೧ಕ್ಕೆ	೧- ೨-೦
ಲ್ಯಾಂಡ ರೆವಿನ್ಯೂ ಕೋಡು	೨-೧೧-೦
೧೧. ಗ್ರಾಮ ನಮೂನೆ ಲೆಕ್ಕದ ಪುಸ್ತಕ	೨-೧೩-೦
೧೨. ಸ್ತ್ರೀಧರ್ಮನೀತಿ, ಗೃಹಕಾರ್ಯ ನಿರ್ವಾಹಕ್ರಮ ಪ್ರತಿ ೧ಕ್ಕೆ	೦-೧೦-೦
೧೩. ಇಸೂಪನೀತಿ ಕಥೆ ಭಾ ೧, ೨,	೨- ೪-೦
೧೪. ಕೀರ್ತನ ಕಂಠಾಭರಣ	೧-೧೦-೦

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ್ಸ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಜೋಶಿ, ಗಂಜೀಕರ ಮತ್ತು ಕಂಪನಿ

ಶುಕ್ರವಾರಪೇಟೆ ಧಾರವಾಡ

ಇವರನ್ನು

ಮುಂಬೈ ಪ್ರಾವ್ಹಿನ್ಶಿಯಲ್ ಕೋ. ಇನ್ಶ್ಯುರನ್ಸ ಕಂಪನಿ, ಲಿ.

ಇವರು

ಧಾರವಾಡ ಜಿಲ್ಲೆಯ

ಚೀಫ್ ಏಜಂಟ

ರಾಗಿ ನಿಯಮಿಸಿದ್ದಾರೆ.

ಈಗ ಜಿಲ್ಲೆಯ ಎಲ್ಲ ಮುಖ್ಯ ಸ್ಥಳಗಳಲ್ಲಿ

ಸಬ್ ಏಜಂಟ

ರನ್ನು ನಿಯಮಿಸುವದದೆ. ಈ ಕೆಲಸ ಮಾಡಲಿಚ್ಛಿಸುವವರು ತಮ್ಮ ಖಾತ್ರಿಯ ಬಗ್ಗೆ ಎಲ್ಲ ಮಾಹಿತಿ ಕೊಟ್ಟು ಚೀಫ್ ಏಜಂಟರಿಗೆ ಬರೆಯಬೇಕು. ಖಾತ್ರಿಯಿಂದ ಕೆಲಸ ಮಾಡುವವರಿಗೆ ಪೂರ್ಣ ಕಮೀಶನ ಸಿಗುವದು.

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ, ಧಾರವಾಡ

ವಿಜಯ.

ತಾರೀಖು ೨೪-೮-೧೯೩೧ನೇ ಇಸ್ವಿ

ಸಿಮ್ಲಾದಲ್ಲೇನು ನಡೆದಿದೆ

ಸಿಮ್ಲಾದಲ್ಲೇನು ನಡೆದಿದೆ. ಅದರ ಪರಿಣಾಮವೇನಾಯಿತೆಂದು ತಿಳಿದುಕೊಳ್ಳಲು ಜಗತ್ತೇ ಆತುರವಾಗಿರುತ್ತದೆ. ಮಹಾತ್ಮರು ವಿಲಾಯತಿಗೆ ಹೋಗುವದು ನಿಂತಕೂಡಲೆ ಲಾರ್ಡ ವಿಲಿಂಗಡನ್ನ ಸಾಹೇಬರು ಕಲಕತ್ತೆಯ ಪ್ರಯಾಣವನ್ನು ಬೆಳೆಯಿಸತಕ್ಕದ್ದಿದ್ದಿಲ್ಲ. ಏಕಂದರೆ- ಅಂದಿಗೇ ಈ ವಿಷಯು ಮುಗಿಯತಕ್ಕದ್ದಿದ್ದಿಲ್ಲ. ಡೇಲಿಮೇಲ ಪತ್ರಿಕೆಯ ಪಕ್ಷದ ಸೂಬ್ಲರೆಂಬವರು ಮಹಾತ್ಮರು ವಿಲಾಯತಿಗೆ ಬರದಿರುವದೇ ವಾಸಿ ಎಂದು ಅನ್ನುವಂತೆ, ಬೇರೆ ಮತದಲ್ಲಿರುವ ಸೂಚ್ಲರೆಂಬವರು ಮಹಾತ್ಮರು ಬಂದರೇ ಶ್ರೇಯಸ್ಕರವೆನ್ನುತ್ತಾರೆ. ಮಹಾತ್ಮರು ರಾವುಂಡ ಟೇಬಲಿಗೆ ಬರದಿದ್ದರೆ- ಅದು ಅಪ್ರಿಯವಾಯಿತೋ ಹೇಳಿಸುವದೆಂದೂ ಪರಿಸ್ಥಿತಿಯನ್ನು ಸೂಕ್ಷ್ಮದೃಷ್ಟಿಯಿಂದ ನೋಡುವಂಥವರು ಸ್ಪಷ್ಟವಾಗಿ ಹೇಳುವರು ಇಂಥದೆಂದು ತಾರು ಬಂದಿದ್ದರಿಂದ ಲಾರ್ಡ ವಿಲಿಂಗಡನ್ನ ಸಾಹೇಬರಿಗೆ ಬಂದಿದೆಯೇನಂದರೆ-

"ರಾಜಿಯ ಟಿಸಿಯಿಂದ ಮಿ. ಗಾಂಧಿ ಮತ್ತು ಕಾಂಗ್ರೆಸದವರು ಬಹಳ ಮುಂದೆ ಸರಿದಿದ್ದಾರೆ ಸರಕಾರದ ಇಭ್ರತಿಗಾಗಿ ರಾಜಿಯು ಮುರಿದರೆ- ಲಾರ್ಡ ಆರ್ಯಿನ್ನ ಸಾಹೇಬರು ಈ ಪರ್ಯಂತರ ತೋರಿಸಿದ ಸದಸದ್ವಿವೇಚನೆಯು ಕೆಲಸವೆಲ್ಲ ಹೊಳೆಯ ಹುಳಿ ತೊಳೆದಂತಾಗಿ ಆ ಮಹಾಭಯಂಕರ ಹಾನಿಕಾರಕವಾದ ಜಗಳಕ್ಕೆ ಪುನಃ ಪ್ರಾರಂಭ ಮಾಡಿದಂತಾಗುತ್ತದೆ. ಮಿ. ಗಾಂಧಿಯವರು ರಾವುಂಡ ಟೇಬಲಿಗೆ ಬರದಿದ್ದರೆ- ಅವರ ಭೋಳೆವಾದರೂ ಒಂದು, ರಾವುಂಡ ಟೇಬಲವನ್ನು ಮುರಿದು ಹಾಕುವದು"

ಮಹಾತ್ಮರು ರಾವುಂಡ ಟೇಬಲಕ್ಕೆ ಹೋಗದಿದ್ದರೆ- ಅಲ್ಲಿ ಅವರ ಬೆನ್ನ ಹಿಂದೆ ಆಗುವಂಥ ತೀರ್ಮಾನಗಳು ...ದಿಯುವಾಗಲೇ ಹಳಸಿ ಹೋದಂಥ ಠರಾವುಗಳನ್ನು ಅವರು ಲಂಡನ್ನಲ್ಲಿ ತರುವದೆಂತು? ಹಿಂದಿನ ರಾವುಂಡ ಟೇಬಲವು ಹೇಗೆ ಬರಿಗಿದ ಹುಲ್ಲಾಯಿತೋ ಈಗಿನದಾದರೂ ಹಾಗೇ ಆಗುವದುಂಟು.

ಮಹಾತ್ಮರ ಹೊರ್ತು ತಿಗರಿಯು ಪರಿಷತ್ತೆಂದರೆ ದೇವರಿಲ್ಲದ ಗುಡಿಯಂತಾಗುವದೆಂದು ತಿಳಿದೇ ವಿಲಾಯತಿಯ ಮಂತ್ರಿಗಳು ರಾಜಿಯ ಪುನರ್ವಿಚಾರಣೆ ಪ್ರಾರಂಭಿಸಿದ್ದಾರೆ ಲಾರ್ಡ ವಿಲಿಂಗಡನ್ನ ಸಾಹೇಬರು ಕಲಕತ್ತೆಗೆ ಹೋಗಿದ್ದರೂ, ಸಿಮ್ಲಾದಲ್ಲುಳಿದಿದ್ದ ಕೌನ್ಸಿಲರರು ಕಮಿಟಿ ಕೂಡಿ ತರ್ಕ ವಿತರ್ಕಗಳನ್ನು ನಡೆಸಿದರು. ಮತ್ತು ನಡೆದ ಸಂಗತಿಗಳನ್ನು ತಾರಿನಿಂದ ಕಲಕತ್ತೆಗೆ ತಿಳಿಸುತ್ತಾ ಬಂದರು. ಆದರೆ ಇದು ತಾರಿನಿಂದ ಬಗೀ ಹರಿಯದೆಂದು ಕಂಡು ಬಂದದ್ದರಿಂದಲೇ ಸಾಹೇಬರು ಸಿಮ್ಲಾಕ್ಕೆ ಬಂದಿದ್ದಾರೆ. ತಮ್ಮ ಮೇಲೆ ಮಹಾತ್ಮರು ಹೊರಿಸಿದ ಆರೋಪಗಳ ವಿಚಾರ ಮಾಡುವದಂತೂ ಸರಿಯೇ! ತಮ್ಮವೂ ಕಾಂಗ್ರೆಸದವರ ಮೇಲೆ ಕಟ್ಟಬೇಕಾಗಿವೆ. ಈ ವಿಷಯವಾಗಿ ಜಿಲ್ಹಾ ಸರಕಾರಗಳ ಮತ ಕೇಳಿಕೊಂಡು, ತಮ್ಮ ಖಂಡಿತವಾದ ಮತ ಮಾಡಿಕೊಂಡು, ಇವನ್ನು ಪ್ರಕಟ ಮಾಡುವರೆಂದು ಹೇಳುತ್ತಾರೆ.

ಒಬ್ಬರಮೇಲೊಬ್ಬರು ಹಾಕುವ ಆರೋಪಗಳ ವಿಚಾರವು ಒಂದೆರಡು ದಿವಸ, ವಾರ ಅಥವಾ ತಿಂಗಳಲ್ಲಿ ಮುಗಿಯಲಾರದು. ಅವುಗಳ ವಿಚಾರ ಮಾಡಲು - ಸರಕಾರದವರು ಮಹಾತ್ಮರ ಕೋರಿಕೆಯಂತೆ ಒಬ್ಬ ಜಡ್ಜರನ್ನು ನೇಮಿಸಿದರೆ- ಮಹಾತ್ಮರು ಬರುವ ಶನಿವಾರ ತಾ ೨೯ ನೆಯ ತಾರೀಖಿನ ಹಡಗದಿಂದ ಪ್ರಯಾಣ ಬೆಳೆಸಬಹುದೆಂದು ಕೆಲವರು ತರ್ಕ ಕಟ್ಟುತ್ತಾರೆ

ಮಹಾತ್ಮರೇ ಲಂಡನಕ್ಕೆ ಬನ್ನಿರಿ—

ರಾವುಂಡ ಟೇಬಲವಿರಲಿ; ಇಲ್ಲದಿರಲಿ; ಅದರ ಗೊಡವೆ ಬಿಟ್ಟು, ನನ್ನ ಆಮಂತ್ರಣದ ಪ್ರಕಾರ ನೀವು ಲಂಡನಕ್ಕೆ ಬರಲೇಬೇಕೆಂದು ಕುಮಾರಿ ಲೆಸ್ಟರಳು ಮಹಾತ್ಮರಿಗೆ ತಾರಿನಿಂದ ವಿನಂತಿ ಮಾಡಿಕೊಂಡಿದ್ದಾಳೆ.

ಮಹಾತ್ಮರು ಲಂಡನಕ್ಕೆ ಹೋಗುವದಿಲ್ಲೆಂಬದೂ, ರಾಜಿಯು ಅಶಕ್ಯವೆಂದೂ, ಸಿಮ್ಲಾದಿಂದ ಸುದ್ದಿಯು ಬಂದಕೂಡಲೆ- ಮುಂಬಯಿಯ ಪೇಟೆಯಲ್ಲಿ ಚಳವಳಿಯಾಗಿ, ಗಿರಣಿ, ಕಂಪನಿಗಳ ಶೇರುಗಳ ...

ಮಹಾತ್ಮರೆಂದರೆ ಹರಿಶ್ಚಂದ್ರನಂತೆ ಸತ್ಯಶೋಧರು.

ಅಹಮದಾಬಾದಿನಲ್ಲಿ ಸ್ವದೇಶಿ ವಸ್ತ್ರ ಬಹಿಷ್ಕೃತ ಮಂಡಲದವರು ಖಾದೀ ಭಾಂಡಾರ ಸ್ಥಾಪಿಸಿ, ಅದರ ಅಂಗಡಿಯನ್ನು ತೆರೆಯುವ ಸಮಾರಂಭವನ್ನು ಸರದಾರ ಪಟೇಲರಿಂದ ಮಾಡಿಸಿದರು ಆ ಸರದಾರರು ಮಾಡಿದ ಭಾಷಣವು.

ವಾಸ್ತವಿಕವಾಗಿ ಈ ಸಮಾರಂಭವು ಮಹಾತ್ಮರಿಂದ ನೆರವೇರಬೇಕಾಗಿತ್ತು ಆದರೆ ಅವರಿಗೆ, ಕಾರ್ಯಬಾಹುಲ್ಯದಿಂದ ಟೀಕದ ದೇಹಾಲಸ್ಯದ ಮೂಲಕ ಅವಶ್ಯವಾಗಿ ವಿಶ್ರಾಂತಿ ಬೇಕಾಗಿರುತ್ತದೆ. ಆದ್ದರಿಂದ ಅವರು ನಮಗೆ ಕಳಿಸಿದ ಆಶೀರ್ವಾದದಲ್ಲಿಯೇ ನಾವು ಸಂತುಷ್ಟರಾಗಬೇಕು ರಾಷ್ಟ್ರದ ಪತಿಯಿಂದ ಮಹಾತ್ಮರು ಹ್ಯಾಯಿಸರಾಯರ ಕೂಡ ಮಾಡಿದಂಥ ಒಡಂಬಡಿಕೆಯ ಕರಾರುಗಳನ್ನು ನಾವು ಮುರಿಯತಕ್ಕದ್ದಲ್ಲ. ದೇಶದ ಪ್ರತಿನಿಧಿಯಾಗಿ, ದೇಶ ಸ್ವತಂತ್ರವಾಗಬೇಕೆನ್ನುವಂಥವನೂ ತನ್ನ ವಚನ ಮುರಿಯತಕ್ಕದ್ದಲ್ಲ. ಸುದೈವದಿಂದ ನಮಗೆ ದೊರೆತ ಮುಂದಾಳು ಅಂಥಿಂಥವನಲ್ಲ, ಆತನ ಸತ್ಯ ವಚನಕ್ಕಾಗಿ ಜಗತ್ತಿನಲ್ಲಿ ಯಾವನೂ ಸಂಶಯ ತಳೆಯಲಾರನು. ಈ ಯುಗಾಂತರದಲ್ಲಿ ಸತ್ಯಾಚರಣೆಯಲ್ಲಿ ಶ್ರೇಷ್ಠನೆಂದು ಆಚಾರ್ಯ ಕೀರ್ತಿಪಡೆದ ಹರಿಶ್ಚಂದ್ರನೇ ಆಗಿದ್ದಾರೆ. ನಮಗೆ ನೂರಾರು ವರ್ಷಗಳ ಹಿಂದೆ ಇಂಥ ಮುಖಂಡ ದೊರೆಯಲಿಲ್ಲ ಮುಂದ ದೊರೆಯಲಾರನು ಇವನು ಲಂಡನಕ್ಕೆ ಹೋಗುವನೇ ಇಲ್ಲವೇ ಎಂದು ಚರ್ಚಿಸಬೇಡಿರಿ. ಅಥವಾ ಪೂರ್ಣ ಯುದ್ಧವೇಳುವದೇ ಎಂದ ತರ್ಕ ವಿತರ್ಕ ನಡೆಸಬೇಡಿರಿ ಖಾದಿಯ ಉಪಗೆ ತೊಡಿಗೆಯಲ್ಲಿಯೂ, ಖಾದಿಯ ಪ್ರಸಾರದಲ್ಲಿಯೂ ನಿಮ್ಮ ಸಂಪೂರ್ಣ ಮನಸ್ಸು ಹಚ್ಚಿರಿ. ಅದರಿಂದಲೇ ಮಹಾತ್ಮರು ಸಂತುಷ್ಟರಾಗುವರು.

ಕಮೀಶನರಸಾಹೇಬರ ಮೇಲೆ ಗುಂಡು.

— (೦) —

ಬಂಗಾಲಕ್ಕೆ ಸೇರಿದ ಮೈಮನಸಿಂಗದಲ್ಲಿ ಕಮೀಶನರರಾದ ಮಿ. ಕ್ಯಾಸಲ್ಸ ಸಾಹೇಬರು ಸಹಕಾರಸಂಘದ ಸಭೆಗೆ ಹೋಗುತ್ತಿದ್ದಾಗ, ಅವರೆದುರಿನಲ್ಲಿ ಒಬ್ಬನು ಬಂದವನೇ ರಿವಾಲ್ವರದಿಂದ ಗುಂಡು ಹಾರಿಸಿದನು. ಗುಂಡು ತೊಡಗೆ ಬಡಿಯಿತು ಸಾಹೇಬರಿಗೆ ಜೀವದ ಭಯವಿಲ್ಲ ಗುಂಡು ಹಾರಿಸಿದವನು ಗದ್ದಲದಲ್ಲಿ ಮಾಯವಾದವನು ಮಾ...

ಶ್ರೀ ಜಗದ್ಗುರು ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಯ ವಾರ್ಷಿಕೋತ್ಸವವು.

....(೦)....

ಇಲ್ಲಿಯ ಶ್ರೀ. ಜಗದ್ಗುರು ಸಂಸ್ಕೃತ ಪಾಠಶಾಲೆಯ ವಾರ್ಷಿಕೋತ್ಸವವು ಪದ್ಧತಿಪ್ರಕಾರ ಹೋದ ನಾಗಸಂಚಮಿಯ ದಿವಸ ಉತ್ಸಾಹದಿಂದ ನೆರವೇರಿತು. ಪಾಠಶಾಲೆಯ ಸ್ಥಾಪನೆಯಾಗಿ ೧೪ ವರ್ಷವಾಯಿತು. ಆಗಿನಿಂದ ಉತ್ಸವವು ಅವಿಚ್ಛಿನ್ನವಾಗಿ ನಡೆದಿದೆ. ಈ ವರ್ಷದ ಸಮಾರಂಭಕ್ಕೆ ಬೇರೊಂದು ರೀತಿಯಿಂದ ಮಹತ್ವಬಂದಿದೆ. ಶ್ರೀ. ಜಮಖಂಡಿಯವರು ಕಾರ್ಯದರ್ಶಿಯಾದಬಳಿಕ ಶ್ರೀ. ಗುರುನಾಥರಾಯರಂತೆಯೇ ಇವರೂ ಪಾಠಶಾಲೆಯ ಕೆಲಸದಲ್ಲಿ ಮನಸ್ಸು ಹಾಕಿ, ಅದರ ಉತ್ಕರ್ಷಕ್ಕಾಗಿ ಸತತವಾಗಿ ಶ್ರಮಮಾಡುತ್ತಿದ್ದಾರೆ. ಇವರ ಅವಿರಾಮ ಶ್ರಮದಿಂದ ಪಾಠಶಾಲೆಗೆ ನಾಲ್ಕೂ ಕಡೆಯಿಂದ ಚಂದಾ ಹಣವು ಬರಲಾರಂಭಿಸಿ, ಶಾಲೆ ಮತ್ತು ಅನ್ನಛತ್ರವು ಅವಿಚ್ಛಿನ್ನವಾಗಿ ನಡೆದಿವೆ. ದ್ರವ್ಯದ ಕೊರತೆಯಾಗಲು ಅಧ್ಯಾಪಕರು ತಾವಾಗಿ ತಮ್ಮ ಸಂಬಳ ಕಡಿಮೆ ಮಾಡಿಕೊಂಡಿದ್ದರು. ಸಾಕಷ್ಟು ದ್ರವ್ಯ ಸಂಚಯವಾದ್ದರಿಂದ ಇವರ ಮೊದಲಿನ ಸಂಬಳವನ್ನೇ ಪುನಃ ಕೊಡಲಾರಂಭಿಸಿದ್ದಾರೆ. ಇದು ಅತ್ಯಂತ ಸಂತೋಷದ ಸಂಗತಿಯು, ಯಾವದೇ ಕೆಲಸವಾಗಲಿ; ಅದಕ್ಕೆ ಒಬ್ಬರು ದೇಹಾರ್ಪಣೆ ಮಾಡಿ, ಗುತ್ತಿಗೆ ಕೊತ್ತ ಹೊರತು ಅದು ಉರ್ಜಿತಾವಸ್ಥೆಯನ್ನು ಹೊಂದುವದೇ ಇಲ್ಲ. ಇದಕ್ಕೆ ಈ ಪಾಠಶಾಲೆಯ ಸ್ಥಾಪಕರಾಗಿದ್ದ ಶ್ರೀ. ಗುರುನಾಥರಾಯರೂ, ಅವರ ತರುವಾಯ ಶ್ರೀ. ಜಮಖಂಡಿಯವರೂ ಪ್ರತ್ಯಕ್ಷ ಉದಾಹರಣೆಯಾಗಿದ್ದಾರೆ.

ಸಮಾರಂಭದಲ್ಲಿ ಶ್ರೀ. ಆಲೂರ ವೆಂಕಟರಾಯರು ಒಂದು ಮಹತ್ವದ ಸೂಚನೆ ಮಾಡಿದರು. ಪಾಠಶಾಲೆಯ ವಿದ್ವಾಂಸರು ಪರದೇಶಗಳಿಗೆ ಹೋಗಿ, ವಿದ್ವತ್ಪರೀಕ್ಷೆ ಕೊಟ್ಟು ಗೌರವ ಹೊಂದಿ ಪದವಿ ಪಡೆದು ಬರುತ್ತಾರೆ. ಅಂಥ ಗೌರವದ ಪದವಿಗಳನ್ನು ಕೊಡುವ ಉಪಕ್ರಮವನ್ನು ಪಾಠಶಾಲೆಯವರೇ ಮಾಡಬೇಕೆಂದು ರಾಯರು ಮಾಡಿದ ಸೂಚನೆಯು ಶ್ಲಾಘನೀಯವಾಗಿರುತ್ತದೆ. ಹಳೇ ಸಂಸ್ಥೆಯು. ಸಂಸ್ಥೆಯಲ್ಲಿ ಕಲಿತು ಹೆಸರು ಪಡೆದಂಥ ವಿದ್ವಾಂಸರಿದ್ದಾರೆ. ಈ ಎರಡೂ ದೃಷ್ಟಿಯಿಂದ ದೂರ ದೂರಿನ ವಿದ್ವಾಂಸರ ಯೋಗ್ಯತೆಯ ಪ್ರಕಾರ ಪ್ರತಿವರ್ಷ ಬಿರುದು ಕೊಡುವದಕ್ಕೆ ಪಾಠಶಾಲೆಯು ಎಲ್ಲಾ ವಿಚಾರದಿಂದಲೂ ಯೋಗ್ಯಸ್ಥಾನವಾಗಿರುತ್ತದೆ ಆದ್ದರಿಂದ ಶಾಲಾ ಪ್ರವರ್ತಕರು ಮುಂದಿನ ವರ್ಷದಿಂದ ಈ ಪದ್ಧತಿಯನ್ನು ಪ್ರಾರಂಭಿಸಿ, ಪಾಠಶಾಲೆಯ ಕೀರ್ತಿಯು ಹಿಂದುಸ್ಥಾನದ ತುಂಬ ಹಬ್ಬುವಂತೆ ಮಾಡುವರೆಂದು ಆಶಿಸುತ್ತೇವೆ.

ಶಿರಹಟ್ಟಿಯ ಲೋಕಮಾನ್ಯ ಉಚಿತ ವಾಚನಾಲಯ

....(೦)....

ಹೋದ ಆಗಸ್ಟ ತಿಂಗಳ ೧ ನೆಯ ತಾರೀಖಿನ ದಿವಸ ಶಿರಹಟ್ಟಿಯಲ್ಲಾದ ಲೋಕಮಾನ್ಯ ಉಚಿತ ವಾಚನಾಲಯದ ರೌಪ್ಯಜುಬಿಲಿ ಸಮಾರಂಭವಾದ್ದನ್ನು ಈ ಮೊದಲು ಬರೆದಿದ್ದೇವೆ. ಇದರ ಇಂದಿನವರೆಗಿನ ಇತಿಹಾಸ ಬರೆದ ಪುಸ್ತಕವು ಅಭಿಪ್ರಾಯಕ್ಕಾಗಿ ವಿಜಯಕ್ಕೆ ಬಂದಿದೆ ಈ ವರದಿಯನ್ನು ಕರ್ನಾಟಕದೊಳಗಿನ ಸಾರ್ವಜನಿಕ ಲಾಯಬ್ರರಿಗಳು ಕನ್ನಡಿಯಾಗಿ ತಮ್ಮ ಮುಂಗಟ್ಟಿಕೊಳ್ಳಬೇಕೆಂದು ಸೂಚಿಸುತ್ತೇವೆ. ಐದೇ ಸಾವಿರ ಜನಸಂಖ್ಯೆಯುಳ್ಳ ಗ್ರಾಮ. ರೇಲ್ವೆಗೆ ಸನಿಯವಲ್ಲ, ವ್ಯಾಪಾರದ ಸ್ಥಳವಲ್ಲ. ಸಂಸ್ಥಾನಕ್ಕೆ ಸೇರಿದ್ದು. ಇಂಥ ಊರ ವಾಚನಾಲಯವು ಧರ್ಮಾರ್ಥವಾಗಿರುವದಷ್ಟೇ ಅಲ್ಲ; ಅಮೇರಿಕ ಮತ್ತು ಜಪಾನದಿಂದ ಕೂಡ ಉಚಿತವಾಗಿ ಪತ್ರ ಪುಸ್ತಕಗಳು ಬರುವದೂ ಜಗದ್ವಂದ್ಯರಾದಂಥವರು ಸಹಾನುಭೂತಿಯುಳ್ಳವರಾಗುವದೂ ಅದ್ವಿತೀಯ ಮತ್ತು ಅಪೂರ್ವವೇ ಸರಿ. ಶ್ರೀ. ರಾಮರಾವ ಮಂಗಸೂಳಿ ಮತ್ತು ಶ್ರೀ. ಅಶ್ವತ್ಥಾಚಾರ್ಯ ಮಹಿಷಿ ಇವರಿಬ್ಬರ ಶ್ರಮದಿಂದಲೇ ಲಾಯಬ್ರರಿಯು ಇಷ್ಟು ಉನ್ನತಪದವಿಗೇರಿರುತ್ತದೆ ತಾತ್ಪರ್ಯ ಬೇರೆ ಸಾರ್ವಜನಿಕ ವಾಚನಾಲಯಗಳಲ್ಲಿ ಇಬ್ಬರಾದರೂ ಗಟ್ಟಿಯಾಗಿ ನಿಂತರೆ ಲಾಯಬ್ರರಿಗಳ ಸುದಾಮ ದಾರಿದ್ರ್ಯ ಹೋಗಿ, ಸಧನವಾಗುವವು. ಬೇಕಾದವರು ಬೇಕಾದ ಹೇರಿಟ್ಟುಕೊಳ್ಳಲಿ ಹೆಸರಿನಲ್ಲೇನೂ ಅರ್ಥವಿಲ್ಲವೆನ್ನುವದು. ಶಿರಹಟ್ಟಿಯವರು ತಮ್ಮ ಲಾಯಬ್ರರಿಗೆ ಲೋಕಮಾನ್ಯರ ಹೆಸರು ಕೊಟ್ಟು, ಅದನ್ನು ನಿಜವಾಗಿ ಲೋಕಮಾನ್ಯ ಮಾಡಿದ್ದು, ಪ್ರಶಂಸನೀಯವಾಗಿರುತ್ತದೆ.

ಕಾಶಿಯ ದಶಾಶ್ವಮೇಧಘಾಟಿನಲ್ಲಿ ಬಾಂಬು ಹಾರಿತು.

....(೦)....

ಕಾಶಿಯಲ್ಲಿ ದಶಾಶ್ವಮೇಧಘಾಟಿನಲ್ಲಿರುವ ಪೋಲಿಸ ಚೌಕಿಯ ಪಾವಟಿಗೆಯ ಮೇಲೆ ರಾತ್ರಿಯಲ್ಲಿ ಗುಪ್ತವಾಗಿ ಬಾಂಬು ಇಟ್ಟಿರು ಸಿಪಾಯಿಯು ಗಸ್ತಿ ತಿರಿಗಿ ಒಂದು ಪಾವಟಿಗೆ ಹತ್ತುವಾಗ ಬಾಂಬಿನ ಮೇಲೆ ಕಾಲಿಟ್ಟನು. ಕೂಡಲೆ ಬಾಂಬು ಹಾರಿ, ಸಿಪಾಯಿಯು ಎಚ್ಚರದಪ್ಪಿ ಬಿದ್ದನು.

ತಂತಿನ ಸುದ್ದಿಗಳು.

ರಾಜ್ಯಪದತ್ಯಾಗ ಮಾಡಿದ ಕಾಮಗಾರರು ವರ್ತಕ ಸಂಘವನ್ನು ಕೂಡಿಕೊಂಡು ಒಂದು ಸಭೆ ಮಾಡಿ, ತಾವು ಹೊಸ ಪ್ರಧಾನ ಮಂಡಲವನ್ನು ವಿರೋಧಿಸುವ [illegible]ಬೇಕೆಂದೂ, ಬರೇ ಪಾರ್ಲಮೆಂಟಿನಲ್ಲ, ಪಾರ್ಲಮೆಂಟಿನ ಹೊರಗೂ ಈ ರಾಜ್ಯಕಾರರ ವಿರುದ್ಧ ಚಳವಳಿಯನ್ನು ನಡೆಸಬೇಕೆಂದೂ ಠರಾವು ಮಾಡಿದರು. [illegible] ಮಂತ್ರಿಯಾದಂದಿನಿಂದ ಇಂಗ್ಲಂಡದಲ್ಲಿ ಸಂಪು [illegible] ಸಿದ್ಧ [illegible] ಎಂಟ ಸ್ವಾರ್ಥ [illegible] ಮಾಡಿ, ರಾಜ್ಯ [illegible]

ಸರ ಸಾಮುಯಲ್ [illegible] ಬಿಟ್ಟು ಹೋಗ[illegible] ಇವರಿಗೆ [illegible] ವರೆಂದೂ ದೂಷಣ ಕೊಟ್ಟಿದ್ದರು [illegible] ದೂಷಣವನ್ನು ಮಿ. [illegible] ಮಿ. ಮ್ಯಾಕಡೋನಾಲ್ಡರ ಬೆಂಬಲಿಗೆ ಕೊಟ್ಟಿದ್ದಾರೆ. [illegible] ಇಂಗ್ಲಂಡಕ್ಕೆ ಬಂದಾಗ, ಅವರನ್ನು [illegible] ಮಿ. ಮ್ಯಾಕಡೋನಾಲ್ಡ [illegible] ಇವರನ್ನು [illegible] ಇವರಿಂದಲೇ ತಿಳಕೊಳ್ಳತಕ್ಕವರಿದ್ದರು. ಹೀಗೆ ಗುಟ್ಟಿನ ಗೆಳೆಯರಾದ [illegible] ಒಬ್ಬ ತಮ್ಮ ಮೇಲೆ [illegible] ಟೀಕೆ ಮಾಡಬೇಕಾದರೆ - ತಮ್ಮದೇ [illegible] ಎಂದು ಮಿ. ಮ್ಯಾಕಡೋನಾಲ್ಡರು [illegible] ಕೊಳ್ಳಬೇಕಾಗುತ್ತದೆ.

ಮಿ. ಜನಾರ್ದನ ಸಾಹೇಬರು ಅನ್ನುವದೇನಂದರೆ- ಇವರು ಹೊಸಮಂತ್ರಿಯಾದ ಒಳ್ಳೆ ದೇಶಭಕ್ತ [illegible] ವಿದ್ಯುತ್ತಿನಿಂದ ಕಳಿಸಿದ ಸಂದೇಶವು ಕೂಲಿಕಾ

ರ ಪಕ್ಷದ ತಮ್ಮ ಲೋಕಪ್ರಿಯ ಮುಂದಾಳುತ್ವ ವ್ಯು ಗಿಯ ಕೆಲಸವನ್ನು ತಿಳಿದಿರಲಿಕ್ಕೇ ಬೇಕು. ಮಿ. ಸ್ವಾಮಿನ್ನ ಸಾಹೇಬರಂತೆ ಇವರೂ ಲೀಡರರಾಗಬಹುದು ನು. ಹಿಂದಿನವರ ಮುಖಂಡತ್ವದಲ್ಲಿ ಕಾಂಗ್ರೆಸ ಪಕ್ಷವು ತನ್ನ ಕರ್ತವ್ಯವನ್ನು ಅವ್ಯಾಹತವಾಗಿ ನಡೆಸುವದು. ಆ ಪಾಯವೆಷ್ಟರ ಪತ್ರಿಕೆಯನ್ನು ಹೇಗೆ ಉಪಯೋಗಿಸುವದೆಂಬುದನ್ನು ಮಿ. ವ್ಯಾಕಡೋನಾಲ್ಡ ಸಾಹೇಬರು ಹೇಳಿಲ್ಲ. ಕೆಲಸವಿಲ್ಲದೆ ಸರಕಾರದ ಹೇರಿಸಿದ ಕಂಗೆಟ್ಟಿಯಾಗುವಂಥ ಪರ ಪೆಟ್ಟಿಯ ಮೇಲೆ ಕಾಲು ಕಿಂಡು, ಒಬೆಟ್ಟನ್ನು ಸರಿಪಡಿಸುವದೇ ಅಥವಾ ನ್ಯಾಯವಾದ ರೀತಿಯಿಂದ ಅದನ್ನು ಬಾಯಿ ಒಡಿಸುವದೇ ಎಂಬದನ್ನು ಸಾಹೇಬರು ಹೇಳಿದ ಹಾಗೇ ಇಲ್ಲ. ಕಾನ್ಸರವೇಟಿವ್ಹರು ಒಡ್ಡಿಗೇಡಿಗಳಿಂದ ಎಚ್ಚರರಾಗಿದ್ದಾರೆ. ಈ ಕುರೀತಿಂದನ್ನು ತಾವೇ ಹಿಡಿಕೊಂಡು, ಗಂಡಾಂತರ ದಾಟುವಂಥ ಗಟ್ಟಿಗರು ತಾವೇ ಎಂದು ಇವರು ತಿಳಿದಿರಬಹುದು. ಹಾಗೆ ತಿಳಿಯದೆ, ಮೊದಲಿನಂತೆ ಕೂಲಿಕಾರ ಪಕ್ಷವನ್ನೇ ಹಿಡಿದು, ಅದನ್ನೇ ಮುಂದೆ ನಡಿಸಿಕೊಂಡು ಹೋಗುವದು ಉತ್ತಮ ಕೆಲಸವಾಗುತ್ತಿತ್ತು.

— —

ಮಿ. ವ್ಯಾಕಡೋನಾಲ್ಡ ಸಾಹೇಬರು ತಮ್ಮ ಕೂಟದವರನ್ನು ಅವರಿಗೆ ತಿಳಿಸುದಂತೆ ಬಿಟ್ಟುಬಿಟ್ಟು ಕಸಿವಾರ ಕೂಡಿದ ಕಮಿಟಿಯಲ್ಲಿ ತಾವು ವಿರುದ್ಧ ಒಣದವರ ಕೂಡ ಮಸಲತ್ತು ಮಾಡಿದಂತೆ ಒಬ್ಬರಿಗೂ ಕೇಳಲಿಲ್ಲ. ಸೋಮವಾರ ಬೆಳಗಾಗುವದರೊಳಗಾಗಿ ತಿಂತಿಂಗದವರನ್ನು ಕೂಡಿಕೊಂಡತೆ ಜಾಹೀರ ಮಾಡಿದರು. ಕೊನೆಯ ನಿಶ್ಚಯವೆಂದು ತಮ್ಮ ಮಂತ್ರಿ ಮಂಡಲ ಸೇರಿಸಿದ್ದರೆ – ಅವರು ಯಾವದೊಂದು ದರಿ ತೋರಿಸಬಂದಾಗಿತ್ತು. ಅದಕ್ಕೆ ಸಮಯ ಕೊಡದ್ದು ಸಾಹೇಬರ ದೊಡ್ಡ ತಪ್ಪಾಯಿತೆಂದು ಕೂಲಿಕಾರ ಮುಖಂಡರು ಇವರ ಮೇಲೆ ಆರೋಪ ಹೊರಿಸಿದ್ದಾರೆ.

ಹೊಸ ರಾಷ್ಟ್ರೀಯ ಸರಕಾರ ಮಾಡುವಾಗ ಸಿಂಧಿಯ ತಂಬದ ಕಡೆಗೆ ರಾಜಿಯ ಹಕ್ಕು ಬೇಕು. ಕದರು ಅಲ್ಲ; ಈ ಪ್ರಕಾರ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಪಂಡಿತ ಜವಾಹರಲಾಲರು ಜಾಹೀರ ಸಂದೇಶವನ್ನು ಪ್ರಕಟಮಾಡಿದ್ದಾರೆ.

ಪುಣೆಯ ವಾಡಿಯಾ ಹಾಲಿನಲ್ಲಿ ಗೋಲಟೇಬಲ್ ಬುಬ್ರಿ ಎಂದು ನಾಲ್ಕುನೂರು ಪುಸ್ತಕಗಳ ಮೇಲೆ ಸಿಕ್ಕೆ ಹೊಡೆದಿದ್ದಾರೆ. ಹೆಬ್ಬೆಟ್ಟಿನ ಗುರ್ತು ಹಿಡಿಯುವವರೊಂದಿಗೆ ಗುಪ್ತ ಪೋಲೀಸರು ಕವಾಸು ತಿರುಗುತ್ತಾರೆ.

ಹೈದರಾಬಾದ ಸಂಸ್ಥಾನದ ಪ್ರಜರ ಪರಿಷತ್ತು

....(೦)....

ನಿಜಾಮ ರಾಜ್ಯದಲ್ಲಿ ರಾಜಕೀಯ ಸಭೆಗೆ ಮಾತ್ರವಲ್ಲ, ಬೇರೆ ಸಭೆಗಳಿಗಾಗಿಯೂ ಹತ್ತುತ್ತು ದಿವಸ ಮುಂದಾಗಿ ಸರಕಾರದ ಅಪ್ಪಣೆ ಪಡಕೊಳ್ಳಬೇಕಾಗುತ್ತದೆ. ಪಂಡಿತ ಮೋತಿಲಾಲರು ಸ್ವರ್ಗಸ್ಥರಾದಾಗ, ಈ ಪ್ರತಿಬಂಧದ ದೆಸೆಯಿಂದ ಹೈದರಾಬಾದಿನಲ್ಲಿ ಸಭೆಯಾಗಲು ಅವಕಾಶವೇ ಇರಲಿಲ್ಲ. ಈ ತರದ ಮೊಗಲಾಯಿ ಹುಕುಮು ನಾಚಿಕೆಗೇಡಿತನದ್ದಿದ್ದರಿಂದ, ಅದರ ಬಿಗುವನ್ನು ಇತ್ತಲಾದ ಕೆಲವು ಬಾಬುಗಳಲ್ಲಿ ಕಸು ಕಡಿಮೆ ಮಾಡಿದ್ದಾರೆ. ರಾಜಕೀಯದಲ್ಲಿ ಯಾವ ಬಿಗುವೂ ಕಡಿಮೆಯಾಗಿಲ್ಲ.

ಸಂಸ್ಥಾನದಲ್ಲಿಯ ಪ್ರಜರು ತೀರ ಗುಲಾಮರಂತಿದ್ದಾರೆ. ಅವರಿಗೆ ವಿಚಾರ ಸ್ವಾತಂತ್ರ್ಯ, ವ್ಯಕ್ತಿಸ್ವಾತಂತ್ರ್ಯವಿಲ್ಲವೇ ಇಲ್ಲ. ತಮ್ಮ ರಾಜಕೀಯ ಬೇಡಿಕೆಗಳನ್ನು ಹೇಳಿಕೊಳ್ಳುವದಕ್ಕಾಗಿ ಪ್ರಜರು ಹೆಸರಿಗೆ ನಿಜಾಮ, ನಿಜವಾಗಿ ಬ್ರಿಟಿಶ ರಾಜ್ಯಕ್ಕೆ ಸೇರಿದ ಅಕೋಲೆಯಲ್ಲಿ ಹೋದ ಗುರುವಾರ ದಿವಸ ಪರಿಷತ್ತು ಕೂಡಿಸಬೇಕಾಯಿತು. ಬ್ಯಾರಿಸ್ಟರ ರಾಮಚಂದ್ರರಾವ ನಾಯಿಕರು ಅಧ್ಯಕ್ಷರಾಗಿದ್ದರು ಇವರು ತಮ್ಮ ಭಾಷಣದಲ್ಲಿ ಸಂಸ್ಥಾನದಲ್ಲಿಯ ಕೊರತೆ ಮತ್ತು ದೋಷಗಳನ್ನು ಮುಂದೆ ಕೊಟ್ಟಂತೆ ಹೇಳುತ್ತಾರೆ.

ಶಿಕ್ಷಣ, ಉದ್ಯೋಗವ್ಯವಸಾಯ ರಾಜ್ಯಕಾರಭಾರದಲ್ಲಿ ಲೋಕಮತದ ಪ್ರವೇಶ, ನ್ಯಾಯದಾನ, ಸಂಸ್ಕೃತಿ, ಧರ್ಮಸಹಿಷ್ಣುತೆ ಮುಂತಾದವುಗಳ ವಿಷಯವಾಗಿ ಜನರ ಸ್ಥಿತಿಯು ತೀರ ನಿಕೃಷ್ಟವಾಗಿರುತ್ತದೆ. ಶಿಕ್ಷಣಕ್ಕಾಗಿ ೭೮ ಲಕ್ಷ ರೂಪಾಯಿ ವೆಚ್ಚ ಮಾಡುತ್ತಾರೆ. ನೂರಕ್ಕೆ ಮೂವರುತೆ ಸಹ ಕಲಿತವರ ಪ್ರಮಾಣ ಬೀಳುವದಿಲ್ಲ. ಮುದ್ರಣ ಸ್ವಾತಂತ್ರ್ಯವಂತೂ ಇಲ್ಲವೇ ಇಲ್ಲ. ಪ್ರಜರ ಮಾತೃಭಾಷೆಯು ಉರ್ದು ಇರುವದಿಲ್ಲ. ಆದಾಗ್ಯೂ ಅದನ್ನು ಅವರ ಮೇಲೆ ಹೇರುತ್ತಾರೆ. ದೇಶಭಾಷೆಗಳು ಉಪವಾಸದಿಂದ ಬಳಲುತ್ತವೆ. ಖಾಸಗಿ ಶಾಲೆಗಳನ್ನು ಹಾಕಲಿಕ್ಕೆ ಹಲವು ತೊಂದರೆಗಳನ್ನೊಡ್ಡಿ ಮಾಡಿದ್ದಾರೆ. ಉದಾ॥ ವಿನೆ ಹೊತು ಕ ಹೆಣ್ಣುಮಕ್ಕಳಿಗೆ ಕಾಲೇಜ ಶಿಕ್ಷಣದ ಅನುಕೂಲತೆಯಿಲ್ಲ. ಶಿಕ್ಷಣದ ವಿಷಯವಾಗಿ ಹಾತ್ಮಿಸರಾಯರು ಮಾಡಿದ ಸೂಚನೆಯನ್ನು ದುರ್ಲಕ್ಷಿಸಿದ್ದಾರೆ. ಮಂತ್ರಿಗಳಲ್ಲಿ ಲೋಕಪಕ್ಷದವರಿಲ್ಲ ಮತ್ತು ಅವರು ಕಾಯದೆ ಮಂಡಲಕ್ಕೆ ಜವಾಬದಾರರಿಲ್ಲ. ಹೊಸ ರಾಜ್ಯಘಟನೆಯಲ್ಲಿ ಪ್ರಜಾಪ್ರತಿನಿಧಿಗಳನ್ನು ಸೇರಿಸಿಕೊಳ್ಳಬೇಕು. ಮತ್ತು ಬಜೆಟ್ಟದ ಮೇಲೆ ಲೋಕಮತದ ಅಧಿಕಾರವಿರಬೇಕು.

— —

ಮೋಟಾರ ಪ್ರವಾಸಿಗಳ ಸಂಘ

—(೦)—

ಮೋಟಾರಗಳಲ್ಲಿ ಇಂತಿಷ್ಟೇ ಜನರು ಕೂಡಬೇಕೆಂದು ಸರಕಾರದವರು ಗೊತ್ತುಮಾಡಿ, ಮೋಟಾರಿನ ಬಾಗಿಲದಲ್ಲಿ ಹಾಗೆ ಬರೆಯುವರು. ರೇಲ್ವೆಯಲ್ಲಿ ಒಂದು ಮಗ್ಗಲಿಗೆ ನಾಲ್ವರು ಕೂಡಬೇಕೆಂದು ಬರೆದಂತೆಯೇ ಸರಿ. ಆದರೆ ರೇಲ್ವೆಗಿಂತ ಮೋಟಾರಿನ ಭಯಂಕರ ಪರಿಣಾಮವಾಗುತ್ತದೆ. ಹಣ ಮತ್ತು ಸಾಮಾನುಗಳ ಭಾರದಿಂದ ಮೋಟಾರ ಹೊಡೆಯುವವರು, ಎಷ್ಟೋ ಅಂಥಾದ್ದರಲ್ಲಿ ಜನ ಸತ್ತುಹೋಗುತ್ತಾರೆ. ಈ ಅಪರಾಧಕ್ಕಾಗಿ ಮೋಟಾರಿನವರು ದಂಡ ಮತ್ತು ಶಿಕ್ಷೆಗೂ ಗುರಿಯಾಗಿದರೆ. ಆದರೂ ಅವರ ದ್ರವ್ಯಲೋಭವು ಪುನಃ ಪುನಃ ಮಾಡಿದ ತಪ್ಪನ್ನೇ ಮಾಡಿಸುತ್ತದೆ.

ಮೋಟಾರಿನವರಿಗೇ ಬುದ್ಧಿಗಲಿಸಲಿಕ್ಕೂ ಪ್ರವಾಸಿಕರಿಗೆ ಮೋಟಾರ ವಿಷಯಕವಾಗಿ ತಮ್ಮ ಹಕ್ಕುಗಳು ತಿಳಿಯುವಂತೆ ಸಾಂಗಲಿಯಲ್ಲಿ "ಮೋಟಾರ ಪ್ರವಾಸಿ ಸಂಘ" ಸ್ಥಾಪನೆ ಮಾಡಿ, ಪ್ರವಾಸಿಕರ ಹಕ್ಕುಗಳ ವಿಷಯವಾಗಿ ಒಂದು ಪತ್ರಿಕೆಯನ್ನು ಪ್ರಸಿದ್ಧ ಮಾಡಿದ್ದಾರೆ. ಇತ್ತ ಕಡೆಯವರೂ ಅತಿರವಾಗಿ ನಡೆಸಿ– ತಮ್ಮ ಜೀವವನ್ನು ತಾವೇ ಸಂರಕ್ಷಿಸಿಕೊಳ್ಳುವಂತಾಗಬೇಕು.

— —

ಡಾ. ಬ. ಲಡ್ಡೆಯವರು ಮಂತ್ರಿಯಾದರೆ ಕಲೆಕ್ಟರ ಮಿ. ಪಂಡಿತರು ಅವರ ಸೆಕ್ರೆಟರಿಯಾಗುವರು.

....(೦)....

ಮಿ. ಪಂಡಿತರಿಗೆ ಆಕ್ಟಿಂಗ ಕಲೆಕ್ಟರ ಕೆಲಸವಾಯಿತೆಂದು ಅವರ ಅಭಿನಂದನ ಮಾಡಲಿಕ್ಕೋಸ್ಕರ ಇಂಜಿನಿಯರ ತ್ರಿಭುವನದಾಸ ಅಧ್ಯಕ್ಷತೆಯ ಬೆಳಗಾವಿಯಲ್ಲಿ ತಾಂಬೂಲ ಸಮಾರಂಭವಾಯಿತು ಆಚಾರ್ಯರು ಪುಷ್ಪ ಸಿರ್ಜನ ಮಾಡಿದ ಮತ್ತು ಡಾ. ಬ. ಲಡ್ಡೆಯವರು ಮಿ. ಪಂಡಿತರ ಪ್ರಶಂಸೆ ಮಾಡಿದರು. ಇವರ ಹೊಗಳಿಕೆಯ ಉಪಕಾರ ಗಳಿಸುವಾಗ ಮಿ. ಪಂಡಿತರವರು ಡಾ. ಬ. ಲಡ್ಡೆಯವರು ಮುಂಬಯಿ ಸರಕಾರದ ಮಂತ್ರಿಯಾಗೆ ನಾನು ಅವರ ಕೈಕೆಳಗಿನ ಸೆಕ್ರೆಟರಿಯಾಗುವೆನೆಂದು ಭಾಷಣಮಾಡಿದ್ದಾರೆ. ಅಲ್ಪ ಸಂಖ್ಯಕರಾದ ಬ್ರಾಹ್ಮಣೇತರ ಜಾತಿಗೆ ಸೇರಿದ ಲಡ್ಡೆಯವರು ಮಂತ್ರಿಪದವಿಯನ್ನು ಅಲಂಕರಿಸಿ ಬರುವದೂ, ಮಿ. ಪಂಡಿತರು ಅವರ ಸೆಕ್ರೆಟರಿಯಾಗುವದೂ ವಿನೋದಾಶ್ಚರ್ಯವೇ ಸೈ.

ಧಾರವಾಡ

ಇವತ್ತಿನ ದಿವಸ ಪ್ರಾತಃಕಾಲದಲ್ಲಿ ಪೊಲೀಸರು ರಾಷ್ಟ್ರೀಯ ಸಿಶ ನೆಸುವ ಸನ್ನೇರಿಸಾವ ಸಮಾರಂಭ ಮಾಡುವರು. ಮತ್ತು ಸಾಯಂಕಾಲದಲ್ಲಿ ಜನ ವಿಷಯವಾಗಿ ಸಾರ್ವಜನಿಕ ಸಭೆ ಜರುಗುವದು.

THE ANKALIGI BANK LTD.

Head Office
Kamankatta Dharwar
Branches
Ranebennur & Hirekerur
5%
Interest allowed on
ANNA SAVINGS BANK
DEPOSIT

Dharwar 3—1—1927 | K. B. ANKALIGI Managing Director

ಶೀಘ್ರ!! ಪತ್ರ!! ಶೀಘ್ರ!!

ಶ್ರೀ ದತ್ತ ವೀವಿಂಗ ಮಿಲ್

ಹುಬ್ಬಳ್ಳಿ

ಕರ್ನಾಟಕದಲ್ಲಿ ಇದೇ ಮೊದಲನೆಯ ಶೀರೆಯ ಮಿಲ್ಲು.

ಇದರಲ್ಲಿ ಹಲವು ಬಣ್ಣದ ನಮೂನೆಗಳ ಸುಂದರ ಶೀರೆಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ. ಪರೀಕ್ಷೆ ಮಾಡಿ, ನಿಮಗೆ ಬೇಕಾದ ಮಾಲು ತರಿಸಿ, ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ. ಒಗ್ಗಿ ಹೋದರೆ - ಮಾಲು ತಿರುಗಿ ತೆಗೆದುಕೊಳ್ಳುವೆವು.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ ೬—೦—೦
ಕೃಷ್ಣ ಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೬

೮—೧೧—೨೬ - ಮೈಸೂರ ಸ್ಟೋರ,
ಬೆಳಗಾವಿಯವರಗಲ್ಲಿ
ಹುಬ್ಬಳ್ಳಿ

ವೆಂಕಟೇಶ ತಿರಕೊ ಕುಲಕರಣಿ ಗಳಗನಾಥ

—ಇವರು ಬರೆಯುತ್ತಿರುವ—

ರಹಸ್ಯ ಪ್ರಕಾಶಕವಾದ ಸಚಿತ್ರ ಮಹಾಭಾರತಾಮೃತದ

ಆದಿ ಪರ್ವ.

ಕೇಳುವ ಸ್ವೀಕಾರ್ಯದ ಸಲಹತ್ತು ವರ್ಷಗಳ ಅನುಭವದಿಂದ ಈ ಅತಿ ಗೌರವದ ಪ್ರಚಂಡ ಪುಸ್ತಕವನ್ನು ಬರೆಯತೊಡಗಿದ್ದೇವೆ. ಆದಿಪರ್ವವು ಈಗ ಮಾರಾಟಕ್ಕೆ ಸಿದ್ಧವಾಗಿರುವದು. ಇದರ ಬೆಲೆ ೩ ರೂ-೧ ಟಪಾಲಿನಿಂದ ತರಿಸುವವರ ಖರ್ಚು ನಿರಾಳ ಹಾಕಿ ೩-೬-೦ ಗೆ ವಿ ಪಿ ಮಾಡುವೆವು ವಿ. ಪಿ. ತೆಗೆದುಕೊಳ್ಳುವವರು ೩-೮-೦ ಕೊಟ್ಟರೆ ತೀರಿತು. ಒಟ್ಟು ಪುಸ್ತಕಗಳು ಏಳು ಅಥವಾ ಎಂಟು ಆಗಬಹುದು ಇಡೀ ಭಾರತದ ಬೆಲೆ ೧೫ ರಿಂದ ೨೦ ರೂಪಾಯಿಗಳ ವರೆಗೆ ಬೀಳಬಹುದು. ಇದರಲ್ಲಿ ಬರೆಯುತ್ತಿರುವ ರಹಸ್ಯಗಳು ಅತಿ ಗೌರವದವಾಗಿರುವವು ರಾಜಕೀಯ ವಿಚಾರದ ಈ ಪ್ರಚಂಡ ಗ್ರಂಥವನ್ನು ಈಗಿನ ಕಾಲದಲ್ಲಿ ಓದಲೇಬೇಕು. ಈಗ ಗಿರಾಕಿದಾರರಾಗುವವರಿಗೆ ಮುಂದಿನ ಪುಸ್ತಕಗಳು ಮುನ್ನಾಲು ಬೆಲೆಗೆ ಸಿಗುವವು. ನಮ್ಮ ಪರಿಚಯವು ಕನ್ನಡಿಗರಿಗಿರುವದರಿಂದ ಹೆಚ್ಚು ಬರೆಯುವ ಕಾರಣವಿಲ್ಲ. ಇಡಿಯ ಭಾರತದ ೫೦೦೦ ಪ್ರತಿಗಳಿಗೆ ೩೦-೩೫ ಸಾವಿರ ರೂಪಾಯಿ ವೆಚ್ಚವಾಗುವವು. ಕಾರ್ಯಗೌರವವರಿತು ಎಲ್ಲ ಕನ್ನಡಿಗರೂ ನಮ್ಮ ಮೇಲಿನ ಅಂತಃಕರಣದಿಂದ ಸಹಾಯಮಾಡತಕ್ಕದ್ದು. ಅಲ್ಲದೆ ನಮ್ಮಲ್ಲಿಯ ಈಗ ಸಿಲಕ್ಕು ಇರುವ ಕೆಳಗಿನ ಪುಸ್ತಕಗಳಲ್ಲಿ ಬೇಕಾದವನ್ನು ತೆಗೆದುಕೊಂಡು ಆ ದ್ವಾರದಿಂದಲೂ ನಮ್ಮ ಈ ದೊಡ್ಡ ಕಾರ್ಯಕ್ಕೆ ಸಹಾಯಮಾಡಬಹುದು.

—ಪುಸ್ತಕಗಳ ಹೆಸರು ಮತ್ತು ಕ್ರಯದ ಪಟ್ಟಿ—

೧ ಮಾಧವ ಕರ[illegible]ವಿಲಾಸ	೩ ೧೨ ೦	೧೧ [illegible]ಕ್ಷೇತ್ರ	೧ ೦ ೦
೨ ಮಹಾಭಾರತಾಮೃತ (ಆದಿಪರ್ವ)	೩ ೮ ೦	೧೨ [illegible]ತೇಜ	೧ ೦ ೦
೩ ಕೈವಲ್ಯ ಭಾರ್ಗವ	೭ ೮ ೨	೧೩ [illegible]	೧ ೧ ೨
೪ ಭಗವದ್ಗೀತಾಮೃತ	೩ ೮ ೦	೧೪ (೧೧)ನೇ (೧೨)ನೇ ಸ್ಕಂಧ ಭಾಗವತ	೧ ೦ ೬
೫ ಶ್ರೀ ಶಂಕರ ಬಾಲ ಯೋಗ	೩ ೦ ೦	೧೫ [illegible]	೦ ೧೨ ೦
೬ [illegible]	೧ ೮ ೦	೧೬ ಗುರುಪ್ರಸಾದ	೦ ೧೨ ೬
೭ ಭಾರ್ಗವತೇಜ	೧ ೮ ೦	೧೭ ಸದ್ಗುರು ಪ್ರಭಾವ	೦ ೧೨ ೦
೮ ಕರ್ಮಕಥೆ	೧ ೮ ೨	೧೮ [illegible] ಪರಿಚಯ	೦ ೮ ೦
೯ ಈಶ್ವರಭಕ್ತ	೧ ೦ ೨	೧೯ ಭಗವದ್ಗೀತಾ ತಾತ್ಪರ್ಯ	೦ ೮ ೨
೧೦ ಗೃಹಕಲಹ	೧ ೦ ೦	೨೦ [illegible]	೦ ೮ ೦

ಸದ್ಗುರು ಆಫೀಸು
ಹಾವೇರಿ

ನಿಮ್ಮ
ವೆಂ. ತಿ. ಕುಲಕರಣಿ, ಗಳಗನಾಥ.

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದಾಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷ [illegible] ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ [illegible]

R. N. B. 1443.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ, ಬಿ.ಎ.

ವರ್ಷ ೧೨) ಧಾರವಾಡ ಸೋಮವಾರ ತಾರೀಖು ೩೧ ನೇ ಆಗಸ್ಟ್ ೧೯೩೧ (ಸಂಚಿಕೆ ೧೯೬

ಶ್ರೀ ಕಂಠೀರವ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ)

ಸೂಳಿಕೆರೆ

ಮತ್ತು ———— ಧಾರವಾಡ

ಕಂಚಗಾರಗಲ್ಲಿ

ನಮ್ಮಲ್ಲಿ ಇದೀ ಕರ್ನಾಟಕದಲ್ಲಿ ಅಚ್ಚಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ [illegible] ಸಕಲಕ ಚಿತ್ರಗಳೂ ಒಟ್ಟಿನಿಗೆ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುವವು. [illegible] ಬೇಕಾದವರು [illegible] ಬರೆಯಬೇಕು. [illegible] ಮಾದರಿಗಾಗಿ ಕೆಲವು ಹೆಸರು ಕೆಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮ್ರಾಜ್ಯ ಸಂ. ೧.೨. ಪ್ರತಿ ೧ಕ್ಕೆ	೨- ೪-೦
೨. ಕಥೆಗಳಸ್ತೋಮಗೊಂದಿ ಬೀಚಿ ಬಲ್ಲ ಚರಿತ್ರೆ ನಟತ್ರ	[illegible]
೩. ಛತ್ರಪತಿ ಶಿವಾಜಿ ಮಹಾರಾಜ	೨-೧೨-೨
೪. ಕರ್ನಾಟಕ ಸಿಂಹಾಸನ ಸ್ಥಾಪನೆ	೧- ೦-೦
೫. ಚರಿತ್ರ ಸಂಗ್ರಹ ಭಾ. ೧.	೧- ೪-೦
೬. ಅಳಸಿಂಗರಾಚಾರ್ಯರ ರಾಮಾಯಣ ೯ ನ ಪುಟಗಳು	[illegible]
೭. ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	೨ -೦-೦
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩	೧೨-೦-೦
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ ಪ್ರತಿ ೧ಕ್ಕೆ	೧- ೮-೦
ಲ್ಯಾಂಡ ರೆವ್ಹಿನ್ಯೂ ಕೋಡು	೨-೧೧-೦
೧೧. ಗ್ರಾಮ ನಮೂನೆ ಲೆಕ್ಕದ ಪುಸ್ತಕ	೨-೧೩-೦
೧೨. ಸ್ತ್ರೀಧರ್ಮನೀತಿ, ಗೃಹಕಾರ್ಯ ನಿರ್ವಾಹಕ್ರಮ ಪ್ರತಿ ೧ಕ್ಕೆ	೦-೧೦-೦
೧೩. ಇಸೂಪನೀತಿ ಕಥೆ ಭಾ. ೧, ೨,	೨- ೪-೦
೧೪. ಕಾರ್ತನ ಕಂಠಾಭರಣ	೧-೧೦-೦

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ.

ಜೋಶಿ, ಗುಂಜೀಕರ ಮತ್ತು ಕಂಪನಿ

ಶುಕ್ರವಾರಪೇಟೆ ಧಾರವಾಡ

ಇವರನ್ನು

ಮುಂಬೈ ಪ್ರಾವ್ಹಿನ್ಸಿಯಲ್ ಕೋ. ಇನ್ಸ್ಯುರನ್ಸ ಕಂಪನಿ, ಲಿ.

ಇವರು

ಧಾರವಾಡ ಜಿಲ್ಲೆಯ

ಚೀಫ್ ಏಜಂಟ

ರಾಗಿ ನಿಯಮಿಸಿದ್ದಾರೆ.

ಈಗ ಜಿಲ್ಲೆಯ ಎಲ್ಲ ಮುಖ್ಯ ಸ್ಥಳಗಳಲ್ಲಿ

ಸಬ್ ಏಜಂಟ

ರನ್ನು ನಿಯಮಿಸುವದಿದೆ. ಈ ಕೆಲಸ ಮಾಡಬಯಸುವವರು ತಮ್ಮ ಖಾತ್ರಿಯ ಬಗ್ಗೆ ಎಲ್ಲ ಮಾಹಿತಿ ಕೊಟ್ಟು ಚೀಫ್ ಏಜಂಟರಿಗೆ ಬರೆಯಬೇಕು. ಖಾತ್ರಿಯಿಂದ ಕೆಲಸ ಮಾಡುವವರಿಗೆ ಪೂರ್ಣ ಕಮೀಶನ ಸಿಗುವದು

ದಿ ಧಾರವಾಡ ಅರ್ಬನ ಕೋ.ಆ.

ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟೀಜ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರುಗಳ [illegible] ಲಕ್ಷದ ಮೇಲಿಂದ. ಈ ಬ್ಯಾಂಕಿನ ಮೂಲಕ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ಮಾಡಲ್ಪಡುವವು. ರೂ: ೧. ಮತ್ತು ಮೇಲ್ಪಟ್ಟ ಡಿಪಾಜಿಟುಗಳಿಗೆ ಚನ್ನಾಗಿ [illegible] ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ		ರೂ. ೧೨/೮.
೬	,,	೭-೦-
೩	,,	೪-೮-
ವಾರ ಪತ್ರಿಕೆ ೧ ವರ್ಷಕ್ಕೆ		೩-೧೨-

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಿರಿ.

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ತಾರೀಖು ೩೧-೮-೧೯೩೧ನೇ ಇಸ್ವಿ

ಮಹಾತ್ಮರು ಕಡೆಗಾದರೂ ವಿಲಾಯತಿಗೆ ಪ್ರಯಾಣ ಮಾಡಿದರು

ಒಂದು ವಾರದಲ್ಲಿ ಹಿಂದುಸ್ಥಾನದ ರಾಜಕೀಯ ಆಕಾಶದಲ್ಲಿ ಭಯಾನಕವಾಗಿ ಕವಿದ ಮೋಡ ಹರಿದು, ಸ್ವಚ್ಛವಾಯಿತು. ದೇವರು ಭಯವನ್ನುಂಟು ಮಾಡಿ, ಭಯನಾಶಕನಾಗಿದ್ದಾನೆಂದೂ, ಅಘಟಿತ ಘಟನೆಯನ್ನು ಮಾಡತಕ್ಕವನೆಂದೂ ಹೇಳುವ ಮಾತಿನ ಪ್ರತ್ಯಕ್ಷ ನಿದರ್ಶನವು ಈ ವಾರದಲ್ಲಿ ಬಂತು. ಮಹಾತ್ಮರು ಹಿಡಿದ ಕೆಲಸವನ್ನು ಬಿಡತಕ್ಕವರಲ್ಲ. ತಪಶ್ಚರ್ಯ ಮಾಡುವ ಯೋಗಿಗಳು ಸ್ವಾರ್ಥವಿಲ್ಲದಿದ್ದರೂ, ಪರಹಿತ ಮತ್ತು ಪರಮಾರ್ಥಕ್ಕಾಗಿ ಒಂದು ಪ್ರಕಾರದ ದುರಾಗ್ರಹಿಗಳಾಗುತ್ತಾರೆ. ಅದೇ ತೆರನಾಗಿ ಮಹಾತ್ಮರು ಕಡೆತನಕ ತಮ್ಮ ಹಿಡಿತ ಬಿಡುವರಲ್ಲೆಂದು ಕಂಡುಬಂದದ್ದರಿಂದಲೇ ರಾಜ್ಯಕರ್ತರು ಅವರ ಕೂಡ ರಾಜಿಗೆ ಸಿದ್ಧರಾದರು.

ಸಮಯ ಒಳ್ಳೇ ಬಿಕ್ಕಟ್ಟಿನದಾಯಿತು. ಇಂಗ್ಲಂಡದಲ್ಲಿ ಮಂತ್ರಿಗಳಲ್ಲಿ ಬದಲಾಗುವ ಸಮಯಕ್ಕೆ ಸ್ವತಃ ಭಾರತ ಮಂತ್ರಿಯವರು ಸ್ಥಾನತ್ಯಾಗ ಮಾಡತಕ್ಕವರು ತಾವು ಅಧಿಕಾರಚ್ಯುತರಾಗತಕ್ಕವರು- ಮಹಾತ್ಮರ ಕೂಡ ರಾಜಿಯಾಗಬೇಕೆಂದು ಹಿಂದುಸ್ಥಾನ ಸರಕಾರಕ್ಕೆ ಗುಪ್ತವಾಗಿ ತಿಳಿಸಿದರು. ವಾದವು ಒಂದು ವಾರ ಮುಂದೆ ಬಿದ್ದಿದ್ದರೆ- ಈಗಿನ ಪರಿಸ್ಥಿತಿಯು ಬೇರೊಂದು ತರಹವಾಗಿ ಹೋಗುತ್ತಿತ್ತು.

ಹಿಂದುಸ್ಥಾನದಲ್ಲಿಯೂ ಅದೇ ರೀತಿಯಾಯಿತು. ಸರಕಾರ ಮತ್ತು ಪ್ರಜರ ನಡುವೆ ಕಾಂಗ್ರೆಸವು ತೀರ್ಮಾನ ಮಾಡುವಂಥ ಜವಾಬದಾರ ಸಂಸ್ಥೆಯಾಗಿರುತ್ತದೆಂಬುದನ್ನು ಸರಕಾರವು ಒಪ್ಪಬೇಕಾಗಿತ್ತು. ಆ ಪ್ರಕಾರ ಸರಕಾರವು ಒಪ್ಪುವದು ಕಠಿಣವಾಗಿ ತೋರಿದರೂ ಕೊನೆಯಲ್ಲಿ ಪೂರ್ಣವಾಗದಿದ್ದರೂ, ಸರಕಾರವು ಬಹು ಮಟ್ಟಿಗೆ ಕಾಂಗ್ರೆಸದ ಅಧಿಕಾರವನ್ನು ಒಪ್ಪಿತು. ಹೀಗೆ ಒಪ್ಪಬೇಕಾದರೆ ಸರ [illegible] ಜಹಾಂಗೀರ, ಸರ ಶಾಮಸ್ವಾಮಿ ಅಯ್ಯರ, ಸರ ಚಿಮನ, ಸರ ಪಟ್ಟಾಣಿ, ಜಯಕರ ಅನಸಾರಿ ಹೀಗೆ ಐವರು ಮಧ್ಯಸ್ಥಿ ಮಾಡಿದ್ದರಿಂದ ಯುರೋಪಿಯನ್ನ ಮೊಂಡರು ತಮ್ಮ ಜಿದ್ದನ್ನು ಬಿಟ್ಟು ರಾಜಿಗೆ ಒಡಂಬಟ್ಟರು. ಇವರು ಮಧ್ಯಸ್ಥಿಕೆ ಮಾಡದಿದ್ದರೆ- ರಾಜಿಯು ಬೇರೊಂದು ಸ್ವರೂಪ ಹೊಂದುತ್ತಿತ್ತು.

ಮಹಾತ್ಮರ ಪ್ರಯಾಣವು ಎರಡು ಸಾರೆ ಕುತ್ತು ದಾಟಿತು. ಅವರು ಹೋಗುವದರಿಂದ ಲಂಡನದಲ್ಲಿ ಮೂರನೆಯ ಕುತ್ತು ದಾಟಬೇಕಾಗಿರುತ್ತದೆ. ಅಲ್ಲಿ ಮೂರು ಪಕ್ಷಗಳುಂಟು. ಮಹಾತ್ಮರು ಬರಬೇಡರೆಂಬುವರು. ಬರಬೇಕೆಂಬುವರು. ಬಂದಿದ್ದರೆ- ಅನಿಷ್ಟವೇ ಆಗುವದೆಂಬುವರು. ಅನಿಷ್ಟವಾಗುವದೆಂಬುವರು ಸದ್ಯ ರಾಜ್ಯಾಧಿಕಾರ ಕಳಕೊಂಡರು. ಮಹಾತ್ಮರು ಬೇಡೆಂಬುವರೂ, ಬರಲೇಬೇಕೆಂಬುವರೂ ಮಹಾತ್ಮರ ಕೊರಳಿಗೆ ಮಂಗಳ ಮಾಲೆ ಹಾಕುವರು. ಕೂಲಿಕಾರರಂತೆ ಆನಂದದಿಂದ ಇವರನ್ನು ಬರಮಾಡಿಕೊಂಡಿರುವದಿಲ್ಲ. ರಾವುಂಡ ಟೇಬಲದಲ್ಲಿ ಕಾಂಗ್ರೆಸ ಮತ್ತು ಕಾನ್ಸರವೇಟಿವ್ಹರ ಪಕ್ಷಗಳ ನಡುವೆ ಘನ ಯುದ್ಧವಾಗುವದೆಂದು ಇಂದೇ ಭವಿಷ್ಯ ಹೇಳಬಹುದು.

ರಾಜಿಯಾಗಿ ಮಹಾತ್ಮರು ಸಿಮ್ಲಾದಿಂದ ಹೊರಡಲಿಕ್ಕೆ ತಡವಾಗಲು ಅವರಿಗಾಗಿ ಕಾಲ್ಕಾದ ತನಕ ಸ್ಪೇಶಲ ಟ್ರೇನು ತಂದರು. ಹೊರಡುವಾಗ ನಿಮಗಾವ ಸಂದೇಶ ಹೇಳತಕ್ಕದ್ದಿದೆಂದು ಪ್ರಶ್ನೆ ಮಾಡಲು- ಕಾಂಗ್ರೆಸದ ಧ್ಯೇಯವೇ ನನ್ನ ಧ್ಯೇಯ ಅದರ ಉದ್ದೇಶಗಳನ್ನು ಸಾಧಿಸಿಕೊಳ್ಳುವದೇ ನನ್ನ ಕರ್ತವ್ಯವೆಂದು ಮಹಾತ್ಮರು ಉತ್ತರ ಕೊಟ್ಟಿದ್ದಾರೆ. ಕಾಂಗ್ರೆಸದ ಧ್ಯೇಯವು ಹಿಂದುಸ್ಥಾನವು ಸಂಪೂರ್ಣ ಸ್ವತಂತ್ರವಾಗಬೇಕೆಂದಿರುತ್ತದೆ. ರಾವುಂಡ ಟೇಬಲಿನಲ್ಲಿ ಇತ್ತ ಹೇಳುವದಾದರೆ- ಹೊಸ ಭಾರತ ಮಂತ್ರಿಯಾದ ಸರ ಸ್ಯಾಮುಯುಲ ಹೋರ ಸಾಹೇಬರು ತಾವಲ್ಲದೆ, ತಮ್ಮ ಪಕ್ಷದ ಪರಿಯಿಂದ ಈ ವಿಚಾರವನ್ನು ವಿರೋಧಿಸುವರು. ಏಕೆಂದರೆ- ಹಿಂದುಸ್ಥಾನವು ಸ್ವತಂತ್ರವಾಗಬೇಕೆಂಬ ವಿಚಾರಕ್ಕೆ ತಾವೆಂದೂ ಒಪ್ಪತಕ್ಕವರಲ್ಲೆಂದು ಈ ಮುಂದಾಗಿ ಸಾರಿ ಹೇಳಿದ್ದಾರೆ.

ಮಹಾತ್ಮರು ರಾವುಂಡ ಟೇಬಲಕ್ಕೆ ಹೋಗುವದು ಎಷ್ಟು ಸಂತೋಷವೋ! ಅವರು ದಿಗ್ವಿಜಯ ಮಾಡಿ ಬರುವರೆಂಬುದು ಅಷ್ಟೇ ಸಂಶಯದ ಸಂಗತಿಯಾಗಿರುತ್ತದೆ. ಮಹಾತ್ಮರು ವಿಲಾಯತಿಗೆ ಹೋದ ಬಳಿಕ ಎಷ್ಟೇ ಕಷ್ಟಗಳಾದರೂ ಅವರ ವ್ಯಕ್ತಿಯು ಕೂಲಿಗಾರ ಪಕ್ಷದವರಿಂದಾಗ್ಗುವದು ಖಂಡಿತ. ಅವರ ಧ್ಯೇಯಸಾಧನೆಯು ಕೂಲಿಕಾರರಿಂದ ಸುಲಭವಾದಂತೆ ಲಿಬರಲ್ಲರಿಂದಾಗಲಾರದು. ಆದ್ದರಿಂದ ಈ ವಾದದಲ್ಲಿ ಹಿಂದುಸ್ಥಾನದ ಲಿಬರಲರೆಂಬ ಮಹಾಶಯರು ಕತ್ತರಿಯಲ್ಲಿ ಸಿಕ್ಕಂತಾಗುವರು. ಲಿಬರಲರು ಹಿಂದುಸ್ಥಾನಕ್ಕೆ ಗುಲಾಮಗಿರಿ ಕಟ್ಟುವರೋ ಸ್ವಾತಂತ್ರ್ಯ ತರುವರೋ ಎಂಬುದರ ಪರೀಕ್ಷೆಯೇ ಆಗುವದು.

ಹಾವೇರಿ ಮ್ಯುನಿಸಿಪಾಲಿಟಿಯ ವ್ಯರ್ಥ ವಾದ

....(೧)....

ಹಾವೇರಿ ಮ್ಯುನಿಸಿಪಾಲಿಟಿಯ ಚುನಾವಣೆಯಾಗಿ ಸನಿಯಕ್ಕೆ ಒಂದು ತಿಂಗಳಾಯಿತು. ಆದರೂ ಆ ಚುನಾವಣೆಯ ಮೂಲದಲ್ಲಿದ್ದ ವಾದದ ಪ್ರಶ್ನವು ಇನ್ನೂ ತೀರಿಲ್ಲ. ಪಂಚರು ಮಾಡಿದ ನಿರ್ಣಯವನ್ನೇ ಒಪ್ಪಬೇಕೆಂದು ಯಾವ ವೇದಾಗಮವೂ ಹೇಳುವದೇ ಇಲ್ಲ. ಇಂಗ್ರೇಜಿ ಕಾಯಿದೆಯಂತೂ ಹೇಳುವದೇ ಇಲ್ಲ. ಪಂಚರ ಅವಾರ್ಡ ತಪ್ಪಾಗಿದ್ದರೆ- ಹಾಯಕೋರ್ಟಿನವರು ಅದನ್ನು ತಿದ್ದಿ ಹಾಕುತ್ತಾರೆ. ಇಂಥ ನೂರಾರು ಉದಾಹರಣೆಗಳನ್ನು ತೋರಿಸಬಹುದು. ಪಂಚರು ಮಾಡಿದ ನಿರ್ಣಯವು ತಮಗೆ ಯೋಗ್ಯತೋರದಿದ್ದರೆ- ಉಮೇದವಾರರು ಅವರಿಗಿಂತ ಹೆಚ್ಚಿನವರಾದವರ ಮುಂದೆ ದೂರಿಕೊಂಡರೆ- ಎಂದೆಂದಿಗೂ ತಪ್ಪಾಗುವದಿಲ್ಲ. ಮತ್ತು ಹಾವೇರಿಯ ಉಮೇದವಾರರು ದೂರಿಕೊಂಡದ್ದು ತಪ್ಪಾಗಲಿಲ್ಲ.

ಶ್ರೀ ದಿವಾಕರ ಮತ್ತು ಹುಕ್ಕೇರಿಕರ ದ್ವಯರು ತಮಗೆ ಕಂಡಬಂದ ಪ್ರತ್ಯಕ್ಷ ಸ್ಥಿತಿಯನ್ನು ವರ್ತಮಾನ ಪತ್ರಗಳಲ್ಲಿ ಪ್ರಸಿದ್ಧ ಮಾಡಿದರೆ ಅವರ ಮೇಲೆ ಪಂಚರ ಬೇಳೆ ಒಡೆಯುವಂಥವರು ರಕ್ತವನ್ನೇಕೆ ಕಾರಬೇಕೆಂಬುದು ನಮಗಂತೂ ತಿಳಿಯುವದಿಲ್ಲ. ಪಂಚರ ನ್ಯಾಯವೇ ಯೋಗ್ಯವೆಂದು ಸಾಧಿಸುವಂಥವರು ತಿರುಗಿಯಾದರೂ ಶ್ರೀ. ದಿವಾಕರ ಮತ್ತು ಹುಕ್ಕೇರಿಯವರು ತಮಗೆ ನ್ಯಾಯಬುದ್ಧಿಯಿಂದ ತೋರಿದ್ದನ್ನು ಹೇಳಿದರೆ- ಅದನ್ನೇಕೆ ಅಪಮಾನ್ಯ ಮಾಡಬೇಕು. ಆಪಲ್ಯಾ ತೋ ಬಾಬ್ಯಾ ದುಸಱ್ಯಾ ತೋ ಕಾರಟ್ಯಾ ಎಂದು ಮರಾಠಿಯಲ್ಲಿ ಹೇಳುವಂತಿರುವ ವರ್ತನವು ನಗೆಗೇಡೇ ಸರಿ.

ಶ್ರೀ. ದಿವಾಕರ ಮತ್ತು ಹುಕ್ಕೇರಿಯವರ ಮೇಲೆ ಪಕ್ಷಪಾತದ ಆರೋಪ ಹೊರಿಸುವದೂ "ಯಾವ ಕಾರಣದಿಂದಲೋ ಇಲ್ಲದ್ದೊಂದು ತಮಗೆ ಸಂಬಂಧ ಪಡದ ವಿಷಯವನ್ನು [illegible] ದಿವಾಕರ ಹುಕ್ಕೇರಿಕರರು ಆ ಕುತ್ಸಿತ ಅಸ್ಪೃಶ್ಯ ಸಂಗತಿಯನ್ನು ಇವತ್ತಿಗೂ ಖಂಡಿಸಿರುವದಿಲ್ಲ; ಅಲ್ಲಗಳೆದೂ ಇರುವದಿಲ್ಲ. ಇದು ಬ್ರಾಹ್ಮಣ್ಯದ ಕೃತಿಯೆಂದು ಜನರು ತಿಳಿಯಲಿಕ್ಕಿಲ್ಲವೇ?" ಎಂದು

ಟೀಕೆಯು ಪದೂಕೆಲಸವಿಲ್ಲದೆ, ಕಾರಣವಿಲ್ಲದೆ ಬ್ರಾಹ್ಮಣ ಬ್ರಾಹ್ಮಣೇತರ ಭೇದವೆಬ್ಬಿಸುವದೂ ಹೀನತನವಾಗುತ್ತದೆ. ಶ್ರೀ. ದಿವಾಕರ ಹುಕ್ಕೇರಿಯವರು ತಮ್ಮ ಕಾಲಿಗೆ ದುರ್ಭೋರ್ಕಿಕ ತಂದುಕೊಳ್ಳುವಂಥ ಯಾವ ಕೃತ್ಯವನ್ನೂ ಮಾಡಲು ಹಾವೇರಿಯಲ್ಲಿ ಮಾಡಲಿಲ್ಲೆಂದು ಕರ್ನಾಟಕದಲ್ಲಿ ಯಾರು ಬೇಕಾದವರು ಹೇಳುವರು. ಇವರ ಮೇಲೆ ನಿಂದ್ಯವೆನಿಸುವಂಥ ಟೀಕೆ ಮಾಡಿ ಸೂರ್ಯನ ಮೇಲೆ ಮಣ್ಣು ತೂರಿ, ತಮ್ಮ ಕಣ್ಣೊಳಗೇ ಮಣ್ಣು ಚಲ್ಲಿ ಕೊಂಡಂತಾಗಿರುತ್ತದೆ

ಮಹಾತ್ಮರ ಪ್ರಯಾಣದ ವಿಶೇಷ ಸಂಗತಿಗಳು.

ಮಹಾತ್ಮರು ಮುಂಬಯಿಗೆ ಬಂದ ಕೂಡಲೆ ಬೋರಿಬಂದರ ಸ್ಟೇಶನದಲ್ಲಿಯು ಅಜಾದ ಮೈದಾನದಲ್ಲಿ ೪೦-೫೦ ಸಾವಿರ ಜನರು ಇವರ ದರ್ಶನ ತಕ್ಕೊಂಡರು. ಆಗ ಮಹಾತ್ಮರ ಹಾಗು ಪಂಡಿತ ಮಾಲವಿಯಾಯವರ ಭಾಷಣಗಳಾದವು.

ಸತ್ಯ ಮತ್ತು ಅಹಿಂಸೆಯಿಂದಲೇ ನಾನು ಪರಿಷತ್ತಿನಲ್ಲಿ ಚಳವಳಿ ಮಾಡುವೆನು. ಕಾಂಗ್ರೆಸವು ಎಲ್ಲಾ ಜಾತಿಯವರ ದೆಸೆಯಿಂದಿದ್ದು, ಸನ್ನಿಂದ ಯಾವ ಜಾತಿಯ ಹಾನಿಯಾಗಲಾರದೆಂದು ವಚನ ಕೊಡುತ್ತೇನೆಂದು ಮಹಾತ್ಮರು ಆಶ್ವಾಸನ ಕೊಟ್ಟರು.

ಸ್ವಾತಂತ್ರ್ಯದ ದೆಸೆಯಿಂದ ಪರಕೀಯರಿಗೆ ಬಾಯಿ ತೆರೆಯುತಕ್ಕದ್ದಲ್ಲ. ಆದರೆ ನಾವು ಪರತಂತ್ರರಿದ್ದರಿಂದ, ಸ್ವಾತಂತ್ರ್ಯಕ್ಕಾಗಿ ವಿಲಾಯತಿಗೆ ಹೋಗಬೇಕಾಗಿದೆ. ಸ್ವಾತಂತ್ರ್ಯ ತರುವೆನೆಂದು ಪಂಡಿತಜಿಯವರು ಭಾಷಣ ಮಾಡಿದ್ದಾರೆ.

ಹಡಗವೇರುವಾಗ ಪ್ರತಿಯೆಬ್ಬರ ವ್ಯವಸ್ಥೆಯು, ಫೋಟೋ ಇವುಗಳು ಪಾಸಪೋರ್ಟ ಬೇಕಾಗುತ್ತದೆ. ಪೋಲಿಸರಿಗೆ ಮಹಾತ್ಮರ ಫೋಟೋ ಬೇಡುವ ಧೈರ್ಯವಾಗಲಿಲ್ಲ. ಅವರು ಮೊದಲೇ ತಮ್ಮಲ್ಲಿದ್ದ ಫೋಟೋಗಳನ್ನೇ ಹಡಗದ ಅಧಿಕಾರಿಗಳಿಗೆ ಕೊಟ್ಟರು.

ಮಹಾತ್ಮರಿಗೆ ಪಾಸಪೋರ್ಟ ಕೊಡುವಾಗ ನಿಮ್ಮ ಉದ್ಯೋಗವೇನೆಂದು ಪ್ರಶ್ನೆ ಮಾಡಲು ಕ್ಷೌರಿಕ ಪಕೀಲನೆಂದು ಉತ್ತರ ಕೊಟ್ಟರು.

ಮಹಾತ್ಮರು ಹಡಗವೇರುವಾಗ ಲಕ್ಷಾವಧಿ ಜನರು ಇವರ ದರ್ಶನ ತಕ್ಕೊಂಡರು. ಆಗ ಮಹಾತ್ಮರು ಸ್ವಲ್ಪ ಮೇಲೆ ಯಾಜ್ಞಿನ ತೆ ಜೊತ್ತೆ ನೆತ್ತಿಯವರಾಗಿದ್ದರು. ಮೊಳಕಾಲತನಕ ಪಂಚೆ ಮತ್ತು ದಪ್ಪನ ಖಾದಿಯ ಉತ್ತರೀಯ ಇತ್ತು. ಹಣೆಗೆ ಥಳಥಳಿಸುವ ಹಚ್ಚಿದ ಅಕ್ಷತೆ ಕಾಣುತ್ತಿತ್ತು. ಅಂತ್ಯಗೆ ಶ್ರೀ ಸೌ|| ಸರೋಜಿನಿಯವರು ಕಟ್ಟಿದ ರಕ್ಷೆಯ ದಾರವಿತ್ತು.

ಮಹಾತ್ಮರ ಪ್ರಯಾಣದ ದೆಸೆಯಿಂದ ಪ್ರಾತಃಕಾಲದಲ್ಲಿ ಗಿರಣಿ ಕಾರಖಾನೆ ಮೊದಲು ಮಾಡಿಕೊಂಡು ಎಲ್ಲ ವ್ಯವಹಾರ ಬಂದಿಟ್ಟಿದ್ದರು. ಹಡಗ ಬಿಡುವಾಗ ಮಹಾತ್ಮರು ಸರದಾರ ಪಟೇಲರಿಗೆ ಪ್ರೇಮಾಲಿಂಗನವಿತ್ತರು. ಹಡಗವು ಕಣ್ಣಿಗೆ ಕಾಣದಷ್ಟು ದೂರ ಹೋಗುವ ತನಕ ಜನರು ಜಯಘೋಷ ಮಾಡಿದರು.

ಮಹಾತ್ಮರ ಸಂಗಡ ಪಟ್ರಂಕು ಅರವೆಯ ಐದು ಪೆಟ್ಟಿಗೆ, ಒಂದು ಕಬ್ಬಿಣದ ಪೆಟ್ಟಿಗೆ ಇಷ್ಟು ಸಾಮಾನುಗಳಿರುವವು. ಹಾಲಿನ ವ್ಯವಸ್ಥೆಗಾಗಿ ಎರಡು ಆಡುಗಳುಂಟು.

ಮಹಾತ್ಮರು ಹಡಗದಲ್ಲಿ ಫಸ್ಟ ಕ್ಲಾಸಿನಲ್ಲಿ ಹೋಗಲಿಲ್ಲ. ಕಡೆಯ ವರ್ಗದಲ್ಲಿ ಹೋದರು. ಪಂಡಿತ ಮದನಮೋಹನ ಮಾಲವಿಯಾಯವರ ದೆಸೆಯಿಂದ ಅಡಿಗೆಗಾಗಿ ಸ್ವತಂತ್ರ ವ್ಯವಸ್ಥೆ ಮಾಡಿದ್ದಾರೆ.

ಶ್ರೀ. ಬಿರ್ಲಾನವರಿಗೆ ಹಿಂದುಸ್ಥಾನ ಸರಕಾರದಿಂದ ಆಮಂತ್ರಣ ಬರಲಿಲ್ಲ. ಆದರೂ ವ್ಯಾಪಾರವಿಷಯಕವಾಗಿ ಆಲೋಚನೆ ಹೇಳಲು ಮಹಾತ್ಮರ ಕೂಡ ಹೋಗಿದ್ದಾರೆ.

ಮಹಾತ್ಮರು ವಿಲಾಯತಿಗೆ ಬರುವ ವರ್ತಮಾನ ಕೇಳಿ, ಸಿ. ಎಫ. ಅಂಡ್ರೂಜಸಾಹೇಬರಿಗೆ ಆನಂದವಾಯಿತು. ದಕ್ಷಿಣ ಆಫ್ರಿಕೆಗೆ ಹೋಗುವದನ್ನು ರಹಿತ ಪಡಿಸಿ, ಆಷರ ದಸೆಯಿಂದ ಲಂಡನದಲ್ಲಿಯೇ ಇದ್ದಾರೆ.

ಶ್ರೀ. ರಾಮರಂಗಯ್ಯನವರನ್ನು ಸುರಂಗಮುಕ್ತ ಮಾಡಿಸದಿದ್ದರೆ - ಮತ್ತು ಅವರು ಸುರಂಗದಲ್ಲಿ ಕೊಳೆತರೆ - ನಿಮ್ಮ ಕಾಂಗ್ರೆಸ ಮತ್ತು ರಾಮುಂಡಟೇಬಲ ವ್ಯರ್ಥವೆಂದು ಕಾಲಾಕಂಕರದ ರಾಜರ ತಮ್ಮನು ಮಹಾತ್ಮರಿಗೆ ತಾರಿನಿಂದ ತಿಳಿಸಿದ್ದಾನೆ.

ಮಹಾತ್ಮರು ಲಂಡನಕ್ಕೆ ಹೋದದ್ದು ಸಂಬಯಿಯ ಕೂಲಿಕಾರರಿಗೆ ಅಭಿಮತವಾಗಿಲ್ಲ. ಇವರು ಸಾರ್ವಜನಿಕ ಸಭೆ ಕೂಡಿಸಿ, ಇವರ ಪ್ರಯಾಣದ ವಿರುದ್ಧವಾಗಿ ನಿಷೇಧದ ನಿಂದಾವ್ಯಂಜಕ ಠರಾವು ಪಾಸಮಾಡಿದರು.

ಮರುದಿವಸ ಮಹಾತ್ಮರು ಹೊರಡುವಾಗ ಕರೇ ನಿಶಾನೆಯ ಮೆರವಣಿಗೆ ತೆಗೆದರು. ಆದರೆ ಜನರು ಇವರ ನಿಶಾನೆ ಕಸಕೊಂಡು, ಇವರಾವ ಆಟ ನಡೆಯದಂತೆ ಮಾಡಿದರು.

ಪೋರ್ತುಗಾಲದಲ್ಲಿ ಬಂಡಾಯ

—(೦) –

ಪೋರ್ತುಗಾಲದಲ್ಲಿ ಪುನಃ ಅರಸೊತ್ತಿಗೆಯನ್ನು ಸ್ಥಾಪಿಸುವದಕ್ಕಾಗಿ ರಾಜನಿಷ್ಠೀಯರು ಬಂಡಾಯ ಮಾಡಿದರು. ಇವರು ದಂಡಿನ ಒಂದು ಬಾರಕ್ಯಾಕಿನ ಮೇಲೆ ಅಭಿಯೋಗ ಮಾಡಿ, ಅದನ್ನು ಸ್ವವಶ ಮಾಡಿಕೊಂಡರು. ಮುಂದೆ ಅವರಿಗೆ ಜಯ ದೊರೆಯಲಿಲ್ಲ. ರಾಜ್ಯಕರ್ತರ ದಂಡು ಬಂದು ಇವರನ್ನು ಸೋಲಿಸಿತು. ಇದೇ ಪ್ರಕಾರ ಬೇರೆ ಕಡೆಯಲ್ಲಿದ್ದ ದಂಗೆಗಳೂ ಅಡಗಿದವು.

ರಾಜ್ಯಕರ್ತರು ಜಾಹೀರನಾಮೆ ತೆಗೆದು ಯಾರೂ ತಮ್ಮಲ್ಲಿ ಒಂದೂ ಶಸ್ತ್ರ ಹಿಡಕೊಂಡು ಹೊರಬೀಳಬಾರದು. ಹೀಗೆ ಬಂದವರಿಗೆ ಅಲ್ಲಿಂದಲ್ಲೇ ಗುಂಡು ಹಾಕಲಾದೀತೆಂದು ಹುಕುಮು ಮಾಡಿದ್ದಾರೆ ಎನಿಸರು ಜನ ಮುಖಂಡರನ್ನು ಹಿಡಿದು, ಅವರನ್ನು ಹಡಗದಲ್ಲಿ ಹಾಕಿ, ನಡುಸಮುದ್ರದಲ್ಲಿ ಸೆರೆಯಾಳಾಗಿ ನಿಲ್ಲಿಸಿದ್ದಾರೆ. ಬಂಡಾಯದಲ್ಲಿ ೫೦ ಜನರು ಘಾಯವಾಗಿದ್ದಾರೆ. ದೇಶದ ತುಂಬ ಬಿಸ್ತ್ರಾರೀ ಹುಕುಮು ತೆಗೆದದ್ದು, ಯಾವ ಸುದ್ದಿಯೂ ಹೊರಗೆ ಹೋಗದಂತೆ ಬಂದೋಬಸ್ತ ಮಾಡಿದ್ದಾರೆ.

ಗುಜರಾಥದಲ್ಲಿಯ ಹಪ್ತೆ ವಸೂಲಿಯ ಅನ್ಯಾಯಗಳನ್ನು ಕುರಿತು ವಿಚಾರ ಮಾಡಲು- ನಾಸಿಕದ ಕಲೆಕ್ಟರರಾದ ಮೆ. ಗಾರ್ಡನ ಸಾಹೇಬರನ್ನು ನೇಮಿಸಿದ್ದಾರೆ

ಹೊಸ ಪ್ರಧಾನರಿಗೆ ಲಿಬರಲ ಮತ್ತು ಕಾನ್ಸರವೇಟಿವ್ಹರಲ್ಲಿಯೂ ಅನೇಕರು ಅನುಕೂಲರಿಲ್ಲ. ಈಗ ಅನುಕೂಲವಾದರೆ- ಮುಂದೆ ತಮ್ಮ ಚುನಾವಣೆಯೇ ಆಗದೆಂದು ಇವರು ಹೆದರಿಕೊಂಡಿದ್ದಾರೆ.

ಮೈಸೂರಿನ ಮಹಾರಾಜರು ಜನನ ಸರೋವರದಿಂದ ರಾಜಧಾನಿಗೆ ಬಂದ ದಿವಸ ಮುನ್ಸಿಪಾಲಿಟಿಯವರು ಮಾನಪತ್ರ ಕೊಡುವರು. ಆಗ ಶಾಲೆಯ ವಿದ್ಯಾರ್ಥಿಗಳಿಗೆ ಉಂಡಿಗಳ ಖೈರಾತು ಮಾಡುವರು.

ಧಾರವಾಡ ವಿಜಯ ನಿತ್ಯಪತ್ರಿಕೆ 1931 ಸಪ್ಟೆಂಬರ್

ಬುಧವಾರ	2.9.1931
ಗುರುವಾರ	3.9.1931
ಶುಕ್ರವಾರ	4.9.1931
ಶನಿವಾರ	5.9.1931
ಸೋಮವಾರ	7.09.1931
ಬುಧವಾರ	9.9.1931
ಗುರುವಾರ	10.9.1931
ಶುಕ್ರವಾರ	11.9.1931
ಶನಿವಾರ	12.9.1931
ರವಿವಾರ	13.9.1931
ಸೋಮವಾರ	14.9.1931
ಗುರುವಾರ	17.9.1931
ಶುಕ್ರವಾರ	18.9.1931
ಶನಿವಾರ	19.9.1931
ರವಿವಾರ	20.9.1931
ಸೋಮವಾರ	21.9.1931
ಬುಧವಾರ	23.9.1931
ಗುರುವಾರ	24.9.1931
ಶುಕ್ರವಾರ	25.9.1931
ರವಿವಾರ	27.9.1931
ಸೋಮವಾರ	28.9.1931
ಬುಧವಾರ	30.9.1931

ಹತ್ತಿಯ ಬೆಲೆ ಸ್ಥಿರಗೊಳಿಸುವ ವಿಚಾರ

—(೦)—

ಜಗತ್ತಿನಲ್ಲಿ ಹೆಚ್ಚು ಹತ್ತಿ ಬೆಳೆಯುವದು. ಹೋದ ವರ್ಷ ಬೆಳೆದದ್ದು . ಮಾರಾಟವಿಲ್ಲದೆ, ಕೂಲಿ ಹಿಡಿದು ನಿಂತಿದೆ. ಆದ್ದರಿಂದ ಅದರ ಧಾರಣೆಯನ್ನು ನಿರುಕು ಮಾಡಲು-ಬೇರೆ ಬೇರೆ ಹತ್ತಿ ಬೆಳೆಯುವ ದೇಶಗಳ ಪ್ರತಿನಿಧಿಗಳದೊಂದು ಕಮೀಟಿಯನ್ನು ನೇಮಿಸಬೇಕೆಂದು ಈಜಿಪ್ತದ ವ್ಯಾಪಾರಿ ಖಾತೆಯ ಮಂತ್ರಿಯು ಉದ್ಯೋಗ ನಡೆಸಿದ್ದಾರೆ.

ನೋಟಿಸು

—(೦)—

ಚ॥ರಾ॥ ಗಿರಿಧರ ತಿಮ್ಮಾಜಿ ಸುರಪೂರಕರ ಸಾ॥ ಮನಗುಂಡಿ ತಾಲೂಕ ಧಾರವಾಡ ಈತನಿಗೆ-ಮತ್ತು ಯಾವತ್ತು ಜನರಿಗೆ ಈ ನೋಟೀಸ ಮೂಲಕ ಕೆಳಗೆ ಸಹಿ ಮಾಡಿದವನಿಂದ ತಿಳಿಯ ಪಡಿಸುವದೇನಂದ್ರೆ:—

ನೀನು ಧಾರವಾಡ ದೈನಿಕ "ವಿಜಯ" ಎಂಬ ತಾ॥ ೨೦-೭-೧೯೩೧ ನೆ ವರ್ತಮಾನ ಪತ್ರದಲ್ಲಿ ಕೊಟ್ಟ ನೋಟಿಸಿನ ಮಜಕೂರು ತಿಳಿಯಿತು, ಅದಕ್ಕೆ ಉತ್ತರ ಕೊಡುವದೇನಂದರೆ:-

ನೀನು ನಮ್ಮ ತಂದೆಯಾದ ವೆಂಕಪ್ಪನ ಖಾಸ ಅಣ್ಣಾ ತಿಮ್ಮಪ್ಪನ ಅಂದರೆ ನನ್ನ ದೊಡ್ಡಪ್ಪನ ಮಗನಾಗಬೇಕು. ನನ್ನ ತಂದೆಯು ನಾನು ಚಿಕ್ಕಂದಿನಲ್ಲಿದ್ದಾಗ ತೀರಿಕೊಂಡದ್ದರಿಂದ ನಿಮ್ಮ ತಂದೆಯು ನನ್ನನ್ನು ತಂದು ಜೋಪಾನ ಮಾಡಿದನೆಂದು ಬರೆದದ್ದು ಅಗದೀ ಸುಳ್ಳು ಇರುತ್ತದೆ. ಆದರೆ ನನ್ನ ತಂದೆಯು ನಾನು ವರ್ಷದಕ್ಕಿಂತ ಸಣ್ಣ ಕೂಸು ಇರುವಾಗ ಸತ್ತದ್ದರಿಂದ ನಮ್ಮ ಅಜ್ಜನಾದ ಭೀಮಪ್ಪನು ಅಂದರೆ ತಿಮ್ಮಪ್ಪನ ತಂದೆಯು ನನಗೆ ವ ನನ್ನ ತಾಯಿಗೆ ನನ್ನ ತಂದೆಯು ಗಳಿಸಿದ ಇಸ್ಟೇಟ ಸಹಾ ತಗೊಂಡು ಬಂದನು. ನಮ್ಮ ತಂದೆಯು ವ ನಿಮ್ಮ ತಂದೆಯು ಎಂದೂ ಬೇರೆಯಾಗಿದ್ದಿಲ್ಲ; ಮತ್ತು ನನ್ನನ್ನು ಸಾಧಾರಣ ದೊಡ್ಡವನಾಗೋವರಿಗೆ ನಮ್ಮ ಅಜ್ಜನೇ ಸಂರಕ್ಷಣೆ ಮಾಡಿದನು. ಮುಂದೆ ನಮ್ಮ ಅಜ್ಜನು ಸತ್ತ ನಂತರಾ ನಮ್ಮ ಅಜ್ಜನ ಇಸ್ಟೇಟ ಸಹ ನಿಮ್ಮ ತಂದೆಯು ಕೊಣ್ಣೂರಿಂದ ತಗೊಂಡು ಬಂದನು. ನಿಮ್ಮ ತಂದೆಯು ಇಸ್ಟೇಟಿನಲ್ಲಿ ನಮ್ಮ ಅಜ್ಜನು ವ ನನ್ನ ತಂದೆಯು ಗಳಿಸಿದ ಇಸ್ಟೇಟ ಕೂಡಿಯದೆ. ನೀನು ನಿನ್ನ ತಂದೆಯೊಬ್ಬನೇ ಸ್ವಂತ ಗಳಿಸಿದ ಇಸ್ಟೇಟ ಅಂತಾ ಬರೆದದ್ದು ಅಗದೀ ಅಬಾಧೀದು ಇರುತ್ತದೆ. ತಿಮ್ಮಪ್ಪನು ಈಗ ಎರಡು ವರ್ಷಗಳ ಕೆಳಗೆ ಸಾಯೋವರಿಗೆ ನಮ್ಮ ಅಜ್ಜನ ಕಾಲಾಗಾಯಿತ್ತ ಏಕತ್ರ ಘರಾಣೆ ನಡಕೋತಾ ಬಂದಿದ್ದು ಈಗ ನಮ್ಮ ನಿಮ್ಮ ನಡುವೆ ಬೇರೆ ಯಾಗುವ ಪ್ರಸಂಗ ಬಂದಿದೆ. ಕಾರಣ ಯಾವ ಪಕ್ಷದಲ್ಲಿ ನಮ್ಮ ತಂದೆಯೂ ವ ನಿಮ್ಮ ತಂದೆಯೂ ಬೇರೆಯಾಗಿದ್ದಿಲ್ಲ. ಆ ಪಕ್ಷದಲ್ಲಿ ನಿಮ್ಮ ತಂದೆಯ ಹತ್ತಿರಿದ್ದ ಆಸ್ತಿಯ ಅರ್ಧ ಹಿಸ್ಸೆಕ್ಕೆ ನಮ್ಮ ತಂದೆಯು ಹ್ಯಾಗೆ ಭಾಗಿದಾರನಿದ್ದನೋ ಅದೇ ಪ್ರಕಾರ ನಮ್ಮ ತಂದೆಯ ತರುವಾಯ ಏಕತ್ರ ಘರಾಣೇದ ಹಿಸ್ಸೆಗೆ ಎಂಟು ಆಣೆಯ ಭಾಗಿದಾರ ನಾನು ಇದ್ದೇನೆ. ಹೀಗಿದ್ದು ಮೂವರಲ್ಲಿ ಮೂರು ಪಾಲು ಮಾಡಿ ನನಗೆ ಒಂದು ಪಾಲು ಬಂಗವ್ವನ ಆಸ್ತಿಯಲ್ಲಿ ಕೊಟ್ಟವು. ಅಂತಾ ಪಗೈರೆ ಸಾಧಕಾಕಿ ಬೆಳಿಯಿಂದ ಸುಳ್ಳು ಬರೆದಿರುತ್ತೀರಿ ಈ ಮೊದಲು ಯಾವ ಪ್ರಕಾರದ ಯಾವದೂ ಹಿಸೆಯನ್ನು ನಾನು ತಗೊಂಡಿಲ್ಲ. ಈಗ ನೀನು ಒಂದು ಮೂರಾಂಶ ಹಿಸೆ ತಕ್ಕೊಳ್ಳಲಿಕ್ಕೆ ಹೇಳುತ್ತೀ ಅದಕ್ಕೆ ನಾನು ಎಂದೂ ಕಬೂಲ ಇಲ್ಲ. ಈಗ ನಮ್ಮ ನಿಮ್ಮ ಹಿಸೇದ ತಂಟೆ ಇನ್ನೂ ನಿಕಾಲಿ ಆಗಿಲ್ಲ. ಹಿಸೇದ ನಿಕಾಲಿ ಆಗದ ವಿನಃ ಆಸ್ತಿಯ ಹಾಗೂ ರಕಮಿನ ವಿಲೇವಾಟ ನೀನು ಮಾಡಿದರೆ ಅದಕ್ಕೆ ನೀನು ಜವಾಬದಾರನಿದ್ದು ನನಗಾಗುವ ಲುಕ್ಸಾನಿಯನ್ನು ನೀನು ಕೊಡಬೇಕಾಗುವದು.

ಮತ್ತು ನೀನು ತಾರೀಖು ೬-೮-೧೯೩೦ನೇ ದಿವಸ ಧಾರವಾಡದಲ್ಲಿ ಪಂಚರು ನಿರ್ಣಯ ಮಾಡಿದ ಪ್ರಕಾರಾ ನಡೆಯುತ್ತೇನೆಂದು ಪಂಚರಿಗೆ ಅಧಿಕಾರ ಪತ್ರ ಬರೆಕೊಟ್ಟು ಅವರು ನಿರ್ಣಯ ಮಾಡಿದ ನಂತರಾ ಅದಕ್ಕೆ ಅನುಸರಿಸಿ ನಡೆಯುತ್ತೇನೆಂದು ಒಪ್ಪಿಕೊಂಡು ಸಹಿ ಮಾಡಿ ಅದರಂತೆ ನಡಿಯದೇ ಈಗ ತಿರುಗಿ ಬಿದ್ದು ಮನೆ ಮಾನೆ ಆಸ್ತಿಯ ವಿಲೇವಾಟ ಮಾಡಲಿಕ್ಕೆ ಹತ್ತಿರುತ್ತೀ ಇದು ಅಗದಿ ಬೇಕಾಯದೇಶೀರವಿರುತ್ತದೆ. ಇನ್ನು ಮುಂದೆ ನೀನು ಈ ನೋಟೀಸ ಮುಟ್ಟಿದ ಎಂಟು ದಿವಸಗಳಲ್ಲಿ ಪಂಚರ ಎದುರಿಗೆ ನೀನು ಒಪ್ಪಿಕೊಂಡ ಪ್ರಕಾರ ಹಿಸೇ ಕೊಟ್ಟು ನನ್ನ ಪಾವತಿ ಪಡೆಯಬೇಕು. ಇದಕ್ಕೆ ತಪ್ಪಿದಲ್ಲಿ ನಾನು ರೀತಿ ಪ್ರಕಾರ ನನ್ನ ಅರ್ಧಾ ಹಿಸೇದ ಬಗ್ಗೆ ದಿವಾಣಿ ಕೋರ್ಟಿನಲ್ಲಿ ದಾವಾ ನಡಿಸುವೆನು. ಸದರಿ ಬಗ್ಗೆ ತಗಲುವ ಖರ್ಚು ವೆಚ್ಚ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಬೀಳುವದು.

ಮತ್ತು ಇದೇ ನೋಟೀಸಿನಿಂದ ಎಲ್ಲರಿಗೂ ತಿಳಿಸುವದೇನಂದ್ರೆ ನನ್ನ ಸಮ್ಮತಿ ಇಲ್ಲದೆ ವಗೈರೆ ಸಾಲದ ರಕಮನ್ನು ಗಿರಿಪ್ಪನು ಅಗರ ಶಂಕರೆಪ್ಪನು ಕೇಳ ಬಂದರೆ ಅವರಿಗೆ ಕೊಡಬಾರದು. ಮತ್ತು ಮನೆಯೊಳಗಿನ ಯಾವದೇ ಆಸ್ತಿ ಕೊಟ್ಟರೆ ತಗೊಳ್ಳಬಾರದು. ಅವರು ನನ್ನ ಸಮ್ಮತಿ ಇಲ್ಲದೇ ಮಾಡಿದ ಯಾವ ವ್ಯವಹಾರಕ್ಕೂ ನಾನು ಬಾಧ್ಯನಲ್ಲ. ತಿಳಿಯುವದು ಅಂತಾ ಕೊಟ್ಟ ನೋಟೀಸ ಸಹಿ ತಾರೀಖು ೩೦ ನೇ ಮಾಹೆ ಆಗಸ್ಟ ಸನ್ನ ೧೯೩೧ನೇ ಇಸ್ವಿ

ಸಹಿ ಕೃಷ್ಣಪ್ಪಾ ವೆಂಕಪ್ಪಾ ಸುರಪೂರಕರ

ಸಾ॥ ಮನಗುಂಡಿ ತಾ॥ ಧಾರವಾಡ

THE ANKALIGI BANK LTD.

Head Office

Kamankatta Dharwar

Branches

Ranebennur & Hirekerur

5%

Interest allowed on

ANNA SAVINGS BANK

DEPOSIT

Dharwar 3—1—1927 } K. B. ANKALIGI Managing Director

ತೀರಿ! ಪತ್ತಲ! ತೀರಿ!

ಶ್ರೀ ದತ್ತವೀವ್ಹಿಂಗ ಮಿಲ್

ಹುಬ್ಬಳ್ಳಿ.

ಕರ್ನಾಟಕದಲ್ಲಿ ಇದೇ ಮೊದಲನೆಯ

ತೀರೆಯ ಮಿಲ್ಲು.

ಇದೇಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ತೀರೆಗಳು ಹಾಗೂ ಪತಗಲುಗಳು ತಯಾರಾಗುತ್ತವೆ. ಮತ್ತು ಯೋಗ್ಯದರದಿಂದ ಸಿಗುತ್ತವೆ. ಅವಶ್ಯ ನೋಡಿ, ನಿಮಗೆ ಬೇಕಾದ ಮಾಲು ಕೊಂಡು, ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ. ಬಣ್ಣ ಹೋದರೆ - ಮಾಲು ತಿರುಗಿ ತಕ್ಕೊಳ್ಳುವೆವು.

ಮೈಸೂರು ಊದುಬತ್ತಿ

ನಮ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ ೩—೦—೦

ಕೃಷ ಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦

೧೫-೧೧-೩೧ ಮೈಸೂರ ಸ್ಟೋರ,

ಬೆಳಗಾವಿಯವರಗಲ್ಲಿ

ಹುಬ್ಬಳ್ಳಿ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. [illegible] 1443.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ಬುಧವಾರ ತಾರೀಖು ೨ ನೇ ಸಪ್ಟಂಬರ ೧೯೩೧ (ಸಂಚಿಕೆ ೧೯[illegible]

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ-

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ

ನಾಳಮಡಿ
ಮತ್ತು ———— ಧಾರವಾಡ
ಕಾಮನಕಟ್ಟಿ

ನಮ್ಮಲ್ಲಿ ಇಡಿ ಕರ್ನಾಟಕದಲ್ಲಿ ಅಚ್ಚಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಯಿದೆ ಸಹ) ನಕಾಶೆ ಚಿತ್ರಗಳೂ ಬರವಣಿಗೆ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುವವು. ಭಾಂಡಾರದ ಬೆಲೆಪಟ್ಟಿ ಬೇಕಾದವರು ೪ ಆಣೆ ಅಂಚೆ ತಿಕೀಟುಗಳನ್ನು ಕಳಿಸಿ ಬರೆಯಬೇಕು. ವ್ಯಾಪಾರಕ್ಕೆ ರಿಯಾಯತಿಯುಂಟು. ಮಾದರಿಗಾಗಿ ಕೆಲವು ಹೆಸರು ಕೆಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮ್ರಾಜ್ಯ ಸಂ. ೧,೨. ಪ್ರತಿ ೧ಕ್ಕೆ	೨- ೪-೦
೨. ಕಥೆಗಳನ್ನೊಳಗೊಂಡ ಬೀಟಬಲ್ಲ ಚರಿತ್ರೆ ಸಚಿತ್ರ	೧- ೬-೦
೩. ಛತ್ರಪತಿ ಶಿವಾಜಿ ಮಹಾರಾಜ	೨-೧೨-೦
೪. ಕರ್ನಾಟಕ ಸಿಂಹಾಸನ ಸ್ಥಾಪನೆ	೧- ೦-೦
೫. ಚರಿತ್ರ ಸಂಗ್ರಹ ಭಾ. ೧.	೧- ೪-೦
೬. ಅಳಸಿಂಗಾಚಾರ್ಯರ ರಾಮಾಯಣ ೯ ಸಂಪುಟಗಳು	೧೪- ೬-೦
೭. ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	[illegible]
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩	[illegible]
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ ಪ್ರತಿ ೧ಕ್ಕೆ	[illegible]
ಲ್ಯಾಂಡ ರೆವ್ಹಿನ್ಯೂ ಕೋಡು	[illegible]
೧೧. ಗ್ರಾಮ ನಮೂನೆ ಶಿಕ್ಷಣ ಪುಸ್ತಕ	೭-೧೪-೦
೧೨. ಸ್ತ್ರೀಧರ್ಮನೀತಿ, ಗೃಹಕಾರ್ಯ ನಿರ್ವಾಹಪತ್ರವು ಪ್ರತಿ ೧ಕ್ಕೆ	[illegible]
೧೩. ಇಸೂಪನೀತಿ ಕಥೆ ಭಾ. ೧, ೨,	[illegible]
೧೪. ಕಾರ್ತನ ಕಂಠಾಭರಣ	[illegible]

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ [illegible]. ಸಿ.

ಜೋಶಿ, ಗಂಗಾಜೇಕರ ಮತ್ತು ಕಂಪನಿ

ಶುಕ್ರವಾರಪೇಟೆ ಧಾರವಾಡ

ಇವರನ್ನು

ಮುಂಬೈ ಪ್ರಾವ್ಹಿನ್ಸಿಯಲ್ ಕೋ. ಇನ್ಸುಅರನ್ಸ ಕಂಪನಿ. ಲಿ.

ಇವರು

ಧಾರವಾಡ ಜಿಲ್ಲೆಯ

ಚೀಫ್ ಏಜಂಟ

ರಾಗಿ ನಿಯಮಿಸಿದ್ದಾರೆ.

ಈಗ ಜಿಲ್ಲೆಯ ಎಲ್ಲ ಮುಖ್ಯ ಸ್ಥಳಗಳಲ್ಲಿ

ಸಬ್ ಏಜಂಟ

ರನ್ನು ನಿಯಮಿಸುವದದೆ. ಈ ಕೆಲಸ ಮಾಡಲಿಚ್ಛಿಸುವವರು ತಮ್ಮ ಖಾತ್ರಿಯ ಬಗ್ಗೆ ಎಲ್ಲ ಮಾಹಿತಿ ಕೊಟ್ಟು ಚೀಫ್ ಏಜಂಟರಿಗೆ ಬರೆಯಬೇಕು. ಖಾತ್ರಿಯಿಂದ ಕೆಲಸ ಮಾಡುವವರಿಗೆ ಪೂರ್ಣ ಕಮೀಶನ ಸಿಗುವದು.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಹುಂಗೆಕರಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ್ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರಕ್ಕೆ ಶ್ರೇಷ್ಠವಾದ ಸ್ಥಾನ.

ಬಂಡವಾಲು ಎಂಟು ಲಕ್ಷದಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಯೋಗ್ಯವಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮ್ಯಾನೇಜಿಂಗ ಡೈರೆಕ್ಟರ

ವಿಜಯದ ದರಗಳು :

ನಿತ್ಯ ಪತ್ರಿಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೨-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ತಾರೀಖು ೨-೯-೧೯೩೧ನೇ ಇಸ್ವಿ

ರಾವುಂಡಟೇಬಲದ ಡೆಲಿಗೇಟರು ಲಂಡನ ಸೇರಿದರು.

ಮಹಾತ್ಮಾಗಾಂಧಿಯವರು ಪಂಡಿತ ಮದನ ಮೋಹನ ಮಾಲವಿಯಾ, ದೇವಿ ಸರೋಜಿನಿಯವರಂಥ ಜಗದ್ವಂದ್ಯರಾದ ನರಪುಂಗವರನ್ನು ಹಿಂದೆ ಬಿಟ್ಟು, ಮೊದಲು ಎಡೆ ಹಿಡಕೊಳ್ಳುವದಕ್ಕಾಗಿ ಹಪಾಪಿಗೊಂಡ ಶ್ರೀ ಶಂಕರರಾಯರಂಥ ಡೆಲಿಗೇಟರು ಲಂಡನ ಮುಟ್ಟಿದರು. ಇವರಲ್ಲಿ ಸರ ಸಪ್ರು, ಬ್ಯಾರಿಸ್ಟರ ಜಯಕರ, ಸರ ಅಕಬರ ಹೈದರಿ, ಸರ ಮಿರಜಾ ಇಸ್ಮಾಯಿಲರು ಪಾರೀಸ ಪಟ್ಟಣದಲ್ಲಿ ಹಿಂದುಳಿದಿದ್ದು, ಒಂದು ವಾರದ ನಂತರ ಲಂಡನಕ್ಕೆ ಹೋಗಿ ಲಾರ್ಡ ಸಾಂಕಿಯವರ ಕೂಡ ಸ್ಟ್ರಕ್ಚರ ಕಮಿಟಿಯ ತಾರೀಖನ್ನು ಗೊತ್ತು ಮಾಡುವರು. ಸರ ಆಗಾಖಾನರಂತೂ ಮಾರ್ಸೇಲಿಸ ಬಂದರಕ್ಕೇ ಬಂದು, ಮುಸಲಮಾನ ಬಾಂಧವರ ಕೂಡ ತಮ್ಮ ಜನಾಂಗದ ಪರಿಸ್ಥಿತಿಯನ್ನು ಕುರಿತು ಪ್ರಸ್ತಾಪ ಮಾಡಿದರು.

ಇವರನ್ನುಳಿದು ಲಂಡನಕ್ಕೆ ಬಂದ ಡೆಲಿಗೇಟರ ಸ್ವಾಗತ ಮಾಡಲು ಲಾರ್ಡ ಸಾಂಕೀಸಾಹೇಬರು ಮತ್ತು ಮಂತ್ರಿ ಹಾಗೂ ಸ್ಟೇಟ ಸೇಕ್ರೆಟರಿಯವರ ಪತಿಯಿಂದ ಪ್ರತಿನಿಧಿ ಸ್ವರೂಪದ ದೂತರು ಬಂದಿದ್ದರು. ಇವರ ಜೊತೆ ನಾಮದಾರ ಶ್ರೀನಿವಾಸ ಶಾಸ್ತ್ರಿ, ಬರದ್ವಾನದ ಮಹಾರಾಜರೇ ಮೊದಲಾದವರು ಬಂದಿದ್ದರು.

ಲಾರ್ಡ ಸಾಂಕಿಯವರು ರಾವುಂಡ ಟೇಬಲಿನ ಪುರಸ್ಕರ್ತ ಗಿದ್ದಾರೆ. “ಮಂತ್ರಿ ಮಂಡಲದಲ್ಲುಳಿದದ್ದು ಕೇವಲ ರಾವುಂಡಟೇಬಲಿನ ದೆಸೆಯಿಂದಲೇ” ಎಂದು ಈ ಸಾಹೇಬರು ಜಾಹೀರ ಮಾಡಿದ್ದಾರೆ. ಇವರಿಗೆ ಹಿಂದೆ ಎರಡು ವರ್ಷ ವಿಶ್ರಾಂತಿ ಇದ್ದಿಲ್ಲ, ಈ ಒಂದು ವರ್ಷವಾದರೂ ವಿರಾಮ ದೊರೆಯಲಾರದೆಂದು ಇವರ ಮಿತ್ರರೊಬ್ಬರು ಹೇಳುತ್ತಾರೆ.

ಹಾವೇರಿ ಮ್ಯುನಿಸಿಪಾಲಿಟಿಯವರು ಇದೇ ಒಂದನೆಯ ತಾರೀಖಿನಿಂದ ತಮ್ಮ ಕೆಲಸಗಾರರ ಸಂಬಳವನ್ನು ೧೫ರಿಂದ ೫೦ರ ತನಕ ನೂರಕ್ಕೆ ಹತ್ತರಂತೆ ಮತ್ತು ೫೦ರಿಂದ ನೂರರ ವರೆಗೆ ನೂರಕ್ಕೆ ೧೫ ಕಡಿಮೆ ಮಾಡಿದರು.

ಹಡಗ ಬಿಡುವಾಗ ಮಹಾತ್ಮರು ಹೇಳಿದ ಸಂದೇಶ

....(೦)....

ಆಶಾವಾದಿಯಾಗುವಂಥ ಯಾವ ಚಿನ್ನವೂ ಆಕಾಶದಲ್ಲಿ ತೋರುವದಿಲ್ಲ. ನಾನು ನಿರಾಶೆಯಲ್ಲಿ ಆಶಾವಾದಿಯಾಗಿದ್ದೇನೆ. ನಾನು ದೇವರಲ್ಲಿ ವಿಶ್ವಾಸವಿಟ್ಟು ನಡೆಯುವಂಥ ಮನುಷ್ಯನು. ಆತನು ನನಗಾಗಿ ಲಂಡನಕ್ಕೆ ಹೋಗುವ ದಾರಿಯನ್ನು ಸ್ವಚ್ಛ ಮಾಡಿದ್ದಾನೆ. ಆದ್ದರಿಂದ ಆತನು ಮಾನವರ ಹಿತಕ್ಕಾಗಿ ನನ್ನನ್ನು ಮುಂದೆ ಮಾಡಿ, ನನ್ನಿಂದ ಕೆಲಸ ತಕ್ಕೊಳ್ಳುವನೆಂದು ಭಾವಿಸಿದ್ದೇನೆ. ನನ್ನ ಮಟ್ಟಿಗೆ ವಿಚಾರ ಮಾಡಿದರೆ- ಮಾನವ ಕೋಟಿಯ ಹಾಗೂ ಹಿಂದುಸ್ಥಾನದ ಸೇವೆಯು ಏಕರೂಪವಾಗಿರುತ್ತದೆ.

ಕೆಲ ಭಾಗದವರು ಕಾಂಗ್ರೆಸವನ್ನು ಅಲ್ಲಗಳೆಯಬಹುದು. ಆದರೆ ಅದು ಸಾಮಾನ್ಯವಾಗಿ ಇಡೀ ಹಿಂದುಸ್ಥಾನದ ಪ್ರತಿನಿಧಿಯಾಗಿರುತ್ತದೆ ನಾನು ಪ್ರತಿಯೊಂದು ಜಾತಿಯ ಹಿತಸಂಬಂಧಗಳ ಹಾಗೂ ಕೋಟ್ಯವಧಿ ಅಜ್ಞ ಜನರ ಹಿತ ವಿಚಾರಕ್ಕಾಗಿ ಕರ್ತವ್ಯ ಮಾಡಲೆಣಿಸಿದ್ದೇನೆ.

ಪ್ರಾಂತಿಕ ಸರಕಾರಗಳು, ಸಿವ್ಹಿಲ ಸರ್ವಂಟರು ಮತ್ತು ಇಂಗ್ಲಿಷ ವರ್ತಕರು ಹಿಂದುಸ್ಥಾನದ ಆಪೇಕ್ಷೆಯು ಪೂರ್ಣವಾಗುವಂತೆ ಸಹಾಯ ಮಾಡುವರೆಂದು ಆಶಿಸುತ್ತೇನೆ ಅಹಿಂಸೆ ಮತ್ತು ಸತ್ಯಗಳಿಂದ ಅನ್ಯರ ಪ್ರೇಮ ಸಂಪಾದನೆ ಮಾಡಿ, ಕಾರ್ಯಸಿದ್ಧಿ ಮಾಡಿಕೊಳ್ಳುವೆನೆಂದು ಬಲವಾಗಿ ಆಶಿಸುತ್ತೇನೆ.

ಪಂಡಿತ ಮಾಲವಿಯಾ-

ಮಹಾತ್ಮರ ತೆರುವಾಯ ಪಂಡಿತ ಮಾಲವಿಯಾಯವರು ಹೇಳಿದ್ದೇನಂದರೆ-

ಪರಸ್ಪರ ಪ್ರೀತಿ ಬೆಳೆಸಿರಿ ಒಕ್ಕಟ್ಟು ಕಾಯ್ದುಕೊಳ್ಳಿರಿ. ನಿಶ್ಚಯ ಹೃದಯರಾದಂಥ ಆಶಾವಾದಿಗಳಾಗಿರಿ ಅಂದರೆ ಸ್ವರಾಜ್ಯವು ತಾನಾಗಿ ಬರುವದು.

ದೇವಿ ಸರೋಜನಿ-

ಲಂಡನಕ್ಕೆ ಹೋದಂಥ ಪ್ರತಿಯೊಬ್ಬ ಡೆಲಿಗೇಟನು ಹಿಂದುಸ್ಥಾನದ ಮಾನ ಮತ್ತು ಸಂಪೂರ್ಣ ಸಮೃದ್ಧಿಯನ್ನು ಕಾಯಲು ಜವಾಬದಾರನಾಗಿದ್ದಾನೆ ಹಿಂದುಸ್ಥಾನವು ಪೂರ್ಣತ್ವ ಹೊಂದಬೇಕಾದರೆ- ಎಲ್ಲಕ್ಕೂ ಮೊದಲಿನ ಕೆಲಸವು ಹಿಂದೂ ಮುಸಲಮಾನ ಐಕ್ಯವಾಗುತ್ತದೆ. ಆದರೆ- ನಾವು ಹಿಂದೂ ಇದ್ದೇವೆ, ಮುಸಲಮಾನರಿದ್ದೇವೆ, ಎಂಬ ಆತ್ಮಭಾವವನ್ನು ಮರೆತು, ರಾಷ್ಟ್ರೀಯ ವಿಚಾರದಿಂದ ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ಆತ್ಮಾರ್ಪಣ ಮಾಡಿದ ಹಿಂದವಾಸಿಯಾಗಿದ್ದೇನೆಂಬದನ್ನು ತಿಳಕೊಳ್ಳಬೇಕು.

ಸರ ಪಟ್ಟಣಿ-

ನಾನು ಹೇಳತಕ್ಕದ್ದೇನೂ ಇರುವದಿಲ್ಲ. ನಾನು ಮಹಾತ್ಮರಲ್ಲಿ ಪೂರ್ಣ ವಿಶ್ವಾಸವುಳ್ಳವನು. ಅವರು ತೋರಿಸಿದ ದಾರಿಗುಂಟ ನಡೆಯುವ ದೂತನು. ಮಹಾತ್ಮರು ವಿಲಾಯತಿಗೆ ಹೊರಡಲಿಕ್ಕೆ ಲಾರ್ಡ ವಿಲಿಂಗಡನ್ನ ಸಾಹೇಬರ ಸುಹೃದಯವೇ ಕಾರಣವಾಯಿತು. ಮಹಾತ್ಮರು ಅಸಾಧಾರಣವಾದ ಧೈರ್ಯ ಸ್ಥೈರ್ಯದ ತಾಳ್ಮೆಯೂ ಒಂದು ಕಾರಣವಾಯಿತು. ಹಿಂದುಸ್ಥಾನದಲ್ಲಾದ ಒಪ್ಪಂದದಂತೆ ಮಹಾತ್ಮರು ಲಂಡನದಲ್ಲಿಯೂ ಒಪ್ಪಂದ ಮಾಡಿಕೊಂಡು ಬರುವರೆಂದೂ, ಆ ಮೂರೂ ಬಗದವರು ಇದು ಪೂರ್ಣವಾಗುವಂತೆ ಸಹಾಯ ಮಾಡುವರೆಂದೂ ಆಶಿಸುತ್ತೇನೆ.

ಮಹಾತ್ಮರನ್ನು ಮ್ಯಾಂಚೆಸ್ಟರದಲ್ಲಿ ತಿರುವಿಕೊಂಡು ಬರುವರು.

—(೦)—

ಮ್ಯಾಂಚೆಸ್ಟರದ ಜವಳಿ ವ್ಯಾಪಾರ ಕೆಟ್ಟದ್ದರಿಂದ, ಮಿ॥ ಅಂಡ್ರ್ಯೂಜ ಮೊದಲಾದವರು ಮಹಾತ್ಮರನ್ನು ಮ್ಯಾಂಚೆಸ್ಟರ ಮತ್ತು ಗಿರಣಿಗಳ ಬೇರೆ ಭಾಗಗಳಲ್ಲಿ ಕರಕೊಂಡು ಹೋಗಿ ಕೂಲಿಹೀನರಾದಂಥ, ಅನ್ನಕ್ಕೆ ಅಭಾವರಾದಂಥ ಜನರನ್ನು ತೋರಿಸಿ, ಆ ವ್ಯಾಪಾರದ ಭಾವರೇ ಇವರ ಹೊಟ್ಟೆಯ ಮೇಲೆ ಬಡಿದು, ಇವರು ಪಟಪಟನೆ ಸಾಯುವಂತೆ- ಮತ್ತು ಸತ್ತು ನರಕತ್ವದ ಅಪ್ರತ್ಯಕ್ಷ ಪಾಪ ಕಟ್ಟಿಕೊಳ್ಳದಂತೆ ಬಹಿಷ್ಕಾರವನ್ನೂ ಪಿಕೆಟಿಂಗವನ್ನೂ ತೆಗೆಯಿಸಿರೆಂದು ಬೇಡಿಕೊಳ್ಳುವರು. ಮಹಾತ್ಮರು ಆ ಅಂತಃಕರಣ ದ್ರವಿಸುವಂಥ ನೋಟ ಕಂಡು ಮನಮರುಗಿ, ಬಹಿಷ್ಕಾರ ತೆಗೆಸುವಂಥವರಾದರೆ- ಹಿಂದುಸ್ಥಾನದ ದೊಡ್ಡ ಹಾನಿಯಾಗುವದೆಂದು ಇಲ್ಲಿಯ ವ್ಯಾಪಾರಸ್ಥರ ಮತವಾಗಿರುತ್ತದೆ. ಹಿಂದುಸ್ಥಾನದ ಹಿತ ಸಂಬಂಧವೇ ಮುಖ್ಯ, ಪರಕೀಯರಹಿತವು ಮೇಲೋ ವಿಚಾರದ ಪಟ್ಟಿಗೆಂದು ಕಾಂಗ್ರೆಸದ ಮತವು ಹಿಂದುಸ್ಥಾನದಲ್ಲಿ ಸ್ವದೇಶಿಯರಂತೆ ಪರದೇಶಿಯರಿಂದ ಇಂಗ್ಲಿಷರಿಗೂ ವ್ಯಾಪಾರ ವಿಷಯವಾಗಿ ಸರಿಸಮಾನ ಹಕ್ಕು ಸ್ವಾತಂತ್ರ್ಯಗಳಿರುತ್ತವೆಂದು ರಾವುಂಡ ಟೇಬಲಿನಲ್ಲಿ ಮಹಾತ್ಮರೂ ಬೇರೆ ಡೇಲಿಗೇಟರೂ ಕಬೂಲಿ ಕೊಟ್ಟರೆ- ಹಿಂದುಸ್ಥಾನದ ಅಪರಿಮಿತ ಹಾನಿಯಾಗುವದೆಂದು ಈಗಿನಿಂದಲೇ ಈ ದೇಶದ ವರ್ತಕರು ಶಂಖನಾದ್ಯ ನಡೆಸಿದ್ದಾರೆ

ಅಬಕಾರಿ ಖಾತೆಯಲ್ಲಿ ೭೦-೮೦ ರೂಪಾಯಿ ಸಂಬಳವಿದ್ದು ನಾಲ್ಕು ನಾಲ್ಕು ವರ್ಷ ಕೆಲಸ ಮಾಡಿದವರಿಗೆ ಈಗ ಪೋಲಿಸಖಾತೆಯಲ್ಲಿ ೨೦ ರಿಂದ ೨೫ ರತನಕ ಸಂಬಳದ ಕೆಲಸ ಕೊಡುವೆವು. ಈ ಕೆಲಸ ಬೇಡಾದರೆ- ಮನೆಗೆ ಅಪ್ಪಣೆ ಎಂದು ಸರಕಾರದ ಬಂದಂತೆ ತಿಳಿಯುತ್ತದೆ.

ಹಿಂದುಸ್ಥಾನದಲ್ಲೇಕೆ ಯುರೋಪಿಯನ್ನರ ಕೊಲೆಗಳಾಗುತ್ತವೆ?

---(೦)---

೩೦ ವರ್ಷಗಳ ಹಿಂದೆ ರ್‍ಯಾಂಡ, ಆಯರ್‍ಸ್ಟ, ಜಾಕಸನ್ನ ಮತ್ತು ಆನ ಸಾಹೇಬರನ್ನು, ಬಂಗಾಲದಲ್ಲಿ ಬಾಂಬಿನಿಂದ ಬೇರೆ ಬೇರೆ ಯುರೋಪಿಯನ್ನರನ್ನು, ಕೊಲ್ಲಲಿಕ್ಕೆ ಪ್ರಾರಂಭವಾದ ಕೃತ್ಯಗಳು ಇಂದಿಗೂ ಅಡಗಿಲ್ಲ. ಸರಕಾರದವರು ಬೇಕಾದಷ್ಟು ದಬ್ಬಾಳಿಕೆಯನ್ನು ನಡೆಸಿದರೂ, ನೂರಾರು ಜನರನ್ನು ನಜರ ಬಂದಿಯಲ್ಲಿಟ್ಟು ತುರುಂಗದಲ್ಲಿ ದಾಖಿದರೂ, ಬಂಗಾಲದಲ್ಲಿ ರಾಜ್ಯಕ್ರಾಂತಿಯುವರ ಮುಲೋಚ್ಛಾಟನವಾಗಿಲ್ಲ. ಗವ್ಹರ್ನರ ಪ್ರತ್ಯುಯಿಸರಾಯರಂಥವರು ಪ್ರವಾಸ ಮಾಡಬೇಕಾದರೆ- ಪರೀಕ್ಷಿತರಾಜನು ಕಟ್ಟಿಗದ ಮನೆಯಲ್ಲಿ ಕೂತಂಥ ಭದ್ರೋಪಾಯಗಳನ್ನು ಮಾಡಬೇಕಾಗುತ್ತದೆ; ಆದರೂ ಕ್ರಾಂತಿಕಾರರು ಯುಕ್ತಿಯಿಂದ ಸಮಯ ಸಾಧಿಸಿ, ತಮ್ಮ ಕಾರ್ಯ ನಡೆಸುತ್ತಾರೆ. ಗುಪ್ತ ಪೋಲಿಸರು ಇವರ ತಳ ಆಗಿಯಲು ಎಷ್ಟು ಬೇಕಾದಷ್ಟು ಯುಕ್ತಿ ಮಾಡಿದರೂ, ಅವರ ತಳ ಗೊತ್ತೇ ಹತ್ತದಾಗಿದೆ.

ಕಳೆದೆರಡು ವರ್ಷಗಳಲ್ಲಿ ೩೦ ಜನ ಯುರೋಪಿಯನ್ನರ ಮೇಲೆ ರಾಜ್ಯಕ್ರಾಂತಿಯುವರು ರಿವ್ಹಾಲ್ವರದ ಗುರಿಹಿಡಿದಿರೆಂಬ ಲಂಡನ ಟಾಯಮ್ಸು ಪ್ರಸಿದ್ಧ ಮಾಡಿದೆ. ಈ ತರದ ಬಲಿಗಳಿಂದ ರಾಜ್ಯ ಬಿಡಬೇಕಾಗುವದಿಲ್ಲೆಂಬದು ನಿಜ; ಅಹಿಂಸೆಯ ವ್ರತದಿಂದ ಸ್ವರಾಜ್ಯ ತರುತ್ತೇವೆ. ನಮಗೆ ಸಮಯ ಕೊಡಿರೆಂದು ಮಹಾತ್ಮರು ಇವರಿಗೆ ಸಾರಿ ಸಾರಿ ಹೇಳುತ್ತಿರುವದೂ ನಿಜ. ಆದರೂ ಕ್ರಾಂತಿಕಾರರು ರಾಜ್ಯಕರ್ತರನ್ನು ಕೊಂದು, ತಾವು ಸಾಯಲಿಕ್ಕೆ ಸಿದ್ಧರಾಗುತ್ತಿದ್ದಾರೆ.

ರಾಷ್ಟ್ರೀಯ ಕೇಬಿನೆಟನ್ನು ಈ ವಿಷಯವಾಗಿ ಗೆಲ್ವರರಾಯ ಮತ್ತು ಟ್ರೆಂಟರಾಯರಿಬ್ಬರೂ ವಿವಿಧ ರೀತಿಯಿಂದ ವಿಚಾರ ಮಾಡಬೇಕಾದದ್ದು ಅವಶ್ಯ. ಹಿಂದೀ ರಾಷ್ಟ್ರಕ್ಕೆ ಜಬಾಬ್ದಾರಿಯ ರಾಜ್ಯವು ಪೂರ್ಣವಾದ ವಿನಹ ರಾಜ್ಯಕ್ರಾಂತಿ ಪ್ರವರ್ತಕರು ಸಮಾಧಾನ ಹೊಂದಲಾರರೆಂದೂ ತುಸು ದಳ್ಳೆಗಳನ್ನು ಕೊಟ್ಟಂತೆ ನಟಿಸಿ ತಮ್ಮವರ ಜೀವನನ್ನು ಸಂಕಟದಲ್ಲಿ ಹಾಕಕೂಡದೆಂದೂ ಗೆಲ್ವರರಾಯ ಪ್ರತಿನಿಧಿಗಳು ಖಂಡಿತವಾಗಿ ತಿಳಿಯಬೇಕು.

ಮೊನ್ನೆಯಿಂದ ಪುಣೆಯ ಸೆಶನ ಕೋರ್ಟಿನಲ್ಲಿ ಗೋಗಟೆಯ ವಿಚಾರಣೆ ನಡೆದಿದೆ. ಮುಂಬಯಿಯಲ್ಲಿ ಹೊರಡುವ ಮಹಾತ್ಮ ಶ್ರದ್ಧಾನಂದ ಪತ್ರದ ರಿಪೋರ್ಟರನು ವಿಚಾರಣೆಗಾಗಿ ತನಗೆ ಪ್ರವೇಶದ ಟಿಕೇಟು ಬೇಡಲು- ನೀನು ಗೋಗಟೆ ಪಕ್ಷಪಾತಿ ಯಾಗಿದ್ದೀ ಕಾರಣ ನಿನಗೆ ಪ್ರವೇಶ ದೊರೆಯಲಾರದೆಂದು ಪೋಲಿಸಸಾಹೇಬರು ಆತನಿಗೆ ತಿಳಿಸಿದ್ದಾರೆ.

ಪಾರ್ಲಮೆಂಟ ಸಭೆಯಲ್ಲಿಯ ಪಕ್ಷಗಳ ಬಲಾಬಲ

ಮೂರೂ ಬಗೆಗಳಲ್ಲಿ ಕಲಹ ಮಲವಾದ್ದರಿಂದ, ಪಾರ್ಲಮೆಂಟ ಸಭೆಯಲ್ಲಿ ಆಯಾ ಪಕ್ಷಗಳ ಬಲಾಬಲ ಹೇಗಾಗುವದೆಂಬ ಲೆಕ್ಕ ಮಾಡಿದ್ದಾರೆ. ಅಲ್ಲಿ ಮೆಂಬರರ ಒಟ್ಟು ಸಂಖ್ಯೆ ೬೧೫. ವಿ ಶ್ವಪ್ರಧಾನ ಮಂಡಲದಲ್ಲಿ ೩೬೧ ಕಾನ್ಸರವೇಟಿವ್ಹರು, ೫೫ ಲಿಬರಲ್ಲರು, ೬ ಕೂಲಿಕಾರರು, ಮೂವರು ಸ್ವತಂತ್ರ ಕೂಲಿಕಾರರು ಇತರ ಆರು ಅಂತೂ ೩೩೧ ಜನರಾಗುವರು. ಕೂಲಿಕಾರ ಪಕ್ಷದಲ್ಲಿ ೨೬೨ ಜನರಿದ್ದು, ಇವರಿಗೆ ಒಂಬತ್ತು ಜನ ಸ್ವತಂತ್ರರು ಸೇರುವ ಸಂಭವವುಂಟು. ಇವರ ಸಂಖ್ಯೆ ೨೮೧ ಆಗುವದು. ಮೂವರು ತಟಸ್ಥರಿರುವರು.

ಸ್ವಪಕ್ಷದಿಂದ ಪದಚ್ಯುತ

—(೦)—

ಮಿ. ಮ್ಯಾಕಡೋನಾಲ್ಡ ಸಾಹೇಬರು ಸೀಹ್ಯಾಮವೆಂಬ ಗ್ರೂಪಿನ ಪತಿಯಿಂದ ಮೆಂಬರರಾದ್ದಾಗಿದೆ ಈ ಗ್ರೂಪಿನ ಮ್ಯಾನೆಜಿಂಗ ಕಮೀಟಿಯವರು ಸಾಹೇಬರು ತಮ್ಮ ಪತಿಯಿಂದ ಪಾರ್ಲಮೆಂಟದ ಮೆಂಬರರಾಗಿಲ್ಲೆಂಬು ಹೇಳಿ, ರಾಜೀನಾಮೆ ಕೊಡಬೇಕೆಂಬ ನಿರ್ಣಯ ಮಾಡಿದ್ದಾರೆ. ೧೨ ನೆಯ ತಾರೀಖಿನ ದಿವಸ ಜನರು ಕಮೀಟಿ ಕೂಡಿಸಿ ಕೊನೆಯ ನಿರ್ಣಯ ಹೇಳುವರು. ತಮಗೆ ನಿರ್ಣಯವು ಟೆಲಿಫೋನಿನಿಂದ ತಿಳಿಯುವಂತೆ ಸಾಹೇಬರು ಮುಂದಾಗಿ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಅಮೇರಿಕೆಯಲ್ಲಿ ನಿರುದ್ಯೋಗ

ಅಮೇರಿಕೆಯಲ್ಲಿ ಹೊಟ್ಟೆಗೆ ಕೆಲಸಬೇಕೆಂದರೂ, ಎಲ್ಲಿಯೂ ಕೆಲಸ ದೊರೆಯದಂಥವರ ಸಂಖ್ಯೆಯು ಬೆಳೆಯುತ್ತಾ ಬೆಳೆಯುತ್ತಾ ಈ ವರ್ಷ ಎಪ್ಪತ್ತು ಲಕ್ಷವಾಗುವದು. ದುಡ್ಡಿನ ಕೊರತೆಯು ಮೂಲಕ ಪರರಾಷ್ಟ್ರಗಳ ರಾಯಭಾರಿಗಳ ವಕಾಲತಿಯಲ್ಲಿ ಕೆಲಸ ಮಾಡತಕ್ಕವರು ಸಿರಿವಂತಿಕೆಯ ಆಡಂಬರ ಬಿಟ್ಟು, ಮಧ್ಯಮ ವರ್ಗದವರಂತೆ ಕಾಲಕ್ಷೇಪ ಮಾಡಿಕೊಂಡಿರಲು ಸಿದ್ಧರಾಗಿದ್ದಾರೆ. ಇವರು ಮೋಟಾರ ಸಹ ಬಿಟ್ಟರು. ಜೀವಧಾರಣಕ್ಕಾಗಿ ಬೇಕಾಗುವಂಥ ಅಶನವಸನಗಳಲ್ಲಿ ತೃಪ್ತರಾಗುವರು.

ಧಾರವಾಡದಲ್ಲಿ ನವರಾತ್ರಿಯ ವೇಳೆಯಲ್ಲಾಗುವ ನಾಡಹಬ್ಬಕ್ಕಾಗಿ, ಕುಮಾರಿ ಎಡುಗಿರಿಯಮ್ಮ, ಕೀರ್ತನ ಕೇಸರಿ ಶಿವಮೂರ್ತಿಸ್ವಾಮಿ, ಮಂಗಳೂರಿನ ಶ್ರೀ. ಪಂಜೆ ಮಂಗೇಶರಾವ ಮತ್ತು ಪ್ರೊಫೇಸರ ಅಯ್ಯರರು ಬರುವದಕ್ಕೆ ಒಪ್ಪಿದ ಪತ್ರಗಳನ್ನು ಬರೆದಿರುತ್ತಾರೆ.

ಹಬ್ಬ ಇನ್ಸಪೆಕ್ಟರನ್ನು ಗುಂಡಿನಿಂದ ಕೊಂದರು.

....(೦)....

ಬ್ರಹ್ಮದೇಶದಲ್ಲಾದ ಬಂಡಾಯವು ಇನ್ನೂ ಶಾಂತವಾಗಿಲ್ಲ. ಬಂಡುಗಾರರ ಹಿರ್ವ ಮುಖಂಡನಿಗೆ ಹೋದ ವಾರದಲ್ಲಿ ಇಂಗ್ರೇಜ ಸರಕಾರದವರು ಗಲ್ಲಿನ ಶಿಕ್ಷೆ ವಿಧಿಸಿದರು ಸರಕಾರದವರು ತೆಗೆದ ಜಾಹೀರನಾಮೆಯಿಂದ ಅನೇಕರು ಸರಕಾರಕ್ಕೆ ಶರಣು ಬರುತ್ತಿದ್ದಾರೆ. ಗಟ್ಟಿಗರಾದವರು ಜೀವದ ಹಂಗುದೊರೆದು ಕೊಲೆಗಳನ್ನು ಮಾಡುತ್ತಿದ್ದಾರೆ. ಈ ವಾರದಲ್ಲಿ ಒಬ್ಬ ಪೋಲೀಸ ಸಬ್ಬಇನ್ಸಪೆಕ್ಟರನನ್ನು ಗುಂಡಿನಿಂದ ಕೊಂದು, ಆತನ ಬಂದೂಕು ತಕ್ಕೊಂಡು ಗುಡ್ಡ ಸೇರಿದರು.

ಪೋಲಿಸ ಇನ್ಸಪೆಕ್ಟರ ಖಾ. ಬ. ಅಹಸನುಲ್ಲಾಖಾನರ ಕೊಲೆ.

....(೦)....

ಚಿತಗಾಂಗಿನಲ್ಲಿ ಫುಟಬಾಲಿನ ಆಟವಾಯಿತು. ಆಟ ನೋಡಲಿಕ್ಕೆ ಪೋಲಿಸ ಇನ್ಸಪೆಕ್ಟರ ಖಾನಬಹಾದ್ದೂರ ಅಹಸನುಲ್ಲಾಖಾನರು ಹೋಗಿದ್ದರು. ಆಟ ಮುಗಿದ ಬಳಿಕ, ಒಬ್ಬ ಬಂಗಾಲಿ ತರುಣನು ಇವರ ಮೇಲೆ ಏಳೆಂಟು ಸಾರೆ ಗುಂಡು ಹಾಕಿದನು. ಒಂದು ಸಾಹೇಬರ ಎದೆಗೆ ಬಡಿದು ಅವರು ಅಲ್ಲೇ ಸತ್ತು ಬಿದ್ದರು. ಪೋಲಿಸರು ಗುಂಡು ಹಾಕಿದ ಬಂಗಾಲಿ ತರುಣನನ್ನು ಹಿಡಿದಿದ್ದಾರೆ.

ಜಿಮಶೇಟಪೂರದಲ್ಲಿ ಹಿಂದೀ ಅಧಿಕಾರ.

....(೦)....

ಜಿಮಶೇಟಪೂರದಲ್ಲಿರುವ ಟಾಟಾ ಕಂಪನಿಯ ಕಬ್ಬಿಣದ ಕಾರಖಾನೆಯಲ್ಲಿ ಪರದೇಶಿಯರಾದಂಥ ಅನೇಕ ಯುರೋಪಿಯನ್ನರಿದ್ದಾರಷ್ಟೇ; ವ್ಯಾಪಾರ ಮಂದಿಯ ಮೂಲಕ ಕಂಪನಿಯವರು ಯುರೋಪಿಯನ್ನರನ್ನು ತೆಗೆದು, ಅವರ ಸ್ಥಳಗಳಲ್ಲಿ ಏತದ್ದೇಶಿಯರನ್ನೇ ನೇಮಿಸುತ್ತಿದ್ದಾರೆ. ಹೀಗೆ ಯುರೋಪಿಯನ್ನರು ಹೋದ ಮೂಲಕ ಏಳು ಆಫಿಸಗಳು ಹಿಂದೀ ಇಂಜಿನಿಯರರ ಮೇಲ್ವಿಚಾರಣೆಯೇ ನಡೆಯುತ್ತಿರುವವು.

ಎರಡು ಸಾವಿರ ಕಾರುಗಳು— ಮಹಾತ್ಮರ ವಿಲಾಯತಿಯ ಪ್ರವಾಸವು ಜಯಪ್ರದವಾಗಲೆಂದು ಮಹಾತ್ಮರಿಗೆ ಎರಡು ಸಾವಿರ ಕಾರುಗಳು ಬಂದಿವೆ. ಒಂದು ತಾರು ಲಾರ್ಡ ವಿಲಿಂಗಡನ್ನ ಸಾಹೇಬರಿಂದ ಬಂದಿದ್ದಿದೆ. ಇದನ್ನು ಹಡಗ ಹೋಗುತ್ತಿದ್ದಾಗ ಹಗ್ಗ ಬಿಟ್ಟು ಮೇಲೆ ತಕ್ಕೊಂಡರು.

...ತ್ತದೆ; ಪ್ರೋ. ಕೆ. ವ್ಹಿ. ಅಯ್ಯಂಗಾರರವರು ಬರುವದ... ಸಂದೇಹವಿಲ್ಲ; ಬೆಂಗಳೂರಿನ ಗವ್ಹರ್ನಮೆಂಟ ...ಪ ಫ್ಯಾಕ್ಟರಿಯ ಸುಪರಿಂಟೆಂಡೆಂಟರಾದ ಎಸ್. ... ಶಾಸ್ತ್ರಿ ಅವರನ್ನು ಬರಮಾಡಿಕೊಳ್ಳುವದು ಗೊ...ತ್ತಾಗಿದೆ; ಉತ್ತರ ಕರ್ನಾಟಕದ ಮೊದಲನೆಯ ಪಿ...ಚ್ ಡಿ. ಪದವೀಧರರಾದ ಪ್ರೊ. ನಂದೀಮಠರವ...ನ್ನು ಕರೆಯಿಸಲಿದ್ದೇವೆ; ಶ್ರೀ ಬೇಲೂರ ಕೇಶವದಾ...ಸರೂ ಹುಲಿಕುಂಟಿಮಠ ಶಿವಮೂರ್ತಿಶಾಸ್ತ್ರಿಗಳಿ... ಉಪಸ್ಥಿತಿಯನ್ನು ನಿಗೂ ಬರಲು ಬಿ...ಪಿಸಿಕೊಂಡಿದೆ; ಶ್ರೀ ಸಾಂಜೆ ಮಂಗೇಶರಾಯರೂ ...ರುವವರಿದ್ದಾರೆ. ಅಲ್ಲದೆ ಈ ವರ್ಷ ಹೊಸದೊಂ... ವಿಶಿಷ್ಟ ಕಾರ್ಯವೆಂದರೆ ನಾಡಹಬ್ಬದಲ್ಲಿ ಜರ...ಗುವ ಎಲ್ಲ ವಿಷಯಗಳ ಕುರಿತು ಸುರಿತ ಲೇಖಕರ ...ಖನಗಳನ್ನೂ ದೃಶ್ಯಗಳ ಚಿತ್ರಪಟಗಳನ್ನೂ ಜೋಡಿ... ಪುಸ್ತಕ ರೂಪದಲ್ಲಿ ಪ್ರಕಟಿಸಿ ನಾಡಹಬ್ಬದ ಮ...ಹತಿಯನ್ನೂ ಮರ್ಮವನ್ನೂ ತಿಳಿಸಿ, ಇಡೀ ಕರ್ನಾ...ಟಕಕ್ಕೆ ಜ್ಞಾನದ ಹೂರಣದೂಟವನ್ನು ... ...ಡಲಿದೆ.

ಇಷ್ಟೆಲ್ಲಾ ಕಾರ್ಯಗಳು ಸುಸೂತ್ರವಾಗಿ ನೆ...ರವೇರಬೇಕಾದರೆ, ಎಷ್ಟು ಮಿತವ್ಯಯದಿಂದ ವೆಚ್ಚ ಮಾಡಿದರೂ ಒಂದು ಸಾವಿರ ರೂಪಾಯಿ ಗಳಾದರೂ ಬೇಕು. ಸುಶಿಕ್ಷಿತರ ಬೀಡಾದ ಕರ್ನಾಟಕದ ಕೇಂದ್ರವೆನಿಸುವ ಧಾರವಾಡದ ನಾಗರಿಕರ ಅಭಿಮಾನವೂ ಉತ್ಸಾಹವೂ ಔದಾರ್ಯವೂ ಇಷ್ಟು ಹಣವನ್ನು ಅನಾಯಾಸವಾಗಿ ಒದಗಿಸಿ ಕೊಡುವದೆಂದು ನಂಬಿಯೇ ಉತ್ಸವ ಮಂಡಲದವರು ಈ ಮಹೋತ್ಸವವನ್ನು ಹಮ್ಮಿದ್ದಾರೆ.

ತಮ್ಮ ವಿಧೇಯರಾದ

ಪಾಟೀಲ ಬಸನಗೌಡ, ದೀಕ್ಷಿತ ನರಸಿಂಗರಾಯ, ಚಿಟ್ನಿ ಅಣ್ಣಾಚಾರ್ಯ, ಕಂಠೀಕರ ದತ್ತಾತ್ರೇಯ ರಾಯ, ಸಂಪಡಿ ಗುರುಮಲ್ಲಪ್ಪ, ನರಗುಂದ ರಾಮರಾಯ, ಆಲೂರ ವೆಂಕಟರಾಯ, ಎಚ್. ಎಸ್. ಶಿವಲಿಂಗಶಾಸ್ತ್ರಿ, ಮುದವೀಡು ಕೃಷ್ಣರಾಯ, ಜೋಗ ವಿಶ್ವನಾಥರಾಯ, ಕುಲಕರ್ಣಿ ಕರವೀರಪ್ಪ, ಪಾಟೀಲ ದ್ಯಾವನಗೌಡ, ಗುಂಚಾಳ ಶಾಂತಪ್ಪ, ದೇಶಪಾಂಡೆ ನಾರಾಯಣರಾಯ, ದೇಸಾಯಿ ಹಣಮಂತರಾಯ, ದಿವಾಕರ ರಂಗನಾಥ, ಹಿರೇಮಠ ಗದಿಗಯ್ಯ, ನಾಡಿಗೇರ ಭಾಸ್ಕರರಾಯ.

ಇಂಗ್ಲಂಡದ ಈಗಿನ ಅದಾಯದ ಕೊರತೆಯನ್ನು ಪೂರ್ಣ ಮಾಡಲು ಅಮೇರಿಕೆ ಮತ್ತು ಫ್ರಾನ್ಸ ಸರಕಾರಗಳು ಹತ್ತುದಶ್ಲ ರಕಮನ್ನು ಸಾಲ ಕೊಡಲು ಸಿದ್ಧವಾಗಿರುತ್ತವೆ. ಆ ವಿಚಾರವಾಗಿ ಪತ್ರವ್ಯವಹಾರ ನಡೆದಿರುತ್ತದೆ.

The Asian Life Assurnance Co. Ltd

Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗಬೇಡಿರಿ. ಈ ಕಂಪನಿಯ
ವಿಮೆಯ ರಕಮು ರೂ. ೧,೨೫,೦೦೦,೦೦ ಕಂತದ ಉತ್ಪನ್ನ ರೂ. ೭೦೦,೦೦೦
ವಿಮೆಯ ಹಣ ತಿರಿಗಿ ಕೊಟ್ಟದ್ದು ೧೦,೦೦,೦೦೦
ಬಂದಿಗಿ ೨೫,೦೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ್ ರಾಯಬಾಗಕರ ಮತ್ತು ಕುಲಕರ್ಣಿ. ಧಾರವಾಡದ ಏಜಂಟರು
ಬಿ. ಎಚ್. ಪಾಟೀಲ ಹಾವೇರಿಯ ಚೀಫ ಏಜಂಟರ

ಕೆ. ವ್ಹಿ. ಹುಲಸೋಗಿ, ಬಿ. ಎ. ಕರ್ನಾಟಕದ ಬ್ರಾಂಚ ಮ್ಯಾನೇಜರ
ಹುಬ್ಬಳಿಯ ಏಜಂಟರು— ಶ್ರೀ. ಎಸ್. ಎಮ್. ದೊಡ್ಡವಾಡ ಮತ್ತು ಶ್ರೀ. ಬಿ. ಟಿ. ಶಿರೋಳಕರ.

ಜನಿವಾರ ಬಿದ್ದು, ಬಂದಾಗ, ನಿಮ್ಮ ಹೆಂಡರುಮಕ್ಕಳು ಕೈಬಿಡದೆ ಇರುವಂತೆ ಮಾಡುವ

ಒಂದೇ ಒಂದು ಉಪಾಯವು

ಒಂದೇ ಸಾವಿರ ರೂಪಾಯಿ ... ಜೀವವಿಮೆ ಇಳಿಸಿದರೆ ೫೦೦ ರೂ. ಗಳ ... ಗೋಲ್ಡನ್ (...) ಪಾಲಿಸಿಯನ್ನು ತೆಗೆದುಕೊಳ್ಳಿರಿ. ... ಈ ಪಾಲಿಸಿಯ ಬಗ್ಗೆ ... ಪತ್ರವ್ಯವಹಾರ ಮಾಡಿರಿ, ... ಏಜಂಟರನ್ನು ಕೇಳಿಕೊಳ್ಳಿರಿ. ... ಪಾಲಿಸಿಯನ್ನು ಕೊಡುವ ... ಕಂಪನಿಯೊಂದೇ ಇಗಿರುತ್ತದೆ.

...ಜೈಲಿನಲ್ಲಿ ಬಂದಿವಾಸದಲ್ಲಿರುವ ... ಖಾನ ಮಹಾರಾಜರಿಗೆ ಅಲ್ಲಿಯ ಹವೆಯು ಸರಿ ಬಾರದ್ದರಿಂದ, ಅವರ ಪ್ರಕೃತಿಯು ನೆಟ್ಟಗಿರುವದಿಲ್ಲ. ಆದ್ದರಿಂದ ಪ್ರಕೃತಿ ಸುಧಾರಿಸಿಕೊಳ್ಳಲು ಅವರನ್ನು ಬಂಧಮುಕ್ತ ಮಾಡಬೇಕೆಂದು ಅನೇಕ ಕಡೆಯಿಂದ ಸರಕಾರಕ್ಕೆ ಸೂಚನೆಯಾಗಿರುತ್ತದೆ.

ಜಾಹೀರಾತಿನ ದರಗಳು

ಸಿಂಗಲ ಕಾಲಮಿನ ಪತ್ತಿ ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದಾಣೆ ... ಇಂಗ್ಲಿಷ ಪ್ರತಿಯೊಂದು ಸಾಗಿ ... ಆಣೆ ಸರಕಾರ, ಮ್ಯುನಿಸಿಪಾಲಿಟಿ, ... ಕೋರ್ಟು ... ಮುಂತಾದ ನಾಮಾಂಕಿತ ನೋಟೀಸುಗಳಿಗೆ ... ಇಂಗ್ಲಿಷಿನ ... ಅದು ... ದಿನ ... ವಳಿಗಳಿಗೆ ಇನ್ನಾದಿ ... ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಮೈಸೂರು ಊದುಬತ್ತಿ

—(೦)—

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ ೩—೦—೦
ಕೃಷ್ಣ ಮಾರ್ಕಿನ ಅಸ್ಸರು ಕೊಳೆ ೧ಕ್ಕೆ ... —೦
...—೧—೦ ಮೈಸೂರು ...
... ...

ಈ ಪತ್ರವನ್ನು ... ಆಚಾರ್ಯ ಹೊಸಕೇರಿ ಇವರು ಧಾರವಾಡ ... ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨] ಧಾರವಾಡ ಗುರುವಾರ ತಾರೀಖು ೩ ನೇ ಸಪ್ಟೆಂಬರ ೧೯೩೧ [ಸಂಚಿಕೆ ೨೦೦

ಜ್ಯೋತಿ, ಗಂಜೀಕರ ಮತ್ತು ಕಂಪನಿ

ಶುಕ್ರವಾರಪೇಟೆ ಧಾರವಾಡ

ಇವರನ್ನು

ಮುಂಬಯಿ ಹಾಸ್ಪಿಟಲ್ ಡ್ರಗ್ ಹೌಸ್, ಅನ್ನು ಅವರನ್ನ ಕಂಪನಿ, ಲಿ.

ಇವರು

ಧಾರವಾಡ ಜಿಲ್ಲೆಯ

ಜಿಲ್ಲೆಯ ಏಜಂಟ

[illegible] ನೇಮಿಸಿದ್ದಾರೆ.

ಈಗ ಜಿಲ್ಲೆಯ ಎಲ್ಲ ಮುಖ್ಯ ಸ್ಥಳಗಳಲ್ಲಿ

ಸಬ್ ಏಜಂಟ

[illegible] ನೇಮಿಸುವದದೆ. ಈ ಕೆಲಸಕ್ಕೆ ಮಾಡಲಿಚ್ಛಿಸುವವರು ತಮ್ಮ ಖಾತ್ರಿಯ ಬಗ್ಗೆ ಎಲ್ಲ ಸೂಚಿಸಿ ಕೊಟ್ಟು ಚೀಫ್ ಏಜಂಟರಿಗೆ ಬರೆಯಬೇಕು. ಖಾತ್ರಿಯಿಂದ ಕೆಲಸ ಮಾಡುವವರಿಗೆ ಪೂರ್ಣ ಪ್ರೋತ್ಸಾಹನ ಸಿಗುವದು.

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ಬಾವೆಯ ಕೀರ್ತನ.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ಬಾವೆಯ ಕೀರ್ತನವನ್ನು ಪುಸ್ತಕರೂಪದಿಂದ ಮುದ್ರಿಸಿ ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ಪಾದೇ ಶ್ರೀ ಸಿದ್ಧಾರೂಢರ ಆಸನ [illegible], ಶ್ರೀ ಆರೂಢಸ್ವಾಮಿಗಳ ಫೋಟೋಯನ್ನು, ಮತ್ತು ಮುನಿಸಭೆಯ ಶ್ರೀ. ನಟಸಿಂಹ ಇವರ [illegible] ಕೊಡಲ್ಪಟ್ಟಿ ದೆ. ವಾಣಿ, ಪ್ರತಿಭಾ, ಹಾಗು ಮುನಸಪರ ಬಾವಚಿತ್ರಗಳನ್ನು ಕೊಡಲ್ಪಟ್ಟಿದೆ. ಪುಸ್ತಕ [illegible] ಜಗ್ಗದ ಸೂಚನೆಯ ಮೇರೆಗೆ ಈ ಪುಸ್ತಕವನ್ನು [illegible] ಮುದ್ರಿಸಿ ಮಾರಾಟಕ್ಕೆ [illegible] ಮಾಡಿ [illegible]. ಇದರ [illegible] ಪ್ರತಿಗಳನ್ನು ತೆಗೆಸಿದೆ. ಬಾವೆಯ [illegible] ಇಷ್ಟು ಪ್ರತಿಗಳು ತೀರ [illegible]. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ, ಹತ್ತು ಪ್ರತಿ [illegible] ಒಂದು ಪ್ರತಿ ಬಕ್ಷೀಸ ಕೊಡಲ್ಪಡುವದು. [illegible] ಕಮೀಶನ ಕೊಡಲಾಗುವದು. ವ್ಹಿ. ಪಿ. [illegible] ಬೇರೆ ಒಂದುವರೆ ಪ್ರತಿಗಳನ್ನು ಬೇಡುವವರು [illegible] ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

ದಿ ಧಾರವಾಡ ಅರ್ಬನ ಕೋಆ.

ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಧಾರವಾಡದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡವಲು ಎಂಟು ಲಕ್ಷದಮೇಲುಂಟು. ಠೇವು [illegible] ದರಿಂದ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಠೇವುಗಳಿಗೆ ಚೆನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವ ರಿಂದ ತಿಳಕೊಳ್ಳಬೇಕು.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ

ಚಿಲ್ಲರ ಪತ್ರಿಕೆ

೧೨ ತಿಂಗಳು	ರೂ. ೧-೨-೦
೬ ,,	೦-೦-೯
೩ ,,	೦-೮-೦

ವಾರ ಪತ್ರಿಕೆ ೧ ವರ್ಷಕ್ಕೆ ೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳ ಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ತಾರೀಖು ೩-೯-೧೯೩೧ನೇ ಇಸ್ವಿ

ಹಡಗದಲ್ಲಿ ಕಂಡುಬಂದ ಮಹಾತ್ಮರ ಮೋಜಿನ ನಡಿನುಡಿಗಳು.

ಮಹಾತ್ಮರು ಹಡಗದಲ್ಲಿ ಕುಳಿತು ಪ್ರವಾಸ ಮಾಡುತ್ತಿದ್ದರೂ, ಅವರ ವಿಷಯಕವಾಗಿ ಅನೇಕ ಮಹತ್ವದ ಸಂಗತಿಗಳ ತಾರುಗಳು ಹಿಂದುಸ್ಥಾನಕ್ಕೆ ಬರುತ್ತಲಿವೆ. ಗವ್ಹರ್ನರ ಜನರಲ್ಲರಂಥವರು ಒಮ್ಮೆ ಹಡಗದಲ್ಲಿ ಕೂತಕೊಂಡರೆ- ತಿರಿಗಿ ದಂಡೆ ಮುಟ್ಟುವ ತನಕ ಅವರು ಜಗತ್ತಿನಲ್ಲಿರುವರೋ ಎಂಬ ಸಂಶಯ ತಳೆಯ್ಕೊಳ್ಳುವಷ್ಟು ಅಜ್ಞಾತರಾಗುತ್ತಾರೆ ಹಾಗೆ ಮಹಾತ್ಮರ ವಿಷಯವಾಗಲಿಲ್ಲ. ಮಹಾತ್ಮರದೆಲ್ಲ ಮಹತ್ವವೇ ಆಗುತ್ತದೆ.

ಹಡಗದ ಕಪ್ತಾನನು ಯುರೋಪಿಯನ್ನನಾಗಿದ್ದಾನೆಂಬದು ಸಹಜವೇ. ಈ ಸಾಹೇಬನು ಮಹಾತ್ಮರ ಸಲುವಾಗಿ ಬೇಕಾದ ಅನುಕೂಲತೆಗಳನ್ನೊದಗಿಸಿಕೊಡಲಿಕ್ಕೆ ಕೈ ಕಟ್ಟಿಕೊಂಡು ಸಿದ್ಧನಾಗಿರುತ್ತಾನೆ. ಮಹಾತ್ಮರು ತನ್ನ ಹಡಗದಲ್ಲಿ ಬಂದಕೂಡಲೆ- ಈತನು ಅವರ ಸ್ವಾಗತ ಮಾಡಿ, ನಗೆಮೊಗದಿಂದ ಸ್ವಾಮೀ ನೀವು ನನ್ನ ಸೆರೆಯಾಳಾದಿರೆಂದನು. ಮಹಾತ್ಮರು ಸಮರ್ಪಕ ಉತ್ತರ ಕೊಡುವದರಲ್ಲಿ ಹಿರಿದು. ಕಪ್ತಾನರೇ- ನಾನು ಸೆರೆಯಾಳಿಗಿಂತ ಉತ್ತಮನಾದ ಅಂಬಿಗನಾಗಿದ್ದೇನೆಂದು ತಟ್ಟನೆ ಉತ್ತರ ಕೊಟ್ಟರು.

ಹಡಗಿನಲ್ಲಿರುವ ಯುರೋಪಿಯನ್ನರಿಗೆ ಲಂಡ ಪಂಚೆಯನ್ನುಟ್ಟ ಮಹಾತ್ಮರನ್ನು ನೋಡುವುದೊಂದು ಮೋಜೇ ಆಗುತ್ತದೆ. ಅವರಿಗೆ ಇವರ ಭಾವಪಟ ತಕ್ಕೊಳ್ಳಬೇಕೆಂಬ ಹವ್ಯಾಸ ಬಹಳ. ಯುರೋಪಿಯನ್ನರು ಬಹುಶೀಘ್ರವಾಗಿ ಸಂಗಡ ಫೋಟೋದ ಸಾಹಿತ್ಯ-ವಿಡುವರು. ಕೆಲವರು ಮಹಾತ್ಮರಿಗೆ ತಿಳಿಯದಂತೆ ಸ್ನ್ಯಾಪಶಾಟ ತಕ್ಕೊಳ್ಳುವರು. ಕೆಲವರು ಹೇಳಿ ತಕ್ಕೊಳ್ಳುವರು. ಯಾರಿಗೂ ಇಲ್ಲೆನ್ನದೆ ಅವರನ್ನು ಸಂತೋಷಪಡಿಸುವರು.

ಪ್ರವಾಸದಲ್ಲಿ ಸೂತ್ರರೂಪವಾಗಿ ಧರ್ಮಾಚರಣೆ ಮಾಡಬೇಕೆಂದು ಧರ್ಮಶಾಸ್ತ್ರಜ್ಞರು ಹೇಳಿದ್ದಾರೆ. ಆದರೆ ಮಹಾತ್ಮರ ವಿಚಾರವಾಗಿ ಅವರ ನಿತ್ಯಕರ್ಮಗಳು ಅವಿಚ್ಛಿನ್ನವಾಗಿ ನಡೆದಿವೆ. ಅವರು ತಮ್ಮ ನಿಶ್ಚಯಿಸಿದಂತೆ ಹೊತ್ತಾದ ಕೂಡಲೆ- ದಿನಾಲು ನೂಲುವಷ್ಟು ನೂಲುವರು. ಸಾಯಂಕಾಲವಾದ ಕೂಡಲೆ ಭಗವತ್ಪ್ರಾರ್ಥನೆ ಮಾಡುವರು. ಪ್ರಾತಃಕಾಲದಲ್ಲಿದ್ದು, ಆ ಕಾಲದ ಧಾರ್ಮಿಕ ವಿಧಿ ಮಾಡುವರು. ಸಮುದ್ರದ ಹವೆಯು ಕೆಲವುಟ್ಟಿಗೆ ಬಾಧಿಸುವಂಥಹದಾಗಿದ್ದರೂ, ಡೆಕ್ಕಿನ ಮೇಲೆ ನಕ್ಷತ್ರಗಳನ್ನವಲೋಕಿಸುತ್ತಾ ಮಲಗುವರು. ನರ ಪಟ್ಟಣಿಯುವರು ಫಸ್ಟ ಕ್ಲಾಸಿನಲ್ಲಿ ಬನ್ನಿರೆಂದು ಆಗ್ರಹ ಮಾಡಿದರೂ, ಇವರು ತಮ್ಮ ಸ್ಥಳಬಿಟ್ಟು ಕದಲಲಿಲ್ಲ. ಅನೇಕ ಜನ ಯುರೋಪಿಯನ್ನರು ಮಹಾತ್ಮರ ಕೂಡ ತಾವೂ ಪ್ರಾರ್ಥನೆ ಮಾಡಿದರು.

ಮಹಾತ್ಮರು ಹಡಗವೇರಿದ ದಿವಸವನ್ನು ಆನಂದದಿಂದಲೂ ಗಡಬಡಿಯಿಂದಲೂ ಕಳೆದರು. ಪ್ರಯಾಣಿಕರ ಕೂಡ ಹರಟೆ ಹೊಡೆದರು. ಹುಡುಗರ ಕೂಡ ಆಟವಾಡಿದರು. ಶಾಲೆಯ ಹುಡುಗನು ಮೊದಲು ಪ್ರವಾಸಕ್ಕೆ ಹೊರಡುವಾಗಿನಂತೆ ಯಾವದೊಂದು ಸಂಗತಿ ತಿಳಕೊಳ್ಳಲು ಉತ್ಸುಕರಾಗಿದ್ದರು.

ಮಹಾತ್ಮರೊಬ್ಬರಿಗೇ ಸಮುದ್ರ ಹತ್ತಲಿಲ್ಲ. ಪಂಡಿತ ಮಾಲವಿಯಾ, ದೇವಿ ಸರೋಜನಿ ಕುಮಾರಿ ಮೀರಾಬಾಯಿ, ಮಿ. ಪ್ಯಾರೇಲಾಲ ಇವರೆಲ್ಲರಿಗೂ ಸಮುದ್ರ ಹತ್ತಿದೆ.

ಮಹಾತ್ಮರು ಸಂಗಡ ಎರಡು ಆಡು ಹೈದಿದ್ದಾರೆಂಬದು ಸುಳ್ಳು. ಅವರ ಡಾಕ್ಟರರಾದ ಶ್ರೀ. ಮೇಥಾನವರು ಒಂದು ಟನ್ನ ಹಾಲನ್ನು ಕುದಿಸಿ, ಶುದ್ಧ ಮಾಡಿ ಕೊಟ್ಟಿದ್ದಾರೆ. ಹಾಲಿನ ಕೂಡ ನೆಲಗಡ್ಲೆ, ಉತ್ತತ್ತಿ ಮೊದಲಾದ ಪದಾರ್ಥಗಳು ಆಹಾರಗಳಾಗಿವೆ.

ವಿಲಾಯತಕ್ಕೆ ಹೊರಟಿರುವವರು ಪೋರ್ಟಸಯ್ಯದ ಬಂದರದಲ್ಲಿ ಮಹಾತ್ಮರ ಹಡಗವೇರುವರು. ಲಂಡನ ಮುಟ್ಟುವ ತನಕ ಉಭಯತರ ನಡುವೆ ಹಿಂದೂ ಮುಸಲಮಾನ ಐಕ್ಯದ ವಿಷಯವಾಗಿ ಸಂಭಾಷಣೆ ನಡೆಯುವದು. ತತ್ಪೂರ್ವದಲ್ಲಿ ಸಾಹೇಬ ಶ್ವಾಸಾಸಿ ಮೊದಲಾದವರ ಕೂಡ ರಾಜಿಯ ವಿಚಾರವಾಗಿ ಸಂಭಾಷಣೆ ನಡೆಸಿದ್ದಾರೆ. ಈ ವಿಚಾರ ವಿನಿಮಯವನ್ನು ಪ್ರಸಿದ್ಧ ವ್ಯಾಪಾರದೆಂದು ಕಡ್ಡಾಯವಾಗಿ ಗೊತ್ತಾದ್ದರಿಂದ ಎಲ್ಲರೂ ಬಾಯಿ ಹೊಲಿದುಕೊಂಡಿದ್ದಾರೆ.

ಜಗನ್ನಾಥದಲ್ಲಿ ಬರುವ ಫೇಬ್ರುವರಿಯಲ್ಲಿ ನೇರಬೇಕಾದ ಕಾಂಗ್ರೆಸದ ದೆಸೆಯಿಂದ ವರ್ಕಿಂಗ ಕಮೀಟಿಯು ಸೇರಿ, ಪಂಡಿತ ನೀಲಕಂಠದಾಸರನ್ನು ಸ್ವಾಗತ ಕಮೀಟಿಯ ಚೇರಮನ್ನರಾಗಿ ಆರಿಸಿದರು.

ಮಹಾತ್ಮರು ಯಾವ ಉಡಿಗೆಯಲ್ಲಿ ಬಾದಶಹರ ದರ್ಶನಕ್ಕೆ ಹೋಗುವರು?

—(೦)—

ಹಡಗದಲ್ಲಿ ಸಹ ಮಹಾತ್ಮರು ಪಂಚೆಯನ್ನು ಬಿಡಲಿಲ್ಲ. ಇದೇ ಉಡಿಗೆ ತೊಡಿಗೆಯಲ್ಲಿ ಇವರು ಲಂಡನದಲ್ಲಿ ಇರುವದೂ ಆಗುವದರಿಂದ, ಮಹಾತ್ಮರು ಇದೇ ಉಡಿಗೆಯಲ್ಲಿ ಸಮ್ರಾಟ ಪಂಚಮ ಜಾರ್ಜ ಬಾದಶಹರನ್ನು ಕಾಣಲಿಕ್ಕೆ ಹೋಗುವರೆಂದೂ ಈ ಅರ್ಧ ದಿಗಂಬರರು ಈ ರೀತಿಯಾಗಿ ಅರಮನೆಗೆ ಹೋಗುವದು, ಇಂಗ್ರೇಜಿ ರಿವಾಜಕ್ಕೆ ವಿರುದ್ಧವಾದದ್ದೆಂದೂ ಈಗಾಗಲೇ ಚರ್ಚೆ ನಡೆದಿದೆ. ಹಡಗದಲ್ಲಿಯಂತೆ ಮಾರ್ಸೆಲಿಸ, ಲಂಡನ ಮುಂತಾದ ಸ್ಟೇಶನಗಳಲ್ಲಿಯೂ ಮಹಾತ್ಮರ ಭಾವಪಟ ತಕ್ಕೊಳ್ಳಲು- ವಿಲಾಯತಿ, ಅಮೇರಿಕ ಮತ್ತು ದಕ್ಷಿಣ ಆಫ್ರಿಕೆಯ ಅನೇಕ ಜನರು ಬರುವರೆಂದು ಸುದ್ದಿ ಬಂದಿದೆ.

ಕೊಲ್ಹಾಪೂರ ಸರಕಾರಕ್ಕೂ ರಾಷ್ಟ್ರೀಯ ನಿಶಾನೆ ಬೇಡಾಯಿತು

— ೦—

ಮೈಸೂರ ದರಬಾರಿನವರಂತೆ ಕೊಲ್ಹಾಪೂರ ದರಬಾರಿನವರೂ ರಾಷ್ಟ್ರೀಯ ನಿಶಾನೆಯ ವಿರುದ್ಧ ಶಸ್ತ್ರ ಹಿರಿದಿದ್ದಾರೆ. ದರಬಾರಿನವರು ಹೊಸ ಧ್ವಜವನ್ನೇರಿಸುವದಕ್ಕೆ ಪ್ರತಿಬಂಧ ಮಾಡಲು- ಶ್ರೀಯುತರಾದ ಬಳವಂತರಾವ ಮಾನೆ ಮತ್ತು ಶಿದ್ಲಿಂಗಪ್ಪಾ ಕಾವೇರಿಯವರ ಮೇಲೆ ನೋಟೀಸು ತೆಗೆದರು. ವಂದನೆಯ ದಿವಸ ಮುಖ್ಯ ಬೀದಿಗಳಲ್ಲಿ ಸಶಸ್ತ್ರ ಪೋಲೀಸರ ಕಾವಲಿಟ್ಟರು. ಆಗ ಈ ತರುಣರೀರ್ವರು ಪಂಚಗಂಗೆಗೆ ಹೋಗಿ, ಸ್ನಾನಮಾಡಿ, ದಂಡೆಯ ಮೇಲೆ ನಿಶಾನೆಯೂರಿ ವಂದನೆಯ ಗೀತ ಹಾಡ ಆರಂಭಿಸಿದರು. ಈ ಸುದ್ದಿ ಕೇಳಿ, ಪೋಲೀಸರು ಅಲ್ಲಿಗೆ ಹೋಗಿ, ಇವರೀರ್ವರನ್ನು ಹಿಡಕೊಂಡು ಬಂದರು. ಈ ಉತ್ಸವಕ್ಕಾಗಿ ಸಂಸ್ಥಾನದ ಹೊರಗಿನ ಕೆಲ ಜನರು ಬಂದಿದ್ದರು ಪೋಲೀಸರು ಇವರನ್ನು ಹದ್ದುಪಾರ ಮಾಡಿದರು.

ಇಬ್ಬರಿಗೂ ಶಿಕ್ಷೆ

ಶ್ರೀ. ಮಾನೆ ಮತ್ತು ಕಾವೇರಿಯವರನ್ನು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಇವರು ವಿಚಾರಣೆಯಲ್ಲಿ ಭಾಗತಕ್ಕೊಳ್ಳಲಿಲ್ಲ. ಇಬ್ಬರಿಗೂ ಒಂದೊಂದು ತಿಂಗಳು ಸಕ್ತ ಕೈದು ಮತ್ತು ೪೦ ರೂಪಾಯಿ ದಂಡ, ದಂಡ ಕೊಡದಿದ್ದರೆ- ಒಂದು ವಾರ ಹೆಚ್ಚಿಗೆ ಕೈದೆಂದು ಶಿಕ್ಷೆ ವಿಧಿಸಿದರು. ಕೂಡಲೆ ಇವರನ್ನು ತುರಂಗಕ್ಕೆ ಒಯ್ದರು. ತುರಂಗ

ಬಾಗಿಲದಲ್ಲಿ ಇವರು ಮಹಾತ್ಮಾ ಗಾಂಧಿಕಿ ಜಯ ನೆಂದು ಜಯ-ಘೋಷ ಮಾಡಿದರು.

ಚಿತಗಾಂಗಿನಲ್ಲಿ ಮುಸಲಮಾನರ ದಂಗೆ ಮತ್ತು ಕೊಂಡಾಟಿಕೆ.

....(೦)....

ಪೋಲೀಸ ಇನ್ಸಪೇಕ್ಟರ ಖಾ. ಬ. ಅಶನು ಲ್ಲಾ ಖಾನನನ್ನು ಹಿಂದೂ ಕ್ರಾಂತಿಕಾರಕನು ಕೊಂದ ನೆಂಬ ಕ್ರೋಧದಿಂದ ಮುಸಲಮಾನರು ಪಟ್ಟಣದಲ್ಲಿ ದಂಗೆ ಮಾಡಿ, ಕೊಂಡಾಟಿಕೆ ನಡೆಸಿದರು. ಅನೇಕ ಮನೆಗಳನ್ನು ಸುಟ್ಟರು. ಹಿಂದೂ ಚಿನಿವಾಲರ ಅಂ ಗಡಿಗಳಲ್ಲಿಯ ಬೆಳ್ಳಿ ಬಂಗಾರದ ಒಡಿವೆಗಳ ಸುಲಿಗೆ ಮಾಡಿದರು. ಡಿ|| ಮ್ಯಾಜಿಸ್ಟ್ರೇಟರಿಗೂ ಹೊಡತ ಕೂತಿದೆ. ದಂಗೆಯನ್ನು ಶಾಂತ ಪಡಿಸಲು- ಸರಕಾ ರದವರು ರಾತ್ರಿಯಲ್ಲಿ ಯಾರೂ ತಿರುಗಾಡಬಾರದೆಂ ದು ಜಾಹೀರನಾಮೆ ಹಚ್ಚಿದ್ದು, ಪಟ್ಟಣದ ತುಂಬ ಪೋಲೀಸ ಬಂದೋಬಸ್ತು ಇಟ್ಟಿದ್ದಾರೆ. ಕೋರ್ಟು ಕಚೇರಿಗಳು ಬಂದಾಗಿವೆ. ಹಿಂದೂ ಭಾಗವು ಭಯ ಭೀತವಾಗಿದ್ದು ಯುರೋಪಿಯನ್ನರ ಭಾಗವು ನಿಶ್ಚಿಂ ತೆಯಿಂದಿರುತ್ತದೆ.

ಸೆರೆ ಬಂದು ಮಾಡಬೇಕೆಂದರೆ- ಸೆರೆ ಕುಡಿಸೇ ಬಿಡುವರು.

....(೦)....

ರಾಜಕೋಟಿನಲ್ಲಿ ಸೆರೆಯ ಉತ್ಪನ್ನವು ಮೂ ವತ್ತು ಸಾವಿರ ರೂಪಾಯಿಯಿತ್ತು. ಕಳೆದೈದು ವರ್ಷಗಳಲ್ಲಿ ಅದು ಇಳಿಯುತ್ತಾ ಆರು ಸಾವಿರಕ್ಕೆ ಬಂದಿದೆ. ಇದನ್ನಿಷ್ಟು ಬಂದು ಮಾಡಿ ಬಿಡಿರೆಂದು ದರಬಾರದ ಕೌನ್ಸಿಲ ಸಭೆಯಲ್ಲಿ ಒಬ್ಬ ಮೆಂಬರರು ಪ್ರಶ್ನೆ ಮಾಡಲು- ಮದ್ಯಪಾನವನ್ನು ಬಂದು ಮಾ ಡಲಾರೆವು; ಬೇಕಾದರೆ- ಕುಡುಕರಿಗೆ ಸೆರೆ ಕಂದು ಪೂರೈಸುವೆವೆಂದು ಅಬಕಾರಿ ಖಾತೆಯ ಕಾಮದಾ ರನು ಉತ್ತರಕೊಟ್ಟನು.

ಸಮುದ್ರದಲ್ಲಿ ಸುಟ್ಟರ ಗಾಳಿ

—(೦)—

ಮಹಾತ್ಮರು ಹೋಗುತ್ತಿರುವ ರಾಜಪುತಾನ ಹಡಗವು ಏಡನ ತಲ್ಪಿತು. ಆದರೆ ಹವೆಯು ಕೆಟ್ಟು, ಗಾಳಿಯು ಬಲವಾಗಿ ಬೀಸಿ, ಸಮುದ್ರವು ಅಲ್ಲೋಲಕಲ್ಲೋಲವಾಗಿರುತ್ತದೆ. ಕಾರಣ ಇಂದ್ಯ ಲಯಂಕಾಲದ ತನಕ ಹಡಗವು ಏಡನದಲ್ಲಿಯೇ ವಸತಿ ಮಾಡುವದು.

ಭೂಕಂಪದಿಂದ

ಸ್ಟೇಶನಗಳು ನೆಲದಲ್ಲಿ ಮುಣುಗಿದವು

....(೦)....

ಕ್ವೇಟಾದಲ್ಲಾದ ಭೂಕಂಪಕ್ಕಿಂತ ಹೆಚ್ಚು ಕಡುಕರವಾದ ಭೂಕಂಪವು. ಸಿಂಧದಲ್ಲಾಯಿತು. ಶಿಕಾರಪೂರ, ಮಿಯಶೀಖಾಸಿ, ಲಾರಖಾಣಾ ಮುಂ ತಾದ ಪಟ್ಟಣಗಳಲ್ಲಿಯ ದೊಡ್ಡ ದೊಡ್ಡ ಮನೆ ಗಳು ಆದರಿ ಉರುಳಿ ಬಿದ್ದಿರುತ್ತವೆ. ರೇಲ್ವೆದಾರಿ ಯ ಮೇಲಿರುವ ಪನ್ನೀರ, ಧುದ್ರಾ ಮತ್ತು ಪೇ ಮಾಸಿ ಎಂಬ ಮೂರು ಸ್ಟೇಶನಗಳು ನೆಲಬಿರಿದು, ಭೂಮಿಯ ಹೊಟ್ಟೆಯಲ್ಲಿ ಅಡಗಿ ಹೋದವು.

ಜಲಪ್ರವಾಹದಿಂದ ಎರಡೂವರೀ ಲಕ್ಷ ಜನರು ಸತ್ತರು.

....(೦)....

ಚೀನದಲ್ಲೊಡೆದ ಅದ್ಭುತ ಸರೋವರದ ಒಡ್ಡಿನಿಂದ ಹೊರಬಿದ್ದ ನೀರು ನೂರಾರು ಮೈಲ್ಯ ವಿಸ್ತಾರವಾಗಿ ಸಮುದ್ರದಂತೆ ನಿಂತು, ಅನೇಕ ಪ ಟ್ಟಣ ಹಳ್ಳಿಗಳಲ್ಲಿ ಹಾಹಾಕಾರವಾಗಿ ಹೋಯಿತು. ಜನರು ನರಿನಾಯಿಗಳಂತೆ ಸತ್ತು ಹೋದರು. ಎ ರಡುವರೀ ಲಕ್ಷ ಜನರು ಸತ್ತಂತೆಯೂ ಎಂಟು ಲಕ್ಷ ಜನರು ಮನೆ ಕಳಕೊಂಡು ನಿರಾಶ್ರಿತರಾದಂತೆ ಯೂ ವರ್ತಮಾನ ಬಂದಿದೆ.

ರಶಿಯಾ ಮತ್ತು ಹಿಂದುಸ್ಥಾನ

—(೦)—

ರಶಿಯಾದ ಜನಸಂಖ್ಯೆಯು ೧೭ ಕೋಟಿ ೫೦ ಲಕ್ಷ. ಹಿಂದುಸ್ಥಾನದ ಜನಸಂಖ್ಯೆಯು ೩೩ ಕೋಟಿ. ರಶಿಯಾದಲ್ಲಿ ಕೆಲಸ ಮಾಡಲಿಕ್ಕೆ ಜನರು ಬೇಕೆಂದು ಅಲ್ಲಿಯ ಸರಕಾರದವರನ್ನುತ್ತಾರೆ. ಹಿಂ ದುಸ್ಥಾನದಲ್ಲಿ ಒಂದು ಕೋಟಿ ಜನರು ಕೆಲಸ ಕೆಲ ಸವೆಂದು ಹೊಟ್ಟೆ ಬಡಕೊಳ್ಳುತ್ತಿದ್ದಾರೆ. ಇದರ ಕಾರಣವೇನೆಂದು ಶ್ರೀ. ಸಾ|| ನರಸಿಂಗರೆಂಬವಳು ಪ್ರಶ್ನೆ ಮಾಡಿದ್ದೊಂದು ಲೇಖವನ್ನು ಇಂಗ್ರೇಜಿ ವರ್ತಮಾನ ಪತ್ರಗಳಲ್ಲಿ ಪ್ರಸಿದ್ಧ ಮಾಡಿದ್ದಾಳೆ.

ಮಾರಿಕಾದ ದೆಸೆಯಿಂದ ಮುದಿಕೆಯನ್ನು ಜೀವಂತ ಸುಟ್ಟರು.

ನಾಸಿಕ ಜಿಲ್ಲೆಗೆ ಸೇರಿದ ಪಿಂಪಳಗಾವವೆಂಬ ಲ್ಲಿ ಮಾರಿಕಾ ಪ್ರಾರಂಭವಾಯಿತು. ಕೋಳೀ ಜಾತಿ ಯವರ ಒಂದು ಮನೆಯಲ್ಲಿ ಬೇನೆ ಪ್ರಾರಂಭವಾ ಯಿತೆಂಬ ಭ್ರಮೆಯಿಂದ ಕೆಲವರು ಡೊಣ್ಣೆ ತಕ್ಕೊಂ ಡು ಹೋಗಿ, ಆ ಮನೆಯವನ್ನು ಹೊಡೆದು, ಒಬ್ಬ ಮುದಿಕೆಗೆ ಬೆಂಕಿ ಹಚ್ಚಿ ಆಕೆಯನ್ನು ನಿಂತ ನಿಂತ ಲ್ಲಿಯೇ ಸುಟ್ಟರು.

ಕರ್ನಾಟಕ ನಾಡಹಬ್ಬವಾದ ಮಹಾನವಮಿ ಉತ್ಸವ.

ನವರಾತ್ರಿಯು ಒಂದಾನೊಂದು ಕಾಲದಲ್ಲಿ ನಾಡಹಬ್ಬವಾಗಿ ವಿಜೃಂಭಣೆಯಿಂದ ಮೆರೆದುದನ್ನೂ ಕರ್ನಾಟಕದಲ್ಲಿ ವಿಶೇಷತಃ ಧಾರವಾಡದಲ್ಲಿ ಅದಕ್ಕೆ ಮತ್ತೆ ರಾಷ್ಟ್ರೀಯ ಸ್ವರೂಪವನ್ನಿತ್ತು, ನಾಲ್ಕೈದು ವರುಷಗಳಿಂದ ಜರುಗಿಸುತ್ತ ಬಂದುದನ್ನೂ ನಮಗೆ ಈಗೇನೂ ಹೇಳಬೇಕಾಗಿಲ್ಲ. ಈ ನಾಡಹಬ್ಬವು ಈ ಊರಲ್ಲಿ ವರುಷ ವರುಷವೂ ಹೆಚ್ಚಳವನ್ನು ಪಡೆ ದು ಪೂರ್ವೇತಿಹಾಸದ ವೈಭವವನ್ನು ಅಲ್ಪ ಪ್ರಮಾ ಣದಿಂದ ಜನರೆದುರಿಗೆ ಇಟ್ಟಿದ್ದು ಯಾರ ಸ್ಮೃತಿಪಥ ದಿಂದಲೂ ಜಾರಿ ಹೋಗಲಾರದು. ಎಂದ ಬಳಿಕ ನವರಾತ್ರಿಯು, ಇತಿಹಾಸದ ಕೈಗನ್ನಡಿ; ರಾಷ್ಟ್ರೀ ಯತ್ವದ ಆಕರ; ವಾಗ್ಮಿಗಳ ಸಂಸ್ಥೆ; ಮಲ್ಲರ ಶ ಕ್ತಿ; ನಾಡಿನ ಭಾಗ್ಯಲಕ್ಷ್ಮಿಯ ಹೆಚ್ಚಳನು, ನಾಡಿನ ಸಕಲ ವಿಧದ ಚೈತನ್ಯಗಳ ಸಂಗಮವಾದ ಈ ನಾ ಡಹಬ್ಬವು ಕರ್ನಾಟಕದ ಸರ್ವಾಂಗೀಣ ಉನ್ನತಿಯ ಜೀವಾಳ; ವಿವಿಧ ರಾಷ್ಟ್ರೀಯ ಚಲನವಲನಗಳ ಕೇಂ ದ್ರ ಎಂದು ಹೊಸದಾಗಿ ತಿಳಿಸಿಕೊಡುವುದು ಅನಾ ವಶ್ಯವೇ ಸರಿ.

ಇಂತಿರಲು ಧಾರವಾಡದಂತಹ ತಿರುಳುಗನ್ನ ಡ ನಾಡಿನಲ್ಲಿ, ಈ ಹಬ್ಬವನ್ನೇಕೆ ಮಾಡಬೇಕೆಂಬ ಪ್ರಶ್ನೆ ಇಷ್ಟರಲ್ಲಿ ಅಳಿಸಿಹೋಗಿ, ಇದನ್ನು ಒಳ್ಳೆಯ ಸಡಗರದಿಂದ ನೆರವೇರಿಸಬೇಕೆಂದು ನಾಗರಿಕರೆಲ್ಲ ಉತ್ಸುಕರಾಗಿರುವದು ಸ್ವಾಭಾವಿಕವೇ, ಕರ್ನಾಟಕ ಸ್ಥರ ಈ ಸ್ವಾಭಾವಿಕ ಗುಣಧರ್ಮಗಳಿಂದಲೇ ನಾ ಡಹಬ್ಬವು ಸಲಸಲಕ್ಕೂ ಬಹು ವೈಭವಾನ್ವಿತವಾಗಿ ಸಂಭ್ರಮ ದಿಂದ ಸಾಂಗವಾಗಹತ್ತಿದೆ. ಅದರಂತೆ ಈ ಬಾರಿ ಮತ್ತೂ ಒಂದು ಅಡಿಯನ್ನು ಮುಂದಿಟ್ಟು ಲಲಿತಕಲಾಪ್ರದರ್ಶನದ ಚಳ್ವಳಿಯಿಂದಲೂ ಕರ್ನಾ ಟಕ ಸ್ವದೇಶೀ ವಸ್ತುಪ್ರದರ್ಶನದ ವೈಭವದಿಂದ ಲೂ ಕರ್ನಾಟಕ ಐತಿಹಾಸಿಕ ವಸ್ತು ಪ್ರದರ್ಶನದ ಜ್ಞಾನ ಭಾಂಡಾರದಿಂದಲೂ ಉತ್ಸವವನ್ನು ಕಳೆಗೊ ಳಿಸಬೇಕಾಗಿದೆ. ಕವಿಸಮ್ಮೇಲನ, ದಾಸರಪದಗಳು ಲಾವಣಿ-ಹಳ್ಳಿಯ ಹಾಡುಗಳು, ಹರಿಕೀರ್ತನೆ, ನಾ ಟಕ, ಬಾಲಕಬಾಲಕಿಯರ ಮೇಳಗಳು, ಶಕ್ತಿ ಸಂವ ರ್ಧ ಆಟ- ಮೇಲಾಟಗಳು ಈ ಸಲದ ಉತ್ಸವಕ್ಕೆ ವಿ ಶೇಷವಾಗಿ ಶೋಭೆಯನ್ನುಂಟು ಮಾಡುವವು. ಈ ಕಾರ್ಯಕ್ರಮಗಳ ಉಪಕ್ರಮಕ್ಕಾಗಿ ಕರ್ನಾಟಕದ ವಿದ್ವನ್ಮಣಿಗಳನ್ನು ಕರೆಯಿಸಿಕೊಂಡು ಉತ್ಸವಕ್ಕೆ ಭೂಷಣವನ್ನುಂಟುಮಾಡಲಿದ್ದೇವೆ.

ಪಂಡಿತ ತಾರಾನಾಥರಾಯರು ಬಂದೊಪ್ಪಿ ದ್ದಾರೆ; ಶ್ರೀ. ಟಿ. ರಾಘವಾಚಾರ್ಯರಿಗೆ ಅವ್ವಾನ

ಜರ್ಮನಿಯಲ್ಲಿ ಕೆಲಸವಿಲ್ಲದವರ ಹೊಟ್ಟೆ ನೆತ್ತಿಯ ವಿಚಾರ

....(೦)....

ಈ ಚಳಿಗಾಲದಲ್ಲಿ ಜರ್ಮನ ರಾಜ್ಯದಲ್ಲಿ ಕೆಲಸವಿಲ್ಲದ ಕೂಲಿಕಾರರ ಸಂಖ್ಯೆಯು ಕಲ್ಪನಾತೀತವಾಗಿ ಬೆಳೆಯುವದು. ಅವರ ಜೀವರಕ್ಷಣೆಗಾಗಿ ಅಪಾರ ಸಂಖ್ಯೆಯಿಂದ ದ್ರವ್ಯ ಬೇಕಾಗುತ್ತದೆ. ಪಟ್ಟಣಿಗರು, ಸಹಕಾರ ಸಂಘದವರು ಮತ್ತು ಕಿರುಕಳ ವ್ಯಾಪಾರಿಗಳು ಕೆಲಸವಿಲ್ಲದವರಿಗೆ ಕಾಳು ಕಡಿ ಮೊದಲಾಗಿ ಎಲ್ಲ ಸಾಧನೆಗಳನ್ನು ಅಗ್ಗವಾಗಿ ಮಾರಬೇಕೆಂದು ಕೂಲಿಕಾರರ ಹಿತ ನೋಡುವ ಮಂತ್ರಿಯು ಮುಂಜಾಗ್ರತೆಯ ಸೂಚನೆ ಮಾಡಿದ್ದಾನೆ.

ಉಗಿಬಂಡಿಯಲ್ಲಿಯೇ ಬಾಂಬು ಹಾರಿತು.

—(೦)—

ಚೀನದೇಶದಲ್ಲಿ ಎರಂಡೇಲ ಮತ್ತು ಜಳಗಾವಿನ ಮಧ್ಯದಲ್ಲಿ ಉಗಿಬಂಡಿ ಹೋಗುತ್ತಿದ್ದಾಗ ಬಾಂಬಿನ ಸ್ಫೋಟವಾಯಿತು. ಪ್ರಯಾಣಿಕರಿಗಾರಿಗೂ ಘಾಯವಾಗಲಿಲ್ಲ. ಪೋಲೀಸರು ಬಾಂಬಿನ ಶೋಧ ಮಾಡುತ್ತಲಿದ್ದಾರೆ.

ವಿವಿಧ ವರ್ತಮಾನಗಳು.

—※—

ದಿಲ್ಲಿಯಲ್ಲಿ ರಘುನಾಥಸಿಂಗನು ಇಂಜೀನಿಯರ ಖಾತೆಯಲ್ಲಿದ್ದನು. ವಿತ್ತ ಉಳಿತಾಯಕ್ಕಾಗಿ ಈತನನ್ನು ಕೆಲಸದಿಂದ ದೂರ ಮಾಡಿದರು. ಈತನು ಹೊಟ್ಟೆಗಿಲ್ಲದವನಾಗಿ, ವಿಷ ತಿಂದು ಆತ್ಮಹತ್ಯ ಮಾಡಿಕೊಂಡನು.

ರಾಜಕೀಯ ಕೈದಿಗಳು ಹಿಂಸೆಯವರೇ ಆಗಲಿ; ಅಹಿಂಸೆಯವರೇ ಆಗಲಿ; ಎಲ್ಲರಿಗೂ ಕ್ಷಮೆ ಮಾಡಿಸಿ, ಅವರನ್ನು ಬಂಧಮುಕ್ತ ಮಾಡಿಸಿಕೊಳ್ಳುವಂತೆ ಮರಳಿ ಹಿಂದುಸ್ಥಾನಕ್ಕೆ ಬರಬೇಕೆಂದು ಡಾಕ್ಟರ ಕಿಚಲೂ ಸಾಹೇಬರು ಮಹಾತ್ಮರಿಗೆ ತಾರಿನಿಂದ ವಿನಂತಿ ಮಾಡಿಕೊಂಡಿದ್ದಾರೆ.

ಹಿಂದುಸ್ಥಾನದಲ್ಲಿರುವ ಸ್ವದೇಶಿ ವಿಮೆ ಕಂಪನಿಯ ಬಂಡವಲವು ೩೫ ಕೋಟಿಯಿರುವದು. ಅದೇ ಪರಕೀಯರ ಬಂಡವಲವು ೩೧|| ಕೋಟಿಯದಿರುತ್ತದೆ. ವಿಲಾಯತಿಯು ಯಾವದೊಂದು ದೇಶದ ಪ್ರಮಾಣದಿಂದ ನೋಡಿದರೆ ಹಿಂದುಸ್ಥಾನದಲ್ಲಿ ಇನ್ನೂ ಗೊಂದು ಕಂಪನಿಯಾದರೂ ಬೇಕು.

ಪ್ರಕಟನೆ ೩

ನಾಡಹಬ್ಬದಲ್ಲಿ

ಶಕ್ತಿವರ್ಧಕ ಆಟ ಮೇಲಾಟಗಳು

ಪ್ರತಿವರ್ಷವೂ ನಾಡಹಬ್ಬದಲ್ಲಿ ಶಕ್ತಿವರ್ಧಕ ಆಟ ಮೇಲಾಟಗಳು ಜರಗುತ್ತಿರುವುದು ತಮಗೆಲ್ಲರಿಗೆ ಗೊತ್ತೇ ಇದೆ. ಅವುಗಳು ಈ ಸಾರೆ ಹೆಚ್ಚು ವಿಸ್ತೃತ ಸ್ವರೂಪದಲ್ಲಿ ನಡೆಯುವವು. ಅವುಗಳಲ್ಲಿ ಮೇಲಿನಿಸಿದವರಿಗೆ ಮೆಡ್ಲನ್ನು ಕೊಡಲಾಗುವದು. ಧಾರವಾಡದ ತರುಣರು ಕಾರ್ಯಕ್ರಮದಲ್ಲಿ ಭಾಗತೆಗೆದುಕೊಂಡು ತಮ್ಮ ಸಶಕ್ತತೆಯನ್ನು ತೋರ್ಪಡಿಸಬೇಕೆಂದು ಆಸಿಸುತ್ತೇವೆ. ಈ ಕಾರ್ಯಾರಂಭಕ್ಕಾಗಿ ಬೆಂಗಳೂರಿನ ಮಲ್ಲಮಣಿಗಳಾದ **ಪ್ರೊ. ಕೆ. ವ್ಹಿ. ಅಯ್ಯರ** ಅವರು ಬರಲು ಒಪ್ಪಿಕೊಂಡಿದ್ದಾರೆ. ಈ ಸುವರ್ಣಸಂಧಿಯನ್ನು ಧಾರವಾಡದ ವ್ಯಾಯಾಮಪ್ರಿಯರಾದ ಯುವಕರು ಕಳೆದುಕೊಳ್ಳಲಾರರೆಂದು ನಂಬಿದ್ದೇವೆ.

ಮೇಲಾಟಗಳು

೧ ಓಡುವದು } ೩ ಮೈಲು (೧೮ ವರ್ಷಕ್ಕೆ ಮಿಕ್ಕಿದವರು)
೧ ,, (,, ಕೆಳಗಿನವರು)

೨ ನಮಸ್ಕಾರ (ಸೇವಾದಲಪದ್ಧತಿ) } ೨೦೦ ರ ಮೇಲೆ (೧೮ ವರ್ಷಕ್ಕೆ ಮಿಕ್ಕಿದವರು)
೧೦೦ ರ ,, (,, ಕೆಳಗಿನವರು)

೩ ಈಸು.

೪ ಸಾಯಕಲ್ (ವೇಗವಾಗಿ) } ೫ ಮೈಲು (೧೮ ವರುಷಕ್ಕೆ ಮಿಕ್ಕಿದವರು)
೩ ,, (,, ,, ಕೆಳಗಿನವರು)

೫ ಸಾಯಕಲ್ (ಸಾವಕಾಶವಾಗಿ)

೬ ಪೋಲ್ ಜಂಪ್

೭ ಪುಟಿಂಗ ದಿ ಶಾಟ್ (ಕಬ್ಬಿಣ ಗುಂಡು ಒಗೆಯುವದು.)

೮ ಕುಸ್ತಿ

೯ ಶಿಳ್ಳಿ

೧೦ ಫರಿ

ಸೂಚನೆ — ಪ್ರತಿಯೊಂದು ವಿಭಾಗದ ಸ್ಪರ್ಧೆಯಲ್ಲಿ ಮೊದಲಿಗರಾದ ಇಬ್ಬರಿಗೆ ಮೆಡ್ಲ್ ಪದಕಗಳನ್ನು ಕೊಡಲಾಗುವುದು.

ಇದರಲ್ಲಿ ಭಾಗ ತೆಗೆದುಕೊಳ್ಳಬಯಸುವವರು ಶ್ರೀ ಶಾಂತೇಶ ವಾಚನಾಲಯದಲ್ಲಿ (ಮುಂಜಾನೆ ೮|| ಯಿಂದ ೧೧|| ವರೆಗೆ) ವ್ಹಿಕ್ಟೋರಿಯಾ ಹೈಸ್ಕೂಲಿನಲ್ಲಿರುವ ಕನ್ನಡಿಗರಕೂಟದ ಮಲ್ಲಖಂಬದ ವ್ಯಾಯಾಮಶಾಲೆಯಲ್ಲಿ (ಸಂಜೆಯ ೫|| ಯಿಂದ ೭|| ವರೆಗೆ) ಬಂದು ಹೆಸರು ಹಚ್ಚಬೇಕು.

ಪ್ರತಿಯೊಂದು ವಿಭಾಗಕ್ಕೆ ೨ ಆಣೆ ಪ್ರವೇಶಧನವನ್ನು ಕೊಡಬೇಕಾಗುವದು. ನಾಲ್ಕಕ್ಕಿಂತ ಹೆಚ್ಚು ವಿಭಾಗದಲ್ಲಿ ಭಾಗತೆಗೆದುಕೊಳ್ಳುವವರಿಗೆ ಪ್ರವೇಶ ಧನ ೮ ಆಣೆ ಮಾತ್ರ.

ತಮ್ಮವರಾದ

ಬುರ್ಲಿ ಶೇಷಣ್ಣ	ಕುಲಕರ್ಣಿ ಗ. ಗುರುರಾಯ
ಶಿರೂರ ಕೃಷ್ಣಾಚಾರ್ಯ	ಕುಲಕರ್ಣಿ ದತ್ತರಾಯ
ನಾಡಗೀರ ಕೃಷ್ಣ	ಕಾರ್ಯದರ್ಶಿಗಳು
ಕಾರ್ಯದರ್ಶಿಗಳು ಶಕ್ತಿ ಸಂವರ್ಧಕ ವಿಭಾಗ	ಮಹಾನವಮಿ ಉತ್ಸವಮಂಡಲ

ಧಾರವಾಡ- ೪-೯-೩೧.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಸಂ ೧೨
ಸಂ ೬೭

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ

ವರ್ಷ ೧೩) ಧಾರವಾಡ ಶುಕ್ರವಾರ ತಾರೀಖು ೪ ನೇ ಸಪ್ಟಂಬರ ೧೯೩೧ (ಸಂ [illegible]

ಜೆ ರಾಶಿ, ಗುಂಜೀಕರ ಮತ್ತು ಕಂಪನಿ

ಶುಕ್ರವಾರಪೇಟೆ ಧಾರವಾಡ

ಇವರನ್ನು

ಮುಂಬೈ ಪ್ರಾವಿನ್ಶಿಯಲ್ ಕೋ. ಆಪ್ಪರೇಟಿವ್ಹ ಇನ್ಶ್ಯುರನ್ಸ ಕಂಪನಿ ಲಿ.

ಇವರು

ಧಾರವಾಡ ಜಿಲ್ಹೆಗೆ

ಚೀಫ್ ಏಜಂಟ

ರಾಗಿ ನಿಯಮಿಸಿದ್ದಾರೆ.

ಈಗ ಜಿಲ್ಲೆಯ ಎಲ್ಲ ಮುಖ್ಯ ಸ್ಥಳಗಳಲ್ಲಿ

ಸಬ್ ಏಜಂಟ

ರನ್ನು ನಿಯಮಿಸುವದದೆ. ಈ ವಿಷಯ ಮಾಹಿತಿ ಬಯಸುವವರು ತಮ್ಮ ಖಾತ್ರಿಯ ಬಗ್ಗೆ ಎಲ್ಲ ಮಾಹಿತಿ ಕೊಟ್ಟು ಚೀಫ್ ಏಜಂಟರಿಗೆ ಬರೆಯಬೇಕು. ಖಾತ್ರಿಯಿಂದ ಕೆಲಸ ಮಾಡುವವರಿಗೆ ಪೂರ್ಣ ಕಮೀಶನ ಸಿಗುವದು.

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢ [illegible] ಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ ಅದನ್ನು ಮಾರಾಟಕ್ಕೆ [illegible]. ಇದರಲ್ಲಿ ವಾದೀ ಶ್ರೀ ಶಿದಶ್ಯವದೇಕರ ಆಸಲಜ್ಞ, ಶ್ರೀ [illegible] ಮುಖಂಡರಾದ ಶ್ರೀ. [illegible] ಇವರ ತೀರ್ಪು ಕೊಡಲ್ಪಟ್ಟ [illegible] ಭಾವಚಿತ್ರಗಳನ್ನು ಕೊಟ್ಟಿರುತ್ತದೆ. ಪುಸ್ತಕ ಜನರ [illegible] ಪುಸ್ತಕವನ್ನು [illegible] ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿ [illegible]. ಇದರ [illegible] ಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು [illegible] ಗ್ರಾಹಕರು ತ್ವರೆಮಾಡಬೇಕು.

[illegible] ಕ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ [illegible] ಕಮಿಶನ ಕೊಡಲ್ಪಡುವದು. ವ್ಹಿ. ಪಿ. [illegible] ಬೇರೆ [illegible] ಪ್ರತಿಗಳನ್ನು [illegible] ಪ್ರೀಸ್ಟ್ ಸ್ಟ್ಯಾಂಪುಗಳನ್ನು ಕಳಿ ಸಬೇಕು. ಬಹಳ [illegible] ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ [illegible] ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

ದಿ ಧಾರವಾಡ ಅರ್ಬನ್ ಕೋ(

ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

[illegible] ಕ್ರೆಡಿಟ ಸೊಸಾಯಿಟೀಜ ಆಕ್ಟ್ [illegible] ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠ [illegible].

ಠೇವುಗಳು ಎಂಟು ಲಕ್ಷದಮೇಲುಂಟು, ಕರ್ನಾ ಹುಂಡಿ ಕೊಡಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ವು ಮಾಡಲ್ಪಡುವದು. ಠರಾವು ಮತ್ತು [illegible] ಠೇವುಗಳಿಗೆ [illegible] ಒಡ್ಡಿ ದೊರೆಯುವದು.

ವಿಶೇಷ [illegible] ಸಹೀ ಮಾಡಿದವ ರಿಂದ [illegible].

ಮ್ಯಾನೇಜರ [illegible]

ವಿಜಯದ ವರ್ಗಣಿ ದರ

ನಿಶ್ಚ ಪತ್ರಿಕೆ	
೧೨ ತಿಂಗಳಿಗೆ	ರೂ. ೧೩-೮-೦
೬ ,,	೭-೧-೦
೩ ,,	೪ ೮-೦
ಎರಡ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿ ಕೊಳ್ಳಿರಿ.

ಮ್ಯಾ ವಿಜಯ, ಧಾರವಾಡ

ವಿಜಯ.

ತಾರೀಖು ೪-೯-೧೯೩೧ನೇ ಇಸ್ವಿ

ಮಹಾತ್ಮರ ಅಪರೋಕ್ಷದಲ್ಲಿ ಕಾಂಗ್ರೆಸ ಕಾರ್ಯ.

ಮಹಾತ್ಮರು ವಿಲಾಯತಿಗೆ ಹೋದರೂ, ಅವರ ಅಪರೋಕ್ಷದಲ್ಲಿ ಕಾಂಗ್ರೆಸದ ಕಾರ್ಯವು ಯಥಾ ಪ್ರಕಾರ ನಡೆಯುವದು. ಸದ್ಯ ಕಾಂಗ್ರೆಸದವರು ಕೈಕೊಂಡಂಥ ಎರಡು ಕಾರ್ಯಗಳಿರುತ್ತವೆ. ಒಂದು ಪರದೇಶಿ ಅರಿವೆಯ ಅಂಗಡಿಗಳ ಮುಂದೆ ಪಿಕೆಟಿಂಗ ಎರಡು ಮದ್ಯಪಾನ ನಿರೋಧ. ಮುಂಬಯಿಯಲ್ಲಿ ದೇಶಸೇವಿಕೆಯರು ಇವೆರಡೂ ಕೆಲಸಗಳನ್ನು ಉತ್ಸಾಹದಿಂದ ಕೈಕೊಂಡಿದ್ದಾರೆ. ಅದೇ ಪ್ರಕಾರ ಹಿಂದುಸ್ಥಾನದ ತುಂಬ ಈ ಚಳವಳಿಯು ನಡೆಯುವದು.

ಇವುಗಳ ತರುವಾಯ ರೈತರ ವಿಪತ್ತನ್ನು ದೂರ ಮಾಡುವದು ಅತ್ಯಂತ ಮಹತ್ವದ ಕಾರ್ಯವಾಗಿರುತ್ತದೆ. ಮಹಾತ್ಮರ ತರುವಾಯ ಈ ದೇಶದ ರಾಜಕಾರಣದ ಸೂತ್ರಗಳನ್ನು ನಡೆಸುವ ವಿಶೇಷ ಜವಾಬದಾರಿಯನ್ನು ಸರದಾರ ಪಟೇಲ ಮತ್ತು ಪಂಡಿತ ಜವಾಹರಲಾಲರು ಅಂಗೀಕರಿಸಿದ್ದಾರೆ. ಪಂಡಿತ ಜವಾಹರಲಾಲರು ಅನ್ನುವದೇನಂದರೆ-

ಸರಕಾರವನ್ನು ಪ್ರತ್ಯಕ್ಷವಾಗಿ ವಿರೋಧಿಸುವಂಥ ಕೆಲಸವನ್ನು ಅದಷ್ಟು ಮಟ್ಟಿಗೆ "ಮಾಡುವದಿಲ್ಲ. ಆದರೆ ಕಾಂಗ್ರೆಸ ಸಭೆಯು ರೈತರನ್ನೂ ರೈತರ ದೆಸೆಯಿಂದ ಸರಕಾರದ ಪೇಚಿನಲ್ಲಿ ಸಿಕ್ಕವರನ್ನೂ ನಡುವೇ ಕೈ ಬಿಡ ಲಾರದು."

ಮಹಾತ್ಮರ ಕಾಜಿಯ ಪ್ರಕಾರ ಗುಜರಾಥದ ಮಟ್ಟಿಗೆ ಸರಕಾರದ ಪತಿಯಿಂದ ನಾಸಿಕದ ಕಲೆಕ್ಟರರಾದ ಮಿ. ಗಾರ್ಡನಸಾಹೇಬರು ಮುಂದಿನ ವಾರದಲ್ಲಿ ಅಲ್ಲಿಗೆ ಹೋಗಿ ವಿಚಾರಣೆ ಪ್ರಾರಂಭಿಸುವರು. ಅಲಹಾಬಾದ ಮತ್ತು ಸರಹದ್ದಿನ ಅನ್ಯಾಯಗಳನ್ನು ದೂರ ಮಾಡಿಕೊಳ್ಳಲು- ಫ್ರಂಟಿಯರ ಗಾಂಧಿ ಮತ್ತು ಪಂಡಿತ ಜವಾಹರಲಾಲರು ಸಮರ್ಥರಿದ್ದಾರೆ. ಆ ಸಾಮರ್ಥ್ಯದ ವಿಚಾರವನ್ನು ಕರ್ನಾಟಕ ಕಾಂಗ್ರೆಸ ಕಮಿಟಿಯವರು ಮಾಡಿದಂತೆ ತೋರುವದಿಲ್ಲ. ಒಂದೆರಡು ವಾರಗಳಲ್ಲಿ ಗದಗಿನಲ್ಲಿ ಈ ಕಮಿಟಿ ಕೂಡತಕ್ಕದ್ದಿದ್ದು, ಅದರ ಕಚ್ಚಾಯಾದಿಯಲ್ಲಿ ಸಿರ್ಸಿ ಸಿದ್ದಾಪೂರದ ವಿಷಯವೇ ಇರುವದಿಲ್ಲ. ಯಾವ ಕೆಲಸವಾದರೂ ಆತ್ಮ ಬಲದಿಂದಲೇ ನಡೆಯುವದುಂಟು. ಆದ್ದರಿಂದ ಕರ್ನಾಟಕ ಕಾಂಗ್ರೆಸ ಕಮಿಟಿಯವರು ಈ ವಿಷಯವಾಗಿ ಅವಶ್ಯವಾದ ಕರ್ತವ್ಯ ಮಾಡಬೇಕೆಂದು ಸೂಚಿಸುತ್ತೇವೆ.

ಹಿಂದೂ ಗೃಹಸ್ಥನಿಗೆ ಗವ್ಹರ್ನರ ಕೆಲಸ ಕೊಡುವ ಆಶೆ ತೋರಿಸುವಿಕೆ

—(೦)—

ಮುಂಬಯಿಯ ಗವ್ಹರ್ನರರಾದ ಸರ ಸಾಯಿಕ್ಸಸಾಹೇಬರು ಪ್ರಕೃತಿಯ ಅಸ್ವಾಸ್ಥ್ಯದ ಮೂಲಕ ತಿರಿಗಿ ಮುಂಬಯಿಗೆ ಬರರು. ನಾಗಪೂರದ ಗವ್ಹರ್ನರರಾದ ಸರ ಬಟ್ಲರಸಾಹೇಬರು ಮುಂಬಯಿಗೆ ಬರುವರು. ಸರ ಅಕುಲ ಚತರಜಿಯವರನ್ನು ನಾಗಪೂರದ ಗವ್ಹರ್ನರರಾಗಿ ನೇಮಿಸುವರೆಂದು ವದಂತಿಯು. ಯಾವನೊಬ್ಬ ಹಿಂದೂ ಮನುಷ್ಯನಿಗೆ ಗವ್ಹರ್ನರ ಕೆಲಸ ಕೊಡುವದರಿಂದ, ಹಿಂದುಸ್ಥಾನದ ರಾಜಕೀಯ ಹಸಿವೆಯು ಹೋಗಲಾರದು. ಮಾಂಟೆಗೂ ಸುಧಾರಣೆಯ ಕಾಲದ ಪ್ರಾರಂಭದಲ್ಲಿ ಸಿಂಹರನ್ನು ಗವ್ಹರ್ನರ ಮಾಡಿದರು. ಲಾರ್ಡ ಮಾಡಿದರು. ಹಿಂದುಸ್ಥಾನದ ಅಂಡರ ಸೇಕ್ರೆಟರಿ ಮಾಡಿದರು. ಅದರಿಂದ ಹಿಂದುಸ್ಥಾನದ ಯಾವ ಹಿತವೂ ಆಗಲಿಲ್ಲ. ಅದೇ ತೆರವಾಗಿ ಸರ ಅಕುಲ ಚತರಜಿಯವರು ಗವ್ಹರ್ನರರಾಗುವದು. ಹಿಂದುಸ್ಥಾನಕ್ಕೆ ಮುಖ್ಯವಾಗಿ ಬೇಕಾದದ್ದು ರಾಜಕೀಯ ಸ್ವಾತಂತ್ರ್ಯ. ಅದು ದೊರೆಯಿತೆಂದರೆ - ಒಬ್ಬೊಬ್ಬರೇಕೆ ಎಲ್ಲಾ ಇಲಾಖೆಗಳ ಗವ್ಹರ್ನರರೂ ಸ್ವದೇಶಿಯರೇ ಆಗುವರು. ಇಂಗ್ರೇಜಿ ಸರಕಾರದಲ್ಲಿ ಹಿಂದೀ ಜನರಿಗೆ ದೊಡ್ಡ ಕೆಲಸ ದೊರೆಯಿತೆಂದು ಆನಂದಪಡುವ ಕಾಲವು ನಿಃಸಂಶಯವಾಗಿ ಹಿಂದಾಯಿತು.

ಮಹಾತ್ಮರ ಮೌನದ ದಿವಸವು.

....(೦)....

ಸೋಮವಾರ ಮಹಾತ್ಮರ ಮೌನದ ದಿವಸವು. ಅಂದು ಅವರು ರಾವುಂಡಟೇಬಲಿನಲ್ಲಿ ತಮ್ಮ ಯೋಜನೆಯನ್ನು ಯಾವ ತರಹದಿಂದ ಮುಂದಿಡಬೇಕೆಂಬದಾಗಿ ತೊಳವು ಹಾಕಿದ್ದರು. ಆ ದಿನ ಹಡಗದಲ್ಲಿ ಇದಕ್ಕೂ ಹೆಚ್ಚಿನ ಯಾವ ಸಂಗತಿಯೂ ನಡೆಯಲಿಲ್ಲ.

ಮ್ಯುನಿಸಿಪಾಲಟಿಯ ಪ್ರೆಸಿಡೆಂಟರಿಗೆ ಪಂಚಂ ಪಾರುಪತ್ಯಗಾರಿಕೆ

....(೦)....

ಮುಂಬಯಿ ಮ್ಯುನಿಸಿಪಾಲಟಿಯಲ್ಲಿ ಪ್ರೆಸಿಡೆಂಟರಿಗೆ- ಮೆಂಬರರನ್ನು ಸಸ್ಪೆಂಡ ಮಾಡುವ, ಕಮಿಟಿ ಬಿಟ್ಟು ಹೊರಗೆ ಹಾಕುವ ಅಧಿಕಾರವಿರಬೇಕೆಂಬ ಠರಾವು ಬಂತು. ಶಾಲೆಯಲ್ಲಿ ಮಾಸ್ತರರು ತಮ್ಮ ಇಚ್ಛೆಗೆ ಬಂದಾಗ ಹುಡುಗರನ್ನು ವರ್ಗದಿಂದ ಹೊರಗೆ ಹಾಕುವರು. ಅದೇ ಪ್ರಕಾರ ಪ್ರೆಸಿಡೆಂಟರಿಗೆ ಕೊಡುವ ಅಧಿಕಾರವಾಗುತ್ತದೆಂದು ಮೆಂಬರರು ವಾದಿಸಿದರು. ರಾಷ್ಟ್ರೀಯ ಪಕ್ಷದವರು ತಮ್ಮ ಹಕ್ಕಿನ ದೆಸೆಯಿಂದ ಬಲವಾಗಿ ವಾದಿಸುವದು ಮವಾಳ ಮೆಂಬರರಿಗೆ ಕಲ್ಪಿತವಾಗುತ್ತದೆ. ಆದ್ದರಿಂದ ಮೆಂಬರರ ಬಾಯಿ ಕಟ್ಟಿ ಅವರನ್ನು ಸುಮ್ಮನೆ ಕೂಡ್ರಿಸುವ ಮತ್ತು ಹಟವಾದಿಯಾದರೆ- ಹೊರಗೆ ಹಾಕಬೇಕೆಂಬುವ ಈ ಠರಾವು ತಂದರು ಆದರೆ- ಅದು ಬಹುಮತದಿಂದ ಪಾಸಾಗಲಿಲ್ಲ. ಮವಾಳ ಮೆಂಬರರು ಈ ತೆರವಾಗಿ ಕುಸುಸು ಹಿಡಿಯುವದನ್ನು ಕಂಡು, ಅವರಿಗೇ ಎದ್ದಲಗಾಟ ಕೊಡಬೇಕೆಂದು ಕಾಂಗ್ರೆಸದವರು ಬರುವ ಚುನಾವಣೆಯಲ್ಲಿ ತಮ್ಮ ಪತಿಯಿಂದ ಉಮೇದವಾರರನ್ನು ನಿಲ್ಲಿಸಬೇಕೆಂದು ಗೊತ್ತುಮಾಡಿದ್ದಾರೆ.

ಮುಸಲಮಾನ ಮೆಂಬರರ ವಿಲಕ್ಷಣ ವಿಚಾರ.

....(೦)....

ಚಿತಗಾಂಗಿನಲ್ಲಿ ಹಿಂದೂ ಅದಂಥ ಬಂಗಾಲಿ ಅರಾಜಕರು ಖಾ. ಬ. ಅಹಸಾನುಲ್ಲಾಸಾಹೇಬರ ಕೊಲೆ ಮಾಡಿದ್ದರಲ್ಲಿ ಅಸೆಂಬ್ಲಿಯ ಮೆಂಬರರಾದ ಮಿ. ರಫೀಕಸಾಹೇಬರಿಗೆ ಜಾತಿದ್ವೇಷ ತೋರಿದೆ. ಸರಕಾರೀ ಕೆಲಸವನ್ನು ಕಾಯದೆಶೀರವಾಗಿ ಮಾಡುತ್ತಿರುವಂಥವರನ್ನು ಈ ಪ್ರಕಾರ ಕೊಂದರೆ- ಹಿಂದೂ ಮುಸಲಮಾನ ಮನಸ್ತಾಪವು ಹೆಚ್ಚಿಚ್ಚು ವಿಸ್ತಾರ ಹೊಂದುವದೆಂದೂ ಕೊನೆಯಲ್ಲಿ ಹಿಂದೂ ಮುಸಲಮಾನ ಯಾದವಿಯು ಬೆಳೆದು, ಘನಘೋರ ಯುದ್ಧ ಪ್ರಸಂಗವುಂಟಾಗುವದೆಂದೂ ಇವರು ಕಲಕತ್ತೆಯ ಮ್ಯುನಿಸಿಪಾಲಿಟಿಯಲ್ಲಿ ಭಾಷಣ ಮಾಡಿದ್ದಾರೆ. ಮಿ. ರಫೀಕಸಾಹೇಬರು ಕೊಲೆಗೂ ಹಿಂದೂ ಮುಸಲಮಾನರ ಯುದ್ಧಕ್ಕೂ ಇಲ್ಲದ ಸಂಬಂಧ ಹಚ್ಚಿರುತ್ತಾರೆ. ಅರಾಜಕರು ಕುಲ, ಮನುಷ್ಯ, ಅಧಿಕಾರ ಮುಂತಾದ್ದಾವದನ್ನೂ ನೋಡುವದಿಲ್ಲ. ತಮ್ಮ ದಾರಿಯಲ್ಲಿ ಅಡ್ಡ ಬರುವಂಥವರನ್ನು ನಿಗಹುವರು. ಜಗತ್ತಿನಲ್ಲಿ ಅರಾಜಕರೆಂಬವರು ರಾಜರಾಜೇಶ್ವರರನ್ನು ಕೂಡ ಬಿಡುವದಿಲ್ಲ. ವಿಲಾಯತಿಯಲ್ಲಿ ಜಾತಿಯಿಲ್ಲ.

ಹಿಂದುಸ್ಥಾನದಲ್ಲಿ ಜಾತಿಭೇದವಿರುತ್ತಲೆಂದೂ, ಇಂಥ ಕೊಲೆಗಳಿಗೆ ಜಾತಿ ಸಂಬಂಧ ತರುವದೂ ಕೊಲೆಯು ಪುಣ್ಯವೆಂದು ಹುಂಬ ಜನರು ಸುಲಿಗೆ ಲೂಟಿ ಮಾಡುವದೂ ಮೂರ್ಖತನವೇ ಸರಿ. ಕೊಲೆ ಪಾತಕಿಯ ಜಾತಿ ಧರ್ಮ ನೋಡದೆ, ಆತನ ಕೃತ್ಯಕ್ಕೆ ಶಿಕ್ಷೆ ವಿಧಿಸುವದು ಮುಖ್ಯವಾದ ಧರ್ಮವಾಗುತ್ತದೆ.

ಚಿತಗಾಂಗಿನಲ್ಲಿ ಭಯಂಕರ ಲೂಟಿಯು

ಹಿಂದೂ ವರ್ತಕರ ಒಂದು ಕೋಟಿಯ ಹಾನಿಯು

....(೦)....

ಚಿತಗಾಂಗಿನಲ್ಲಿ ಖಾ. ಬ. ಅಹಸನುಲ್ಲಾ ಸಾಹೇಬರು ಕೊಲ್ಲಲ್ಪಟ್ಟದ್ದಕ್ಕಾಗಿ ಅವರ ಆತ್ಮಕ್ಕೆ ಶಾಂತಿಯು ಸಿಗಲೆಂದು ದೇವರ ಪ್ರಾರ್ಥನೆ ಮಾಡುವದಕ್ಕಾಗಿ ೩೦ ಸಾವಿರ ಮುಸಲಮಾನರ ಪ್ರಚಂಡ ಜಮಾವತ ಸೇರಿತು. ಇದಕ್ಕೆ ಸುತ್ತಲಿನ ಹಳ್ಳಿಗಳ ಜನರೂ ಬಂದಿದ್ದರು. ದೇವರ ಪ್ರಾರ್ಥನೆಯಾದ ಕೂಡಲೆ ಸಾವಿರಾರು ಹುಂಬ ಜನರು ಪೇಟೆಯಲ್ಲಿ ಹೊಕ್ಕು ಲೂಟಿಗೆ ಪ್ರಾರಂಭ ಮಾಡಿದರು. ಲಕ್ಷ್ಮೀ ಬ್ಯಾಂಕು ಬಹಳ ಧನಾಢ್ಯವಾದದ್ದು. ಈ ಬ್ಯಾಂಕಿನ ಎಡಬದಿಯಲ್ಲಿ ಅರ್ಧ ಮೈಲಿನ ತನಕ ಲೂಟಿ ನಡೆಯಿತು. ಮೂರು ತಾಸುಗಳ ತನಕ ಇವರದೇ ರಾಜ್ಯವಾಗಿತ್ತು. ಅಂಗಡಿಗಳಿಗೆ ಬೆಂಕಿ ಹಚ್ಚಿದರು. ಸೇಫುಗಳನ್ನೊಡೆದು ಅವುಗಳಲ್ಲಿದ್ದ ಕಾಗದಪತ್ರಗಳನ್ನೂ ನೋಟು ರೂಪಾಯಿಗಳನ್ನೂ ಬೀದಿಗಳಲ್ಲಿ ಈಡಾಡಿದರು. ಅಕ್ಕೀ ಚೀಲಗಳನ್ನು ಹೊತ್ತುಕೊಂಡು ದೋಣಿಯಲ್ಲಿ ಹಾಕಿ ನದೀ ದಾಟಿಸಿದರು. ಇದೊಂದೇ ಸಂಗತಿಯಿಂದ ಸುಲಿಗೆಯು ಚಿತ್ತೂ, ಕಳ್ಳೀ ಮುಖಾನರನ್ನು ಸಹ ಮರೆಯಿಸಿತೆಂದು ಹೇಳಬಹುದು. ಲೂಟಿಯಲ್ಲಿ ಚಿನಿವಾಲರು, ಸಾಹುಕಾರರು ದಲಾಲರು, ಜವಳಿಯವರು ಧಾನ್ಯದವರು, ಸ್ಟೇಶನರಿಯವರು ಮೊದಲಾಗಿ ಎಲ್ಲಾ ತರದ ಉದ್ದಿಮೆ ಮಾಡುವಂಥವರು ನಷ್ಟಕ್ಕೆ ಗುರಿಯಾಗಿದ್ದಾರೆ. ಒಂದು ಕೋಟಿಯ ಹಾನಿಯಾಗಿದೆಂದು ಅಂದಾಜು ಮಾಡಲ್ಪಟ್ಟಿದೆ. ಸಾಯಂಕಾಲದಲ್ಲಿ ಪೋಲೀಸರು ಬಂದು ಲೂಟಿಯನ್ನು ನಿಲ್ಲಿಸಿದರು. ಚಿತಗಾಂಗಿನಂತೆ ಸುತ್ತಲಿನ ಹಳ್ಳಿಗಳಲ್ಲಿಯೂ ಲೂಟಿಯಾದ ವರ್ತಮಾನ ಬಂದಿರುತ್ತದೆ.

ಪುಣೆಯ ಸೆಶನ ಕೋರ್ಟಿನಲ್ಲಿ ಗೋಗಟೆನ ವಿಚಾರಣೆ ನಡೆದಿದಷ್ಟೇ; ಈತನಿಗೆ ಬೇಡಿ ಹಾಕಿಕೊಂಡು ಕೋರ್ಟಿಗೆ ತರುವರು. ಕಟಾಂಜನದಲ್ಲಿ ನಿಲ್ಲಿಸಿದ ಬಳಿಕ ಬೇಡೀ ತೆಗೆಯುವರು. ಆದರೂ ಎಡಬಲದಲ್ಲಿ ಬಿಚ್ಚುಗತ್ತಿ ಸಿಪಾಯರ ಕಾವಲಿಡುವರು.

ನಿಗ್ರೋಜನರನ್ನು ರಾಕ್ಷಸರಂತೆ ಹಿಂಸಿಸುವದು

ಅಮೇರಿಕೆಯಲ್ಲಿ ಗೌರಕಾಯಸ್ಥರ ಕಯ್ಯಲ್ಲಿ ನಿಗ್ರೋಜನರ ಜೀವವು ಕಾಲಕಸದಂತಿರುತ್ತದೆ. ನಿಗ್ರೋ ಜನರನ್ನು ಕೊಂದರೆ ನರಹತ್ಯೆಯ ಪಾಪ ಬರುತ್ತದೆಂದು ಅವರು ತಿಳಿಯುವದೇ ಇಲ್ಲ. ಅಲ್ಪ ತಪ್ಪಿಗಾಗಿ ಅವರನ್ನು ರಾಕ್ಷಸೋಪಮ ಕೃತ್ಯಗಳಿಂದ ಈ ಲೋಕದಲ್ಲಿಯೇ ಇರದಂತೆ ಮಾಡುತ್ತಾರೆ. ೧೬ ವರ್ಷದ ಒಬ್ಬ ನಿಗ್ರೋನು ೧೧ ವರ್ಷದ ಒಬ್ಬ ಹುಡುಗಿಯ ಮೈಮೇಲೆ ಕಯ್ಯ ಹಾಕಿದನೆಂಬ ಆರೋಪ ಹೊರಿಸಿ, ಆತನನ್ನು ಗುಂಡು ಹಾಕಿ ಕೊಂದರು. ಈತನ ಮಯ್ಯಲ್ಲಿ ೩೨ ಗುಂಡುಗಳು ಸೇರಿದಂತೆ ಕಂಡು ಬಂತು. ಕಳ್ಳನಾದ ಒಬ್ಬ ನಿಗ್ರೋನನ್ನು ಕೊಲ್ಲಲಿಕ್ಕೆ ಹೋದಾಗ, ನಿಗ್ರೋ ಮತ್ತು ಆ ಊರ ಪಟ್ಟಣಶೆಟ್ಟಿಯು ಜೀವ ಕಳಕೊಂಡರು. ಫೂಟಬಾಲಿನ ಆಟದಲ್ಲಿ ಎರಡೂ ಪಕ್ಷಗಳು ಭಯಂಕರ ಘಾಯವಾದವು. ನಿಗ್ರೋ ಜನರನ್ನು ಬೇಕಾದಷ್ಟು ಹಿಂಸಿಸಿ ಕೊಂದರೂ, ಬಿಳಿದೊಗಲಿನವನ ಕೂದಲಿಗೆ ಧಕ್ಕೆಯಾಗದಂತೆ ಸರಕಾರದ ಕಾಯದೆ ಇರುವದು ದೊಡ್ಡ ಕಲಂಕವಲ್ಲವೇ? ಮೇಯೋ ಸುಹಾಸಿನಿಯು ಏನೆಂದು ಸ್ವಜನರ ಸಮರ್ಥನೆ ಮಾಡಿಕೊಳ್ಳುವಳು?

ಬಲೂಚಿಸ್ಥಾನದಲ್ಲಿ ಭೂಕಂಪನಿಂದ ಹಾಹಾಕಾರ

— ೦—

ಸಿಂಧಕ್ಕಿಂತ ಭಯಂಕರವಾಗಿ ಬಲೂಚಿಸ್ಥಾನದಲ್ಲಿ ಭೂಕಂಪನ ಹಾಹಾಕಾರವಾಗಿದೆ. ಅಲ್ಲಿ ಊರಿಗೆ ಊರೇ ಭೂಮಿಯ ಹೊಟ್ಟೆಯಲ್ಲಿ ಅಡಗಿಕೊಂಡಿವೆ ಅನೇಕ ಜನರು ಸತ್ತೇ ಹೋದರು. ಘಾಯವಾದವರೂ ಬಹಳ ಇವರಿಗೆ ಅನ್ನ, ನೀರು ಔಷಧ ದೊರೆಯುವದು ಕಠಿಣವಾಗಿರುತ್ತದೆ. ಮಾಲೇರಾ ಮುಂತಾದ ರೋಗೋಪದ್ರವವಾಗಿ ಮತ್ತಿಷ್ಟು ಜನಲಯವಾಗುವ ಭೀತಿಯುಂಟಾಗಿದೆ.

ಬಾಂಬಿನ ದೆಸೆಯಿಂದ ಮೃಣಾಲನಿಗೆ ಕರೇ ನೀರಿನ ಶಿಕ್ಷೆ

....(೦)....

ಕಾಶಿಯಲ್ಲಿ ಸುನಿಲ ಕುಮಾರ, ಮೃಣಾಲಿನಿ ಮತ್ತು ರಾಧಾರಾಣಿ ಎಂಬ ಮೂವರ ಮೇಲೆ ಬಾಂಬಿನ ಸಾಮಾನುಗಳನ್ನಿಟ್ಟ ಆರೋಪ ಹೊತ್ತಿ ವಿಚಾರಣೆ ನಡೆಯಿತು. ರಾಧಾರಾಣಿಯು ಬಿಡುಗಡೆ ಹೊಂದಿದಳು. ಉಳಿದ ಇಬ್ಬರಿಗೆ ೧೪ ವರ್ಷ ಕರೇ ನೀರಿನ ಅಂದಮಾನಕ್ಕೆ ಕಳಿಸುವ ಶಿಕ್ಷೆಯಾಯಿತು.

ಪೆಟಿಟ ಅಮ್ಮನವರ ದಿವಾಳಿಯು .

—(೦)—

ಮುಂಬಯಿಯ ನವಕೋಟಿ ನಾರಾಯಣರಾದ ಪೆಟಿಟ ಮನೆತನದ ಮಿ. ಜಹಾಂಗೀರ ಬೋಮನಜಿ ಪೆಟಿಟರವರ ತಾಯಿ ಗುಲಬಾಯಿಯು ಬ್ಯಾಂಕುಗಳಲ್ಲಿ ಸಾಲ ತೆಗೆದಳು. ಈ ಸಾಲದ ಒತ್ತಾಯವಾದಕೂಡಲೆ – ತನ್ನ ಏಳೆಂಟು ಲಕ್ಷದ ಆಸ್ತಿಯನ್ನು ಮಗಳು ಮತ್ತು ಬೇರೆ ಹಿತ ಸಂಬಂಧಿಕರ ಹೆಸರಿನಿಂದ ವಿಕ್ರಿಪತ್ರ ಮಾಡಿಸಿ, ತಾನು ದರಿದ್ರ ನಾರಾಯಣಳೆಂದು ಕೋರ್ಟಿನಲ್ಲಿ ಜವಾಬು ಕೊಟ್ಟಿದ್ದಾಳೆಂದೂ ಇವಳಿಂದ ತಮಗೆ ಸಲ್ಲತಕ್ಕ ಎರಡೂವರೇ ಲಕ್ಷ ರೂಪಾಯಿಗಳನ್ನು ಕೊಡಿಸಬೇಕೆಂಬದೂ ಬ್ಯಾಂಕ ಆಫ ಇಂಡಿಯಾದವರು ದಾವೇ ಮಾಡಿದ್ದಾರೆ.

ಗ್ರಾಂಟಿನ ಶಾಲೆಗಳಿಗೆ ಗ್ರಾಂಟಿನ ಕಡಿತ

—(೦)—

ಮುಂಬಯಿ ಸರಕಾರದವರು ಗ್ರಾಂಟು ಕೊಡುವ ಹಾಯಸ್ಕೂಲುಗಳ ಗ್ರಾಂಟಿನಲ್ಲಿ ನೂರಕ್ಕೆ ಐದು ರೂಪಾಯಿ ಕಡಿಮೆ ಮಾಡಿ, ವೆಚ್ಚ ಉಳಿತಾಯ ಮಾಡಿಕೊಳ್ಳಬೇಕೆಂದಿದ್ದಾರೆ. ಈ ಗ್ರಾಂಟನ್ನು ಕತ್ತರಿಸಬಾರದೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳಲು ಒಂದು ಬಲವಾದ ಕಮಿಟಿ ನೇಮಿಸಿದ್ದು, ಇವರಿಗೆ ಪುಣೆಯವರೂ ಬೆಂಬಲವಿತ್ತಿದ್ದಾರೆ. ಶಾಲೆಗಳ ಬಲವಾದ ಕಮಿಟಿಗಿಂತ ಎಷ್ಟೋ ಬಲವಾಗಿ ರಿಟ್ರೆಂಚಮೆಂಟ ಕಮಿಟಿಯವರು ತಿಳಿಸಿರುವದು ಸೋಜಿಗವೇ ಸೈ.

ಸ್ಪೇನದ ರಾಜ್ಯಕ್ರಾಂತಿಯಲ್ಲಿ ಕ್ರಾಂತಿಯು.

—(೦)—

ಸ್ಪೇನದ ಅರಸೊತ್ತಿಗೆ ಹೋಯಿತು. ಅದನ್ನು ಮತ್ತೆ ಎತ್ತಿಹಿಡಿಯಬೇಕೆನ್ನುವಂಥವರು ಕೂಡಿದ ಬಂಡಾಯ ಮುರಿಯಿತು. ಆದರೆ ರಾಜ್ಯಕ್ರಾಂತಿಕಾರಕರಲ್ಲಿಯೇ ಮತ್ತೆ ಕ್ರಾಂತಿಕಾರರದೊಂದು ಪಂಗಡವೆದ್ದಿದೆ ಈಗ ರಾಜ್ಯಭಾರ ಮಾಡತಕ್ಕವರು ಅರಸೊತ್ತಿಗೆಯವರಂಥ ರೂಪಧಾರಣ ಮಾಡಿದ್ದಾರೆ. ಇಬ್ಬರಲ್ಲಿಯೂ ಭೇದವಿಲ್ಲ. ಆದ್ದರಿಂದ ರಾಜ್ಯಕಾರಭಾರವು ರಶಿಯಾದ ಬೋಲ್ಶೆವಿಕ ತತ್ವದಂತಾಗಲಿ, ಇಟಲಿಯ ಫಾಸಿಸ್ಟ ಪಂಥದಂತಾಗಲಿ ನಡೆಯಬೇಕೆಂದು ಕೂಲಿಕಾರ ಸಂಘದವರು ಅಂದ, ಆ ಪ್ರಕಾರದ ಚಳವಳಿಯನ್ನು ನಡೆಸಿದ್ದಾರೆ.

ನೋಟಿಸು

ಮಹಾರುದ್ರಪ್ಪ ತಂದಿ ಗುಂಡಪ್ಪ ಕೊರಿಕೊಪ್ಪದವರ ಸಾಕೀನ ಉಡಕೇರಿ ತಾಲೂಕ ಬೈಲಹೊಂಗಲ ಈತನಿಗೆ–

ಕೆಳಗೆ ಹೆಬ್ಬೆಟ್ಟಿನ ಗುರ್ತಾ ಮಾಡುವ ಪಾರ್ವತೆವ್ವಾ ಕೋಮ ಮಹಾರುದ್ರಪ್ಪಾ ಕೊರಿಕೊಪ್ಪದವರ ಈಕೆಯು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ–

ನೀನು ನನ್ನ ಮದಿವೆಯ ಗಂಡನಾಗಬೇಕು. ನಾನು ಚಿಕ್ಕವಳಿದ್ದಾಗ್ಗೆ ಮದಿವೆಯಾಯಿತು. ನನ್ನ ತಂದೆ ತಾಯಿಗಳು ಧರ್ಮದ ಲಗ್ನ ಮಾಡಿಕೊಟ್ಟರು ನಾನು ಪ್ರಬುದ್ಧಳಾದರೂ ನೀನು ನನ್ನನ್ನು ಕರಕೊಂಡು ಹೋಗಿ, ಬಾಳಿವೆ ಮಾಡಲಿಲ್ಲ. ಒಂದೇ ಊರವರು. ಮೇಲಾಗಿ ಸೋದರಮಾವನಾಗಬೇಕು. ನನ್ನ ಕೂಡ ನೀನು ಪ್ರಪಂಚ ಮಾಡದೆ, ಎರಡನೆಯವಳನ್ನು ಮದಿವೆ ಮಾಡಿಕೊಂಡಿ ಆಕೆಯು ಸತ್ತಳು. ಆನಂತರ ಸಹ ನನ್ನನ್ನು ಕೂಡಿಕೊಂಡು ಪ್ರಪಂಚ ಮಾಡಬೇಕೆಂದು ಸೈವದವರು ಹೇಳಿದರು. ಆದರೂ ಕೇಳದ್ದರಿಂದ ಈ ನೋಟಿಸು ಕೊಡಬೇಕಾಯಿತು. ನೀನು ಈ ನೋಟಿಸು ಮುಟ್ಟಿದ ಎಂಟು ದಿವಸಗಳಲ್ಲಿ ನನ್ನನ್ನು ಕರಕೊಂಡು ಹೋಗಿ, ಸುಖದಿಂದ ಪ್ರಪಂಚ ಮಾಡಿಕೊಂಡಿರಬೇಕು. ಈ ವರೆಗೆ ನಿನ್ನ ದೆಸೆಯಿಂದ ನನ್ನ ಹೊಟ್ಟೆಗಾಗಿ ಮುನ್ನೂರು ರೂಪಾಯಿ ಸಾಲವಾಗಿರುತ್ತದೆ. ಈ ಸಾಲ ಕೊಟ್ಟು ಮತ್ತು ಚಲೋ ರೀತಿಯಿಂದ ನಡೆಸುತ್ತೇನೆಂದು ಎರಡು ಜಾಮೀನು ಕೊಟ್ಟು ಕರಕೊಂಡು ಹೋಗಬೇಕು. ಇದಕ್ಕೆ ತಪ್ಪಿದರೆ– ನಿನ್ನ ಮನಸ್ಸಿನಲ್ಲಿ ನನ್ನ ಕೂಡ ಬಾಳಿವೆ ಮಾಡುವದಿಲ್ಲೆಂದು ತಿಳಿದು, ನಾನು ಬೇರೆಬ್ಬನನ್ನು ಉಡಿಕೆ ಮಾಡಿಕೊಳ್ಳುವೆನು. ಆನಂತರ ನಿನ್ನ ಹಕ್ಕು ನನ್ನ ಮೇಲೆ ಮತ್ತು ನನ್ನ ಉಡಕಿಯ ಗಂಡನ ಮೇಲೆ ಬಿಲಕೂಲ ನಡೆಯಲಾರದು. ಇದೇ ನೋಟೀಸು ಸೋಡಪತ್ರವೆಂದು ತಿಳಿಯಬೇಕು. ಮತ್ತು ಈ ವರೆಗಾದ ಸಾಲದ ಬಗ್ಗೆ ಯಿಂದ ನಿನ್ನ ಮೇಲೆ ಕಾಯದೇಶೀರ ಇಲಾಜುಮಾಡಬೇಕಾಗುತ್ತದೆ. ಈ ಸಂಬಂಧಿ ನೋಟೀಸು ಖರ್ಚು ಮತ್ತು ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲಿರುತ್ತದೆ. ತಿಳಿಯುವದು ತಾ|| ೪ ಸಪ್ಟಂಬರ ೧೯೩೧ನೆಯ ಇಸ್ವಿ

ಈ ಎಡಗೈ ಹೆಬ್ಬೆರಳಿನ ಗುರ್ತಾ ಪಾರ್ವತೆವ್ವಾ ಕೋಮ ಮಹಾರುದ್ರಪ್ಪಾ ಕೊರಿಕೊಪ್ಪನವರ ಈಕೆಯ ಸೈದು ಇರುತ್ತದೆ.

The Asian Life Assurance Co. Ltd

Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೧; ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗಬೇಡಿರಿ. ಈ ಕಂಪನಿಯು

ವಿಮೆಯ ರಕಮು ರೂ. ೧,೩೫,೦೦೦,೦೦ ಕಂತದ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರಿಗಿ ಕೊಟ್ಟದ್ದು ೧೬,೦೦,೦೦೦

ಜಿಂದಿಗಿ ೨೩,೦೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕುಲಕರ್ಣಿ, ಧಾರವಾಡದ ಏಜಂಟರು

ಕೆ. ವ್ಹಿ. ಹುಲಸೋಗಿ, ಬಿ. ಎ. ಕರ್ನಾಟಕದ ಬ್ರಾಂಚ ಮ್ಯಾನೇಜರ

ಬಿ. ಎಚ್. ಪಾಟೀಲ ಹಾವೇರಿಯ ಚೀಫ ಏಜಂಟರು.

ಹುಬಳಿಯ ಏಜಂಟರು– ಶ್ರೀ. ಎನ್. ಎಮ್. ದೊಡ್ಡವಾಡ ಮತ್ತು ಶ್ರೀ. ಬಿ. ಟಿ. ಶಿರೋಳಕರ.

ಅನುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೨೨೦೦ ರೂ. ಗಳನ್ನು ಕೊಡುವಂಥ ಗೋಲ್ಡನ್ (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಷ್ಟೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ ಏಶಿಯನ್ನ ಕಂಪನಿಯೊಂದೇ ಆಗಿರುತ್ತದೆ.

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದ ಪ್ರತಿಯೊಂದು ಪಳಿಗೆ ಒಂದೂವರೇ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾರಿಗೆ ಮುದ್ರಣ ಇಂಗ್ಲೀಷ ಅಕ್ಷರದ ... ಲ್ಲಿ ... ಕಾಲಮಿನ ಪಳಿಗೆಗೆ ಇಷ್ಟು ಚಾರ್ಜ ತಾವು ... ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ವರ್ಗಣಿದಾರರಿಗೆ ಸೂಚನೆ

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾದ ನಿಮ್ಮ ಮತ್ತು ವಾರ ಪತ್ರದ ವರ್ಗಣಿದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ವರ್ಗಣಿದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ಮೈಸೂರು ಊದುಬತ್ತಿ

ಪಪ್ಪ ಅಂಬರಬತ್ತಿ ಇದು ಬಹಳ ಸುವಾಸನೆಯುಳಮ್ಮು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಚಿಕ್ಕ ೨೪ ಕೊಳೆಯ ಸೇರು ೧ಕ್ಕೆ ೨–೦–೦

ಕೃಷ್ಣ ಪಾರಿಜಾತ ಅತ್ತರು ತೊಲೆ ೧ಕ್ಕೆ ೪–೦–೦

೧೯–೧೧–೨೮ ಮೈಸೂರ ಸ್ಟೋರ, ಬೆಳಗಾವಿಯವರಗಲ್ಲಿ ಹುಬ್ಬಳ್ಳಿ

ಈ ಪತ್ರವನ್ನು ಅಣ್ಣಾಚಾರ್ಯ ... ಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨] ಧಾರವಾಡ ಶನಿವಾರ ತಾರೀಖು ೫ ನೇ ಸಪ್ಟಂಬರ ೧೯೩೧ (ಸಂಚಿಕೆ ೨೦೨

ಜೋಶಿ, ಗಂಜೀಕರ ಮತ್ತು ಕಂಪನಿ

ಶುಕ್ರವಾರಪೇಟೆ ಧಾರವಾಡ

ಇವರನ್ನು

ಮುಂಬೈ ಪ್ರಾವ್ಹಿನ್ಸಿಯಲ್ ಕೋ. ಇನ್ಶುರನ್ಸ ಕಂಪನಿ, ಲಿ.

ಇವರು

ಧಾರವಾಡ ಜಿಲ್ಲೆಯ

ಚೀಫ್ ಏಜಂಟ

ರಾಗಿ ನಿಯಮಿಸಿದ್ದಾರೆ.

ಈಗ ಜಿಲ್ಲೆಯ ಎಲ್ಲ ಮುಖ್ಯ ಸ್ಥಳಗಳಲ್ಲಿ

ಸಬ್ ಏಜಂಟ

ರನ್ನು ನಿಯಮಿಸುವದದೆ. ಈ ಕೆಲಸ ಮಾಡಲಿಚ್ಛಿಸುವವರು ತಮ್ಮ ಖಾತ್ರಿಯ ಬಗ್ಗೆ ಎಲ್ಲ ಮಾಹಿತಿ ಕೊಟ್ಟು ಚೀಫ್ ಏಜಂಟರಿಗೆ ಬರೆಯಬೇಕು. ಖಾತ್ರಿಯಿಂದ ಕೆಲಸ ಮಾಡುವವರಿಗೆ ಪೂರ್ಣ ಕಮೀಶನ ಸಿಗುವದು.

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಗಳವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ ಅದನ್ನು ಮಾರಾಟಕ್ಕೆ ಸಿದ್ಧಮಾಡುತ್ತೇವೆ. ಇದರಲ್ಲಿ ವಾದೀ ಶ್ರೀ ಶಿವಾನಂದರ ಅರ್ಜಿ, ಶ್ರೀ ಆರೂಢಸ್ವಾಮಿಗಳ ಕೈಫಿಯತ್ತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ಶೀಘ್ರ ಖರ್ಚಾಗುವವು. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚು ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂಡಿಗೆಯು ಎಂಟು ಲಕ್ಷದಮೇಲಿಂದು, ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಚಾಲು ಠೇವು ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೧-೦
೩ ,,	೪-೮-೨
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ.

ವಿಜಯ.

ತಾರೀಖು ೫-೯-೧೯೩೧ನೇ ಇಸ್ವಿ

ರೌವ್ಹುಂಡ ಟೇಬಲ್ಲ.

ಸುಲಕ್ಷಣ ಅವಲಕ್ಷಣಗಳು

—(೦)—

ಮಹಾತ್ಮರಂಥ ಪ್ರತಿಷ್ಠಿತ ಪ್ರತಿನಿಧಿಗಳು ಹಡಗದಲ್ಲಿರುವರು. ಮ್ಹೌ. ಶೌಕತಲ್ಲಿ, ಸರ ಸಪ್ರು ಮೊದಲಾದವರು ಪ್ಯಾರೀಸದಲ್ಲಿದ್ದಾರೆ. ಲಂಡನ ಕಂಡವರು ನೇಕಂಡ ಅಪ್ಪಸದಂಥವರೇ ? ಹೊಸ ಭಾರತ ಮಂತ್ರಿಯಾದ ಸರ ಸ್ಯಾಮ್ಯುಯಲ ಹೋರ ಸಾಹೇಬರು ಇವರಿಗೆ ಎದುರುಗೊಳ್ಳುವ ಮೇಜವಾನಿ ಮಾಡಿಸಿದರು. ಭಾರತ ಮಂತ್ರಿಯು ಕಾನ್ಸರವೇಟಿವ್ಹರಾದ್ದರಿಂದ, ಸರ ಸಾಯಮನ್ನ ಮೊದಲಾದವರು ಈ ಊಟಕ್ಕೆ ಬಂದಿದ್ದರು. ಊಟ ನಡೆವಾಗಲೇ ಸರ ಹೋರಸಾಹೇಬರಿಗೆ ಆ ಕ್ಷಣವೇ ಬರಬೇಕೆಂದು ಮಂತ್ರಿ ಮಂಡಲದಿಂದ ಟೆಲಿಫೋನು ಬರಲು- ಅವರು ಹಾಗೇ ಎದ್ದು ಹೋಗಿ ಬಿಟ್ಟರು.

ಮೊದಲು ವಿಚಾರಣೆಗೆ ಪ್ರಾರಂಭವಾಗತಕ್ಕದ್ದು ಫೆಡರಲ ಸ್ಟ್ರಕ್ಚರ ಕಮೀಟಿಯು. ಈ ಕಮೀಟಿಯಲ್ಲಿ ಮುಸಲಮಾನರ ಹಕ್ಕು ಸಂಬಂಧಗಳ ನಿರ್ಣಯವಾಗ ಹೊರ್ತು, ತಾವು ಮುಂದಿನ ವಿಚಾರಣೆಯಲ್ಲಿ ಭಾಗ ತೆಗೆದುಕೊಳ್ಳತಕ್ಕದ್ದಲ್ಲೆಂದು ಮುಸಲಮಾನರು ಸತ್ಯಾಗ್ರಹ ಹೂಡಬೇಕೆಂದಿದ್ದಾರೆ. ನಾಮದಾರ ಅಗಾಖಾನ ಮೊದಲಾದ ಮುಸಲಮಾನ ಮೆಂಬರರು ಪ್ಯಾರೀಸದಲ್ಲಿ ಕೂಡ ಈ ಭಾಷಣ ನಡೆಸಿದ್ದಾರೆ.

ಸರ ಸ್ಯಾಮ್ಯುಯಲ ಹೋರರಂತೆ ಲಾರ್ಡ ಸ್ಯಾಂಕೆಯವರು ಮೇಲಿನ ಔತಣಿಗೆ ಬರಲಿಲ್ಲ. ಏಕೆಂದರೆ- ಪ್ರಧಾನ ಮಂಡಳದ ಮಹತ್ವದ ವಿಚಾರವೇ ಕಾರಣ. ಪ್ರಧಾನರು ಹಿಂದುಸ್ಥಾನದ ವಿಚಾರವನ್ನು ಒಮ್ಮೆ ಪಾರ್ಲಮೆಂಟ ಸಭೆಯಲ್ಲಿ ಇತ್ಯರ್ಥ ಮಾಡಿಬಿಡಬೇಕೆಂದು ಹವಣಿಸಿದ್ದಾರೆ. ಮುಂದೆ ಯಾರೇ ಮಂತ್ರಿಯಾಗಲಿ, ಅಧಿಕಾರಪದಾರೂಢರಾಗಲಿ, ಅವರಿಗೆ ಹಿಂದುಸ್ಥಾನದ ಸ್ವರಾಜ್ಯವಿಚಾರದ ತಾಪವೇ ಆಗದಂತೆ ವ್ಯವಸ್ಥೆಗೊಳಿಸಬೇಕೆಂದಿದ್ದಾರೆ.

ಈ ವಿಚಾರದಲ್ಲಿ ಮಂತ್ರಿಗಳು ತಮ್ಮ ಮನಸ್ಸಿಗೆ ಬಂದಂತೆ ನಡೆಯುತ್ತಾ ಬಂದದ್ದು ಮಾತ್ರ ಅವಲಕ್ಷಣವು. ಹಿಂದಿನ ರೌವ್ಹುಂಡ ಟೇಬಲಿನಲ್ಲಿ ಈ ದೇಶದ ಸಾಂಪತ್ತಿಕ ಸ್ಥಿತಿಯ ವಿಚಾರವಾಗಿ ಆಲೋಚನೆ ಹೇಳುವ ತಜ್ಞರೆಂದು ಸರ ಬಿ ಎನ್ನ ಮಿತ್ರರನ್ನು ನೇಮಿಸಿದ್ದರು. ಅವರು ಈಗ ಸರಕಾರೀ ಕಾಮದಾರರಾದರೆಂದು ಈ ಸಾರೆ ಅವರಿಗೆ ಆಮಂತ್ರಣವಿಲ್ಲ. ಇಲಾಖೆ ಸರಕಾರಗಳ ಪ್ರತಿನಿಧಿಗಳು ಕೂಡ ಸಹ ಪ್ರತಿನಿಧಿಯಾಗಿ ಸೇರುವದಾದ ಬಳಿಕ, ಸರ ಮಿತ್ರರಿಗೇ ರೌವ್ಹುಂಡ ಟೇಬಲಿನ ಬಾಗಿಲ ಬಂದಾದದು ತಿಳಿಯುವಾಗಿದೆ. ರಾಜನೀತಿಯು ಯಾವಾಗಲೂ ರಾಜ್ಯಕರ್ತರ ಧೋರಣದ ಪ್ರಕಾರ ವಿಕ್ಷಿಪ್ತವಾಗಿಯೇ ಇರುವದುಂಟು.

ಇದೇ ಗಣನೆಯ ತಾರೀಖಿನಿಂದ ಫೆಡರಲ ಕಮೀಟಿ ಸೇರುವದು. ಅಂದೇ ಪಾರ್ಲಮೆಂಟದಲ್ಲಿ ಮಿತ್ರ ಪ್ರಧಾನರು ಆದಾಯ ವೆಚ್ಚ ಪತ್ರಿಕೆಯನ್ನು ಬಹಿರಂಗ ಮಾಡುವರು. ಇಂಗ್ಲಿಷ ಜನರ ಲಕ್ಷ್ಯವೆಲ್ಲ ಅತ್ತ ಕಡೆಗೇ ಇರುವದರಿಂದ ಹಿಂದುಸ್ಥಾನದ ಒಗ್ಗೆ ಜನರು ಹೆಚ್ಚು ಮನಸ್ಸು ಹಾಕುವದು ಶಕ್ಯವಲ್ಲ. ಸದ್ಯದ ಗ್ರಹಬಲ ನೋಡಲಾಗಿ, ರೌವ್ಹುಂಡ ಟೇಬಲಿಗೆ ರಾಹುಕಾಲವಿರುತ್ತದೆಂದು ಹೇಳಬೇಕಾಗುತ್ತದೆ.

ಮೌಲಾನಾ ಶೌಕತಲ್ಲಿಯವರಿಗೆ ಆದರ ಮೌಲಾನಾ ಜಾಫರಲ್ಲಿಯವರಿಗೆ ಅನಾದರ.

—(೦)—

ಮೌಲಾನಾ ಶೌಕತಲ್ಲಿಯವರು ಬೆಂಗಳೂರು ಮತ್ತು ದಂಡಿಗೆ ಬಂದಾಗ, ಅಧಿಕಾರಿಗಳು ಅವರಿಗೆ ಬೇಕಾದ ಹಾಗೆ ಭಾಷಣ ಮಾಡಗೊಟ್ಟರು. ಈಗ ಮುಸಲಮಾನರ ಪೈಕಿಯ ರಾಷ್ಟ್ರೀಯ ಪಕ್ಷದವರಾದ ಮೌಲಾನಾ ಜಾಫರಲ್ಲಿಖಾನರು ಬೆಂಗಳೂರಿಗೆ ಬಂದಿದ್ದು ಇವರಿಗೆ ದಂಡಿನಲ್ಲಿ ಸಾರ್ವಜನಿಕವಾಗಿ ಮಾತ್ರವಲ್ಲ; ಮಸೀದಿಗಳಲ್ಲಿ ಸಹ ಮಾತಾಡಬಾರದೆಂದು ಸರಕಾರದವರು ನೋಟೀಸು ತೆಗೆದರು. ಮಸೀದಿ ಸಾರ್ವಜನಿಕವಲ್ಲ, ಅಲ್ಲಿ ಭಾಷಣ ಮಾಡತಕ್ಕವರೆಂದು ಮೌಲಾನರವರು ಸತ್ಯಾಗ್ರಹದ ಉತ್ತರ ಕೊಟ್ಟು, ನೋಟೀಸು ತಳ್ಳಿಕೊಂಡಿದ್ದಾರೆ.

ಮಹಾತ್ಮರು ಲಂಡನಕ್ಕೆ ಬಂದ ದಿವಸ ಅದರ ವಿರುದ್ಧ ಮೆರವಣಿಗೆ ತೆಗೆದು ನಿಷೇಧದ ಸಭೆ ಮಾಡುವಂತೆ ಮಿ. ಶಕಲತವಾಲಾ ಮೊದಲಾದ ಸಂಪೂರ್ಣ ಸ್ವಾತಂತ್ರ್ಯಪ್ರಿಯರು ಗೊತ್ತು ಮಾಡಿ ಆ ಪ್ರಕಾರದ ವ್ಯವಸ್ಥೆಗೆ ಹತ್ತಿದ್ದಾರೆ.

ದಂಗೆಗಳಲ್ಲಾಗುವ ಕೊಲೆಗಳನ್ನು ನಿಲ್ಲಿಸುವ ರಾಮಬಾಣ ಉಪಾಯ.

ಹಿಂದೂ ಮುಸಲಮಾನ ದಂಗೆಗಳಲ್ಲಿ ಜನರು ಪತಂಗದ ಹುಳಗಳಂತೆ ಸಾಯುತ್ತಾರೆ. ದರೋಡೆಗಳಲ್ಲಿ ನಿಶ್ಚಿಂತೆಯಿಂದ ನುಗ್ಗಿದವರು ದರೋಡೆಗಾರರ ಕಯ್ಯಲ್ಲಿ ಶಸ್ತ್ರವಿದ್ದರೂ ಕುರಿಯಂತೆ ಸಿಕ್ಕು ಹಿಂಸೆಗೂ, ಸಾವಿಗೂ ಕಾರಣರಾಗುತ್ತಾರೆ. ಈ ಪ್ರಕಾರವಾಗುವ ಜನಲಯವನ್ನು ತಪ್ಪಿಸಬೇಕಾದರೆ ಒಂದೇ ಒಂದಾದ ರಾಮಬಾಣ ಉಪಾಯವಿರುತ್ತದೆ.

ಹಿಂದುಸ್ಥಾನದಲ್ಲಿ ಬಂಡಾಯದ ಪೂರ್ವದಲ್ಲಿ ಹಿಂದೂ ಮುಸಲಮಾನರು ಈಗಿನಂತೆ ನೆರೆ ಹೊರೆಯವರಾಗಿದ್ದರು. ಆದರೆ ಆಗ ಹಿಂದೂ ಮುಸಲಮಾನ ದಂಗೆಯಾಗಲಿಲ್ಲ. ಬಂಡಾಯವಾದ ಬಳಿಕ ಜಾತಿದ್ವೇಷ ಬೆಳೆಯಿತು. ಈ ದ್ವೇಷದ ಮುಖ್ಯ ತೀರಿಸಿಕೊಳ್ಳಲಿಕ್ಕೆ ಸರಕಾರದವರು ಜನರಲ್ಲಿದ್ದ ಶಸ್ತ್ರ ಬಂದೂಕುಗಳನ್ನು ಕಸಕೊಂಡದ್ದೊಂದು ಮಹತ್ವದ ಕಾರಣವಾಯಿತು. ಮನುಷ್ಯನಲ್ಲಿ ಪುರುಷತ್ವವೆಂಬುದರ ಪುರುಷಾರ್ಥವೇ ಇಲ್ಲದಂತಾಯಿತು.

ಶಸ್ತ್ರದ ಕಟ್ಟಳೆಯನ್ನು ಸಡಿಲು ಮಾಡಿ, ಸಜ್ಜನರಿಗಾದರೂ ಅವಶ್ಯವಿರುವ ಸಾರ್ವತ್ರಿಕ ಅಧಿಕಾರವಿರಬೇಕೆಂದು ಕಾಂಗ್ರೆಸ ಸಭೆಯು ತನ್ನ ಜನ್ಮದಾರಭ್ಯ ಹೇಳುತ್ತಾ, ಸಾರುತ್ತಾ ಬಂದಿದೆ. ಆದರೂ ಅದರಲ್ಲಿ ಯಾವ ಸುಧಾರಣೆಯೂ ಆಗಿಲ್ಲ. ಕಾಯದೆ ಭಂಗವೂ ಅಸಹಕಾರವೂ ಅಹಿಂಸೆಯ ಪರಮಾವಧಿಯಾಗಿದ್ದರೂ, ಬಂದೂಕಿನ ಪಾಸುಳ್ಳವರು ಯಾವ ತಪ್ಪು ಮಾಡದಿದ್ದರೂ, ಸರಕಾರದವರು ಅನೇಕರ ಪರವಾನಗಿಗಳನ್ನು ರದ್ದು ಮಾಡಿದ್ದಾರೆ. ಅಂಜಿಕೊಳ್ಳುವವರ ಮೇಲೆ ಕಪ್ಪೆ ಎನ್ನುವಂತೆ ಸರಕಾರದ ವರ್ತನವಾಗಿರುತ್ತದೆ.

ಸರಕಾರದವರು ಊರಿಗೆ ನಾಲ್ಕಾರು ಬಂದೂಕು ಮತ್ತು ಕತ್ತಿಯ ಪಾಸುಗಳನ್ನು ಕೊಟ್ಟರೆ- ದರೋಡೆ ಕಾಗಲಾರವು. ದೊಡ್ಡ ಪಟ್ಟಣಗಳಲ್ಲಿ ಕನಿಷ್ಠ ೫೦ ಜನರಿಗೆ ರಿವಾಲ್ವರದ ಪಾಸು ಕೊಟ್ಟು, ದಂಗೆಯ ಕಾಲದಲ್ಲಿ ಆತ್ಮರಕ್ಷಣೆಯ ಮಟ್ಟಿಗಲ್ಲದೆ, ದಂಗೆಯನ್ನು ಮುರಿಯಲೂ ದಂಗೆಗಾರರ ಮೇಲೆ ಗುಂಡು ಹಾಕುವಂಥ ಆಗಿನ ಮಟ್ಟಿಗೆ ಮ್ಯಾಜಿಸ್ಟ್ರೇಟರಂಥ ಅಧಿಕಾರ ಕೊಟ್ಟರೆ ದಂಗೆಗಳ ಸದ್ದೇ ಅಡಗಿ ಹೋಗುವದು. ದಂಗೆ ಮಾಡತಕ್ಕವರು ಸದ್ಗೃಹಸ್ಥರಿರುವದಿಲ್ಲ. ಹುಂಬರೂ, ಕಾಕಪೋಕರರೂ ಆಗುತ್ತಾರೆ. ದಂಗೆ ಮಾಡಿದರೆ ಗುಂಡಿನಿಂದ ಮರಣ ಬರುತ್ತದೆಂದು ಒಮ್ಮೆ ಗೊತ್ತಾದರೆ - ಸಾಕು. ತಿರಿಗಿ ಅವರು ಕನಸಿನಲ್ಲಿ ಸಹ ದಂಗೆಯ ವಿಚಾರ ತರುವದಿಲ್ಲ.

ಊರು ಶಾಂತವಾಗಿರುವಾಗಲೇ ಪೋಲೀಸರ ಅಂದಾಧುಂದಿ ದಂಗೆಯಾಗಿ ಊರೇ ಉರಿಯಲಿಕ್ಕೆ ಹತ್ತಿತೆಂದರೆ - ಪೋಲೀಸರ ಆಟವೆಲ್ಲ ನಿಂತು ಹೋಗುತ್ತದೆ. ಜನರು ತಲೆಯೆತ್ತಿಕೊಂಡು, ಸತ್ತು, ಮನೆ ಸುಟ್ಟು ಹಾಳಾದ ಬಳಿಕ, ಹೊರಗಿನಿಂದ ಪೋಲೀಸರೂ ದಂಡೂ ಬಂದು, ಗೊಂದಲ ನಿಲ್ಲಿಸುವದು. ತತ್ಪೂರ್ವದಲ್ಲಾದ ಹಾನಿಯನ್ನು ಯಾರು ತುಂಬಿ ಕೊಡುವರು. ತಮ್ಮ ಬಲಹೀನತೆ ಹಾಗು ದುರದೃಷ್ಟಿಯಿಂದ ದಂಗೆಯನ್ನು ಶಾಂತಪಡಿಸದ ಸರಕಾರವು ದಂಗೆಯ ಶಿಕ್ಷೆ ಎಂದು ಊರಲ್ಲಿ ಶಿಕ್ಷಾ ಪೋಲೀಸರನ್ನು ಕೂಡ್ರಿಸುವದು, ಘಲೋನ್ಯಾಯ

ಸರಕಾರವು ಪ್ರಜೆಗಳಲ್ಲಿ ಹುಟ್ಟಿದ ಸ್ವಾವಲಂಬನ ಮತ್ತು ಸ್ವದೇಶ ಪ್ರೀತಿಯನ್ನು ಲಕ್ಷ್ಯಕ್ಕೆ ತಂದು, ಸಡಿಲುಗೆಯಿಂದ ಬಂದೂಕಿನ ಪಾಸು ಕೊಟ್ಟರೆ - ದಂಗೆಗಳು ಸದ್ದಿಲ್ಲದೆ ಅಡಗುವವು.

ಸ್ವಯಂವರದಲ್ಲಿ ಗುಂಡು ಹಾರಿದವು

....(೦)....

ರೊಮಾನಿಯಾದ ಒಂದು ಗ್ರಾಮದಲ್ಲಿ ಶ್ರೀವಂತನಾದ ರೈತನ ಮಗಳೊಬ್ಬಳು ಬಹು ಸುಂದರಿಯು. ಆ ಜಿಲ್ಲೆಯಲ್ಲಿ ಅವಳಷ್ಟು ಸುಂದರಿಯು ಇನ್ನಾರಿಲ್ಲ. ಇಬ್ಬರು ಯುವಕರು ಆಕೆಯನ್ನು ಮದಿವೆಯಾಗಬೇಕೆಂದು ಅಪೇಕ್ಷಿಸಿದರು. ಅವಳು ಒಪ್ಪಲಿಲ್ಲ ತಾನೇ ಒಬ್ಬನನ್ನು ಆರಿಸಿದಳು.

ಸ್ವಯಂವರದ ಸಿದ್ಧತೆಯಾಯಿತು. ಬೀಗರು ಬಿಜ್ಜರು ಬಂದರು. ವಧುವರರು ಭೋಜನಗಳಿಯ ಮೇಲೆ ನಿಂತರು. ಶುಭಮುಹೂರ್ತ ಸಾವಧಾನವಾಗುವ ಸಮಯ. ತಮ್ಮನ್ನು ವರಿಸಲಿಲ್ಲೆಂದು ನಿರಾಶರಾದ ಯುವಕರಿಬ್ಬರು ರಿವಾಲ್ವರ ಸಹಿತವಾಗಿ ಲಗ್ನಮಂಟಪದಲ್ಲಿ ಹೊಕ್ಕವರೇ- ಅಸ್ತವ್ಯಸ್ತವಾಗಿ ಗುಂಡು ಹಾರಿಸಲಾರಂಭಿಸಿದರು. ಗುಂಡುಗಳಿಂದ ವಧೂವರರ ತಂದೆ ತಾಯಿಗಳು ಪ್ರಾಣ ಹೋಗಿ ಬಿದ್ದರು. ವಧುವರರೂ ಭಯಂಕರ ಘಾಯವಾಗಿ ನೆಲಕ್ಕೆ ಉರುಳಿದರು ಇವರೂ ಸತ್ತರೆಂದೇ ತಿಳಕೊಂಡು, ಯುವಕರು ವಧುವು ವರನ ಕೊರಳೊಳಗೆ ಹಾಕಬೇಕಾಗಿದ್ದ ಮಾಲೆಯನ್ನು ತಕ್ಕೊಂಡು ಕಾಲ್ಕಿಗೆ ಬುದ್ಧೀ ಹೇಳಿದರು.

ವಿಜಾಪೂರದ ಸೆಶನ್ಸ ಕೋರ್ಟಿನಲ್ಲಿ ಆರು ಜನರಿಗೆ ಗಲ್ಲಿನ ಶಿಕ್ಷೆ.

....(೦)....

ವಿಜಾಪೂರದ ಸೆಶನ್ಸ ಕೋರ್ಟಿನಲ್ಲಿ ಅಳಗಾರ್ ಎಂಬ ಗ್ರಾಮದಲ್ಲಾದ ಕೊಲೆಯ ವಿಚಾರಣೆ ನಡೆದು, ಆರು ಜನ ಆರೋಪಿಗಳಿಗೆ ಗಲ್ಲಿನ ಶಿಕ್ಷೆಯಾಯಿತು.

ಶಿಕ್ಷಕರ ಅಳೋವನ್ಸ ಹೋಯಿತು.

ಸಂಬಳದಲ್ಲಿ ಕಡಿತ ಕೂಡಿತು.

....(೦)....

ವಿಜಾಪೂರ ಜಿಲ್ಲೆಯ ಸ್ಕೂಲ ಬೋರ್ಡಿನವರು ಸರಕಾರದ ಗ್ರಾಂಟು ಕಡಿಮೆಯಾದ ಕೂಡಲೆ ಶಿಕ್ಷಕರಿಗೆ ಕೊಡುತ್ತಿದ್ದ ಅಲೋವನ್ಸನ್ನು ಬಂದು ಮಾಡಿದ್ದಲ್ಲದೆ, ಅವರ ಸಂಬಳದಲ್ಲಿ ನೂರಕ್ಕೆ ಐದರಂತೆ ಕಡಿಮೆ ಮಾಡಿದ್ದಾರೆ.

....(೦)....

ಸಬ್ ಇನ್ಸಪೆಕ್ಟರನು ಕ್ಷಮೆ ಬೇಡಿಕೊಂಡನು.

— ೦—

ಬರಹಾನಪೂರದಲ್ಲಿ ಪೋಲೀಸ ಸಬ್ ಇನ್ಸಪೆಕ್ಟರನು ಅಸೆಂಬ್ಲಿಯ ಮೆಂಬರರಾಗಿದ್ದ ಶ್ರೀ ಜೋಗಯ್ಯನವರನ್ನು ಸಂದಿಯ ಲಿಲಾವಿನ ಕಾಲದಲ್ಲಿ ಪಿಕೆಟಿಂಗ ಮಾಡಿದರೆಂದು ಹಸ್ತಗಿರ ಮಾಡಿ ಬಿಟ್ಟಿದ್ದನು. ಈ ಅಪರಾಧಕ್ಕಾಗಿ ಈತನು ಕಲೆಕ್ಟರರಾದ ಮಿ. ಭಾಸ್ಕರರಾವ ನಾಯುಡು ಇವರ ಹಾಗು ಒಬ್ಬ ವಕೀಲರ ಸಮಕ್ಷಮ ಶ್ರೀ. ಜೋಗಯ್ಯನವರ ಬಳಿ ಕ್ಷಮೆ ಬೇಡಿಕೊಂಡನು.

ಶ್ರೀ ಕರ್ಕಿಯವರ ವ್ಯಾಖ್ಯ

ಕಾರವಾರ ಜಿಲ್ಲೆಯ ಪರಿಯಿಂದ ಕೌನ್ಸಿಲ ಮೆಂಬರರಾಗಿದ್ದ ಶ್ರೀ. ಕರ್ಕಿಯವರು ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ- ಇವರು ರಾಷ್ಟ್ರೀಯ ಪಕ್ಷದವರು- ಒಳ್ಳೇ ಗಟ್ಟಿಗರು. ಆಳರಸರಿಗೆ ಹೆದರತಕ್ಕವರಂತೂ ಅಲ್ಲವೇ ಅಲ್ಲ. ಇವರ ಮರಣದಿಂದ ಕಾರವಾರ ಜಿಲ್ಲೆಯ ಅಪರಿಮಿತ ಹಾನಿಯಾಯಿತು. ದೇವರು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ವಿವಿಧ ವರ್ತಮಾನಗಳು.

—(೦)—

ಲಾಹೋರಿನಲ್ಲಿ ಹೊರಡುವ ಜಮೀನದಾರ ಮತ್ತು ಅಫಗಾಣಿಸ್ಥಾನವೆಂಬೆರಡು ಪತ್ರಗಳಲ್ಲಿ ಅಫಗಾಣಿಸ್ಥಾನದ ವಿಷಯವಾಗಿ ಲೇಖಗಳು ಬಂದವೆಂದು ಪರರಾಷ್ಟ್ರಗಳ ಸ್ನೇಹದಿರುವ ಪರಸ್ಪರ ಸಂಬಂಧದ ಕಾಯದೆಯ ಪ್ರಕಾರ ಈ ಎರಡೂ ಪತ್ರಗಳ ಸಂಪಾದಕರಿಗೆ ಒಂದೊಂದು ವರ್ಷದ ಸಕ್ತಮ ಶಿಕ್ಷೆಯಾಯಿತು.

ಕಲಕತ್ತೆಯಲ್ಲಿ ಆಂಗ್ಲೋ ಇಂಡಿಯನ್ನರದೊಂದು ದಂಪತ್ಯ. ಇಬ್ಬರಿಗೂ ಕೆಲಸವಿಲ್ಲದೆ ಹೊಟ್ಟೆಯ ದೊಡ್ಡ ಚಿಂತೆಯಾಯಿತು. ಇಬ್ಬರೂ ಮಾತಾಡಿಕೊಂಡು, ಅಪ್ಪಿಮುಪ್ಪಿ ಹಾಕಿಕೊಂಡು ಮಲಗಿದರು. ಹಾಗೇ ಇಬ್ಬರ ಜೀವ ಹೋಯಿತು. ಅತ್ಯಂತ ಹೃದಯದ್ರಾವಕ ಸಂಗತಿಯೇ ಸರಿ.

ಅಹಮದಾಬಾದಿನಲ್ಲಿ ಸಾಬರಮತಿಯ ದಂಡೆಯಲ್ಲಿರುವ ಒಂದು ಬಾವಿಯ ಕೆಲಸ ನಡೆಯುತ್ತಿ ಸೆರೆಮನೆಯ ಕೈದಿಗಳು ಕೆಲಸ ಮಾಡುತ್ತಿದ್ದರು. ಒಬ್ಬ ಕೈದಿಯು ಸೆರೆಮನೆಯ ಯಾತನೆ ತಪ್ಪಿಸಿಕೊಳ್ಳಬೇಕೆಂದು ನದಿಯಲ್ಲಿ ಧುಮುಕಿ ಈಸಿ ಪಾರಾಗಬೇಕೆಂದು ಹವಣಿಸಿದನು. ಕೂಡಲೆ ಪಹರೆದಾರೂ ಪೋಲಿಸರೂ ನದಿಯಲ್ಲಿ ಬಿದ್ದರು. ಕೈದಿಯು ಸಿಕ್ಕು ಸುರಕ್ಷಿತವಾಗಿ ದಂಡೆಗೆ ಬಂದನು. ಒಬ್ಬ ಶಿಪಾಯಿ ಮಾತ್ರ ಮುಣುಗಿ ಸತ್ತೇ ಹೋದನು.

ಹಿಂದುಸ್ಥಾನದ ಅಸ್ಪೃಶ್ಯರ ಪರಿಯಿಂದ ರಾವುಂಡಟೇಬಲಿನಲ್ಲಿ ಡಾಕ್ಟರ ಅಂಬೇಡಕರರು ಹೋಗಿದ್ದಾರಷ್ಟೇ; ಏನ್ನಾದರೂ ಇವರು ಸರಕಾರದ ಪ್ರತಿನಿಧಿಗಳು ಅದ್ದರಿಂದ ಅಸ್ಪೃಶ್ಯರ ನಿಜ ವಿಚಾರಗಳನ್ನು ರಾವುಂಡ ಟೇಬಲ ಮತ್ತು ಬ್ರಿಟಿಶ ಜನತೆಯ ಮುಂದಿಡಲು ಇಂಗ್ಲಂಡಕ್ಕೆ ಹೋಗಲು ಪಾಸಪೋರ್ಟ ಕೊಡಬೇಕೆಂದು ಶ್ರೀ ದೇವರೂಖಕರರು ಸರಕಾರಕ್ಕೆ ಅರ್ಜೀ ಮಾಡಿದರು. ಸರಕಾರದವರು ಇವರಿಗೆ ಪಾಸಪೋರ್ಟ ಕೊಡಲಿಲ್ಲ. ಒಂದೊಂದೇ ವಿಚಿತ್ರ

ಬ್ರಹ್ಮದೇಶವು ಸ್ವತಂತ್ರವಾಗಬೇಕೇ? ಹಿಂದುಸ್ಥಾನದ ಒಂದು ಭಾಗವೇಕೇ? ಎಂಬ ವಿಚಾರವಾಗಿ ರಿಪೋರ್ಟ ಮಾಡಲು ಸರಕಾರದವರು ಒಂದು ಕಮಿಟಿ ನೇಮಿಸಿದ್ದು, ಅದು ನವ್ಹೆಂಬರ ತಿಂಗಳಲ್ಲಿ ಸಾಕ್ಷಿಗಳನ್ನು ತಕ್ಕೊಳ್ಳಲು ಪ್ರಾರಂಭಿಸುವದು. ಸರಕಾರದವರು ಮಿ. ಕಾವಸಜಿ ಎಂಬವರನ್ನು ಹಿಂದೂ ಜನರ ಪ್ರತಿನಿಧಿಯಾಗಿ ನೇಮಿಸಿದ್ದಾರೆ [illegible] ವಾಸಿಯಾದ ಹಿಂದೂ ಜನರು ಪ್ರಚಂಡ ಜಾಹೀರ ಸಭೆ ಕೂಡಿಸಿ, ಈ ಕಾವಸಜಿಯವರು ತಮ್ಮ ಪ್ರತಿನಿಧಿಯಲ್ಲವೆಂದೂ, ಕನಿಷ್ಟ ಮೂವರಾದರೂ ತಮ್ಮ ಪ್ರತಿನಿಧಿಗಳಿರಬೇಕೆಂದೂ ಸರಕಾರಕ್ಕೆ ಸೂಚಿಸಿದ ಠರಾವು ಮಾಡಿದ್ದಾರೆ.

ನಾಗಪೂರದ ಶ್ರೀ ಲಕ್ಷ್ಮೀನಾರಾಯಣ ರೆಂಬ ಧನವಂತರ ಮೃತ್ಯುಪತ್ರದ ಮೇರೆಗೆ ಅಲ್ಲಿಯ ವಿಶ್ವವಿದ್ಯಾಲಯಕ್ಕೆ ೩೦ ಲಕ್ಷ ರೂಪಾಯಿ ದೊರೆತವು.

ನಾಳಿನ ರಜೆ

ಇಂದು ಶ್ರೀಕೃಷ್ಣ ಜನ್ಮದ ಹಬ್ಬದ ದಿನವಿಂದ ಮುದ್ರಾಲಯಕ್ಕೆ ರಜೆ ಇರುವದರಿಂದ, ನಾಳಿನ ಸೋಮವಾರದ ವಿಜಯವು ಪ್ರಕಟಿಸಲ್ಪಡಲಾರದು.

ನೋಟೀಸು

ಸಾವಂತ್ರಿ ಕೋಂ ದ್ಯಾಮಪ್ಪಾ ದಳವಾಯಿ ಹಾಲಿವಸ್ತಿ ಸಿದ್ದ ಸಮುದ್ರ ತಾಲೂಕ ಸಂಪಗಾಂವಿ ಪೋಸ್ಟ ಬೆಳವಡಿ ಇವಳಿಗೆ-

ಕೆಳಗೆ ಹೆಬ್ಬೆಟ್ಟಿನ ಗುರ್ತ ಮಾಡಿದ ದ್ಯಾಮಪ್ಪಾ ತಂದಿ ಮುದಕಪ್ಪಾ ದಳವಾಯಿ ಸಿದ್ದಸಮುದ್ರ ಈತನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಮದಿವೆಯ ಹೆಂಡತಿಯಾಗಿದೀ. ಪ್ರಬುದ್ಧಳಾದ ಮೇಲೆ ಏಳೆಂಟು ವರ್ಷ ಬಾಳವೆ ಮಾಡಿದಿ ಒಂದು ಹುಡಿಗಿ ಹುಟ್ಟಿತ್ತು ಅದು ಸತ್ತಿರುತದೆ ಇಲ್ಲಿವರೆಗೆ ನೀನು ನನ್ನ ಕೂಡ ಸರಿಯಾಗಿ ನಡೆಯುದಾದಿ ನಾನು ಮತ್ತು ದೈವದವರು ಎಷ್ಟು ಬುದ್ಧೀ ಹೇಳಿದರೂ ನಿನ್ನ ಮೊಂಡತನ ಬಿಡಲಿಲ್ಲ ಅಜಮಾಸು ಒಂದುವರೀ ವರ್ಷವಾಯಿತು ನಾನು ಮನೆಯಲ್ಲಿಲ್ಲದ ವೇಳೆಯಲ್ಲಿ ನನ್ನ ಮಾಲಕಿಯ ದಾಗೀನೆಗಳು ಅಂದರೆ-

೧ ಒಂದು ಜೋಡು ಬಂಗಾರದ ಬಳಿ ಕಿಮ್ಮತ್ತು ರೂಪಾಯಿ ೧೦೦

೨ ಒಂದು ಗುಂಡಿನ ಟೀಕಿ ಕಿ|| ರೂ|| ೩೦ ರೂಪಾಯಿ

೩ ಒಂದು ಬಂಗಾರ ಸರ ಕಿ|| ರೂ|| ೪೦ ರೂಪಾಯಿ

೪ ತೋಳಬಂದಿ ಜೋಡು ಒಂದು ಕಿ|| ರೂ|| ೨೦ ರೂಪಾಯಿ

ಇಷ್ಟು ತಕ್ಕೊಂಡು ಹೋದಿ ನೀನು ಎಲ್ಲಿಗೆ ಹೋದೆಂಬುದು ತಿಳಿಯಲಿಲ್ಲ ಶೋಧ ಮಾಡಿದರೂ ಸಿಗಲಿಲ್ಲ ಆದರೆ ಈಗ ನೀನು ನಿನ್ನ ದೂರಿನ ಆಪ್ತರಾದ ಸಮುಕ್ಷೇಲ್ಲಿರುವ ಶೆಟ್ಟಿಮನಿಯವರ ಮನೆಗೆ ಬಂದಿ ಅಲ್ಲಿಂದ ನಿನಗೆ ನಾನು ಸ್ವತಃ ಕರೆದೆನು ದೈವದವರಿಂದಲೂ ಹೇಳಿಸಿದೆನು ನೀನು ಪ್ರಪಂಚ ಮಾಡಲಿಕ್ಕೆ ಕಬೂಲ ಮಾಡದ್ದರಿಂದ ಈ ನೋಟೀಸು ಕೊಡಬೇಕಾಯಿತು ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನ್ನ ಮಾಲಕಿಯ ಯಾವತ್ತು ದಾಗೀನೆ ತೆಗೆದುಕೊಂಡು ಬಂದು ನನ್ನ ಮನೆಯಲ್ಲಿ ಬಾಳವೆ ಮಾಡಿಕೊಂಡಿರಬೇಕು ಇದಕ್ಕೆ ತಪ್ಪಿದರೆ- ನಿನ್ನ ಮೇಲೆ ಕಾಯದೆಶೀರ ಇಲಾಜ ಮಾಡಬೇಕಾಗುತ್ತದೆ ನೀನು ನನ್ನ ದಾಗೀನೆ ಕೊಟ್ಟು, ನನ್ನಿಂದ ಫಾರಕತಿ ಪಡಕೊಂಡು ಬೇಕಾದವನನ್ನು ಉಡಿಕೆ ಮಾಡಿಕೊಳ್ಳಬಹುದು ಬರಿ ದಾಗೀನೆ ಕೊಡದೆ ಉಡಿಕೆ ಮಾಡಿಕೊಂಡರೆ- ನನ್ನ ದಾಗೀನೆ ಅಪಹಾರ ಮಾಡಿದ ಬಗ್ಗೆ ನಿನ್ನ ಮೇಲೆ ನಿನಗೆ ಸಹಾಯಕರಾಗಿರುವ ಜನರ ಮೇಲೆ ಫೌಜದಾರಿಯಲ್ಲಿ ಇಲಾಜ ನಡಿಸಲಾದೀತು ಮತ್ತು ಇದೇ ನೋಟೀಸು ಸೋಡಪತ್ರವೆಂದು ತಿಳಿಯಬೇಕು ನೀನು ನನ್ನ ಮನೀ ಬಿಟ್ಟು ಹೋದ ಬಳಿಕ ನನಗೂ ನಿನಗೂ ಸಂಬಂಧವಿಲ್ಲ ಬರ ಈನಂತರ ನಿನ್ನ ಹೊಟ್ಟೆಯಿಂದ ಸಂತತಿಯಾದರೆ- ಆ ಸಂತತಿಯು ಹಾಗು ನಿನ್ನದು ನನ್ನ ಮೇಲೆ ಮತ್ತು ನನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ಯಾವದೇ ಪ್ರಕಾರದ ಹಕ್ಕು ವಾರಸಾ ನಡೆಯಲಾರದು ತಿಳಿಯುವದು ಈ ನೋಟೀಸಿನ ಮತ್ತು ದಾಗೀನೆ ಬಾಬತು ಮಾಡಬೇಕಾದ ಯಾವತ್ತು ಖರ್ಚಿನ ಬೋಜಾ ನಿನ್ನ ತಲೆಯಮೇಲೆ ಇರುತ್ತದೆ ಅಂತಾ ಕೊಟ್ಟ ನೋಟೀಸು ತಾ|| ೫ ಸಪ್ಟಂಬರ ೧೯೩೧ನೆಯ ಇಸವಿ.

ಈ ಎಡಗೈ ಹೆಬ್ಬೆಟ್ಟಿನ ಗುರ್ತ ದ್ಯಾಮಪ್ಪಾ ತಂದಿ ಮುದಕಪ್ಪಾ ದಳವಾಯಿ ಈತನದು ಇರುತ್ತದೆ

ನೋಟೀಸು

ಫಕೀರವ್ವಾ ಕೋ|| ಜಟ್ಟೆನಗೌಡ್ರ ಸಾ|| ತಿಮ್ಮಾಪೂರ ಮಹಾಲ ಅಮ್ಮಿನಭಾವಿ ತಾಲೂಕ ಧಾರವಾಡ ಇವಳಿಗೆ

ಕೆಳಗೆ ಸಹಿಮಾಡಿದ ಬಸನಗೌಡಾ ತಂದಿ ಶಿದ್ದನಗೌಡಾ ಜಟ್ಟೆನಗೌಡ್ರ ಸಾ|| ತಿಮ್ಮಾಪೂರ ಮಹಾಲ ಅಮ್ಮಿನಭಾವಿ ತಾಲೂಕ ಧಾರವಾಡ ಈ ನೋಟೀಸಿನಿಂದ ತಿಳಿಸುವದೇನಂದರೆ -

ನೀನು ನನ್ನನ್ನು ಲಗ್ನ ಮಾಡಿಕೊಂಡು ಅಜಮಾಸ ಏಳು ಎಂಟು ವರ್ಷವಾಯಿತು ಲಗ್ನವಾದ ಮೇಲೆ ನೀನು ಕೆಲವು ದಿವಸ ಬಾಳ್ವೆ ಮಾಡಿದಿ ನಿನ್ನ ಹೊಟ್ಟೆಲಿ ಒಂದು ಗಂಡು ಸಹ ಹುಟ್ಟಿರುತ್ತದೆ ಹುಡುಗ ಹುಟ್ಟಿದ ಒಂದು ವರ್ಷದ ಮೇಲೆ ನೀನು ನಿನ್ನ ದುರಬುದ್ಧಿಯಿಂದ ಹಾಗು ಕೆಟ್ಟ ಜನರ ದುರಾಲೋಚನೆಯಿಂದ ಮನಿ ಬಿಟ್ಟು ಹೋಗಿರತೀದಿ ನನ್ನ ಮನಿ ಬಿಟ್ಟು ಹೋಗೋ ಕಾಲಕ್ಕೆ ಭಂಗಾರದ ಬಳೀಜೋಡು ಒಂದು ಅಜಮಾಸ ತೂಕ ಐದು ತೊಲಿ ೧೧೧ ರೂಪಾಯಿ ಗುಂಡಿನಟೀಕೆ ಒಂದು ಭಂಗಾರದ್ದು ಅಜಮಾಸ ಎರಡು ತೊಲಿ ರೂಪಾಯಿ ೪೧ ಭಂಗಾರದ ಪದಕದ ಸರಾ ಒಂದು ಅಜಮಾಸ ದೀಡ ತೊಲಿ ರೂಪಾಯಿ ೩೧ ಬೆಳ್ಳಿ ತೋಳಬಂದಿ ಜೋಡು ಒಂದು ಅದು ಅಜಮಾಸ ತೊಲಿ ೪೦ ರೂಪಾಯಿ ೨೦ ಚಾಕ ೧೨ ತೊಲಿ ಬೆಳ್ಳಿದು ರೂಪಾಯಿ ೬ ಬೆಳ್ಳಿ ಪಟ್ಟಿ ಒಂದು ರೂಪಾಯಿ ೫ ಭಂಗಾರ ಮೂಗತಿ ಮೂರು ಅಜಮಾಸ ೬ ರೂಪಾಯಿ ಈ ಪ್ರಕಾರ ಕಿಮ್ಮತ್ತಿನ ದಾಗೀನೆಗಳನ್ನು ತೆಗೆದುಕೊಂಡು ಹೋಗಿರುತ್ತೀ ಈಗ ನೀನು ಮರಿಯಪ್ಪಾ ತಂದಿ ಸರಗನಬಸಪ್ಪಾ ತಂದಿ ಕೆಂಚನ್ನವರ ಸಾ ಕೀನ ಹಾಗನೂರ ಹಾಲಿವಸ್ತಿ ಹಾವೇರಿ ಸೊಸಾಯಟಿ ಶಿಪಾಯಿ ಇವನ ತಾಬೇದಲ್ಲಿ ಇರುತ್ತಿ ಅಂತಾ ನನಗೆ ತಿಳಿದದೆ ಕಾರಣ ಈ ನೋಟೀಸು ಕೊಡುವ ಭಾಗ ಬಿತ್ತು ಈ ನೋಟಿಸ ಮುಟ್ಟಿದ ೧೫ ದಿವಸಗಳಲ್ಲಿ ಮೇಲೆ ನಮೂದ ಮಾಡಿದ ಕಿಮ್ಮತ್ತಿ ದಾಗೀನೆಗಳನ್ನು ತಂದು ನನಗೆ ಮುಟ್ಟಿಸಿ ನೀನು ಛಲೋ ರೀತಿಯಿಂದ ಬಾಳ್ವೆ ಮಾಡಬೇಕು ಯಿಲ್ಲದಿದ್ದರೆ ನಿನ್ನ ಮೇಲೆ ಹಾಗು ನೀನು ಯಾರ ತಾಬಾದಲ್ಲಿ ಇದ್ದೀ ಅವರ ಮೇಲೆ ಕಾಯದೆಶೀರ ರೀತಿಯಿಂದ ಕೋರ್ಟಿನಲ್ಲಿ ದಾವೆ ಮಾಡಲಾದೀತು ಇನ್ನ ಮುಂದೆ ನನ್ನ ಸ್ಥಾವರ ಜಂಗಮ ಆಸ್ತೀ ಮೇಲೆ ನಿನ್ನದು ಯಾವ ತರದ ಹಕ್ಕು ಇಲ್ಲಾ ಕಾರಣ ನೋಟಿಸಿನಲ್ಲಿ ನಮೂದ ಮಾಡಿದ ಮುದ್ದತಿ ಒಳಗಾಗಿ ನೀನು ಬರದೇ ಇದ್ರೆ ನೀನು ಬಾಳ್ವೆ ಮಾಡಲಿಕ್ಕೆ ನಿನ್ನ ಖುಷಿ ಇಲ್ಲಾ ಅಂತಾ ನಾನು ತಿಳಕೊಳ್ಳುತ್ತೇನೆ ಮುಂದೆ ನಿನ್ನ ಮರ್ಜಿ ಪ್ರಕಾರ ಎರಡನೇದವನನ್ನು ಉಡಕಿ ಮಾಡಿಕೊಳ್ಳಲಿಕ್ಕೆ ನನ್ನದೇನೂ ಅಡ್ಡಿಯಿಲ್ಲಾ ನಮೂದ ಮಾಡಿದ ದಾಗೀನೆಗಳನ್ನು ನನಗೆ ಮುಟ್ಟಿಸಿ ಉಡಕಿ ಮಾಡಿಕೊಳ್ಳಬೇಕು ನನಗೆ ಸದರ ದಾಗೀನೆ ಮುಟ್ಟಿಸದೆ ಹಾಗು ಉಡಕಿ ವಗೈರೆ ಆದ್ರೆ ನಿನ್ನ ಮೇಲೆ ಹಾಗು ಉಡಕಿ ಆದವನ ಮೇಲೆ ಕೆಲಸ ನಡಿಸಿ ಸದರ ದಾಗೀನೆ ಕಿಮ್ಮತ್ತ ವಸೂಲ ಮಾಡೋ ಭಾಗ ಬಿದ್ದೀತು ಈ ನೋಟೀಸಿನ ಖರ್ಚ ನಿನ್ನ ತಲೆಯ ಮೇಲೆ ಅದೆ ತಾ ೪ ಸಪ್ಟಂಬರ ೧೯೩೧ನೇ ಇಸವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತ ಬಸನಗೌಡಾ ತಂದಿ ಶಿದ್ದನಗೌಡಾ ಜಟ್ಟೆನಗೌಡ್ರ ಈತನ ಕೈದು ಇರುತ್ತದೆ

ಚಂದಾದಾರರಿಗೆ ಸೂಚನೆ

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾದ್ದು ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೩] ಧಾರವಾಡ ಸೋಮವಾರ ತಾರೀಖು ೭ನೇ ಸಪ್ಟಂಬರ ೧೯೩೧ [ಸಂಚಿಕೆ ೨೦೪

ಜೋಶಿ, ಗುಂಜೀಕರ ಮತ್ತು ಕಂಪನಿ

ಶುಕ್ರವಾರಪೇಟೆ ಧಾರವಾಡ

ಇವರನ್ನು

ಮುಂಬೈ ಪ್ರಾವಿನ್ಶಿಯಲ್ ಕೋ. ಇನ್ಶುಅರನ್ಸ ಕಂಪನಿ, ಲಿ.

ಇವರು

ಧಾರವಾಡ ಜಿಲ್ಲೆಯ

ಚೀಫ್ ಏಜಂಟ

ರಾಗಿ ನಿಯಮಿಸಿದ್ದಾರೆ.

ಈಗ ಜಿಲ್ಲೆಯ ಎಲ್ಲ ಮುಖ್ಯ ಸ್ಥಳಗಳಲ್ಲಿ

ಸಬ್ ಏಜಂಟ

ರನ್ನು ನಿಯಮಿಸುವದದೆ. ಈ ಕೆಲಸ ಮಾಡಲಿಚ್ಛಿಸುವವರು ತಮ್ಮ ಖಾತ್ರಿಯ ಬಗ್ಗೆ ಎಲ್ಲ ಮಾಹಿತಿ ಕೊಟ್ಟು ಚೀಫ್ ಏಜಂಟರಿಗೆ ಬರೆಯಬೇಕು. ಖಾತ್ರಿಯಿಂದ ಕೆಲಸ ಮಾಡುವವರಿಗೆ ಪೂರ್ಣ ಕಮೀಶನ ಸಿಗುವದು.

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ವಾದಿ ಶ್ರೀ ಶಿದ್ಧಾಪದೂಶರ ಅಸುಂಡಿ, ಶ್ರೀ ಆರೂಢಸ್ವಾಮಿಗಳ ಕೃಪೆಯುಳ್ಳ ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೂಡಿದ್ದು ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ಶೀಘ್ರ ಖಪಿಸುವವು. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕೊಳ್ಳುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ ಕೊಡಲ್ಪಡುವದು. ವ್ಹಿ. ಪಿ ಖರ್ಚು ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಒಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಯಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದಮೇಲುಂಟು. ಠೇವು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿ.

ಮ್ಯಾ ವಿಜಯ ಧಾರವಾಡ

ವಿಜಯ.

ತಾರೀಖು ೭-೯-೧೯೩೧ನೇ ಇಸ್ವಿ

ಮಹಾತ್ಮರು ಎಂಥ ಸ್ವರಾಜ್ಯ ತರುವದಕ್ಕಾಗಿ ಲಂಡನಕ್ಕೆ ಹೊರಟಿರುವರು.

ಮಹಾತ್ಮರು ಏಡನದಲ್ಲಿರುವಾಗ ವರ್ತಮಾನ ಪತ್ರಗಳ ಓರ್ವ ಪ್ರತಿನಿಧಿಯು ಲಂಡನದ ಕಾರ್ಯಕ್ರಮದ ಬಗ್ಗೆ ಪ್ರಶ್ನೆ ಮಾಡಲು ಮಹಾತ್ಮರು ಉತ್ತರ ಕೊಟ್ಟದ್ದೇನಂದರೆ-

ಈನಂತರ ಹಿಂದುಸ್ಥಾನವು ಪರಕೀಯರ ಗುಲಾಮತನದ ಬೇಡಿಯಲ್ಲಿರುವದನ್ನು ನಾನು ನೋಡಲಾರೆನು. ಇನ್ನು ಉಳಿಗಾಲದ ದೆಸೆಯಿಂದ ಹಿಂದುಸ್ಥಾನವು ಎರಡನೇ ರಾಜ್ಯದ ಮೋರೆ ನೋಡುವದೂ ಅದರ ಕೃಪಾ ಛತ್ರದಲ್ಲಿರುವದೂ ನನಗೆ ಒಪ್ಪಿಗೆಯಿಲ್ಲ. ಹಿಂದುಸ್ಥಾನವು ಇವೆರಡೂ ಶಾಪಗಳಿಂದ ಪೂರ್ಣ ಮುಕ್ತವಾಗುವದು. ಇಂಥದೊಂದು ರಾಜ್ಯಘಟನೆಯನ್ನು ಗಳಿಸಿ ತರುವದೇ ನನ್ನ ಪ್ರಯತ್ನವಾಗುವದು. ಇದು ನನ್ನ ದೇಶ. ಈ ದೇಶದ ಉನ್ನತಿಗಾಗಿ ನನ್ನ ಪ್ರಯತ್ನದ ಅವಶ್ಯಕತೆಯುಂಟೆಂದು ಹಿಂದುಸ್ಥಾನದ ಪ್ರತಿಯೊಬ್ಬ ಬಡ ಮನುಷ್ಯನಿಗೆ ಸಹ ತಿಳಿಯಬೇಕಾಗುವಂಥ ಸ್ವತಂತ್ರ ಹಿಂದುಸ್ಥಾನ ನಿರ್ಮಾಣವಾಗುವಂಥ ಪ್ರಯತ್ನ ಮಾಡುವೆನು. ಆ ಸ್ವತಂತ್ರ ಹಿಂದುಸ್ಥಾನದಲ್ಲಿ ಬಡವ, ಭಾಗ್ಯವಂತ, ರೈತ, ಜಮೀನದಾರ ಎಂಬ ಭೇದವಿರಲಾರದು. ಈ ಸ್ವತಂತ್ರ ಹಿಂದುಸ್ಥಾನದಲ್ಲಿ ಎಲ್ಲಾ ಜಾತಿಗಳ ಜನರು ಸುಖಸಮಾಧಾನದಿಂದಿರುವದನ್ನು ಕಾಣುವಿರಿ. ಅಸ್ಪೃಶ್ಯತೆಯು ನಿರ್ಮೂಲವಾಗುವದು. ಮದ್ಯಪಾನ ಮತ್ತು ಮಾದಕ ಪದಾರ್ಥಗಳ ವ್ಯಸನ ನಿಶ್ಶೇಷವಾಗಿ ಹದ್ದುಪಾರೇ ಆಗುವದು. ಈ ಸ್ವತಂತ್ರ ಹಿಂದುಸ್ಥಾನದಲ್ಲಿ ಪುರುಷರಿಗಿರುವಷ್ಟೇ ಹಕ್ಕುಗಳು ಸ್ತ್ರೀಯರಿಗೂ ಇರುವವು. ಬೇರೆ ರಾಷ್ಟ್ರಗಳ ಕೂಡ ಪ್ರೀತಿಯಿಂದ ನಡೆಯುವೆವು. ನಮ್ಮ ಹಿತಕ್ಕಾಗಿ ಅನ್ಯ ರಾಷ್ಟ್ರಗಳನ್ನು ತುಳಿಯುವ ಪ್ರಯತ್ನ ಮಾಡುವದಿಲ್ಲ. ನಮ್ಮಂತೆ ಬೇರೆ ರಾಷ್ಟ್ರಗಳಿಗೆ ತರದ ಪ್ರಯತ್ನ ಮಾಡಲಿಕ್ಕೆ ಬಿಡಲಾರದು. ಆಂದ ಬಳಿಕ ಹಿಂದುಸ್ಥಾನದ ಸಂರಕ್ಷಣೆಗಾಗಿ ಸ್ವಲ್ಪ ಸೈನ್ಯವಿಟ್ಟರೆ ಸಾಕಾಗುತ್ತದೆ. ನಮ್ಮಿಂದ ಮೂಕ ಮತ್ತು ಬಡಜನರಿಗೆ ತೊಂದರೆ ಕೊಡಲಾಗಲಾರದು. ಸ್ವದೇಶ ಮತ್ತು ಪರದೇಶದವರ ವಿಚಾರವಾಗಿ ಭಿನ್ನಭಾವವಿಲ್ಲದ ಒಂದೇ ಬಗೆಯ ಲಕ್ಷ್ಯ ಕೊಡುವೆವು. ಸ್ವದೇಶೀ ಮತ್ತು ಪರದೇಶಿ ಎಂಬದಾಗಿ ವಿಂಗಡಿಸುವದು ನನಗೆ ಸಮ್ಮತವಿಲ್ಲ. ಈ ಪ್ರಕಾರ ಹೊಸ ವಿಚಾರಗಳ ಸ್ಫೂರ್ತಿಯುಳ್ಳ ಹಿಂದುಸ್ಥಾನವು ಮೂಡಾಗಲು ನನ್ನ ಕಣ್ಮುಂದೆ ಕಟ್ಟಿರುತ್ತದೆ. ಇಂಥ ರಾಜ್ಯಘಟನೆಯನ್ನು ಸಂಪಾದಿಸುವದಕ್ಕೇ ನಾನು ರೌಂಡ ಟೇಬಲಿಗೆ ಹೋಗುತ್ತೇನೆ. ಮತ್ತು ಇದೇ ಉದ್ದಿಷ್ಟ ಸಾಧನೆಗಾಗಿ ಹೋರಾಡುವೆನು. ಇಂಥ ಸ್ವತಂತ್ರ ಹಿಂದುಸ್ಥಾನವಲ್ಲದೆ, ಇನ್ನಾವದರಿಂದಲೂ ನನ್ನ ಸಮಾಧಾನವಾಗಲಾರದು.

ಏಡನದಲ್ಲಿ ಮಹಾತ್ಮರಿಗೆ ಐದು ಸಾವಿರದ ಕಾಣಿಕೆ

ಹಡಗವು ಏಡನಕ್ಕೆ ಬಂದು, ಅಲ್ಲಿ ಸರಕು ಇಳಿಸಿ, ಏರಿಸಿ, ಪ್ರಯಾಣಿಕರನ್ನು ತಕ್ಕೊಳ್ಳುತ್ತಿರಲು, ಮಹಾತ್ಮರಿಗೆ ಮೇಜವಾನಿ ಮಾಡಬೇಕು ಮತ್ತು ಮಾನಪತ್ರ ಕೊಟ್ಟು, ಅವರ ಗೌರವ ಮಾಡಬೇಕೆಂದು ಅಲ್ಲಿಯ ಹಿಂದೂ, ಮುಸಲಮಾನ, ಪಾರ್ಸಿಗಳು ದೊಡ್ಡ ಸಿದ್ಧತೆ ಮಾಡಿದ್ದರು, ಆದರೆ ಹಡಗವು ೧ ತಾಸು ತಡವಾಗಿ ಹೋದದ್ದರಿಂದ, ಮೇಜವಾನಿಯನ್ನು ರಹಿತಮಾಡಿ, ಬರೇ ಮಾನಪತ್ರ ಕೊಟ್ಟು, ಐದು ಸಾವಿರದ ಥೈಲಿಯನ್ನು ಕಾಣಿಕೆ ಕೊಟ್ಟರು. ಮಹಾತ್ಮರಿಗೆ ಅಲ್ಲಿ ಮೂರೇ ತಾಸು ದೊರೆತಿದ್ದವು. ಅಷ್ಟರಲ್ಲಿ ಅವರು ದೇವಿ ಸರೋಜಿನಿ ಮತ್ತು ಶ್ರೀ. ಮಹಾದೇವ ದೇಸಾಯರೊಂದಿಗೆ ಊರೊಳಗೆ ಹೋಗಿ, ಅನೇಕ ಸ್ಥಳಗಳಲ್ಲಿ ತಾಂಬೂಲ ಸ್ವೀಕಾರಮಾಡಿ, ಮಾನಪತ್ರದ ಸಮಾರಂಭಕ್ಕೆ ಬಂದರು. ಮಾನಪತ್ರದಲ್ಲಿ ಮಹಾತ್ಮರು ಜಗತ್ತಿನಲ್ಲಿ ಹೆಸರಾದ ಧರ್ಮ ಕಾರ್ಯಕರ್ತರಾಗಿದ್ದಾರೆಂದು ಬರೆದಿದ್ದಾರೆ. ಯೋಗ್ಯ ಶಬ್ದಗಳಲ್ಲಿ ಮಹಾತ್ಮರು ಏಡನದ ನಾಗರಿಕರ ಗೌರವಮಾಡಿ, ನಿಮ್ಮಂಥ ಶ್ರೀಮಂತರು ದೇಶಕಾರ್ಯಕ್ಕಾಗಿ ಐದೇ ಸಾವಿರ ರೂಪಾಯಿ ಕೊಟ್ಟದ್ದು ಬಹಳ ಕಡಿಮೆಯಾಯಿತೆಂದು ಸ್ಪಷ್ಟವಾದ ಭಾಷಣ ಮಾಡಿದರು. ಸಮಾರಂಭ ಮುಗಿದ ಬಳಿಕ ಮಹಾತ್ಮರು ಹಡಗವೇರಿದರು.

ಎರಡು ವರ್ಷಗಳ ಹಿಂದೆ ಮಹಾತ್ಮರ ಬಲಗಯ್ಯಿಗೆ ಕೂತ ನಂಜಿನ ಹೊಡೆತದಿಂದ ಯಾವಾಗಾದರೂ ಕೈನೋವಾಗಿ ಅಳಕಿಸುತ್ತದೆ. ಆ ನೋವು ಈಗಾಗಿದ್ದು, ಬರೆಯುವ ಕೆಲಸವನ್ನು ಎಡಗಯ್ಯಿಂದಲೇ ಮಾಡುತ್ತಾರೆ.

ಮಹಾತ್ಮರು ಹುಡುಗರಲ್ಲಿ ಹುಡುಗರಾಗಿ ಎಲ್ಲರಿಗೂ ಪ್ರಿಯರಾಗಿದ್ದಾರೆ.

(೦)

ಮಹಾತ್ಮರ ಕೂಡ ಹಡಗದಲ್ಲಿ ರಾಯುಟರ ಟೇಬಲಿನ ಸುದ್ದಿಗಳನ್ನು ತರಿಸಿ ಹಿಂದುಸ್ಥಾನಕ್ಕೆ ಕಳಿಸುವ ಓರ್ವ ವಾರ್ತಾನಾಯಕನಿರುತ್ತಾನೆ. ಆತನು ಹೇಳುವದೇನಂದರೆ-

ರಾಜಕೀಯ ವಿಚಾರವಾಗಿ ಮತಭೇದವುಳ್ಳವರಾದರೂ ಹಡಗದಲ್ಲಿರುವ ಹುಡುಗರ ಮೇಲೆ ಮಾಡುವ ಪ್ರೀತಿಯಿಂದ ಮಹಾತ್ಮರು ಎಲ್ಲರಿಗೂ ಪ್ರೀಯರಾಗಿದ್ದಾರೆ. ಮಹಾತ್ಮರು ಹುಡುಗರ ಕೂಡ ಆಡುವರು, ಜಿಗದಾಡುವರು. ತಾವು ಸ್ವತಃ ಚಿಕ್ಕಂದಿನಲ್ಲಿ ಆಡುತ್ತಿದ್ದ ಆಟಗಳನ್ನಾಡುವಂಥ ಹುಡುಗತನದಿಂದ ನಡೆಯುವರು. ಅವರ ಗದ್ದ ಹಿಡಿಯುವರು. ಮುದ್ದು ಕೊಡುವರು. ಕಾಗೀ ಗುಬ್ಬಿ ಕಥೆ ಹೇಳುವರು. ಇಷ್ಟು ಕೂಡ ನಡೆಯುವರು. ಬಿರುಗಾಳಿಯಿಂದ ಸಮುದ್ರವು ಅಲ್ಲೋಲಕಲ್ಲೋಲವಾಗಿ, ಹಡಗ ಹೊಯ್ದಾಡುವದರಿಂದ ಎಲ್ಲಾ ಜನರಿಗೆ ಸಮುದ್ರ ಹತ್ತಿತು. ಆದರೆ ಮಹಾತ್ಮರೊಬ್ಬರೇ ಡೆಕ್ಕದ ಬೈಲಿನಲ್ಲಿ ಆರಾಮ ಮಲಗಿಕೊಂಡಿದ್ದರು. ಇವರಿಗೆ ಕಳೆದಾರು ತಿಂಗಳು ಬಹಳ ಶ್ರಮವಾಗಿತ್ತು. [illegible] ಹಡಗದಲ್ಲಿಯ ಗೌರವರು ಹಾಡುವ, ಬಾರಿಸುವರ, ನೃತ್ಯ ಮಾಡುವರು, ಹೊತ್ತು ಹೋಗುವದಕ್ಕಾಗಿ ಅನೇಕ ಸೋಗು ಮಾಡುವರು. ಇವುಗಳ ಗೊಂದಲವು ಇವರ ನಿದ್ರೆಗೆ ವಿಘ್ನ ತಂದಿಲ್ಲ. ಇಷ್ಟು ಗೊಂದಲವಾದರೂ ನಿಮಗೆ ಹೇಗೆ ನಿದ್ರೆ ಹತ್ತುತ್ತದೆಂದು ಪ್ರಶ್ನೆ ಮಾಡಲು- ನಾನು ಅತ್ತ ಕಡೆಗೆ ಲಕ್ಷ್ಯ ಕೊಡುವದೇ ಇಲ್ಲ. ನಿದ್ರಾದೇವಿಯನ್ನೇ ಪ್ರಸನ್ನೀಕರಿಸಿಕೊಳ್ಳುತ್ತೇನೆಂದು ಉತ್ತರ ಕೊಟ್ಟಿರುತ್ತಾರೆ.

ಮಹಾತ್ಮರಿಗೂ ಬೆಕ್ಕಿಗೂ ಸ್ನೇಹ.

ಮಹಾತ್ಮರು ತಮ್ಮ ಕೋಣೆಯಲ್ಲಿ ಒಬ್ಬೊಂಟಿಗರಾಗಿ ಹೊತ್ತು ಹೋಗದವರಾಗುತ್ತಾರೆಂದು ತಿಳಿಯಲೊಲ್ಲದು ಒಂದು ಸಣ್ಣ ಬೆಕ್ಕು ಇವರ ಗೆಳೆತನ ಮಾಡಿದೆ. ಇದು ಅವರ ಕೋಣೆಯಲ್ಲಿರುವದು. ಮಗ್ಗುಲದಲ್ಲಿಯೇ ಮಲಗುವದು. ಆರಾಮ ಖುರ್ಚಿಯ ಮೇಲೆ ಕೂಡ್ರುವದು. ಆಟವಾಡುವದು. ಮಹಾತ್ಮರು ತಮ್ಮ ಸಂಗಡ ತಂದ ಆಡಿನ ಹಾಲನ್ನು ಹಾಕಿ ಇದರ ಪರಾಮರ್ಷೆ ತಕ್ಕೊಳ್ಳುವರು.

ವಿಚಿತ್ರ ಪ್ರವಾಸಿಯು-

ಮ.ಹಾತ್ಮರಂಥ ವಿಚಿತ್ರ ಪ್ರವಾಸಿಯು ಇಂಗ್ಲಂಡಕ್ಕೆ ಹೋದದ್ದನ್ನು ನಾನು ಈ ಮೊದಲು ನೋಡಲಿಲ್ಲ. ಹಡಗದಲ್ಲಿರುವ ಪ್ರಯಾಣಿಕರು ಅವರ ಸಾಮಾನುಗಳನ್ನೇ ನೋಡುತ್ತಿರುವರು. ಇವರು ಆರು ಪಂಜೆ, ಒಂದು ಹೊದಿಕೆ, ಆವು ರಾಟಿ ಥೋತರ, ಯರವಡೆಯ ತುರುಂಗದಲ್ಲಿ ಉಪಯೋಗಿಸುತ್ತಿದ್ದಂಥ ವಸ್ತ್ರಗಳನ್ನು ಸಂಗಡ ತಂದಿದ್ದಾರೆ.

ದಿನಕ್ರಮ-

ಮಹಾತ್ಮರು ಉಷಃಕಾಲದಲ್ಲಿ ೪|| ಗಂಟೆ ಗೇಳುವರು. ಭಗವತ್ಪ್ರಾರ್ಥನೆಯಾದ ಬಳಿಕ, ಲೇಖನ ವಾಚನ ಪತ್ರವ್ಯವಹಾರ ಮಾಡುವರು. ೧೨-೧೦|| ವರಿಯ ಸಮಯದಲ್ಲಿ ಉಪಹಾರ ತಕ್ಕೊಳ್ಳುವರು. ಅನಂತರ ಪಂಡಿತ ಮಾಲವಿಯಾ, ದೇವಿ ಸರೋಜಿನಿ. ಸರ್ ಪಟ್ಟಣಿಯವರೊಂದಿಗೆ ರಾಷ್ಟ್ರೀಯ ವಿಷಯಗಳ್ಳ ಕುರಿತು ಚರ್ಚಿಸುವರು. ಮಹಾತ್ಮರ ಹತ್ತಿರ ಹತ್ತು ಗ್ಯಾಲನ ಹಿಡಿಸ ಹಾಲುಂಟು. ಪಂಡಿತ ಮಾಲವಿಯಾಜಿಯವರು ಸ್ನಾನದ ದೆಸೆಯಿಂದ ಗಂಗೆಯ ಮೃತ್ತಿಕೆಯನ್ನು ಸಂಗಡ ತಂದಿದ್ದಾರೆ.

ಲಂಡನದಲ್ಲಿ ಸ್ವಾಗತ-

ಮ.ಹಾತ್ಮರು ಇಳಿದುಕೊಳ್ಳುವ ಲಿಸ್ಟರ ಹಾಲಿನಲ್ಲಿ ಕುಮಾರಿ ಲೆಸ್ಟರಳು ಮಹಾತ್ಮರ ಸ್ವಾಗತ ಮಾಡುವಳು. ಸ್ವಾಗತಕ್ಕಾಗಿ ಲಾರ್ಡ ಅರ್ವಿನ ಮತ್ತು ಮೆ. ವೆಜ್ಜವುಡ್ಡ ಬೆನ್ನ ಸಾಹೇಬರನ್ನೂ ಕರೆಯುವಳು.

ಮ.ಹಾತ್ಮರ ಮೊದಲನೇ ಸಲಾಮು -

ರಾವುಂಡಟೇಬಲಿನಲ್ಲಿ ಮಂತ್ರಿ ಮ್ಯಾಕಡೋನಾಲ್ಡ ಹಾಗು ಬೇರೆ ಅಧಿಕಾರಸ್ಥ ಕೂಡ ವಾಗ್ಯುದ್ಧ ಮಾಡುವ ವೇಳೆಯಲ್ಲಿ ನನಗಾವ ರೀತಿ ಬುದ್ಧಿ ತೋಚುವದೋ ಅದೇ ರೀತಿಯಿಂದ ನಡೆಯುವೆನು. ಇಂಗ್ಲಂಡಕ್ಕೆ ಹೋದ ಕೂಡಲೆ. ಮೆ. ಮ್ಯಾಕಡೋನಾಲ್ಡ, ಲಾರ್ಡ ರೀಡಿಂಗ, ಲಾರ್ಡಪೀಲ ಮಿ|| ಬಾಲ್ಡವಿನ್ನ ಲಾರ್ಡ ಸಾಂಕಿಯವರನ್ನು ಮೊದಲು ಕಂಡು ಹಿಂದುಸ್ಥಾನದ ವಿಷಯವನ್ನು ಅವರ ಮುಂದಿಡುವೆನು.

ಹಾವು ಹಿಡಿಯುವ ಬಹಾದ್ದೂರ ಮಲಕಪ್ಪನು.

....(೦)....

ಜತ್ತ ಸಂಸ್ಥಾನಕ್ಕೆ ಸೇರಿದ ಮುಚ್ಚಂಡಿ ಎಂಬ ಗ್ರಾಮದಲ್ಲಿ ಮಲಕಪ್ಪನೆಂಬ ೩೦ ವರ್ಷ ವಯದ ಗಾಣಿಗನಿದ್ದಾನೆ. ಈತನು ಬೇಕಾದಂಥ ಹಾಲಾಹಲ ವಿಷವುಳ್ಳ ಹಾವನ್ನು ಹಿಡಿಯುವನು. ಒಂದು ವೇಳೆ ಹಾವು ಕಚ್ಚಿದರೂ, ವಿಷ ಏರುವದಿಲ್ಲ. ಈತನು ಹಾವಿದ್ದ ಸ್ಥಳಕ್ಕೂ ಡಬ್ಬಿಗಳ ಬಿಲ್ಲಿಗೂ ಹೋದರಾಯಿತು. ಹಾವು ತಾನಾಗಿ ಹೊರಗೆ ಬರುವದು. ಅದನ್ನು ಬಸಲಿಂಗಪ್ಪನು ನಿರ್ಭಯದಿಂದ ಹಿಡಿದು ತನ್ನ ಮೈ ಮೇಲಾಡಿಸಿಕೊಳ್ಳುವನು. ಹೋದ ವಾರದಲ್ಲಿ ಒಂದು ನಾಗರಹಾವು ಈತನಿಗೆ ಕಚ್ಚಿತು. ವಿಷವೇರಲಿಲ್ಲ. ಕೂಡಿದ ಜನರು ಸಿಟ್ಟಿನಿಂದ ಅದನ್ನು ಕೊಂದರು. ಇದರ ಪ್ರಾಯಶ್ಚಿತ್ತವೆಂದು ಬಸಲಿಂಗಪ್ಪನು ೨೧ ದಿವಸಗಳ ಉಪವಾಸ ಮಾಡಿದನು.

ಹೆಗ್ಗಣ ಹೊಗಿಸಿ ಮೇಲೆ ಮುತ್ತು ಹಾಕುವಿಕೆ

—(೦)—

ಮುಂಬಯಿಯಲ್ಲಿ ಪರದೇಶಿ ಅರಿವೆಯ ಅಂಗಡಿಗಳ ಮುಂದೆ ಪಿಕೆಟಿಂಗ ಪ್ರಾರಂಭಿಸ್ಸಾರೆ. ಈ ಕೃತ್ಯವು ಪೋರಿನಲ್ಲಿ ಹೆಗ್ಗಣ ಹೊಗಿಸಿ, ಹೋರು ಮುಂಜುವಂತಾಗಿರುತ್ತದೆಂದು ಬೈಲಿಗೆ ಬಂದಿದೆ. ಪಿಕೆಟಿಂಗದಿಂದ ಈ ತರ ವ್ಯಾಪಾರಿಗಳಿಗೇನೂ ಧಕ್ಕೆ ಬಡೆದಿಲ್ಲ. ಅವರ ವ್ಯಾಪಾರವು ಭಾಗಭಂಟಿಯಲ್ಲಿರುವದು. ಇದರ ಹೊರತು ವಿಲಾಯತಿಯ ವ್ಯಾಪಾರವು ಕಡಿಮೆಯಾದರೆ ಜಪಾನದ ಸರಕು ಹೆಚ್ಚಾಗಿ ಬರಲಾರಂಭಿಸಿದೆ. ಜಪಾನವಾಗಲಿ, ಇಂಗ್ಲಂಡವಾಗಲಿ, ಎರಡೂ ಹಿಂದುಸ್ಥಾನ ವಿಚಾರದಿಂದ ಲಂಕೆಯಲ್ಲಿ ಹುಟ್ಟಿದಂತಾಗುತ್ತವೆ. ಜಪಾನದ ಆಮದೂ ಮುಗ್ಗಬೇಕು. ವಿಲಾಯತಿಯದಂತೆಯೆ ಜಪಾನ ಮಾಲವನ್ನೇ ಹಿಡಿಯುವಂತೆ ಪಿಕೆಟಿಂಗ ಮಾಡುವಂತೆ ಮುಂಬಯಿಯಲ್ಲಿ ಕಾಂಗ್ರೆಸ ಕಮೀಟಿಯವರು ಠರಾವು ಮಾಡಿದ್ದಾರೆ. ತೋಕ ವ್ಯಾಪಾರಸ್ಥರ ಬಾಯಿಗೆ ಗದ್ದಿ ಬೀಳುವದೆಂದು ಸೀರಿನ ಬೊಂಗೆ ಬೆಣೆ ಬಡೆದಂತಾಗುತ್ತದೆ. ಇಲ್ಲಿಯ ಕಿಂಬರ- ಪರದೇಶದ ಸಾಮಾನುಗಳು ಮುಂಬಯಿಗೆ ಬಂದರ ಬಿಡಲಾರವು. ಮತ್ತು ದೇಶದಲ್ಲಿ ಅವು ದೃಷ್ಟಿಗೆ ಸಹ ಬೀಳಲಾರವು.

೧೧೦೦೦ ಶಿಕ್ಷಕರ ಸ್ವಾರ್ಥತ್ಯಾಗ

—(೦)—

ಮದ್ರಾಸ ಮ್ಯುನಿಸಿಪಾಲಿಟಿಯ ಅಧೀನಕ್ಕೊಳಪಟ್ಟ ಶಾಲೆಗಳಲ್ಲಿ ೧೧೦೦೦ ಶಿಕ್ಷಕರಿದ್ದಾರೆ. ವೆಚ್ಚ ಉಳಿತಾಯಕ್ಕಾಗಿ ಮ್ಯುನಿಸಿಪಲ ಸ್ಕೂಲ ಬೋರ್ಡಿನವರು ಕೆಲ ಶಿಕ್ಷಕರನ್ನು ಕಡಿಮೆ ಮಾಡಬೇಕೆಂದಿದ್ದಾರೆ. ಹೀಗೆ ಕಡಿಮೆ ಮಾಡಿದರೆ ಅವರಿಗೆ ಜೀವನಾಂಶವೇ ಇಲ್ಲದಂತಾಗುತ್ತದೆ ಕಾರಣ ಇವರನ್ನು ಕಡಿಮೆ ಮಾಡಬೇಡಿರಿ. ನಾವು ಈ ವರ್ಷದ ಬಡತಿಯನ್ನು ಬಿಟ್ಟು ಕೊಡುತ್ತೇವೆಂದು ಶಿಕ್ಷಕರು ಸಭೆಮಾಡಿ, ಬೋರ್ಡಿಗೆ ತಿಳಿಸಿದ್ದಾರೆ. ಇದು ನಿಜವಾದ ಸ್ವಾರ್ಥತ್ಯಾಗವೇ ಸೈ.

ಕೋರ್ಟಿನಲ್ಲಿ ಗೋಗಟೆಯ ಜವಾಬು

....(೦)....

ಪುಣೆಯ ಸೆಶನ್ಸ ಕೋರ್ಟಿನಲ್ಲಿ ಗೋಗಟೆಯ ವಿಚಾರಣೆಯು ಮುಗಿದು, ಆತನ ಜವಾಬು ಕೂಡ ಆಯಿತು. ಆತನು ತನ್ನ ಜವಾಬಿನಲ್ಲಿ "ಗವರ್ನರ ಸಾಹೇಬರ ಮೇಲೆ ನಾನು ಗುಂಡು ಹಾಕಲಿಲ್ಲ. ಮತ್ತೊಬ್ಬ ನನ್ನ ಮನೆತನದ ಮೇಲೆ ಬಹಳ ಉಪಕಾರ ಮಾಡಿದವನು ಗುಂಡು ಹಾಕಿದನು. ಆತನ ಕೈಯೊಳಗಿನ ರಿವ್ಹಾಲ್ವರನ್ನು ನಾನು ಕಸಕೊಂಡೆನು. ನನ್ನ ಮನೆತನಕ್ಕಾದ ಉಪಕಾರದ ದೆಸೆಯಿಂದ ನಾನು ಈ ವರೆಗೆ ಈ ಮಾತು ಮುಚ್ಚಿಟ್ಟಿದ್ದೆನು ಆದರೆ ಆತನ ಉಪಕಾರಗೇಡಿಯಾದ್ದರಿಂದ, ನಿಜಸಂಗತಿಯನ್ನು ಬೈಲಿಗೆ ತಂದಿದ್ದೇನೆ. ನಾನೇನೂ ಸಾಹೇಬರ ಮೇಲೆ ಗುಂಡು ಹಾಕಿದವನಲ್ಲ" ಎಂದು ಹೇಳಿದ್ದಾನೆ.

ಗೋಗಟೆಯು ತುರುಂಗದಿಂದ ತನ್ನ ಅಣ್ಣನಿಗೊಂದು ಪತ್ರ ಬರೆದನು. ತುರುಂಗದ ಅಧಿಕಾರಿಗಳು ಅದನ್ನು ಅಣ್ಣನಿಗೆ ಮುಟ್ಟಿಸದೆ, ಹಿಡಿದಿಟ್ಟು ಕೋರ್ಟಿನಲ್ಲಿ ಹಾಜರಮಾಡಿದ್ದಾರೆ. ಅದರ ಸಾರಾಂಶವು

ಮನುಷ್ಯನ ಜೀವಿತವು ಸಾರ್ಥಕವಾಗುವಂಥ ಕಾಲವೇ ನಿಜವಾದ ಕಾಲವು. ಸ್ವದೇಶಪ್ರೇಮಕ್ಕಾಗಿ ವ್ಯಕ್ತಿಪ್ರೇಮದ ಬಲಿಯನ್ನೂ ಕೊಡಬೇಕಾಗುತ್ತದೆ. ಪ್ರತಿಯೊಂದು ಪರಮಾತ್ಮನ ಪ್ರೇರಣೆಯಿಂದಲೇ ನಡೆಯುತ್ತದೆ. ಮನುಷ್ಯನ ಜೀವನವು ಕ್ಷಣಭಂಗುರವಾದದ್ದು, ಮತ್ತು ಅದರ ಮೇಲಿನ ಆಸಕ್ತಿಯಾದರೂ ಕ್ಷಣಭಂಗುರವಾದದ್ದು. ಅಂದಬಳಿಕ ಈ ದೇಹವನ್ನು ಶ್ರೀರಾಮನ ಪಾದಾರವಿಂದದಲ್ಲಿ ಅರ್ಪಣಮಾಡಿ, ದೇಹ ಸಾರ್ಥಕವನ್ನೇಕೆ ಮಾಡಿಕೊಳ್ಳಬಾರದು? ನಾನು ಮಾಡಿದ ಉಜ್ವಲವಾದ ತ್ಯಾಗದ ವಿಕಾಸವನ್ನು ನಿರ್ಣಯಿಸುವದನ್ನು ಭಾವೀ ಇತಿಹಾಸದ ಕಡೆಗೆ ಬಿಟ್ಟು ಕೊಡಬೇಕು. ಸ್ವದೇಶಕ್ಕಾಗಿ ನಿಮ್ಮ ಕುಟುಂಬದ ಒಬ್ಬನಾದರೂ ಆಹುತಿ ಕೊಟ್ಟನೆಂಬದನ್ನು ತಿಳಿದು ಸಮಾಧಾನ ಪಡಿರಿ. ನಾನು ತುರುಂಗದಲ್ಲಿ ಆನಂದಿದ್ದೇನೆ

ಈ ಪತ್ರವನ್ನು ಪುರಾವೆಗಾಗಿ ಹಿಡಿಯಬಾರದೆಂದು ಗೋಗಟೆಯ ವಕೀಲರು ವಾದಿಸಿದರು. ಸರಕಾರೀ ವಕೀಲರು ಹಿಡಿಯುವದಕ್ಕೆ ಬರುತ್ತದೆಂದು ಉತ್ತರ ಕೊಟ್ಟರು. ಜಡ್ಜರು ಪುರಾವೆಗಾಗಿ ತಕ್ಕೊಂಡರು.

ಕಾಲೇಜ ಹಾಯಸ್ಕೂಲು ಬಂದು ಮಾಡಿರಿ.

....(೦)....

ಪುನಃ ಕುಲಕರ್ಣಿಗಳನ್ನು ನೇಮಿಸಿರಿ.

— (೦) —

ವೆಚ್ಚ ಉಳಿತಾಯಕ್ಕಾಗಿ ಪುಣೆಯ ಡೆಕ್ಕನ ಕಾಲೇಜ ಮತ್ತು ಹಾಯಸ್ಕೂಲುಗಳನ್ನು ಬಂದು ಮಾಡಿ, ಖಾಸಗಿ ಕಾಲೇಜ ಶಾಲೆಗಳಿಗೆ ಗ್ರಾಂಟ ಕೊಡಿರಿ. ಮತ್ತು ತಲಾಟಿಗಳ ಬದಲು ವತನದಾರ ಕುಲಕರ್ಣಿಗಳನ್ನು ನೇಮಿಸಿರಿ. ಅಂದರೆ ಸರಕಾರಕ್ಕೆ ೫೦ ಲಕ್ಷದ ಉಳಿತಾಯವಾಗುದೆಂದು ಅಸೆಂಬ್ಲಿಯ ಮೆಂಬರರಾದ ಶ್ರೀ. ಗುಂಡಾಳರು ಮುಂಬಯಿ ಸರಕಾರಕ್ಕೆ ಸೂಚನೆ ಮಾಡಿದ್ದಾರೆ.

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ ಶಿದ್ಧಾಪದೂತ ಅಸಂಜಿ, ಶ್ರೀ ಆರೂಢಸ್ವಾಮಿಗಳ ಕೃತಿಯತ್ತು ಮುಖ್ಯ ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕ ಜನರ ಅಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ಕುಸುಪೆನಿಸುವವು. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಖರಿಸುವವರಿಗೆ ಒಂದು ಪ್ರತಿ ...ಟ್ಟಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚು ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಅರ್ಧಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

ನೋಟೀಸು

ನಾಗಿ ಕೋಂ ಶಿವಪ್ಪಾ ಸುಣಗಾರ ಸಾ॥ ಹುಲ್ಲಂಬಿ ಮಜರೆ ಹೊಸೂರ ಯಿವಳಿಗೆ -

ಕೆಳಗೆ ಸಹಿ ಮಾಡಿದ ನಾನು ನಿನಗೆ ಈ ನೋಟೀಸಿನ ದ್ವಾರ ತಿಳಿಸುವದೇನಂದರೆ ನೀನು ನನ್ನ ಲಗ್ನದ ಹೆಂಡತಿ ಯಿದ್ದು ನಿನ್ನ ಕೂಡ ಲಗ್ನವಾಗಿ ೧೪-೧೫ ವರ್ಷಗಳಾದವು ಕೆಲವು ವರ್ಷ ಯೋಗ್ಯ ರೀತಿ ಬಾಳ್ವೆ ಮಾಡಿ ಯಿ ಕಡೆಗೆ ಅಂದರೆ ಅಜಮಾಸ (೨) ವರ್ಷಗಳ ಕೆಳಗೆ ನನ್ನ ನಿನ್ನ ಬೇಟವಾಟ ಆಗಿ ನನ್ನ ಮನಿ ಬಿಟ್ಟು ಹೋಗಿದ್ದ ಬಗ್ಗೆ ನಿನಗೆ ಈ ಮೊದಲು ನೋಟೀಸು ಕೊಡೋಣಾಗಿತ್ತು ಅದಕ್ಕೆ ಯಿತರ ದುಷ್ಟ ಜನರ ಚಿತಾವಣಿಯಿಂದ ನೀನು ನೋಟೀಸು ಕೊಟ್ಟದ್ದು ಆಜೇಬಾತ ಸುಳ್ಳು ಯಿರುತ್ತಿತ್ತು ಬುದ್ಧಿವಂತರ ವಿದ್ಯಮಾನ ಪುನಃ ನಿನ್ನನ್ನು ಬಾಳ್ವೆಗೆ ಹಚ್ಚಿದರು ಕೆಲವು ದಿವಸ ಚಲೋ ರೀತಿ ಬಾಳ್ವೆ ಮಾಡಿ ನನಗೆ ಒಂದು ಕೂಸು ಹಡೆದ ನಂತರ ಯಿವತ್ತಿಗೆ ಅಜಮಾಸ ೩-೪ ತಿಂಗಳ ಕೆಳಗೆ ನನಗೆ ಆಗದ ಜನರ ಮಾತು ಕೇಳಿಕೊಂಡು ನನಗೆ ಯೇನೂ ತಿಳಿಸದೆ ನಾನು ಯಿಲ್ಲದ ವೇಳೆಯಲ್ಲಿ ಹುಲ್ಲಂಬಿಗೆ ನಿನ್ನ ತವರ ಮನೆಗೆ ಹೊಂಟು ಹೋದಂತೆ ತಿಳಿದು ನೀನು ಹೇಳದೆ ಹೋದ ಬಗ್ಗೆ ಮತ್ತು ಲಗ್ನದ ವೇಳೆಯಲ್ಲಿ ಇಟ್ಟ ದಾಗೀನೆಗಳು ಅಂದರೆ ಹಿಂದೆ ನೋಟೀಸನಲ್ಲಿ ಕೊಟ್ಟಪ್ರಕಾರ ಮತ್ತು ಯಿ ಕಡೆಗೆ ಮಾಡಿಸಿದ ದಾಗೀನೆಗಳು ಒಟ್ಟು ಅಂದರೆ ೧ ಜೋಡು ಭಂಗಾರದ ಬಳಿ ತೊಲಿ ೫ ಕಿಮ್ಮತ ರೂಪಾಯಿ ೧೦೦ ೨ ತೋಳಬಂದಿ ಕಿ ರೂ ೨೪ ೨ ಕರ್ನಪೂಲು ಕಿ ರೂ ೩ ೧ ಗುಂಡಿನ ಟೀಕಿ ಭಂಗಾರದ್ದು ತೊಲಿ ೨ ಕಿ ರೂ ೪೮ ಸರದಾಳಿ ಭಂಗಾರದ್ದು ಪದಕದ್ದು ತೊಲಿ ೧॥ ಕಿ ರೂ ೩೨ ಹೊಸಾ ಸೀರಿಗಳು ೨ ಕಿ ರೂ ೩೦ ಅಂತು ೨೩೭ ರೂಪಾಯಿಯ ದಾಗೀನೆಗಳನ್ನು ತಗೊಂಡು ಹೋದ ಬಗ್ಗೆ ನನಗೆ ಸಂಶಯ ಬಂದು ಶೋಧ ಮಾಡಲು ನೀನು ನಿನ್ನ ತಾಯಿಯ ಬಳಿಯಲ್ಲಿ ಇದ್ದದ್ದು ನೋಡಿ ನಿನ್ನನ್ನು ಸದರ ದಾಗೀನೆ ಸಹಿತ ಕಳಿಸಿ ಕೊಡಲಿಕ್ಕೆ ಕೇಳಿದರೆ - ನಿನ್ನ ಮನೆಯವರು ನನಗೆ ಅವಮಾನದ ಮಾತುಗಳಾಡಿದರು ಅದರೂ ಕೂಡಾ ಸಹಿಸಿಕೊಂಡು ನಿನ್ನನ್ನು ಕೇಳಿದರೆ - ಹಿರಿಯರ ಪರವಾನಿಗೆ ಯಿಲ್ಲದೆ ಬರುವದಿಲ್ಲ ಅಂದಿ ಇದರ ಮೇಲಿಂದ ನಿನ್ನ ವ ನಿಮ್ಮ ಹಿರಿಯರ ಮನಸಿನಲ್ಲಿ ನನ್ನ ದಾಗೀನೆ ಅಪಹಾರ ಮಾಡಬೇಕು ನಿನ್ನನ್ನು ಎರಡನೇಯವರಿಗೆ ವುಡಿಕೆ ಮಾಡಿ ಕೊಡಬೇಕು ಈ ಇರಾದೆಯಿದ್ದಂತೆ ಈಗ ನೀನು ಕೊಟ್ಟ ನೋಟೀಸಿನ ಮೇಲಿಂದ ತಿಳಿದು ಬಂತು ಆದ್ದರಿಂದ ಈ ನೋಟೀಸು ಕೊಡುವ ಭಾಗ ಬಿತ್ತು ಈ ನೋಟಿಸು ನಿಮ್ಮ ದೆಸೆಯಿಂದ ಹಾಗು ನನ್ನ ಹೆಂಡತಿ ದೆಸೆಯಿಂದಲೂ ಇರುತ್ತದೆ ಈ ನೋಟೀಸು ಮುಟ್ಟಿದ ೧೫ ದಿವಸಗಳಲ್ಲಿ ನದರಿಯವಳನ್ನು ಮೇಲೆ ಕಾಣಿಸಿದ ದಾಗೀನೆ ಸಹಿತ ನನ್ನ ತಾಬಾ ಮಾಡದೆ ಇದ್ದರೆ ನಿಮ್ಮ ಮೇಲೆ ವ ನನ್ನ ಹೆಂಡತಿ ಮೇಲೆ ವ ಯಾರನು ವುಡಿಕೆ ಮಾಡಿಕೊಳ್ಳುತ್ತಾನೋ ಅವನ ಮೇಲೆ ಕ್ರಿ ಪ್ರೊ ಕೋ ೪ ಪ್ರಕಾರ ಫಿರ್ಯಾದಿ ಮಾಡುವದಲ್ಲದೆ ದಾಗೀನೆಗಳ ಸಂಬಂಧಿ ಮತ್ತು ಲಗ್ನದ ಖರ್ಚು ೧೫೦ ರೂಪಾಯಿ ಸಮ್ಮಂಧಿ ದಿವಾಣಿಯಲ್ಲಿ ದಾವಾ ಮಾಡಲಾಗುವದು ಅಲ್ಲಿಯ ವರೆಗೆ ಕಳಿಸಬಾರದು ಈ ನೋಟೀಸಿನ ಖರ್ಚು ನಿಮ್ಮ ತಲೆಯ ಮೇಲಿರುತ್ತದೆ ತಿಳಿಯೋದು ತಾರೀಖು ೭-೯-೩೧

ಈ ಎ ಹೆ ಗುರ್ತು ಶಿವಪ್ಪಾ ಭೀಮಪ್ಪಾ ಸುಣಗಾರ ಸಾ॥ ಹುಲ್ಲಂಬಿ ಮಜರೆ ಹೊಸೂರ ಈತನ ಸ್ವಾಮು ಅದೆ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅದು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾದ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443.

ವಿಜಯ

ಸಂಪಾದಕರು— ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨| ಧಾರವಾಡ ಬುಧವಾರ ತಾರೀಖು ೯ನೇ ಸಪ್ಟೆಂಬರ ೧೯೩೧ |ಸಂಚಿಕೆ ೨೦೪

The Asian Life Assurnance Co. Ltd Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗ ಬೇಡಿರಿ. ಈ ಕಂಪನಿಯು

ವಿಮೆಯು ರಕಮು ರೂ. ೧,೨೫,೦೦೦,೦೦ ಕಂಶದ ಉತ್ಪನ್ನ ರೂ. ೭೦೦,೦೦೦

ವಿಮೆಯು ಹಣ ತಿರಿಗಿ ಕೊಟ್ಟದ್ದು ೧೦,೦೪,೦೦೦

ಜಂದಿಗಿ ೨೪,೦೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕೆ. ವ್ಹಿ. ಹುಲಸೋಗಿ, ಬಿ. ಎ.

ಕುಲಕರ್ಣಿ. ಧಾರವಾಡದ ಏಜಂಟರು ಕರ್ನಾಟಕದ ಬ್ರಾಂಚ ಮ್ಯಾನೇಜರ

ಬಿ. ಎಚ್. ಪಾಟೀಲ ಹುಬಳಿಯ ಏಜಂಟರು—

ಹಾವೇರಿಯ ಚೀಫ ಏಜಂಟರು. ಶ್ರೀ. ಎಸ್. ಎಮ್. ದೊಡ್ಡವಾಡ ಮತ್ತು

ಶ್ರೀ. ಬಿ. ಟಿ. ತಿರೋಳಕರ.

ಅನುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು

ಸೌಖ್ಯದಿಂದರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೭೫ ರೂ. ಗಳನ್ನ ಕೊಡುವಂಥ **ಗೋಲ್ಡನ್** (ಸುವರ್ಣ) **ಪಾಲಿಸಿಯನ್ನು** ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂಥಹ ಪಾಲಿಸಿಗಳನ್ನು ಕೊಡುವ ಕಂಪನಿಯೆಂದರೆ ಏಶಿಯನ್ನ ಕಂಪನಿಯೊಂದೇ ಆಗಿರುತ್ತದೆ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ್ಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸಹಕಾರ.

ಜಂದಿಗೆಯು ಎಂಟು ಲಕ್ಷದಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವ ರಿಂದ ತಿಳಕೊಳ್ಳಬೇಕು.

ಮ್ಯಾನೆಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೦-೦
೬ ,,	೭-೦-೦
೩ ,,	೪-೦-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿ ಕೊಳ್ಳಿರಿ.

ವಿಜಯ.

ತಾರೀಖು ೯-೯-೧೯೩೧ನೇ ಇಸ್ವಿ

ಕಾನ್ಸರವೇಟಿವ್ಹರ ಮಂತ್ರಿಗಳಿಗೆ ಬಂದ ಪೀಕಲಾಟ

ಮಿ. ಮ್ಯಾಕಡೋನಾಲ್ಡ ಸಾಹೇಬರು ಇಂಗ್ಲಂಡದ ದಿವಾಳಿಯನ್ನು ತಪ್ಪಿಸುವದಕ್ಕಾಗಿ ಕಾನ್ಸರವೇಟಿವ್ಹ ಮತ್ತು ಲಿಬರಲ ಮುಖಂಡರನ್ನು ತಮ್ಮ ...ಸಲತ್ತಿನಲ್ಲಿ ತಕ್ಕೊಂಡು, ಮಿತ್ರ ಅಥವಾ ಸಹ...ರದ ಸಚಿವ ಸಂಘ ನಿರ್ಮಾಣ ಮಾಡಿದ್ದ ಉಬ್ಬ...ಗ ಪೂರಾ ಕಡಿಮೆಯಾಯಿತು. ಪ್ರತಿಯೊಂದು ...ಪಕ್ಷದವರು ತಂತಮ್ಮ ಹಂಚಿಕೆಯಾಗಿ ಮುಂದಿನ ಆಗು ಹೋಗುವಿನ ವಿಚಾರ ನಡಿಸಿದ್ದಾರೆ. ರಾವುಂಡ ಟೇಬಲಿನಲ್ಲಿ ಬರೇ ಕಾನ್ಸರವೇಟಿವ್ಹರ ಪ್ರಶ್ನೆ ಬೆಳೆದ...ರೆ ಹಿಂದುಸ್ಥಾನ ವಿಷಯಕವಾಗಿ ತಮ್ಮ ಅಂಗೀಕೃತ ಕರ್ತವ್ಯ ಮುಗಿಯುವದಿಲ್ಲವಾದ್ದರಿಂದ, ಕೂಲಿಕಾರ ಬಣದವರಾದ ಮಿ. ಹೆಂಡರಸನ್ನ, ವೆಜ್ವುಡ್ಡ ಬೆನ್ನ ಮತ್ತು ಮಿ|| ಲೀಜ ಸ್ಮಿತಸಾಹೇಬರು ರಾವುಂಡ ಟೇಬಲಿಗೆ ಹೋಗಬೇಕೆಂದು ಗೊತ್ತುಮಾಡಿದ್ದಾರೆ. ಇವರು ಈಗ ಸರಬಚ್ಚಿದ ಹಾವಿನಂತಾಗಿರುವದರಿಂದ, ರಾಜ್ಯಕರ್ತರೆಂದು ಹೊಟ್ಟೆಯೊಳಗೆ ಇಟ್ಟುಕೊಳ್ಳಬೇಕಾಗಿದ್ದ ಮಾತುಗಳನ್ನು ಬಿಚ್ಚಿ ಆಡುವದಕ್ಕೆ ಇವರಿಗೆ ಅನಿರ್ಬಂಧವಾಗಿರುತ್ತದೆ.

ರಾವುಂಡಟೇಬಲಿನಲ್ಲಿ ಮುಂದಾಗುವ ಧರಿಮೆಚ್ಚಿಕ್ರಿಯನ್ನು ಊಹಿಸಿ, ಕಾನ್ಸರವೇಟಿವ್ಹ ಪಕ್ಷದವರು ಮಿ. ಮ್ಯಾಕಡೊನಾಲ್ಡ ಸಾಹೇಬರ ಮಂತ್ರಿ ಮಂಡಲದಿಂದ ಮೆಲ್ಲಗೆ ಜಾರಿಕೊಳ್ಳಬೇಕೆಂದಿದ್ದಾರೆ. ಮುಖ್ಯವಾಗಿ ತಮ್ಮ ಮುಖಂಡರಾದ ಮಿ. ಬಾಲ್ಡವಿನ್ನ ಸಾಹೇಬರಲ್ಲಿ ಇವರ ನಂಬಿಗೆ ಇಲ್ಲ. ಅಪ್ಪಾ- ಸಾಹೇಬರೇ ನೀವು ಕಡಿದಷ್ಟು ಸಾಕು ಕೊಳ್ಳಿರಿ. ಇಂಗ್ಲಂಡದ ಆರ್ಥಿಕ ಪರಿಸ್ಥಿತಿಯು ವಿಚಾರವಾಗಿ ಅದು ಮೆಟ್ಟಿಗೆ ಕೂತಿತೆಂದರೆ - ನೀವು ಮಿ. ಮ್ಯಾಕಡೋನಾಲ್ಡ ಸಾಹೇಬರಿಗೆ ಕೈಜಾ ಹೊಡೆಯಿರಿ. ನಾವು ನಿಮ್ಮನ್ನೊಂದು ಬೆದರು ಮಾಡಿ ಕೂಡಿಸಿದ್ದು ನಿಮಗೆ ಗೊತ್ತುಂಟು. ನೀವು ಅಧಿಕಪ್ರಸಂಗತನ ಮಾಡಿ. ಹೆಚ್ಚು ವೇಳೆ ಉ...

...ಮಾಡಿ ಬಿಡುವೆವೆಂದು ಭಯ ಹಾಕಿದ್ದಾರೆ, ಮಿ. ಬಾಲ್ಡವಿನ್ನ ಸಾಹೇಬರಿಗೆ ಬಂದ ಈ ಪೀಕಲಾಟವು ಇಂಗ್ಲಂಡದ ರಾಜಕಾರಣದಲ್ಲಿ ಗೊಂದಲವನ್ನೆಬ್ಬಿಸಿರುತ್ತದೆ.

ಈಗಿನ ಮಂತ್ರಿ ಮಂಡಲದಲ್ಲಿ ೩೧ ಜನರು ಕಾನ್ಸರವೇಟಿವ್ಹರಾಗಿದ್ದಾರೆ. ಕೂಲಿಕಾರರೂ ಲಿಬರಲ್ಲರೂ ಸೇರಿ ಇವರ ಅರ್ಧದಷ್ಟು ಇದ್ದಾರೆ ಆದರೂ ಕಾನ್ಸರವೇಟಿವ್ಹರಿಗೆ ಮಿ. ಮ್ಯಾಕಡೋನಾಲ್ಡ ಸಾಹೇಬರ ಪ್ರಭುತ್ವ ಬೇಕಾಗಿಲ್ಲ ಸಹನವಿಲ್ಲ. ಆದ್ದರಿಂದ ಆದಾಯ ವೆಚ್ಚ ಪತ್ರಿಕೆಯು ಲೆಕ್ಕ ಮುಗಿದ ಕೂಡಲೆ- ಪಾರ್ಲಮೆಂಟದ ಹೊಸ ಚುನಾವಣೆಯಾಗಲಿ; ಆಗ ನಿಜವಾದ ರಾಜ್ಯಕರ್ತರಾರೆಂಬದು ಕ ಸ್ಪಷ್ಟವಾಗಿ ತಿಳಿದು ಹೋಗಲೆಂದು ಕಾನ್ಸರವೇಟಿವ್ಹ ಪತ್ರಗಳು ಗರ್ಜಿಸಿವೆ. ಈ ಪತ್ರಗಳ ಸೂಚನೆಗೆ ಈ ಪಕ್ಷದ ಪ್ರಬಲ ಮೆಂಬರರ ಬೆಂಬಲವಿರುತ್ತದೆಂಬದನ್ನು ಮರೆಯಲಾಗದು. ಈ ಸೂಚನೆಯ ಮೇರೆಗೆ ಚುನಾವಣೆಯಾಗುವದಾದರೆ- ಹಿಂದುಸ್ಥಾನದ ರಾವುಂಡಟೇಬಲವು ಹೊಸ ದರಬಾರವಾಗುವತನಕ ಉಪಸ್ಥಾರನ ತಿಗಟಿಯ ಗುಂಡಿನಂತೆ ಅಂತರಾಳದಲ್ಲಿಯೇ ನಿಲ್ಲುವದು.

ಸರ್ವಾನುಮತದಿಂದ ಮಹಾತ್ಮರ ಸ್ವಾಗತದ ಸಿದ್ಧತೆ

....(೦)....

ಮಹಾತ್ಮರ ಸ್ವಾಗತವನ್ನು ಎಲ್ಲ ಪಕ್ಷದವರೂ ಸೇರಿ, ಸರ್ವಾನುಮತದಿಂದ ಮಾಡಬೇಕೆಂದು ಬಹುತೇಕವಾಗಿ ಗೊತ್ತಾಗಿದೆ. ಮಹಾತ್ಮರು ಮೊರ್ಸಿಲಸ ಬಂದರದಲ್ಲಿಳಿದು, ಖಾಲೀಸ ಮಾರ್ಗವಾಗಿ ಲಂಡನಕ್ಕೆ ಬರಬಾರದು. ಜಿಬ್ರಾಲ್ಟರ ಮಾರ್ಗವಾಗಿ ಪೋರ್ತುಗಾಲ ಸುತ್ತಿ ಇಂಗ್ಲಂಡಕ್ಕೆ ಬರಬೇಕೆಂದು ಕೆಲವರು ಸೂಚನೆ ಮಾಡಿದ್ದು, ಈ ಸೂಚನೆಯ ಮೇರೆಗೆ ಮಹಾತ್ಮರು ನಡೆಯುವದಾದರೆ- ರಾವುಂಡ ಟೇಬಲಿನ ವಿಚಾರಣೆಯು ಮುಂದೆ ಬೀಳುವದೆಂದು ಅನ್ನುತ್ತಾರೆ.

ಮಹಾತ್ಮರು ಮಾರ್ಸಿಲಸದಲ್ಲಿಳಿದ ಕೂಡಲೆ ಹಡಗಹತ್ತಬೇಕಾದರೆ ಒಂದು ಅಡಚಣೆಯುಂಟಾಗುತ್ತದೆ. ಪ್ರಯಾಣಿಕರಿಗಾಗಿ ಹೊರಡುವ ಸ್ಪೇಶಲ ಟ್ರೇನಿನಲ್ಲಿ ಬರೇ ಫರ್ಸ್ಟಕ್ಲಾಸದ ಡಬ್ಬಿಗಳಿರುತ್ತವೆ. ಮಹಾತ್ಮರಂತೂ ಈ ವರ್ಗದಲ್ಲಿ ಪ್ರಯಾಣ ಮಾಡುವದಿಲ್ಲ. ಆದ್ದರಿಂದ ಇವರಿಗಾಗಿ ಸೆಕೆಂಡಕ್ಲಾಸ ಡಬ್ಬಿಯನ್ನು ಹಚ್ಚಬೇಕೆಂದು ಇಂಗ್ಲಿಷ ಸರಕಾರದವರು ಫ್ರೆಂಚ ಸರಕಾರಕ್ಕೆ ಬರೆದಿರುತ್ತಾರೆ.

ಡಾವಿಗುಂಟ ಮಹಾತ್ಮರನ್ನು ಕಾಣಲು ಸಾ... ...ತೂ ಸಹಜವೇ. ಲಂಡನದಲ್ಲಿ ಲಕ್ಷೋಪಲಕ್ಷ ಜನರು ಸೇರುವರು. ಇಷ್ಟು ಗದ್ದಲದಲ್ಲಿ ಇವರ ಸ್ವಾಗತ ಮಾಡುವದು ಬಹಳ ಗೊಂದಲವಾಗುವದರಿಂದ, ಹಿಂದಿನ ಸ್ಟೇಶನದಲ್ಲಿಯೇ ಇವರನ್ನಿಳಿಸಿಕೊಳ್ಳಬೇಕೆಂಬ ವಿಚಾರ ನಡೆದಿದೆ.

ಮಹಾತ್ಮರ ಅಮೂಲ್ಯದ ಸಮಯವನ್ನು ವ್ಯರ್ಥ ಕಳೆಯಬೇಡಿರಿ.

—(೦)—

ಬ್ರಾಹ್ಮಣೇತರ ಮುಖಂಡರಾದ ಸರ ಪಾತ್ರೋಸಾಹೇಬರು ಲಂಡನದಲ್ಲಿ ಯಾರ್ಕಶಾಯರ ಪೋಸ್ಟ ಎಂಬ ಪತ್ರದ ಪ್ರತಿನಿಧಿಯ ಮುಂದೆ ಹೇಳಿದ್ದೇನಂದರೆ -

ಮಹಾತ್ಮರು ನಿಮ್ಮ ದೇಶಕ್ಕೆ ಬರುವದರ ಮಹತ್ವವನ್ನು ನೀವು ಇಂಗ್ಲಿಷಜನರು ಚೆನ್ನಾಗಿ ತಿಳಿಯಿರಿ, ಮಿ. ಚರ್ಚಿಲ್ಲ ಸಾಹೇಬರ ಅವಿವೇಕ ವಿಚಾರಗಳ ಅತ್ತ ದಾರಿಯನ್ನು ಬಿಡಿರಿ. ಮಹಾತ್ಮರು ರಾವುಂಡಟೇಬಲಿನಲ್ಲಿ ವಿಘ್ನವನ್ನುಂಟುಮಾಡಲಿಕ್ಕೆ ಬರುವದಿಲ್ಲ. ಹಿಂದುಸ್ಥಾನದಲ್ಲಿ ರಾಷ್ಟ್ರೀಯತ್ವದ ಗುಮ್ಮಟ ಕಟ್ಟಲಿಕ್ಕೆ ಬರುತ್ತಾರೆ. ಹಿಂದುಸ್ಥಾನದಂಥ ದೊಡ್ಡ ದೇಶದಲ್ಲಿ ಜಾತಿ ಭೇದವೂ, ಮತಭೇದವೂ ಇರುವದು ಸಹಜ. ರಾಷ್ಟ್ರೀಯತ್ವ ಬೆಳೆದಂತೆ ರಾಜಕಾರಣದಲ್ಲಿ ಇವು ತಾವಾಗಿ ಕಡಿಮೆಯಾಗುತ್ತಾ ಹೋಗುವವು. ಇಂಗ್ರೇಜಿ ಮುತ್ಸದ್ದಿಗಳು ವಚನ ಕೊಟ್ಟದ್ದನ್ನು ಪೂರೈಸುವದಕ್ಕೆ ಮತ್ತು ವಚನದ ಪ್ರಕಾರ ನಡೆಯುತ್ತೇವೆಂಬದಕ್ಕೆ ಇದೊಂದು ಕಾಲವಾಗಿರುತ್ತದೆ. ರಾವುಂಡಟೇಬಲ ಮುರಿದರೆ- ಕಾಯದೆಭಂಗವು ಮುಂಚಿನಷ್ಟು ಉಗ್ರವಾಗಲಿಕ್ಕಿಲ್ಲ. ಆದರೆ ಬಹಿಷ್ಕಾರದ ಬಿಗುವು ಹೆಚ್ಚಾಗುತ್ತದೆಂಬದನ್ನು ಧ್ಯಾನದಲ್ಲಿಡಿರಿ.

ರಾವುಂಡಟೇಬಲಿನ ಉಳಿದ ಪ್ರತಿನಿಧಿಗಳ ಪ್ರಯಾಣ

—(೦)—

ಹೋದ ಶನಿವಾರ ದಿವಸ ರಾವುಂಡಟೇಬಲಿನ ಉಳಿದ ಪ್ರತಿನಿಧಿಗಳು, ಸಂಸ್ಥಾನಗಳ ದಿವಾನರು, ಮತ್ತು ಸಂಸ್ಥಾನಿಕರು ವಿಲಾಯತಿಗೆ ಪ್ರಯಾಣ ಮಾಡಿದರು. ಎಲ್ಲರೂ ಸ್ವರಾಜ್ಯದ ಆಶೆ ತೋರಿಸಿದರು. ಆದರೆ ಸರಕಾರದವರು ಕರ್ತಕ ಮತಿಯಿಂದ ಪ್ರತಿನಿಧಿಗಳನ್ನು ಆರಿಸಿದ್ದರಿಂದ, ಆರಿಸಲ್ಪಟ್ಟ ಪ್ರತಿನಿಧಿಯು ಆಮಂತ್ರಣ ಅಂಗೀಕರಿಸದಿದ್ದರೂ ಬಹು ಜನ ಪುಂಬರರಿಗೆ ವಿಷಾದವನ್ನುಂಟು ಮಾಡಿದೆ ಇಂಗ್ಲಿಷ ಜನರು ತಾವು ಅಂಗಡಿಕಾರರೆಂದು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಅಂಗಡಿಕಾರ...

ರೀ ಅಂಗಡಿಕಾರರನ್ನು ಬಹುಮಾನಿಸಬಿದ್ದರೆ-ವ್ಯವಸಾಯ ಒಂಧುತ್ವದ ಅಭಿಮಾನವೇನುಳಿಯುತು? ಆಯು ಗಾರರಿಗೆ ಆಯುಗಾರರು ಸೇರುವದಿಲ್ಲೆಂದು ಹೇಳಬೇಳೆ? ಇಂಗ್ರೇಜಿ ಜನರು ಈ ಪ್ರಕಾರ ನಡೆಯುವದಾದರೆ- ಮುಂದೆ ಅಲ್ಪಸ್ವಲ್ಪಾಗಿ ಈ ದೇಶದಲ್ಲಿ ನಡೆಸಬೇಕಾದ ತಮ್ಮ ವ್ಯಾಪಾರವನ್ನು ತಾವೇ ಕಳಕೊಳ್ಳುವಂತಾಗುತ್ತದೆ.

ಇಜಿಪ್ತದಲ್ಲಿ ಮಹಾತ್ಮರ ಆಗಮನ

ಮಹಾತ್ಮರ ಹಡಗವು ಸುರಕ್ಷಿತವಾಗಿ ಇಜಿಪ್ತಕ್ಕೆ ಬಂತು. ಅರಬ ಮತ್ತು ಐಗುಪ್ತರು ಇವರ ಸ್ವಾಗತ ಮಾಡಿದರು. ಇಜಿಪ್ತಕ್ಕೆ ಸ್ವಾತಂತ್ರ್ಯ ತರಲೋಸುಗ ಹೋರಾಡಿದ ಝುಗಲುಲ ಪಾಶ್ಚಾನ ಹೆಂಡತಿ ಮತ್ತು ಈಗಿನ ಸ್ವತಂತ್ರ ಪಕ್ಷದ ಮುಖಂಡರಾದ ಪಾಹಸ ಪಾಶ್ಚಾನವರು ಮಹಾತ್ಮರಿಗೆ ನಿಮ್ಮ ಯಾತ್ರೆಯು ಫಲಪ್ರದವಾಗಲೆಂಬ ಸಂದೇಶ ಕಳಿಸಿದ್ದಾರೆ ಹಡಗವು ತಡವಾಗಿ ಹೋದ್ದರಿಂದ, ಮಹಾತ್ಮರಿಗೆ ಪಿರಾಮಿಡ್ ಮೊದಲಾದ ದೃಶ್ಯಸ್ಥಳಗಳನ್ನು ನೋಡುವದಕ್ಕೆ ಹೋಗುವದಾಗಲಿಲ್ಲ. ತಿರಿಗಿ ಹೋಗುವಾಗ ಇಜಿಪ್ತದಲ್ಲಿಳಿಯಬೇಕೆಂದು ನಾಗರಿಕರು ವಿನಂತಿ ಮಾಡಿಕೊಂಡಿದ್ದು, ಅನುಕೂಲ ಸಮಯ ದೊರೆತರೆ- ಇಳಿಯುವೆವೆಂದು ಆಶ್ವಾಸನ ಕೊಟ್ಟಿದ್ದಾರೆ. ಅಮೇರಿಕೆಗೂ ಬಂದು ಹೋಗಬೇಕೆಂದು ಅಲ್ಲಿಂದ [illegible] ಪತ್ರಗಳು ಬರುತ್ತಲಿವೆ.

ಮಹಾತ್ಮರು ನಿತ್ಯ ಉಡುವ ಪಂಚೆ, ಮೈ ಮೇಲೆ ಒಂದು ಬಂಡಿ, ಹೊದೆಯಲಿಕ್ಕೆ ಒಂದು ಚಾದರ ಇಷ್ಟು ಉಡತೊಡಿಗೆಯಿಂದ ಲಂಡನದಲ್ಲಿಳಿಯುವರು ಇವರಿಗೆ ತಮ್ಮೂರಿಗೆ ಬಂದು ಭಾಷಣ ಮಾಡಲು ಅನೇಕ ಊರುಗಳಿಂದ ಪತ್ರಗಳು ಬಂದಿರುತ್ತವೆ. ನಾನು ಇಂಗ್ಲಿಷ ಸರಕಾರದ ಅತಿಥಿಯಾಗಿದ್ದೇನೆ. ಅದ್ದರಿಂದ ಮುಖ್ಯ ಪ್ರಧಾನರನ್ನು ಕಂಡು ಅವರ ಕೂಡ ಮಾತಾಡಿದ ಮೊದಲು ನಾನು ಈ ವಿಷಯವಾಗಿ ಏನೂ ಹೇಳಲಾರೆನೆಂದು ಮಹಾತ್ಮರು ತಾರಿನಿಂದ ಉತ್ತರ ಕೊಟ್ಟಿದ್ದಾರೆ.

ಮಹಾತ್ಮರು ಆದಿತ್ಯವಾರದ ದಿವಸ ಕ್ರಿಶ್ಚನ್ನರ ಕೂಡ ಏಸೂ ಕ್ರಿಸ್ತನ ಆರಾಧನೆ ಮಾಡಿದರು. ಈ ವರ್ತಮಾನ ಕೇಳಿ ಪಾದ್ರಿ ಮಂಡಲದಲ್ಲಿ ದೊಡ್ಡ ಕಳವಳಿಯುಂಟಾಗಿರುತ್ತದೆ.

ಗುಪ್ತ [illegible] ಮಹಾತ್ಮರ ಅಂಗರಕ್ಷಕರು ಚಿತ್ರಗುಪ್ತರಾಗುವರು.

ಮಹಾತ್ಮರು ಇಂಗ್ಲಂಡದಲ್ಲಿರುವ ತನಕ ಅವರ ಅಂಗರಕ್ಷಣೆಯನ್ನು ಗುಪ್ತ ಪೋಲಿಸರಿಂದ ಮಾಡಿಸಬೇಕೆಂದು ಲಂಡನದ ಪೋಲಿಸ ಖಾತೆಯವರು ಗೊತ್ತು ಮಾಡಿದ್ದಾರೆ.

ಗೋಗಟೆನ ವಕೀಲರ ಮಹತ್ವದ ಡಿಫೆನ್ಸ್

....(೦)....

ಪುಣೆಯಲ್ಲಿ ಇಂದು ಜಡ್ಜರು ಜೂರಿಗೆ ಗೋಗಟೆನ ಆರೋಪದ ವಿವರಣೆ ಹೇಳುವರು. ಅನಂತರ ಜೂರಿಗಳು ತಮ್ಮ ಮತ ಹೇಳುವರು. ಒಳಿಕ ಜಡ್ಜರು ತೀರ್ಪು ಹೇಳುವರು.

ಗೋಗಟೆನು ಅಪರಾಧ ಮಾಡಿದ್ದು ನಿಜವೆಂದು ಸರಕಾರೀ ವಕೀಲರು ಡಿಫೆನ್ಸಿನಲ್ಲಿ ಹೇಳಿದ್ದು, ಆರೋಪಿಯ ವಕೀಲರಾದ ಶ್ರೀ. ಭೋಪಟಕರರು ಆರೋಪಿಯು ನಿರ್ದೋಷಿಯಾಗಿದ್ದಾನೆಂದು ಭಾಷಣ ಮಾಡಿದ್ದಾರೆ. ಇವರ ಭಾಷಣವು ಬಹಳ ಉತ್ಕೃಷ್ಟವಾಯಿತೆಂದೂ, ಇಂಥ ಭಾಷಣವನ್ನು ಪುಣೆಯಲ್ಲಿ ಕ್ವಚಿತವಾಗಿ ಕೇಳಿದೆವೆಂಬೂ, ಇವರ ಭಾಷಣ ಮುಗಿದ ಕೂಡಲೆ ಕೋರ್ಟಿನಲ್ಲಿ ಕೂತ ವಕೀಲರೂ ಪ್ರೇಕ್ಷಕರೂ ಉದ್ಗಾರ ತೆಗೆದಿದ್ದಾರೆ.

ಸರಕಾರದ ಪತಿಯಿಂದ ಗುಂಡು ಹೊಡಿಸಿಕೊಂಡ ಗವ್ಹರ್ನರಸಾಹೇಬರ ಸಾಕ್ಷಿಯು ಮುಖ್ಯವಾಗಿ ಆಗಬೇಕಾಗಿತ್ತು. ಆದರೆ ಅವರ ಸಾಕ್ಷಿಯೇ ಆಗಲಿಲ್ಲ. ಈ ಕೊರತೆಯನ್ನು ಕುರಿತು ಶ್ರೀ. ಭೋಪಟಕರರ ಹ್ಯಾಮಲೆಟ್ನ ನಾಟಕದ ದೃಷ್ಟಾಂತ ಕೊಟ್ಟಿದ್ದಾರೆ. ಸಾಕ್ಷಿದಾರರೆಲ್ಲರೂ ದೊಡ್ಡ ದೊಡ್ಡವರು. ಅವರ ಸಾಕ್ಷಿಗಳಲ್ಲಿಯ ವಿಸಂಗತಿಗಳನ್ನು ವಿಶದ ಮಾಡಿತೋರಿಸಿದ್ದಾರೆ. ಗುಂಡು ಒಮ್ಮೆ ಹಾರಿತೋ ಎರಡು ಸಾರೆ ಹಾರಿತೋ ಎಂಬದನ್ನು ಕೂಡ ನೆನಪಿನಿಂದ ಹೇಳದಂಥ ಸಾಕ್ಷಿಗಳಾಗಿವೆ ಸಬ್ ಇನ್ಸಪೆಕ್ಟರನೆಂತೂ ಬರೇ ಧಡ ಧಡ್ ಎಂಬ ಶಬ್ದ ಕೇಳಿಸಿತೆಂದು ನುಡಿದಿದ್ದಾನೆ ಪಂಚನಾಮೆಯಲ್ಲಿ ನೋಟಿಗವನ್ನು ಸ್ಪಷ್ಟಮಾಡಿ ತೋರಿಸಿದ್ದಾರೆ. ಗವ್ಹರ್ನರ ಸಾಹೇಬರ ಬೆನ್ನಿಗೆ ಗುಂಡು ಬಡಿಯಬೇಕಾದದ್ದು ವಾಸ್ತವಿಕ; ಆದರೆ ಎದೆಗೂ ಕೋಟಿನ ಕಿಸೆಗೂ ಹೇಗೆ ಬಡಿಯಿತೆಂಬ ಸಂಶಯ ತಕ್ಕೊಂಡಿದ್ದಾರೆ. ಆಪಘಾತವನ್ನು ನೋಡಲಿಕ್ಕೆ ಗವ್ಹರ್ನರಸಾಹೇಬರು ಬರುವದನ್ನು ಮಾತ್ರ ಕಿವಿಗೆ ಮುಟ್ಟದಷ್ಟು ಗುಪ್ತವಾಗಿಟ್ಟಿರುವಾಗ ಗೋಗಟೇನಿಗೆ ತಿಳಿದ ಅವನು ರಿವ್ಹಾಲ್ವರ ಸಹಿತವಾಗಿ ಹೇಗೆ ಸಜ್ಜಾಗಿ ಬರುವದೆಂಬ ಪ್ರಶ್ನೆ ತೆಗೆದಿದ್ದಾರೆ. ಗುಂಡು ಬಡಿದು, ಗವ್ಹರ್ನರಸಾಹೇಬರ ಕಿಸೆ ಹರಿದು, ನೋಟು ಕತ್ತರಿಸಿದವೆಂದು ಪಂಚನಾಮೆಯಲ್ಲಿ ಬರೆದಿದ್ದಾರೆ. ಈಗ ಆ ನೋಟುಗಳು ಹೇಗಾದರೂ ಹೊಂದಿಕೆಯಾಗುವದಿಲ್ಲ, ಹೊಂದಿಸಿ ತೋರಿಸಿರೆಂದು ಅವನ್ನು ಕೋರ್ಟಿನ ಮೇಜಿನ ಮೇಲಿಟ್ಟು ಜೂರಿಗಳಿಗೆ ಸವಾಲು ಹಾಕುವಂತೆ ಮಾಡಿದ್ದಾರೆ ಪೋಲಿಸಸಾಹೇಬರಂಥವರು ಸಹ ಹೇಗೆ ಪಂಚನಾಮೆ ತಪ್ಪು ಮಾಡಿದರೆಂಬುದನ್ನೂ ಸ್ಪಷ್ಟವಾಗಿ ತಿಳಿಸಿದ್ದಾರೆ.

ಜೇಲ ಹ್ವಿಜಿಟರರ ಪರಿಷತ್ತು.

—(೦)—

ದೇಶದಲ್ಲಿ ಎಲ್ಲಾ ತರದ ಪರಿಷತ್ತುಗಳಾಗುತ್ತವೆ. ಈ ಮೊದಲು ಅನೇಕವಾಗಿಯಾಗಿವೆ. ಆದರೆ ಜೇಲಹ್ವಿಜಿಟರರ ಪರಿಷತ್ತು ಆಗಿಲ್ಲ. ಇಂಥದೊಂದು ಹೊಸ ಪರಿಷತ್ತನ್ನು ಕೊಯಮುತ್ತೂರಿನಲ್ಲಿ ಕೂಡಿಸುವರು.

ಜೇಲ ಹ್ವಿಜಿಟರವೆಂಬದೊಂದು ದೊಡ್ಡ ಹುದ್ದೆ ಇರುತ್ತದೆ ಮ್ಯುನಸಿಪಾಲಿಟಿ ಲೋಕಲಬೋರ್ಡಿನಲ್ಲಿ ನಾಮನಿರ್ದೇಶಿತರಾದವರು ಯಾವಾಗಾದರೂ ಬಾಯಿ ಬಿಚ್ಚ, ಎರಡು ಚಲೋ, ಕೆಟ್ಟ, ಒಡಕ, ಕೊಳಕ ಮಾತುಗಳನ್ನಾಡುವರು. ಆದರೆ ಈ ಜೇಲಹ್ವಿಜಿಟರರು ಪೂರಾ ಮುಗ್ಧರಾಗುತ್ತಾರೆ ಇವರಿಗಾವ ಸ್ವಾತಂತ್ರ್ಯವಿರುತ್ತದೆಂಬದು ದೇವರಿಗೇ ಗೊತ್ತು. ಒಬ್ಬ ಸಿಪಾಯಿಯು ಇವರ ಮುಂದೆ ಅಜೇ ಹೈ ಎಂದು ಕೂಗುತ್ತಾ ಹೋಗುವನು. ಈ ಶಬ್ದ ಕೇಳಿ, ಹ್ವಿಜಿಟರ ಬಂದನೆಂದು ಕೈದಿಗಳು ತಿಳಿದು, ಅವನ ಮೋರೆ ನೋಡುವರು. ಮುಗಿಯಿತು. ಇಲ್ಲಿಗೆ ಹ್ವಿಜಿಟರನ ತುರಂಗ ಸುತ್ತು ಹಾಕುವ ಕೆಲಸವು

ಜೇಲಿನಲ್ಲಿ ವಾರ್ಡರ, ಸಿಪಾಯಿ, ಡಿಪ್ಯುಟಿ ಜೇಲರ, ಜೇಲರ, ಸುಪರಿಂಟೆಂಡೆಂಟ ಇವರು ದ್ದ ತಳರಾರು ಮಾಡಿದರೆ – ಸಂಜೆಗೇ ತವ್ವ ಪಾದಪೂಜೆಯಾಗಿ, ಹೆಡಮುರಿಗೆ ಕಟ್ಟಿ ಹೋಗುತ್ತವೆಂದು ಪ್ರತಿಯೊಬ್ಬ ಕೈದಿಗೂ ಗೊತ್ತು. ಮತ್ತು ಈ ಹ್ವಿಜಿಟರನ ಮುಂದೆ ದೂರಿಕೊಂಡರೆ – ಇದರಿಂದ ಹಿತಕ್ಕಿಂತ ಅಹಿತವೇ ಆಗುತ್ತದೆಂಬು ಗೊತ್ತು.

ಹ್ವಿಜಿಟರರು ನಾಮಧಾರಿ ನಾಮದಾರರಾಗಿರುತ್ತಾರೆ. ಇವರಿಗೂ ತಮ್ಮ ಬೆಲೆ ಎಷ್ಟು ಇರುತ್ತದೆಂಬದು ಗೊತ್ತುಂಟು ಹ್ವಿಜಿಟರರು ಕರಡುವ ಪರಿಷತ್ತಿನಲ್ಲಿ ಕೈದಿಗಳಿಗೆ ತಮ್ಮಿಂದೇನಾದರೂ ಉಪಕಾರವಾಗುವಂತೆ ಅಧಿಕಾರಗಳನ್ನು ಸರಕಾರದಿಂದ ಪಡಕೊಳ್ಳುವ ಪ್ರಯತ್ನ ಮಾಡಬೇಕು. ಇಲ್ಲವಾದರೆ ಇವರು ಪರಿಷತ್ತಿಗೆ ಹೋಗಿ ಬರುವದು ವ್ಯರ್ಥ ಶ್ರಮವೂ, ದ್ರವ್ಯಹಾನಿಯೂ, ಆಗುವದು.

ಬೆಂಚ ಮ್ಯಾಜಿಸ್ಟ್ರೇಟರ ಪಲಾಯನ

ಪ್ರದಕೋಟೆಗಲ್ಲದ ದಂಗೆಯ ಆರೋಪಿಗಳೆಂಬವರಲ್ಲಿ ಅನೇಕ ಜನರು ಓಡಿ ಹೋಗಿದ್ದು, ಇವರಲ್ಲಿ ಒಬ್ಬರು ಆನರರಿ ಮ್ಯಾಜಿಸ್ಟ್ರೇಟರಾಗಿದ್ದರೆ ಸಿಕ್ಕ ಆರೋಪಿಗಳನ್ನು ಮುಚ್ಚಳಿಕೆಯ ಮೇಲೆ ಬಿಡಬೇಕೆಂದು ಮಾಡಿದ ಅರ್ಜಿಯನ್ನು ಮ್ಯಾಜಿಸ್ಟ್ರೇಟರು ನಾಮಂಜೂರ ಮಾಡಿದರು.

ಅಖಿಲ ಭಾರತ ಸ್ವದೇಶೀ ವಸ್ತು ಪ್ರದರ್ಶನ, ಹುಬ್ಬಳ್ಳಿ

....(೦)....

ಹುಬ್ಬಳ್ಳಿಯಲ್ಲಿ ನವೆಂಬರ ತಿಂಗಳ ಕಡೆಯ ವಾರದಲ್ಲಿ ನಡೆಯಲಿರುವ ಅಖಿಲ ಭಾರತ ವಸ್ತು ಪ್ರದರ್ಶನದ ಕೆಲಸವು ಒಳ್ಳೇ ಭರದಿಂದ ಸಾಗಿದೆ. ಪ್ರದರ್ಶನ ಸಮ್ಮೇಲನದವರು ಈಗಾಗಲೇ ಸಾಧಾರಣವಾಗಿ ಪ್ರತಿಯೊಬ್ಬ ಕಾರಖಾನದಾರರೊಡನೆಯೂ ಪತ್ರ ವ್ಯವಹಾರ ನಡೆಸಿರುವರು. ಹಾಗೂ ಅನೇಕ ಕಾರಖಾನೆದಾರರ ಕಡೆಯಿಂದ ಉತ್ತರಗಳ ಸುರಿಮಳೆಯು ಆಗುತ್ತಿರುವದು. ಪ್ರದರ್ಶನದಲ್ಲಿ ಪ್ರದರ್ಶನಕ್ಕಾಗಿಯೇ ಆಗಲಿ ಅಥವಾ ಮಾರಾಟಕ್ಕಾಗಿಯೇ ಆಗಲಿ ಕೇವಲ ಸ್ವದೇಶೀ ವಸ್ತುಗಳಿಗೆ ಮಾತ್ರ ಇಂಬು ಕೊಡಲಾಗುವದು. ಅದರ ಸಂಬಂಧದಲ್ಲಿ ಮಾತ್ರ ಯಾವದೇ ತರಹದ ಕೆಲಸಗಾರಿಕೆಯಿರಲಿ ಕೈ ನೂಲು ಹಾಗೂ ಕೈ ಮಗ್ಗದ ಅರಿವೆ ಕೈ ನೂಲಿನಿಂದಲೇ ತಯಾರಿಸಿದ ವಸ್ತುಗಳೇ ತಕ್ಕದ್ದು. ಈ ಭಾಗವು ಅಖಿಲ ಭಾರತ ಚರಖಾ ಸಂಘದ ಕರ್ನಾಟಕ ಶಾಖೆಯವರ ನೇತೃತ್ವದಲ್ಲಿ ನಡೆಯುವದು.

ಈ ಪ್ರದರ್ಶನದ ವೇಳೆಗೆ ಹಿಂದುಸ್ಥಾನದಲ್ಲಿರುವ ಎಲ್ಲಾ ಕಾರಖಾನೆಗಳ ಹಾಗೂ ವ್ಯಾಪಾರ ಸಂಸ್ಥೆಗಳ ಒಂದು ಸಮಗ್ರ ಮಾಹಿತಿ ಪುಸ್ತಕವನ್ನು ತಯಾರಿಸಬೇಕೆಂದು ಕಮಿಟಿಯವರು ನಿಶ್ಚಯಿಸಿರುತ್ತಾರೆ. ಇದರಲ್ಲಿ ಹೆಚ್ಚು ಪ್ರಾಶಸ್ತ್ಯವನ್ನು ಪಡೆಯಬೇಕೆಂದು ಇಚ್ಛೆಯುಳ್ಳವರು ಒಡನೆಯೇ ಪ್ರದರ್ಶನ ಕಮಿಟಿಯ ಕಾರ್ಯದರ್ಶಿಗಳ ಕಡೆಗೆ ಒಂದು ರೂಪಾಯಿಯನ್ನು ಕಳುಹಿಸಿ ತಮ್ಮ ಮಾಲುಗಳ ಪೂರ್ಣ ಮಾಹಿತಿ ಹಾಗೂ ತಾವು ತಯಾರಿಸಿದ ಮಾಲು ಕಾಂಗ್ರೆಸ ಕಾರ್ಯಕಾರೀ ಮಂಡಳದವರು ಹೇಳಿರುವ ಸ್ವದೇಶಿ ಅರ್ಥವನ್ನನುಸರಿಸಿರುವದೆಂದು ಖಾತ್ರಿ ಮಾಡಿಕೊಡತಕ್ಕದ್ದು. ಜಾಹೀರಾತುಗಳನ್ನು ಕೊಟ್ಟು ತಮ್ಮ ವ್ಯಾಪಾರವನ್ನು ಬೆಳೆಸಬೇಕೆಂದಿರುವ ವ್ಯಾಪಾರಸ್ಥರಿಗೆ ಒಂದು ಸುಸಂಧಿಯು ಒದಗಿದೆ. ಜಾಹೀರಾತುಗಳನ್ನು ಕೊಡಬೇಕೆಂದಿರುವವರು ದರ ಮೊದಲಾದ ಹೆಚ್ಚಿನ ಮಾಹಿತಿಗೆ ಅಖಿಲಭಾರತ ಸ್ವದೇಶೀ ವಸ್ತು ಪ್ರದರ್ಶನ ಕಾರ್ಯದರ್ಶಿ ಹುಬ್ಬಳ್ಳಿ ಇವರ ಕಡೆಗೆ ಪತ್ರವ್ಯವಹಾರ ಮಾಡಬಹುದು.

ಅಸೆಂಬ್ಲಿಯಲ್ಲಿ ಭಾಷಣ ಮಾಡುತ್ತಿರುವಾಗ, ಗ, ಶ್ರೀ. ಜೆ. ಸಿ. ರಾಯರವರು ಒಮ್ಮೆಲೆ ಹತ್ತಿದ್ದರು. ಮುಂದೆ ಅವರಿಗೆ ಸ್ಮೃತಿ ಹುಟ್ಟದೆ ಮರಣ ಹೊಂದಿದರೆಂದು ತಿಳಿಸಲು ವಿಷಾದವೆನಿಸುತ್ತದೆ.

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ ಶಿವಾನಂದ (?) ಅವಧೂತರ ಅಸಲರ್ಜಿ, ಶ್ರೀ ಆರೂಢಸ್ವಾಮಿಗಳ ಕೈಫಿಯತ್ತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ, ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ಕುಸುವೆನಿಸುವವು. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚು ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಿಚ್ಛಿಸುವವರು ೧/ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

THE ANKALIGI BANK LTD.

Head Office
Kamankatta Dharwar
Branches
Ranebennur & Hirekerur

5%
Interest allowed on
ANNA SAVINGS BANK
DEPOSIT

Dharwar 3—1—1927 | K. B. ANKALIGI, Managing Director

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಬಗ್ಗೆ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ ೩—೮—೦
ಕೃಷ್ಣ ಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦

೧೪-೧೧-೨೭
ಮೈಸೂರ ಸ್ಟೋರ,
ಬೆಳಗಾವಿಯವರಗಲ್ಲಿ
ಹುಬ್ಬಳಿ
ಮ್ಯಾ ವಿಜಯ ಧಾರವಾಡ

ನೋಟೀಸಿನ ದರಗಳು

—(೦)—

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡು, ... ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅದು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ,

ಚಂದಾದಾರರಿಗೆ ಸೂಚನೆ

—(೦)—

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾದ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿ.

ಈ ಪತ್ರವನ್ನು ... ಚಾರ್ಯ ಬಾಳಾಚಾರ್ಯ ಜೋಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ಗುರುವಾರ ತಾರೀಖು ೧೦ನೇ ಸಪ್ಟಂಬರ ೧೯೩೧ (ಸಂಚಿಕೆ [illegible]

ರಾವುಂಡ ಟೇಬಲ.

ಮಹಾತ್ಮರ ದರ್ಶನದ ವಿಷಯವಾಗಿ ಇಜಿಪ್ತ ಸರಕಾರದ ಅವಿವೇಕ

....(೦)....

ಮಹಾತ್ಮರು ಪೋರ್ಟ ಸಯ್ಯದಕ್ಕೆ ಬಂದಾಗ, ಇಜಿಪ್ತದಲ್ಲಿರುವ ಅವರ ಹಿಂದೂ ಮತ್ತು ಐಗುಪ್ತ ಮಿತ್ರರನ್ನು ಹಡಗದ ಮೇಲೆ ಬಿಡಲು ಇಜಿಪ್ತ ಸರಕಾರದವರು ಅವಿವೇಕವೆನಿಸುವಂಥ ವ್ಯವಸ್ಥೆ ಮಾಡಿದ್ದರು. ೧೦-೧೨ ಜನರಿಗೆ ಮಾತ್ರ ಪಾಸು ಕೊಟ್ಟಿದ್ದರು. ಇವರ ಮೈಝಡತಿಯನ್ನೂ ಬಹು ಸೂಕ್ಷ್ಮವಾಗಿ ತಕ್ಕೊಂಡರು. ಭಾವಚಿತ್ರ ತೆಗೆಯಗೊಡಲಿಲ್ಲ. ಈ ಸರಕಾರದ ಈ ಕೃತ್ಯಕ್ಕಾಗಿ ಮಹಾತ್ಮರು ಬಹಳ ಖಿನ್ನರಾಗಿ, ಇದರ ಪ್ರಾಯಶ್ಚಿತ್ತವೆಂದು ಒಂದು ದಿವಸ ಉಪವಾಸ ಮಾಡಿದರು.

ಅಹಿಂಸೆಯಿಂದಲೇ ಸ್ವಾತಂತ್ರ್ಯ ಗಳಿಸಿರಿ

—(೦)—

ಹಿಂದುಸ್ತಾನವು ಅಹಿಂಸೆಯ ಸತ್ಯಾಗ್ರಹದಿಂದಲೇ ಸ್ವರಾಜ್ಯ ಸ್ವಾತಂತ್ರ್ಯ ಗಳಿಸಬೇಕೆಂದಿದೆ. ಇದರ ಅನುಕರಣವನ್ನು ನೀವೂ ಮಾಡಿ, ಸ್ವರಾಜ್ಯ ದೊರಕಿಸಿರೆಂದು ಮಹಾತ್ಮರು ಐಗುಪ್ತರಿಗೆ ಸಂದೇಶರೂಪವಾಗಿ ಹಿತವಚನ ಹೇಳಿದ್ದಾರೆ.

ಗಾಂಧಿ ಶೌಕತಲ್ಲಿ ಭೆಟ್ಟಿಯು

ಈ ಮೊದಲು ಪ್ರಸಿದ್ಧವಾದಂತೆ ಮೌಲಾನಾ ಶೌಕತಲ್ಲಿಯವರು ಪೋರ್ಟಸಯ್ಯದ ಬಂದರಲ್ಲಿ ಹಡಗವೇರಿದರು. ಇವರು ಮತ್ತು ಭೋಪಾಳದ ನವಾಬರು ಸೇರಿ, ಮಹಾತ್ಮರ ಕೂಡ ವಿಚಾರ ವಿನಿಮಯ ಮಾಡಿದರು.

ಮಹಾತ್ಮರು ಇಂಗ್ಲಂಡದ ದಂಡೆಯಲ್ಲಿಳಿದ ಕೂಡಲೆ ಬಂದರದಿಂದ ಮೋಟಾರದಿಂದಲೇ ಲಂಡನದ ಕಡೆಗೆ ಪ್ರಯಾಣ ಮಾಡುವರು. ಇವರ ದರ್ಶನಕ್ಕಾಗಿ ಅನಿವಾರ್ಯ ಗೊಂದಲವೇಳಬಾರದೆಂದು ಪೋಲಿಸರು ಈ ವ್ಯವಸ್ಥೆ ಮಾಡಿದ್ದು, ಅದಕ್ಕೆ ಮಹಾತ್ಮರು ಒಪ್ಪಿದ್ದಾರೆ.

ಮಹಾತ್ಮರ ವರ್ಧಂತಿಯ ದಿವಸ ಪ್ರಚಂಡವಾದ ಔತಣ ಸಮಾರಂಭ ಮಾಡಬೇಕೆಂದು ಮೆ. ಫನರ ಬ್ರಾಂಕವೇಸಾಹೇಬರು ವಿಚಾರ ಮಾಡಿದರು. ಇಂಥ ಸಾಮಾಜಿಕ ಊಟವು ನನ್ನಂಥ ಮನುಷ್ಯನಿಗೆ ಬೇಡೆಂದು ಮಹಾತ್ಮರು ಇವರಿಗೆ ತಿಳಿಸಿದ್ದಾರೆ.

ಬಾದಶಹರ ಸ್ವಾರ್ಥತ್ಯಾಗ

....(೦)....

ವೆಚ್ಚ ಉಳಿತಾಯದ ಬಗ್ಗೆ ಬಾದಶಹ ಪಂಚಮ ಜಾರ್ಜರು ತಮ್ಮ ವೆಚ್ಚದಲ್ಲಿ ಎರಡೂವರೆ ಲಕ್ಷ ರೂಪಾಯಿ ಅಂದರೆ ೫೦ ಸಾವಿರ ಪವನು ಕಡಿಮೆ ಮಾಡಲಿಕ್ಕೆ ಬರುತ್ತದೆಂದು ಮುಖ್ಯ ಪ್ರಧಾನರಿಗೆ ತಿಳಿಸಿದ್ದಾರೆ. ಬಾದಶಹರ ವಾರ್ಷಿಕ ಉತ್ಪನ್ನವು ೫೪೦ ಸಾವಿರ ಪವನು ಇರುತ್ತದೆ. ಅಂದರೆ ಒಂದು ಕೋಟಿ ರೂಪಾಯಿಯು

ತಂದೆಯಂತೆ ಮಗನು

ಬಾದಶಹರಂತೆ ಪ್ರಿನ್ಸ ಆಫ ವೆಲ್ಸರೂ ಹತ್ತು ಸಾವಿರ ಪವನಿನ ಉಳಿತಾಯ ಕಡಿಮೆ ಮಾಡಿದರು. ಇವರ ಉತ್ಪನ್ನವು ೭೦ ಸಾವಿರ ಪೌಂಡ ಇರುತ್ತದೆ.

ಮೆ. ಮ್ಯಾಕಡೋನಾಲ್ಡ ಸಾಹೇಬರು ಈ ಬಗ್ಗೆ ತಂದೆಮಕ್ಕಳ ಆಭಾರ ಮನ್ನಿಸಿದ್ದಾರೆ.

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ್ಸ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಎಂಟು ಲಕ್ಷದಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ವಿಜಯ.

ತಾರೀಖು ೧೦-೧೦-೧೯೩೧ನೇ ಇಸ್ವಿ

ಧಾರವಾಡ ಮ್ಯುನಿಸಿಪಾಲಿಟಿಯ ಚುನಾವಣೆಯು.

ಸಂತೆಯೊಳು ಧರ್ಮಶಾಸ್ತ್ರ ಹೇಳ್ವನು ಮೂರ್ಖನು!!

....(೦)....

ಶನಿವಾರ ೧೨ ನೆಯ ತಾರೀಖಿನ ದಿವಸ ಧಾರವಾಡ ಮ್ಯುನಿಸಿಪಾಲಿಟಿಯ ತ್ರೈವಾರ್ಷಿಕ ಚುನಾವಣೆಯಾಗುವದು. ಚುನಾವಣೆಯಲ್ಲಿ ಈ ವರ್ಷ ಯಾವ ರಭಸವೂ ತೋರುವದಿಲ್ಲ. ಕೆಲವರು ಠೈಕಾಬು ಬಿಟ್ಟಿದ್ದಾರೆ. ಯಾವದೇ ಒಂದು ಚುನಾವಣೆಯು ಯಾರಿಗೂ ಶಿಲಾಶಾಶ್ವತವಾಗಿರುವದಿಲ್ಲ. ತಾಮ್ರಪಟ ಬರೆದು ಕೊಟ್ಟಂತಿರುವದಿಲ್ಲ. ಪಾರ್ಲಮೆಂಟ ಮೊದಲ್ಗೊಂಡು ಹಳ್ಳಿಯ ಪಂಚಾಯತಿ ತನಕ ಆಗುವ ಚುನಾವಣೆಯಲ್ಲಿ ಕೆಲ ಹೊಸಬರೂ ಹಳಬರೂ ಆರಿಸಲ್ಪಡುತ್ತಾರೆಂಬದು ಸಹಜವಾದದ್ದು. ಪಾರ್ಲಮೆಂಟದ ಚುನಾವಣೆಯಲ್ಲಿ ಇಂಗ್ಲಂಡದ ಮುಖ್ಯ ಮಂತ್ರಿಯಾಗಿದ್ದ ಆಸ್ಕ್ವಿಥಸಾಹೇಬರೇ ಉರುಳಿದ ಬಳಿಕ, ಉಳಿದವರ ಪಾಡೇನು?

ಮ್ಯುನಿಸಿಪಾಲಿಟಿಯ ಚುನಾವಣೆಯಲ್ಲಿ ಉಮೇದವಾರರಾಗಿ ನಿಂತವರಿಗಷ್ಟೇ ವೋಟು ಕೊಡಬೇಕಾದುದರಿಂದ, ಅವರೊಳಗೆ ಯಾರು ಯೋಗ್ಯರೆಂಬದನ್ನು ತಿಳಿದು ನೋಡಬೇಕಾಗುತ್ತದೆ. ಹೀಗೆ ವಿಮರ್ಶೆಯಿಂದ ನೋಡಬೇಕೆನಿಸುವಾಗ ಸ್ಥಾನಿಕ ವಿಚಾರಗಳಲ್ಲಿ ಜಾತಿಯ ಪ್ರಶ್ನವು ಮುಂದೆ ಬರುತ್ತದೆ. ತಾನು ಅಲ್ಪಾಂಶಕ್ರುವಿದ್ದರೂ, ತನ್ನ ಕುಲದವರೆಷ್ಟು ಜನ ವೋಟರರಿದ್ದಾರೆಂಬದನ್ನು ಎಣಿಸಿಕೊಂಡು ಕುಲದ ವೋಟರರಲ್ಲಿ ಕುಲಾಭಿಮಾನವನ್ನು ಹುಟ್ಟಿಸಿ, ಬ್ರಹ್ಮದೇವರು ಬಂದರೂ ತನ್ನ ಇಷ್ಟು ವೋಟುಗಳು ಒಡೆಯುವದಿಲ್ಲವೆಂದು ಗಂಟು ಹಾಕಿಕೊಳ್ಳುತ್ತಾನೆ. ಮತ್ತು ಈತನ ದೆಸೆಯಿಂದ ವೋಟು ಕಲೆ ಹಾಕುವವರೂ ಅದೇ ಕುದುರೆಯನ್ನು ಮುಂದೆ ಮಾಡುತ್ತಾರೆ. ಕೆಲವೊಬ್ಬ ಉಮೇದವಾರನು ಮೆಂಬರನಾಗಲಿಕ್ಕೆ ಯೋಗ್ಯನಿಲ್ಲೆಂದು ಬೇಕಾದಷ್ಟು ಪಾಂಚಜನ್ಯ ಮಾಡಿರಿ; ಅದು ಸಂತೆಯಲ್ಲಿ ಧರ್ಮಶಾಸ್ತ್ರ ಹೇಳ್ವನು ಮೂರ್ಖ; ಕೇಳ್ವನು ಮೂರ್ಖನೆಂದಾಗುತ್ತದೆ.

ಹಳೇ ಕಾಲದಲ್ಲಿ ಊರ ಜನರನ್ನು ಪಂಚರಾಗಿ ಆರಿಸಬೇಕಾದರೆ- ಅವನ ಪ್ರಾಮಾಣಿಕತನವನ್ನೂ, ಆ ಕೆಲಸವನ್ನು ನಿರ್ವಹಿಸುವ ಶಕ್ತಿಯನ್ನೂ ನೋಡುತ್ತಿದ್ದರು. ಈಗ ಪಂಚರಾಗತಕ್ಕವರು ತಮ್ಮ ತುತೂರಿಯನ್ನು ತಾವೇ ಊದಿಕೊಳ್ಳಬೇಕಾಗುತ್ತದೆ. ತುತೂರಿಯಲ್ಲಿ ಎಷ್ಟು ಸ್ವಾರಸ್ಯವಿರುವದಿಲ್ಲ. ನಮ್ಮ ಮನೆಯಲ್ಲಿ ಲಗ್ನವದೆ ಬನ್ನಿರೆಂದು ದೂರ ದೂರಿನ ಊರುಗಳಲ್ಲಿರುವ ಪರಿಚಯಸ್ಥರಿಗೆ ಪತ್ರ ಬರೆದಂತೆ!! ಅವರು ಬರಲಿಲ್ಲ. ಲಗ್ನವಾಗುವದು ನಿಲ್ಲಲಿಲ್ಲ. ಜಾತಿಯ ಮೇಲೆ ನಂಬಿ ನಿಂತವರು ಸಂಖ್ಯಾಬಲದಿಂದ ಯಶಾಪಯಶ ಹೊಂದುವರು. ಇದರಲ್ಲಿ ಕಿರಿಕಳ ಜಾತಿಯವರು ಒಡೆದು ಹಂಚಿಹಾಕುವ ವೋಟುಗಳು ಎರಡು ಹಳ್ಳಗಳು ಕೂಡುವಲ್ಲಿ ಕೊರೆಯಿದ್ದಂತೆ ಮಾಡುವವು. ಇವೇ ವೋಟುಗಳು ಉಮೇದವಾರನ ವಿಶ್ವಾಸಘಾತ ಮಾಡುವವು. ಇನ್ನಾದರೂ ತುತೂರಿಯ ಧ್ವನಿಗೆ ಬಲೀ ಬೀಳುವದು ತಪ್ಪುವದಿಲ್ಲ. ಓಣಿಯ ಭಿಡೆಕ್ಕೆ ಅಥವಾ ಹೊರಗಿನ ಮುರವತ್ತಿಗಾಗಿ ಕೊಟ್ಟಂಥವಾಗುತ್ತವೆ.

ಉಮೇದವಾರರಾಗಿರುವ ಒಬ್ಬ ಗೃಹಸ್ಥರು ೪೦ ಕಲಮುಗಳ ಒಂದು ಮಾರುದ್ದ ಪಟ್ಟಿಯನ್ನು ಸಿದ್ಧಮಾಡಿ, ಇವನ್ನು ಅಮಲಿನಲ್ಲಿ ತರಿಸೇ ಬಿಡುತ್ತೇನೆಂಬ ಪ್ರತಿಜ್ಞೆಯ ಲೇಖದ ಮೇಲೆ ಸಹೀ ಮಾಡಿದರೇ ವೋಟು ಕೊಡಬೇಕೆಂದು ಬರಕೊಂಡಿದ್ದಾರೆ. ಮೂರು ವರ್ಷ ಮ್ಯುನಿಸಿಪಾಲಿಟಿಯಲ್ಲಿದ್ದರೂ ಜ್ಞಾನದೇವನು ಚಾಂಗದೇವನಿಗೆ ಹೇಳಿದಂತೆ ಇವರು "ಕೋರಡಾ" ಉಳಿದಿದ್ದಾರೆ. ಮ್ಯುನಿಸಿಪಾಲಿಟಿಯ ಎಲ್ಲಾ ಬಾಬುಗಳ ವಿಚಾರ ಮಾಡಿದರೆ- ನಾಲ್ವತ್ತರ ಬದಲಾಗಿ ನೂರು ಕಲಮುಗಳಾಗುವವು ಈ ಉಮೇದವಾರರು ತಾವು ಸ್ವತಃ ಹೇಳಿದ್ದೊಂದೇ ಆಯಿತು. ಸ್ವತಃ ಅದರ ಮೇಲೆ ಸಹೀ ಮಾಡಲಾರರು. ಮಾಡಿದರೆ-ಹದಿನೈದೇ ದಿವಸಗಳಲ್ಲಿ ರಾಜೀನಾಮೆ ಕೊಟ್ಟು ರಾಮಾ ರಾಮವೆಂದು ಮನೆ ಹಿಡಿದು ಕೂಡ್ರಬೇಕಾಗುತ್ತದೆ. ಅನೇಕ ವೋಟರರು ಈ ವಾನರ ಪುಚ್ಛದ ಪಟ್ಟಿಯನ್ನೋದಿದ್ದಾರೆ. ಆದರೆ ಒಬ್ಬ ಮತದಾರನಾದರೂ ಒಬ್ಬ ಉಮೇದವಾರನಿಗೆ ಇದರ ಮೇಲೆ ಸಹೀ ಮಾಡೆಂದು ಕೇಳಿದ್ದರೆ- ಇಟ್ಟ್ಯಾಣ!!

ಇನ್ನೊಬ್ಬ ಉಮೇದವಾರರು ದೇಸಾಯಿರ ಬೀದಿಯ ವರ್ಣನೆ ಮಾಡಿದ್ದಾರೆ. ಇವರಿಗೆ ಕನ್ನಡ ಪೂಜೆ. ಆದರೂ ಬಾಡಿಗೆಯಿಂದ ಕನ್ನಡ ಪ್ರಕಟನೆ ಪ್ರಸಿದ್ಧ ಮಾಡಿದ್ದಾರೆ. ಇವರ ವಾಕ್ಪಟುತ್ವ ಅದೇ ದೇಸಾಯಿರ ಓಣಿ. ಅದರ ಪತ್ರಾವಳಿಯ ವಾಸನೆ ಬರುವಷ್ಟು ಸನಿಯಾದ ಬೀದಿಯಲ್ಲಿ ಹುಟ್ಟಿ ಬೆಳೆದಿದ್ದಾರೆ. ಅದರ ಹತ್ತರಕೇ ಇಂದಿಗೂ ಇದ್ದುಕೊಂಡು, ಅದರ ದುರ್ಗಂಧದಲ್ಲಿಯೇ ಚಿತ್ರಿಪೃಕ್ತವರ್ಗಗಳಿಂದ ಧನಾರ್ಜನೆ ಮಾಡುತ್ತಾರೆ. ಆದರೂ ಈ ವರೆಗೆ ಆ ಬೀದಿಯ ಉದ್ಧಾರದ ಬುದ್ಧಿಯೇ ಆಗಲಿಲ್ಲ. ಮೆಂಬರರಾಗಬೇಕೆಂಬ ಹಂಬಲ ಹುಟ್ಟಿದ ಕೂಡಲೆ- ಅವರ ಶಬ್ದಗಳನ್ನೇ ವಿಸ್ಕೃತ ಮಾಡಿ ಹೇಳಬೇಕಾದರೆ- ನರಕವನ್ನು ಸ್ವರ್ಗ ಮಾಡಬೇಕೆಂದಿದ್ದಾರೆ. ಯಾವನೋ ಒಬ್ಬನು ಗುಡ್ಡ ಹೊರುವ ಬೆಟ್ಟ ಕಟ್ಟಿ, ಊರವರ ದುಡ್ಡಿನಿಂದ ಮೇದು ಸೊಕ್ಕಿದನು. ಗುಡ್ಡ ಹೊರಪ್ಪಾ ಎಂದು ಕೇಳಲು. ಹೊರಿಸಿರೆಂದು ಡೊಗ್ಗಿನಿಂತನೆಂದು ಹೇಳುವ ತರಹವಾಗಿ ಈ ಉಮೇದವಾರನ ಹಾಸ್ಯಾಸ್ಪದ ಹೇಳಿಕೆಯಾಗಿದೆ. ನೂರು ಅಡಹೇಳಿ. ಬಂದು ಬರಿಯಬೇಕೆಂದು ಈ ಉಮೇದವಾರನಿಗೇ ಗೊತ್ತೇ ಇಲ್ಲ. ಈತನಿಗೆ ಇನ್ನು ಜಗತ್ತಿನ ಅನುಭವವು ಬಹಳ ಬೇಕಾಗುತ್ತದೆ.

ಪುಣೆಯಿಂದ ಪಂಢರಪೂರಕ್ಕೆ ಆಳಂದಿಯ ಪಲ್ಲಕ್ಕಿ ಹೋಗುತ್ತದೆ. ದಾರಿಗುಂಟ ಇರುವ ಗ್ರಾಮಸ್ಥರು ಈ ಪಲ್ಲಕ್ಕಿಯನ್ನು ದಾಟಿಸುವದು ತಮ್ಮ ಕರ್ತವ್ಯವೆಂದು ತಿಳಿಯುತ್ತಾರೆ. ಈಗ ಮ್ಯುನಿಸಿಪಾಲಿಟಿಯಲ್ಲಿ ಜವಾಬದಾರ ಮೆಂಬರರಾಗಿದ್ದವರು, ಮುಂದಿನ ಮೂರು ವರ್ಷಗಳಲ್ಲಿ ಇಷ್ಟು ಮಾಡತಕ್ಕವರಿದ್ದೇವೆಂದು ಸಾಧಾರಣವಾಗಿ ಬರೆದಿಡಬೇಕಾಗುತ್ತದೆ. ಹಾಗೆ ಮ್ಯುನಿಸಿಪಾಲಿಟಿಯಲ್ಲಿ ರಿಕಾರ್ಡ ಇಲ್ಲವೇ ಇಲ್ಲ. ಮುಸಲಮಾನರ ಬೀದಿಗಳಿಗೆ ನೋಡಿರಿ. ಮುದ್ದತು ಮೀರಿ ಹೋದಂಥ ಮನೆಪಟ್ಟಿಯ ಬಾಕಿಯು ವಸೂಲಾಗದೆ ನಿಂತು ಹೋಗಿದೆ ಪಾಳೇ ಓಣಿಯಲ್ಲಿ ನೋಡಿರಿ. ಇಡೀ ಓಣಿಯವರು- ವೋಟರರಿಲ್ಲ. ನಮಗೆ ನೀರು ಕೊಡಿರಿ. ಬೆಳಕು ಕೊಡಿರಿ. ಬಿದ್ದರೆ-ಮೊಳಕಾಲು ಮುರಿಯುವಷ್ಟು ಗಂಡೆಕಲ್ಲುಗಳಿದ್ದ ಬೀದಿಯನ್ನು ನೆಟ್ಟಗೆ ಮಾಡಿಕೊಡಿರೆಂದು ಸತ್ಯಾಗ್ರಹ ಮಾಡಿ, ಶಕ್ತಿಯಿದ್ದರೂ, ಮನೆಪಟ್ಟಿ ಕೊಡಲಿಲ್ಲ. ಆದ್ದರಿಂದ ಇವರ ವೋಟುಗಳೇ ಮುಣುಗಿ ಹೋದವು, ಇದು ದೇಸಾಯಿರ ಓಣಿಗಾಗಿ ಕನಿಕರ ಪಡುವಂಥವರಿಗೆ ಸನಿಯವಾದದ್ದು. ಆದರೆ ಅದರ ಭೋಗ ಮಾತ್ರ ಇವರಿಗೆ ಗೊತ್ತಿಲ್ಲ. ಸಹಜವಾಗಿಯಾಗುವ ಕೆಲಸವನ್ನು ಮಾಡದವರಿಂದ ಹೆಚ್ಚಿನ ಕೃತ್ಯಗಳನ್ನು ಅಪೇಕ್ಷಿಸುವದು ಹುಚ್ಚತನವೇ ಸರಿ.

ಮೂರು ವರ್ಷಕ್ಕೊಮ್ಮೆ ಚುನಾವಣೆಯಾಗಬೇಕೆಂದು ಸರಕಾರದ ನಿಯಮ. ಆ ಪ್ರಕಾರ ಚುನಾವಣೆಯಾಗುತ್ತದೆ. ಅದರಲ್ಲಿ ಇಂಥವರೇ

ಲೇ ಊರ ಕಲ್ಯಾಣವಾಗುತ್ತದೆಂದು ಊಹಿಸಲಾಗದು. ಮ್ಯುನಿಸಿಪಾಲಿಟಿಯ ಕಾಯದೆಯು ಪ್ರಕಾರ ಕೆಲಸಗಳಾಗುವವು. ಅಷ್ಟು ಬದಷ್ಟು ಇದವು. ಉಳಿದಷ್ಟು ಉಳಿದವೆಂತಿರುತ್ತದೆ ಇದಕ್ಕಾಗಿ ಯಾರೂ ಉಬ್ಬಾಳಿಕನದಿಂದ ಹೆಬ್ಬಳಿಕೆಯ ಮಾತುಗಳನ್ನು ಹೇಳಬಾರದು. ಸುಜ್ಞರೆಂಬವರು ಇವಕ್ಕೆ ಉತ್ತೇಜನ ಕೊಡಬಾರದು. ಕೊಟ್ಟವರು ಸಂತೆಯೊಳು ಧರ್ಮಶಾಸ್ತ್ರ ಹೇಳಿ, ತಮ್ಮ ಪಾಲಿಗೆ ಮೂರ್ಖತನ ಮಾತ್ರ ಕಟ್ಟಿಕೊಂಡಂತಾಗುತ್ತದೆ.

ದರೋಡೆಗಾರರು ದೊಡ್ಡ ದೊಡ್ಡ ಪೋಲೀಸ ಅಮಲದಾರರನ್ನು ಗಿರಕಿಗೆ ತಂದರು.

....(೦)....

ಮಚ್ಲೀಪಟ್ಟಣ ಜಿಲ್ಲೆಗೆ ಸೇರಿದ ಕಾಲಿದಿಂಡಿ ಎಂಬ ಗ್ರಾಮದಲ್ಲಿ ಸುತ್ತಲಿರುವ ಬಡ ಜನರು ಹೊಟ್ಟೆಗಿಲ್ಲದಾಗಲು - ಕಾಲಿದಿಂಡಿಗೆ ಬಂದು ಒಬ್ಬ ಶ್ರೀಮಂತನ ಮನೆಯಲ್ಲಿ ದರೋಡೆ ಹಾಕಿ, ಪುಷ್ಕಳವಾಗಿ ಸಂಪತ್ತನ್ನು ಸುಲಿದುಕೊಂಡು ನಡೆದರು. ಈ ವರ್ತಮಾನ ಕೇಳಿ ಪೋಲಿಸ ಇನ್ಸಪೇಕ್ಟರ, ಸಬ್ಇನ್ಸಪೇಕ್ಟರು ... ದರೋಡೆಗಾರರನ್ನು ಮುತ್ತಿದರು. ಉಭಯತರಿಗೂ ಚಕಮಕಿಯಾಯಿತು. ಪೋಲಿಸರು ತಮ್ಮಲ್ಲಿದ್ದ ಎಲ್ಲ ಗುಂಡುಗಳನ್ನು ಹಾರಿಸಿ, ಬಂದೂಕಿನ ಮೋರೆ ಕೆಳಗೆ ಮಾಡಿದರು. ದರೋಡೆಗಾರರಿಗೆ ಸಹ ಹೋಗುವದೊಂದುಳಿಯಿತು. ದರೋಡೆಗಾರರು ಪೋಲಿಸರ ಕಸರತ್ತು ಮುಗಿದದ್ದನ್ನು ಕಂಡು ಇವರ ಮೇಲೆ ತಿರುಗುಬಿದ್ದು ಹೂಡಿ, ಹೊಡೆಯಲಿಕ್ಕೆ ಆಸಹಾಯರಾಗಿ, ದಿಕ್ಕಿಲ್ಲದವರಾಗಿ, ದುರ್ಬಲರಾಗಿ ನಿಂತ ಪೋಲಿಸರ ಕಣಿಗಳನ್ನು ಪೂರಾ ಮೆತ್ತಗೆ ಮಾಡಿ, ತಮ್ಮ ದಾರೀ ಹಿಡಿದರು. ಈ ಸುದ್ದಿಯನ್ನು ಕೇಳಿ ಪೋಲೀಸ ಸಾಹೇಬರು ಪೋಲಿಸ ಪಡೆ ಕರಕೊಂಡು ಅವರನ್ನು ಶಿಕ್ಷಿಸಲು ಹೊರಟಿದ್ದಾರೆ. ಜನರು ಹೊಟ್ಟೆಗಿಲ್ಲದ್ದಕ್ಕಾಗಿ ದರೋಡೆ ಮಾಡಿದರು. ಅವರಿಗೆ ಊರೂ ಅಷ್ಟೇ; ತುರಂಗವೂ ಅಷ್ಟೇ; ಈಗಿನ ಮಂದಿಯಲ್ಲಿ ಹೊಟ್ಟೆಗಾಗಿ ದರೋಡೆ ಆಗುವದು - ಜನರನ್ನು ಸಂರಕ್ಷಿಸುವಷ್ಟು ಶಕ್ತಿಯು ಪೋಲಿಸರಿಲ್ಲವೆಂಬುದಾಗುವದು. ಕಾನ್ಸ್‌ಟೇಬಲ್ಲರ ... ಹೊಚ್ಚುವದೆಂದು ... ಇದೊಂದು ಪೂರ್ವ ಸೂಚನೆಯು ದರೋಡೆ ಎಂದು ಭಾವಿಸಬೇಕು.

ಮಿ. ಮ್ಯಾಕಡೋನಾಲ್ಡ ಸಾಹೇಬರು ಹಿಂದುಸ್ಥಾನದ ಗವ್ಹರ್ನರ ಜನರಲ್ಲರಾಗುವರೇ?

—(೦)—

ಮಿ. ಮ್ಯಾಕಡೋನಾಲ್ಡ, ಸ್ನೋಡನ ಮತ್ತು ಥಾಮಸ ಸಾಹೇಬರಿಗೆ ಲಾರ್ಡ ಪದವಿ ಕೊಟ್ಟು, ಅವರನ್ನು ಪಾರ್ಲಮೆಂಟದ ಲಾರ್ಡರ ಸಭೆಯಲ್ಲಿ ಕೂಡಿಸುವರೆಂದು ಈ ಮುಂದಾಗಿ ಪ್ರಕಟವಾಗಿದೆಯಷ್ಟೇ; ಕಡೆಯ ಇಬ್ಬರು ಲಾರ್ಡರಾಗಲಿಕ್ಕೆ ಒಪ್ಪುವದಿಲ್ಲಂತಲೂ, ಮಿ. ಮ್ಯಾಕಡೋನಾಲ್ಡ ಸಾಹೇಬರು ಬೇಗನೆ ಹಿಂದುಸ್ಥಾನದ ಗವ್ಹರ್ನರ ಜನರಲರಾಗಿ ಬರುವರೆಂತಲೂ ಕೊಲಿಕಾರ ಪಕ್ಷದ ಡೇಲಿ ಹೆರಾಲ್ಡ ಪತ್ರವು ಸೀಲಿಗೆಟ್ಟ ಸುದ್ದಿಯನ್ನು ಸಾರಿದೆ. ಲಾರ್ಡ ವಿಲಿಂಗಡನ್ನ ಸಾಹೇಬರ ಪ್ರಕೃತಿಯು ನೆಟ್ಟಗಿಲ್ಲ. ಅವರು ಪೂರಾ ಐದು ವರ್ಷ ಹಿಂದುಸ್ಥಾನದಲ್ಲುಳಿಯರು ಇವರು ಸ್ವದೇಶಕ್ಕೆ ಹೋದ ಕೂಡಲೇ ಮಿ. ಮ್ಯಾಕಡೋನಾಲ್ಡ ಸಾಹೇಬರು ಹಿಂದುಸ್ಥಾನಕ್ಕೆ ಬರುವರೆಂದೂ ಈ ಪತ್ರವು ತರ್ಕ ಮಾಡಿ ಹೇಳುತ್ತದೆ. ಏನಾದರೂ ಇದು ಸೀಲಿಗೆಟ್ಟ ಸುದ್ದಿಯೇ ಸೈ.

ಕಾಳ ಪಿಷ್ಟ ಪಿನ್ನ ಬೇಕಾದರೆ, ರಿಟಾಯರಾಗಬೇಕು.

— ೦ —

ಸರಕಾರದವರು ವೆಚ್ಚ ಉಳಿತಾಯವೆಂದು ಕಾಮದಾರರ ಸಂಬಳದಲ್ಲಿ ನೂರಕ್ಕೆ ೧೦ ರಂತೆ ಕಡಿಮೆ ಮಾಡುವರೆಂದು ಬಹುತೇಕವಾಗಿ ಗೊತ್ತಾಗಿದೆ, ಹೀಗೆ ಸಂಬಳ ಕಡಿಮೆ ಮಾಡಿ ಪೆನ್ಶನ್ನದ ಪ್ರಮಾಣವನ್ನೂ ಕಡಿಮೆ ಮಾಡುವಿರಾ ಎಂದು ಶ್ರೀ. ಸಪಲರಾಯರು ಅಸೆಂಬ್ಲಿಯಲ್ಲಿ ಮಾಡಿದ ಪ್ರಶ್ನೆಕ್ಕೆ - ಇಂಥವರು ಪೆನಶನಕ್ಕೆ ಕೊಂತೆ ಮಾಡಿಕೊಳ್ಳುವದರ ಬದಲು ರಿಟಾಯರಾಗುವದೇ ಉತ್ತಮವೆಂದು ಕೋಶಾಧ್ಯಕ್ಷರಾದ ಮಿ. ಶಸ್ಟರ ಸಾಹೇಬರು ಉತ್ತರ ಕೊಟ್ಟಿದ್ದಾರೆ. ಪೆನಶನಿಗೆ ಬಂದವರಿಗೆ ಒಳ್ಳೇ ಎಚ್ಚರಿಕೆಯ ಸೂಚನೆಯು

ಮೈಸೂರಿನ ಮಹಾರಾಜರು ಕೈಲಾಸ ಪರ್ವತ ಮತ್ತು ಮಾನಸ ಸರೋವರದ ಯಾತ್ರೆಯನ್ನು ತೀರಿಸಿಕೊಂಡು ಸ್ಪೇಶಲ ಟ್ರೇನಿನಿಂದ ಬೆಂಗಳೂರಿಗೆ ಬಂದರು. ಇವರ ದರ್ಶನೋತ್ಸುಕರಾಗಿ ಸಾವಿರಾರು ಜನರು ಸ್ಟೇಶನಕ್ಕೆ ಹೋದರು. ಆದರೆ ಮ. ಮಹಾರಾಜರು ಚೆಲಗೋಳ ಸ್ಟೇಶನದಲ್ಲಿ ಇಳಿದು ಮೋಟಾರದಿಂದ ಬೆಂಗಳೂರಿನ ಅರಮನೆಗೆ ಬಂದರು. ಸ್ಟೇಶನಕ್ಕೆ ಬರೇ ಸ್ಪೇಶಲ ಬಂದದ್ದನ್ನು ಜನರು ಕಂಡು ಬಹುಘಾಗಿ ನಿರಾಶೆ ಹೊಂದಿದರು.

ಬಾಗಲಕೋಟೆಯ ಮ್ಯುನಿಸಿಪಾಲಿಟಿಯಲ್ಲಿ ಗೊಂದಲ

....(೦)....

ಬಾಗಲಕೋಟೆಯ ಮ್ಯುನಿಸಿಪಾಲಿಟಿಯಲ್ಲಿ ಅಧ್ಯಕ್ಷರಿಗೆ ಬಹುಮತವಿಲ್ಲ. ಬಹುಮತದವರು ಪಾಸು ಮಾಡಿದ ಠರಾವುಗಳನ್ನು ಅಧ್ಯಕ್ಷರು ಅಮಲಿನಲ್ಲಿ ತರುವದಿಲ್ಲ. ಅಧ್ಯಕ್ಷರಿಗೆ ಇಂಗ್ಲಿಷ ಬರುವದಿಲ್ಲಾದ್ದರಿಂದ, ಇಂಗ್ರೇಜಿ ಕಾಗದಪತ್ರಗಳನ್ನು ಉಪಾಧ್ಯಕ್ಷರೇ ನೋಡುವರು. ಅಧ್ಯಕ್ಷರು ಬರೇ ಸಹಿಯ ಧನಿಯರಾಗಿದ್ದಾರೆ.

ಹಿಂದಕ್ಕೆ ಕೊಪ್ಪಳ ಇಲಾಖೆಯಲ್ಲಿ ಮೇಣೆ ಹೊರುವ ಭೋಯಿಗೆ ಬಲಾಚಾರ ಬಂದು, ತಹಸಿಲದಾರ (ಮಾಮಲೇದಾರ) ನಾದನು. ಈತನಿಗೆ ಓದು ಬರಹ ಪೂಜಿ ಯಾವದೊಂದು ಕಾಗದ ಬಂದು ಅದು ಕನ್ನಡದಲ್ಲಿದ್ದರೆ- ಕನಡೀ ಮುನಸಿಕೆ ಪಾಸ ಜಾವ, ಉರ್ದುವಿನಲ್ಲಿದ್ದರೆ- ಉರ್ದು ಮುನಸಿಕೆ ಪಾಸ ಜಾವ, ಎಂದು ಹಳಬರನ್ನು ಕಳಿಸುವನು. ಬಾಗಲಕೋಟೆಯಲ್ಲಿ ಕೆಲವಟ್ಟಿಗಾದರೂ ಈ ಫಾರ್ಸ ನೋಡಲಿಕ್ಕೆ ಸಿಗುವದೊಂದು ಸೋಜಿಗ!!

ಚೀನದಿಂದ ಅಮೇರಿಕೆಗೆ ಹತ್ತು ಲಕ್ಷ ದ್ವೀಪದ್ರಾಕ್ಷಿಯ ಗಿಡಗಳ ಬಹುಮಾನ

....(೦)....

ಅಮೇರಿಕೆಗೆ ರಾಜಕೀಯ ಸ್ವಾತಂತ್ರ್ಯ ತಂದು ಕೊಟ್ಟಂಥ ಜಗತ್ಪ್ರಸಿದ್ಧನಾದಂಥ ಜಾರ್ಜ ವಾಸಿಂಗಟನನು ಹುಟ್ಟಿ ೧೫೦ ವರ್ಷಗಳಾಗುತ್ತವೆ. ಅಮೇರಿಕೆಯು ಬಂಬ ಈತನ ಅರ್ಧ ಶತಕ ವರ್ಧಂತಿ ಮಾಡುವರು. ವಾಸಿಂಗಟನ್ನರ ಸದ್ಗುಣಗಳ ಬಹುಮಾನವೆಂದು ಚೀನ ಸರಕಾರದವರು ಅಮೇರಿಕೆಗೆ ೧೦ ಸಾವಿರದ ದ್ವೀಪದ್ರಾಕ್ಷಿಯ ಗಿಡಗಳ ಸಸಿಗಳನ್ನು ಕಳಿಸುವರು. ಈ ಗಿಡಗಳನ್ನು ಮೆಚ್ಚುಗೆಯ ಕಾಣಿಕೆ ಕೊಡುವದು ಸದ್ಗುಣಗಳ ಆದರವೆಂದು ಚೀನದ ತಿಳುವಳಿಕೆಯು.

ವಜ್ರಗಳನ್ನು ದಕ್ಕಿಸಿಕೊಳ್ಳುವ ಚತುರ ಯುಕ್ತಿಯು

....(೦)....

ದಕ್ಷಿಣ ಆಫ್ರಿಕೆಯ ವಜ್ರದ ಖನಿಗಳಲ್ಲಿ ಕೆಲಸ ಮಾಡುವ ಇರ್ವರು ಗೌರಕಾಯಸ್ಥರು ಎರಡು ಲಕ್ಷ ರೂ. ಬೆಲೆಬಾಳುವ ೧೨೦ ಹರಳುಗಳನ್ನು ತಮ್ಮ ಮೈಯಲ್ಲಿ ಯಾರಿಗೂ ತಿಳಿಯದಂತೆ ಸೇರಿಸಿಕೊಂಡಿದ್ದರು. ಕ್ಷ ಕಿರಣಗಳಿಂದ ಪರೀಕ್ಷೆ ಮಾಡಿದಾಗ್ಗೇ ಇವರ ಕಳ್ಳತನ ಹೊರಬಿತ್ತು.

The Asian Life Assurnance Co. Ltd Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೧; ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೨೫,೦೦೦,೦೦ ಕಂತದ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರುಗಿ ಕೊಟ್ಟಿದ್ದು ೧೦,೦೦,೦೦೦

ಜಿಂದಿಗಿ ೨೩,೦೦,೦೦೦

ಕರ್ನಾಟಕ-ದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕೆ. ವ್ಹಿ. ಹುಲಸೋಗಿ, ಬಿ. ಎ.

ಕುಲಕರ್ಣಿ. ಧಾರವಾಡದ ಏಜಂಟರು ಕರ್ನಾಟಕದ ಬ್ರ್ಯಾಂಚ ಮ್ಯಾನೇಜರ

ಬಿ. ಎಚ್. ಪಾಟೀಲ ಹುಬಳಿಯ ಏಜಂಟರು—

ಹಾವೇರಿಯ ಚೀಫ ಏಜಂಟರು. ಶ್ರೀ. ಎನ್. ಎಮ್. ದೊಡ್ಡವಾಡ ಮತ್ತು

ಶ್ರೀ. ಜಿ. ಪಿ. ಶಿರೋಳಕರ.

ಅನುಪು ಆಪತ್ತು ಒಂದಾಗ, ನಿಮ್ಮ ಹೆಂಡರುಮಕ್ಕಳು ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯವು

ಒಂದೇ ಸಾವಿರ ರೂಪಾಯಿಯು ಜೀವವಿಮೆ ಇಳಿಸಿದರೆ ೫೭೦ ರೂ. ಗಳನ ಕೊಡುವಂಥ ಗೋಲ್ಡನ್ (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ ಏಶಿಯನ್ನ ಕಂಪನಿಯೊಂದೇ ಆಗಿರುತ್ತದೆ.

ಕರ್ನಾಟಕ ಮಹಿಳಾ ವಿದ್ಯಾಲಯಕ್ಕೆ ತಾ|| ೧-೪-೩೦ ರಿಂದ ೩೦-೬-೩೧ ರ ವರೆಗೆ ಬಂದ ವರ್ಗಣಿಯ ತಪಶೀಲು.

....(o)....

ಮುಂಬಯಿ ೧೦೧ ರೂ ಎಸ್. ಎ. ಇಂಜಿನಿಯರ ೫೫ ಎಚ್. ಎಸ್. ಗೆರಸಪ್ಪಾ ೫೦ ವ್ಹಿ. ಎಸ್. ಆಡವಿ ೧೫ ಮಿಸೆಸ್. ಚಂದಾವರಕರ ೫ ಆರ್. ಎಚ್. ಜೋಶಿ ೫ ಡಾ. ರಮಾಬಾಯಿ ೩ ಎಸ್. ಎ. ಶಹ್ನಿಸ ೨ ಡಾ. ಸುಂದರಾಬಾಯಿ ಒಟ್ಟು ೨೩೬ ರೂ ಬಾರಾಮತಿ – ೧೨ ರೂ ಸೌ. ಸತ್ಯವತಿಬಾಯಿ ಬಾಪಟ, ಸಿದ್ದಾಪುರ – ೫ ಡಾ. ತಾವರಗಿರಿ ೫ ಗೋಪಾಳರಾವ ದೇವ ಒಟ್ಟೂ ೧೦ ರೂ ಸಿರ್ಸಿ ೫ ಸೊಂದೇ ವಿಶ್ವನಾಥ ಕಂ ೫ ಗಣಪತಿಭಟ್ಟ ಅನಂದಾಸ ಒಟ್ಟೂ ೧೦ ಬಾಗಲಕೋಟ – ಡಾ. ಕರ್ನಾಡ ೧೦, ಜಮಖಂಡಿ ೧೩ ಶ್ರೀನಿವಾಸ ದಾಸೋ ಅಸೀಖಂಡಿ ಒನಹಟ್ಟಿ- ೧೦ ತಮ್ಮಣ್ಣಪ್ಪಾ ಚಿಕ್ಕೋಡಿ ೧೦ ಸಿದ್ದಪ್ಪಾ- ಲಕ್ಕಪ್ಪಾ ಕಂಟಿ ಒಟ್ಟೂ ೩೦ ರೂಪಾಯಿ ರಾಮದುರ್ಗ – ೫೦ ಕೃಷ್ಣರಾವ ಗುಂಜೀಕರ, ತಿರಹಟ್ಟಿ- ೧೦ ಅಶ್ವತ್ಥರಾವ ಮಹಿಷಿ ಗದಗ – ೧೮ ಆರ್. ಎಸ್. ನಾಡಗೀರ, ಹುಬ್ಬಳ್ಳಿ ೫ ಡಾಕ್ಟರ ಗೋರೆ ೨ ಎಸ್. ವ್ಹಿ. ನಾಗರಕಟ್ಟಿ ೧ ವಾಗಳೆ ವಕೀಲ ಒಟ್ಟು ೮ ರೂ. ಅಮ್ಮಿನಭಾವಿ-೧೨ ಬೀಡೂರಾವ ದೇಶಪಾಂಡೆ ಒಟ್ಟೂ ೪೦೦

ಧಾರವಾಡ ೮೫೫ ಕ್ಟ್, ೩೫೧ ಒಟ್ಟು ಕರ್ನಾಟಕ ೨೮೩ ಸರಕಾರೀ ಗ್ರ್ಯಾಂಟ ೧೬೦ ಚಂದ್ರಭಾಗಾ ಶಾಸ್ತ್ರಿ ೧೦೦ ಸದರ್ನ ಮರಾಠಾ ಬ್ಯಾಂಕ ೫೦ ಧಾರವಾಡ ಮ್ಯುನಿಸಿಪಾಲಿಟಿ ೫೦ ಬೋಧರಾವ ನಾವಳಾರ ೩೫ ವ್ಹಿ ಬಿ. ಹಾಳಭಾಂವಿ ೩೦ ಎಸ್. ಕೆ. ದೀಕ್ಷಿತ ೨೫ ಎಸ್. ಎನ್. ಕುಲಕರ್ಣಿ ೨೫ ಕಾವೇರಪ್ಪಾ ಕುಲಕರ್ಣಿ ವಕೀಲ ೨೦ ಧನಬಾಯಿ ಕರಾಳಾ ೧೫ ಜೆ. ಎಚ್. ಗುಗ್ಗರಿ ೧೫ ಡಾಕ್ಟರ ಭಗೀರಥರಾವ ದೇಶಪಾಂಡೆ ೧೩ ಬಿಡೀಕರ ಮಾಸ್ತರ ೧೩ ರಾಮದುರ್ಗ ಬೋಧರಾವ ೧೩ ರಾಧಾಬಾಯಿ ಕರಂದೀಕರ ೧೨ ಡಾಕ್ಟರ ಸಿರೂರ ಅಣ್ಣಾರಾವ ೧೨ ಪಾಟೀಲ ಮ ಹಳ್ಳೀಕೇರಿ ೧೦ ಭಾಗೀರತಿಬಾಯಿ ಜೋಶಿ ೧೦ ಹಣಮಂತರಾವ ಗೋವಿಂದರಾವ ದೇಶಪಾಂಡೆ ೧೦ ಗಂಗಾಧರರಾವ ಘಾಟಗೆ ೧೦ ಎಮ್. ಎ. ದೇಶಮುಖ ೧೦ ತಾರಾಬಾಯಿ ಜಹಗೀರದಾರ ೧೦ ಕುರುಪಾಲೀಸ ೧೦ ಎಸ್. ಬಿ. ನಲೇಕರ. ೧೦ ಆರ್. ಎಸ್. ನಾಗರಕಟ್ಟಿ ೧೧ ರಾಮರಾವ ಛಂಡಿವಾಡ ೧೦ ಅಸುಂಡಿ ಸಬಜಜ್ಜ ೧೦ ಜೇ. ಎಸ್. ಕುಲಕರ್ಣಿ ೯||| ಬಾ. ಅ. ಜೋಶಿ ೮ ಅಮೀನಭಾಂವಿ ಮಾಸ್ತರ ೮ ಜೇ. ಆರ್. ಬಿ. ರ ಬೀ. ಎ ಹುಂದೂರ ೭ ವಾಗಳೇ ಆರ್. ಎಸ್. ೭ ರಾಮರಾವ ಬಿಡಿ ಮಾಸ್ತರ ೬ ಶ್ರೀನಿವಾಸರಾವ ಗುಂಜೀಕರ ವಕೀಲ ೬ ಸುಶಿಲಾಬಾಯಿ ಸಬನೀಸ ೫ ನಾಡಗೀರ ಎನ್. ಬಿ ೫ ಪುರೋಹಿತ ಬೀ. ಎಸ ೫ ಜಾಲೀಹಾಳ ಅಣ್ಣಾರಾವ ೫ ಹಣಮಂತರಾವ ದೇಸಾಯಿ ೫ ತೀನಪ್ಪಾ ಜೋಗ ೫ ಎನ್. ಎ. ದಿಕ್ಷಿತ ೫ ಸಾಲೀಮಠ ಎಸ್. ಎಸ್. ೫ ನಾರಾಯಣರಾವ ಅಷಟೆ ೫ ಮುಳ್ಳೀಮಠ ವಕೀಲ ೫ ಗಣೇಶರಾವ ಮನ್ನೂರ

ಕಲಕತ್ತೆಯಲ್ಲಿ ಸಾರಿನ ವ್ಯಾಪಾರ ಮಾಡುತ್ತಿದ್ದ ಲೀ ಎಂಬ ಹೆಸರಿನ ಸಾಹೇಬನು ವ್ಯಾಪಾರ ಮಂದಿಯ ಮೂಲಕ ದ್ರವ್ಯಾಭಾವವಾಗಲು ಗುಂಡು ಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡನು.

ಚಂದಾದಾರರಿಗೆ ಸೂಚನೆ

—(o)—

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರ ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೩೨) ಧಾರವಾಡ ಶುಕ್ರವಾರ ತಾರೀಖು ೧೧ನೇ ಸಪ್ಟಂಬರ ೧೯೩೧ (ಸಂಚಿಕೆ ೩೦೬

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ್ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ್ಹ್ ಕ್ರೆಡಿಟ್ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಎಂಟು ಲಕ್ಷದಮೇಲುಂಟು. ಶೇಕ್ಸ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೨-೧
೬ ,,	೬-೧-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಸಿರ್ಸಿ ಸಿದ್ದಾಪೂರ ರಲೀಫ ಫಂಡು

—(೦)—

ಈವರೆಗೆ ಸಿರ್ಸಿ ಸಿದ್ದಾಪೂರದ ರಲೀಫ ಫಂಡು ೪೭೭೪ ರೂಪಾಯಿಯಾಗಿದೆ. ಇದರಲ್ಲಿ ೨೮೦೧ ರೂಪಾಯಿ ವೆಚ್ಚವಾಗಿವೆ. ೧೩೯ ಕುಟುಂಬಗಳಿಗೆ ಸಹಾಯ ಮಾಡಿತು. ಈ ಸಂಸ್ಥೆಯು ಬೆಳೆಯುತ್ತಲಿದೆ. ಮುಂಬಯಿಯ ಔಷಧ ಕಂಪನಿಯವರು ಧರ್ಮಾರ್ಥವಾಗಿ ಔಷಧಗಳನ್ನು ಕಳಿಸಿ ಕೊಟ್ಟಿದ್ದಾರೆ.

ಇಂಗ್ಲಂಡದ ಪೋಲೀಸರ ಸಂಬಳ ಕಡಿಮೆಯಾಗುವದು.

ವೆಚ್ಚ ಉಳಿತಾಯಕ್ಕಾಗಿ ಇಂಗ್ಲಂಡದಲ್ಲಿ ಪೋಲೀಸರ ಸಂಬಳ ಕಡಿಮೆ ಮಾಡುವರು. ನಿಮ್ಮ ಸಂಬಳವನ್ನು ಕಡಿಮೆ ಮಾಡುವೆವು ಅದಕ್ಕೆ ಸಿದ್ಧರಾಗಿರಿ. ವಿವಾದ ಪಡಬೇಡಿರೆಂದು ಮುಂದಾಗಿ ಎಚ್ಚರಿಕೆ ಕೊಡಲು ಲಂಡನದಲ್ಲಿ ಐನೂರು ಸಿಪಾಯರದೊಂದು ಸಭೆ ಕೂಡಿಸಿ, ಜಾಹೀರಾಗಿ ಹೇಳಿದರು.

ಲಂಡನದಲ್ಲಿ ವಾರವಿಳ ದೇಶಭಕ್ತೆಯ ಅಧ್ಯಕ್ಷತೆಯಲ್ಲಿ ಸ್ತ್ರೀಯರ ಮಹಾಸಭೆಯಾಗಿ ದೇವಿ ಸರೋಜನಿಯವರ ಸನ್ಮಾನಗಳೂ ಭಾಷಣವೂ ನಡೆಯುವವು.

ಅಥಣಿಯಲ್ಲಿ ಮ್ಯುನಿಸಿಪಾಲಿಟಿಯು ಕಟ್ಟಿಸುದ ಮೇಲೇರಿಸಿದ ನಾಕಗುಡಿಯನ್ನು ಕಿತ್ತಿಹಾಕಬೇಕೆಂದು ಕೆಲ ಮೆಂಬರರು ಉದ್ಯೋಗ ನಡೆಸಿದ್ದಾರೆ. ಮನೆಮುರುಕತನವೇ ಸೈ.

ಚಿಕ್ಕೋಡಿ ತಾಲೂಕಿನ ಕಲ್ಲೋಳಿಯಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರ ವಾದವು ಹುಟ್ಟಿದ್ದರ ಪರಿಣಾಮವಾಗಿ ಇಲ್ಲಿಯ ಸೆಶನ್ಸ ಕೋರ್ಟಿನಲ್ಲಿ ಎರಡು ಬಂಡಾಯಿ ಮೊಕದ್ದಮೆಗಳು ನಡೆದಿದ್ದವು. ಇವೆರಡೂ ಖಟ್ಲೆಗಳ ತೀರ್ಮಾನವು ಕಳೆದ ವಾರದಲ್ಲಿ ಹೇಳಲ್ಪಟ್ಟಿತು. ಒಂದು ಖಟ್ಲೆಯೊಳಗಿನ ನಾಲ್ವರು ಬ್ರಾಹ್ಮಣ ಆರೋಪಿಗಳನ್ನು ನಿರ್ದೋಷಿಗಳೆಂದು ಬಿಡಲಾಯಿತು. ನಾಲ್ವರು ಬ್ರಾಹ್ಮಣೇತರರಿಗೆ ಎಳೇಳು ವರ್ಷಗಳ ಸಶ್ರಮ ಶಿಕ್ಷೆಯಾಯಿತು. ಮತ್ತೊಂದು ಖಟ್ಲೆಯಲ್ಲಿ ಆರೋಪಿಗಳಾಗಿದ್ದ ಬ್ರಾಹ್ಮಣೇತರ ಆರೋಪಿ ೪೭ರು ಬಿಡುಗಡೆ ಹೊಂದಿದರು.

ವಿಮಾನದಿಂದ ಮದ್ರಾಸದಿಂದ ಬೆಂಗಳೂರಿಗೆ ೩೫ ಮಿನಿಟುಗಳ ದಾರಿಯಾಯಿತು. ವಿಮಾನ ಪ್ರಯಾಣಿಕರಿಗಾಗಿಯೇ ಒಂದು ಕ್ಲಬ್ಬು ಸ್ಥಾಪಿಸಲ್ಪಟ್ಟಿದೆ.

ಬೆಂಗಳೂರಲ್ಲಿ ಒಬ್ಬ ಒಕ್ಕಲಿಗನು ಹೊಟ್ಟೆಗಿಲ್ಲದ್ದಕ್ಕಾಗಿ ತನ್ನ ಹೆಂಡತಿ ಮತ್ತು ಮಕ್ಕಳನ್ನು ಕೊಂದು, ತಾನು ಬಾವಿಯಲ್ಲಿ ಹಾರಿಕೊಂಡು ಆತ್ಮಹತ್ಯ ಮಾಡಿಕೊಂಡನು.

ಮೈಸೂರಿನ ದಿವಾನರಾದ ಸರ ಮಿರಜಾ ಇಸ್ಮಾಯಿಲ ಸಾಹೇಬರು ರೋಮದಲ್ಲಿದ್ದು, ಪೋಪ ಸಾಹೇಬರ ದರ್ಶನಕ್ಕೆ ಹೋಗಿದ್ದರು.

ಧಾರವಾಡ

ನಾಳಿನ ದಿವಸ ಈಯೂರಲ್ಲಿ ಮ್ಯುನಿಸಿಪಾಲಿಟಿಯ ತ್ರೈವಾರ್ಷಿಕ ಚುನಾವಣೆಯು ನಡೆಯುವದು.

ವಿಜಯ.

ತಾರೀಖು ೧೦-೯-೧೯೩೧ನೇ ಇಸ್ವಿ

ಚಿತಗಾಂಗದ ದಂಗೆಯ ಹಿಂದಿನ ಕೃಷ್ಣ ಕಾರಸ್ಥಾನ

ಸುಖವಸ್ತು ಯುರೋಪಿಯನ್ನರ ಮೇಲೆ ಪುಂಡಾಟಿಕೆಯ ಆರೋಪ

....(೦)....

ಚಿತಗಾಂಗಿನಲ್ಲಿ ಪೋಲೀಸ ಇನ್ಸಪೇಕ್ಟರ ಅಹನುಲ್ಲಾಖಾನರ ಕೊಲೆಯಾದ ಬಳಿಕ, ಊರ ತುಂಬಾದ ಲೂಟಿಗೆ ಮುಸಲಮಾನರು ಮೂಲ ಪ್ರವರ್ತಕರಾಗದೆ, ಅಲ್ಲಿ ವಾಸವಾಗಿರುವ ನಾನ ಅಫಿಸಿಯಲ ಯುರೋಪಿಯನ್ನರು ಅಂದರೆ ಇಂಗ್ಲಿಷ ಜನವು ಅದರ ಮೂಲದಲ್ಲಿರುತ್ತಾರೆಂದು ಶ್ರೀ. ಸೇನಗುಪ್ತರು ಹೇಳುತ್ತಾರೆ. ದಂಗೆಯ ಆಮೂಲವನ್ನು ಕಂಡು ಹಿಡಿಯಲು ಕಲಕತ್ತೆಯಲ್ಲಿ ನೇಮಿಸಲ್ಪಟ್ಟ ವಿಚಾರಿಸುವವರು ಅಲ್ಲಿಗೆ ಹೋಗಿ ನೋಡಲು ಇಂಗ್ರೇಜಿ ವರ್ತಮಾನಪತ್ರಕಾರರು ಜನರ ಕಣ್ಣಿಗೆ ಮಣ್ಣು ಹಾಕುವ ತರಹವಾಗಿ ಬರೆದ ದಂಗೆಯ ವರ್ತಮಾನವು ಬೇರೊಂದು ತರಹವಾಗಿರುತ್ತದೆಂದು ಅವರಿಗೆ ಕಂಡು ಬಂತು. ಪೋಲಿಸ ಇನ್ಸಪೇಕ್ಟರರ ಕೊಲೆಯಾಗುವ ಮುಂಚೆ ಅಲ್ಲಿ ಹಿಂದೂ ಮುಸಲಮಾನ ಜಗಳವೇನೇ ಇಲ್ಲ. ಎರಡೂ ಕುಲಗಳು ಪರಸ್ಪರ ಬಂಧುಭಾವದಿಂದಿದ್ದವು. ಕೊಲೆಯಾದ ಕೂಡಲೆ ಎರಡೂ ಕುಲಗಳ ಮುಖಂಡರು ಸಭೆ ಮಾಡಿ, ಕೊಲೆಯ ನಿಷೇಧ ಮಾಡಿದರು. ಆದರೂ ದಂಗೆಯಾಯಿತು. ಅದರ ಪೂರ್ವ ವೃತ್ತಾಂತವನ್ನು ಶ್ರೀ. ಸೇನಗುಪ್ತರು ಮುಂದಿ ಕೊಟ್ಟಂತೆ ಹೇಳುತ್ತಾರೆ:

“ಚಿತಗಾಂಗಿನಲ್ಲಿ ಹಿಂದೂ ಮುಸಲಮಾನ ದಂಗೆ ಎಂಬ ವರ್ತಮಾನವನ್ನು ಇದೇ ಕೇಳಿದೆವು. ನಾನ ಅಫೀಸಿಯಲರಾದಂಥ ಯುರೋಪಿಯನ್ನರೂ, ಗುರಖಾ ಜನರೂ ಪಾಂಚಜನ್ಯವೆಂಬ ವರ್ತಮಾನಪತ್ರದ ಮುದ್ರಾಲಯದಲ್ಲಿ ಹೊಕ್ಕು ಮುದ್ರಣದ [illegible]ಗಳನ್ನು ಧ್ವಂಸ ಮಾಡಿದರು. ಚಿತಗಾಂ[illegible] ಪೋಲಿಸರಿದ್ದಾರೆ. ದಂಡಿನವರ ಕಾವಲುಂಟು. ಗುರಖಾ ಸಿಪಾಯರಿದ್ದಾರೆ. ಇಷ್ಟು ಬಂದೋಬಸ್ತಿನಲ್ಲಿ ಹಗಲು ಸುಲಿಗೆಯಂಥ ಕೋಳಿಯು ಹೇಗೆ ನಡೆಯಿತೆಂಬುದರ ವಿಚಾರವಾಗುವದು ಅವಶ್ಯವಿದೆ. ಮುಸಲಮಾನರು ಹಿಂದೂ ಜನರ ಹಿಂಸೆ ಮಾಡಲಿಲ್ಲೆಂದು ನಾನು ಹೇಳುವದಿಲ್ಲ. ಆದರೆ ದಂಗೆಯ ಬುಡದಲ್ಲಾರು ಇದ್ದರೆಂಬ ಪೂರಾ ಶೋಧವೂ ವಿಚಾರವೂ ಆಗಬೇಕಾಗಿರುತ್ತದೆ” ಚಿತಗಾಂಗಿನವರೇ ಆದಂಥ ಶ್ರೀ. ಮಹಿಮಚಂದ್ರ ದಾಸರು ಹೇಳುವದೇನಂದರೆ-

“ಆದಿತ್ಯವಾರ ಸಾಯಂಕಾಲದಲ್ಲಿ ಇನ್ಸಪೇಕ್ಟರರ ಕೊಲೆಯಾಯಿತು. ಅಂದು ಮಧ್ಯರಾತ್ರಿಯಲ್ಲಿಯೇ ಪೋಲಿಸರು ೩-೪ ಮನೆಗಳಲ್ಲಿ ಝಡತಿ ತಕ್ಕೊಂಡರು ಝಡತಿಯಲ್ಲಿ ಮನೆಯವರಿಗೆ ಪರಿಪರಿ ಪೀಡೆ ಕೊಟ್ಟರು. ಈ ವೇಳೆಯಲ್ಲಿ ನಾನ ಅಫೀಶಿಯಲರಾದಂಥ ಯುರೋಪಿಯನ್ನರಿದ್ದರು. ಪಾಂಚಜನ್ಯ ಮುದ್ರಾಲಯದಲ್ಲಿ ಹೊಕ್ಕಾಗ ಎಂಟು ಜನ ಯುರೋಪಿಯನ್ನರೂ ಇಬ್ಬರು ಬಂಗಾಲಿಗಳೂ ಇದ್ದರು. ಇವರು ಸುತ್ತಿಗೆಯಿಂದ ಬೆಲೆಯುಳ್ಳಂಥ ಮುದ್ರಿಸುವ ಎರಡು ಯಂತ್ರಗಳನ್ನು ಒಡೆದರು. ಮೂರನೆಯದನ್ನೂ ಕೆಡಿಸಬೇಕೆಂದರು. ಸಾಧ್ಯವಾಗಲಿಲ್ಲ. ಮರದಿವಸ ಸೋಮವಾರ ಮಧ್ಯಾಹ್ನದಲ್ಲಿ ಲೂಟಿಗೆ ಪ್ರಾರಂಭವಾಯಿತು. ಲೂಟಿಯು ಪೋಲಿಸರ ಕಣ್ಣೆದುರಿಗೇ ನಡೆಯಿತು.”

ದಂಗೆಯು ಕಾನಪೂರದ ಪುನರಾವೃತ್ತಿಯೇ ಸರಿ. ಅಲ್ಲಿ ಯುರೋಪಿಯನ್ನ ನಾನ ಅಫೀಶಿಯಲ್ಲರಿರಲಿಲ್ಲ. ಇಲ್ಲಿ ಅವರೂ ಸೇರಿಕೊಂಡರು. ದಂಗೆಯು ಯುರೋಪಿಯನ್ನರ ಉತ್ತೇಜನದಿಂದಾಯಿತೆಂದು ಮೇಲಿನ ವಿವರಣೆಯಿಂದ ಸಿದ್ಧವಾದರೆ- ಹಿಂದುಸ್ಥಾನದ ಭಾವೀ ಪರಿಸ್ಥಿತಿಯು ಭಯಾನಕವಾಗದೆ ಹೋಗಲಾರದು.

ಕಾಬೂಲದ ಸರಹದ್ದಿನ ಕಾಯಿದೆ.

....(೦)....

ಒಬ್ಬ ಸಾಹೇಬನ ಕಾವಲಿಗೆ ಒಬ್ಬ ಶಸ್ತ್ರಧಾರಿ ಸಿಪಾಯಿಯ ಇರಬೇಕು;

....(೦)....

ಪೇಶಾವರ - ಕೋಹತ ಲೈನದಾರಿ ಅಥವಾ ಆ ಸಿಟ್ಟಿನಲ್ಲಿ ಯುರೋಪಿಯನ್ನ ಲೇಡಿಗಳಂತೂ ಹೋಗಲೇ ಬಾರದು. ಯುರೋಪಿಯನ್ನ ಪುರುಷರು ಹೋಗುವದಾದರೆ - ಸಂಗಡ ತಮ್ಮ ರಕ್ಷಣೆಗಾಗಿ ಶಸ್ತ್ರಧಾರಿಯಾದ ಒರ್ವ ಅಂಗರಕ್ಷಕನನ್ನು ಕರಕೊಂಡೇ ಹೋಗಬೇಕೆಂದು ಇಂಗ್ರೇಜಿ ದಂಡಿನ ಖಾತೆಯವರು ಸರಕ್ಯುಲರ ತೆಗೆದಿದ್ದಾರೆ.

ಲಂಡನದಲ್ಲಿ ರಾವುಂಡಟೇಬಲಿನ ಉಪಕ್ರಮ

ಹೋದ ಸೋಮವಾರ ದಿವಸ ಲಂಡನ ನಗರದ ಜೇಮ್ಸ ಅರಮನೆಯಲ್ಲಿ ದ್ವಿತೀಯ ರಾವುಂಡ ಟೇಬಲಿನ ಕೆಲಸಕ್ಕೆ ಉಪಕ್ರಮದ ಶಿಷ್ಟಾಚಾರವಾಗಿ ಮಹಾತ್ಮರು ಬರುವತನಕ ಮುಂದುವರಿಸಲ್ಪಟ್ಟಿತು. ಉಪಕ್ರಮದ ಸಭೆಯಲ್ಲಿ ಲಾರ್ಡ ಸಾಂಕೆ ಮತ್ತು ಮುಖ್ಯ ಮಂತ್ರಿ ಮಿ. ಮ್ಯಾಕಡೋನಾಲ್ಡ ಸಾಹೇಬರ ಭಾಷಣಗಳಾದವು ಪ್ರಾರಂಭವು ಕೇವಲ ಉಪಚಾರಕ್ಕಾಗಿದ್ದದರಿಂದ, ಕೂಲಿಕಾಂ ಪಕ್ಷದವರಾದ ಮಿ. ಹೆಂಡರಸನ್ನ - ವೆಜ್ಜವುಡ್ಬೆನ್ನ ಮೊದಲಾದವರಾರೂ ಬರಲಿಲ್ಲ ಸಭೆಯಲ್ಲಿ ಲಾರ್ಡ ಸಾಂಕೆಯವರು ಹಿಂದೀ ಪ್ರತಿನಿಧಿಗಳಿಗೆ ಆಶ್ವಾಸನ ಕೊಟ್ಟಂಥ ಭಾಷಣ ಮಾಡಿದ್ದೇನಂದರೆ -

ಈಗ ಬಂದಂಥ ಸುಪ್ರಸಂಗವು ನಮ್ಮ ಜನ್ಮದಲ್ಲಿ ಬರಲಾರದು. ಅದನ್ನು ನಾವು ಕಳಕೊಳ್ಳಲಿಕ್ಕಾಗದು. ಐಕ್ಯವು ಶಕ್ಯವಾಗಲಾರದು. ಅಥವಾ ಅದನ್ನು ಅಪೇಕ್ಷಿಸುವದೂ ಶಕ್ಯವಲ್ಲ. ಆದರೆ ನಾವು ಐಕ್ಯಕ್ಕಾಗಿ ಪ್ರಯತ್ನ ಮಾಡತಕ್ಕದ್ದು. ತಾಳ್ಮೆ ಮತ್ತು ಪ್ರೇಮಭಾವದಿಂದ ಐಕ್ಯಸಾಧಿಸಬಹುದು. ಒಂದು ಪಕ್ಷದವರ ಹೊರ್ತು ಇಂದು ಇಲ್ಲಿ ಎಲ್ಲಾ ಪಕ್ಷದವರು ಸೇರಿದ್ದಾರೆ. ನಾವು ಮಹಾತ್ಮರ ಸ್ವಾಗತ ಮಾಡಿದ ದಿವಸ ಈ ಕೊರತೆಯು ತುಂಬಿ ಬರುವದು. ಹಿಂದುಸ್ಥಾನದಲ್ಲಿ ಶಾಂತಿ ಸಮಾಧಾನವನ್ನು ಪುನರುಜ್ಜೀವನಗೊಳಿಸುವದು ಪ್ರತಿಯೊಬ್ಬನ ಸ್ವಾರ್ಥತ್ಯಾಗಕ್ಕಿಂತ ಮಿಗಿಲಾದದ್ದಿರುತ್ತದೆ. ಕಳೆದ ಕೆಲವು ತಿಂಗಳುಗಳಿಂದ ನನಗೆ ಹಿಂದುಸ್ಥಾನದ ಸ್ಮರಣೆಯಿಲ್ಲದೆ ಒಂದು ದಿವಸವಾದರೂ ಹಾಗೇ ಹೋಗಿಲ್ಲ. ನಿಮ್ಮ ವಿಚಾರಕ್ಕಾಗಿ ಬೇರೆ ಬೇರೆ ವಾದಗ್ರಸ್ತ ಪ್ರಶ್ನೆಗಳ ಟಿಪ್ಪಣಿ ಮಾಡಿದ್ದೇವೆ. ಹಿಂದುಸ್ಥಾನವು ಒಂದು ರಾಷ್ಟ್ರವೆಂದೆನಿಸಿಕೊಂಡು, ಜಗತ್ತಿನಲ್ಲಿ ಸಾಮಾಜಿಕ ಮತ್ತು ರಾಜಕೀಯ ದೃಷ್ಟಿಯಿಂದ ಮಹತ್ವದ ಸ್ಥಳವನ್ನಾಕ್ರಮಿಸಬೇಕೆಂದೇ ನನ್ನ ಮನದಾಶೆಯು.

ಇವರ ತರುವಾಯ ಮಿ. ಮ್ಯಾಕಡೋನಾಲ್ಡ ಸಾಹೇಬರು ಹೇಳಿದ್ದೇನಂದರೆ-

ಇಂಗ್ಲಂಡದ ಮಂತ್ರಿ ಮಂಡಲದಲ್ಲಿ ಸ್ಥಿತ್ಯಂತರವಾದರೂ ಈ ಮೊದಲು ನಾವು ಪ್ರಕಟ ಮಾಡಿದ ಪದ್ಧತಿ ಹಾಗು ಮಿತ್ರತ್ವದಲ್ಲಿ ಯಾವ ಬದಲೂ ಆಗಿರುವದಿಲ್ಲ. ನಾನು ರಾವುಂಡ ಟೇಬಲಿನ ಕಾಯಮ ಅಧ್ಯಕ್ಷನಾಗಿದ್ದೇನೆ. ಮುಂದಿನ ವಾರದಲ್ಲಿ ನಾನು ಬೇರೊಂದು ಕೆಲಸದಲ್ಲಿ ತೊಡಗಿದರೂ, ನಾನು ನಿಮ್ಮನ್ನು ಮರೆತೆನೆಂದೂ, ಕರ್ತವ್ಯ ಚ್ಯುತ

ನಾದೆನೆಂದೂ ತಿಳಿಯ ಬೇಡಿರಿ.

ಹಳೇ ಭಾರತ ಮಂತ್ರಿ; ಹೊಸ ಭಾರತ ಮಂತ್ರಿ ಲಾರ್ಡ ರೀಡಿಂಗ ಮೊದಲಾದ ಮೂರೂ ಪಕ್ಷದವರು ಹಿಂದುಸ್ಥಾನ ವಿಷಯಕವಾದ ತಮ್ಮ ಧೋರಣವೆಷ್ಟೂ ಬದಲಾಗಿಲ್ಲೆಂದು ಆಶ್ವಾಸನ ಕೊಟ್ಟರು. ಹಿಂದೀ ಪ್ರತಿನಿಧಿಗಳಲ್ಲಿ ಸರ ಸಪ್ರು, ಸಾಸ್ತ್ರೀ, ಬಿಕಾನೇರದ ಮಹಾರಾಜರು ಮತ್ತು ಸರ ಅಕಬರ ಹೈದರಿಯವರೂ ಇಂಗ್ಲಿಷ ಗೃಹಸ್ಥರಂತೆ ಅನುಕೂಲ ಭಾಷಣ ಮಾಡಿದರು.

ಬ್ಯಾರಿಸ್ಟರ ಜಿನ್ನಾಸಾಹೇಬರು ಹಿಂದೂ ಜನರ ಮೇಲೆ ವಿಷಕಾರಿದರು.

—(೦)—

ಹನಿಯಿಂದ ಹೋದ ಬುದ್ಧಿ ಕೊಡದಿಂದ ಬರದು

—(೦)—

"ಬುಂಜನೆಶಿಗೆಯೇನೋ ಹಾದಸೇ ಆತನ ಹಿ" ಎಂಬದೊಂದು ನುಡಿಯ ಪ್ರಕಾರ ಬ್ಯಾರಿಸ್ಟರ ಜಿನ್ನಾಸಾಹೇಬರು ಈ ವರೆಗೆ ಸಂಪಾದಿಸಿದ್ದ ಲೌಕಿಕವನ್ನು ಹೋದವಾರ ಮುಂಬಯಿಯಲ್ಲಿ ಮಾಡಿದ ಒಂದೇ ಭಾಷಣದಿಂದ ಕಳಕೊಂಡರು. ಬ್ಯಾರಿಸ್ಟರ ಸಾಹೇಬರು ನೆಗ್ಗಾ ಹಾಗೆಶಲಿ ಅಥವಾ ಸಾಹೇದಾರೂ ಸಂಥ ಧರ್ಮಾಭಿಮಾನಿ ಉತ್ಸಾಹಿಗಳಲ್ಲ. ಎಲ್ಲಾ ಪರಿಸ್ಥಿತಿಯನ್ನು ವಿಚಾರಪೂರ್ವಕವಾಗಿ ನೋಡತಕ್ಕವರೆಂದು ಹೆಸರು ಪಡೆದವರು. ಹಿಂದಿನ ರಾವ್ಂಡಟೇಬಲಿನಲ್ಲಿ ಇದೇ ಧೋರಣದಿಂದ ನಡೆದರು. ಆದರೆ ಈ ಸಾರೆ ಮಾತ್ರ ಅವರ ಬುದ್ಧಿ ಕೆಟ್ಟು ಹೋಯಿತು. ಹಿಂದೂ ಜನರು ಮುಸಲಮಾನರು ಬೇಡುವ ಹಕ್ಕುಗಳನ್ನು ಕೊಡಲೇ ಬೇಕು. ಇಂಗ್ರೇಜಿ ಸರಕಾರದವರು ಹಿಂದೂ ಜನರ ಮಾತು ಕೇಳಿ ಮುಸಲಮಾನರು ಬೇಡುವಂಥ ಹಕ್ಕು ಸ್ವಾತಂತ್ರ್ಯ ಎಡದಿದ್ದರೆ- ಏಳು ಕೋಟಿ ಮುಸಲಮಾನರ ಸಿಟ್ಟಿಳುವದು ಹಿಂದೂ ಜನರಿಗೆ ಬಹಳ ಬಗೀ ಹೋಗುವದು. ಮುಸಲಮಾನರನ್ನು ಹಕ್ಕೊತ್ತಿ ಹಿಡಿಯಬೇಕಾದರೆ-ಒಬ್ಬ ಮುಸಲಮಾನನ ಹಿಂದೆ ಶಸ್ತ್ರಧಾರಿಯಾದಂಥ ಒಬ್ಬ ಸಿಪಾಯಿಯನ್ನು ನೇಮಿಸಬೇಕಾದೀತೆಂದು ಸಾಹೇಬರು ಹೆದರಿಸಿದ ಬೆದರಿಕೆಯ ಭಾಷಣ ಮಾಡಿ, ಮುಸಲಮಾನರು ಸಂಘ ಶಕ್ತಿಯುಳ್ಳ ತಮ ಸಿಸ್ತು ಕಠಿಯ್ಯಬೀಳಬೇಕೆಂಬು ಹೇಳುತ್ತಾರೆ. ಈ ಭಾಷಣವು ರಾಷ್ಟ್ರೀಯ ಪಕ್ಷದವರಾದ ಯಾವ ಮುಸಲಮಾನರಿಗೂ ಸಮ್ಮತವಾಗಿಲ್ಲ. ಶ್ರೀ. ಚಗಲಾನವರು ಕಟುಶಬ್ದ ಈ ಭಾಷಣ ನಿಷೇಧಿಸಿದ ಬಾಹೀರ ಪತ್ರಿಕೆಯನ್ನು ಪ್ರಸಿದ್ಧ ಪಡಿಸಿದ್ದಾರೆ. ಇವರಂತೆ ಪ್ರಾಗತಿಕರಾದ ಸರ ಅಮೀನಲಾಲ ನೆಹರುವಾಡ ಮೊದಲಾದವರೂ ನಿಷೇಧಿಸಿದ್ದಾರೆ.

ಹಿಂದೂ ಜನರ ಮೂರ್ಖರಿದ್ದಾರೆಂದು ಬ್ಯಾರಿಸ್ಟರಸಾಹೇಬರು ಕೊಟ್ಟ ಸರ್ಟಿಫಿಕೇಟದಿಂದ ಹಿಂದೂ ಜನರ ಹಾನಿಯು ಎಷ್ಟು ಆಗದು. ಏಳು ಕೋಟಿ ಮುಸಲಮಾನರು ತೃಪ್ತರಾಗುವಂಥ ಬನವು ಶ್ಯಕವಾಗುವ ಹಿಂದೂ ಜನರ ಹಕ್ಕುಸ್ವಾತಂತ್ರ್ಯಗಳನ್ನು ಹೇಳಿಕೊಳ್ಳುವಾಗ, ೨೩ ಕೋಟಿ ಹಿಂದೂ ಜನರ ಕೂಡ ಸೂರ್ಯ ಚಂದ್ರರಿರುವ ತನಕ ಮುಸಲಮಾನ ಜನಾಂಗಕ್ಕೆ ಜನ್ಮ ಕಳೆಯಬೇಕಾಗುತ್ತದೆಂಬುದನ್ನು ಬ್ಯಾರಿಸ್ಟರಸಾಹೇಬರು ಮರತೇ ಬಿಟ್ಟಿದ್ದಾರೆ. ಒಂಗಾಲ ಮತ್ತು ಪಂಜಾಬದಲ್ಲಿ ಹೆಚ್ಚು ಅಧಿಕಾರ ಬೇಡುವಾಗ, ಅಲ್ಲಿ ಅಲ್ಪ ಸಂಖ್ಯಾಕರಾಗಿ ಅಸಂತುಷ್ಟರಾಗಿ ವಾಸವಾಗಬೇಕಾಗುವ ಹಿಂದೂ ಜನರನ್ನು ಒತ್ತಿ ಹಿಡಿಯುವದಕ್ಕಾಗಿ ಮುಸಲಮಾನರಿಗೆ ಒಬ್ಬ ಹಿಂದುವಿನ ಹಿಂದೆ ಒಬ್ಬ ಸೋಲ್ಜರನನ್ನು ನಿಲ್ಲಿಸಬೇಕಾಗುತ್ತದೆಂಬ ಮಹತ್ವದ ಮಾತನ್ನೇ ಮರೆತಿದ್ದಾರೆ. ಬ್ಯಾರಿಸ್ಟರಸಾಹೇಬರು ತಮ್ಮ ವಿರುದ್ಧ ನಡೆದ ಟೀಕೆಯನ್ನು ನೋಡಿ, ಲಂಡನ ಮುಟ್ಟುವದರೊಳಗಾಗಿ ಬುದ್ಧಿಗಲಿಯಲೆಂದೇ ರಾಜಕಾರಣ ಪಟುಗಳ ಕೋರಿಕೆಯು.

ಮಹಾತ್ಮರು ಸೋಮವಾರದ ಮೌನದ ವ್ರತ ಮುರಿಯುವರೇ?

....(೦)....

ತಿಗರಿಯ ಪರಿಷತ್ತು ಸೋಮವಾರ ಪ್ರಾರಂಭವಾಗುವದು. ಅಂದು ಮಹಾತ್ಮರ ಮೌನದ ದಿವಸ ಅಂದೇನು ವ್ರತಭಂಗ ಮಾಡಿಕೊಳ್ಳುವಿರಾ ಎಂದು ಮಾಡಿದ ಪ್ರಶ್ನಕ್ಕೆ "ಅಂದು ಅಂಥ ಮಹತ್ವದ ರಾಜಕಾರಣವಿರುವದಿಲ್ಲ. ಮೊದಲ ದಿವಸ ಮಂತ್ರಿ ಮೊದಲಾಗಿ ಅನೇಕ ಮುಖಂಡರನ್ನು ಕಂಡುತ್ತೇನೆ. ಜೀವದ ಬಿಕ್ಕಟ್ಟಿನ ಪ್ರಸಂಗವಿರುವದಿಲ್ಲ. ನನಗೆ ಸಂಕಟ ಬಂದಾಗ ಮತ್ತು ಅನ್ಯರಿಗೆ ಸಂಕಟ ಬಂದು ನನ್ನಿಂದಲೇ ಅವರ ಪರಿಹಾರವಾಗಬೇಕೆಂದಿದ್ದಾಗ ಹ್ಯಾಯಿಸರಾಯು ಮುಂತಾದವನ್ನು ಕಾಣುವಂಥ ಕಾರ್ಯಕ್ರಮ ಗೊತ್ತಾಗಿದ್ದಾಗ ವ್ರತಭಂಗ ಮಾಡುವ ಪೂರ್ವ ವಿಚಾರದಿಂದಲೇ ಮೌನ ಹಿಡಿದ್ದೇನೆ. ಪರಿಷತ್ತು ಮುಂದೆ ಬೇಕಾದಷ್ಟು ದಿವಸ ನಡೆಯುವದು. ಕಾರಣ ವ್ರತಭಂಗ ಮಾಡುವಂಥ ಮಹತ್ವದ ಕಾರಣವುಂಟಾಗುವದಿಲ್ಲ." ಎಂಬದಾಗಿ ಮಹಾತ್ಮರು ಉತ್ತರಕೊಟ್ಟಿದ್ದಾರೆ.

ಮುಂಬಯಿ ಇಲಾಖೆಯಲ್ಲಿ ತೀರ ಹಿಂದುಳಿದ ಜಾತಿಯವರ ಶಿಕ್ಷಣ ಮೊದಲಾದ ಸುಧಾರಣೆಯ ಅಧಿಕಾರವನ್ನು ಮಿ. ಸ್ಟಾರ್ಟ ಸಾಹೇಬರಿಗೆ ಕೊಟ್ಟಿದ್ದಾರೆ.

ಗೋಗಟೆನಿಗೆ ಎಂಟು ವರ್ಷದ ಸಕ್ತ್ರಮ ಕೈದು.

—(೦)—

ಗವ್ಹರ್ನರಸಾಹೇಬರಿಗೆ ಗುಂಡು ಹಾಕಿದ ಗೋಗಟೆನಿಗೆ ಪುಣೆಯ ಜಡ್ಜರಾದ ಮಿ. ವಾಡಿಯಾ ಸಾಹೇಬರು ಎಂಟು ವರ್ಷಗಳ ಸಕ್ತ್ರಮ ಶಿಕ್ಷೆ ವಿಧಿಸಿದರು. ಈತನ ಮೇಲೆ ಸಾಹೇಬರಿಗೆ ಗುಂಡು ಹಾಕಿದನೆಂದೂ ಬೇಕಾಯದೆಶೀರ ಗುಂಡು ರಿವಾಲ್ವರ ಹತ್ತರ ಇಟ್ಟುಕೊಂಡಿದ್ದನೆಂದೂ ಎರಡು ಆರೋಪಗಳಿದ್ದವು. ಜೂರಿ ಮತ್ತು ಜೂರಿಗಳಾದ ಅಸೇಸರರು ಇವೆರಡೂ ಆರೋಪಗಳು ಸಿದ್ಧವಾಗುತ್ತವೆಂದು ಅಭಿಪ್ರಾಯಪಟ್ಟು, ಗೋಗಟೆನ ಎಳೆವಯಸ್ಸು ಮತ್ತು ಆತನ ಅಭ್ಯುದಯದ ಭಾವನೆಯನ್ನು ಲಕ್ಷಿಸಿ, ದಯದೋರಬೇಕೆಂದು ಜಡ್ಜರಿಗೆ ವಿನಂತಿ ಮಾಡಿಕೊಂಡರು. ಜಡ್ಜರು ಕೊಲೆಯ ಪ್ರಯತ್ನಕ್ಕಾಗಿ ಎಂಟು ಮತ್ತು ಶಸ್ತ್ರದ ಕಟ್ಟಳೆಗಾಗಿ ಎರಡು ವರ್ಷ ಹೀಗೆ ಶಿಕ್ಷೆಗಳನ್ನು ವಿಧಿಸಿ ಒಂದೇ ಕಾಲದಲ್ಲಿ ಎರಡೂ ಭೋಗಿಸಬೇಕೆಂದು ತೀರ್ಪಿನಲ್ಲಿ ಬರೆದಿದ್ದಾರೆ.

ಶಿಕ್ಷೆ ಹೇಳುವಾಗ ವಕೀಲ, ವರ್ತಮಾನ ಪತ್ರಗಳ ಪ್ರತಿನಿಧಿಗಳಿದ್ದರು. ಶ್ರೀ. ಸೌ|| ಕಮಲಾದೇವಿ ಚಟ್ಟೋಪಾಧ್ಯಾಯನಿಯವರೂ ಕೋರ್ಟಿಗೆ ದಯಮಾಡಿಸಿದ್ದರು. ಜ್ಯೂರಿಯು ಅಭಿಪ್ರಾಯ ಹೇಳುವಾಗ ಮತ್ತು ಜಡ್ಜರು ಶಿಕ್ಷೆ ಹೇಳುವಾಗ, ಗೋಗಟೆನ ವೃತ್ತಿಯು ಶಾಂತ ಮತ್ತು ಗಂಭೀರವಾಗಿತ್ತು.

ಶ್ರೀ. ಭಾವೆ, ಪ್ರೊಫೇಸರ ತ್ರಿವೇದಿ, ಮಿ. ಶೇಖ ರಾಜಮಹಮದ, ಮಿ. ಜಾಧವ ಮತ್ತು ಮಿ. ಪಟವರ್ಧನ ಇವರು ಜೂರಿಯಾಗಿದ್ದರು.

ಇಂಗ್ಲಂಡದ ಮಂತ್ರಿಯವರು ತಮ್ಮ ಸಂಬಳ ಕಡಿಮೆ ಮಾಡಿಕೊಂಡರು

—(೦)—

ಮಂಗಳವಾರ ದಿವಸ ಪಾರ್ಲಮೆಂಟ ಸಭೆಗೆ ಪ್ರಾರಂಭವಾಯಿತು. ಆಗ ಮುಖ್ಯ ಪ್ರಧಾನರಾದ ಮಿ. ಮ್ಯಾಕಡೋನಾಲ್ಡ ಸಾಹೇಬರು ತಮ್ಮ ಸಂಬಳದಲ್ಲಿ ೧೦೦೦ ಪೌಂಡು ಕಡಿಮೆ ಮಾಡಿಕೊಂಡಂತೆ ಜಾಹೀರ ಮಾಡಿದರು.

ಗುಜರಾಥದಲ್ಲಿ ಹಿಂದುಸ್ಥಾನೀ ಸೇವಾದಲದ ಶಾಖೆಸ್ಥಾಪನೆಯಾಗುವದು. ಶ್ರೀ. ಮೊರಾರಜಿ ದೇಸಾಯಿಯವರು ದಳದ ಅಧ್ಯಕ್ಷರಾಗುವರು.

ನೋಟೀಸು

ಬಸ್ಸಮ್ಮ ಕೋಂ ಗದಿಗೆಯ್ಯಾ ಭಾವಿಮಠ ಸಾಕೀನ ದೇವಗಿರಿ ಹಾಲಿವಸ್ತಿ ಚಿಕ್ಕನಿಂಗದಹಳ್ಳಿ ತಾಲೂಕ ಹಾವೇರಿ ಇವಳಿಗೆ

ಇವಳಿಗೆ ಸಹಿ ಮಾಡುವ ಗದಿಗೆಯ್ಯಾ ತಂದಿ ಮುಪ್ಪಯ್ಯಾ ಭಾವಿಮಠ ಸಾಕೀನ ದೇವಗಿರಿ ತಾ ಹಾವೇರಿ ಕರಜಗಿ ಈತನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ -

ನೀನು ನನ್ನ ಮದಿವೆಯ ಹೆಂಡತಿ ಇದ್ದು ನೀನು ಪ್ರಬುದ್ಧಳಾದ ಬಳಿಕ ನನ್ನ ಕೂಡ ಸಂಸಾರ ಎರಡು ವರ್ಷ ಚಾಲ್ತಿ ಮಾಡಿದಿ. ಎರಡು ವರ್ಷಗಳ ಹಿಂದೆ ನಿನ್ನ ಅಣ್ಣ ನಾಗಯ್ಯಾ ಮತ್ತು ತಾಯಿ ಗಂಗವ್ವನು ಪಂಚಮಿ ಹಬ್ಬಕ್ಕೆಂದು ಕರಿಯಲಿಕ್ಕೆ ಬಂದರು. ರೀತಿ ಪ್ರಕಾರ ನಿನ್ನ ಮೈಮೇಲೆ ನನ್ನ ಮಾಲ್ಕೀ ದಾಗೀನೆಗಳು ಅಂದರೆ -

೧ ಜೋಡು ಭಂಗಾರದ ಬಳಿ ೨ ಎಂಟು ತೊಲಿಯ ಭಂಗಾರದ ಸರಗಿ ೩ ಒಂದು ಬೆಳ್ಳಿಯ ಟೊಳ ೪ ಒಂದು ಪಟ್ಟಿ ೫ ಒಂದು ಜೋಡು ಬೆಂಡವಾಲಿ ೬ ಮುತ್ತಿನ ಮೂಗುತಿ ೭ ಗುಂಡಿ ನತ್ತಿನ ಎರಡು ತೊಲಿ ಮತ್ತು ೮ ಶೃಂಗಾರದ ಎರಡು ತೊಲಿ ಭಂಗಾರದವು ಮತ್ತು ಹರಿದಿನ ತೀರಿ ಕಳಿಸುತ್ತೇವೆಂದು ಕರಕೊಂಡು ಹೋದಿ. ದೀಪಾವಳಿ ಹಬ್ಬದ ಬಳಿಕ ಪದ್ಧತಿ ಪ್ರಕಾರ ನಾನು ಕರಿಯಲಿಕ್ಕೆ ಬಂದರೆ - ಬರಲಿಲ್ಲ. ಮುಂದೆ ಕಳಿಸುತ್ತೇವೆಂದು ನಿನ್ನ ತಾಯಿ ಮತ್ತು ಅಣ್ಣನು ಹೇಳಿದ್ದರಿಂದ ನಾನು ತಿರಿಗಿ ಹೋದೆನು. ಮುಂದೆ ನನಗೆ ಬಿಡ್ಡುವು ಆಗ ಹೇಳಿ ಕಳಿಸಿದರೂ ಬರಲಿಲ್ಲ. ಆಗ ನಿನ್ನ ದೆಸೆಯಿಂದ ಸಂಶಯ ಬಂತು. ಆದರೂ ನನಗೆ ಸಟ್ಟಿಗಾದ ಬಳಿಕ ಹೇಳಿ ಕಳಿಸಿದೆ ನೀನು ಬರಲಿಲ್ಲ. ಇದರಿಂದ ಸಂಶಯ ಬಂದು ತಪಾಸ ಮಾಡಲಾಗಿ ನಿನ್ನ ಅಣ್ಣನು ಮತ್ತು ತಾಯಿ ಸೇರಿ ನನ್ನ ದಾಗೀನೆಗಳನ್ನು ನನಗೆ ಕೊಟ್ಟು ನಿನಗೆ ಬೇಕಾದ ರೀತಿ ನಡಕೊಳ್ಳುವಂತೆ ಹತ್ತಗಡೆಯವರಿಂದ ಹೇಳಿ ಕಳಿಸಿದೆ. ಅದಕ್ಕೆ ನೀನು ಒಮ್ಮೆ ಹೆಚ್ಚು ಒಮ್ಮೆ ಸಾವಕಾಶ ಕೊಡುತ್ತೇನೆಂದು ದಿನಮ್ಮೇಕ ಮಾಡುತ್ತ ಬಂದಿ. ಅದ್ದರಿಂದ ಈ ನೋಟೀಸು ಕೊಡುವ ಭಾಗ ಬಿತ್ತು. ನೀನು ಈ ನೋಟೀಸು ಮುಟ್ಟಿದ ನಾಲ್ಕು ದಿವಸಗಳಲ್ಲಿ ನನ್ನ ಯಾವತ್ತು ದಾಗೀನೆ ನನಗೆ ಒಪ್ಪಿಸಿ ನನ್ನಿಂದ ಪಾವತಿ ಪಡಿಯಬೇಕು ಮತ್ತು ಇದೇ ನೋಟೀಸೇ ಸೋಡಪತ್ರವೆಂದೇ ತಿಳಿಯಬೇಕು. ನೀನು ನನ್ನ ಮನಿ ಬಿಟ್ಟು ಹೋದಂದಿನಿಂದ ನಿನಗೂ ನನಗೂ ಸಮ್ಮಂಧವಿದ್ದರಿಂದ ನಿನಗೆ ಸಂತತಿಯಾದರೆ ನಿನ್ನ ಹಾಗು ಆದರ ವಾರಸಾ ಹಕ್ಕು ನನ್ನ ಮೇಲೆ ಮತ್ತು ನನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ಬಿಲಕೂಲ ನಡೆಯಲಾರದು ಮತ್ತು ನಾನು ನನ್ನ ದಾಗೀನೆಗಳ ಬಾಬತು ನಿನ್ನ ಮೇಲೆ ಮತ್ತು ನಿನ್ನ ಅಣ್ಣ ಮತ್ತು ತಾಯಿಯ ಮೇಲೆ ಮಾಡಬೇಕಾದ ಕಾಯದೆಶೀರ ಇಲಾಜದ ಬಗ್ಗೆ ಹಕ್ಕುವ ಯಾವತ್ತು ಖರ್ಚಿನ ಬೋಜಾ ಮತ್ತು ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲಿರುತ್ತದೆ. ತಿಳಿಯುವದು ತಾರೀಖು ೧೧ ಸಪ್ಟಂಬರ ೧೯೩೧ನೇ ಇಸ್ವಿ

ಗದಿಗೆಯ್ಯಾ ಮುಪ್ಪಯ್ಯಾ ಭಾವಿಮಠ
ಸಾಕೀನ ದೇವಗಿರಿ

The Asian Life Assurnance Co. Ltd
Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೩೫,೦೦೦,೦೦ ಕಂತದ ಉತ್ಪನ್ನ ರೂ. ೬೦೦,೦೦೦
ವಿಮೆಯ ಹಣ ತಿರಿಗಿ ಕೊಟ್ಟದ್ದು ೧೪,೦೦,೦೦೦
ಜೆಂದಿಗಿ ೨೫,೦೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕೆ. ಹ್ವಿ. ಹುಲಸೋಗಿ, ಬಿ.ಎ.
ಕುಲಕರ್ಣಿ. ಧಾರವಾಡದ ಏಜಂಟರು ಕರ್ನಾಟಕದ ಬ್ರ್ಯಾಂಚ ಮ್ಯಾನೇಜರ
ಬಿ. ಎಚ್. ಪಾಟೀಲ ಹುಬ್ಬಳಿಯ ಏಜಂಟರು-
ಹಾವೇರಿಯ ಚೀಫ ಏಜಂಟರು. ಶ್ರೀ. ಎನ್. ಎಮ್. ದೊಡ್ಡಮಾಡ ಮತ್ತು
ಶ್ರೀ. ಬಿ. ಟಿ. ಶಿರೋಳಕರ.

ಅನುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು
ಸೌಖ್ಯದಿಂದರುವಂತೆ ಮಾಡುವ

ಒಂದೇ ಒಂದು ಉಪಾಯವು

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೦೦ ರೂ. ಗಳನ್ನ ಕೊಡುವಂಥ **ಗೋಲ್ಡನ್** (ಸುವರ್ಣ) **ಪಾಲಿಸಿಯನ್ನು** ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ ಏಶಿಯನ್ನ ಕಂಪನಿಯೊಂದೇ ಆಗಿರುತ್ತದೆ.

ನೋಟೀಸಿನ ದರಗಳು

ನಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದೂ ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ಸರಕಾರ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ. ಇಂಗ್ಲಿಷಿನ ಅವಾರಿಸಿ ಕನ್ನಡದಲ್ಲಿ ಹಾಕುವವಿದ್ದರೆ ಅದು ಆಣೆ ಡಬಲ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಜಿ ರಾಮರಾವ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಿದರು.

R. N. L. 1440.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨। ಧಾರವಾಡ ಶನಿವಾರ ತಾರೀಖು ೧೨ನೇ ಸಪ್ಟಂಬರ ೧೯೩೧ (ಸಂಚಿಕೆ ೨೦೭

ಜಾಹೀರ ನೋಟೀಸು

—(೦)—

ಸವಣೂರ ಸಂಸ್ಥಾನ ೧ನೇ ವರ್ಗ ಸಬ್ಬ ಜಜ್ಜ ಕೋರ್ಟಿನಲ್ಲಿ

—(೦)—

ಮುಕ್ಕಾಮ ಯಲ್ಲಿ

ದಿವಾಣಿ ಮೋಕದ್ದಮೆ ನಂಬರ ೭೫/೧೯೩೯

ದರಖಾಸ್ತ ನಂಬರ ೨೦/೧೯ ೧

೧- ಒಕೆಟ್ಟೆಪ್ಪಾ ಬಿನ್ನ ಚನಬಸಪ್ಪಾ ನಾರಾಯಣಪೂರ ಸಾ॥ ಸವಣೂರ | ವಾದಿ

ವಿರುದ್ಧ

೧- ಕರೀಮಶೇಟ ವ॥ ಸಕೂರಶೇಟ ಕಾರವಾಡಿ ಸಾ॥ ಸವಣೂರ ಹಾ | ಪ್ರತಿವಾದಿ

ಲಿವಸ್ತಿ ಗದಗ

ವಸೂಲೀ ರಕಮು ರೂಪಾಯಿ (೧೭೧೬-೧೦-೦)

ಇದರ ಮೂಲಕ ಪ್ರತಿವಾದಿ ಕರೀಮಶೇಟ ವ॥ ಸಕೂರಶೇಟ ಕಾರವಾಡಿ ಸಾ॥ ಸವಣೂರ ಹಾಲಿವಸ್ತಿ ಗದಗ ಇವನಿಗೆ ಹೀಗೆ ತಿಳಿಸುವದೇನಂದರೆ ಬರುತ್ತದಲ್ಲ -

ಸದ್ರಿ ದಾವೆಯಲ್ಲಿ ಆದ ಹುಕುಮನಾಮೆಯ ಅಮಲ ಬಜಾವಣೆಯಲ್ಲಿ ನೀನು ವಾದಿಗೆ ಕೋರ್ಟ ಬರಕೊಟ್ಟ ಇಸ್ತಿ ಲಿಲಾವಿಗೆ ತರಲ್ಪಟ್ಟದೆ ಸದ್ರಿ ಆಸ್ತಿಯನ್ನು ಕುರಿತು ನಿನ್ನನ್ನು ವಿಚಾರಿಸತಕ್ಕದ್ದು ಇದೇ ಕಾರಣ ಈ ಲೇಖದ ಮೂಲಕ ನಿನಗೆ ನೋಟಿಸು ಮಾಡುವದೇನಂದರೆ ನೀನು ಈ ಕೋರ್ಟಿನಲ್ಲಿ ತಾರೀಖು ೧೯ ನೇ ಮಾಹೆ ಅಕ್ಟೋಬರ ಸನ್ ೧೯೩೧ ನೇ ಇಸ್ವಿ ದಿವಸ ಪೂರ್ವಾಹ್ನದ ೧೧ ಘಂಟೆಗೆ ಹಾಜರಾಗಬೇಕು. ಮತ್ತು ಮೇಲಿನ ನಿನ್ನ ಆಸ್ತಿಯ ಸಂಬಂಧದ ನಿನ್ನ ಕಬ್ಜದಲ್ಲಿ ಯಾ ಅಧೀನದಲ್ಲಿರುವ ಯಾತಕ್ಕೂ ದಸ್ತೈವಜುಗಳನ್ನು ವ ಎಂಡನೇ ಕಾಗದಗಳನ್ನು ಹಾಜರಪಡಿಸಬೇಕು

ಈ ಹೊತ್ತು ತಾರೀಖು ೨೫ ನೇ ಆಗಸ್ಟ ಸನ್ ೧೯೩೧ ಇಸ್ವಿ ದಿವಸ ನಮ್ಮ ಸಹಿಯಿಂದಲೂ ವ ಕೋರ್ಟಿನ ಮೊಹರಿನಿಂದಲೂ ಕೊಡಲ್ಪಟ್ಟಿತು

B. H. Kulkarni

ಸಬ್ಬ ಜಜ್ಜ ಫರ್ಸ್ಟಕ್ಲಾಸ, ಸವಣೂರ

—

ನೋಟೀಸು

....(೦)....

ರಾ॥ ರಾ॥ ಯಲ್ಲಪ್ಪಾ ರಾಮಚಂದ್ರ ಕಲಾಲ ಸಾ॥ ಕಂಬ್ರಳ್ಳಿ ಮುಕ್ಕಾಂ ತಿರಹಟ್ಟಿ ಇವರಿಗೆ-

ಕೆಳಗೆ ಸಹಿ ಮಾಡಿದ ನಾನು ಈ ನೋಟೀಸು ಮೂಲಕ ತಿಳಿಸುವದೇನಂದ್ರೆ ನೀನು ನನ್ನ ಲಗ್ನದ ಗಂಡನಿದ್ದು ಹಳಗಡೆ ಅಂದ್ರೆ ೩।೪ ವರ್ಷಗಳ ಹಿಂದೆ ಆಗಾಯ್ತು ನನ್ನನ್ನು ವ ನನ್ನ ಮಕ್ಕಳನ್ನು ಬಿಟ್ಟು ಬಿಟ್ಟಿರುವಿ ನಮ್ಮ ತಾಯಿ ನನಗೆ ಕೊಟ್ಟ ದಾಗೀನುಗಳು ಚೊಕ್ಕ ಭಂಗಾರದ ಬಳೆ ಜೋಡು ಒಂದು (೧) ತೊಲಿ ೫ ದರಾ ೨೧। = ಗುಂಡಿನ ಟೀಕಿ ಒಂದು (೧) ತೊಲಿ ೨। ಅ।೬ ಈ ದಾಗಿನುಗಳು ಸಹಾ ನನ್ನನ್ನು ಹೊಡೆದು ಒಡೆದು ಹೋದಿರುವಿ ಮತ್ತು ನಾಲ್ಕು ವರ್ಷದ ಆಗಾಯ್ತು ನನ್ನ ವ ಮಕ್ಕಳ ಉಪಜೀವನದಶಿಯಿಂದಾ ಯರಡನೆಯವರಲ್ಲಿ ಮೂರುನೂರು ರೂಪಾಯಿಗಳನ್ನು ದೇಣೆ ಮಾಡಿರುವೆನು. ಸದರ ರೂಪಾಯಿಗಳನ್ನು ಮೇಲ್ಕಾಣಿಸಿದ ದಾಗೀನುಗಳನ್ನು ಕೊಟ್ಟು ಈ ನೋಟೀಸು ಮುಟ್ಟಿದ ಯಂಟು ದಿವಸದಲ್ಲಿ ಕೊಟ್ಟು ಕರಕೊಂಡು ಹೋಗಬೇಕು. ಇಲ್ಲವಾದರೆ ರೀತಿ ಪ್ರಕಾರ ನಿನ್ನ ಮೇಲೆ ಇಲಾಜ ನಡ್ಸಿ ವಸೂಲಮಾಡುವದರಲ್ಲಿ ಬರುವದು ತಿಳಿ ಸದರ ಕಾಣಿಸಿದ ಮುದ್ದತಿನೊಳಗಾಗಿ ನಾನು ಮಾಡಿದ ದೇಣೆ ವ ನನ್ನ ದಾಗೀನು ಕೊಟ್ಟು ಕರಕೊಂಡು ಹೋಗಬೇಕು. ಇಲ್ಲವಾದರೆ ಇದೇ ಸೋಡಚೀಟಿ ಅಂತಾ ತಿಳಿ ನನ್ನ ಉತ್ತ್ರ ಗಂಡನ ಮೇಲೆ ಯಾವಥರದ ಮಾಲ್ಕಿ ನಿನ್ನದು ಇರುವದಿಲ್ಲಾ ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಅದೆ. ತಾ॥ ೯-೯-೧೯೩೧ ಇಸ್ವಿ

ಈ ಯೆಡಗೈ ಹೆಬ್ಬಟ್ಟಿನ ಗುರ್ತ ಲಚಮವ್ವಾ ಕೋಂ ಯಲ್ಲಪ್ಪಾ ಕಲಾಲ ಕಂಬ್ರಳ್ಳಿ ಮು॥ ತಿರಹಟ್ಟಿ ಇವರ ಮಾಡಿದ್ದು ಅದೆ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಷ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದಮೇಲುಂಟು. ಡಿಸ್ಕೌಂಟ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮ್ಯಾನೆಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ವಿಜಯ.

ತಾರೀಖು ೧೩-೧೦-೧೯೩೧ನೇ ಇಸ್ವಿ

ಬಾದಶಹರ ಸ್ವದೇಶಾಭಿಮಾನ ಸ್ವಜನಾಭಿಮಾನವು.

ಇಂಗ್ಲಂಡದಲ್ಲಿ ಬಂಗಾರದ ಹೊಗೆ ಹಾಯುತ್ತದೆಂದು ಹೇಳುವರು. ಸುವರ್ಣ ಭೂಮಿಯೆಂದು ಅನಾದಿಯಿಂದ ಹೇಳಲ್ಪಟ್ಟ ಹಿಂದುಸ್ಥಾನದ ಸುವರ್ಣವೆಲ್ಲ ಅಲ್ಲಿಗೆ ಹೋಯಿತು. ಒಳ್ಳೇ ಹೋಗಲಿಲ್ಲ. ಅದರ ನಿತ್ಯ ಪ್ರವಾಹ ನಡೆದಿದೆ. ಹಿಂದುಸ್ಥಾನದಂತೆ ಬ್ರಿಟಿಶ ಸಾಮ್ರಾಜ್ಯದ ಎಲ್ಲಾ ಭಾಗಗಳಿಂದಲೂ ಹಣವು ಲಂಡನಕ್ಕೆ ನೀರಿನಂತೆ ಹರಿದು ಹೋಗುತ್ತಿರುವದು.

ಇಂಥ ಇಂಗ್ಲಂಡ ದೇಶಕ್ಕೆ ವ್ಯಾಪಾರ ಮಂದಿಯ ಮೂಲಕ ದ್ರವ್ಯಾಭಾವವಾಗಿರುತ್ತದೆ. ಇದನ್ನು ಪಾಯಿಗೂಡಿಸಲು- ವೆಚ್ಚ ಕಡಿಮೆಮಾಡುವರು. ತಂಬಾಕ ಕರೆ ಮುಂತಾದ ಸೊಗಸಿನ ಸೇವನೆ ಮತ್ತು ಪಾನದ ಮೇಲೆ ಹೆಚ್ಚಾಗಿ ಕರ ಕೂಡಿಸುವರು. ಫ್ರಾನ್ಸ ಮತ್ತು ಅಮೇರಿಕೆಯಲ್ಲಿ ಖರ್ಚು ಸಂಖ್ಯೆಯಿಂದ ಸಾಲ ತೆಗೆಯುವರು.

ಸಾಲ ಮತ್ತು ಕರಕ್ಕಿಂತ ವೆಚ್ಚ ಉಳಿತಾಯ ಮಾಡುವದೇ ಉತ್ತಮ ಮಾರ್ಗವು. ಇದರಿಂದ ಚಿರಸ್ಥರ ಹಿತವಾಗುವದುಂಟು. ಎಲ್ಲಾ ಖಾತೆಯವರ ಸಂಬಳ ಕಡಿಮೆ ಮಾಡುವರು. ಕಿರಕಳ ವೆಚ್ಚಗಳನ್ನು ನಿಲ್ಲಿಸುವರು. ಈ ಸಮಯದಲ್ಲಿ ಬಡವರ ಸಂಬಳ ಕೂಡ ಕಡಿಮೆಯಾಗುತಾಗ ತಾವೂ ಅದರ ಪಾಲುಗಾರರಾಗುವದು ರಾಜಧರ್ಮವಾಗುವದರಿಂದ ಬಾದಶಹರು ತಮ್ಮ ವೆಚ್ಚದಲ್ಲಿ ಎಳೂವರೀ ಲಕ್ಷವನ್ನು ಕಡಿಮೆ ಮಾಡಿದರು. ಇವರಂತೆ ಪ್ರಿನ್ಸ ಆಫ ವೆಲ್ಸರು ಒಂದೂವರೀ ಲಕ್ಷವನ್ನು ಕಡಿಮೆ ಮಾಡಿಕೊಂಡಿದ್ದಾರೆ. ಬಾದಶಹರಿಗೆ ಪಾರ್ಲಮೆಂಟ ಸಭೆಯಿಂದ ಒಂದು ಕೋಟಿ ಮತ್ತು ಲ್ಯಾಂಕೆಸ್ಟರದ ದೇಸಗತಿಯಿಂದ ೯ ಲಕ್ಷ ರೂಪಾಯಿಯ ಪ್ರಾಪ್ತಿಯುಂಟು. ಯುವರಾಜರಿಗೆ ಕಾರ್ನವಾಲ ಜಂಗಲಿಯಿಂದಲೇ ೬೦ ಸಾವಿರ ಪೌಂಡಿನ ವಸೂಲ ಬರುತ್ತದೆ.

ಮಹಾಯುದ್ಧದ ವೇಳೆಯಲ್ಲಿಯೂ ಪ್ರಜೆರು ಆ ಕಷ್ಟಗಳಿಂದ... ಬಾದಶಹರು ಅವುಕನದಗಾಲದಲ್ಲಿ ಸೇವಿಸಬೇಕಾಗಿದ್ದ ಮದ್ಯಬಿಟ್ಟು, ಅದರ ಬದಲಾಗಿ ನೀರು ಕುಡಿಯುವ ಉಪಕ್ರಮ ಮಾಡಿ, ಪ್ರಜರಿಗೆ ಮೇಲ್ಪಂಕ್ತಿ ಹಾಕಿಕೊಟ್ಟರು. ಅದೇ ಪ್ರಕಾರ ತಾವು, ಯುವರಾಜರು ಮಾತ್ರರಲ್ಲದೆ, ರಾಜಪಿಂಡೆಯರಾದ ಬೇರೆಯವರೂ ವೆಚ್ಚ ಕಡಿಮೆ ಮಾಡಿಕೊಳ್ಳುವಂತೆ ಜಾಹೀರ ಮಾಡಿದ್ದಾರೆ. ಇವರ ಅನುಕರಣವನ್ನೇ ಮುಖ್ಯ ಮಂತ್ರಿಯಾದ ಮಿ. ಮ್ಯಾಕಡೋನಾಲ್ಡ ಸಾಹೇಬರು ಮಾಡಿದ್ದು ಎಲ್ಲಾ ವರ್ಗದ ಸಂಬಳಗಾರರು ಸಂಬಳ ಕಡಿಮೆಮಾಡಿಕೊಳ್ಳಲು ಸಿದ್ಧರಾಗಿದ್ದಾರೆ. ಬಾದಶಹರು ಮೊದಲು ಮಾಡಿಕೊಂಡು ಎಲ್ಲಾ ಪ್ರಜರು ತಂತಮ್ಮ ಪರಿಯಾಗಿ ವೆಚ್ಚ ಕಡಿಮೆಮಾಡಿ, ದೇಶದ ಮೇಲೆ ಒಂದ ಸಂಕಟವನ್ನು ದೂರ ಮಾಡಲೆತ್ನಿಸಿರುವದು ಬಹುವಾಗಿ ಶ್ಲಾಘನೀಯವಾಗಿರುತ್ತದೆಂದು ಯಾರಾದರೂ ಹೇಳುವರು.

ಹಿಂದುಸ್ಥಾನದಲ್ಲಿಯ ವೆಚ್ಚ ಉಳಿತಾಯದ ಭಾಗ ನೋಡಿರಿ.

—(೦)—

ಈ ದೇಶದಲ್ಲಿ ನೂರಕ್ಕೆ ಹತ್ತರಂತೆ ನಿಮ್ಮ ನಿಮ್ಮ ಖಾತೆಯ ಸಂಬಳವನ್ನು ಕಡಿಮೆ ಮಾಡಬೇಕಾದೀತೆಂದು ಹೋದ ಎಪ್ರಿಲದ ಪ್ರಾರಂಭದಲ್ಲಿಯೇ ಹಿಂದುಸ್ಥಾನ ಸರಕಾರದವರು ಎಲ್ಲಾ ಖಾತೆಗಳಿಗೆ ತಿಳಿಸಿದರು. ಹತ್ತರಿಂದ ಬಗೀ ಹರಿಯುವದಿಲ್ಲ. ಇನ್ನಷ್ಟು ಕತ್ರಿ ಹಾಕಬೇಕಾಗುತ್ತದೆಂದು ಪುನಃ ಪ್ರಸಿದ್ಧ ಮಾಡಿದ್ದಾರೆ. ಬರೇ ಕತ್ರಿಹಾಕುವ ಮಾತು ನಡೆದುದಲ್ಲದೆ, ಯಾರೆಷ್ಟು ಸಂಬಳ ಕಡಿಮೆ ಮಾಡಿಕೊಂಡರೆಂಬದನ್ನು ಒಬ್ಬರೂ ಪ್ರಸಿದ್ಧ ಮಾಡಿಲ್ಲ. ದಿವಾನರ ಸಂಬಳ ಮೂರು ಸಾವಿರ ಮಾಡಬೇಕೆಂದು ನಾಗಪೂರದ ಕೌನ್ಸಿಲದಲ್ಲಿ ಠರಾವು ಬಂತು. ಆದರೆ ಅದು ಪಾಸಾಗಲೇ ಇಲ್ಲ. ದಿವಾನರೊಬ್ಬರಿಂದ ಬೇರೆ ದೊಡ್ಡ ದೊಡ್ಡ ಕಾಮದಾರರು ತಮ್ಮ ಸಂಬಳ ಕಡಿಮೆ ಮಾಡಿಕೊಳ್ಳಲಿಕ್ಕೆ ಒಪ್ಪುವದಿಲ್ಲೆಂದು ಧ್ವನಿತವಾದರೆ- ಸೋಜಿಗವಲ್ಲ.

ಹಿಂದುಸ್ಥಾನದಲ್ಲಿ ವಿಲಾಯತಿಯಿಂದ ಬರುವಂಥ ಸಿವ್ಹಿಲ ಸರ್ವಂಟ ಮೊದಲಾದ ಕಾಮದಾರರ ಸಂಬಳದಲ್ಲಿ ಕೈ ಹಾಕಲಿಕ್ಕೆ ಕಾಯದೆಯಿಂದಲೇ ಬರುವದಿಲ್ಲ. ಅವರು ಅಭೇದ್ಯರಾಗಿದ್ದಾರೆ. ಇಂಥವರಿಗೆ ಮಾರ್ಗ ದರ್ಶಕರಾಗಿ ಲಾರ್ಡ ವಿಲಿಂಗಡನ್ನ ಸಾಹೇಬರೇ ಮೊದಲ್ಗೊಂಡು ದೊಡ್ಡ ದೊಡ್ಡ ಸಾಹೇಬರು ತಮ್ಮ ಸಂಬಳ ಕಡಿಮೆ ಮಾಡಿಕೊಂಡದ್ದನ್ನು ಆದಷ್ಟು ಬೇಗನೆ ಜಾಹೀರ ಮಾಡಬೇಕಲ್ಲವೇ! ಲಾರ್ಡ ವಿಲಿಂಗಡನ್ನಸಾಹೇಬರು ಈ ದೇಶದಲ್ಲಿ ಹತ್ತುಯಿಸರಾಯರೆಂದು ಬಾದಶಹರ ಪ್ರತಿನಿಧಿಯಾಗಿದ್ದಾರೆ ಬಾದಶಹರು ಯಾವ ಯಾವ ಕೆಲಗಳನ್ನು ಮಾಡತೊಡಗಿದರೋ ಆ ಎಲ್ಲ ಕೆಲಸಗಳನ್ನು ಮಾಡುವಂಥ ಕುಲ್ ಮುಖ್ಯಾಧಿಕಾರರಾಗಿದ್ದಾರೆ. ಅಭೇದ್ಯ ಮತ್ತು ಅಚ್ಯುತರೆಂದು ತಿಳಿಕೊಂಡ ಸಿವ್ಹಿಲ ಸರ್ವಂಟರ ಕಲಿಯೊಳಗಿನ ಮುದ್ದು ಹೋಗುವಂತೆ ಅವರ ಮಾರ್ಗದರ್ಶಕರಾಗಿ ಲಾರ್ಡ ವಿಲಿಂಗಡನ್ನಸಾಹೇಬರು ಕರ್ತವ್ಯ ಜಾಗ್ರತರಾಗುವದು ಅವಶ್ಯವಾಗುತ್ತದೆ.

ರಾಜದ್ರೋಹಕ್ಕಾಗಿ ಸ್ವಾಮಿ ಗೋವಿಂದರ ದಸ್ತಗಿರಿಯು

—(೦)—

ಸಿಂಧದ ಸುಪ್ರಸಿದ್ಧ ಕಾಂಗ್ರೆಸ ಕಾರ್ಯಕರ್ತರಾದ, ಹಿಂದಿನ ಎಲ್ಲ ಚಳವಳಿಗಳಲ್ಲಿ ತುರಂಗವಾಸಿಯಾಗಿದ್ದ ಸ್ವಾಮಿ ಗೋವಿಂದನಂದರನ್ನು ಕರಾಚಿಯಲ್ಲಿ ರಾಜದ್ರೋಹದ ಆರೋಪದಿಂದ ದಸ್ತಗಿರ ಮಾಡಿದ್ದಾರೆ ... ಗಾಂಧಿ- ಆಯರ್ವಿನ್ನ ಒಡಂಬಡಿಕೆಯನ್ನು ಭಂಗಪಡಿಸುವಂತಹದಾಗಿದೆಂದು ಸ್ವಾಮಿಗಳು ಸ್ಪಷ್ಟವಾಗಿ ಸರಕಾರದ ಮೇಲೆ ದೂಷಣೆ ಹೊರಿಸಿದ್ದಾರೆ ಎಕೆಯಾಗಲಿ, ಜನರು ಅಹಿಂಸಾವಾದಿಗಳಾಗಿ, ಕಾಂಗ್ರೆಸದ ಆಜ್ಞೆಯಂತೆ ನಡೆದು, ಪರದೇಶೀ ಅರಿವೆಗೆ ಬಹಿಷ್ಕಾರ ಹಾಕಬೇಕೆಂದು ಸ್ವಾಮಿಗಳವರು ಸಂದೇಶ ಹೇಳಿದ್ದಾರೆ

ಗವರ್ನರಸಾಹೇಬರಿಗೆ ಮಾನಪತ್ರ ಕೊಡಬೇಡಿರಿ.

—(೦)—

ನಾಮದಾರ ಗವರ್ನರಸಾಹೇಬರು ಅಹಮದನಗರಕ್ಕೆ ಹೋಗತಕ್ಕವರಿದ್ದರು. ಸಾಹೇಬರಿಗೆ ಮಾನಪತ್ರ ಕೊಡಬೇಕೆಂದು ಮ್ಯುನಿಸಿಪಾಲಿಟಿಯವರು ಗೊತ್ತುವಳಿ ಮಾಡಿದರು. ಸಾಹೇಬರಿಗೆ ಮಾನಪತ್ರ ಕೊಡಬಾರದೆಂದು ಹತ್ತು ಸಾವಿರ ಜನರ ಪ್ರಚಂಡ ಸಭೆ ಕೂಡಿಸಿ, ಠರಾವು ಮಾಡಿ, ಅದರ ನಕಲನ್ನು ಮ್ಯುನಿಸಿಪಾಲಿಟಿಗೆ ಕಳಿಸಿದರು. ಈ ಸಭೆಗೆ ಬಂದವರು ಊರ ಮೇಲೆ ಊಟ, ನೀರು ಮೇಲೆ ಚಲ್ಲಾಟವೆಂಬವರಿದ್ದಿಲ್ಲ. ಹೊರಟರೇ ಹೆಚ್ಚಾಗಿದ್ದರು. ಇವರ ಠರಾವಿನ ಕೂಡ ಈಗ ೧೩ ಜನ ಮೆಂಬರರು ಮಾನಪತ್ರದ ವಿಷಯವನ್ನು ಪುನಃ ವಿಚಾರಿಸಬೇಕೆಂದು ರಿಕ್ವಿಜೇಶನ ಕಳಿಸಿದ್ದಾರೆ.

ಗವರ್ನರಸಾಹೇಬರಿಗೆ ಕೆಮ್ಮಿನ ಜಡ್ಡಿದ್ದರಿಂದ, ಡಾಕ್ಟರರ ಹೇಳಿಕೆಯ ಮೇರೆಗೆ ಪ್ರಯಾಣವನ್ನು ನಿಲ್ಲಿಸಿದರೆಂದು ಈಗ ಬಂದ ಸುದ್ದಿಯಾಗಿದೆ.

ಎರಡೇ ತಾಸಿನ ನಾಟಕ

....(೦)....

೩೦-೪೦ ವರ್ಷಗಳ ಹಿಂದೆ ಭಾಗವತರ ಆಟದ ತಿ ಬೆಳ್ಳ ಬೆಳಗೂ ರಾಜಾಧಿರಾಜ ರಾವಣ ಮಹಾರಾಜರ ನಾಟಕ ಪ್ರಯೋಗಗಳು ನಡೆಯುತ್ತಿದ್ದವು ಬಂದು ಹೊಡೆಯುವದಕ್ಕೆ ಪ್ರಯೋಗಗಳು ನಡುಗಿಯಲೇ ಬೇಕೆಂದು ಸರಕಾರದವರು ಕಾಯದೆ ಮಾಡಿದ್ದರಿಂದ, ಪ್ರೇಕ್ಷಕರು ಬೆಳ್ಳ ಬೆಳಗೂ ನಿದ್ದೆ ಕಟ್ಟಿ ಪ್ರಕೃತಿ ಕೆಡಿಸಿಕೊಳ್ಳುವದು ಹೋಯಿತು. ವಿಲಾಯತಿಯಲ್ಲಿ ಮೂರೇ ತಾಸು ಆಡುವರು. ಮುಂಬಯಿ, ಪುಣೆಯಂಥ ಪಟ್ಟಣಗಳಲ್ಲಿ ಶಾಕುಂತಲ, ಸುಭದ್ರದಂಥ ಹಿಂದಿನ ಆಖ್ಯಾನಗಳದ್ದರೆ ನಾಲ್ಕು ತಾಸು ಆಡುವರು. ಈಗ ಮುಂಬಯಿಯಲ್ಲಿ ಎರಡೇ ತಾಸಿನಲ್ಲಿ ಆಟ ಮುಗಿಸುವ ಕಂಪನಿ ಹೊರಟಿದೆ. ಅದರ ಮೊದಲನೆಯ ಪ್ರಯೋಗ "ಲಗ್ನ ಅಥವಾ ವಿಘ್ನ" ಎಂದುಂಟು

ಅಂಜುವವನ ಮುಂದೆ ಮೂರ್ತಿಮಂತ ಬ್ರಹ್ಮರಾಕ್ಷಸ

—(೦)—

ಒಬ್ಬ ಸಾಹೇಬನು ಒಬ್ಬ ಸಾಹೇಬನನ್ನೇ ಗುಂಡು ಹಾಕಿ ಕೊಂದನು

—(೦)—

ಭೂಸಾವಳದ ಹತ್ತರ ಹೋಗುತ್ತಿದ್ದ ಉಗಿಬಂಡಿಯಲ್ಲಿ ರಾತ್ರಿ ಮಲಗಿದಾಗ ಗುಂಡು ಹಾಕಿಸಿಕೊಂಡು ಜೀವದಿಂದ ಪಾರಾದ ಪೇಶಾವರದ ಲೆಫ್ಟನೆಂಟ ಸೀಹ್ಯಾಮಸಾಹೇಬರು ಲಾಹೋರಿಗೆ ಹೋಗುತ್ತಿದ್ದಾಗ ಸಂಹಾನಪೂರ ಸ್ಟೇಶನದಲ್ಲಿ ಲಾಹೋರಿನ ಸಿವ್ಹಿಲ ಮತ್ತು ಮಿಲಿಟರಿ ಗ್ಯಾಝೆಟದ ಉಪಸಂಪಾದಕರ ಚಿರಂಜೀವನು ಇವರ ಫಸ್ಟ ಕ್ಲಾಸ ಡಬ್ಬಿಯಲ್ಲಿ ಹೊಕ್ಕನು. ಆಗ ಕತ್ತಲೆ ಹರಿಯುವಂಥ ಬೆಳಗಿನ ಸಮಯ. ತಮ್ಮನ್ನು ಕೊಲ್ಲಲಿಕ್ಕೇ ಯಾವನೋ ಬಂದನೆಂದು ಸಾಹೇಬರು ಅಂಜಿಕೊಂಡು, ರಿವ್ಹಾಲ್ವರ ತೆಗೆದವರೇ- ಹುಡುಗನ ಮೇಲೆ ಮೂರು ಸಾರೆ ಗುಂಡು ಹಾಕಿದನು. ಹುಡುಗನು ಮೊದಲನೇ ಗುಂಡಿಗೇ ಸತ್ತುಬಿದ್ದನು.

ಪಂಜಾಬದ ಗವ್ಹರ್ನರಸಾಹೇಬರ ಮೇಲೆ ಗುಂಡು ಹಾಕಿದ ಮೂವರಿಗೆ ಗಲ್ಲು.

—(೦)—

ಪಂಜಾಬ ಗವ್ಹರ್ನರ ಸಾಹೇಬರ ಮೇಲೆ ಗುಂಡು ಹಾಕಿ ಮತ್ತು ಹಾಕುವ ಮಸಲತ್ತಿನಲ್ಲಿದ್ದ ದುರ್ಗಾದಾಸ, ರಣಧೀರಸಿಂಗ ಮತ್ತು ಚಮನಲಾಲ ಇವರಿಗೆ ಲಾಹೋರ ಸೆಶನ್ಸ ಕೋರ್ಟಿನಲ್ಲಿ ಗಲ್ಲಿನ ಶಿಕ್ಷೆಯಾಯಿತು.

ಶಿಕ್ಷೆ ವಿಧಿಸಿದ ಚಮತ್ಕಾರ

....(೦)....

ಜಡ್ಜಸಾಹೇಬರು ಕೋರ್ಟಿನಲ್ಲಿ ಶಿಕ್ಷೆ ಹೇಳಲಿಲ್ಲ. ತೀರ್ಪು ಕೇಳುವದಕ್ಕಾಗಿ ಅನೇಕರು ಬಂದಿದ್ದರು. ಸಾಹೇಬರು ಪೋಲೀಸಸಾಹೇಬರೊಂದಿಗೆ ಹಿತ್ತಲಬಾಗಿಲ ತೆಗೆಸಿ, ಪೋಲಿಸಸಾಹೇಬ ಮತ್ತು ಒಬ್ಬ ಕಾರಕೂನನನ್ನು ಮೋಟಾರಿನಲ್ಲಿ ಕೂಡಿಸಿಕೊಂಡು ತುರಂಗಕ್ಕೆ ಹೋಗಿ ಅಲ್ಲಿ ಆರೋಪಿಗಳಿಗೆ ಶಿಕ್ಷೆಯ ಠರಾವು ಹೇಳಿ, ಪೋಲಿಸಸಾಹೇಬರನ್ನು ಅಲ್ಲೇ ಬಿಟ್ಟು, ಮತ್ತೊಂದು ಬಾಗಿಲದಿಂದ ಬಂಗ್ಲೆಕ್ಕೆ ಹೊರಟು ಹೋದರು,

---

ಪೋಸ್ಟಿನ ರಜಿಸ್ಟರದ ಹಾಸಿಲು ಒಂದಾಣೆ ಹೆಚ್ಚಿತು.

....(೦)....

ಅಕ್ಟೋಬರ ಒಂದನೆಯ ತಾರೀಖಿನಿಂದ ಪೋಸ್ಟ ಖಾತೆಯಲ್ಲಿ ಒಳೇ ರಜಿಸ್ಟರ ಮಾಡುವ ಪತ್ರಗಳ ಹಾಸಿಲು ಮೂರಾಣೆ ಮಾಡುವರು ತಿರುಗಿ ಪಾವತಿ ಬೇಕಾದರೆ, ನಾಲ್ಕಾಣೆ ಬೀಳುವದು. ಈಗ ಎರಡಾಣೆ ಮೂರಾಣೆ ಇರುತ್ತದೆ.

ವಿವಿಧ ವರ್ತಮಾನಗಳು

....(೦)....

ಮಹಾತ್ಮರು ಇಂದು ಲಂಡನ ತಲ್ಪುವರು ಇವರ ಸ್ವಾಗತಕ್ಕಾಗಿ ಪ್ರತಿಷ್ಠಿತರಾದ ೧೪೦೦ ಜನರು ಸೇರುವರು. ಮಿ. ಚರ್ಚಹಿಲ್ಲಸಾಹೇಬರೂ ಬರುವರು.

ಬೆಳಗಾವಮಾನ್ಯರ ಅಳಿಯಂದಿರಾದ ಶ್ರೀ. ಕೇತಕರ ವಕೀಲರು ನಾಸಿಕದಲ್ಲಿ ಉಸುರುಗಟ್ಟಿ ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ಇದೇನು ನಿಮ್ಮಪ್ಪನ ದೇಶವೇ ಎಂಬ ಹೆಸರಿನದೊಂದು ಪುಸ್ತಕವು ಸುರತದಲ್ಲಿ ಪ್ರಸಿದ್ಧವಾಯಿತು. ಸರಕಾರದವರು ಇದನ್ನು ಜಪ್ತ ಮಾಡಿದಂತೆ ಜಾಹೀರ ನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

ಅಹಮದಾಬಾದಿನಲ್ಲಿ ಕಾಂಗ್ರೆಸದ ವರ್ಕಿಂಗ ಕಮೀಟಿ ಸೇರಿದೆ. ಕಮೀಟಿಗಾಗಿ ಡಾಕ್ಟರ ಹರ್ಡೀಕರ, ಶ್ರೀ. ಪಟ್ಟಾಭಿಸೀತಾರಾಮಯ್ಯ, ಮಿ॥ ಅಬ ಸ ತಯ್ಯಬಜಿ ಮತ್ತು ಶ್ರೀ. ಮಣಿಲಾಲ ಕೋಠಾರಿಯವರನ್ನು ಸ್ಪೆಶಲ್ಲಾಗಿ ಕರಸಿಕೊಂಡಿದ್ದಾರೆ.

ಧಾರವಾಡದಲ್ಲಿ ಅದ್ಭುತ ಮಳೆ

—(೦)—

ಹೋದ ಬುಧವಾರ ಸಾಯಂಕಾಲದಲ್ಲಿ ಈ ಊರಲ್ಲಿ ಕಳೆದ ಹತ್ತೆಂಟು ವರ್ಷಗಳಲ್ಲಾಗದಂಥ ಅದ್ಭುತ ಮಳೆಯಾಯಿತು. ಮೃಗ ಪಂಚಕವು ಮಘಾ ಪಂಚಕಕ್ಕೆ ಚಾರ್ಜ ಕೊಟ್ಟದ್ದೊಂದೇ ತಡ ಹೊಸ ಮಳೆಯು ತನ್ನ ಎಲ್ಲ ಬಿರುದಾವಳಿಗಳಿಂದ ಪ್ರಕಟವಾಯಿತು ಸಾಯಂಕಾಲದ ತನಕ ತಸವಿಸಿಯಾಗುವಂಥ ಬಿಸಿಲು ಕಾಯ್ದಿತು- ಪೂರ್ವ ಮತ್ತು ಉತ್ತರ ದಿಕ್ಕಿನಲ್ಲಿ ಭಯಂಕರ ಮೋಡವೇರಿಬಂತು. ದೀಪ ಹಚ್ಚುವ ಸಮಯ ಬಿರುಗಾಳಿ ಬೀಸಹತ್ತಿತು. ಕೂಡಲೆ ದೊಡ್ಡ ಮಳೆಗೇ ಪ್ರಾರಂಭವಾಯಿತು, ಒಂದು ತಾಸು ಏಳು ಮಿನಿಟಿನ ತನಕ ಹನಿಯು ಕಡಿಯಲಿಲ್ಲ. ಊರೊಳಗಿನ ಚಿಕ್ಕ ದೊಡ್ಡ ಕಾಲವೆಗಳು ತುಂಬಿ, ಬೀದಿಗಳಲ್ಲಿ ಗೇಣೆತ್ತರ ನೀರು ನಿಂತಿತು. ವಿಜಯ ಮುದ್ರಾಲಯದ ಮುಂದಿನ ವಿಶಾಲವಾದ ಕಟ್ಟೆಯಲ್ಲಿ ಹಾಯುವದಾಗಂಡಾಂತರವಾಯಿತು. ಹಾಲಗೇರಿಗೆ ಬಂದು ಬೀಳುತ್ತಿದ್ದ ನೀರಿನ ನೋಟವು ಧಬಧಬೆಯಂತಿತ್ತು. ಮೋಟಾರಗಳೂ ನೀರಿನ ಸೆಳವಿಗೆ ಬಿದ್ದು ಆಲಿವೆ ಅಂತವು. ದೋಲರ ಇಂಜನು ತರಿಸಿ, ಅವನ್ನು ಮೇಲಕ್ಕೆ ತೆಗೆಸಿದರು. ಕಳೆದೆರಡು ತಿಂಗಳಿಂದ ಈ ಊರಲ್ಲಿ ಮಳೆಯು ದಿನಾಲು ಬಿಟ್ಟೂ ಬಿಡದೆಯಾಗಿ, ಮನೆಗಳು ತೊಯ್ದು ಹೋಗಿದ್ದವು. ಮೊನ್ನಿನ ಮಳೆಯಿಂದ ಅನೇಕ ಮನೆಗಳ ಗೋಡೆಗಳು ಧಾಧಕ್ಕನೆ ಬಿದ್ದವು. ಎಷ್ಟೋ ಮನೆಗಳಲ್ಲಿ ಸೋರಿ, ಜನರು ರಾತ್ರಿಯ ಊಟ ಕಾಣಲಿಲ್ಲ.

ಕಾಂಗ್ರೆಸ ಕಮೀಟಿಯಲ್ಲಿ ಜಗನ್ನಾಥದಲ್ಲಿ ಸೇರಬೇಕಾದ ಕಾಂಗ್ರೆಸಕ್ಕೆ ಅಧ್ಯಕ್ಷರನ್ನಾರಿಸುವ ವಿಚಾರವಾಗತಕ್ಕದ್ದಿತ್ತು. ವರ್ತಮಾನ ರಾಜಕೀಯ ಪರಿಸ್ಥಿತಿಯು ಅಸ್ಥಿರವಾಗಿರುವ ಮೂಲಕ ಅಧ್ಯಕ್ಷರ ಚುನಾವಣೆಯನ್ನು ನವ್ಹಂಬರ ಡಿಸೆಂಬರದ ತನಕ ಮುಂದೆ ಹಾಕಿದರು.

ಅಲಹಾಬಾದ ಇಲಾಖೆಯಲ್ಲಿ ಸರಕಾರದವರು ಗಾಂಧಿ- ಆಯರ್ವಿನ ಒಪ್ಪಂದವನ್ನು ಹೇಗೆ ಮುರಿದಿರುತ್ತಾರೆಂಬದಾಗಿ ವಿವರಿಸಿದ ಹಣವನಾಯಣದಂಥ ಒಂದು ಯಾದಿಯನ್ನು ಪಂಡಿತ ಜವಾಹರಲಾಲರು ಬರೆದು ಕಾಂಗ್ರೆಸ ಕಮೀಟಿಗೆ ಒಪ್ಪಿಸಿದ್ದಾರೆ.

ಧಾರವಾಡ

ಇಂದು ಪ್ರಾತಃಕಾಲ ೭-೩೦ರಿಂದ ೧೨ ಮತ್ತು ೧-೩೦ರಿಂದ ೬ ರ ತನಕ ಮ್ಯುನಿಸಿಪಲ ಚುನಾವಣೆಯು ನಡೆಯುವದು.

ಸ್ಥಾನದಕ್ಷದ ರಾಜೀನಾಮೆಯು ಮೇಲೆ ಮತ್ತೊಬ್ಬರನ್ನು ಆರಿಸುವದು

೧೪ ಅಧ್ಯಕ್ಷರ ಅಪ್ಪಣೆಯು ಮೇರೆಗೆ ಇನ್ನಿತರ ವಿಷಯುಗಳು.

ಜಿ. ಕಾ. ಕಚೇರಿ ಹಾವೇರಿ. ತಾ೩೦-೯-೧೯೧೩ — ಕಮ್ಯು ಹಳ್ಳಿಕೇರಿ ಗುದ್ಲೆಪ್ಪನವರು ಜಪಟ ವೆಂಕಟರಾಯರು

ಪೈಸೋಲ್ಲಿ ಹೋದ ವರ್ಷ ರೆಸಿಡೆಂಟರಾಗಿದ್ದ ಮೆ. ಮಿಯೂಸ್ಸಾಹೇಬರು ವಾಯುವ್ಯಸರಹದ್ದಿನಲ್ಲಿ ಚೀಫ ಕಮೀಶನರರಾಗಿದ್ದರು. ಇವರು ಸಾಯಂಕಾಲದಲ್ಲಿ ಹವೆ ತಕ್ಕೊಳ್ಳಲಿಕ್ಕೆ ಹೋದಾಗ, ಗುದ್ದಿದ ಕುದರಿಯುಲ್ಲಿ ಕಾಲು ಜಾರಿ, ಕೊಳ್ಳದಲ್ಲಿ ಬಿದ್ದು, ಸತ್ತೇ ಹೋದರು. ಗಂಡನು ಉರುಳುತ್ತ ಸಾಯುವದನ್ನು ಹೆಂಡತಿಯು ಕಣ್ಣಾರೆ ನೋಡುತ್ತಿದ್ದಳು.

ನೋಟೀಸು

ರಾ|| ರಾ|| ಬಸನಗೌಡಾ ಸಿದ್ದನಗೌಡಾ ಜಟ್ಟಿಗೌಡ್ರ ಸಾ|| ಶಿವ್ಯಾಪೂರ ತಾ|| ಧಾರವಾಡ ಇವನಿಗೆ

ಕೆಳಗೆ ಸಹಿ ಮಾಡುವವಳು ಈ ನೋಟಿಸಿನಿಂದ ನಿನಗೆ ತಿಳಿಸುವದೇನೆಂದರೆ - ನೀನು ನನ್ನ ಮದುವೆಯ ಗಂಡನಿದ್ದು ನಾನು ಪ್ರಾಯಕ್ಕೆ ಬಂದನಂತರ ೭-೮ ವರ್ಷ ಚಲೋ ರೀತಿ ಬಾಳ್ವೆ ಮಾಡಲಾಗಿ ನಿನ್ನಿಂದ ಒಬ್ಬ ಹುಡುಗನನ್ನು ಹಡೆದ ಮೇಲೆ ದುರಾಚಾರಕ್ಕೆ ಬಿದ್ದು ಮತ್ತು ಜನರ ಥೂಲತಾಪಿಯಿಂದ ನನ್ನ ಮ್ಯಾನೇಲಿಸ ದಾಗಿನೆ ಯಾವತ್ತು ಕಸ್ಕೊಂಡದ್ದಲ್ಲದೆ ಹುಡುಗನನ್ನು ಕಸಕೊಂಡು ಹೊರಗೆ ಹಾಕಿ ಎರಡು ಮೂರು ವರ್ಷವಾಯಿತು ಕೊಟ್ಟಿಯ ನಿಪ್ಪ ೩೦೦ ರೂಪಾಯಿ ದೇಣೇ ಕೊಟ್ಟದ್ದೇನಿ ದೇಣೇದ ತಗಾದಿ ಬಹಳೇ ಆದೆ ಕಾರಣ ನೋಟಿಸು ಕೊಡುವ ಭಾಗ ಬಿತ್ತು. ನೀನು ಈ ನೋಟಿಸು ಮುಟ್ಟಿದ ೮ ದಿವಸಗಳಲ್ಲಿ ಬಂದು ದೇಣೇ ತೀರಿಸಿ ನನ್ನನ್ನು ಕರಕೊಂಡು ಹೋಗಿ ಚನ್ನಾಗಿ ಬಾಳ್ವೆ ಮಾಡು ಇಲ್ಲದಿದ್ದರೆ ಬೇರೆ ಒಬ್ಬ ಉದ್ಕಿ ಗಂಡನನ್ನು ಮಾಡಿಕೊಳ್ಳುತ್ತೇನೆ ನಂತರ ನನ್ನ ಮೇಲೆ ಅಗರ ನನ್ನ ವುದ್ಕಿ ಗಂಡನ ಮೇಲೆ ನಿನ್ನ ಯಾವ ತರದ ಇಲಾಜ ನಡೆಯಲಾರದು ಇದೇ ನೋಟಿಸಿನ ಅಂತಾ ತಿಳಿಯಬೇಕು ಈ ನೋಟಿಸಿನ ಖರ್ಚ ನಿನ್ನ ತಲೆಯ ಮೇಲಿದೆ

ಈ ಎಡಗೈ ಹೆಬ್ಬೆಟ್ಟಿನ ಗುರ್ತ ಫಕೀರವ್ವ.. ಕೋಂ ಬಸನಗೌಡಾ ಜಟ್ಟಿಗೌಡ್ರ ಇರೋ ಮು ಆ ?

ವಿಜಯ ಪುಸ್ತಕಾಲಯ ಧಾರವಾಡ

ವಿಜಯ ಪುಸ್ತಕಾಲಯದಲ್ಲಿ ಮಾರಲಿಕ್ಕೆ ದೊರೆಯುವ ಪುಸ್ತಕಗಳ ಪಟ್ಟಿಯು.

" ಈ ಕೆಳಗೆ ಬರೆದ ೪೦ ಪುಸ್ತಕಗಳು ಮುಂಬಯಿ ವಿದ್ಯಾಖಾತೆಯುವರಿಂದ ವಾಚನಾಲಯಗಳನ್ನು ಕೆಲವು ಪಠ್ಯಪುಸ್ತಕವಾಗಿಯೂ ಮಂಜೂರಾಗಿವೆ.

೧ ಶಬ್ದಾನುಶಾಸನ	೪	ರೂ.
೨ ರಘುವಂಶ ೧ ರಿಂದ ೧೯ ಸ್ವರ್ಗಪೂರ್ಣ	೨	,,
೩ ಶ್ರೀ ವಿದ್ಯಾರಣ್ಯಸ್ವಾಮಿಗಳ ಚರಿತ್ರೆ	೧	,,
೪ ಪಂಡಿತ ಈಶರಚಂದ್ರ ವಿದ್ಯಾಸಾಗರ ಚರಿತ್ರೆ	೧	,,
೫ ರಾಮಾಶ್ವಮೇಧಸಾರ ಸಂಗ್ರಹ	೧	,,
೬ ...ಸಿಂಹನ ಪಂಚತಂತ್ರ ಸಾರ	೧	,,
೭ ಉತ್ತರರಾಮ ಚರಿತ್ರೆ	೧೨	ಆಣೆ
೮ ರಾಣಾರಾಜಸಿಂಹ	೧೨	,,
೯ ಶ್ರೇಯಃಸಾಧನ	೧೨	,,
೧೦ ಪಾರ್ವತೀ ಪರಿಣಯ ನಾಟಕ	೧೨	,,
೧೧ ಬಾಣಕಾದಂಬರಿ	೧೦	,,
೧೨ ಸತ್ಕಥಾ ಕುಸುಮ ಮಂಜರಿ (IV)	೧೦	,,
೧೩ ಪ್ರೇಮಮಂದಿರ	೮	,,
೧೪ ಯಯಾತಿ ನಾಟಕ	೮	,,
೧೫ ಮಾನಸಶಾಸ್ತ್ರ	೮	,,
೧೬ ಗೃಹವ್ಯವಸ್ಥೆ	೮	,,
೧೭ ಮೊಹೀ... ನಡಾವಳಿ	೮	,,
೧೮ ಸತ್ಯರಾಜಾ ಪೂರ್ವದೇಶದ ಯಾತ್ರೆ ಭಾಗ ೨	೮	ಆಣೆ
೧೯ ಕಾಲಿದಾಸ	೬	
೨೦ ಕರ್ನಾಟಕ ಸ್ವಸ್ಥ ವಾಸನದತ್ತೆ	೬	,,
೨೧ ಅಭಿಷೇಕ ನಾಟಕ	೬	,,
೨೨ ಕಥಾಸರಿತ್ಸಾಗರ	೬	,,
೨೩ ಹಜರತ ಮಹಮದ ಪೈಗಂಬರರ ಚರಿತ್ರೆ	೬	
೨೪ ಬೇಗಮ್ ಸಮರು	೬	
೨೫ ಅಮೇರಿಕದೊಳಗಿನ ಬಡ ವಿದ್ಯಾರ್ಥಿಗಳು	೫	,,
೨೬ ಭೀಷ್ಮಾಚಾರ್ಯ	೫	
೨೭ ವೇಣೀಬಂಧನ	೪	
೨೮ ಪಂಡಿತ ರಾಜ	೪	,,
೨೯ ಹರೀಶನ ಪ್ರೇಮ	೪	,,
೩೦ ಸತಿಯೂ ಸುನೀತಿಯೂ	೪	,,
೩೧ ಆರ್ಯರ ಶಿಕ್ಷಣಪದ್ಧತಿ	೪	
೩೨ ಶೇರಷಹ	೪	,,
೩೩ ಸತ್ಕಥಾ ಕುಸುಮಮಂಜರಿ ಭಾಗ ೩	೪	
೩೪ ಮನೋಹರಮ್	೩	
೩೫ ಕವಿಕಾರ್ಯ ಪ್ರಶಂಸೆ	೩	
೩೬ ಕೌಸಲ್ಯಾಪರಿಣಯ	೩	,,
೩೭ ಇಸೋಪನ ಚರಿತ್ರೆ	೩	
೩೮ ಸುಭದ್ರಾಹರಣ	೨	,,
೩೯ ಯಾರೂ ಅರಿಯದ ರಾಧೆ	೨	,,
೪೦ ಕನ್ನಡ ಮಾತು ತಲೆ ಯೆತ್ತುವ ಬಗೆ	೧	,,
೪೧ ರಾಮಾಯಣ ಕಥಾಮೃತ ಸಾರ	೧	,,
೪೨ ಕರ್ನಾಟಕ ಕವಿಚರಿತ್ರೆ ಭಾಗ ೧	೪	ರೂ.
೪೩ ,, ಭಾಗ ೨	೫	,,
೪೪ ,, ಭಾಗ ೩	೪	
೪೫ ಮಹಾರಾಣಿ ಲಕ್ಷ್ಮೀಬಾಯಿ	೧	ರೂ
೪೬ ಸಾವಿತ್ರೀ ಸತ್ಯವಾನ	೧೨	ಆಣೆ
೪೭ ಪದ್ಮಿನಿ	೧೨	
೪೮ ಪಾರ್ವತಿ	೮	,,
೪೯ ದಾಕ್ಷಾಯಿಣಿ	೮	,,
೫೦ ಕವಿತಾ ಕುಸುಮಮಂಜರಿ ಭಾಗ, ೧. ೨	೧೦	,,

ಮಾರಾಟಕ್ಕೆ ಸಿದ್ಧವಾಗಿವೆ.

೧. ನರಗುಂದ ಬಂಡಾಯ [ಪಂಡಿತ ಭೀ. ಪಿ. ಕುಲಕರ್ಣಿ, 'ಎಸ್. ಟೀ. ಸೀ.' ಜನರಿಗೆ ಒದಲಿಕೆ ಹುರುಪು ಕೊಡುವ ವಿಷಯದಿಂದ ತುಂಬಿರುವ ಕ್ಥಲಿಬಿ. ಒಂದೇ ರೂಪಾಯಿ.

೨. ನಿಜವಾದ ವೀರ ಅಥವಾ ಜಗಮಲ್ಲ [ಶ್ರೀ. ಗು. ಹ. ಪಳಕಟ್ಟಿ,] ನಾಲ್ವತ್ತು ವರ್ಷಗಳಿಂದ ಸಾಹಿತ್ಯಸೇವೆಯನ್ನು ಮಾಡುತ್ತಿರುವ ಅನುಭವಿಕ ಲೇಖಕರು ಬರೆದ ಹೊಸ ಕಾದಂಬರಿ. ಒಂದೇ ರೂಪಾಯಿ.

೩. ಜೈನಧರ್ಮ ಪರಿಭಾಷೆ. [ಪಂಡಿತ ಮ. ಪ್ರ. ಪೂಜಾರ,] ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ, ಸಾಮಾನ್ಯ ವಾಚಕರಿಗೂ ಉಪಯುಕ್ತವಾಗಿರುವ ಪಂಡಿತ ಪೂಜಾರರು ಬರೆದ ಅಪ್ರತಿಮ ಗ್ರಂಥ ೧—೪—೦

೪. ಶ್ರೀಹರ್ಷನೂ ಅವನ ನಾಟಕಗಳೂ [ನಾ. ಪಿ. ಕುರಡಿ.] ಕುರಡಿಯವರ ಗ್ರಂಥಗಳು ಯಾವಾಗಲೂ ಉತ್ತಮ ವರ್ಗಕ್ಕೆ ಸೇರಿದುವು. ೦—೧—೦

ಇವಲ್ಲದೆ ನಮ್ಮಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ, ಕಥೆ ಕಾದಂಬರಿಗಳೂ ಮಾರಲಿಕ್ಕೆ ಸಿಗುವವು ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ಕೊಡುವೆವು.

ಮ್ಯಾನೇಜರ ವಿಜ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ... ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಿದರು.

R. N. B. 1443.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ರವಿವಾರ ತಾರೀಖು ೧೭ನೇ ಸಪ್ಟಂಬರ ೧೯೩೧ (ಸಂಚಿಕೆ ೨೦೫

'he Asian Life Assurance Co. Ltd
Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್ ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗ ಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೭೫,೦೦೦,೦೦ ಕಿಂತಲ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರಿಗಿ ಕೊಟ್ಟದ್ದು ೧೦,೦೦,೦೦೦

ಜಿಂದಿಗಿ ೨೩,೨೦,೦೦೦

ಕರ್ನಾಟಕದಲ್ಲಿಲ್ಲ ಏಜಂಟರು ಬೇಕು. ಇಂದೇ ಪತ್ರ ಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು — ಕೆ. ವ್ಹಿ. ಹುಲಸೋಗಿ, ಬಿ. ಎ.

ಕುಲಕರ್ಣಿ. ಧಾರವಾಡದ ಏಜಂಟರು — ಕರ್ನಾಟಕದ ಬ್ರ್ಯಾಂಚ ಮ್ಯಾನೇಜರ

ಬಿ. ಎಚ್. ಪಾಟೀಲ — ಮುಖ್ಯ ಏಜಂಟರು-

ಹಾವೇರಿಯ ಚೀಫ ಏಜಂಟರು. ಶ್ರೀ. ಎಸ್ ಎಮ್. ದೊಡ್ಡಮನಿ ಶಾಸ್ತ್ರಿ

ಶ್ರೀ. ಬಿ. ... ಪರೋಳಕರ.

ಅನುವು ಅವಸ್ಥೆ ಒಂದಾಗ, ನಿಮ್ಮ ಹೆಂಡಮಕ್ಕಳು ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೭೫೦ ರೂ. ಗಳನ ಕೊಡುವಂಥ ಗೋಲ್ಡನ್ (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತಿಗಾಗಿ ಆದರೂ ಅಷ್ಟೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂಥಾ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ ಏಶಿಯನ್ನ ಕಂಪನಿಯೊಂದೇ ಆಗಿರುತ್ತದೆ.

ಧಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕಛೇರಿಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ "	೭-೦-೦
೩ "	४-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	३-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಕೊಳ್ಳಿರಿ.

ವಿಜಯ.

ತಾರೀಖು ೧೩-೯-೧೯೩೧ನೇ ಇಸ್ವಿ

ಯುದ್ಧ ತಹಕೂಬಿಯೇ?

ಕಾಲುಕೆದರಿ ಜಗಳ ತೆಗೆಯುವದೇ?

ಅಹಮುದಾಬಾದಿನಲ್ಲಿ ಸೇರಿದ್ದ ಕಾಂಗ್ರೆಸ ಕಮೀಟಿಯ ಮುಂದೆ ಒಳ್ಳೇ ಬ್ರಹ್ಮಗಂಟೆನಿಸುವಂಥ ಪ್ರಶ್ನೆ ಬಂದಿದೆ. ಗಾಂಧಿ- ಇರ್ವಿನ್ನ ಒಡಂಬಡಿಕೆಯಾಯಿತು. ಆದರೆ ರಾಜ್ಯಕರ್ತರೆಂಬವರು ಒಡಂಬಡಿಕೆಯ ಕರಾರುಗಳ ಪ್ರಕಾರ ನಡೆಯಲಿಲ್ಲೆಂದು ಕಾಶ್ಮೀರದಿಂದ ಕನ್ಯಾಕುಮಾರಿಯ ತನಕ ದೊಬ್ಬೆ ಎದ್ದಿತು. ಅದಕ್ಕಾಗಿಯೇ ಮಹಾತ್ಮರು ಲಂಡನ್ನಕ್ಕೆ ಹೋಗುವದು ಒಂದು ವಾರ ಮುಂದೆ ಬಿದ್ದಿತೆಂಬದು ಜಗತ್ತಿಗೇ ತಿಳಿದ ಸಂಗತಿಯು.

ಅದ್ಯತಥಾ ಪ್ರಸಕ್ತಿಯು - ಅಹಮುದಾಬಾದಿನ ಕಾಂಗ್ರೆಸ ಕಮೀಟಿಯ ಮುಂದೆ ಬಂದ ದೂರುಗಳನ್ನು ನೋಡಲಾಗಿ, ಮತ್ತು ಅವರು ಮಾಡುತ್ತಿರುವ ವಿಚಾರಗಳ ಊಹೆ ಮಾಡಲಾಗಿ, ಗಾಂಧಿ-ಇರ್ವಿನ್ನ ಒಡಂಬಡಿಕೆಯು ಹೆಸರಿಗೆ ಯುದ್ಧ ತಹಕೂಬಿಯಾಗಿದ್ದು, ಅಲ್ಲಿಯ ಅಧಿಕಾರಿಗಳು ಬೇಕೆಂತಲೇ ಕಾಲುಕೆದರಿ ಜಗಳ ತೆಗೆಯುತ್ತಿದ್ದಾರೆಂದು ಹೇಳಬೇಕಾಗುತ್ತದೆ. ಮದ್ರಾಸ ಇಲಾಖೆಯಲ್ಲಿ ಚಿತ್ತೂರಿನ ಕಲೆಕ್ಟರರು ಹೊಸ ಧ್ವಜಾರೋಹಣಕ್ಕೆ ವಿಘ್ನ ತಂದರು. ಅಮೃತಸರದಲ್ಲಿ ಇಂದಿಗೂ ತಿಕ್ಕಟ್ಟೆ ಪೋಲಿಸರ ದಂಡವನ್ನು ವಸೂಲಮಾಡುತ್ತಿದ್ದಾರೆ. ಪಂಡಿತ ಜವಾಹರಲಾಲರಂತೂ ಒಂದು ಹೆಬ್ಬೊತ್ತಿಗೆಯನ್ನೇ ಬರೆದಿದ್ದಾರೆ. ಇವಕ್ಕೆ ಸೇರಿಸಿ, ತೀರ ಬಿಸಿ ಬಿಸಿ ವರ್ತಮಾನವೇನೆಂದರೆ- ಮದ್ರಾಸ ಇಲಾಖೆಗೆ ಸೇರಿದ ಗೂಡೂರಿನಲ್ಲಿ ಕೈತರ ಸಭೆಯಾಗತಕ್ಕದ್ದಿತ್ತು. ಸಾರ್ವಜನಿಕ ಸಭೆಯಿಂದ ಶಾಂತತಾ ಭಂಗವಾಗುತ್ತದೆಂದು ಮ್ಯಾಜಿಸ್ಟ್ರೇಟರು ಸಭೆ ನೆರೆಸುವದಕ್ಕೆ ೧೪೪ ಕಲಮಿನಿಂದ ಅಡ್ಡಿ ತಂದರು. ಶ್ರೀ. ಸತ್ಯಮೂರ್ತಿ ಮೊದಲಾದವರು ಹೋಗಿ, ಮ್ಯಾಜಿಸ್ಟ್ರೇಟರ ಹುಕುಮನ್ನು ಅವಮಾನ್ಯಮಾಡಿ, ಸಭೆ ನೆರೆಯಿಸಿ, ಠರಾವು ಪಾಸು ಮಾಡಿದರು. ಆಗ ಮ್ಯಾಜಿಸ್ಟ್ರೇಟರಾಗಲೀ ಪೋಲೀಸರಾಗಲೀ ಸಭಿಕರನ್ನು ತಡೆಯಲಿಲ್ಲ.

ಅಧಿಕಾರಿಗಳ ಸಾಹಸಾಹಿ ವರ್ತನದಿಂದ ಕಾಂಗ್ರೆಸ ಕಮೀಟಿಯ ಮುಖಂಡರಿಗೆ ಇತಿಮಿತಿಯಾಗಿದೆ. ಒಡಂಬಡಿಕೆ ಮುರಿಯಿತೆಂದು ಹೇಳಿ, ಶಾಂತತಾಭಂಗವನ್ನು ಪುನಃ ಜಾಹೀರ ಮಾಡಿದರೆ- ಲಂಡನ್ನದಲ್ಲಿರುವ ಮಹಾತ್ಮರನ್ನು ಪೇಚಿನಲ್ಲಿ ಹಾಕಿದಂತಾಗುತ್ತದೆ. ಹಾಗೇ ಬಿಟ್ಟರೆ- ಅಳರಸರಿಗೆ ಜಲ್ಲಾಟವಾಡಲು ಅನಿರ್ಬಂಧ ಉತ್ತೇಜನಕೊಟ್ಟಂತಾಗುತ್ತದೆ. ಈ ಎರಡೂ ಗಡಚಿನಲ್ಲಿ ವಚನಭಂಗಗಳ ವಿಷಯವಾಗಿ ಹಿಂದುಸ್ಥಾನ ಸರಕಾರಕ್ಕೆ ಪತ್ರ ಬರೆದು, ಅದರಿಂದ ಉತ್ತರ ತರಿಸಿಕೊಳ್ಳಬೇಕು. ಈ ಉತ್ತರದ ಸ್ವರೂಪ ನೋಡಿಕೊಂಡು ಮುಂದಿನ ದಾರಿಯನ್ನು ಗೊತ್ತು ಮಾಡಬೇಕೆಂದು ಬಹುತರವಾಗಿ ನಿರ್ಣಯವಾಗುವ ಸಂಭವವುಂಟು.

ಮಹಾತ್ಮರ ಪ್ರಯಾಣ ಮತ್ತು ಸ್ವಾಗತ ಸಮಾರಂಭ

—(೦)—

ಮಹಾತ್ಮರು ನಿನ್ನಿನ ದಿವಸ ಇಂಗ್ಲಂಡದ ಬಂದರವಾದ ಫೋಲ್ಕಸ್ಟೋನಿನಲ್ಲಿಳಿದರು. ರಾವುಂಡಟೇಬಲಿಗೆ ಬರುವ ಡೆಲಿಗೇಟರ ಸತ್ಕಾರ ಕೆಲಸಕ್ಕಾಗಿ ನೇಮಿಸಲ್ಪಟ್ಟ ಜಾಯಿಂಟ ಸೇಕ್ರೆಟರಿ ಮಿ. ಹ್ವಿನ್ಸೆಂಟಸಾಹೇಬರು ಸ್ವತಃ ಮೋಟಾರ ಡ್ರಾಯವ್ಹರರಾಗಿ ಇವರನ್ನು ಲಂಡನಕ್ಕೆ ಕರಕೊಂಡು ಹೋದರು. ಮಿ. ಹ್ವಿನ್ಸೆಂಟಸಾಹೇಬರು ಮುಂಬಯಿಯಲ್ಲಿ ಪೋಲಿಸ ಕಮೀಶನರರಾಗಿದ್ದರು.

ಸಾಯಂಕಾಲದಲ್ಲಿ ಮಹಾತ್ಮರ ಸ್ವಾಗತದ ದೊಡ್ಡ ಸಮಾರಂಭವಾಯಿತು. ಪಾದ್ರಿಭಟ್ಟರು, ಸಾಮಾಜಿಕ ಸುಧಾರಕರು, ರಾಜಕಾರಣ ಪಟುಗಳು, ವ್ಯವಸಾಯಗಾರರು, ಇವರೇ ಮುಂತಾದ ೧೪೦೦ ಜನ ಪ್ರಮುಖರಿಗೆ ಮುಂದಾಗಿ ಆಮಂತ್ರಣವಿತ್ತು. ಸ್ವಾಗತದಲ್ಲಿ ಮಿ॰ ಲಾರೆನ್ಸಸಾಹೇಬರು ಭಾಷಣ ಮಾಡಿದರು. ಮತ್ತು ಮಹಾತ್ಮರಿಗೆ ಉತ್ತರ ಕೊಟ್ಟರು. ಭಾಷಣಗಳ ತಾರಿನ ಸುದ್ದಿಯು ಬರಬೇಕಾಗಿದೆ.

ಚುನಾವಣೆಯೊಳಗಾಗಿ ರಾವುಂಡ ಟೇಬಲ ಮುಗಿಸಬೇಕು

....(೦)....

ಇಂಗ್ಲಂಡದಲ್ಲಿ ಚುನಾವಣೆಯು ಬಹಳ ಹತ್ತರವಾದರೆ- ನವ್ಹಂಬರದಲ್ಲಾಗುವದು. ಅದ್ದರಿಂದ ರಾವುಂಡ ಟೇಬಲಿನ ಎಲ್ಲ ಕೆಲಸಗಳನ್ನು ಅಕ್ಟೋಬರದೊಳಗಾಗಿ ಮುಗಿಸಿಬಿಡಬೇಕೆಂದೂ, ಇದೇ ಕೊನೆಯದೂ ಖಂಡಿತವಾದದ್ದೂ ಆಗಬೇಕೆಂದು ಹಿಂದುಸ್ಥಾನದಿಂದ ಹೋದ ಪ್ರತಿನಿಧಿಗಳು ಅಭಿಪ್ರಾಯಪಟ್ಟಿದ್ದಾರೆ-

ಪಾರ್ಲಮೆಂಟದ ಚುನಾವಣೆಯು

—(೦)—

ಪಾರ್ಲಮೆಂಟದ ಚುನಾವಣೆಯನ್ನು ಮುಂದೆ ಹಾಕಬಾರದು; ಆದಷ್ಟು ಬೇಗನೆ ಚುನಾವಣೆಯು ನಡೆಯಬೇಕೆಂದು ಕನ್ಸರವೆಟಿವ್ಹರು ಆಗ್ರಹ ಹಿಡಿದಿದ್ದಾರೆ. ಮಿ॰ ಚರ್ಚಿಲ್ಲಸಾಹೇಬರು ಹಿಂದುಸ್ಥಾನ ವಿಷಯವಾಗಿ ತಮ್ಮ ಪಕ್ಷಕ್ಕೆ ಅಮೇರಿಕೆಯ ಲೋಕಮತವನ್ನಾಕರ್ಷಣ ಮಾಡಲೋಸುಗ- ಅಮೇರಿಕೆಗೆ ಹೊರಡುವ ಪ್ರಸ್ಥಾನ ಕೂಡ ತೆಗೆದಿದ್ದರು. ಚುನಾವಣೆಯ ದೆಸೆಯಿಂದ ಪ್ರಯಾಣವನ್ನು ರಹಿತ ಪಡಿಸಿದರು

ಕಾಂಗ್ರೆಸದವರು ವಿಮುಖ್ಯ ಮಾತ್ರಕ್ಕೆ ಕಾರಣ

—(೦)—

ವ್ಯಾಪಾರ ಮಂದಿಯೇ ಬಹಿಷ್ಕಾರಕ್ಕೆ ಯಶ ತಂದಿತು

ಹಿಂದುಸ್ಥಾನದ ವಿಲಾಯತಿಯ ವ್ಯಾಪಾರವು ಹೇಗೆ ಮುಗ್ಗಿತೆಂಬ ವರದಿಯನ್ನು ಕಲಕತ್ತೆಯ ಬಂದರದ ಆಯಾತ- ನಿರ್ಗತ ಖಾತೆಯವರು ಪ್ರಸಿದ್ಧ ಮಾಡಿದ್ದಾರೆ. ಇತರ ಮೇಲೆ ಟೀಕೆ ಮಾಡುವ ಭಾಷ್ಯಕಾರರು ಜಗತ್ತಿನ ವ್ಯಾಪಾರ ಮಂದಿಯೇ ಮುಖ್ಯ ಕಾರಣ. ಚಕ್ರ ತಾನಾಗಿ ತಿರುಗುತ್ತಿತ್ತು, ಅದರ ಮೇಲೆ ಕೂತ ನೊಣವು ತಾನು ಚಕ್ರ ತಿರುಗಿಸುತ್ತೇನೆಂದು ಗರ್ವಪಟ್ಟಿತು. ಆ ಪ್ರಕಾರ ತಮ್ಮ ಬಹಿಷ್ಕಾರದಿಂದಲೇ ವ್ಯಾಪಾರ ಮುಣುಗಿತೆಂದು ಕಾಂಗ್ರೆಸದವರು ಅಹಂಕಾರ ಪಡುತ್ತಾರೆಂದು ಗೌರಕಾಯಸ್ಥರು ಹೇಳುತ್ತಾರೆ. ಕಾಂಗ್ರೆಸದವರು ಅಭಿಮಾನಶಾಲಿಗಳಲ್ಲವೇ ಅಲ್ಲ, ಅವರಿಗೆ ಯಾವ ದೇವರ ಗುಡಿಯಲ್ಲಿ ಬಂದರೂ ಸಾಕು. ಸಿದ್ಧಿ ಮುಖ್ಯ.

ಕುಂಟಲಗಿತ್ತಿ ಮತ್ತು ಲಾಲೂನ ಮನೆಯ ಮುಂದೆ ಪಿಕೆಟಿಂಗ

....(೦)....

ಜಾರಕರ್ಮಕ್ಕೆ ಉತ್ತೇಜನ ಕೊಟ್ಟು, ತಮ್ಮ ಉಪಜೀವನ ಸಾಗಿಸಿಕೊಳ್ಳುವ ಲಾಲೂ ಮತ್ತು ಲಾಲಿಗಳ ಮೂಲವನ್ನೇ ತೆಗೆದು ಹಾಕಿರೆಂದು ಪೇಶಾವರದ ಖಿಲಾಫತ ಕಮೀಟಿಯವರು ಪೋಲಿಸರಿಗೆ ಸೂಚನೆ ಮಾಡಿದರು. ಪೋಲಿಸರು ಈ ಸೂಚನೆಯ ಮೇರೆಗೆ ನಡೆಯದಾಗಲು- ಖಿಲಾಫತನವರೇ ಇವರ ಮನೆಯ ಮುಂದೆ ಪಿಕೆಟಿಂಗ ನಡೆಸಿದ್ದಾರೆ.

ಸರಕಾರದವರು ಹಿಂದೀ ವ್ಯಾಪಾರಿಮಂಡಲದ ಈರ್ವರು ಪ್ರತಿನಿಧಿಗಳಾದ ಶ್ರೀ ಬಿರ್ಲಾ ಮತ್ತು ಜಾನ ಮಹಮುದರಿಗೆ ಆಮಂತ್ರಣ ಕೊಡುವರೆಂದು ಸಿಮ್ಲಾದಿಂದ ವರ್ತಮಾನ ಬಂದಿರುತ್ತದೆ

ಶಿರಹಟ್ಟಿಯ ಲೋಕಮಾನ್ಯ ವಾಚನಾಲಯದ ಮೇಲೆ ಕರ್ನಲ ಬರ್ಗಸಾಹೇಬರ ಪ್ರೇಮವು

—(೦)—

ಸದ್ಯ ಮೈಸೂರ ಸಂಸ್ಥಾನದಲ್ಲಿ ರೆಸಿಡೆಂಟರಾಗಿರುವ ಕರ್ನಲ ಬರ್ಗಸಾಹೇಬರು ಸಾಂಗಲಿಯಲ್ಲಿ ಆ್ಯಡಮಿನಿಸ್ಟ್ರೇಟರರಾಗಿದ್ದು, ಬಹು ಜನ ವಾಚಕರ ಸ್ಮರಣೆಯಲ್ಲಿರಬಹುದು. ಇವರು ತಮ್ಮ ಕಾರಕೀರ್ದಿಯಲ್ಲಿ ಶಿರಹಟ್ಟಿಯಲ್ಲಿ ಸ್ಥಾಪಿಸಲ್ಪಟ್ಟ ಲೋಕಮಾನ್ಯ ಟಿಳಕ ಉಚಿತ ವಾಚನಾಲಯದ ಕಟ್ಟಡಕ್ಕಾಗಿ ದರಬಾರದಿಂದ ಮೂರುಸಾವಿರ ರೂಪಾಯಿ ಕೊಟ್ಟಿದ್ದು, ೭೫ ರೂಪಾಯಿಗಳಂತೆ ವರ್ಷಾಶನ ಮಾಡಿಕೊಟ್ಟದ್ದು ವಾಚನಾಲಯದವರು ಹೋದ ತಿಂಗಳಲ್ಲಿ ಪ್ರಸಿದ್ಧ ಮಾಡಿದ ಜ್ಯುಬಿಲಿಯ ವರದಿಯಲ್ಲಿ ಬರೆದಿದ್ದಾರೆ. ಈ ಜ್ಯುಬಿಲಿಯ [illegible]ದಿನವೆಂದು ಸಾಹೇಬರು ಲಾಯಬ್ರರಿಯ ಉಪಯೋಗಕ್ಕಾಗಿ ಹಿಂದುಸ್ಥಾನದ ಗ್ಯಾಝಿಟಿಯರದ ಎಲ್ಲ ಭಾಗಗಳನ್ನು ತರಿಸುವದಕ್ಕಾಗಿ ಸ್ವತಃ ಒಂದು ನೂರು ರೂಪಾಯಿಗಳನ್ನು ಕಳಿಸಿಕೊಟ್ಟಿದ್ದಾರೆಂಬ ಸಂಗತಿ ಬರೆಯುವದಕ್ಕೆ ಅಭಿಮಾನಪಡುತ್ತೇವೆ. ಯುರೋಪಿಯನ್ನ ಸದ್ಗೃಹಸ್ಥರ ವಾಚನಾಭಿರುಚಿಯನ್ನುಂಟು ಮಾಡಿಸುವ ಪ್ರಶಂಸನೀಯವಾದ ಅನುಕರಣವನ್ನು ಸ್ವದೇಶಿಯರೂ ಮಾಡುವರೆಂದು ಬಹುವಾಗಿ ಆಶಿಸುತ್ತೇವೆ.

ಮನೆಯಲ್ಲಿ ಜೀವದಿಂದಿದ್ದರೂ ಕೋರ್ಟ ಕಚೇರಿಯಲ್ಲಿ ಸತ್ತೇ ಹೋದ ನ್ಯಾಯ

—(೦)—

[illegible]ರ್ಗಿಗೆ ಸೇರಿದ ಡಾರ್ಟಮೊಂಡವೆಂಬ ಗ್ರಾಮದಲ್ಲಿರುವ ಒಬ್ಬಳು ಗಂಡನನ್ನು ಬಿಟ್ಟು ಏಳು ವರ್ಷವಾಯಿತು. ಹೆಂಡತಿಯು ಸತ್ತೇ ಹೋದಳೆಂದು ತಿಳಕೊಂಡು, ಗಂಡನು ಈ ಪ್ರಕಾರ ಅರ್ಜಿ ಮಾಡಿ ಹುಕುಮನಾಮೆ ಪಡಕೊಂಡನು. ಇದು ೧೯೨೩ರಲ್ಲಿ ನಡೆಯಿತು. ಈಗ ೧೯೩೧ರಲ್ಲಿ ಹೆಂಡತಿಗೆ ಈ ಸಂಗತಿ ತಿಳಿಯಿತು. ಕೂಡಲೆ ಇವಳು ತಾನು ಜೀವಂತವಿರುವಂತೆಯೂ ಮರಣ ರಜಿಸ್ಟರದಿಂದ ತನ್ನ ಹೆಸರು ತೆಗೆಯಿಸಬೇಕೆಂದೂ ಕೋರ್ಟಿಗೆ ಅರ್ಜಿಕೊಟ್ಟಳು. ಇನ್ನ ಅರ್ಜಿಯು ಮುದ್ದತ ಮೀರಿ ಬಂದಿದೆ. ಮೊದಲಿನ ಹುಕುಮನ್ನು ರದ್ದ ಮಾಡಲಿಕ್ಕಾಗುವದಿಲ್ಲೆಂದು ಜಡ್ಜರು ಅರ್ಜಿಯನ್ನು ಕಿತ್ತಿ ಹಾಕಿ, ಕೋರ್ಟಿನ ಮಟ್ಟಿಗೆ ಆಕೆಯ ಮರಣವನ್ನು ಸ್ಥಿರಪಡಿಸಿದರು.

ಲಂಕೆಯಲ್ಲಿರುವ [illegible] ಯುರೋಪಿಯನ್ನ ಸ್ಪೇಶಲ್ ಪೋಲೀಸರನ್ನು ತೆಗೆಯಿರಿ ಅಧಿಕಾರ ಮತ್ತು ವೆಚ್ಚ ಉಳಿತಾಯ ದೃಷ್ಟಿಯಿಂದ [illegible] ಆವಶ್ಯಕತೆಯಿಲ್ಲೆಂದು ಲಂಕೆಯ ಕೌನ್ಸಿಲದ [illegible] ಮೆಂಬರರು ಠರಾವು ತಂದಿದ್ದಾರೆ.

ಪ್ರಬಲಿಗೆ ಬಂದಿದ್ದ ಪೋಲೀಸನ ಕೊಲೆ

—(೦)—

ಗುಜರಾಥದಲ್ಲಿ ರಾಸವೆಂಬ ಗ್ರಾಮವು ಕಾಯದೆಭಂಗದ ಚಳವಳಿಯಲ್ಲಿ ಒಳ್ಳೇ ಹೆಸರು ಪಡೆಯಿತು. ಪೋಲೀಸರು ಇಲ್ಲೀ ಸರದಾರ ಪಟೇಲರನ್ನು ದಸ್ತಗಿರ ಮಾಡಿದರು. ಈ ರಾಸಗ್ರಾಮವೇ ಕಂದಾಯ ಕೊಡುವದಿಲ್ಲೆಂದು ಮೊದಲು ರಣಗಾಳೆ ಹಿಡಿಯಿತು. ಈ ರಾಸಗ್ರಾಮದಲ್ಲಿ ಏಕನಿಷ್ಠೆಯಿಂದ ರಾಜ್ಯಕರ್ತರ ಸೇವಾನಿರತನಾಗಿದ್ದ ಬಾಬಾಖಾನ ಮೋಹಿತೆ ಎಂಬ ಹೆಸರಿನ ಹೆಡ್ಡ ಕಾನ್ಸಟೇಬಲವನ್ನು ಯಾರೋ ಕೊಂದು ಹಾಕಿದ್ದಾರೆ. ಪೋಲೀಸರು ಕೊಲೆಗಡಕರ ಶೋಧ ನಡೆಸಿದ್ದಾರೆ.

ಪೋಲೀಸಸಾಹೇಬರ ವಿರುದ್ಧ ಎಲ್ಲಾ ಪೋಲೀಸರ ಸತ್ಯಾಗ್ರಹ ಮತ್ತು ರಾಜೀನಾಮೆ.

....(೦)....

ಜೇಲಮದ ಪೋಲಿಸಸಾಹೇಬರಾದ ಹರ್ನರೆಂಬ ಸಾಹೇಬರು ಪೋಲಿಸ ಇನ್ಸಪೆಕ್ಟರಿಂದ ಸಿಪಾಯರ ತನಕ ಮತ್ತು ಎಲ್ಲಾ ಕಾರಕೂನರಿಗೆ ಬೈದು, ಅವರನ್ನು ಅಪಮಾನಪಡಿಸಲಾರಂಭಿಸಿದ್ದರಿಂದ, ಎಲ್ಲಾ ಜನರು ರಾಜೀನಾಮೆ ಗೀಚಿ, ಇನ್ಸ್ಪೆಕ್ಟರ ಜನರಲ್ಲರ ಕಡೆಗೆ ಕಳಿಸಿದರು. ಸಾಹೇಬರು ಹರ್ನಸಾಹೇಬರನ್ನು ರಜೆಯ ಮೇಲೆ ಕಳಿಸಿ ಎಲ್ಲಾ ಜನರನ್ನು ಸಮಾಧಾನಪಡಿಸಿದರು. ಈ ವಿಷಯವಾಗಿ ನಾಳಿನ ಸಂಚಿಕೆಯಲ್ಲಿ ವಿಶೇಷ ಬರೆಯುವೆವು.

ಧಾರವಾಡದಲ್ಲಿ ಕೊಲೆಯ ಭಯಂಕರ ಪ್ರಯತ್ನ

....(೦)....

ಇಲ್ಲಿಯ ಜವಳೀಪೇಟೆಯ ಕೋಟೆನಲ್ಲಿರುವ ತುಪ್ಪದವರ ಮನೆತನಕ್ಕೆ ಸೇರಿದ ಜಾಯಪ್ಪ ಮತ್ತು ಬಸಪ್ಪ ಎಂಬಿಬ್ಬರು ಅಣ್ಣತಮ್ಮಂದಿರು. ಗೃಹಕೃತ್ಯದ ಮನಃಕ್ಲೇಶದ ದೆಸೆಯಿಂದ ಕಿರಿಯನಾದ ಬಸಪ್ಪನು ಹಿರಿಯನಾದ ಜಾಯಪ್ಪನನ್ನು ಚೂರಿಯಿಂದ ಸಾಯುವಂತೆ ಘಾಯಪಡಿಸಿ, ರಕ್ತಬಂಬಾಳ ಮಾಡಿದನು. ಪೋಲೀಸರು ಆರೈಕೆಗಾಗಿ ನಿನ್ನಿನ ದಿವಸ ಮಧ್ಯಾನ್ಹದಲ್ಲಿ ಜಾಯಪ್ಪನನ್ನು ಆಸ್ಪತ್ರಿಗೆ ಕಳಿಸಿ, ಬಸಪ್ಪನನ್ನು ದಸ್ತಗೀರ ಮಾಡಿದ್ದಾರೆ.

ಕಳೆದೆರಡು ದಿವಸಗಳ ಹಿಂದೆ ಎರೆನಾಡಿನಲ್ಲಿ ಬಿತ್ತಿಗೆಗೆ ಬೇಕಾದಷ್ಟು ಹದ ಮಳೆಯಾದಂತೆ ವರ್ತಮಾನ ಬಂದಿರುತ್ತದೆ.

ಕೊಲ್ಹಾಪೂರದ ತುರಂಗದಲ್ಲಿರುವ ಕೈದಿಗಳು ಪುನಃ ಅನ್ನತ್ಯಾಗಮಾಡಿ, ಸತ್ಯಾಗ್ರಹ ಮಾಡಿದ್ದಾರೆ.

ಧಾರವಾಡ ಡಿ|| ಕಾಂ|| ಕಮಿಟಿ -

—(೦)—

ಧಾರವಾಡ ಜಿಲ್ಲಾ ಕಾಂಗ್ರೆಸ ಕಮಿಟಿಯ ಕಾರ್ಯಕಾರೀ ಮಂಡಲದ ೩ ನೇ ಅಧಿವೇಶನವು ಹುಬ್ಬಳ್ಳಿ ತಾಲೂಕ ಕಾಂಗ್ರೆಸ ಕಮಿಟಿಯ ಕಚೇರಿಯಲ್ಲಿ ಇದೇ ತಿಂಗಳ ೧೮ನೇ ತಾರೀಕ ಶುಕ್ರವಾರ ಸಂಜೆಯ ೪ ಘಂಟೆಗೆ ಸರಿಯಾಗಿ ಕೆಳಗೆ ಕಾಣಿಸಿದ ಮಹತ್ವದ ವಿಷಯಗಳ ಬಗ್ಗೆ ಕೂಡತಕ್ಕದ್ದದೆ. ಆದಕಾರಣ ತಾವು ಬರಬೇಕಾಗಿ ಪ್ರಾರ್ಥನೆ

ವಿಷಯಗಳು

೧ ಇವತ್ತಿನ ಬೈಠಕಿನ ವರದಿ ಮತ್ತು ಲೆಖ್ಖವನ್ನು ಒಪ್ಪಿಸುವದು. ೨ ಪರದೇಶಿ ವಸ್ತ್ರಬಹಿಷ್ಕಾರವನ್ನು ಜೋರಿನಿಂದ ಸಾಗಿಸುವಬಗ್ಗೆ ಹುಬ್ಬಳ್ಳಿಯಲ್ಲಿ ಪಿಕೆಟಿಂಗ ಕಾರ್ಯವನ್ನು ಶೀಘ್ರದಲ್ಲಿಯೇ ಕೈಕೊಳ್ಳುವ ವಿಚಾರ. ೩ ಹುಬ್ಬಳ್ಳಿ ತಾಲೂಕ ಕಾಂಗ್ರೆಸ ಕಮಿಟಿಯ ಠರಾವಿನ ಪ್ರಕಾರ ಶ್ರೀ. ವ್ಯಾಸರಾವ ರೊದ್ದ ಇವರು ಧಾರವಾಡ ಜಿ. ಕಾ. ಕಮಿಟಿಗೆ ೩೦೦ ರೂಪಾಯಿಗಳನ್ನು ಕೊಡಬೇಕೆಂದು ಮೃತ್ಯುಪತ್ರ ಮಾಡಿ ಇಟ್ಟಿದ್ದು ಆ ಹಣವನ್ನು ತೆಗೆದುಕೊಳ್ಳಲಿಕ್ಕೆ ಒಬ್ಬರಿಗೆ ಅಧಿಕಾರ ಕೊಡುವದು.

೪ ಜಿ ಕಾ. ಕ. ಯ ಕಾರ್ಯದ ಬುಲೆಟಿನ್ನ ಹೊರಡಿಸುವ ವಿಚಾರ ೫ ಹುಲ್ಲಬನ್ನಿ ಆಶ್ರಮ. ೬ ಹಳ್ಳಿಗಳ ಸಂಘಟನೆಯ ಕಾರ್ಯ ೭ ಜಿ ಕಾ ಕ ಗೆ ಒಬ್ಬ ಪಗಾರದ ಸಹಾಯಕ ಕಾರ್ಯದರ್ಶಿಯನ್ನೂ ಮತ್ತೂ ಒಬ್ಬ ಹುಡುಗನನ್ನೂ ನೇಮಿಸುವ ವಿಚಾರ ೮ ಹೊಸರಿತ್ತಿ ಗಾಂಧಿ ಆಶ್ರಮ, ಗುತ್ತಲ ಗ್ರಾಮಸಂಘಟನಾ ಕಾರ್ಯದ ರಿಪೋರ್ಟ ಓದಿ ಸಹಾಯ ಮಾಡುವ ಬಗ್ಗೆ ೯ ಧಾರವಾಡ ಜಿಲ್ಲೆಯಲ್ಲಿ ಒಂದು ತಾಲೂಕನ್ನು ಆರಿಸಿ - ಬಾರಡೋಲಿ ಮಾದರಿಯ ತಯಾರ ಮಾಡುವ ಪ್ರಾಂತಿಕ ಕಾ ಕ ಗೆ ತನ್ನ ನಿಶ್ಚಿತ ಅಭಿಪ್ರಾಯ ಹೇಳುವದು ೧೦ ಧಾರವಾಡ ಜಿ ಕಾ ಕಮಿಟಿಯ ನೇತೃತ್ವದಲ್ಲಿ ಸ್ವಯಂಸೇವಕರ ಶಿಕ್ಷಣ ಶಿಬಿರವನ್ನು ಅವಶ್ಯವಾಗಿ ತೆರೆಯುವ ವಿಚಾರ ೧೧ ಸವಣೂರ ಸಂಸ್ಥಾನದ ಗಾಂಧಿ ಟೊಪ್ಪಿಗೆಯ ತಕರಾರದ ಬಗ್ಗೆ ಪುನಃ ಪತ್ರ ಬರೆಯುವದು ೧೨ ಒಪ್ಪಂದದ ಕರಾರ ಭಂಗದ ಬಗ್ಗೆ ಉಪಸಮಿತಿಯನ್ನು ನೇಮಿಸುವದು ೧೩ ಶ್ರೀ ಹಂಪಸಾಗರ ರಾಣೇಬೆನ್ನೂರ ಯುವಕ

THE ANKALIGI BANK LTD.

Head Office
Kamankatta Dharwar
Branches
Ranebennur & Hirekerur

5%
Interest allowed on
ANNA SAVINGS BANK
DEPOSIT

Dharwar 3—1—1927 } K. B. ANKALIGI
Managing Director

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಿಗೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ ೨—೦—೦
ಕೃಷ್ಣ ಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦

೧೯—೧೧—೨೯ ಮೈಸೂರ ಸ್ಟೋರ್,
ಬೆಳಗಾವಿಯ [illegible]
ಹುಬ್ಬಳ್ಳಿ
ಮತ್ತು ವಿಜಯ ಧಾರವಾಡ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದು ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ೨ ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲ್‌ಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ನಾಲ್ಕಾಣೆ ಇಂಗ್ಲಿಷಿನ ಆಧಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅದು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೦
೬ ,,	೬-೦-
೩ ,,	೪-೮-
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಕೊಳ್ಳಿ.

ವಿಜಯ ಪುಸ್ತಕಾಲಯ ಧಾರವಾಡ

ವಿಜಯ ಪುಸ್ತಕಾಲಯದಲ್ಲಿ ಮಾರಲಿಕ್ಕೆ ದೊರೆಯುವ ಪುಸ್ತಕಗಳ ಪಟ್ಟಿಯು.

"ಈ ಕೆಳಗೆ ಬರೆದ ೪೦ ಪುಸ್ತಕಗಳು ಮುಂಬಯಿ ವಿದ್ಯಾಖಾತೆಯವರಿಂದ ಶಾಲೆಶಾಲೆಯಗಳನ್ನು ಕೆಲವು ಪಠ್ಯಪುಸ್ತಕವಾಗಿಯೂ ಮಂಜೂರಾಗಿವೆ.

೧ ಶಬ್ದಾನುಶಾಸನ ೪ ರೂ.
೨ ರಘುವಂಶ ೧ ರಿಂದ ೧೯ ಸ್ವರ್ಗಪರ್ಯಂತ ೨ ,,
೩ ಶ್ರೀ ವಿದ್ಯಾರಣ್ಯಸ್ವಾಮಿಗಳ ಚರಿತ್ರೆ ೧ ,,
೪ ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಚರಿತ್ರೆ ೧ ,,
೫ ರಾಮಾಶ್ವಮೇಧಸಾರ ಸಂಗ್ರಹ ೧ ,,
೬ ದುರ್ಗಸಿಂಹನ ಪಂಚತಂತ್ರ, ಸಾರ ೧ ,,
೭ ಉತ್ತರರಾಮ ಚರಿತ್ರೆ ೧೨ ಆಣೆ
೮ ರಾಣಾರಾಜಸಿಂಹ ೧೨ ,,
೯ ಶ್ರೇಯಃಸಾಧನ ೧೨ ,,
೧೦ ಪಾರ್ವತೀ ಪರಿಣಯ ನಾಟಕ ೧೨ ,,
೧೧ ಬಾಣಕಾದಂಬರಿ ೧೦ ,,
೧೨ ಸತ್ಕಥಾ ಕುಸುಮ ಮಂಜರಿ (IV) ೧೦ ,,
೧೩ ಪ್ರೇಮಮಂದಿರ ೮ ,,
೧೪ ಯಯಾತಿ ನಾಟಕ ೮ ,,
೧೫ ಮಾನಸಶಾಸ್ತ್ರ ೮ ,,
೧೬ ಗೃಹವೈದ್ಯಕ ೮ ,,
೧೭ ಮೋಹೀ ನಿಂದಕ ನಡಾವಳಿ ೮ ,,
೧೮ ಸತ್ಯರಾಜಾ ಪೂರ್ವದೇಶದ ಯಾತ್ರೆ ಭಾಗ ೨ ೮ ಆಣೆ
೧೯ ಕಾಳಿದಾಸ ೬
೨೦ ಕರ್ನಾಟಕ ಸ್ವಪ್ನವಾಸವದತ್ತ ೬ ,,
೨೧ ಅಭಿಷೇಕ ನಾಟಕ ೬ ,,
೨೨ ಕಥಾಸರಿತ್ಸಾಗರ ೬ ,,
೨೩ ಹಜರತ ಮಹಮದ ಪೈಗಂಬರರ ಚರಿತ್ರೆ ೬
೨೪ ಬೇಗಮ್ ಸಮರು ೬
೨೫ ಅಮೇರಿಕದೊಳಗಿನ ಬಡ ವಿದ್ಯಾರ್ಥಿಗಳು ೫ ,,
೨೬ ಭೀಷ್ಮಾಚಾರ್ಯ ೫ ,,
೨೭ ವೇಣೀಬಂಧನ ೪,
೨೮ ಪಂಡಿತ ರಾಜ ೪ ,,
೨೯ ಹರೀಶನ ಪ್ರೇಮ ೪ ,,
೩೦ ಸತಿಯೂ ಸುನೀತಿಯೂ ೪ ,,
೩೧ ಆರ್ಯರ ಶಿಕ್ಷಣಪದ್ಧತಿ ೪
೩೨ ಶೇರಸಹ ೪ ,,
೩೩ ಸತ್ಕಥಾ ಕುಸುಮಮಂಜರಿ ಭಾಗ ೩ ೪ ,,
೩೪ [illegible] ೩ ,,
೩೫ ಕವಿಕಾರ್ಯ ಪ್ರಶಂಸೆ ೩ ,,
೩೬ ಕೌಸಲ್ಯಾಪರಿಣಯ ೩ ,,
೩೭ ಇಸೋಪನ ಚರಿತ್ರೆ ೩ ,,
೩೮ ಸುಭದ್ರಾಹರಣ ೨ ,,
೩೯ ಯಾರೂ ಅರಿಯದ ರಾಧೆ ೨ ,,
೪೦ ಕನ್ನಡ ಮಾತು ತಲೆ ಯೆತ್ತುವ ಬಗೆ ೧ ,,
೪೧ ರಾಮಾಯಣ ಕಥಾಮೃತ ಸಾರ ೧ ,,
೪೨ ಕರ್ನಾಟಕ ಕವಿಚರಿತ್ರೆ ,, ಭಾಗ ೧ ೪ ರೂ.
೪೩ ,, ಭಾಗ ೨ ೫ ,,
೪೪ ,, ಭಾಗ ೩ ೪
೪೫ ಮಹಾರಾಣಿ ಲಕ್ಷ್ಮೀಬಾಯಿ ೧ ರೂ.
೪೬ ಸಾವಿತ್ರೀ ಸತ್ಯವಾನ ೧೨ ಆಣೆ
೪೭ ಪದ್ಮಿನಿ ೧೨
೪೮ ಪಾರ್ವತಿ ೮ ,,
೪೯ ದಾಕ್ಷಾಯಿಣಿ ೮ ,,
೫೦ ಕವಿತಾ ಕುಸುಮಮಂಜರಿ ೧೦ ,, ಭಾಗ, ೧. ೨

ಮಾರಾಟಕ್ಕೆ ಸಿದ್ಧವಾಗಿವೆ.

೧. ನರಗುಂದ ಬಂಡಾಯ [ಪಂಡಿತ ಭೀ. ಜಿ. ಹುಲಿಕವಿ, ಎಸ್. ಟೀ. ಸೀ.] ಜನರಿಗೆ ಓದು ಹುರುಪು ಕೊಡುವ ವಿಷಯದಿಂದ ತುಂಬಿತುಳುಕುತ್ತಲಿದೆ.
ಒಂದೇ ರೂಪಾಯಿ

೨. ನಿಜವಾದ ವೀರ ಅಥವಾ ಜಗಮಲ್ಲ [ಶ್ರೀ. ಗು. ಫ. ಹಳಕಟ್ಟಿ,] ನಾಲ್ವತ್ತು ವರ್ಷಗಳಿಂದ ಸಾಹಿತ್ಯಸೇವೆಯನ್ನು ಮಾಡುತ್ತಲಿರುವ ಅನುಭವಿಕ ಲೇಖಕರು ಬರೆದ ಹೊಸ ಕಾದಂಬರಿ,
ಒಂದೇ ರೂಪಾಯಿ

೩. ಜೈನಧರ್ಮ ಪರಿಭಾಷೆ. [ಪಂಡಿತ ಮ. ಪ್ರ. ಪೂಜಾರ,] ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ, ಸಾಮಾನ್ಯ ವಾಚಕರಿಗೂ ಉಪಯುಕ್ತವಾಗಿರುವ ಪಂಡಿತ ಪೂಜಾರರು ಬರೆದ ಅಪ್ರತಿಮ ಗ್ರಂಥ
೧—೪—೦

೪. ಶ್ರೀಹರ್ಷನೂ ಆತನ ನಾಟಕಗಳೂ [ನಾ. ವೆ. ಕುರಡಿ,] ಕುರಡಿಯವರ ಗ್ರಂಥಗಳು ಯಾವಾಗಲೂ ಉತ್ತಮ ವರ್ಗಕ್ಕೆ ಸೇರಿದುವು.
೦—೧೦—೦

ಇವಲ್ಲದೆ ನಮ್ಮಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ, ಕಥೆ ಕಾದಂಬರಿಗಳೂ ಮಾರಲಿಕ್ಕೆ ಸಿಗುವವು ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ್ ಕೊಡುವೆವು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443.

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨} ಧಾರವಾಡ ಸೋಮವಾರ ತಾರೀಖು ೧೪ನೇ ಸಪ್ಟಂಬರ ೧೯೩೧ (ಸಂಚಿಕೆ ೨೦೯

ಹಾವೇರಿಯಲ್ಲಿ ಮರಾಟಿಗರ ಹಾವಳಿ

....(೦)....

ಹಾವೇರಿಯಲ್ಲಿ ಹೋದ ವರಷ ಕೆಲವು ಕೊಂಕಣಸ್ಥ ಹೆಂಗಸರು ಭಗಿನೀ ಮಂಡಲವೆಂಬುದೊಂದು ಸಂಸ್ಥೆ ಸ್ಥಾಪಿಸಿ, ದೇಶಸೇವೆಮಾಡಲು ಮುಂದೊರೆದರು. ಆದರೆ ಮುಂದೆ ತಮ್ಮ ಸ್ವಾರ್ಥ ಸಾಧಿಸಿಕೊಳ್ಳಲು, ಏನೂ ಅರಿಯದ ಎಳೆ ಹೆಣ್ಣು ಮಕ್ಕಳಿಗೆ ಹಾಡುಗಳನ್ನು ಕಲಿಸಲು ಆರಂಭಿಸಿ, ಒಂದು ಮರಾಠೀ ಶಾಲೆಯನ್ನೇ ತೆರೆದರು. ಕನ್ನಡ ಹುಡಿಗಿಯರಾದರೂ ತಮ್ಮ ಸ್ವಾಭಾವಿಕ ಅಜ್ಞಾನತೆಯಿಂದ ಈ ಸ್ವಾರ್ಥ ಸಾಧಿಸುವ ಮರಾಠಿಗರಿಗೆ ಬಲಿಬಿದ್ದದ್ದು ಆಶ್ಚರ್ಯದ ವಿಷಯವಲ್ಲ. ಹುಡಿಗೆಯರು ಅಜ್ಞಾನಿಗಳಾದರೂ, ಅವರ ತಂದೆ ತಾಯಿಗಳು ಅಜ್ಞಾನಿಗಳಲ್ಲವಷ್ಟೇ? ಅವರೇಕೆ ಸುಮ್ಮನೆ ಕುಳಿತರು? ತಮ್ಮ ಕತ್ತಿಗೆಯನ್ನು ತಮ್ಮಿಂದಲೇ ಕೊಯಿಸುತ್ತಿರುವದನ್ನು ತಾವೇ ತಮ್ಮ ಕಣ್ಣಿನಿಂದ ನೋಡುತ್ತ ಕುಳಿತರೇ?

ನಾಳಿನ ಗಣೇಶಚೌತಿಗೆ ಆ ಭಗಿನೀ ಮಂಡಳದವರೇ ಕನ್ನಡ ಹುಡಿಗೆಯರಿಗೆ ಮರಾಠಿ ಪದಗಳ ಮೇಳೆಯನ್ನು ಮಾಡಿಸುವದಿದ್ದರೆ ಕನ್ನಡ ಹಾಡು ಸಿಗಲಿಲ್ಲವೇ ಅವರಿಗೆ? ... ಕರ್ನಾಟಕದ ಪಟ್ಟಣವಾದ ಹಾವೇರಿಯಲ್ಲಿ ... ಪ್ರವೇಶವೇ? ಕನ್ನಡಿಗರೇನು ಹೆಂಗಸರ ... ಮೀಸೆ ಹೊತ್ತಿಲ್ಲವೇ? ಅವರಿಗೆ ಕನ್ನಡದ ಅಭಿಮಾನ ಇಲ್ಲದಾಯಿತೇ? ಕಾಂಗ್ರೆಸ್ಸಿನ ದೇಶಭಕ್ತರು ತಮ್ಮ ಕನ್ನಡವನ್ನು ಮೂಲೆಗೆ ಒತ್ತು ಮಾಡುವದನ್ನು ಕಣ್ಣು ತೆರೆದು ನೋಡುತ್ತ ಕುಳಿತಿರುವರಲ್ಲವೆ? ದೇಶಭಕ್ತರಾದರೆ, ಸ್ವಭಾಷೆಯನ್ನು ... ಕತ್ತೀಜನ ... ಲಕ್ಷ್ಯ ಕೊಟ್ಟಿದ್ದ ...

... ರಾಠಿಗರ ಹಾವಳಿ ಶುರುವಾದದ್ದು, ಅವರೇನು ಕನ್ನಡಿಗರೋ ಅಥವಾ ಕೊಂಕಣಿಗರೋ?

ಕನ್ನಡಿಗರೇ, ಇನ್ನು ಸುಮ್ಮನೆ ಕೂಡ್ರುವದು ಉಚಿತವಲ್ಲ. ಈ ದೇಶಭಕ್ತರ ಮೇಲೆ ಭಾರವಾಕಿ, ಅವರು ಮಾಡಿದ್ದೆಲ್ಲ ಒಳಿತೆಂದು ಅನ್ನುತ್ತ ಕೂಡ್ರುವ ಕಾಲ ಈಗಿಲ್ಲ. ಅವರೇ ಮಾತೃಭಾಷೆಯನ್ನು ಕೊಲ್ಲಲು ಯತ್ನಿಸಿದರೆ- ಅವರೆಂಥ ದೇಶಭಕ್ತರು? ಇಳಿರನ್ನು ಮರಾಠಿಗರ ಆಟವನ್ನು ತಡೆಯುವದು ನಿಮ್ಮೆಲ್ಲರನ್ನು ಕಾದಿದೆ. ನಾಳಿನ ಗಣೇಶ ಚೌತಿಯಲ್ಲಿ ಮರಾಠೀ ಹಾಡಿಸಗೊಡಬಾರದೆಂದು ನೀವು ನಿಶ್ಚಯಿಸಿದಲ್ಲಿ ಅದು ಎಷ್ಟು ಹೊತ್ತಿನ ಮಾತು. ನಿಮ್ಮ ಸಂಸ್ಕೃತಿ, ನಿಮ್ಮ ಸಂಪತ್ತು, ನಿಮ್ಮ ತಾಯಿಭಾಷೆ, ನೀವು ಹುಟ್ಟಿದಂದಿನಿಂದ ಇಂದಿನವರೆಗೆ ಮಾತನಾಡುತ್ತ ಬಂದ ಭಾಷೆಯನ್ನು ಕೊಲ್ಲುವದನ್ನು ನಿಮ್ಮ ಕಣ್ಣಿನಿಂದ ನೋಡಿ, ಕಿವಿಯಿಂದ ಕೇಳಿ, ನಲಿಯುವಿರಾ? ನಿಮ್ಮ ಹೆಣ್ಣು ಮಕ್ಕಳು, ತಂಗೆಂದಿರು, ನಿಮ್ಮ ತಾಯಿಯನ್ನು (ಅಜ್ಞಾನತೆಯಿಂದ) ಕೊಲ್ಲುವದನ್ನು ನೋಡುವಿರಾ? ನಿಮ್ಮ ಮಕ್ಕಳನ್ನು ನಿಮ್ಮ ತಂಗೆಂದರನ್ನು ಇಂದಿನಿಂದಲೇ ಆ ಸ್ವಾರ್ಥ ಮರಾಟಿಗರ ಸಂಬಂಧವನ್ನು ಬಿಡಿಸಿ, ನಿಮ್ಮ ಸಂಸ್ಕೃತಿ, ಉಚ್ಚ ಸಂಸ್ಕೃತಿಯನ್ನು ಉಜ್ವಲಗೊಳಿಸಬಾರದೇ?

ಕತ್ತಿಗೆಕೊಯ್ಯುವವರಿಗೆ ದೇಶಸೇವೆಯ ಮುಖ್ಯವಾಕಿ, ಹೀಗೆ ಹೊತ್ತು ಸಾಧಿಸು ಬುದ್ಧಿಗಳಿಸುವ ಸಮಯ ಬಂದಿದೆ. ಇಳಿರನ್ನು ನಾಳಿನ ಗಣೇಶಚೌತಿಯಲ್ಲಿ ಮರಾಠೀ ಹಾಡುಗಳನ್ನು ಬಂದು ಹಾಡಿಸಿದರೆ, ಏನು ಮಾಡುವದು ನಿಮ್ಮನ್ನೇ ಕಾದಿದೆ.

ಇತ್ತೀಚಿಂದು ತಿಂಗಳಿಗೆ ನಾಶಹೊಟ್ಟ ಕನ್ನಡ ... ನಿಮ್ಮ ಕನ್ನಡಿತಿಯರಿಗೆ ಕನ್ನಡ ಹಾಡು ... ಮೇಳಗಳಲ್ಲಿ ಹಾಡಿಸಿನೋಡಿರಿ. ಜಾಗ್ರತರಾಗಿರಿ ದೊಡ್ಡ ಹಬ್ಬ, ಅದು ಕರ್ನಾಟಕಕ್ಕೆ ... ನಾಲ್ಕು ಜನ ಮರಾಠಿಗರ ಮೋಹಕ್ಕೆ ಬೀ... ನಿಮ್ಮ ನಾಡನ್ನು ಉದ್ಧರಿಸಲು ಏಳಿರಿ.

ಸ್ಥಳ

(೧) ಶ್ರೀ ಪಟವರ್ಧನ ವಕೀಲರ ಅಟ್ಟ. ೨ ಶ್ರೀ ಮಿರೀ ಎಾಸ್ತ್ರರರ ಮನೆ.

ಕಲಿಸಿಕೊಡುವರು

೧ ಸೌ ಸುಂದರಾಬಾಯಿ ಖರೆ ೨ ಸೌ|| ಜೋಗಳೇಕರ ೩ ಸೌ|| ಗುಲವಾಡಿ ೪ ಗೋಕರ್ಣ ೫ ಡಾ|| ದೇವಧರ ೬ ನರ್ಸ ೭ ಶ್ರೀಮತಿ ಕುಂದೀಹಳ್ಳಿ ೭ ಆರ್ಕಸಾಲಿ ಗಿರಿಜಾಬಾಯಿ ೮ ಸೌ||ಪಟವರ್ಧನ ೯ ಸೌ|| ಶಾಂತಾರಾಮ ಅವಧಾನ

ಕಲಿಯುತ್ತಿರುವರು

೧ ಸೌ|| ಕಮಲಾಬಾಯಿ ಕೊಲ್ಹಾಪೂರ ೨ ಪದ್ಮಾವತಿ ಅರ್ಕಸಾಲಿ ೩ ಗುಂಡೂತಾಯಿ ದೇಶಪಾಂಡೆ ೪ ಶ್ರೀ ಹೆಬಸೂರವರ ಮಗಳು ೫ ಶ್ರೀ ದೇಸಾಯಿಯವರ ಮಗಳು ೬ ಶ್ರೀ ಹೊಸಮನಿಯವರ ಮಗಳು ೭ ಶ್ರೀ ತಾಡಪತ್ರೀಕರವರ ಮಗಳು ೮ ಶ್ರೀ ನಾಯಿಕ ಇವರ ಮಗಳು ೯ ಕಂಗೂದರಿಯವರ (ವಕೀಲ) ಇವರ ಮಗಳು ೧೦ ಜ್ಯೋತಿಮಾರ್ತಂಡ ಶಾಸ್ತ್ರಿಯವರ ಮಗಳು ೧೧ ಎಮ್ ಎಮ್ ನಾಡಿಗೇರ ಮಗಳು ೧೨ ಶ್ರೀ ಆರ್ ಆರ್ ನಾಡಿಗೇರರ ಮಗಳು ೧೩ ಶ್ರೀ ... ಮಗಳು ೧೪ ... ೧೫ ಶ್ರೀ ಬಾಪಟರವರ ಮಗಳು.

ವಿಜಯ.

ತಾರೀಖು ೧೪-೯-೧೯೩೧ನೇ ಇಸ್ವಿ

ಇಂಗ್ಲಂಡಿನ ಬಜೆಟ್ಟಿನಲ್ಲಿ ಆರ್ಡಿನನ್ಸದ ದಬ್ಬಾಳಿಕೆ

ವಿತ್ತಪ್ರಧಾನ ಮಂಡಲದವರು ಮೊನ್ನಿನ ದಿವಸ ಪಾರ್ಲಮೆಂಟ ಸಭೆಯಲ್ಲಿ ತಮ್ಮ ಆದಾಯ ವೆಚ್ಚ ಜಾರಿಗೊಳಿಸುವ ಬಿಲ್ಲವನ್ನು ಸಾದರಪಡಿಸಿದರು. ಇಂಗ್ಲಂಡ ಸರಕಾರಕ್ಕೆ ಬಂದ ಕೊರತೆಯು ೭೪೭ ಲಕ್ಷ ಪೌಂಡು ಇದರಲ್ಲಿ ವೆಚ್ಚದಲ್ಲಿ ಕೈ ಬಿಗಿ ಹಿಡಿದು ೩೫೦ ಲಕ್ಷ ಪೌಂಡು ಉಳಿಸಿಕೊಂಡಿದ್ದಾರೆ. ಸಾಲ ತೀರಿಸುವದರಲ್ಲಿ ೧೩೬, ಹೊಸ ಕರದ ಉತ್ಪನ್ನದಿಂದ ೨೯೦, ಜಕಾತಿ ಮತ್ತು ೧೧೫, ಲಕ್ಷ ಹೀಗೆ ಗಳಿಕೆ ಉಳಿಕೆ ಮಾಡಿಕೊಂಡು, ೧೫ ಲಕ್ಷ ಪೌಂಡುಗಳ ಉಳಿತಾಯ ಮಾಡಿಕೊಂಡಿದ್ದಾರೆ. ಈ ಮೊದಲು ವಿಜಯದಲ್ಲಿ ಪ್ರಸಿದ್ಧ ಮಾಡಿದ ಮೇರೆಗೆ ಇನ್ಕಮ್ ಟ್ಯಾಕ್ಸದ ಸರ ಟ್ಯಾಕ್ಸಿನಲ್ಲಿ ನೂರಕ್ಕೆ ಹತ್ತರಂತೆ, ಬ್ರ್ಯಾಂಡಿಗೆ ಒಂದು ಪಿಂಟಿಗೆ ಒಂದಾಣೆ, ತಂಬಾಕ ಎಂಟಾಣೆ, ಪೆಟ್ರೋಲ ಗ್ಯಾಲನಕ್ಕೆ ಎರಡಾಣೆ, ಈ ಪ್ರಕಾರ ಕರ ಹೆಚ್ಚು ಮಾಡಿದ್ದಾರೆ. ಕರದಲ್ಲಿ ಒಂದು ರೂಪಾಯಕ್ಕೆ ನಾಲ್ಕಾಣೆಯನ್ನು ಕೊಡಬೇಕಾಗುತ್ತದೆ. ಇದು ಹೆಚ್ಚಿನ ಭಾರವು. ಪೋಲಿಸ, ವಿದ್ಯೆ, ಆಬಕಾರಿ, ದಂಡು ಮುಂತಾದ ಎಲ್ಲಾ ಖಾತೆಗಳ ಜನರ ಸಂಬಳವನ್ನು ಕಡಿಮೆ ಮಾಡಿದ್ದಲ್ಲದೆ, ಅವುಗಳ ಕಾರಭಾರದಲ್ಲಿಯೂ ಕೈಬಿಗಿ ಹಿಡಿದಿದ್ದಾರೆ. ವೆಚ್ಚ ಉಳಿತಾಯದ ರುಬ್ಬಗುಂಡು ತಿರುಗದಂಥ ಒಂದೂ ಖಾತೆ ಇರುವದಿಲ್ಲ. ಇಂಗ್ಲಿಷರಾಗಲಿ, ವಿಲಾಯಿತಿಯ ಇನ್ನಾವ ದೇಶದವರೇ ಆಗಲಿ; ನೌಕರಿಗಾರಿಕೆಯಲ್ಲಿ ಸ್ವೇಚ್ಛೆಯ ಪರಮಾವಧಿಗೆ ಹೋಗಿದ್ದಾರೆ. ತಿಂಗಳಿಗೆ ಒಂದು ರೂಪಾಯಿ ವೆಚ್ಚ ಬಂದರೆ, ಕುಡಿತಕ್ಕೆ ನಾಲ್ಕು, ಅಡಿಗೆಗೆ ಆರು, ಮುಖಸೌಂದರ್ಯಕ್ಕೆ ಅದಕ್ಕೂ ಹೆಚ್ಚು ವೆಚ್ಚ ಬಂದು, ಸಾಹಾಯ್ಯವೃತ್ತಿಯಿಂದಿರುವದಾತ್ತ ವಿಚಾರವಂತನಾಗು ವಿಟ್ಟುಕೊಳ್ಳಿಗೆ ಅಂಥಾಳ ಬಳೆದಿದ್ದಾರೆ. ಈ ನೌಕರಿಗಾರಿಕೆಯನ್ನು ಪ್ರತ್ಯಕ್ಷಪ್ರತ್ಯಕ್ಷ ರೀತಿಯಿಂದ ಕತ್ತರಿಸಬೇಕೆಂದು ವಿಚಾರ ನಡೆದಿದೆ. ಅದ್ದರಿಂದ ಕರ- ತಂಬಾಕ, ಪೆಟ್ರೋಲ ಇವುಗಳ ಮೇಲಿನ ಕರವನ್ನು ಮತ್ತಿಷ್ಟು ಹೆಚ್ಚಿಸಿದ್ದಾರೆ. ಪರದೇಶಗಳಿಂದ ಯಾವದೇ ಪ್ರಕಾರದ ವಿಲಾಸದ ಪದಾರ್ಥಗಳು ಇಂಗ್ಲಂಡದ ಭೂಮಿಗೆ ಸ್ಪರ್ಶಮಾಡದಂತೆ ಭದ್ರೋಪಾಯ ಮಾಡಬೇಕೆಂದು ಲಿಬರಲ ಮೆಂಬರರಾದ ಮಿ. ರನ್ಸಿಮನ್ನರೆಂಬಸಾಹೇಬರು ಪ್ರಧಾನರಿಗೆ ಸೂಚನೆ ಮಾಡಿದ್ದು, ಆ ಸೂಚನೆಯನ್ನು ಅಮಲಿನಲ್ಲಿ ತರುವ ಬಗೆಯನ್ನು ಗೊತ್ತುಮಾಡಲು ಮಂತ್ರಿ ಮಂಡಲದವರು ಮೂವರದೊಂದು ಕಮೀಟಿ ನೇಮಿಸಿದ್ದಾರೆ.

ಇಲ್ಲಿಯ ತನಕ ಮಂತ್ರಿಯವರ ವಿಚಾರದಿಂದ ಎಲ್ಲವೂ ನೆಟ್ಟಗೆ. ಆದರೆ ತಮ್ಮ ದಿವಾನಗಿರಿಯಲ್ಲಿ ಕ್ರಾಂತಿ ಮಾಡಿದಂತೆ, ಈ ಬಜೆಟ್ಟನ್ನು ಅಮಲಿನಲ್ಲಿ ತರುವ ವಿಷಯವಾಗಿಯೂ ಕ್ರಾಂತಿ ಎನಿಸುವಂಥ ದಬ್ಬಾಳಿಕೆಯ ಉಪಾಯವನ್ನೇ ಕೈಕೊಂಡಿದ್ದಾರೆ. ಲಾರ್ಡ ಆಯರ್ವಿನ್ನಸಾಹೇಬರು ಹಿಂದುಸ್ಥಾನದಲ್ಲಿ ತೆಗೆದಂಥ ಆರ್ಡಿನನ್ಸದ ಸ್ವರೂಪದ ಹುಕುಮಿನಿಂದಲೇ ಬಜೆಟ್ಟನ್ನು ಅಮಲಿನಲ್ಲಿ ತಂದುಬಿಟ್ಟರು. ಪಾರ್ಲಿಮೆಂಟ ಪದ್ಧತಿಯ ಪ್ರಕಾರ ಕೋಶಾಧ್ಯಕ್ಷರು ಸಭೆಯಲ್ಲಿ ಬಜೆಟ್ಟ ತರುವರು. ಅದರ ಮಂಜೂರಿಗಾಗಿ ಬೇರೆ ಬೇರೆ ಬಾಬುಗಳನ್ನು ಹೋಟಿಗೆ ಹಾಕುವರು. ಆಗ ಆ ಬಾಬುಗಳ ತಳಬುಡ ಶೋಧಿಸಿ, ಅವಕ್ಕೆ ಮಾಡತಕ್ಕ ಮರ್ಯಾದೆ ಮಾಡಬೇಕೆಂದು ಕೂಲಿಕಾರ ಪಕ್ಷದವರು ಸನ್ನಾಹಯಾಗಿ ವೀರ ಮಂಡಿಹಾಕಿ ಕೂತಿದ್ದರು. ಆರ್ಡಿನನ್ಸದಿಂದ ಬಜೆಟ್ಟು ಪಾಸ ಮಾಡಿಕೊಂಡದ್ದರಿಂದ, ಇವರ ಬಿಲ್ಲು ಬಾಣಗಳು ಹೆಗಲು ಬಿಟ್ಟು ಕೆಳಗೆ ಬರಲೇ ಇಲ್ಲ. ಈ ಪ್ರಕಾರ ನಿರಂಕುಶ ಪ್ರಭುತ್ವದ ನಿಷೇಧ ಮಾಡಿ, ವಾಡಿಕೆಯಂತೆ ಬಜೆಟ್ಟಿನ ವಿಚಾರಣೆಯಾಗಬೇಕೆಂದು ಕೂಲಿಕಾರರು ಸಭೆಯಲ್ಲಿ ರಂಪವು ತರತಕ್ಕವರಿದ್ದಾರೆ. ಮಂತ್ರಿ ಮಂಡಲದ್ದೇ ಬಹುಮತವಿರುವದರಿಂದ ಇವರ ಆಟವೇನೂ ಸಾಗದು. ಹಿಂದುಸ್ಥಾನದ ಅಸೆಂಬ್ಲಿ ಮತ್ತು ಇಂಗ್ಲಂಡದ ಪಾರ್ಲಮೆಂಟ ಇವೆರಡೂ ಒಂದೇ ವರ್ಗದವಾದವೆಂಬದೇ ವಿಶೇಷವು.

ಹೊಟ್ಟೆಗಿಲ್ಲದವರ ಡೋಲಿನ ವಿಚಾರ

---(೦)---

ಹೊಟ್ಟೆಗಿಲ್ಲದವರ ಡೋಲನ್ನು ಕಡಿಮೆ ಮಾಡಬೇಕೆಂಬ ವಿಷಯವಾಗಿಯೇ ಕೂಲಿಕಾರರಲ್ಲಿ ಒಟ್ಟಿಗೆ ಒಡಕಾಯಿತಷ್ಟೇ; ಆ ಕೂಲಿಕಾರ ವಿಚಾರವಾಗಿ ಮಂತ್ರಿಗಳು ಬಜೆಟ್ಟಿನಲ್ಲಿ ಮಾಡಿದ ಏರ್ಪಾಡು:—

ಡೋಲಿನಲ್ಲಿ ಕಡಿಮೆ ಮಾಡಿ, ೨೫೦ ಲಕ್ಷ ಪವನು ಉಳಿಸುವರು. ಈ ಪೂರ್ವದಲ್ಲಿ ಕಾರಖಾನೆಯವರು ಮತ್ತು ಕಾರಖಾನೆಯಲ್ಲಿ ದುಡಿಯುವಂಥ ಕೂಲಿಕಾರರು ಉದ್ಯೋಗಹೀನರ ಬದಿಯಿಂದ ಒಂದು ಪೌಂಡಿನಲ್ಲಿ ಏಳು ಪೆನ್ಸ ಕೊಡುತ್ತಿದ್ದರು. ಅದನ್ನು ಈಗ ಹತ್ತು ಮಾಡಿದರು. ಯಾವನೇ ಉದ್ಯೋಗಹೀನನಾಗಲಿ ಅವನಿಗೆ ೨೬ ವಾರಗಳ ತನಕ ಅವಿಚ್ಛಿನ್ನವಾಗಿ ಡೋಲು ಕೊಡುವರು. ಮುಂದೆ ಅವನಿಗೆ ಡೋಲ ಕೊಡಬೇಕೆಂದರೆ ಕೊಡುವದಾದರೆ- ಆ ಬಗ್ಗೆ ಆತನ ಪರಿಸ್ಥಿತಿಯ ವಿಚಾರ ಮಾಡಬೇಕೆಂದು ಗೊತ್ತು ಮಾಡಿದ್ದಾರೆ.

ಮಹಾತ್ಮರ ಇಂದಿನ ಕಾರ್ಯಕ್ರಮವು

....(೦) ...

ಇಂದು ಲಂಡನದಲ್ಲಿ ರಾಉಂಡಟೇಬಲ ಸೇರುವದು. ಮಹಾತ್ಮರು ಅದರಲ್ಲಿ ವಿಚಾರವಿನಿಮಯಗಳನ್ನು ಕೇಳುತ್ತಾ ಮೌನವೃತ್ತಿಯಿಂದ ಕೂಡ್ರುವರು. ಮಾತಾಡರು. ಏಕೆಂದರೆ- ಪ್ರತಿಪಕ್ಷ ತರಾಗುವಂಥ ಮಹತ್ವದ ಕಾರಣವಿರುವದಿಲ್ಲ. ಮರುದಿವಸ ತಮ್ಮ ವಿಚಾರಗಳನ್ನು ಜಾಹೀರ ಮಾಡುವರು.

ಇದೇನು ನಿಮ್ಮಪ್ಪನ ದೇಶವೇ ಎಂಥ ಸುರತದಲ್ಲಿ ಪ್ರಸಿದ್ಧವಾದ ಪುಸ್ತಕವನ್ನು ಮುಂಬಯಿ ಸರಕಾರದವರು ಜಪ್ತ ಮಾಡಿದ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ ಅದೇ ಪ್ರಕಾರ ರಾಉಂಡಟೇಬಲವು ಮಹಾತ್ಮರ ಅಪ್ಪನದೇ? ಅವರೊಬ್ಬರಿಲ್ಲದಿದ್ದರೇನಾಗುವದೆಂದು ಮಾರ್ನಿಂಗ ಪೋಸ್ಟ ಪತ್ರವು ಹೀಯಾಳಿಸಿದೆ ರಾಉಂಡಟೇಬಲವು ಯಾರ ಅಪ್ಪನ ಮನೆಯಿಂದಿರುತ್ತದೆಂಬದು ಪೋಸ್ಟಿಗೆ ತಿಂಗಳೆರಡು ತಿಂಗಳಲ್ಲಿ ತಿಳಿಯುವದು.

ಮಹಾತ್ಮರು ರಾಉಂಡಟೇಬಲಿಗಾಗಿ ಯಾವ ಯೋಜನೆ ಮಾಡಿಲ್ಲ. ಹೊಳವು ಹಾಕಿಲ್ಲ. ಯಾವ ಪ್ರಕಾರದ ಭಾಷಣಮಾಡಬೇಕೆಂದು ಸೂಚಕ ವಿಚಾರಗಳನ್ನು ಬರೆದಿಟ್ಟುಕೊಂಡಿಲ್ಲ ಕೋರ್ಟಿನ ಪ್ರತಿಕೂಲ ಖಂಡನಮಂಡನ ಇವೆಲ್ಲವುಗಳ ಬಗೆಯಾಗಿ ಒಂದೂ ವಿಚಾರಮಾಡಿಲ್ಲ. ಇವರ ಹೃದಯನಿವಾಸಿಯಾದ ಪರಮಾತ್ಮನು ಆಗಾಗ್ಗೆ ಮಾಡುವಂಥ ಪ್ರೇರಣೆಯಂತೆ ನಡೆಯುವರು.

ಹಡಗದಲ್ಲಿ ಮಹಾತ್ಮರಿಗೆ ದೇಶದೇಶಗಳಿಂದ ಬರುತ್ತಿದ್ದ ತಾರುಗಳು ಮತ್ತು ಅವಕ್ಕೆ ಮಹಾತ್ಮರು ಕೊಡಬೇಕಾದ ಉತ್ತರಗಳ ದೆಸೆಯಿಂದ ಮೂವರು ತಾರು ಮಾಸ್ತರರು (ರೇಡಿಯೋ ಆಪರೇಟರರು) ಅವಿರತವು ಹಗಲುರಾತ್ರಿ ದುಡಿಯಬೇಕಾಯಿತು. ಉತ್ತರದ ತಾರುಗಳಿಗೆ ಕೊಡಬೇಕಾದ ಹಾಸಿಲಕ್ಕೆ ಇಟ್ಟಿದ್ದ ಎಲ್ಲ ಗಂಟು ತೀರಿ ಹೋಗಲು, ಇದಕ್ಕಾಗಿ ಮಹಾತ್ಮರು ಕೈಗಡ ಇಸಕೊಳ್ಳಬೇಕಾಯಿತು.

ಮಹಾತ್ಮರ ಹಡಗದ ಪ್ರವಾಸವು ಸುಖಕರವಾಯಿತು. ಇವರಿಗೆ ಎಲ್ಲಾ ತರದ ಸಾಕ್ಷರ್ತುಗಳನ್ನೊದಗಿಸಿಕೊಡಲು ಕಪ್ತಾನನು ಕೈಕಟ್ಟಿಕೊಂಡು ಸಿದ್ಧನಾಗಿದ್ದನು. ಹಿಂದುಸ್ಥಾನದಲ್ಲಿ ಮಾಡುತ್ತಿದ್ದದಕ್ಕಿಂತ ಹೆಚ್ಚು ಕೆಲಸ ಮಾಡುತ್ತಿದ್ದರು. ಅದರೂ ದೇಹಪುಷ್ಟಿಯು ಎರಡೇ ಪೌಂಡಿನಷ್ಟು ಹೆಚ್ಚಾಯಿತು. ಇವರ ತೂಕ ೯೬ ಪೌಂಡಾಗಿರುತ್ತದೆ.

ಹಡಗವು ಮಾರ್ಸೆಲಿಸ ಬಂದರಕ್ಕೆ ಬಂದಕೂಡಲೆ- ಹಿಂದೀ ವಿದ್ಯಾರ್ಥಿಗಳು ಹಾಗು ಮಿ. ಜಾರ್ಜ, ಮಹಾತ್ಮರ ಸ್ವಾಗತ ಮಾಡಿದರು. ಇವರ ದರ್ಶನಕ್ಕಾಗಿ ಅಸಂಖ್ಯವಾಗಿ ಫ್ರೆಂಚ ಜನ ಬಂದಿತ್ತು. ಹಡಗದಿಂದಿಳಿದಾಗಾದ ದಟ್ಟಣೆಯಿಂದ ಪೋಲೀಸರು ಬಂದರು. ಮಹಾತ್ಮರು ವರ್ತಮಾನ ಪತ್ರಗಳ ಸುದ್ದಿಗಾರರ ಹಾಗೂ ಜನರ ಗುಂಪು ಮಾಡಿ, ಅವರು ಕೇಳಿದ ಪ್ರಶ್ನಗಳಿಗೆ ಉತ್ತರ ಕೊಟ್ಟರು. ಫೋಟೋ ತಕ್ಕೊಳ್ಳುವಂಥವರೂ ಅನೇಕರಾಗಿದ್ದರು.

ನೀವು ಲಂಡನಕ್ಕೆ ಹೋದ ಬಳಿಕ ಬಾದಶಹರನ್ನು ಕಾಣಲಿಕ್ಕೆ ಹೋಗುವಿರಾ ಎಂಬದಾಗಿ ಮಾಡಿದ ಪ್ರಶ್ನಕ್ಕೆ ನಾನು ಇಂಗ್ರೇಜ ಸರಕಾರದ ಕೈದಿಯಾಗಿದ್ದೇನೆ. ಕೈದಿತನವನ್ನು ಆದಂದಿನಿಂದ ಸ್ವೀಕರಿಸಿದ್ದಾಗಿದೆ. ಎಲ್ಲವೂ ಅವರ ಇಚ್ಛೆಯನ್ನವಲಂಬಿಸಿದೆಂದು ಉತ್ತರ ಕೊಟ್ಟರು.

ಹಿಂದುಸ್ಥಾನವು ಸ್ವಾತಂತ್ರ್ಯ ಸಂಪಾದನ ಮಾಡಬೇಕೆಂದು ನನ್ನ ಈ ವರೆಗಿನ ಕನಸು. ಆ ಕನಸನ್ನು ನಿಜ ಮಾಡಿಕೊಳ್ಳಲು- ನಾನು ಇಂಗ್ಲಂಡಕ್ಕೆ ಬಂದಿದ್ದೇನೆಂದು ಮಹಾತ್ಮರು ಇಂಗ್ಲಂಡದ ಭೂಮಿಯ ಮೇಲೆ ಕಾಲಿಡುವಾಗ ಉದ್ಗಾರ ತೆಗೆದಿದ್ದಾರೆ.

ಮಹಾತ್ಮರು ಲಂಡನದಲ್ಲಿರುವ ತನಕ ಗುಪ್ತ ಪೋಲಿಸರು ಸಾಧಾ ಉಡಿಗೆಯಲ್ಲಿ ಶಸ್ತ್ರಧಾರಿಯಾಗಿ ಹಗಲಿರಳು ಮಹಾತ್ಮರ ಅಂಗ ರಕ್ಷಕರಾಗಿರುವರು.

ಬುಧವಾರದ ರಜೆ—

ವಿನಾಯಕ ಚತುರ್ಥಿಯ ದಿನದಿಂದ ನಾಳೆ ಮಂಗಳವಾರ ದಿವಸ ಮುದ್ರಾಲಯಕ್ಕೆ ರಜೆ ಇರುವದರಿಂದ, ಬುಧವಾರದ ವಿಜಯವು ಪ್ರಕಟಿಸಲ್ಪಡಲಾರದು.

ಕಾಯಂದಿರು ಎಂಥ ಮಕ್ಕಳನ್ನು ಹೆರಬೇಕು.

—(೦)—

ಅಹಮದಾಬಾದಿನಲ್ಲಿ ಪಂಡಿತ ಜವಾಹರಲಾಲರು ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು. ಸಭೆಗೆ ಬಹುವಾಗಿ ಸ್ತ್ರೀಯರು ಬಂದಿದ್ದರು. ಆಗ ಇವರು ಅಕ್ಕಗಳಿರಾ- ನೀವು ಹೆರುವ ಮಕ್ಕಳು ಅಂಥಿಂಥವರಾಗಬೇಕಾಗಿಲ್ಲ. ಭಾವೀ ಸ್ವರಾಜ್ಯದಲ್ಲಿ ಸ್ವಾತಂತ್ರ್ಯ ಸೌಖ್ಯವನ್ನು ಭೋಗಿಸುವಂಥ ಸನ್ಮಾನ್ಯ ನಾಗರಿಕರಾಗುವಂಥವರಾಗಬೇಕು ಅಂಥ ಶುದ್ಧ ಭಾವದಿಂದ ಮಕ್ಕಳನ್ನು ಹಡೆಯಿರಿ. ಮಕ್ಕಳನ್ನು ಹಡೆಯುವ ಮೊದಲು ಸ್ವಾತಂತ್ರ್ಯಕ್ಕಾಗಿ ಹೋರಾಡಿರಿ. ಮತ್ತು ನಿಮ್ಮ ಸ್ತ್ರೀ ಜಾತಿಯ ಸ್ವಾತಂತ್ರ್ಯಕ್ಕಾಗಿಯೂ ಹೋರಾಡಿರಿ. ನಮಗೆ ಬರೇ ಕಾಗದದ ಮೇಲಿನ ಸ್ವರಾಜ್ಯ ಬೇಕಾಗಿಲ್ಲ. ಹೊಟ್ಟೆಗೆ ಕೂಳು ಕೊಟ್ಟು ಕರುವಂಥದ್ದಾಗಬೇಕೆಂದಿದ್ದಾರೆ.

ಪಂಢರಪೂರದ ಶ್ರೀ ಪಾಂಡುರಂಗನ ಮುಕ್ಕಾ ಸತ್ಯಾಗ್ರಹ.

—(೦)—

ಶ್ರೀ ಪ್ರಜ್ಞಾನೇಶ್ವರ ಮಹಾರಾಜರು ತಮ್ಮ ಸಶೇಷಿ ಮಗಳಿಂದ ಶ್ರೀ. ಪಾಂಡುರಂಗನ ಪಾದಸ್ಪರ್ಶ ಮಾಡಿಸಿದ್ದನ್ನು ಈ ಮೊದಲು ಬರೆದಿದ್ದೇವೆ. ಇದು ಎಲ್ಲಾ ಜನರಿಗೆ ತಿಳಿಯದು, ಅಥವಾ ಪೂರ್ವಾಶ್ರಮದ ತಮ್ಮ ಶಿಷ್ಯರಾದ ಅರ್ಚಕರಿಂದಾದ ಆಚಾತುರ್ಯವಾಗಿರಬಹುದೆಂದು ಕೆಲವರು ತರ್ಕಿಸಬಹುದು. ಆದ್ದರಿಂದ ಇಂದು ಸೋಮವಾರ ದಿವಸ ದೇವರ ಪಾದಸ್ಪರ್ಶಕ್ಕಾಗಿ ಸಶೇಷಿಯು ದೇವಾಲಯಕ್ಕೆ ಹೋಗುವಳು. ಅಲ್ಲಿ ಅಡ್ಡಿಯಾದರೆ- ಸತ್ಯಾಗ್ರಹ ಮಾಡುವರೆಂದು ಸ್ವಾಮಿಯವರು ಜಾಹೀರ ಪತ್ರಿಕೆಯನ್ನು ಪ್ರಸಿದ್ಧ ಮಾಡಿದ್ದಾರೆ.

ಹಿಂದುಸ್ಥಾನ ಸರಕಾರದವರು ಒಪ್ಪಂದಿಕೆಯ ಭಂಗ ಮಾಡಿದ್ದರಿಂದ, ಪುನಃ ಕಾಯದೆಭಂಗದ ಕಹಳೆ ಹಿಡಿಯಲಿಕ್ಕೆ ಅಪ್ಪಣೆ ಕೊಡಿರೆಂದು ಕಾಂಗ್ರೆಸ ಕಮೀಟಿಯವರು ಮಹಾತ್ಮರಿಗೆ ತಾರು ಮಾಡಿದರು. ಈ ತಾರು ಹಡಗದಲ್ಲಿಯೇ ಮುಟ್ಟಿತು. ಅದು ಮುಟ್ಟಿದ ಬಳಿಕ ತಮ್ಮ ಮತ ತಿಳಿಸುವಂತೆ ಮಹಾತ್ಮರು ತಾರಿನಿಂದ ಪ್ರತ್ಯುತ್ತರ ಕೊಟ್ಟಿದ್ದಾರೆ. ಉತ್ತರ ಕೊಡುವ ಮೊದಲು ಮುಖ್ಯ ಮಂತ್ರಿ ಭಾರತ ಮಂತ್ರಿಗೆ ಈ ವಿಷಯ ತಿಳಿಸುವದೆಂಬದು ನಿಶ್ಚಯ.

ಧಾರವಾಡ ಮ್ಯುನಿಸಿಪಾಲಿಟಿ

ಚುನಾವಣೆಯ ಮತಪತ್ರಿಕೆಗಳನ್ನೆಣಿಸುವದಕ್ಕೆ ಪ್ರಾರಂಭ.

ನಿನ್ನೆ ಮಧ್ಯಾಹ್ನದಲ್ಲಿ ಮೊನ್ನಿನ ದಿವಸವಾದ ಮ್ಯುನಿಸಿಪಲ ಚುನಾವಣೆಯ ಮತಪತ್ರಿಕೆಗಳನ್ನು ಎಣಿಸುವದಕ್ಕೆ ಪ್ರಾರಂಭವಾಯಿತು. ಮೊದಲು ಅಸ್ಪೃಶ್ಯ ಮತ್ತು ಮುಸಲಮಾನರ ವಾರ್ಡುಗಳ ಮತಗಳನ್ನು ಎಣಿಸಿದರು. ಅಸ್ಪೃಶ್ಯರ ಪಕ್ಷದಿಂದ ಮಿ. ಹೊಂಗಲ ಮತ್ತು ಮುಸಲಮಾನರಲ್ಲಿ ಮೆಸರ್ಸ ಬಳ್ಳಾ, ಲಂಗೋಟಿ, ಪಠಾಣ, ಅಬ್ದುಲ್ಲಾಸಾಹೇಬ ಖಿಲಾಫತಿ ಮತ್ತು ಮೊಮ್ಮಗಟ್ಟಿಯವರು ಆರಿಸಲ್ಪಟ್ಟರು.

ಆ ನಂತರ ಹಿಂದೂ ಜನರ ಮೊದಲನೇ ವಾರ್ಡಿನ ಪೆಟ್ಟಿಗೆ ಒಡೆದರು. ಅವರಿಗೆ ಬಿದ್ದ ಹೋಟುಗಳು.

ಮಿ|| ಉಳವನಗೌಡ ೫೪೮

ಮಿ|| ಹಣಮಂತರಾವ

ಮುತಾಲೀಕ ದೇಸಾಯಿ ೪೫೫

ಮಿ|| ರಾ, ಬ. ಬಿ. ಎಲ್. ಪಾಟೀಲ ೩೪೩

ಮಿ|| ಗೋಪಾಳರಾವ ದೇಶಪಾಂಡೆ ೩೩೯

ಈ ಪ್ರಕಾರ ೪ ಹೋಟಿನಿಂದ ಶ್ರೀ|| ಗೋಪಾಳರಾಯರು ಅಪಯಶ ಹೊಂದಿದರು.

ಉಳಿದ ವಾರ್ಡುಗಳ ಚುನಾವಣೆಯು ಇಂದು ಪ್ರಾತಃಕಾಲ ಎಂಟು ಗಂಟೆಗೆ ಪ್ರಾರಂಭವಾಗುವದು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯು ಇದೇ ತಿಂಗಳ ೨೭ನೆಯ ತಾರೀಖಿನ ದಿವಸ ಗದಗಿನಲ್ಲಿ ಸೇರುವದು.

ಲಾರ್ಡ ವಿಲಿಂಗಡನ್ನ ಸಾಹೇಬರು ರಜೆಯ ಮೇಲೆ ಹೋಗುತ್ತಾರೆಂದು ಹುಟ್ಟಿದ ಸುದ್ದಿಯು ನಿರಾಧಾರವೆಂದು ಜಾಹೀರ ಮಾಡಲ್ಪಟ್ಟಿದೆ.

ಶ್ರೀ. ವಿಠ್ಠಲಭಾಯಿ ಪಟೇಲರು ಹ್ಯಯಾನಾದಿಂದ ಲಂಡನಕ್ಕೆ ಪ್ರಯಾಣ ಬೆಳೆಸಿದರು.

ಜರ್ಮನಿ ಸರಕಾರದವರು ಅಮೇರಿಕೆಯಲ್ಲಿ ಎರಡು ಸಾವಿರಟನ್ನ ಗೋದಿ ಕೊಂಡರು.

ಭೂಕಂಪಿನ ಹೆದರಿಕೆಯಿಂದ ಕ್ವೇಟಾದ ಎಂಟು ಸಾವಿರ ಜನರು ನಗರತ್ಯಾಗ ಮಾಡಿದರು.

ಕೊಂಡಿದ್ದಾರೆ ಜಗತ್ತಿನಲ್ಲಿರುವ ಎಲ್ಲಾ ಜನಾಂಗ ಮತ್ತು ಧರ್ಮಗಳಿಗಿಂತ ತಮ್ಮ ಹಿಂದೂ ಧರ್ಮವೂ, ಹಿಂದೂ ಜನಾಂಗವೂ, ಶ್ರೇಷ್ಠವಾದದ್ದಿರುತ್ತದೆಂದು ತೋರಿಸಬೇಕೆನ್ನುತ್ತಾರೆ. ಸಂಸ್ಥಾನಿಕರೂ, ಮಹಾಜನರೂ ತಮ್ಮ ಹಕ್ಕುಗಳ ಸಂರಕ್ಷಣೆಗಾಗಿ ತಮ್ಮ ಶಕ್ತಿಯನ್ನು ಉಪಯೋಗಿಸಬೇಕು."

ಬ್ರಹ್ಮದೇಶವು ಸ್ವತಂತ್ರವಾಗಬೇಕೇ? ಹಿಂದುಸ್ತಾನಕ್ಕೆ ಅಂಟಿಕೊಂಡಿರಬೇಕೇ? ಎಂಬುದಾಗಿ ವಿಚಾರ ಮಾಡಲು ಇಂಗ್ಲಿಷಸರಕಾರದವರು ೧೨ ಜನ ಮೆಂಬರರುಳ್ಳ ಒಂದು ಕಮಿಟಿ ನೇಮಿಸಿದ್ದಾರೆ. ಇವರೂ ವಿಲಾಯತಿಗೆ ಹೋಗುವರು. ಇವರಲ್ಲಿ ಒಬ್ಬ ಪ್ರತಿನಿಧಿಯು ಮಾತ್ರ ಆಮಂತ್ರಣ ಸ್ವೀಕರಿಸಲಿಲ್ಲ. ತಮ್ಮ ಪಕ್ಷದಿಂದ ಒಬ್ಬ ಸ್ತ್ರೀ ಪ್ರತಿನಿಧಿಯು ಇರಬೇಕೆಂದು ಸ್ತ್ರೀಯರು ಅಂದುಕೊಂಡು, ಈ ವಿಷಯವಾಗಿ ಗವ್ಹರ್ನರಸಾಹೇಬರ ಕಡೆಗೆ ಒಂದು ಶಿಷ್ಟಮಂಡಲ ಕಳಿಸುವರು.

ರಾವುಂಡ ಟೇಬಲಿನಲ್ಲಿ ಸಂಸ್ಥಾನಗಳ ಪ್ರಜರ ದೆಸೆಯಿಂದ ಬ್ರಿಟಿಶ ಇಲಾಖೆಯವರಂತೆ ಹಕ್ಕುಗಳನ್ನು ಪಡೆಯುವ ಪ್ರಯತ್ನದಲೋಸುಗ ಶ್ರೀ ಅಭ್ಯಂಕರ ಮತ್ತು ಶ್ರೀ ಅಮೃತಲಾಲಶೇಟರು ಇಂಗ್ಲಂಡಕ್ಕೆ ಹೋಗುವರು.

ಸರ ಸಪ್ರು ಜಯಕರರು ಮೋಜವಾನಿಯ ದೋಣಿಗತ್ತುದು ಅನೇಕ ಜನರನ್ನು ಕೂಡ ಹಾಕಿದರು. ಆಗ ರಾವುಂಡಟೇಬಲಿನ ಉಪಾಯಗಳ ಹೊಳವು ಹಾಕಿದರು. ಮಿ. ವ್ಯಾಕಡೋನಾಲ್ಡ ಹಾಗು ಸರಹೋರಸಾಹೇಬರಿಗೂ ಆಮಂತ್ರಣವಿತ್ತು. ಆದರೆ ಇವರು ತಮಗೆ ಬರುವದಕ್ಕಾಗದಬಗ್ಗೆ ವಿಷಾದವನ್ನು ವ್ಯಕ್ತಮಾಡಿದ ಪತ್ರ ಬರೆದಿದ್ದರು.

ಮಳೆಯಿಂದ ಲಂಡನದ ಹವೆಯು ಬಹಳ ಶೀತವಾದುದರಿಂದ ಮಹಾತ್ಮರು ಮೈಮೇಲೆ ಹೆಚ್ಚಾಗಿ ಒಂದು ಕಂಬಳಿ ಹೊದೆಯುತ್ತಿದ್ದಾರೆ.

ಧಾರವಾಡ

ಮ್ಯುನಿಸಿಪಾಲಿಟಿಯ ಮೂರನೆಯ ವಾರ್ಡಿನ ಚುನಾವಣೆಯಲ್ಲಿ ಮೆಸರ್ಸ ಕಂಬಾರದ, ಪಡಿಯರ ಮತ್ತು ಜಕಾತಿಯವರು. ನಾಲ್ಕನೆಯ ವಾರ್ಡಿನಲ್ಲಿ ಮೆಸರ್ಸ ಧಿಸೆ, ಕಮಲಾಪೂರ ಮತ್ತು ಲಕ್ಷ್ಮೇಶ್ವರ, ಐದನೆ ವಾರ್ಡಿನಲ್ಲಿ ಮೆಸರ್ಸ ಹಿರೇಮಠ, ಗೋವನಕೊಪ್ಪ ಹಾಗು ಗಿರಿಯಪ್ಪನವರ, ಆರನೇ ವಾರ್ಡಿನಲ್ಲಿ ಮೆಸರ್ಸ ಹೊಸಗ, ಅರೂರ ಮತ್ತು ಕರವೀರಪ್ಪ ಕುಲಕರ್ಣಿ ಇವರು ಆರಿಸಲ್ಪಟ್ಟರು.

ವಿಜಯ ಪುಸ್ತಕಾಲಯ ಧಾರವಾಡ

ವಿಜಯ ಪುಸ್ತಕಾಲಯದಲ್ಲಿ ಮಾರಲಿಕ್ಕೆ ದೊರೆಯುವ ಪುಸ್ತಕಗಳ ಪಟ್ಟಿಯು.

"ಈ ಕೆಳಗೆ ಬರೆದ ೪೦ ಪುಸ್ತಕಗಳು ಮುಂಬಯಿ ವಿದ್ಯಾಖಾತೆಯವರಿಂದ ವಾಚನಾಲಯಗಳನ್ನು ಕೆಲವು ಪಠ್ಯಪುಸ್ತಕವಾಗಿಯೂ ಮಂಜೂರಾಗಿವೆ.

೧	ಶಬ್ದಾನುಶಾಸನ	೪	ರೂ.
೨	ರಘುವಂಶ ೧ ರಿಂದ ೧೯ ಸ್ವರ್ಗಪೂರ್ಣ	೩	,,
೩	ಶ್ರೀ ವಿದ್ಯಾರಣ್ಯಸ್ವಾಮಿಗಳ ಚರಿತ್ರೆ	೧	,,
೪	ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಚರಿತ್ರೆ	೧	,,
೫	ರಾಮಾಶ್ವಮೇಧಸಾರ ಸಂಗ್ರಹ	೧	,,
೬	ದುರ್ಗಸಿಂಹನ ಪಂಚತಂತ್ರ, ಸಾ	೧	,,
೭	ಉತ್ತರರಾಮ ಚರಿತ್ರೆ	೧೨	ಆಣೆ
೮	ರಾಣಾ ರಾಜಸಿಂಹ	೧೨	,,
೯	ಶ್ರೀ ... ಧನ	೧೨	,,
೧೦	ಪಾರ್ವತೀ ಪರಿಣಯ ನಾಟಕ	೧೨	,,
೧೧	ಚಾಣಾಕ್ಷ ... ಬರಿ	೧೦	,,
೧೨	ಸತ್ಯಕಥಾ ಕುಸುಮ ಮಂಜರಿ (IV)	೧೦	,,
೧೩	ಪ್ರೇ... ರ	೮	,,
೧೪	... ನಾಟಕ	೮	,,
೧೫	ಮಾನಸ... ಸ್ತ್ರ	೮	,,
೧೬	ಗೃಹಪ್ರ...ಶ	೮	,,
೧೭	ಮೋಹೀ ಸುಂದರ ನಡಾವಳಿ	೮	,,
೧೮	ಸತ್ಯರಾಜಾ ಪೂರ್ವದೇಶದ ಯಾತ್ರೆ ಭಾಗ ೨	೮	ಆಣೆ
೧೯	ಕಾಲಿದಾಸ	೬	
೨೦	ಕರ್ನಾಟಕ ಸ್ವಪ್ನವಾಸವದತ್ತ	೬	,,
೨೧	ಅಭಿಷೇಕ ನಾಟಕ	೬	,,
೨೨	ಕಥಾಸರಿತ್ಸಾಗರ	೬	,,
೨೩	ಹಜರತ ಮಹಮದ ಪೈಗಂಬರರ ಚರಿತ್ರೆ	೬	
೨೪	ಬೇಗಮ್ ಸಮರು	೬	
೨೫	ಅಮೇರಿಕದೊಳಗಿನ ಬಡ ವಿದ್ಯಾರ್ಥಿಗಳು	೫	,,
೨೬	ಭೀಷ್ಮಾಚಾರ್ಯ	೫	,,
೨೭	ವೇಣೀಬಂಧನ	೪	
೨೮	ಪಂಡಿತ ರಾಜ	೪	,,
೨೯	ಹರೀಶನ ಪ್ರೇಮ	೪	,,
೩೦	ಸತಿಯೂ ಸುನೀತಿಯೂ	೪	,,
೩೧	ಆರ್ಯರ ಶಿಕ್ಷಣಪದ್ಧತಿ	೪	
೩೨	ಶೇರಷಹ	೪	,,
೩೩	ಸತ್ಯಕಥಾ ಕುಸುಮಮಂಜರಿ ಭಾಗ ೩	೪	
೩೪	ಪೆರಪನ್	೩	
೩೫	ಕವಿಕಾರ್ಯ ಪ್ರಶಂಸೆ	೩	
೩೬	ಕೌಸಲ್ಯಾಪರಿಣಯ	೩	,,
೩೭	ಇಸೋಪನ ಚರಿತ್ರೆ	೩	
೩೮	ಸುಭದ್ರಾಹರಣ	೨	,,
೩೯	ಯಾರೂ ಅರಿಯದ ರಾಧೆ	೨	,,
೪೦	ಕನ್ನಡ ಮಾತು ತಲೆ ಯೆತ್ತುವ ಬಗೆ	೧	,,
೪೧	ರಾಮಾಯಣ ಕಥಾಮೃತ ಸಾರ	೧	,,
೪೨	ಕರ್ನಾಟಕ ಕವಿಚರಿತ್ರೆ ,, ಭಾಗ ೧	೪	ರೂ.
೪೩	,, ಭಾಗ ೨	೫	,,
೪೪	,, ಭಾಗ ೩	೪	
೪೫	ಮಹಾರಾಣಿ ಲಕ್ಷ್ಮೀಬಾಯಿ	೧	ರೂ
೪೬	ಸಾವಿತ್ರೀ ಸತ್ಯವಾನ	೧೨	ಆಣೆ
೪೭	ಪದ್ಮಿನಿ	೧೨	
೪೮	ಪಾರ್ವತಿ	೮	,,
೪೯	ದಾಕ್ಷಾಯಿಣಿ	೮	,,
೫೦	ಕವಿತಾ ಕುಸುಮಮಂಜರಿ ಭಾಗ, ೧. ೨	೧೦	,,

ಮಾರಾಟಕ್ಕೆ ಸಿದ್ಧವಾಗಿವೆ.

೧. ನರಗುಂದ ಬಂಡಾಯ [ಪಂಡಿತ ಭೀ. ಜಿ. ಹುಲಿಕವಿ, [ಎಸ್. ಟೀ. ಸೀ.] ಜನರಿಗೆ ಓದಲಿಕ್ಕೆ ಹುರುಪು ಕೊಡುವ ವಿಷಯದಿಂದ ತುಂಬಿತುಳುಕುತ್ತಲಿದೆ.

ಒಂದೇ ರೂಪಾಯಿ

೨. ನಿಜವಾದ ವೀರ ಅಥವಾ ಜಗಮಲ್ಲ [ಶ್ರೀ. ಗು. ಘ. ಹಳಕಟ್ಟಿ,] ನಾಲ್ವತ್ತು ವರ್ಷಗಳಿಂದ ಸಾಹಿತ್ಯಸೇವೆಯನ್ನು ಮಾಡುತ್ತಲಿರುವ ಅನುಭವಿಕ ಲೇಖಕರು ಬರೆದ ಹೊಸ ಕಾದಂಬರಿ.

ಒಂದೇ ರೂಪಾಯಿ

೩. ಜೈನಧರ್ಮ ಪರಿಭಾಷೆ. [ಪಂಡಿತ ಮ. ಪ್ರ. ಪೂಜಾರ,] ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗು ಸಾಮಾನ್ಯ ವಾಚಕರಿಗೂ ಉಪಯುಕ್ತವಾಗಿರುವ ಪಂಡಿತ ಪೂಜಾರರು ಬರೆದ ಅಪ್ರತಿಮ ಗ್ರಂಥ

೧—೪—೦

೪. ಶ್ರೀಹರ್ಷನೂ ಆತನ ನಾಟಕಗಳೂ [ನಾ. ಪಿ. ಕುರಡಿ,] ಕುರಡಿಯವರ ಗ್ರಂಥಗಳು ಯಾವಾಗಲೂ ಉತ್ತಮ ವರ್ಗಕ್ಕೆ ಸೇರಿದುವು.

೦—೧೦—೦

ಇದಲ್ಲದೆ ನಮ್ಮಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ, ಕಥೆ ಕಾದಂಬರಿಗಳೂ ಮಾರಲಿಕ್ಕೆ ಸಿಗುವವು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ಕೊಡುವೆವು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಎಂಬುವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

N. B. 1443.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೨೨) ಧಾರವಾಡ ಗುರುವಾರ ತಾರೀಖು ೧೭ ನೇ ಸಪ್ಟಂಬರ ೧೯೩೧ (ಸಂಚಿಕೆ ೨೧೦

ಜೈನಮುನಿಗಳ ೩೪ ದಿವಸಗಳ ಉಪವಾಸ

—(೦)—

ಮುಂಬಯಿಯಲ್ಲಿ ಈರ್ವರು ಜೈನಮುನಿಗಳು ಶ್ರೀ ಜಯಚಂದಜಿ ಮತ್ತು ಬಿಜಯರಾವಜಿಯವರು ೩೪ ದಿವಸಗಳ ಉಪವಾಸ ಪ್ರಾರಂಭಿಸಿದ್ದಾರೆ ಬರು ವ ಏಕಾದಶಿಯ ದಿನಸ ಪಾರಣಿ ಮಾಡುವರು. ಇವರು ದಿನಾಲು ಬಿಸಿನೀರು ಮಾತ್ರ ತಕ್ಕೊಳ್ಳುವರು. ಎಲ್ಲಾ ನಿತ್ಯಕರ್ಮಗಳನ್ನು ಮಾಡುವರು. ಪಾರಣೆಯ ದಿವಸ ಜೈನರ ದೊಡ್ಡ ಜಾತ್ರೆ ಸೇರುವದು.

ತಾರು ಬಂದ ಕೂಡಲೆ ವಿಲಾಯಿತಿಗೆ ಹೊರಟು ಬರುವಂತೆ ಮಹಾತ್ಮರು ಪಂಡಿತ ಜವಾಹರ ಲಾಲರಿಗೆ ತಿಳಿಸಿದಂತೆ ವರ್ತಮಾನ ಪ್ರಸಿದ್ಧವಾಗಿರುತ್ತದೆ.

ಧಾರವಾಡ ಶ್ರೀ. ದೇಶಪಾಂಡೆ ಗೋಪಾಳರಾಯರು ರಾ. ಬ. ಬಿ. ಎಲ್ ಪಾಟೀಲರ ಚುನಾವಣೆಯ ವಿರುದ್ಧ ಜಡ್ಜಕೋರ್ಟಿನಲ್ಲಿ ದಾವೇ ಮಾಡುವರೆಂದು ತಿಳಿಯುತ್ತದೆ.

ಮುಂಬಯಿಯಲ್ಲಿ ಸೂಳೆಯರಿಗೆ ಮನೆಕೊಟ್ಟು ಕುಂಟಲತನದಿಂದ ಉಪಜೀವನ ಮಾಡಿಕೊಳ್ಳುತ್ತಿದ್ದ ಗುಜರಾಥಿ ಗಂಡಹೆಂಡರೀರ್ವರಿಗೂ ಮ್ಯಾಜಿಸ್ಟ್ರೇಟರು ೯ ತಿಂಗಳ ಸಕ್ತಮಜುರಿ ಶಿಕ್ಷೆ ಮತ್ತು ೧೨೦ ರೂಪಾಯಿ ದಂಡದ ಶಿಕ್ಷೆ ವಿಧಿಸಿದರು.

ಕರಾಚಿಯಲ್ಲಿ ರಾಜದ್ರೋಹದ ಆರೋಪದಿಂದ ಹಿಡಿಯಲ್ಪಟ್ಟ ಸ್ವಾಮಿ ಗೋವಿಂದಾನಂದರನ್ನು ಎರಡು ಸಾವಿರದ ಮುಚ್ಚಳಿಕೆಯ ಮೇಲೆ ಬಿಟ್ಟರು.

ತಿರುಪತಿಯು ಸುತ್ತಲು ೧೦. ವಾಯುವಾಡು, ಪುಂಗನೂರು ... ಚಿತ್ತೂರ ಸೀಮೆಯಲ್ಲಿ ಮಾರಿಗಾ ಬೇನೆಯು ... ಪ್ರಮ್ಹೋಸ್ತವಕ್ಕೆ ಬರತಕ್ಕವರಿಗೆ ಎಚ್ಚರಿಕೆ ...ದಾಗಿ ಮದ್ರಾಸ ಸರ್ಕಾರದವರು ಪ್ರಸಿದ್ಧಮಾಡಿದ್ದಾರೆ.

THE ANKALIGI BANK LTD.

Head Office
Kamankatta Dharwar

Branches
Ranebennur & Hirekerur

5%

Interest allowed on
ANNA SAVINGS BANK
DEPOSIT

Dharwar 3—1—1927 } K. B. ANKALIGI
Managing Director

ವಿಜಯದ ವರ್ಗಣಿ ದರ

ಬಿಡಿ ಪತ್ರಿಕೆ	
೧೨ ತಿಂಗಳಿಗೆ	ರೂ. ೧೨-೮-೧
೬ "	೬-೦-೪
೩ "	೪-೮-೨
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಿಗೆಯು ಎಂಟು ಲಕ್ಷದಮೇಲುಂಟು. ಹೇಳುಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮ್ಯಾನೆಜಿಂಗ ಡಾಯರೆಕ್ಟರ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದು ವರೇ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನ ಅವಾಂತರಿ ಕನ್ನಡದಲ್ಲಿ ಹಾಕುವದಿದ್ದರೆ ಅರು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ತಾ. ೧೭-೯-೧೯೩೧ನೇ ಇಸ್ವಿ

ಧಾರವಾಡ ಮ್ಯುನಿಸಿಪಾಲಿಟಿಯ ಚುನಾವಣೆಯಲ್ಲಿ

ಅಹಿರಾವಣ ಮಹಿರಾವಣ ಯುದ್ಧ

ಇಲ್ಲಿಯ ಮ್ಯುನಿಸಿಪಾಲಿಟಿಯ ಚುನಾವಣೆಯು ಅನೇಕ ಅಂತರಂಗಗಳನ್ನೂ, ಸೋಜಿಗಗಳನ್ನೂ ಭ್ರಾತೃದ್ರೋಹವನ್ನೂ, ಅವಿವೇಕವನ್ನೂ ಅಹಿರಾವಣ ಮಹಿರಾವಣ ಯುದ್ಧದಂಥ ಪ್ರಸಂಗಗಳನ್ನೂ, ಪರಸ್ಥಳದವರಿಗೆ ತಿಳಿಸುವದು ಅವಶ್ಯವದೆ ಚುನಾವಣೆಯಲ್ಲಿ ಉಮೇದವಾರರಾಗಿ ನಿಂತವರು ಕೂಪ ಮಂಡೂಕ ದೃಷ್ಟಿಯುಳ್ಳವರೇ ಆದರು. ವಿಶಾಲ ದೃಷ್ಟಿಯಿಂದ ನಡೆಯಲೇ ಇಲ್ಲ. ಮತ್ತ ಅಹಿರಾವಣ ಮಹಿರಾವಣರಂತೆ ಹೊಡೆದಾಡಿಕೊಂಡದ್ದಂತೂ ಬಹಳೇ ಗರ್ಹಣೀಯವಾಯಿತು. ನೊಣವು ತಾನು ಸತ್ತು, ಅನ್ಯರನ್ನೂ ಕೊಲ್ಲುತ್ತದೆಂದು ಗಾದೆಯ ಮಾತು. ಆ ಪ್ರಕಾರವೂ ಆಯಿತು. ಈ ಗೊಂದಲದಲ್ಲಿ ಎರಡು ಜೋಡು ಹುರಿಯಾಳು ಟಕ್ಕರ ಕಚ್ಚಿದವು. ಇವಕ್ಕೆ ಟಕ್ಕರ ಕಚ್ಚಲಿಕ್ಕೆ ಕಾರಣರಾದವರು ತಮ್ಮ ಘಾತ ಮಾಡಿಕೊಂಡದ್ದಂತೂ ಸರಿಯೇ? ಅದರ ಕೂಡ ತಮ್ಮ ಮನೆತನಗಳ ಮರ್ಯಾದೆಯನ್ನೂ ಕಳೆದರೆಂದು ಹೇಳಬೇಕಾಗುತ್ತದೆ.

ಉಮೇದವಾರಿಯ ಶಂಖನಾದ ವಾದ ಕೂಡಲೆ-ಇಂಥ ಸ್ವಜನಘಾತದ ಕೃತ್ಯ ಮಾಡಬೇಡಿರೆಂದು ಆ ನೇಕರು ಅನೇಕ ತರಹವಾಗಿ ಹೇಳಿದರು. ಆದರೆ- ಆ ಉಪದೇಶವು ಅರಣ್ಯರೋದನವಾಯಿತು. ಒಟ್ಟಿನಿಂದ ಈಗಿನ ಚುನಾವಣೆಯು ಬಹಳೇ ಅ ಸಹ್ಯವಾಯಿತು.

ಮೂರು ವರ್ಷಗಳ ಹಿಂದಾದ ಚುನಾವಣೆಯಲ್ಲಿ ಲಿಂಗಾಯತರೂ ಮರಾಟರೂ ಗೃಹಭೇದ ಮಾಡಿಕೊಂಡಿದ್ದರು. ಈ ಸಾರೆ ಅದರ ವೈಕುಂಠ ಎಣ್ಣೆ ರಾದರು. ಇದನ್ನು ಬ್ರಾಹ್ಮಣರು ಕಣ್ಣಾರೆ ನೋಡಿದರು, ಅದರ ಬೀಭತ್ಸ ಕಲ್ಲಕ್ಕಿಯಂಥ ನಾಟಕಗಾರಿಕೆಯನ್ನೂ ನಡೆಸಿದರು. ಚ ಮತ್ಕಾರವೇನೆಂದರೆ- ಸಮಯಬಂದಾಗ, ಇರಳು ಕಂದ ಭಾವಿಯಲ್ಲಿ ಹಗಲು ಬಿದ್ದಂತೆ ನಟಿಸಿ, ಆತ ಹತ್ಯದ ದೋಷ ಕಟ್ಟಿಕೊಂಡರು.

ಮೊದಲನೆಯ ವಾರ್ಡಿನಲ್ಲಿ ಶ್ರೀ. ದೇಶಪಾಂಡೆ ಗೋಪಾಳರಾಯರು ಉಳಿದರು. ಇದರಲ್ಲಿ ಇವರ ಆತ್ಮವಿಶ್ವಾಸವೇ ಹೆಚ್ಚಾಯಿತೆಂದು ಕೆಲವರೆನ್ನುವರು ಆದರೆ-ಅವರ ಮನೆತನದವರೇ ಅವರಿಗೆ ಹೋಟು ಹಾಕಲಿಲ್ಲೆಂಬ ಸಂಗತಿಯನ್ನು ಮರೆಯಲಾಗದು. ಇದೇ ತೆರೆಗೆ ಮೂರನೆಯ ವಾರ್ಡಿನಲ್ಲಿ ಕೌನ್ಸಿಲ ಮೆಂಬರರಾದ ಶ್ರೀ. ದೇಸಾಯಿ ಹಣಮಂತರಾಯರು ಮತ್ತು ಆರನೇ ವಾರ್ಡಿನಲ್ಲಿ ರಾವಸಾಹೇಬ ಕಟ್ಟೀ ಅಣ್ಣಾಚಾರ್ಯರನ್ನು ಅವರ ಹಿತೈಷಿಗಳೆಂಬ ದಾಯಾದಿಗಳೇ ಡಬ್ಬಿ ಹಾಕಲು ಕಾರಣರಾದರು ಗೃಹಛಿದ್ರವಿರದಿದ್ದರೆ- ಈ ಮೂವರೂ ಸಹಜವಾಗಿ ಆರಿಸಲ್ಪಡುತ್ತಿದ್ದರು.

ಸಾರ್ವಜನಿಕ ವಾರ್ಡಿನಲ್ಲಿ ವೈಷ್ಣವ, ಸ್ಮಾರ್ತ, ಕೊಂಕಣಸ್ಥ, ಕರ್‍ಹಾಡೆ, ಮರಾಟಿ, ಕನ್ನಡ ಎಂಬ ಹವಿನೆಂಟು ಪ್ರಕಾರದ ತೊಡರುಗಳಿದ್ದವು ಈ ಜಗಳ ಮತ್ತು ಪರಸ್ಪರ ಅಸೂಯದ ದೆಸೆಯಿಂದ ವಿದ್ಯಾ ಖಾತೆಯ ಇನ್ಸಪೆಕ್ಟರರಾಗಿದ್ದಂಥ ಮತ್ತು ವಯೋವೃದ್ಧರಾದಂಥ ಊರ ಕೆಲಸವನ್ನು ನಿರಭಿಮಾನದಿಂದ ಮಾಡುತ್ತಿದ್ದಂಥ ಶ್ರೀ. ಜೋಶೀ ವಿಠ್ಠಲರಾಯರು ಅಪಯಶ ಹೊಂದಿದ್ದು ಅತಿಶಯ ವಿಷಾದದ ಸಂಗತಿಯಾಯಿತು.

ಶ್ರೀ. ಮುದವೇಡ ಕೃಷ್ಣರಾಯರು ತಮ್ಮ ಹೆಂಡತಿಯನ್ನು ಉಮೇದವಾರಳಾಗಿ ನಿಲ್ಲಿಸಿದ್ದಂತೂ ಮೂರ್ಖತನದ ಪರಮಾವಧಿಯಾಯಿತು. ಶ್ರೀ ಸೌ॥ ರಾಧಾಬಾಯಿಯ ಬದಲಾಗಿ ಇನ್ನೂ ಶ್ರೀ. ಸೌ॥ ಪಂಚ ಕೃಷ್ಣಾಬಾಯಿಯವರು ನಿಂತಿದ್ದರೆ- ಎಷ್ಟೋ ಮಟ್ಟಿಗೆ ಶೋಭಿಸುತ್ತಿತ್ತು. ಶ್ರೀ ಸೌ॥ ರಾಧಾಬಾಯಿಯವರು ಅಷ್ಟು ಕಲಿತವರಲ್ಲ. ವ್ಯಾಸಂಗ ಮಾಡಿ, ವಿದ್ವತ್ತೆಯನ್ನು ಬೆಳೆಸಿಕೊಂಡವರಲ್ಲ; ಸಾರ್ವಜನಿಕ ಕೆಲಸಗಳ ಪರಿಚಯವಿದ್ದವರಲ್ಲ; ಹೀಜ ಮಾಸ್ತರಸ ಹಸ್ವಯಿಸವೆಂಬ ಗ್ರಾಮೋಫೋನವಿದ್ದಂತೆಯೂ ಅಲ್ಲ. ಸುಶಿಕ್ಷಿತ, ಸುಶಿಕ್ಷಿತೆಯರೂ, ಯಾವದೊಂದು ಕಾರ್ಯವನ್ನು ಸ್ವಬುದ್ಧಿಯಿಂದ ಘಟನಾಶಕ್ತಿಯಿಂದ ಮಾಡುವವರೂ ಮೆಂಬರರಾಗಬೇಕೆಂದು ರಾಯರು ಸಾರುತ್ತಾ ಬರೆಯುತ್ತಾ ಬಂದಿದ್ದಾರೆ. ಆ ಪಾಂಡಿತ್ಯ ಪ್ರವಚನವು ಪರೋಪದೇಶ ಪಾಂಡಿತ್ಯವೆಂದಾಯಿತು. ಬಹಳ ಹಳೆಯ ಮಾತು. ರಾಯರು ಮ್ಯುನಿಸಿಪಲ ಚುನಾವಣೆಯಲ್ಲಿ ಉಮೇದವಾರರಾಗಿದ್ದರು. ಆಗ ಇವರಿಗೆ ನೂರರೊಳಗೇ ಮತಗಳು ಬಿದ್ದಿದ್ದವು. ಆ ಮಾತಿಗೆ ೨೫ ವರ್ಷವಾದರೂ, ರಾಯರ ಆ ಹೋಟುಗಳು ಸರಿಬಿದ್ದಿ ಅಥವಾ ಹೆಚ್ಚಬಿದ್ದಿಯಂತೆ ಸಹ ಬೆಳೆಯದೆ, ಇದ್ದಕ್ಕಿದ್ದಂತೆಯೇ ಕರಗಿ ಹೋಗಿಬಿಟ್ಟವು. ಕಪ್ಪೆಯು ಎತ್ತಾಗಲಿಕ್ಕೆ ಪ್ರಯತ್ನಿಸಿದಂತೆ ರಾಯರ ಈ ಉಪದ್ವ್ಯಾಪವಾಯಿತು. ಹೀಂಗು ಸ್ಪಷ್ಟವಾಗಿ ಹೇಳುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ.

ವೀರಶೈವರಲ್ಲಿ ಡಾಕ್ಟರ ಕಾರ್ಡಿಕೇರಿಯವರು ಜಯ ಹೊಂದಲಿಲ್ಲ. ಅವರ ಸ್ಥಾನವನ್ನು ಶ್ರೀ ಪಡಿಯರ ವಕೀಲರು ಆಕ್ರಮಿಸಿದ್ದರಿಂದ, ಸಮಾಜ ದೃಷ್ಟಿಯಿಂದ ಯಾವ ಹಾನಿಯೂ ಆಗಲಿಲ್ಲ. ಶ್ರೀ ಹುಲಕೋಟಿಯವರ ಸ್ಥಾನವನ್ನು ಶ್ರೀ ಕುಲಕರ್ಣಿ ಶರವೀರಪ್ಪನವರು ಆಕ್ರಮಿಸಿದರು, ಶ್ರೀಗೋಪನಕೊಪ್ಪ ವಕೀಲರು ಐದನೆಯ ವಾರ್ಡಿನಲ್ಲಿ ಆರಿಸಲ್ಪಟ್ಟದ್ದು, ವಿಹಿತವಾಯಿತು. ಇದೇ ಸಾರೆ ಅಸ್ಪೃಶ್ಯರ ಚುನಾವಣೆಯಾಯಿತು. ಆಗಾಗ್ಗೆ ಬೇಸೆ ಬೀಳುವ ಮಿ. ಸಾಂಬ್ರಾಣಿಯವರಿಗಿಂತ ಮಿ. ಹೊಂಗಲರು ಆರಿಸಿ ಬಂದದ್ದೇ ನೆಟ್ಟಗಾಯಿತು. ಮುಸಲಮಾನರಲ್ಲಿ ಮೆಸರ್ಸ ಲಂಗೋಟಿ, ಬಕ್ಷಿ ಮತ್ತು ಮೊವಿಗಟ್ಟಿ ಈ ಮೂವರು ಹೊಸದಾಗಿ ಮೆಂಬರರಾದರು. ಸ್ಥಳಕಳಕೊಂಡವರಲ್ಲಿ ಮೆ॥ ಜವಳಿಸಾಹೇಬರ ದೆಸೆಯಿಂದ ಯಾರಿಗಾದರೂ ಹಳಹಳಿಯಾಗುವಂತಿರುತ್ತದೆ. ಇದರಲ್ಲಿ ಅವಶ್ಯಕ್ಕಿಂತ ಹೆಚ್ಚು ಜನರು ಉಮೇದವಾರರು ನಿಂತದ್ದು ಮೊದಲಿಗಿಂತ ಮಸಗುತಿ ಭಾರವೆಂತಾಯಿತು. ಚುನಾವಣೆಯ ಸ್ಥಾನಗಳು ಒಟ್ಟು ೨೪. ಇವುಗಳಲ್ಲಿ ೧೩ ಜನ ಹೊಸಬರು ಆರಿಸಲ್ಪಟ್ಟರು. ನಾಮಿನೇಶನವಾಗಿ ಕಮಿಟಿ ಸಾರ್ವಜನಿಕ ಇವರು ಮ್ಯುನಿಸಿಪಾಲಿಟಿಯಲ್ಲಿ ಚಟುವಟಿಕೆ ಹುಟ್ಟುವಂಥ ರೀತಿಯನ್ನೇ ಅವಲಂಬಿಸುವರೆಂದು ಆಶಿಸುತ್ತೇವೆ.

ಬಾಂಬಿನಿಂದ ಉಗಿಬಂಡಿ ಹಾರಿ

೨೫ ಜನರು ಸತ್ತರು.

....(೦)....

ಹಂಗೇರಿಯಲ್ಲಿ ಬೊಲ್ಶೆವಿಕ ಪಂಥದವರು ಮುಖ್ಯ ಪಟ್ಟಣವಾದ ಬೂಡಾಪೆಸ್ಟದಿಂದ ಹತ್ತು ಮೈಲುಗಳ ಮೇಲೆ ಕೋಲೋನಕ್ಕೆ ಹೋಗುವ ಒಂದು ಎಕ್ಸಪ್ರೆಸ ಬಂಡಿಯನ್ನು ಬಾಂಬಿನಿಂದ ಹಾರಿಸಿದರು. ಬಾಂಬಿನಿಂದ ಇಡೀ ಬಂಡಿಯು ಪುಟಿದು ನೂರು ಫೂಟು ಎತ್ತರದಿಂದ ಕೆಳಗೆ ಉರುಳಿ ಬಿತ್ತು. ಅನೇಕ ಡಬ್ಬಿಗಳು ಚೂರುಚೂರಾದವು. ೨೫ಜನರು ಸತ್ತೇ ಹೋದರು. ಇಬ್ಬರನ್ನು ಹಿಡಿದಿದ್ದು ಒಬ್ಬನಂತೂ ಮುರಿದುಬಿದ್ದ ಬಂಡಿಯ ಭಾವಚಿತ್ರ ತೆಗೆದುಕೊಳ್ಳುತ್ತಿದ್ದನು. ಬೊಲ್ಶೆವಿಕರು ಇಂಥ ಅನೇಕ ಅತ್ಯಾಚಾರಗಳನ್ನು ಮಾಡುತ್ತಿದ್ದಾರೆ.

ಲಂಡನದಲ್ಲಿ ಮಹಾತ್ಮರ ಮೊದಲನೆಯ ಭಾಷಣ

ಹೋದ ವರ್ಷ ರಾವುಂಡಟೇಬಲಿಗೆ ಹೋದ ಪ್ರತಿನಿಧಿಗಳಿಗೆಂಥ ಆದರವಾಯಿತೆಂಬದನ್ನು ನೆನಪಿಗೆ ತಂದುಕೊಳ್ಳಲಿಕ್ಕೆ ಒಂದೇ ಉದಾಹರಣೆ ಸಾಕು. ಇವರು ವ್ಯಾಪಾರೋದ್ಯಾನದ ನಗರಗಳನ್ನು ನೋಡಲಿಕ್ಕೆ ಹೋದಾಗ ಬೇರೆ ರಾಷ್ಟ್ರಗಳ ಪ್ರತಿನಿಧಿಗಳು ಪಕ್ವಾನ್ನಗಳನ್ನು ಸವಿದು, ತೇಗಿ, ಮೀಸೆ ಹುರಿಮಾಡುತ್ತಿದ್ದಾಗ, ಇವರ ಮುಂದೆ ಗೋದಿ ರೊಟ್ಟಿಯ ನಾಲ್ಕು ತುಕಡಿಗಳನ್ನು ಚಲ್ಲಿದ್ದರು. ಇವರ ಆ ಮರ್ಯಾದೆ ಮತ್ತು ಇಂದು ಇಂಗ್ಲಿಷ ಸರಕಾರದವರು ಮಹಾತ್ಮರಿಗೆ ಮಾಡುತ್ತಿರುವ ಮರ್ಯಾದೆಗೆ ಭೂಮ್ಯಾಕಾಶದಷ್ಟು ಅಂತರವುಂಟು. ಅಥವಾ ಎರಡನ್ನೂ ತುಲನ ಮಾಡಲಿಕ್ಕೆ ಬರಲಾರದು.

ಮಹಾತ್ಮರು ದಯಮಾಡಿಸಿದ ಕಡಲ- ಯಾವ ಕಮೀಶನರ ದರ್ಜೆಯವರು ಇವರನ್ನು ಒಂದು ವರ್ಷದ ಹಿಂದೆ ತುರಂಗದಲ್ಲಿ ಹಾಕಲು- ಹುರುಪುಗೊಂಡಿದ್ದರೋ? ಅದೇ ದರ್ಜೆಯವರು ಇವರ ಮೋಟಾರ ಡ್ರಾಯವ್ಹರರಾದರು. ಮಹಾತ್ಮರ ಸ್ವಾಗತ ಮಾಡಲು ಎಷ್ಟೋ ಜನ ಯುರೋಪಿಯನ್ನರು ಗಾಂಧೀ ಟೊಪ್ಪಿಗೆ ಹಾಕಿದ್ದರು. ಮಹಾತ್ಮಾಗಾಂಧಿಕಿ ಜಯವೆಂಬ ಜಯ ಜಯಕಾರದಿಂದ ದಿಕ್ಕಾಮಂಡಲವನ್ನು ವ್ಯಾಪಿಸಿದರು. ಮಳೆ ಸುರಿಯುತ್ತಿದ್ದರೂ, ತೋಯಿಸಿಕೊಂಡು ಸಾವಿರಾರು ಜನರು ಇವರ ದರ್ಶನೋತ್ಸುಕರಾಗಿ ನಿಂತರು. ಎಷ್ಟೋ ಜನರು ಸಭಾಸ್ಥಾನದ ಸುತ್ತಲು ಹಾಕಿದ್ದ ತಂತಿಯನ್ನು ಹಾರಿ ಒಳಗೆ ಹೋದರು. ಮಹಾತ್ಮರು ತುರಂಗದಲ್ಲಿರುವಾಗ ಹಿಂದುಸ್ಥಾನಕ್ಕೆ ಸ್ವರಾಜ್ಯ ತರುತ್ತೇವೆಂದು ಹೆಮ್ಮೆತೊಟ್ಟು ಹೋದ ಸರ ಸಪ್ರು ಮತ್ತು ನಾಮದಾರ ಶ್ರೀನಿವಾಸಶಾಸ್ತ್ರಿಯವರು ಇವರನ್ನು ಬರಮಾಡಿಕೊಳ್ಳಲು ಫೋಕ್‌ಸ್ಟೋನ ಸ್ಟೇಶನಕ್ಕೆ ಹೋದರು. ಮಹಾತ್ಮರನ್ನು ಎದುರುಗೊಳ್ಳಲು ೧೫೦೦ ಜನರು ಸೇರಿದರು. ಇವರಲ್ಲಿ ಧರ್ಮಾಧಿಕಾರಿಗಳಾದ ಪಾದ್ರಿಗಳು, ರಾಜಕಾರಣಪಟುಗಳು ಸಾಮಾಜಿಕ ಸುಧಾರಕರು, ವರ್ತಕರು, ರೈತರು, ಇವರೇ ಮೊದಲಾದ ಎಲ್ಲಾ ದರ್ಜೆಗಳ ಹಾಗು ಸಂಗಡಿಗಳ ಜನರಿದ್ದರು. ಇಂಗ್ಲಿಷರು ಹಿಂದುಸ್ಥಾನದ ಸಾರ್ವಭೌಮರಾದ ಬಳಿಕ ಈ ತೆರದ ಮಾನವನ್ನು ಇಂಗ್ಲಂಡದ ಭೂಮಿಯಲ್ಲಿ ಹೊಂದಿದವರು ಮಹಾತ್ಮರೇ ಸೈ.

ಮಿ. ಹಾವುಸ್‌ಮೆನ್ನರೆಂಬವರು ಸಭಾಧ್ಯಕ್ಷರಾಗಿದ್ದರು. ಮಹಾತ್ಮರ ಆಗಮನದ ಬಗ್ಗೆ ಮತ್ತು ಅವರ ಸ್ವಾಗತ [illegible]ವ ಬಗ್ಗೆ ತಮಗೆ ಆನಂದವಾಗುತ್ತದೆಂದೂ, ಒಂದು ವೇಳೆ ರಾವುಂಡ ಟೇಬಲವು ಮುರಿದುಬಿಟ್ಟಿಯಾದರೂ, ಹಿಂದುಸ್ಥಾನದ ಸ್ವಾತಂತ್ರ್ಯದ ಬಗ್ಗೆ ತಮ್ಮ ಪೂರ್ಣ ಅನುಮೋದನವುಂಟೆಂದೂ ಇವರು ಭಾಷಣ ಮಾಡಿದರು. ಅದಕ್ಕೆ ಉತ್ತರವಾಗಿ ಮಹಾತ್ಮರು-

ನಾನು ರಾವುಂಡ ಟೇಬಲಕ್ಕೆ ಕಾಂಗ್ರೆಸದ ಪ್ರತಿನಿಧಿಯಾಗಿ ಬಂದಿದ್ದೇನೆ. ಹಿಂದುಸ್ಥಾನದಲ್ಲಿರುವಂಥ ಲಕ್ಷೋಪಲಕ್ಷ ದೀನ, ದರಿದ್ರ ಮತ್ತು ಅರೆಹೊಟ್ಟೆಯಿಂದ ಜೀವಿಸು[illegible]ರ ಸಲುವಾಗಿ ಶುದ್ಧ ಮತ್ತು ನಿರ್ಮಲವಾದ [illegible]ಜ್ಯ ಸಂಪಾದನೆ ಮಾಡಲು ಇಲ್ಲಿಗೆ ಬಂದಿದ್ದೇ[illegible] ಕಾಂಗ್ರೆಸದ ಧ್ಯೇಯವು. ಇಂಗ್ಲಂಡ ಮತ[illegible]ಸ್ಥಾನದ ನಡುವಿನ ವಿಷಯವು [illegible] ಬಗೇ ಹ[illegible] ಹೊರತು ಇಂಗ್ಲಂಡ [illegible]ಯವೆಚ್ಚದ ತಕ್ಕಡಿಯ ದಂಡಿಯು ಸಮ[illegible]ಲ್ಲದೆಂದು ಇಂಗ್ಲಿಷ ಸ್ತ್ರೀ ಪುರುಷರಿಗೆ ತಿ[illegible] ದಿನವೇ ಸುದಿನವೆಂದು ನಾನು ತಿಳಿಯುತ್ತೇನೆ. ನಾನು ಶಾಂತಿಪ್ರಿಯನಿದ್ದೇನೆ ಅದಕ್ಕಾಗಿ ಸ್ವಾಭಿಮಾನ ಮಾತ್ರ ಕೆಡಿಸಿಕೊಳ್ಳಲಾರೆನು. ಸನ್ಮಾನಪೂರ್ವಕವಾಗಿ ಯಾಗುವಂಥ ಶಾಂತತೆಯ ಪುರಸ್ಕರ್ತನಾಗಿದ್ದೇನೆ. ನಾನು ಮತ್ತು ನನ್ನ ಮಿತ್ರರು ಇಂಗ್ಲಿಷ ಸರಕಾರದ ಅತಿಥಿಗಳಾಗಿದ್ದೇವೆ. ಇಂಗ್ಲಂಡ ಮತ್ತು ಹಿಂದುಸ್ಥಾನದ ನಡುವೆ ಮಿತ್ರತ್ವ ಬೆಳೆಯಬೇಕೆಂತಲೇ ಇಲ್ಲಿಗೆ ಬಂದಿದ್ದೇವೆ. ಇಲ್ಲಿಯ ಕೆಲಸ ಮುಗಿದು ನಾವು ತಿರಿಗಿ ಹೋಗುವಾಗ, ನಿಮ್ಮ ಆತಿಥ್ಯಸತ್ಕಾರವು ಅನವಶ್ಯಕ ಸ್ಥಳದಲ್ಲಾಯಿತೆಂದು ಹೇಳುವ ಸಮಯ ಬರಲಾರದೆಂದು ಆಶಿಸುತ್ತೇನೆ.

ಹಿಂದುಸ್ಥಾನದ ಪದ್ಧತಿಯಂತೆ ಮಹಾತ್ಮರು ಅಲ್ಲಿ ೨೦ ಕೂತೇ ಭಾಷಣ ಮಾಡಿದರು. ಭಾಷಣ ಮುಗಿದ ಬಳಿಕ, ಹೊರಗೆ ಒಂದು ಮಳೆಯಲ್ಲಿ ದರ್ಶನಾಪೇಕ್ಷೆಗಾಗಿ ನಿಂತವರಿಗೆ ದರ್ಶನಲಾಭ ಕೊಟ್ಟರು. ಮಹಾತ್ಮರು ಮ್ಯಾಂಚೆಸ್ಟರಕ್ಕೆ ಹೋಗಿ ಅಲ್ಲಿಯ ಗಿರಣಿಯ ಒಡೆಯರ ಹಾಗು ಕೂಲಿಕಾರರ ಕೂಡ ಮಾತಾಡುವರು. ತಮಗೆ ಭಯಂಕರ ವೈರಿಯಾಗಿ ನಿಂತಿರುವ ಮಿ. ಚರ್ಚಿಲ್ಲ ಮತ್ತು ಲಾರ್ಡ ರೋದರಮೀರರ ಮನೆಗೆ ಹೋಗಿ, ಅವರೊಂದಿಗೆಯೂ ಸಂಭಾಷಣೆ ಮಾಡುವರು. ರಾವುಂಡಟೇಬಲಿನಲ್ಲಿ ವ್ಯಾಖ್ಯಾನದ ಉದ್ದುದ್ದ ಭಾಷಣಗಳನ್ನಾಡುವದಕ್ಕಿಂತ ಮಂತ್ರಿಮಂಡಲದವರ ಕೂಡ ಅವಿಶ್ರಾಂತ ಆಲೋಚನೆಯು ತೀವ್ರವಾಗಿ ಮಾತಾಡುವದರಿಂದ ಹೆಚ್ಚು ಕಾರ್ಯಸಿದ್ಧಿಯಾಗುವದೆಂದು ಮಹಾತ್ಮರ ಮತವಾಗಿರುತ್ತದೆ.

ಮಹಾತ್ಮರು ಅಮೇರಿಕೆಗೆ ಕಳಿಸಿದ ಸಂದೇಶ

ಶಾಂತಿ ಮತ್ತು ಅಹಿಂಸೆಯಿಂದಲೇ ಸ್ವರಾಜ್ಯ ಸಾಧನ.

—(೦)—

ರಕ್ತದ ಕಾಲಿವೆ ಹರಿಸುವದು ಸಾಕು

....(೦)....

ಮಹಾತ್ಮರು ಲಂಡನ ಮುಟ್ಟಿದ ಕೂಡಲೆ ಅಮೇರಿಕೆಗೆ ಆಕಾಶವಾಣಿ ಅಂದರೆ ವಿದ್ಯುತ್ತಿನಿಂದ ಒಂದು ಸಂದೇಶ ಕಳಿಸಿದರು. ಅದರ ಸಾರಾಂಶವು:—

ಈ ಪರ್ಯಂತರ ದೇಶಗಳು ದನಗಳಂತೆ ಹೊಡೆದಾಡಿದವು. ಮಾನವನ ಧರ್ಮವು ಪಶುಗಳಂತೆ ಹಾದಾಡಬೇಕೆಂದಿರುತ್ತದೆಂದು ಹಿಂದೀಯರು ತಿಳಿಯುವದಿಲ್ಲ. ರಕ್ತಪಾತ, ಕೊಲೆ, ಇಂದೇ ಸ್ವರಾಜ್ಯ ಸಂಪಾದನೆಮಾಡಲು ಕೆಲಕಾಲ ತಡೆಯಬೇಕಾದರೆ ನಾನು ಅವಶ್ಯವಾಗಿ ತಡೆಯುವೆನು. ರಕ್ತಪಾತ ಮಾಡುವದು ಜಗತ್ತಿಗೆ ಬೇಸಿಕೆಯಿಟ್ಟು ಹೋಗಿದೆ. ಬೇರೆ ಬೇರೆ ದೇಶಗಳಿಗೆ ಶಾಂತತೆಯ ದಾರಿಯನ್ನು ತೋರಿಸುವದಕ್ಕೆ ಹಿಂದುಸ್ಥಾನಕ್ಕೆ ಹಕ್ಕು ಇರುತ್ತದೆಂದು ನಾನು ಭಾವಿಸುತ್ತೇನೆ. ಈ ಅದ್ಭುತ ಹೋರಾಟದಲ್ಲಿ ಜಗತ್ತಿನಲ್ಲಿರುವ ಎಲ್ಲಾ ದೇಶಗಳು ಹಿಂದುಸ್ಥಾನಕ್ಕೆ ಸಹಾಯ ಮಾಡುವೆವೆಂದು ಆಶಿಸುತ್ತೇನೆ. ಹಿಂದೂಮುಸಲಮಾನರು ಒಬ್ಬರ ಗಂಟಲುವನ್ನೊಬ್ಬರು ಹಿಚುಕುವದನ್ನು ಕಂಡು ನನಗೆ ತಲೆ ಕೆಳಗೆ ಮಾಡಬೇಕೆಂದೆನಿಸುತ್ತದೆ. ಹಿಂದೂಜನರು ಆತ್ಮಶುದ್ಧೀಕರಣದಲ್ಲಿ ಅಸ್ಪೃಶ್ಯತೆಯ ನಿವಾರಣೆ, ಎಲ್ಲಾ ಜಾತಿ ಬಾಂಧವರಲ್ಲಿ ಐಕ್ಯ ಮತ್ತು ಮದ್ಯಪಾನವನ್ನು ಪೂರಾ ನಿಷೇಧಿಸಿ ಬಿಡುವದು ಮೊದಲನೇ ಕರ್ತವ್ಯಕರ್ಮವೆಂದು ತಿಳಿದಿದ್ದಾರೆ. ಮದ್ಯ ಮತ್ತು ಮಾದಕ ಪದಾರ್ಥಗಳ ಸೇವನೆಯ ವ್ಯಸನ ನಿರ್ಮೂಲ ಮಾಡುವದಕ್ಕಾಗಿ ಇಂಗ್ರೇಜಿ ಸರಕಾರದವರು ನಮಗೆ ಸಹಾಯ ಮಾಡದಿದ್ದದ್ದು, ವಿಷಾದದ ಸಂಗತಿಯಾಗಿರುತ್ತದೆ.

ಮಹಾತ್ಮರು ಸಂದೇಶವು ಅಮೇರಿಕೆಯ ತುಂಬ ಒಳ್ಳೇ ಪರಿಣಾಮವನ್ನುಂಟು ಮಾಡಿದ್ದು, ಪ್ರತಿಯೊಬ್ಬರು ಅವರ ಇಂಗ್ಲಿಷ ಭಾಷೆಯ ಮೇಲಿನ ಪ್ರಭುತ್ವವನ್ನು ಬಹುಳವಾಗಿ ಶ್ಲಾಘಿಸಿದ್ದಾರೆ.

ಮಹಾತ್ಮರು ಅಮೇರಿಕೆಗೆ ಕಳಿಸಿದ ಈ ಸಂದೇಶದ ಮೇಲೆ ಡೇಲಿ ಮೇಲ ಪತ್ರವು ತನ್ನ ಮೂಲ ಸ್ವರೂಪ ಸ್ವಭಾವದಂತೆ ಟೀಕೆಮಾಡಿದೆ. ಇದು ಅನ್ನುವದೇನಂದರೆ-

ಮಿ. ಗಾಂಧಿಯವರು ರಾಜಕೀಯಕ್ಕಿಂತ ಧರ್ಮವನ್ನೇ ತಮ್ಮ ಉಚ್ಚತಮ ಧ್ಯೇಯ ಮಾಡಿ

ಶ್ರೀ ಭುವನೇಶ್ವರೀ ಸಂಸ್ಥೆ.
ಧಾರವಾಡ

—(೧)—

ಭಗವಾನ್ ಶ್ರೀ ಕೃಷ್ಣನ ಜನ್ಮಸ್ಥಾನವಾದ ಕಾರಾಗಾರದಲ್ಲಿ ನಾವು ಸ್ವಾತಂತ್ರ್ಯ ಸಂಗ್ರಾಮ ಹೋರಾದ ಸಣ್ಣ ಸಣ್ಣಿಯ ಸ್ನೇಹಿತರೊಂದಿಗೆ ಕೂಡಿರುವಾಗ ನಮ್ಮ ನಮ್ಮೊಳಗಿನ ವಿಚಾರಗಳನ್ನು ತಿಳಿಕೊಂಡು ನಾವು ಬಂಧಮುಕ್ತರಾದನಂತರ ಮಾಡಬೇಕೆಂದು ಬಯಸಿದ ಬಯಕೆಗಳ ಬಳಗದಲ್ಲಿ ಕು ಶಲ ಕಲ್ಪನಾಸೂತ್ರದಿಂದಲೇ ಮಾಗಿಲು ಹೂಗಳ ಮಾಲಿಕೆಯನ್ನು ಭಾರತ ಮಾತೆಯ ಚರಣಕ್ಕೆ ಅ ರ್ಪಿಸುತ್ತಿದ್ದೆವು. ಇಂತಹ ಪೂಜಾ ಸಂಭ್ರಮದಲ್ಲಿ ಯೇ ಸಂಭ್ರಾಂತರಾದ ಸ್ನೇಹಿತರೂ ನಮ್ಮ ವಿಚಾ ರ ತರಂಗದ ವೇಳೆಯೇ ತಾವೂ ಹೂಗಳನ್ನು ಕಲ್ಲಿ ಅಲ್ಲಿಯೇ ನೋಡಿ ನೆನೆದು ನೆನೆದು ತಾವೂ ಆ ವರೂ ಸಂತಸಬಟ್ಟೆವು. ಪಲ್ಲೆ ಹೆಚ್ಚು ಈ ಕಾರ್ಯದ ಲ್ಲಿದ್ದ ನಾವು ೧೦ ಜನರು ಕೂಡಿಕೊಂಡು ಒಂದು ಮಂಡಳವನ್ನು ಸ್ಥಾಪಿಸಿದೆವು. ಇದಕ್ಕೆ ಶ್ರೀ ಭುವ ನೇಶ್ವರೀ ಸಂಸ್ಥೆಯೆಂಬ ನಾಮಕರಣವನ್ನೂ ಮಾ ಡಿದೆವು. ಈ ಸಂಸ್ಥೆಯು ಹುಟ್ಟಿದ ದಿವಸವು ಪ್ರ ಮೋದವೆಯು ಒಡೆದ ಹಣ್ಣಿವೆ. ಸ್ಥಾಪನಾದರೋ ತಿಂದಲಗೀ ಜೇಲಿನ ಹಿಂಗ್ಗಾಲಯದ ಉತ್ತರ ಬೀ ದಿಯು ಪಶ್ಚಿಮ ಕೋಣೆ ಸುಬಧವಾಙ್ಮಯ ಪ್ರಸಾ ರ ಮಾಡುವದೇ ಈ ಮಂಡಳದ ಉದ್ದೇಶವೆಂದು ಕೊಂಡು ಸದ್ಯಕ್ಕೆ ಕಾವ್ಯಾನಂದ ಮಾಲೆಯೆಂಬ ೧ ಆಣೆ ಬೆಲೆ ಬಾಳುವ ಕಥೆ ಪುಸ್ತಕವನ್ನು ತಿಂಗಳೊಂ ದಕ್ಕೆ ಹೊರಡಿಸುವದೆಂದು ಗೊತ್ತು ಮಾಡಲಾಯಿ ತು. ಯುಗಾದಿಗೇ ಇದು ಹೊರಡಬೇಕೆಂದೂ ನಿಶ್ಚಿತವಾಯಿತು.

ಇಷ್ಟರಲ್ಲಿಯೇ ಕತ್ತಲೆಯ ದಿನಗಳು ಹಿಂ ದಾದವು. ಸಂಧಿ ಕಾಲವು ಮುಂದಾಯಿತು. ಸ್ವಾ ತಂತ್ರ್ಯ ಸೂರ್ಯನ ಉದಯವು ಸಮೀಪಿಸಿತೆಂದು ಎಲ್ಲರಿಗೂ ಹರ್ಷವಾಯಿತು. ಬಂಧನದಲ್ಲಿದ್ದ ಪ ಕ್ಷಿಗಳು ಬಂಧಮುಕ್ತವಾದವು. ಆದರೆ ಬಂಧಮು ಕ್ತವಾದ ಪಕ್ಷಿಗಳಿಗೆ ಹೊಟ್ಟೆಯ ಬೆನ್ನಿಗೆ ಹತ್ತಿ ಜೀವನ ಕಲಹವು ಪ್ರಾರಂಭವಾಯಿತು. ಎಲ್ಲ ವೂ ಕಣ್ಣಿಗೇ ಅಯಿತು. ಹೊರಗೆ ಬಂದ ಮೇಲೆ ನಾನು ಪತ್ರ ಮತ್ತು ಈ ಸಂಸ್ಥೆಯ ಸದಸ್ಯರಿಗೆ ಕಾಗದ ಹಾಕಿದೆ. ಉತ್ತರವಿಲ್ಲ. ಈಗ ಸ್ವಲ್ಪ ದಿನಗಳ ಹಿಂದೆ ಮತ್ತೊಮ್ಮೆ ಕೊನೆಯ ಮಾತೆಂದು ಹತ್ತು ಜನರನ್ನು ಒತ್ತಿ ಕೇಳಲಾಗಿ ಅವರಲ್ಲಿ ಆ ಒಬ್ಬನಿಂದ ಉತ್ತರವಿಲ್ಲ. ಆ ಸಂದರ್ಭ ನಮ್ಮ ಧ್ಯೇಯ ವನ್ನು ಎತ್ತಿ ಹಿಡಿದು ಉತ್ತೇಜನ ಕೊಟ್ಟದ್ದರಿಂದ ಮತ್ತೆ ಈ ಕಾರ್ಯಕ್ಕೆ ಪ್ರವೃತ್ತರಾಗಿರುವೆವು.

The Asian Life Assurnance Co. Ltd
Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೧; ಹೆಡ್ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗ ಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೨೫,೦೦೦,೦೦ ಕಿಂತದ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರಿಗಿ ಕೊಟ್ಟದ್ದು ೧೯,೦೦,೦೦೦

ಜಿಂದಿಗಿ ೨೪,೦೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕುಲಕರ್ಣಿ. ಧಾರವಾಡದ ಏಜಂಟರು

ಕೆ. ಪ್ಹಿ. ಹುಲಸೋಗಿ, ಬಿ. ಎ. ಕರ್ನಾಟಕದ ಬ್ರಾಂಚ ಮ್ಯಾನೇಜರ

ಬಿ. ಎಚ್. ಪಾಟೀಲ ಹುಬಳಿಯ ಏಜಂಟರು—

ಹಾವೇರಿಯ ಚೀಫ ಏಜಂಟರು. ಶ್ರೀ. ಎನ್. ಎಚ್. ದೊಡ್ಡವಾಡ ಮತ್ತು ಶ್ರೀ. ಬಿ. ಟಿ. ಶಿರೋಳಕರ.

ಆಸುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು ಸೌಖ್ಯದಿಂದರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೭೦ ರೂ. ಗಳನ್ನ ಕೊಡುವಂಥ ಗೋಲ್ಡನ್ (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ ಏಶಿಯನ್ನ ಕಂಪನಿಯೊಂದೇ ಆಗಿರುತ್ತದೆ

ಈ ಸಂಸ್ಥೆಗೆ ಅವಶ್ಯವಾಗಿ ಬೇಕಾದ ೧೦ ಜನರಲ್ಲಿ ಈಗ ೫ ಜನರು ಮಾತ್ರ ಇರುವದರಿಂದ ಇನ್ನು ೫ ಸ್ಥಳಗಳು ಹಾಗೇ ಉಳಿದಿವೆ. ಯಾರಿ ಗಾದರೂ ಸೇರಿ ವಾಙ್ಮಯ ಸೇವಾ ಕಾರ್ಯವನ್ನು ಮಾಡಬೇಕೆಂದು ಅಪೇಕ್ಷೆಯಿದ್ದರೆ ಆ ರೀತಿ ನ ಮಗೆ ತಿಳಿಸಿದಲ್ಲಿ ಅವಶ್ಯವಾಗಿ ತಿಳಿದಿರಬೇಕಾದ ದ್ದನ್ನು ಅವರಿಗೆ ಬರೆದು ತಿಳಿಸುತ್ತೇನೆ. ಇದರ ರಿಂದ ಸಾಹಸಿಗಳು ಇತ್ತ ಲಕ್ಷ್ಯಗೊಟ್ಟು, ತಾವು ಕೈಕೊಂಡ ಕಾರ್ಯಕ್ಕೆ ನೆರವಾಗಬೇಕೆಂದು ಬೇಡಿ ಕೆ. ಹಾಗೆಯೇ ಕಥೆಗಳನ್ನು ಬರೆದು ಕಳಿಸಿಯೂ ಸಹಾಯ ಮಾಡಬೇಕು.

ಧಾರವಾಡ
ತಾ. ೯. ಅಷ್ಟಮಿ

ತಮ್ಮ ಅಭಿಯಾಚಕ
ಆ. ರಂಗಾಚಾರ್ಯ
ಕಾರ್ಯದರ್ಶಿ
ಶ್ರೀ ಭುವನೇಶ್ವರೀ ಸಂಸ್ಥೆ.

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂ ವರೆ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅದು ಆಣೆ ಡಬಲ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ರಿ. ನಂ. ೧೨೮೦.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ಶುಕ್ರವಾರ ತಾರೀಖು ೧೮ನೇ ಸಪ್ಟಂಬರ ೧೯೩೧ (ಸಂಚಿಕೆ ೨೧೧

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ ಸಿದ್ಧಾರೂಢರ ಅಸಲರ್ಜಿ, ಶ್ರೀ ಆರೂಢಸ್ವಾಮಿಗಳ ಕೈಫಿಯತ್ತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ವಾದಿ, ಪ್ರತಿವಾದಿ, ಹಾಗು ಮುನಸಫರ ಛಾಯಾಚಿತ್ರಗಳನ್ನು ಕೊಟ್ಟಿರುತ್ತದೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕೊಳ್ಳುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚು ಬೇರೆ. ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸಸ್ಥನ,

ವಂದಿಗೆಯು ಎಂಟು ಲಕ್ಷದ ಮೇಲುಂಟು. ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮ್ಯಾನೆಜಿಂಗ ಡಾಯರೆಕ್ಟರ

ವಿವಿಧ ವರ್ತಮಾನಗಳು

ಆಸ್ಟ್ರಿಯಾ ದೇಶದಲ್ಲಿ ಈಗಿನ ಪ್ರಜಾಸತ್ತಾತ್ಮಕ ರಾಜ್ಯವನ್ನು ಅಳಿದು, ಇಟಲಿಯ ಫಾಸಿಸ್ಟ ಪಂಥದಂತಹ ಮುಂಗೈ ಆಡಳಿತವನ್ನು ಸ್ಥಾಪಿಸಬೇಕೆಂದು ಜನರು ಬಂಡಾಯ ಹೂಡಿದ್ದು ಅದರ ಮೂಲೋತ್ಪಾಟನ ಮಾಡಲು ಸರಕಾರದವರು ಸೇನಾ ಸಿದ್ಧತೆ ಮಾಡಿದ್ದಾರೆ.

ಸಂಕೇಶ್ವರದಲ್ಲಿ ಬ್ರಾಹ್ಮಣ ಸಕೇಶಿಯರಿಗೆ ಶ್ರೀ. ಪಾಂಡುರಂಗನ ದರ್ಶನ ಮಾಡಲಿಕ್ಕೆ ಅರ್ಚಕರು ಲೇಖಿಯಿಂದ ಅಡ್ಡಿ ಮಾಡಿದ್ದರಿಂದ ಶ್ರೀ. ಪ್ರಜ್ಞಾನೇಶ್ವರ ಯತಿವರ್ಯರು ಸದ್ಯದಲ್ಲಿ ಸತ್ಯಾಗ್ರಹವನ್ನು ಆರಂಭಮಾಡಿದರು.

ಕೇರಾಣಾ ಸ್ಟೇಟ ದಲ್ಲಿ ಹಿಂದೂ ಮುಸಲಮಾನ ದಂಗೆಯಾಗಿ ಒಂದು ತಿಂಗಳಾಯಿತು. ಆದರೂ ಹಿಂದೂ ಜನರು ಅಂಗಡಿ ತೆರೆದಿಲ್ಲ. ಸರಹದ್ದಿನ ಗಾಂಧಿಯವರು ಅಲ್ಲಿಗೆ ಹೋಗಿ ರಾಜಿಯ ಪ್ರಯತ್ನ ನಡೆಸಿದರು. ಆದರೂ ನಿಷ್ಫಲವಾಯಿತು. ಮುಸಲಮಾನ ವೈಸ್ಮಲ್ತಿಯವರು ಹಿಂದೂ ಜನರ ವಿಷಯವಾಗಿ ಮುಸಲಮಾನರ ಮನಸ್ಸು ಕೆಡುವಂತೆ ಕೆಣಕುತ್ತಿರುವ ಘಟನಾಗಳೇ ಕಾರಣ.

ಮೀರತದ ಬೋಲ್ಶೆವಿಕ ಕೈದಿಗಳ ವಿಚಾರಣೆಯು ಸರಕಾರ ಪಕ್ಷದಿಂದ ಮುಗಿಯಿತು. ಆರೋಪಿಗಳಿಂದಲೂ ಸರಕಾರ ಪಕ್ಷದಷ್ಟೇ ಸಾಕ್ಷಿ ದಾರರಿದ್ದಾರೆ. ಸಾಧಾರಣ ಇನ್ನೂ ಒಂದು ವರ್ಷ ವಿಚಾರಣೆ ನಡೆಯುವದು.

ಇವರ ಹೊಟ್ಟೆಗಾಗಿ ಒಬ್ಬೊಬ್ಬನಿಗೆ ದಿನಾಲು ೧೨ ಆಣೆ ಕೊಡುವರು. ಆರೋಪಿಗಳಲ್ಲಿ ಬ್ರಾಹ್ಮಣ, ಮುಸಲಮಾನ, ಯುರೋಪಿಯನ್ನರಿದ್ದರೂ, ಎಲ್ಲರೂ ಜಾತಿಭೇದ ಮಾಡದೆ ಎಲ್ಲರ ರೊಕ್ಕ ಕೂಡಿಸಿ ಒಂದೇ ಅಡಿಗೆ ಮಾಡಿಸಿ ಉಣ್ಣುವರು. ಅನ್ನ, ಬೇಳೆ ಮತ್ತು ಗೋದಿಯ ರೊಟ್ಟಿ ಇವು ಇವರ ನಿತ್ಯಾಹಾರಗಳಾಗಿವೆ.

ಹೊಸಪೇಟೆಯ ಸ್ಟೇಶನಮಾಸ್ತರ ಮತ್ತು ಗುಡ್ಸಕ್ಲಾರ್ಕರು ಸೇರಿ ೧೬೦೦ ರೂಪಾಯಿಗಳ ಸ್ವಾಹಾಮಾಡಿದರೆಂದು ಮ್ಯಾಜಿಸ್ಟ್ರೇಟರ ಕೋರ್ಟನಲ್ಲಿ ವಿಚಾರಣೆ ನಡೆದಿದೆ.

ವಿಜಯ.

ತಾರೀಖು ೧೮-೯-೧೯೨೧ನೇ ಇಸ್ವಿ

ಗಾಂಧಿ-ಆರ್ಯರ್ವಿನ ಒಡಂಬಡಿಕೆಯನ್ನು ಮುರಿದದ್ದರ ಒಂದು ಉದಾಹರಣೆ

ಪಾರ್ಲಮೆಂಟಿನಲ್ಲಿ ಹಿಂದುಸ್ಥಾನಕ್ಕೆ ಸ್ವರಾಜ್ಯ ಸ್ವಾತಂತ್ರ್ಯ ಕೊಟ್ಟು, ಈಗಿನ ಗೌರವಾಯು ಅಧಿಕಾರಿಗಳಿಗೂ ಹಿಂದೀ ದಿವಾನರ ಕೈ ಕೆಳಗೆ ದುಡಿಯುವ ಭೃತ್ಯರಾಗಬೇಕೆಂಬ ಸನದು ಪಾರ್ಲಮೆಂಟ ಸಭೆಯಲ್ಲಿ ಮಂಜೂರಾಗುವ ಸಮಯದಲ್ಲಿ ಹಿಂದುಸ್ಥಾನ ಸರಕಾರದವರು ಇಲ್ಲಿಯ ವರ್ತಮಾನ ಪತ್ರಗಳ ವಿಚಾರ ಸ್ವಾತಂತ್ರ್ಯದ ಮೇಲೆ ಆಕಾಶದ ಕೊಡ್ಲಿಯ ಪೆಟ್ಟು ಹಾಕುವಂಥ ಕಾಯದೆಯನ್ನು ಮಾಡಲುಪಕ್ರಮಿಸಿದ್ದು ಸೋಜಿಗವೇ ಸರಿ. ಸರಕಾರದ ಈ ವರ್ತನವು ಒಂದು ಕಯ್ಯಲ್ಲಿ ಬೆಣ್ಣೆ ಇನ್ನೊಂದು ಕಯ್ಯಲ್ಲಿ ದೊಣ್ಣೆ ಎಂದಾಗುವದಿಲ್ಲವೇ?

ಹತ್ತು ವರ್ಷಗಳ ಹಿಂದೆ ಮಾಂಟೆಗು ಸುಧಾರಣೆಗಳನ್ನು ಅಮಲಿನಲ್ಲಿ ತರುವಾಗ- ಸರಕಾರದ ಆಗಿನ ದಬ್ಬಾಳಿಕೆಯ ಎಲ್ಲ ಕಾಯದೆಗಳನ್ನು ತೆಗೆದು ಹಾಕಿದರು. ರಾವಲೆಟ್ಟ ಆಕ್ಟು ಪುನರ್ಜನ್ಮ ಹೊಂದದಂತೆ ಸತ್ತು ಹೋಯಿತು. ರದ್ದಾದ ಕಾಯದೆಗಳಲ್ಲಿ ವರ್ತಮಾನ ಪತ್ರಗಳದ್ದೂ ಒಂದಿತ್ತು. ಆಗಿನ ಈ ಕಾಯದೆ ಮತ್ತು ಈಗ ಸರಕಾರದ ಟಂಕಸಾಲೆಯೊಳಗಿಂದ ಹೊರಡಬೇಕಾದ ಕಾಯದೆಯ ಸ್ವರೂಪದ ವಿಚಾರ ಮಾಡಿದರೆ- ಇಂಥ ಕಾಯದೆಯನ್ನು ವಿಲಾಯತಿಯಲ್ಲಿ ಯಾವನೊಬ್ಬ ರಾಜನು ಮಾಡಿದ್ದನೇನೆಂಬ ಸಂಶಯ ಬರುತ್ತದೆ ಝುಲ್ಮಿ ರಶಿಯಾದಲ್ಲಿ ಕೂಡ ಇಂಥ ಕಾಯದೆಯಾಗಲಿಲ್ಲ.

ಇಂಗ್ಲಂಡವೂ ಇಂಗ್ಲೀಷರದೇ; ಹಿಂದುಸ್ಥಾನವೂ ಇಂಗ್ಲೀಷರದೇ; ಎರಡೂ ಒಬ್ಬರ ಅಧಿಪತ್ಯಕ್ಕೊಳಗಾಗಿದ್ದಾಗ, ಹಿಂದುಸ್ಥಾನದಲ್ಲಿಯೇ ಇಂಥ ಕಾಯದೆ ಏಕಾಗಬೇಕೆಂಬ ಪ್ರಶ್ನವು ಸಹಜವಾಗಿ ಹೊರಡುತ್ತದೆ. ತಾವು ಇಂಥ ಕ್ರೂರ ಕಾಯದೆ ಮಾಡಬೇಕಾದರೆ- ತಮ್ಮ ಆಡಳಿತೆಯಲ್ಲಿಯೇ ವ್ಯಂಗವಿರಬೇಕೆಂದು ತಿಳಕೊಳ್ಳಬೇಕಲ್ಲವೇ? ಆ ವ್ಯಂಗ ಮುಚ್ಚಿಕೊಳ್ಳಲೋಸುಗ ಅಧಿಕಾರದ ಬಲದಿಂದ ಕಾಯದೆ ಮಾಡಲುಪಕ್ರಮಿಸುವದು ಮುತ್ಸದ್ದಿತನವೆನಿಸುವದಿಲ್ಲ. ಹಿಂದಕ್ಕೆ ದಬ್ಬಾಳಿಕೆಯ ಕಾಯದೆಗಳು ಕಾವಾಗಿ ಬೇಸತ್ತು, ಅತ್ತು ಸತ್ತುಹೋದವು. ಅದೇ ಪ್ರಕಾರ ಈ ಕಾಯದೆಯಾದರೂ ಆಗುವದು.

ಕೊಲೆಗೆ ಉತ್ತೇಜನ ಕೊಡುತ್ತಾರೆಂದೂ, ಈ ಉತ್ತೇಜನಕ್ಕೆ ಅಡ್ಡಿಯಾಗಬೇಕೆಂದೂ ಪ್ರಸ್ತುತದ ಕಾಯದೆಯುಂಟು. ಬಾಂಬು ಮಾಡಿದವರು, ರಿವಾಲ್ವರದಿಂದ ಗುಂಡು ಹಾಕಿದವರು, ಬಗೆಬಂಡಿಗಳನ್ನು ಕೆಡವಿದವರು, ಹಾರಿಸಿದವರು ಮತ್ತು ಬೇರೆ ಬೇರೆಯಾಗಿ ಅತ್ಯಾಚಾರಗಳನ್ನು ಮಾಡಿದವರು ವರ್ತಮಾನಪತ್ರಗಳ ಲೇಖಗಳಿಂದಲೇ ಗುರೂಪದೇಶ ಪಡೆದರೆಂದು ಹೇಳುವದು ಶುದ್ಧ ತಪ್ಪು. ಪೋಲೀಸರು ಅತ್ಯಾಚಾರ ಮತ್ತು ಒಳಸಂಚಿನ ನೂರಾರು ಪ್ರಕರಣಗಳನ್ನು ಮಾಡಿದ್ದಾರೆ. ಅನೇಕರು ಮಾಫೀ ಸಾಕ್ಷಿದಾರರಾಗಿದ್ದಾರೆ ಈ ಸಾಕ್ಷೀದಾರರಲ್ಲಿ ಒಬ್ಬನಾದರೂ ವರ್ತಮಾನಪತ್ರದೊಳಗಿನ ಲೇಖಗಳಿಂದ ತನಗೆ ಈ ಬುದ್ಧಿ ಹುಟ್ಟಿತೆಂದು ಹೇಳಿಲ್ಲ ಅಂದಬಳಿಕ ಕೊಲೆಗೂ ವರ್ತಮಾನಪತ್ರಗಳಿಗೂ ಬಾದರಾಯಣ ಸಂಬಂಧ ಹಚ್ಚುವದು ಎತ್ತಣದ ನ್ಯಾಯವು?

ಹಿಂದುಸ್ಥಾನ ಸರಕಾರದವರು ಈಗ ಮಾಡಲೆಣಿಸಿದ್ದರ ಭಯಂಕರ ಸ್ವರೂಪನೋಡಿರಿ. ಹೊಸದಾಗಿ ಮುದ್ರಾಲಯವನ್ನಿಡತಕ್ಕವನು ಐನೂರಿಂದ ಎರಡುಸಾವಿರ ರೂಪಾಯಿತನಕ ನಗದು ಹಣ ತಾಣವಿಡಬೇಕು ಮ್ಯಾಜಿಸ್ಟ್ರೇಟರಿಗೆ ಈ ಹಣದ ಮಾಫೀ ಕೊಡುವಂತಹದೊಂದು ಅಪವಾದದ ಕಲಮು ಹಾಕಿದ್ದಾರೆ. ಕಾಯದೆಭಂಗದ ಕಾಲದಲ್ಲಿ ಈ ರಂಟಿಕೆ ಹಾಕಿ, ಅನುಮಾನಿಸಿನೋಡದೆ, ತೀಕ್ಷ್ಣಕೂಟ್ಟಂಥ ಮ್ಯಾಜಿಸ್ಟ್ರೇಟರ ಬುದ್ಧಿವಂತಿಕೆಯನ್ನು ನೋಡಿದರೆ ಅವರು ಅಪವಾದವಾಗಿ ಹಾಗೇ ಮುದ್ರಾಲಯಪತಿಗಳು ಅಪ್ಪಣೆಕೊಡುವರೆಂಬದು ಸ್ವಪ್ನ ಸುಖವೇ ಸರಿ. ಹಿಂದಿನ ಕಾಯದೆಯು ಹೊಸಬರ ಮಟ್ಟಿಗೆ ಇತ್ತು. ಈಗಿನ ಕಾಯದೆಯು ಹಳಬರನ್ನೂ ಬ್ರಹ್ಮರಾಕ್ಷಸದಂತೆ ಬೆನ್ನು ಹತ್ತುವದು. ಆಯಾ ಇಲಾಖೆಗಳ ಗವ್ಹರ್ನರರು ಇದಕ್ಕೆ ಐದುಸಾವಿರದ ತನಕ ಜಾಮೀನು ಬೇಡಬಹುದು ಯಾಕೆ ಬೇಡಿದಿರೆಂದು ಪ್ರಶ್ನ ಕೇಳಿದರೆ ಉತ್ತರಕೊಡುವದಿಲ್ಲ. ಇದರಮೇಲೆ ಯಾರಿಗಾದರೂ ನ್ಯಾಯ ಕೊಡಿರೆಂದು ಮೊರೆಹೊಗಬೇಕಾದರೆ ಅಪೀಲಿಲ್ಲ. ಮುಂದೆ ಈತನ ಡಿಪಾಜಿಟ್ಟು ಸರಕಾರಕ್ಕೆ ಜಪ್ತಯಾದರೆ ಮತ್ತೊಮ್ಮೆ ಹತ್ತು ಸಾವಿರದ ತನಕ ಡಿಪಾಜಿಟ್ಟು ಕೇಳಬಹುದು ಎರಡು ಸಾರೆ ಹೀಗಾಯಿತೆಂದರೆ ತೀರಿತು. ಈ ಅಪರಾಧಿಗೆ ತಿರುಗಿ ಮುದ್ರಾಲಯವನ್ನೇ ತೆಗೆಯಲಿಕ್ಕೆ ಅಪ್ಪಣೆ ಕೊಡರು ತೀರಿತು. ಇಲ್ಲಿಗೆ ಈತನು ಮುದ್ರಾಲಯದಿಂದ ತಾನು ಜೀವಿಸುವದು ತಪ್ಪಿದ ಹತ್ತೆಂಟು ಜನರು ಜೀವಿಸುವದು. ೧೫ ಸಾವಿರದ ತನಕ ದುಡ್ಡು ಕಳಕೊಂಡ ಬಳಿಕ, ಆಕ್ಷೇಪಾರ್ಹವೆಂದು ಸರಕಾರದವರು ಹೇಳುವ ವಾಕ್ಯಗಳ ಅರ್ಥ ಮಾಡಿಸುವದಕ್ಕಾಗಿ ಹಾಯಕೋರ್ಟಿಗೆ ಅಪೀಲು ಮಾಡಬಹುದು. ಹಾಯಕೋರ್ಟಿನ ಮೂವರು ಜಡ್ಜರು ಸೇರಿ ನಿರ್ಣಯ ಹೇಳುವರು. ಸರಕಾರದಲ್ಲಿ ಕಳಕೊಂಡ ೧೫ ಸಾವಿರದ ಕೂಡ ಹಾಯಕೋರ್ಟಿನಲ್ಲಿ ಮಾತಾಡುವದಕ್ಕೆ ವಕೀಲ ಬ್ಯಾರಿಸ್ಟರರಿಗೆ ಕೊಡುವ ಫೀಯೊಂದು ಗಂಟಿಗೆ ಬಡ್ಡಿಯಾಗಿ ದೊರೆವೇ ತೀರುವಂತಾಗುತ್ತದೆ. ಕಾಯದೆಭಂಗದಲ್ಲಿ ಒಂದೊಂದೇ ಸಾವಿರದ ಜಾಮೀನು ಕೊಡದೆ ಎಷ್ಟೋ ಮುದ್ರಾಲಯಗಳು ಬಂದಾದವು ಇಂಗ್ಲಂಡ ಅಮೇರಿಕೆಯಂತೆ ಹತ್ತಿಪ್ಪತ್ತು ಲಕ್ಷ ಬಂಡವಲು ಹಾಕಿದಂಥ ಮುದ್ರಾಲಯಗಳು ಈ ದೇಶದಲ್ಲಿರುವದಿಲ್ಲ ಇದ್ದರೆ ಯುರೋಪಿಯನ್ನರವೇ ಇರುತ್ತವೆ ಕಾರಣ ತಾರಣ ವಿಟ್ಟು ಮುದ್ರಾಲಯ ಹೊರಡಿಸುವದೇ ಅಶಕ್ಯ. ಮೇಲೆ ಹತ್ತು ಸಾವಿರದ ತನಕ ಎರಡು ಸಾರೆ ಜಾಮೀನು ಕೊಡುವದಂತೂ ದೂರಿನ ಮಾತು. ಹಾಯಕೋರ್ಟಿನ ಅಪೀಲಂತೂ ಸುಮ್ಮನೆ!! ಕಾಯದೆಯಂತೆ ಯಾವನೂ ಹೋಗನು. ಮುದ್ರಾಲಯದ ಗೋಣು ಮುರಿಯುವಂಥ ಕಾಯದೆಗೆ ಅಸೆಂಬ್ಲಿಯ ಮೆಂಬರರು ಎಂದಿಗೂ ಒಪ್ಪಿಗೆ ಕೊಡಕೊಡದು. ಸರಕಾರದವರು ಬಿಲ್ಲನ್ನ ತೆಗೆದು ಮನ ಚ್ಛೆಯನ್ನು ಪೂರ್ಣಮಾಡಿಕೊಳ್ಳಲಿ.

ಸ್ತ್ರೀಯರು ಸ್ವರಾಜ್ಯಕ್ಕಾಗಿ ದಿನಾಲು ಎರಡು ತಾಸು ದುಡಿಯಬೇಕು.

—(೦)—

ಕಾವೇರಿಯ ತಟದಲ್ಲಿರುವ ಈರೋಡಿನಲ್ಲಿ ತಮಿಲನಾಡಿನ ಸ್ತ್ರೀಯರ ಪರಿಷತ್ತು ಸೇರಿತ್ತು. ಶ್ರೀ. ಸೌ॥ ದುರ್ಗಾಬಾಯಿಯವರು ಅಧ್ಯಕ್ಷರಾಗಿದ್ದರು. ಇವರು ಸ್ತ್ರೀಯರನ್ನುದ್ದೇಶಿಸಿ-

ನೀವು ಸ್ವರಾಜ್ಯ ಸಾಧನೆಯಲ್ಲಿ ಪುರುಷರಿಗೆ ಸಂಪೂರ್ಣವಾಗಿ ನೆರವಾಗಿರಿ. ದಿನಾಲು ತಪ್ಪದೆ ಎರಡು ತಾಸು ಸ್ವರಾಜ್ಯ ಸ್ವಾತಂತ್ರ್ಯಕ್ಕಾಗಿ ದುಡಿಯಿರಿ. ಇದೊಂದು ಕರ್ತವ್ಯವೆಂದು ತಿಳಿಯಿರಿ. ಸ್ತ್ರೀಯರು ಕೈಕೊಳ್ಳುವ ಕಾರ್ಯದಲ್ಲಿ ಪುರುಷರು ಸಹಾಯ ಮಾಡಬೇಕೆಂಬ ಭಾಷಣ ಮಾಡಿದ್ದಾರೆ. ಪುರುಷರಿಗಿಂತ ಹೆಚ್ಚಾಗಿ ಸ್ತ್ರೀಯರು ಸ್ವದೇಶ ಸ್ವರಾಜ್ಯಕಾರ್ಯ ಮಾಡಬಹುದು ಏಕಂದರೆ- ಅವರಿಗೆ ಮನೆ ಹಿಡಿದು ಕೂಡುವದು ಹೆಚ್ಚಾಗಿ ಸಾಧಿಸಿರುತ್ತದೆ. ಅದು ಮಯ್ಯಂದು ಹೋಗಿರುತ್ತದೆ. ಸಾಯಂಕಾಲದಲ್ಲಿ ಎರಡು ತಾಸು ನೂತರೆ- ಸ್ವರಾಜ್ಯ ಕೆಲಸ ಮಾಡಿದಂತಾಗುತ್ತದೆ.

ರಾವುಂಡ ಟೇಬಲ

ರಾವುಂಡ ಟೇಬಲಿನಲ್ಲಿ ಮಹಾತ್ಮರ ಭಾಷಣ

ಹಿಂದುಸ್ತಾನಕ್ಕೆ ಪೂರ್ಣ ಸ್ವಾತಂತ್ರ್ಯವೇ ಬೇಕು

—(೦)—

ಮಂಗಳವಾರ ದಿವಸ ಮಹಾತ್ಮರು ಮಂಡಲಾಕಾರ ಪರಿಷತ್ತಿನಲ್ಲಿ ೪೫ ಮಿನಿಟುಗಳತನಕ ಭಾಷಣಮಾಡಿದರು. ಭಾಷಣವನ್ನು ಕೂತೇ ಮಾಡಿದರು. ಅದರ ಮುಖ್ಯಾಂಶಗಳು.

೧. ಬ್ರಿಟಿಶಸರಕಾರಕ್ಕೆ ವಿನಹಕಾರಣ ತ್ರಾಸಕೊಡಬೇಕೆಂದು ನನ್ನ ಇಚ್ಛೆಯಿಲ್ಲ. ಈ ಪರಿಷತ್ತಿನಲ್ಲಿ ನನ್ನಿಂದಾವ ಉಪಯೋಗವಾಗುವದಿಲ್ಲೆಂದು ಕಂಡು ಬಂದರೆ ನಾನು ಇದರೊಳಗಿಂದ ಹೊರ ಸರಿಯಲಿಕ್ಕೂ ಯಾವಾಗಲೂ ಸಿದ್ಧನಿರುವೆನು.

ಆದರೂ ನನ್ನ ಸೋಲಿನ ವಿಷಯವಾಗಿ ನಾಲ್ಕು ಸಾಲುಗಳನ್ನು ಬರೆಯಬೇಕಾದ ಪ್ರಸಂಗ ಬಂದದ್ದಕ್ಕೆ ನನಗೆ ಬಹಳ ವಿಷಾದವಾಗುತ್ತದೆ. ಮೊದಲೇ ನಾನೊಬ್ಬ ಹೆಂಗಸು. ಹೆಂಗಸರ ಸದ್ಯದ ಅಸಹಾಯ ಹಾಗೂ ಅನುಕಂಪನೀಯ ಅವಸ್ಥೆಯಿಂದ ನಾನೇನು ಹೊರಗಿದ್ದವಳಲ್ಲ. ಆದರೂ ಒಂದು ಬಗೆಯ ಕರ್ತವ್ಯನಿಷ್ಠೆಯಿಂದ ಉಮೇದವಾರಳಾಗುವದಕ್ಕೆ ಎದೆಮಾಡಿದೆನು. ನನ್ನ ಮನೆಯವರೂ ಅವರಲ್ಲಿ ಅನಿಮಿತ್ತ ಬಾಂಧವ್ಯವುಳ್ಳ ನಾಲ್ಕಾರು ಜನ ಮಿತ್ರರೂ ನನಗೆ ನೆರವಾಗುವದಕ್ಕೆ ಸಿದ್ಧರಾಗಿ ಮಾತು ಕೊಟ್ಟರು. ನನಗೆ ಎದುರಾಳಿಯಾಗಿ ನಿಂತಿದ್ದವರಿಗೆ ಆರಿಸಿ ಬರುವದಕ್ಕೆ ಅನುಕೂಲವಾಗಿದ್ದ ಪರಿಸ್ಥಿತಿಗಳೊಳಗಿನ ಒಂದೂ ನನಗೆ ಇಲ್ಲದಿದ್ದರೂ ೬ನೇ ವಾರ್ಡಿನ ಸುಜ್ಞ ಸಮಂಜಸ ಸುಶಿಕ್ಷಿತ ಮತದಾರರ ವಿವೇಕವನ್ನೂ ನನಗೆ ಬೆಂಬಲವಾದವರ ಅಕೃತ್ರಿಮ ಸಹಾಯವನ್ನೂ ನೆಚ್ಚಿನಂಬಿ ನಾನು ಉಮೇದವಾರಳಾದೆನು.

ಚುನಾವಣೆಯ ಪರಿಣಾಮ ತಿಳಿಯುವವರೆಗೂ ನನಗೆ ಮತಕೊಡುವ ಮಾತುಕೊಟ್ಟ ಮತದಾರರಲ್ಲಿ ನನಗೆ ತುಂಬಾ ನಂಬಿಕೆ. ನನ್ನ ಪರವಾಗಿ ಕೆಲಸ ಮಾಡಿದವರು ಯಾವ ಬಗೆಯ ಒತ್ತಾಯವನ್ನಾಗಲಿ, ದಾಕ್ಷಿಣ್ಯವನ್ನಾಗಲಿ ಉಪಯೋಗಿಸದೆ ಪರಿಶುದ್ಧವಾದ ದಾರಿಯಿಂದ ಮತಗಳನ್ನು ಕೇಳಿ ಆಶ್ವಾಸನವನ್ನು ಪಡೆದಿದ್ದರು. ಹೀಗೆ ನೋಡಿದರೆ ನಾನು ಆರಿಸಿ ಬರುವದಕ್ಕೆ ಸಾಕಷ್ಟು ಜನ ಮತದಾರರಿಂದ ನನಗೆ ಒಂದೊಂದು ಮತಗಳು ದೊರೆಯುವದೇ ಖಂಡಿತವೆಂಬ ನಂಬಿಗೆಯಲ್ಲಿ ನಾನಿದ್ದೆನು.

ಚುನಾವಣೆಯ ಪರಿಣಾಮ ಹೊರಬಿತ್ತು. ಸೋತವರೊಳಗೆ ನಾನು ತೀರ ಕನಿಷ್ಠ ಸ್ಥಿತಿಗೆ ಇಳಿದಿರುವೆನೆಂಬುದು ಗೊತ್ತಾಯಿತು. ಭಗವಂತನ ಪ್ರೇರಣೆ, ಮತದಾರರ ಇಚ್ಛೆ, ಎಂಬ ತಿಳುವಳಿಕೆಯಿಂದ ನಾನು ಈ ಚುನಾವಣೆಯ ವಿಷಯವನ್ನೇ ಮರೆತು ಬಿಟ್ಟೆನು. ಆದರೆ ಈ ಸಂಬಂಧವಲ್ಲ ಜನ ಅನಿತವಾಗಿ ನನ್ನ ಕಿವಿಗೆ ಬಿದ್ದ ಒಂದೆರಡು ಮಾತುಗಳಿಂದ ನನ್ನ ಸೋಲಿನ ವಿಷಯವಾಗಿ ಜನರಲ್ಲಿ ತಪ್ಪು ತಿಳುವಳಿಕೆ ಹಬ್ಬುತ್ತಿರುವದು ಕಂಡು ಬಂದಿದೆ. ಅದರ ನಿರಾಕರಣೆಗಾಗಿ ನಾನು ಪ್ರಸ್ತುತವನ್ನು ಈಗ ಎತ್ತಬೇಕಾಗಿದೆ.

ನಾನು ನನ್ನ ಉಮೇದವಾರಿಯನ್ನು ಉದ್ದೇಶಪೂರ್ವಕ ಬಿಟ್ಟುಕೊಟ್ಟೆನೆಂತಲೂ ಆ ಮೂಲಕವಾಗಿಯೇ ನಾನು ಆರಿಸಿ ಬರಲಿಲ್ಲವೆಂತಲೂ ಊರಲ್ಲಿ ದಟ್ಟ ವರ್ತಮಾನ ಹಬ್ಬಿರುವದು ನನ್ನ ಕಿವಿಯವರೆಗೆ ಬಂದಿದೆ. ಆ ಉದ್ದೇಶಗಳ ಸ್ಪಷ್ಟೀಕರಣದಲ್ಲಿ ಅನೇಕ ಬಗೆಯ ಒಳ ಹೊರ ತಂತ್ರಗಳ ದುರ್ಭಾವನೆಗಳೂ ಉದ್ಭವವಾಗುತ್ತಿರಬಹುದಾಗಿ ಎಣಿಸಿದರೆ ತಪ್ಪಾಗಲಾರದು. ಯಾಕೆಂದರೆ ಮೊದಲು ಉಮೇದವಾರರಾಗಿ ನಿಂತವರು, ಚುನಾವಣೆಯ ದಿವಸ ಅರ್ಧ ಪರ್ಧ ಮತದಾರರು ಮತಕೊಟ್ಟು ಹೋದನಂತರ ಚುನಾವಣೆಯ ಕಡೆಯಿಂದ ಕಾಲು ಹಿಂದೆಗೆಯಬೇಕೆಂದರೆ ಅನೇಕ ಬಗೆಯ ಸುಷ್ಟ ದುಷ್ಟ ಕಾರಣಗಳಿರುತ್ತವೆಂಬುದನ್ನು ಎಲ್ಲರೂ ಅನುಭವದಿಂದ ಮನಗಂಡಿರಬೇಕು. ಇವೆಲ್ಲವುಗಳ ಸಂಶಯವು ನನಗೆ ಬಡಕೊಂಡರೆ ಮುಂದೆ ಗತಿಯೇನೆಂಬ ಹೆದರಿಕೆಯಿಂದ ನಾನು ದಿಗಿಲುಗೊಂಡಿದ್ದೇನೆ. ಆದುದರಿಂದ ಕೊನೆಯವರೆಗೂ ನಾನು ನನ್ನ ಉಮೇದವಾರಿಯನ್ನು ಬಿಡಲಿಲ್ಲ. ಬಿಡುವ ವಿಚಾರ ಕೂಡ ನನ್ನಲ್ಲಿ ಇರಲಿಲ್ಲ. ಮತಕೊಡುವ ಸ್ಥಳದೊಳಗೆ ಒಂದಿಬ್ಬರು ನಾನು ಉಮೇದವಾರಿಯನ್ನು ಬಿಟ್ಟೆನೆಂದು ಕೇಳಿದ್ದಾಗಿ ಹೇಳಿದ್ದನ್ನು ನಾನು ಕಿವಿಯಾರೆ ಕೇಳಿದ್ದೇನೆ. ನಿಜ "ಆ ಮಾತು ಸುಳ್ಳು, ಶುದ್ಧ ಪೋಕರಿತನ" (Perfect roguery) ಎಂದು ಅಲ್ಲಿಯೇ ನಮ್ಮ ಮನೆಯವರು ಹೇಳಿದ್ದೂ ನಿಜ. ಸರಿ ಮತ್ತಿನ್ನೇನು?

ನಾನು ಉಮೇದವಾರಿಯನ್ನು ಬಿಡುವೆನೆಂದೂ ನನಗೆ ಚುನಾವಣೆಯಲ್ಲಿ ಯಶಸ್ಸು ದೊರೆಯಲಾರದೆಂದೂ ನನ್ನ ಎದುರಾಳಿಗಳೊಳಗಿನ ಕೆಲವರು ಮೊದಲಿನಿಂದಲೂ ಹುಯಿಲು ಎಬ್ಬಿಸಿದ್ದೇನೂ ಸುಳ್ಳಲ್ಲ. ಇದರ ನಿರಾಕರಣೆಯನ್ನು ನಾನು ನನ್ನ ಹಿಂದೇ ಬಿನ್ನಹ ಪತ್ರಿಕೆಯಲ್ಲಿ ಮಾಡಿ ನನ್ನ ನಿಶ್ಚಯವನ್ನು ತಿಳಿಸಿದ್ದೆನು. ಪ್ರತಿಸ್ಪರ್ಧಿಗಳು ತಮಗೆ ಮತಗಳು ದೊರೆಯಬೇಕೆಂಬ ಅಪೇಕ್ಷೆಯೊಳಗೆ ರಕ್ಷಣದಿಂದ ಬೇರೆ ಉಮೇದವಾರರ ವಿಷಯವಾಗಿ ಈ ಬಗೆಯ ವರ್ತಮಾನಗಳನ್ನು ಹುಟ್ಟಿಸುವದು ಸಹಜವಾದದ್ದೆಂದು ತಿಳಿದು ನಾನು ಆ ಬಿನ್ನಹ ನಿರಾಕರಣೆಯ ಹೊರತು ಬೇರೆ ಯಾವ ಉಪಾಯವನ್ನೂ ಕೈಕೊಳ್ಳಲಿಲ್ಲ! ಆದರೆ ನನ್ನ ಎದುರಾಳಿಗಳು ಹಬ್ಬಿಸಿದ ಈ ಸುಳ್ಳು ಸುದ್ದಿಗಳಿಗೆ ನನಗೆ ನೆರವಾಗುವ ಮಾತುಕೊಟ್ಟ ನನ್ನ ಸಹಾಯಕರೇ ಬೆಂಬಲವಾಗಿ ನನಗೆ ಮತಕೊಡುವ ಮಾತುಕೊಟ್ಟವರಲ್ಲಿಯೂ ಮತಕೊಡುವ ಸ್ಥಾನದಲ್ಲಿಯೂ ಬುದ್ಧಿಭೇದವನ್ನುಂಟು ಮಾಡುವ ಪ್ರಯತ್ನಕಟ್ಟಿಕೊಳ್ಳುವರೆಂಬ ಸಂಶಯವೂ ನನಗೆ ಹೊಳೆಯಲಿಲ್ಲ. ಚುನಾವಣೆಯ ದಿವಸ ಬೆಳಗ್ಗೆ ೧೦|| ಘಂಟೆಯ ಸುಮಾರಕ್ಕೆ ಈ ಚೀಲದೊಳಗಿನ ಬೆಕ್ಕು ಹೊರಬೀಳುವ ಲಕ್ಷಣ ಕಂಡು ಬರು ಅಪಶಕುನವೇನೂ ಆದಂತಾಯಿತು. ಆದರೆ ನನ್ನ ಧರ್ಮಜ್ಞ ಗುರುಗಳೊಬ್ಬರು ಆ ಅಪಶಕುನಕ್ಕೆ ಭಾಷ್ಯ ಮಾಡಿ ಅದರ ನಿರಾಕರಣ ಮಾಡಲು ಯತ್ನಿಸಿದರು. ಆದರೂ ಕೊನೆಗೆ ಬೆಕ್ಕು ಚೀಲದೊಳಗೆ ಉಳಿಯುವದೆ ಹೊರಬಿದ್ದೇ ಹೋಯಿತು. ಇದೇ ಸಮಾರಂಭದ ಪೂರ್ಣವಿಯಾದ ಪುನರಾತ್ತನೆ ಅದ್ಭುತ ಮಹಿಮೆಯೆಂದು ಹೇಳಬೇಕು. ಅನಿಮಿತ್ತ ಬಾಂಧವ್ಯವೂ, ಅವ್ಯಾಜ ಕಾರುಣ್ಯವೂ, ಅಸಾಮಾನ್ಯ ದಾಕ್ಷಿಣ್ಯವೂ ಅಕೃತ್ರಿಮ ಸ್ನೇಹಸಂಬಂಧವೂ, ತುಂಬಿಕೊಂಡಿರುವ ಮೂಲಕ ಕೇವಲ ಆನಂದಸ್ವಾನ ಪ್ರಾಪ್ಯವೇ ಎಂದು ನಂಬಿಕೊಂಡಿರುವ ದೇವರ ಮನೆಯಲ್ಲಿಯೇ ನನ್ನಂಥ ಹೆಣ್ಣುಮಗಳ ವಿಷಯವಾಗಿ ಕೃತ್ರಿಮತನವೂ ಪ್ರತಾರಣೆಯೂ, ಕಪಟವೂ, ಮೋಸಗಾರಿಕೆಯೂ ಕಂಡುಬರಹತ್ತಿದ ಬಳಿಕ ನನ್ನಂಥ ಬಡಪಾಯಿಯು ಯಾರಿಗೆ ಏನು ಹೇಳಬೇಕು? ನಾನು ಸೋತದ್ದೇನೂ ದೊಡ್ಡ ಮಾತಲ್ಲ. ನನಗೆ ಕೈಕೊಡುವ ಮಾತುಕೊಟ್ಟವರು ವೈಖರಿಯ ನಡಿಯಲ್ಲಿ ಕೈಕೊಟ್ಟರೆಂಬುದು ವಿಷಾದದ ಮಾತು. ಇಂಥವರ ಮಾತನ್ನು ನಂಬಿ ನನ್ನ ವಿಷಯವಾಗಿ ಯಾರೂ ಯಾವ ಬಗೆಯ ತಪ್ಪು ತಿಳುವಳಿಕೆಗಳನ್ನು ದಯಮಾಡಿ ಮಾಡಿಕೊಳ್ಳಕೂಡದೆಂಬ ಬಿನ್ನಹವನ್ನೇ ಈ ಮೂಲಕ ಧಾರವಾಡದ ಎಲ್ಲ ನಾಗರಿಕರಿಗೆ ನಾನು ಮಾಡಿಕೊಳ್ಳಬಯಸಿ ಇದನ್ನು ಬರೆದಿದ್ದೇನೆ.

ಬೆಂಗಳೂರಲ್ಲಿ ಬಳ್ಳೇ ಪ್ರತ್ಯೇಕಗ ಬಂದಿದ್ದ ಸಲ್ತಾನಪೇಟೆಯ ಗಣಪತಿಯ ಪೂಜೆಯು ಬಹು ಸಡಗರದಿಂದ ನಡೆಯಿತು. ಪೂಜೆಯ ಸಮಯದಲ್ಲಿ ವಿದ್ಯಾಖಾತೆಯ ಡಾ.ಸಿ.ರೆಡ್ಡಿಯವರಿಂದ ಮ್ಯಾಜಿಸ್ಟ್ರೇಟರ ಸುಬ್ಬರಾಯರು ಸ್ವತಃ ಬಂದಿದ್ದರು

ತರುಣರು ಶ್ರೀದತ್ತರಾಜಸಂಘ ತರುಣರು

ಶ್ರೀ ದತ್ತಾತ್ರಯ ನಾಟಕ ಕಂಪನಿ ಗದಗ ಕ್ಯಾಂಪ ಹುಬ್ಬಳ್ಳಿ.

ಗದಗ ಶ್ರೀದತ್ತಾತ್ರಯ ನಾಟಕ ಮಂಡಲದವರು ಹುಬ್ಬಳ್ಳಿ ಮಲ್ಲಿಕಾರ್ಜುನ ಥಿಯೇಟರಿನಲ್ಲಿ ಇದೇ ತಾ॥ ೨೬ ೯-೧೯೩೧ನೇ ಶುಕ್ರವಾರ ಅನಂತ ಚತುರ್ದಶಿ ರಾತ್ರಿ ೯॥ ಘಂಟೆಗೆ ಸರಿಯಾಗಿ ಶ್ರೀಮಾನ ಗಂಡ ಸದಾಶಿವರಾಯರಿಂದ ರಚಿತವಾದ ಆದರ್ಶಪ್ರಾಯವಾದ,—

“ಶಿರಸಂಗಿ ಲಿಂಗರಾಜ” ಎಂಬ ಚರಿತ್ರೆಯನ್ನು ರಂಗಭೂಮಿಯ ಮೇಲೆ ತರುವರು. ನಾಡಬಂಧುಗಳಿಗೆ ಇದೊಂದು ಹಬ್ಬವಲ್ಲವೇ?

ಮ್ಯಾನೇಜರ- ಗ. ದ. ನಾ. ಮಂ.

ಜಾಹೀರ ನೋಟೀಸು

ಮೆ॥ ಹುಸೇನಖಾನ ವಲ್ಲದ ಕಾಜಲೇಖಾನ ಪಠಾಣ ಸಾ॥ ಜಮಖಂಡಿ ಈತಗೆ—

ಕೆಳಗೆ ಸಹಿ ಮಾಡುವ ಹಜರತಮಾ ಕೋಂ ನಬೀಸಾಬ ಸುಲ್ತಾನ ಜಮಗಿ ಸಾಕೀನ ಜಮಖಂಡಿ ಹಾಲ ವಸ್ತಿ ಧಾರವಾಡ ನಾನು ನಿನಗೆ ಈ ಜಾಹೀರ ನೋಟೀಸಿನಿಂದಾ ತಿಳಿಸೋದೇನಂದ್ರೆ

ಜಮಖಂಡಿ ಸಂಸ್ಥಾನ ಮುಕ್ಕಾಂ ಜಮಖಂಡಿಯಲ್ಲಿ ನನ್ನ ವೈಕ ತಂದೆಯಾದ ಅಬ್ದುಲಖಾನ ವಲ್ಲದ ಕಾಜಲೇಖಾನ ಪಠಾಣ ಈತನು ತನ್ನ ತಂದೆಯು ಹಯಾತ ಇದ್ದಾಗ್ಯೆ ಮಸೀತನದ ಅಣ್ಣ ತಮ್ಮಂದಿರ ತಂಟೇದಲ್ಲಿ ಸ್ವತಂತ್ರ ರೀತಿಯಿಂದಾ ಬೇರೆಯಾಗಿ ಇದ್ದು ಅದೇ ಊರಲ್ಲಿ ಭಾರಪೇಟಗಲ್ಲಿಯಲ್ಲಿ ಒಂದು ಪಡಜ್ಯಾಗಾ ಇದರ ನಂಬರ ೩೦೯೯ ಇದರ ಚಕಬಂದಿ ಪೂರ್ವಕ್ಕೆ ಸರಕಾರಿ ರಸ್ತೆ ಪಶ್ಚಿಮಕ್ಕೆ ನನ್ನ ಗಂಡನ ಸ್ವಂತ ಮನೆ ಉತ್ತರಕ್ಕೆ ಸಂಣ ಸಂದಿ ರಸ್ತೆ ದಕ್ಷಿಣಕ್ಕೆ ಸೈದಾಮಾ ನೊಟಗಾರ ಇವರ ಮನೆ ಈ ಚಕಬಂದಿ ನಡುವೆ ಇರುವ ಖುಲ್ಲಾ ಜ್ಯಾಗಾ ಹಾಗೂ ಅದೇ ಓಣಿಯಲ್ಲಿ ಒಂದು ಮ್ಹಾಳಗಿ ಮನೆ ಇದರ ನಂಬರು ೩೯೯೪ ಇದರ ಚಕಬಂದಿ ಪೂರ್ವಕ್ಕೆ ಸರಕಾರಿ ರಸ್ತೆ ಪಶ್ಚಿಮಕ್ಕೆ ದಸ್ತಗೀರ ಸಾ॥ ಮುಟಗಿ ಇವರ ಮನೆ ಉತ್ತರಕ್ಕೆ ಸರಕಾರಿ ಸಂದೀ ರಸ್ತೆ ದಕ್ಷಿಣಕ್ಕೆ ರಾಜಮಾ ಸಾ॥ ರವಾಸ ಈತಿಯ ಮನೆ ಈ ಚಕಬಂದಿ ನಡುವೆ ಇರುವ ಮಾಳಗಿ ಮನೆ ಈ ಎರಡು ಆಸ್ತಿಗಳನ್ನು ಸ್ವತಂತ್ರರೀತಿಯಿಂದಾ ಗಳಿಸಿದ್ದು ಇದ್ದು ಸದ್ರಿ ಆಸ್ತಿಗಳ ಪೈಕಿ ಕೆಲವು ಆಸ್ತಿಯನ್ನು ಹಯಾತಿಯೊಳಗೆ ಒಬ್ಬ ಚಿಕ್ಕ ಮಗಳಿಗೆ ಬಕ್ಷೀಸು ಬರಕೊಟ್ಟು ಉಳಿದ ಆಸ್ತಿಯನ್ನು ನನಗೆ ಬಕ್ಷೀಸ ಬರಕೊಡುವದರೊಳಗೆ ವೈಕನಾದನು. ಸದ್ರಿ ಮೇಲ್ಕಾಣಿಸಿದ ಆಸ್ತಿಯು ವೈಕ ತಂದೆಯ ಸರಳ ವಾರಸದಾರರಾದ ಹೆಂಣು ಮಕ್ಕಳಾದ ನಮ್ಮದು ಇದ್ದು ಅದರ ಮೇಲೆ ನಿಮ್ಮ ಮಾಲ್ಕಿ ವ ಹಕ್ಕು ಏನೂ ಇರುವದಿಲ್ಲಾ ವೈಕ ತಂದೆಯ ತಂದೆಯ ಆಸ್ತಿ ಪೈಕಿ ನಮ್ಮ ತಂದೆಗೆ ಬರತಕ್ಕ (ಕಾಯದೇಶೀರ) ಹಿಸ್ಸೆಕ್ಕೆ ಸಹಾ ನಮ್ಮದು ಹಕ್ಕು ಇರುತ್ತದೆ. ಇದರ ಮೇಲೆ ನಿಮ್ಮ ಮಾಲ್ಕಿ ವ ಹಕ್ಕು ಇರುವದಿಲ್ಲಾ ನಾವು ಹೆಂಣು ಮಕ್ಕಳು ಇರುವದರಿಂದಾ ನೀನು ನಮಗೆ ಹೊಡಿಯುತ್ತೇನೆ ಕಡಿಯುತ್ತೇನೆ ಅಂತಾ ಧಮಕಿ ಹಾಕಿದ್ದರಿಂದಾ ನೀನು ಯಾವ ವ್ಯಾಳಕ್ಕೆ ನಮಗೆ ಏನು ಮಾಡುವಿಯೆಂಬ ಧೀತಿಯಿಂದಾ ಇಲ್ಲಿಗೆ ಹೊರಟುಬಂದಿರುತ್ತೇನೆ. ನನ್ನ ತಂದೆಯ ಆಸ್ತಿಯ ಮೇಲೆ ನಿನ್ನ ಯಾವ ತರದ ಹಕ್ಕು ಸಮ್ಮಂಧ ಇರುವದಿಲ್ಲಾ ಸದ್ರಿ ಆಸ್ತಿಯನ್ನು ವಿಲ್ಹೇವಾಟ ಮಾಡಲಿಕ್ಕೆ ನಿನಗೆ ಅಧಿಕಾರವಿರುವದಿಲ್ಲಾ- ಸದ್ರಿ ಆಸ್ತಿಯನ್ನು ಪತ್ತೀ ಖರೀದಿ ವಗೈರೆ ರೀತಿಯಿಂದಾ ನೀನು ಕೊಟ್ಟಲ್ಲಿ ಯ್ಯಾರೂ ತಗೊಳ್ಳಬಾರದು ಕೊಟ್ಟವರೂ ತಕ್ಕೊಂಡವರೂ ಲುಕ್ಸಾನಕ್ಕೆ ಪಾತ್ರರಾಗುವರೆಂದು ಈ ಜಾಹೀರ ನೋಟೀಸು ಕೊಟ್ಟಿದೆ- ತಿಳಿಯುವದು. ತಾ॥ ೨೧. ೯-೧೯೩೧ ಇಸ್ವಿ

ಈ ಎಡಗೈ ಹೆಬ್ಬೆರಳಿನ ಗುರ್ತ ಹಜರತಮಾ ಕೋಂ ನಬೀಸಾಬ ಸುಲ್ತಾನ ಜಮಗಿ ಈಕೀದು ಅದೆ.

The Asian Life Assurance Co. Ltd Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೮; ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗಬೇಡಿರಿ. ಈ ಕಂಪನಿಯು

ವಿಮೆಯ ರಕಮು ರೂ. ೧,೩೫,೦೦೦,೦೦ ಕಂತದ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರಿಗಿ ಕೊಟ್ಟದ್ದು ೧೦,೦೦,೦೦೦

ಜಿಂದಿಗಿ ೩೩,೧೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕೆ. ವ್ಹಿ. ಹುಲಸೋಗಿ, ಬಿ. ಎ.

ಕುಲಕರ್ಣಿ. ಧಾರವಾಡದ ಏಜಂಟರು ಕರ್ನಾಟಕದ ಬ್ರಾಂಚ ಮ್ಯಾನೇಜರ

ಬಿ. ಎಚ್. ಪಾಟೀಲ ಹುಬಳಿಯ ಏಜಂಟರು-

ಹಾವೇರಿಯ ಚೀಫ ಏಜಂಟರು. ಶ್ರೀ. ಎನ್. ಎಮ್. ದೊಡ್ಡವಾಡ ಮತ್ತು ಶ್ರೀ ಬಿ. ಟಿ. ಶಿರೋಳಕರ.

ಆಸುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು ಸೌಖ್ಯದಿಂದರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೩೮೦ ರೂ. ಗಳನ್ನ ಕೊಡುವಂಥ ಗೋಲ್ಡನ್ (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ ಏಶಿಯನ್ನ ಕಂಪನಿಯೊಂದೇ ಆಗಿರುತ್ತದೆ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

R. N. B. 1443

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ಬುಧವಾರ ತಾರೀಖು ೨೩ ನೇ ಸಪ್ಟಂಬರ ೧೯೩೧ (ಸಂಖ್ಯೆ ೨೧೫

ದಿ ಧಾರವಾಡ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ ಲಿಮಿಟೆಡ್

ಸೊಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ್ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಳ.

ಠೇವಿಗೆಯು ಒಟ್ಟು ಲಕ್ಷದಮೇಲುಂಟು. ಚೆಕ್ಕು ಹುಂಡಿ ನೋಡಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವವು. ಠೇವು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ಕೊಡುವುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮ್ಯಾನೇಜಿಂಗ ಡಾಯರೆಕ್ಟರ

—ಬೇಕಾಗಿದ್ದಾರೆ—

ಧಾರವಾಡದ ಜಯಕರ್ನಾಟಕ ಪ್ರೆಸ್ಸಿನಲ್ಲಿ ಕೆಲಸ ಮಾಡಲು ನುರಿತ ಕಂಪೋಜಿಟರೂ, ಪ್ರಿಂಟರರೂ, ಬಾಯಂಡರರೂ ಬೇಕಾಗಿದ್ದಾರೆ. ಹೊರಗಿನವರಿಗೆ ಎಲ್ಲ ಅನುಕೂಲತೆ ಮಾಡಿಕೊಡುತ್ತೇವೆ. ಬೇಕಾದವರು ಇಂದೇ ಕೆಳಗಿನವರಿಗೆ ಬರೆದುಕೊಳ್ಳಬೇಕು.

ಕೆ. ಜಿ. ರಾಯದುರ್ಗ

ಜಯಕರ್ನಾಟಕ ಪ್ರೆಸ್ಸ್, ಧಾರವಾಡ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೧
೬ „	೭-೦-೮
೩ „	೪-೮-೨
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಬಂಗಾರದ ಧಾರಣೆಯು ಏರಿತು.

ಇಂಗ್ಲಂಡ ಸರಕಾರದವರು ... ವಾರ ಮಧ್ಯರಾತ್ರಿಯಿಂದ ಲಂಡನದ ಬ್ಯಾಂಕಿನ ... ಬಂಗಾರದ ನಾಣ್ಯವನ್ನು ಸರಕಾರದಿಂದ ನಿಶ್ಚಯಮಾಡುವ ಧಾರಣೆಯಿಂದಲೇ ಮಾರಬೇಕೆಂಬ ಠರಾಯದ ನಿಯಮವನ್ನು ತೆಗೆದು ಹಾಕಿದ್ದರಿಂದ ಲಂಡನದ ಬ್ಯಾಂಕಿನ ಬಡ್ಡಿಯ ದರವು ಒಂದೂವರೆಯಷ್ಟು ಹೆಚ್ಚಾಯಿತು. ಈ ವರ್ತಮಾನವು ಇಲ್ಲಿಗೆ ಬಂದ ಕೂಡಲೆ ಇಲ್ಲಿಯು ಬಂಗಾರದ ಧಾರಣೆಯೂ ಏರಿತು.

ದಿಲ್ಲಿಯ ಒಡಂಬಡಿಕೆ ಮುರಿದದ್ದರ ಪುರಾವೆ.

...(೦)....

ಸಿಂಧ ಪ್ರಾಂತದಲ್ಲಿ ಗಾಂಧಿ-ಆಯರ್ವಿನ್ನ ಒಡಂಬಡಿಕೆಯ ವಿರುದ್ಧ ಸರಕಾರದವರು ಅನೇಕರ ಮೇಲೆ ಖಟ್ಲೆ ಹಾಕಿದ್ದಾರೆ. ಕರಾಚಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಮಿ. ಜಿಮ್‌ಶೇಟಜಿ ಮೇಥಾನವರು ಕಮೀಶನರಸಾಹೇಬರನ್ನು ಕಂಡು, ಈ ವಿಷಯವಾಗಿ ತಕರಾರು ಮಾಡಿದ್ದಾರೆ. ಆದರೂ ಸಾಹೇಬರ ದೃಷ್ಟಿಯು ಬದಲಾಗಲಿಲ್ಲ. ಸರಕಾರದ ಪೇಚಿನಲ್ಲಿ ಸಿಕ್ಕವರನ್ನು ಪಾರ ಮಾಡಿಕೊಳ್ಳಲೋಸುಗ ಪ್ರಮುಖರದೊಂದು ಡಿಫೆನ್ಸ ಕಮೀಟಿ ನೇಮಿಸಿದ್ದಾರೆ. ಇದರಲ್ಲಿ ಮ್ಯುನಿಸಿಪಾಲಿಟಿಯ ಮೆಂಬರರೂ, ಹಿಂದೂ ಮುಸಲಮಾನ ಫಾರ್ಸಿ ಮೊದಲಾದ ಕುಳಗಳ ಗೃಹಸ್ಥರೂ ಮೆಂಬರರಾಗಿದ್ದಾರೆ.

ಪರಳು ಹಂಚು ಹಿಡಿದು ಕೆಲಸ ಕೊಡುವಿಕೆ:

—(೦)—

ಜಿ. ಆಯ. ಪಿ. ರೇಲ್ವೆಯಲ್ಲಿ ಒಂದು ಕೆಲಸ ಕೊಡಬೇಕಾಯಿತು. ಇಬ್ಬರು ಉಮೇದವಾರರು ಬಂದರು. ಇಬ್ಬರೂ ಪಾಸಾದರು. ಯಾವನಿಗೆ ಕೆಲಸ ಕೊಡಬೇಕೆಂಬ ವಿಚಾರ ಬಿತ್ತು. ವರಿಷ್ಠರು ಇಬ್ಬರಿಗೂ ಪರಳು ಹಂಚು ಹಿಡಕೊಂಡು ಬರಲಿಕ್ಕೆ ಹೇಳಿದರು. ಸಾಹೇಬರು ಬಯಸಿದ ಪದಾರ್ಥದವನಿಗೆ ಕೆಲಸ ದೊರೆಯಿತು.

ಬರುವ ಸೋಮವಾರದಿಂದ ಪುಣೆಯಲ್ಲಿ ಕೂಡುವ ಕೌನ್ಸಿಲ ಸಭೆಯಲ್ಲಿ ಮುಲಕೀ ಮತ್ತು ಮ್ಯಾಜಿಸ್ಟ್ರೇಟ ಮಾಮಲೇದಾರರನ್ನು ಮ್ಯುನಿಸಿಪಾಲಿಟಿ ಮತ್ತು ಲೋಕಲಬೋರ್ಡಿನಲ್ಲಿ ನಾಮಿನೇಟ ಮೆಂಬರರಾಗಿ ನೇಮಿಸಬಾರದೆಂದು ಮಿ. ಮೂರಸಾಹೇಬರು ಠರಾವು ತರುವರು.

ಮಾಮಲೇದಾರ ಹಾಟಸನ್ನಸಾಹೇಬರು ಧುಳಿಗೆ ಬಂದಾಗ ಅವರಿಗೆ ಮಾನಪತ್ರ ಕೊಡಬಾರದೆಂಬ ಠರಾವು ಧುಳಿಯ ಡಿಸ್ಟ್ರಿಕ್ಟ ಲೋಕಲಬೋರ್ಡಿನಲ್ಲಿ ಬಹುಮತದಿಂದ ಪಾಸಾಯಿತು.

ಧಾರವಾಡ

ಮೊನ್ನೆ ರಾತ್ರಿಯಲ್ಲಿ ಮಿ. ಕಲೆಕ್ಟರಸಾಹೇಬರಿಗೆ ಸರಕಾರೀ ಕಚೇರಿ ಮತ್ತು ಶಾಲೆಗಳಿಗೆ ರಜೆ ಕೊಡಬೇಕೆಂದು ತಾರು ಬಂತು. ಆ ಪ್ರಕಾರ ನಿನ್ನೆ ದಿವಸ ಊಯೂರಲ್ಲಿಯ ಎಲ್ಲಾ ಶಾಲೆ ಕಚೇರಿಗಳೂ, ಬ್ಯಾಂಕುಗಳೂ ಬಂದಾದವು. ಏಕೆ ಬಂದಾದವೆಂಬ ಕಾರಣ ತಿಳಿಯುವದಿಲ್ಲ.

ವಿಜಯ.

ತಾರೀಖು ೨೩-೯-೧೯೩೧ನೇ ಇಸ್ವಿ

ಓಡಿಸಾ ಪ್ರಾಂತವನ್ನು ಸ್ವತಂತ್ರ ಮಾಡುವ ಕಮಿಟಿ

ಇಂಗ್ರೇಜಿ ಸರಕಾರದವರು ಸಿಂಧವನ್ನು ಮುಂಬಯಿ ಇಲಾಖೆಯಿಂದಗಲಿಸಿ, ಅದನ್ನು ಸ್ವತಂತ್ರ ಮಾಡಬೇಕೆಂದಿದ್ದಾರಷ್ಟೇ, ಇದಕ್ಕೆ ಮುಸಲಮಾನರು ಅನುಕೂಲರಿದ್ದು, ಹಿಂದೂ ಜನರು ಪ್ರತಿಕೂಲರಾಗಿದ್ದಾರೆ. ಹಿಂದೂ ಜನರು ಮಾಯನಾರಿಟಿಯಲ್ಲಿದ್ದು ಮುಸಲಮಾನರು ಮೇಜಾರಿಟಿಯಲ್ಲಿದ್ದಾರೆ ಈ ಪ್ರಶ್ನವು ಸಮಾಧಾನವಾಗಿ ಬಿಡುವ ಲಕ್ಷಣ ಅಲ್ಲಿಯ ಹಿಂದೂ ಜನರು ಈ ವಿಚಾರವನ್ನು ಬಲವಾಗಿ ವಿರೋಧಿಸುವರು.

ಸಿಂಧದ ತರುವಾಯವೂ, ಸರಕಾರದವರು ಓಡಿಸಾ ಪ್ರಾಂತವನ್ನು ಪ್ರತ್ಯೇಕ ಮಾಡುವದಕ್ಕಾಗಿ ಕೆಲವು ವರ್ಷಗಳಿಂದ ವಿಚಾರ ಮಾಡುತ್ತ, ಪತ್ರವ್ಯವಹಾರ ನಡಿಸಿ, ಆ ಬಗ್ಗೆ ಅಂಗೋಪಾಂಗವಾಗಿ ಸಾರ್ವಜನಿಕವಾಗಿ ವಿಚಾರಮಾಡಲು ಸರ ಸ್ಯಾಮುಯಲ ಓಡಾನೆಲ್ಲ, ನಾಮದಾರ ಮೇಥಾ ಮತ್ತು ಮಿ. ಫೂಕನ ಇವರದೊಂದು ಕಮಿಟಿ ನೇಮಿಸಿ, ಇವರಿಗೆ ನೆರವಾಗಿ ಪಾರ್ಲಾಕಿಮಿಡಿಯ ಅರಸರು, ಮಿ. ಸಚ್ಚಿದಾನಂದ ಸಿಂಹ ಮತ್ತು ರಾ. ಬ. ನರಸಿಂಹರಾಜು ಇವರ ನೆರವು ಕೊಟ್ಟಿದ್ದಾರೆ.

ಓಡಿಸಾದವರು ಅಥವಾ ಊರ್ಯರು ತಮ್ಮ ಸರಹದ್ದನ್ನು ಅತಿಕ್ರಮಿಸಬಾರದೆಂದು ಆಂಧ್ರರು ಆಗಲೇ ಎಚ್ಚರಾಗಿ ತಮ್ಮ ತಕರಾರನ್ನು ಮಾಡಿಕೊಳ್ಳುವದಕ್ಕೆ ಕೌರವರು ಪಾಂಡವರಿಗೆ ಹೇಳಿದಂತೆ ಊರಿಯರಿಗೆ ತಮ್ಮ ನಾಡಿನ ಗೇಣು ಭೂಮಿಯು ಸಿಕ್ಕಬಾರದಂತೆಯೂ ಉಪಾಯಗಳನ್ನು ಕೈಕೊಳ್ಳಲೋಸುಗ [illegible] ಸತ್ಯನಾರಾಯಣ, ರಾವಸಾಹೇಬ ರಾಮಮೂರ್ತಿ ನಾಯುಡು, ಬಿ. ಶೇಷಗಿರಿರಾವ, ಜಿಲ್ಲಾ ರಾಮಮೂರ್ತಿ ಮತ್ತು ದೇಶರಾಜು ಕೃಷ್ಣಮೂರ್ತಿ ಇವರದೊಂದು ಕಮಿಟಿ ನೇಮಿಸಿದ್ದಾರೆ.

ಓಡಿಸಾವನ್ನು ಸ್ವತಂತ್ರ ಮಾಡಲೋಸುಗ ಸರಕಾರದವರು ತಾವಾಗಿ ಮುಂದೊರೆದಂತೆ ಕರ್ನಾಟಕವನ್ನೊಂದುಗೂಡಿಸಲುದ್ಯುಕ್ತವಾಗುವದೊಂದೆಯುಳ್ಳಿಂತ್ತು, ಆ ವಿಚಾರವಾಗಿ ಕನ್ನಡಿಗರು ಮನಸ್ಸಿನಲ್ಲಿ ಮುಂದಿಗೆ ಮಾಡುವಂಥ ನಾಲ್ಕು ಮಾತುಗಳನ್ನು ಸಹ ಹೇಳಿಲ್ಲ. ಈ ಸಂಬಂಧವಾಗಿ ರಾಊಂಡ ಟೇಬಲದಲ್ಲಿ ಪ್ರಯತ್ನ ಮಾಡಲು ಕನ್ನಡಿಗರು ಒಬ್ಬ ಪ್ರತಿನಿಧಿಯನ್ನು ಲಂಡನಕ್ಕೆ ಕಳಿಸಬೇಕೆಂದಿದ್ದರು. ಈ ಭಾರ ನಾನೇ ಹೊರುವೆನೆಂದು ಮಹಾತ್ಮರು ಮಾತು ಕೊಟ್ಟಿದ್ದರಿಂದ, ಕನ್ನಡ ಪ್ರತಿನಿಧಿಯು ಹೋಗುವದು ನಿಂತಿತು. ಮಹಾತ್ಮರು ಮುತ್ಸದ್ದಿಗಳಂತೆ ಸಡಗಂಟಿನ ಮಾತಿನವರಲ್ಲ. ಆಡಿದಂತೆ ನಡೆಯುವರು ಅವರಿಂದ ಕರ್ನಾಟಕದ ಏಕೀಕರಣವಾಗಬೇಕೆಂದು ಎಲ್ಲ ಕನ್ನಡಿಗರು ಬಲವಾಗಿ ನಂಬಿದ್ದಾರೆ.

ನಾಗಪೂರ ಇಲಾಖೆಯಲ್ಲಿ ಮೂರು ಜಿಲ್ಲೆಗಳನ್ನು ಕಡಿಮೆ ಮಾಡಿದರು.

—(೧)—

ನಾಗಪೂರ ಇಲಾಖೆಯಲ್ಲಿ ಮೂರು ಜಿಲ್ಲೆಗಳನ್ನೇ ಕಡಿಮೆ ಮಾಡಿದರು, ಆ ಜಿಲ್ಲೆಗಳು ಕಡಿಮೆಯಾದ್ದರಿಂದ ಪ್ರಾಂತಗಳೂ ಹೊಸವಾಗಿ, ಆವುಗಳಲ್ಲಿ ಉಳಿದ ಜಿಲ್ಲೆಗಳ ಅದಲು-ಬದಲಾದವು

ಮುಂಬಯಿ ಇಲಾಖೆಯಲ್ಲಿಯೂ ಹಾಗೆ ಮಾಡಬಹುದಾಗಿದೆ. ಮಾದರಿಗಾಗಿ ಸೊಲ್ಲಾಪೂರ ಜಿಲ್ಲೆ ತಕ್ಕೊಳ್ಳುವಾ- ಇದರ ದಕ್ಷಿಣದ ಕನ್ನಡ ಭಾಗವನ್ನು ವಿಜಾಪೂರಕ್ಕೂ ಉತ್ತರವನ್ನು ಅಹಮದನಗರಕ್ಕೂ ಕೂಡಿಸಬಹುದಾಗಿದೆ ಶ್ರೀ ತುಕಾರಾಮ ಸಂಧವನು ಸಹ ಶ್ರೀ ವಿಠ್ಠಲನಿಗೆ ದೇವ ಕನ್ನಡನೆಂದೂ, ದೇಶಕನ್ನಡನೆಂದೂ ತನ್ನ ಅಭಂಗದಲ್ಲಿ ಹೇಳಿದಾನೆ ಪುರಂದರದಾಸರಂಥ ತಿಳಿಗನ್ನಡಿನ ದಾಸರು ಶ್ರೀ ವಿಠ್ಠಲನ ಭಕ್ತರೇ ಆಗಿದ್ದರು. ಇಂಥ ಪಂಢರಪೂರ ಪುಂದರ ಮತ್ತು ಅವುಗಳ ಸುತ್ತಲಿನ ತಾಲೂಕುಗಳು ಕರ್ನಾಟಮಯವಾಗಬೇಕೆಂಬುದು ನಿಶ್ಚಯವೇ ಸರಿ.

ಸರಕಾರಕ್ಕೆ ಹೇಗೂ ತಾನಾಗಿ ವೆಚ್ಚ ಉಳಿತಾಯ ಮಾಡುವ ಸಮಯ ಬಂದಿದೆ. ಮೇಲಿನ ಸೂಚನೆಯ ಪ್ರಕಾರ ಸೊಲ್ಲಾಪೂರ ಜಿಲ್ಲೆಯನ್ನು ಮುರಿದು, ಕನ್ನಡ ನಾಡಿನ ಮೂಲ ಮೇರೆಯನ್ನು ಸ್ಥಿರ ಪಡಿಸಿದರೆ- ಕನ್ನಡಿಗರು ಕಳೆದು ಹೋದ ದೇಶವನ್ನು ತಿರಿಗಿ ಕೊಟ್ಟಂತಾಗುತ್ತದೆ.

ಓರಿಸಾದಲ್ಲಿ ಬೇರೆ ಬೇರೆ ಭಾಷೆಗಳ ನಾಡುಗಳಲ್ಲಿ ಸಿಕ್ಕು ತೊಳಲುತ್ತಿರುವ ಜನರನ್ನೂ ಪ್ರಾಂತವನ್ನೂ ಕಿತ್ತಿ, ಅದರ ಮೊದಲಿನ ಸ್ಥಿತಿಯನ್ನು ತಂದು ಕೊಡುವಂತೆ ಕರ್ನಾಟಕಕ್ಕೆ ಅದರ ದೇಶವನ್ನು ಅದಕ್ಕೆ ತಿರಿಗಿ ಕೊಡಲು ಯಾರಿಂದಲೂ ಯಾವದೇ ತಂಟದ ಅಡ್ಡಿಯುಂಟಾಗಲಾರದು.

ಮೈಸೂರಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಬದಲಾಗಲೇ ಬೇಕು.

....(೧)....

ಮೈಸೂರ ಸಂಸ್ಥಾನದ ಪ್ರಜಾ ಪರಿಷತ್ತು ಚನ್ನಪಟ್ಟಣದಲ್ಲಿ ಸೇರಿತು. ಶ್ರೀ. ಡಿ. ಎಸ್ ಮಲ್ಲಪ್ಪನವರು ಅಧ್ಯಕ್ಷರಾಗಿದ್ದರು ಸರ ಶೇಷಾದ್ರಿಯವರ ಕಾಲದಿಂದ ಆಯುಷ್ಯ ಬೆಳೆಯುತ್ತ ಬಂದಿರುವ ಪ್ರಜಾಪ್ರತಿನಿಧಿ ಸಭೆಗೆ ಮುನ್ನ ಹತ್ತುವ ಆಯುಷ್ಯಕ್ಕೆ ಹೋಲಿಸುವುದು ಇದರ [illegible] ಹೊಸತರ ಬದಲಾವಣೆ ಶ್ರೀ ಮಲ್ಲಪ್ಪನವರು ನಿಚ್ಚಳವಾಗಿ ಹೇಳಿದ್ದಾರೆ. ಇವರು ಅನ್ನುವದೇನಂದರೆ-

"ಈ ಸಭೆಯು ಮುಂದೆ ಬರುವ ಕಾಲಕ್ಕೆ ಪ್ರಜಾಪ್ರತಿನಿಧಿಗಳು ಒಯ್ಯುವ ತಪಿಂದ ಎಷ್ಟು ಉಪಯುಕ್ತವಾದ ತಿದ್ದುಪಡಿಗಳನ್ನು ಸೂಚಿಸಿದರೂ ಆ ತಿದ್ದುಪಡಿಗಳು ಸರಕಾರದವರಿಂದ ಸ್ವಲ್ಪ ಕಾಲದಲ್ಲಿ ನಿರಾಕರಿಸಲ್ಪಡುತ್ತವೆ ಈ ಸಭೆಯು ಬಹುಮತ್ಯದ ಪ್ರಕಾರ ಠರಾವುಗಳನ್ನು ಪಾಸು ಮಾಡುವ, ತಿದ್ದುವ ಮತ್ತು ರದ್ದುಮಾಡುವ ಅಧಿಕಾರಗಳು ಶೀಘ್ರವಾಗಿ ಲಭಿಸುವ ಅಧಿಕಾರವಿಲ್ಲದಿದ್ದಲ್ಲಿ ಈ ಸಭೆಯು ನಾಮಶೇಷವಾದರೂ ಯಾರೂ ಚಿಂತಿಸಲಾರೆವು ನಾನು ಬಹಿರಂಗವಾಗಿ ಹೇಳಬಲ್ಲೆ."

ಶ್ರೀ ಮಲ್ಲಪ್ಪನವರ ಉಪನ್ಯಾಸದಿಂದ ದರಬಾರಿನವರು ಜವಾಬದಾರರಾಗಿ ಮೊದಲು ಹಾಗೆ ಮಾಡತಕ್ಕಂಥ ಪ್ರಸಂಗವೇ ಸರಿ.

ಪೋಪರು ಹಿಂದುಸ್ಥಾನಕ್ಕೆ ಸಾಮ್ರಾಜ್ಯಮಸ್ತುವೆಂದಾಶೀರ್ವದಿಸಿದರು

— (೧) —

ಮೈಸೂರಲ್ಲಿ ದಿವಾನರಾಗಿದ್ದ ಸರ ಆಲ್ಬಿಯನ್ ಬ್ಯಾನರಜಿಯವರು ವಿಲಾಯತಿಯಲ್ಲಿ ವಾಸವಾಗಿದ್ದಾರೆ ನಾಲ್ಕು ದಿವಸಗಳ ಹಿಂದೆ ಇವರು ರೋಮ ಪಟ್ಟಣಕ್ಕೆ ಹೋಗಿ, ಕ್ಯಾಥಲಿಕ ಪಂಥದ ಜಗದ್ಗುರುಗಳಾದ ಪೋಪ ಮಹಾಸ್ವಾಮಿ ದರ್ಶನಕ್ಕೆ ಹೋಗಿದ್ದರು. ಪೋಪರು ಇವರಿಗೆ ಆಶೀರ್ವಾದ ತೀರ್ಥ ಪ್ರಸಾದ ಕೊಡುವಾಗ ಹಿಂದುಸ್ಥಾನದ ಈಗಿನ ಕಷ್ಟ ತಾಪಗಳು ಬೇಗನೆ ಪರಿಹಾರವಾಗಲೆಂದು ಹಾರೈಸಿದರು

ಸರ ಬ್ಯಾನರಜಿಯವರು ಮು. ಸೋಲಿನಿಯವರನ್ನೂ ಕಾಣಲಿಕ್ಕೆ ಹೋಗಿದ್ದರು. ಅವರೂ ಹಿಂದುಸ್ಥಾನದ ಈಗಿನ ತೊಂದರೆಗಳು ಸಮಾಧಾನ ರೀತಿಯಿಂದ ಬಗೆಹರಿಯಲೆಂಬ ಭಾವವನ್ನು ವ್ಯಕ್ತಪಡಿಸಿದರು.

ರಾವುಂಡ ಟೇಬಲ

ಲಂಡನದಲ್ಲಿ ಮಹಾತ್ಮರಿಗೆ ಅನಿರ್ಬಂಧ ದಾರಿಯು

—(೦)—

ಲಂಡನದಲ್ಲಿ ಮಹಾತ್ಮರು ವಾಸವಾಗಿರುವ ಸ್ಥಳವು ಜೇಮ್ಸ ಆನುಮನೆಯಿಂದ ಬಹಳ ದೂರವಿದೆ. ಆ ಆಶ್ರಮದಲ್ಲಿ ಇವರಿಗೆ ತಮ್ಮನ್ನು ಕಾಣಲಿಕ್ಕೆ ಬರುವಂಥವರ ದೆಸೆಯಿಂದ ಒಂದು ಸ್ವತಂತ್ರ ಕೋಣೆ ಕೊಟ್ಟಿದ್ದಾರೆ. ಆದಾಗ್ಯೂ ಇವರಿಗೆ ಬರುಹೋಗುವದಕ್ಕೆ ಬಹಳ ಹೊತ್ತು ಹತ್ತುವದರಿಂದ, ಆ ರಮನೆಗೆ ಸನಿಯವಾಗಿ ನೈಟ್ಸಬ್ರಿಜ್ಜ ಬೀದಿಯಲ್ಲಿ ಇವರ ಬಿಡಾರ ತರುವ ವಿಚಾರ ನಡೆದಿದೆ

ಈ ದೂರಿನ ವಾರದ ಹೊತ್ತರ, ರಾಜಮಾರ್ಗದಲ್ಲಾಗುವ ಅತಿಶಯವಾದ ದಟ್ಟಣೆಯ ಸಲುವಾಗಿ ಇವರಿಗೆ ರಾವುಂಡಟೇಬಲಿಗೆ ಒದಲು ದಾರಿಯಲ್ಲಿ ಅಡ್ಡಿಯಾಗಿ, ಕಾಲಹರಣವಾಗುತ್ತದೆ. ಸಿಪ ಅಂದಲ್ಲಿ ಇವರ ಮೋಟರು ಹಾದುಸರಾಯರ ಬಾಗಿಲದ ತನಕ ಬರುವಂತೆ ಸ್ಪೇಶಲ ಅಪ್ಪಣೆ ಕೊಟ್ಟಂತೆ, ಲಂಡನದಲ್ಲಿ ಇವರ ಮೊಟಾರಕ್ಕೆ ಎಡಬಲ ಮತ್ತು ನಡುವೇ ದಾರೀ ತೆಗೆಯುವರು. ಮಹಾತ್ಮರ ಮೋಟಾರಿನ ಮುಂದೆ ಪೋಲೀಸರು ತಮ್ಮ ಮೋಟಾರ ಬಿಟ್ಟು, ಅದರಲ್ಲಿ ದಾರೀ ಬಿಡಿರೆಂದು ಸೂಚಿಸುವ ಗಂಟೆಯನ್ನು ಘಣಘಣ ಬಾರಿಸುತ್ತಾ ಹೋಗುವರು. ಅದರ ಹಿಂದೆ ಮಹಾತ್ಮರ ಮೋಟಾರ ಹೋಗುವದು

ವರ್ತಮಾನಪತ್ರಗಳ ಪ್ರತಿನಿಧಿಗಳ ಕೂಡ ಭಾಷಣ

...(೦)...

ಸರ ತೇಜಬಹಾದ್ದೂರ ಸಪ್ರು ಮತ್ತು ಬ್ಯಾರಿಸ್ಟರ ಜಯಕರರು ಇಂಗ್ಲಿಷ ಮತ್ತು ಅಮೇರಿಕೆಯ ಪತ್ರಗಳ ಪ್ರತಿನಿಧಿಗಳಿಗೆ ಊಟದಿಂದ ತೃಪ್ತಿಪಡಿಸಿದರು. ಈ ಸಮಾರಂಭಕ್ಕೆ ಮಹಾತ್ಮರೂ, ಮಿ. ಶೌಕತಅಲಿಯವರೂ ಹೋಗಿದ್ದರು. ಮೌಲಾನಾನವರು ಮಹಾತ್ಮರನ್ನು ಅಪ್ಪಿಕೊಂಡ, ಸಂತೋಷವನ್ನು ವ್ಯಕ್ತಪಡಿಸಿದರು. ಅಲ್ಲಿ ಭಾಷಣಗಳು ನಡೆಯಲಿಲ್ಲ. ಪ್ರಶ್ನೋತ್ತರಗಳು ನಡೆದವು ಈ ಸಮಾರಂಭಕ್ಕೆ ವರ್ತಮಾನಪತ್ರಗಳ ೬೦ ಜನ ಪ್ರತಿನಿಧಿಗಳು ಬಂದಿದ್ದರು. ಮ್ಯಾಂಚೆಸ್ಟರದ ದುರವಸ್ಥೆಯನ್ನು ಕುರಿತು ಕೆಲವರು ಮಹಾತ್ಮರ ಕೂಡ ಚರ್ಚೆ ಮಾಡಿದರು.

ಮಹಾತ್ಮರ ನೋಡಿಕೆ ಮತ್ತು ಆತಿಕಗಳು

ಮಹಾತ್ಮರು ಲೆಸ್ಟರಮ್ಮನ ಅತಿಥಿಯಾಗಿದ್ದಾರಷ್ಟೇ; ಇವಳ ತಂಗಿಯು ಬಾಲಕ ಬಾಲಿಕೆಯರದೊಂದು ಶಾಲೆಯಿಟ್ಟಿದ್ದಾಳೆ. ಇಲ್ಲಿ ಎರಡರಿಂದ ಎಂಟು ವರ್ಷದೊಳಗಿನ ಹುಡುಗರು ಕಲಿಯುವರು. ಶಾಲೆಯು ಸುತ್ತಲು ಪುಷ್ಪಗಳಿಂದ ಬೆಳಕು ಮತ್ತು ಹವೆಯಾಡುತ್ತಿರುವದು ಮಾಳಿಗೆಯ ಮೇಲೆ ಅನೇಕ ಮಂಚಗಳನ್ನು ಹಾಕಿದ್ದು, ಹುಡುಗರು ಮಧ್ಯಾಹ್ನದ ಊಟವಾದ ಬಳಿಕ, ಅವುಗಳ ಮೇಲೆ ಮಲಗಿ, ಆರಾಮ ತಕ್ಕೊಳ್ಳುವ ಕಲ್ಪನೆ ತಕ್ಕೊಳ್ಳುವರು. ತೀರ ಸಣ್ಣ ... ಈ ಶಾಲೆ ನೋಡಿ, ಮಹಾತ್ಮರು ಬಹಳ ಸಂತೋಷಪಟ್ಟರು ಶಾಲೆಯ ಭಾವನಾವಳಿ ಅಪ್ಪಿ ಹಸ್ತರ ಇಟ್ಟುಕೊಂಡಿದ್ದಾರೆ. ತಾವು ಈ ಶಾಲೆಯ ನೋಟವನ್ನು ಶಿಕ್ಷಣವನ್ನೂ ಎಂದಿಗೂ ಮರೆಯಲಾರೆವೆಂದು ಅಭಿಪ್ರಾಯಪಟ್ಟಿದ್ದಾರೆ

ಸ್ವರಾಜ್ಯ ಕೊಟ್ಟರೆ- ವ್ಯಾಪಾರದ ಸವಲತ್ತು.

—(೦)—

ನ್ಯೂಜ ಕ್ರಾನಿಕಲವೆಂಬ ಪತ್ರದ ಪ್ರತಿನಿಧಿಯು ಮಹಾತ್ಮರನ್ನು ಕಾಣಲಿಕ್ಕೆ ಹೋಗಿದ್ದನು ಹಿಂದುಸ್ಥಾನದ ಹಿತಸಂಬಂಧಗಳ ರಕ್ಷಣೆಯ ಮುಖ್ಯತತ್ವವನ್ನು ಕಾಯ್ದು, ಪಾರ್ಲಮೆಂಟವು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಡುವದಾದರೆ- ಹಿಂದುಸ್ಥಾನವು ಬೇರೆ ದೇಶಗಳಿಗಿಂತ ವಿಶೇಷವಾಗಿ ವ್ಯಾಪಾರದ ಸೌಲಭ್ಯಗಳನ್ನೊದಗಿಸಿಕೊಡಬಹುದೆಂದು ಮಹಾತ್ಮರು ಆತನ ಮುಂದೆ ಆಡಿ ತೋರಿಸಿದ್ದಾರೆ

ಊಟದಲ್ಲಿ ಪಟಾಕ್ಷಿ ಹಳ್ಳಿ ಮಾಡಿದ ಮಂಗಚೇಷ್ಟೆ

...(೦)..

ಲಂಡನದಲ್ಲೊಂದು ಉಪಹಾರ ಗೃಹದಲ್ಲಿ ರಾವುಂಡ ಟೇಬಲಿಗೆ ಹೋದ ಹಾಗು ಬೇರೆ ಹಿಂದೂ ಜನರ ಮೇಜವಾನಿಯು ಊಟ ನಡೆದಿತ್ತು. ಆಗ ಯಾವನೋ ಒಬ್ಬನು ಕುಚೇಷ್ಟೆಯಿಂದ ಒಂದು ದೊಡ್ಡ ಪಟಾಕ್ಷಿ ಹಾರಿಸಲು, ಅದು ಬಾಂಬಿನಂತೆ ಧಡಲವೆಂಬ ಶಬ್ದವಾಯಿತು. ಕೂಡಲೆ ಜನರು ಗಾಬರಿಯಾಗಿ, ಊಟ ಬಿಟ್ಟೇ ಎದ್ದರು. ಯಾರಿಗೂ ಏನೂ ತಿಳಿಯದಾಯಿತು. ವಿಶ್ರಾಂತಿಗೃಹದ ಮೇನೆಜರನು ಕಡೆಯಿಂದ ಪಟಾಕ್ಷಿ ಹಾರಿದ್ದು ಅರಿತನು. ಹಾರಿಸಿದವನನ್ನು ಹಿಡಿಯಲಿಕ್ಕೆ ಹೋಗಲು- ಅವನು ಗದ್ದಲದಲ್ಲಿ ತಪ್ಪಿಸಿಕೊಂಡು ಪಲಾಯನ ಮಾಡಿ ಹೋದನು,

---

ಇಂಗ್ಲಂಡದ ಶಿಕ್ಷಕರ ಸ್ಥಿತಿ ಹೋಯಿತು.

ಸಂಬಳ ಕಡಿಮೆ ಮಾಡಿದ ಕೂಡಲೆ ಇಂಗ್ಲಂಡದ ಶಿಕ್ಷಕರ ತಾಳ್ಮೆಯು ಹೋಯಿತು. ಲಂಡನದ ಹತ್ತು ಸಾವಿರ ಶಿಕ್ಷಕರು ಸಾರ್ವಜನಿಕ ಸಭೆ ಕೂಡಿಸಿ, ಸರಕಾರದ ಕೃತ್ಯವನ್ನು ನಿಷೇಧಿಸಿದರು ನಿಷೇಧವನ್ನು ವ್ಯಕ್ತಪಡಿಸುವಾಗ ಶಿಕ್ಷಕರು ಸ್ಥಿತಿಯನ್ನು ಬಿಟ್ಟು, ಸರಕಾರದ ಚೇಷ್ಟೇ, ಅಪಹಾಸ್ಯ ಮಾಡಿ, ಹೊಸದಾಗಿಕ್ಕೆ ಸಿಟ್ಟಿನಂಥ ಭಾಷಣ ಮಾಡಿದರು ಸರಕಾರದ ಕೂಡ ಅಸಹಕಾರ' ಮತ್ತು ಸತ್ಯಾಗ್ರಹವೆಂದು ಶಿಕ್ಷಕರು ಶಾಲೆಯ ಶಿಕ್ಷಣ ಮುಗಿದ ಬಳಿಕ, ವಿದ್ಯಾರ್ಥಿಗಳಿಂದ ಗಿನಾಲು ಮಾಡಿಸುತ್ತಿರುವ ಅಂಗಸಾಧನೆ ವ್ಯಾಯಾಮ ಮುಂತಾದವುಗಳನ್ನು ನಿಲ್ಲಿಸಿಬಿಟ್ಟಿದ್ದಾರೆ ಹೊಡೆಯುತ್ತೇವೆ. ಬಡಿಯುತ್ತೇವೆ. ಹಿಂಸೆಯ ಕೃತ್ಯಗಳನ್ನು ಮಾಡುತ್ತೇವೆಂದು ಸರಕಾರವನ್ನು ಹೆದರಿಸಬೇಡಿರಿ ನ್ಯಾಯವಾದ ಯುಕ್ತಿಮಾರ್ಗದಿಂದಲೇ ಬೇಡಿಕೆಗಳನ್ನು ಪೂರ್ಣಮಾಡಿಕೊಳ್ಳುವಂಥವರಾಗಿರೆಂದು ಇವರ ಸಭೆಯ ಅಧ್ಯಕ್ಷರಾದ ಪಾರ್ಲಮೆಂಟ ಸಭೆಯ ಸೊಂಬರರಾದ ಸರ ಗ್ರಾಹಾಮುಟಲಸಾಹೇಬ ಇವರಿಗೆ ಬೋಧಮಾಡಿದ್ದಾರೆ.

ಹಿಂದುಸ್ಥಾನದ ಹೊಸ ಗಣತಿಯ ಜನಸಂಖ್ಯೆ

ಹಿಂದುಸ್ಥಾನ ಸರಕಾರದವರು ಮನುಷ್ಯಗಣತಿಯ ಅಂಕಿಗಳನ್ನು ಪ್ರಸಿದ್ಧ ಮಾಡಿದ್ದು, ಅವುಗಳಲ್ಲಿ ಕೆಲವನ್ನು ಇದರಡಿ ಕೊಡುತ್ತೇವೆ.

ಹಿಂದುಸ್ಥಾನದ ಜನಸಂಖ್ಯೆಯು ೩೫ ಕೋಟಿ ೨೮ ಲಕ್ಷವಾಯಿತು. ಇವರಲ್ಲಿ ೧೮ ಕೋಟಿ ಗಂಡಸರು ಮತ್ತು ೧೭ ಕೋಟಿ ಹೆಂಗಸರಿರುತ್ತಾರೆ:

ಮ. ಏರಿಯ ಇಲಾಖೆಯು ಜನಸಂಖ್ಯೆಯು-

೨, ೧೮, ೫೪, ೮೪೧ ಇದರಲ್ಲಿ

ಹಿಂದೂ-	೧,೬೬,೧೯೮,೬೬
ಮುಸಲಮಾನ	೪೪೫೩೧೮೮
ಕ್ರಿಶ್ಚನ್-	೮೧೬೦೪೨
ಸಿಖ-	೨೦೬೨೮
ಫಾರಸಿ	೮೯೨೪೮
ಬೌದ್ಧ	೧೮೯೦
ಯಹೂದಿ	೧೬೪೩

ಕಳೆದ ಹತ್ತು ವರ್ಷಗಳಲ್ಲಿ ಹಿಂದೂ ಜನರು ನೂರಕ್ಕೆ, ೧೦, ಮುಸಲಮಾನರು, ೧೩ ಸಿಖರು ೩೩, ಬೌದ್ಧರು ೫, ಫಾರಸಿಗಳು ಇವರಂತೆ ಹೆಚ್ಚಾಗಿದ್ದಾರೆ.

ಮುಖ್ಯ ಜನಸಂಖ್ಯೆಗಳು

ಹಿಂದೂ-	೨೩,೯೨,೬೩,೧೦೬
ಮುಸಲಮಾನ	೭,೭೭,೪೮೫೨೫
ಸಿಖ-	೪೩೩೭೪೪೨
ಕ್ರಿಶ್ಚನ್-	೫೯೬೧೭೯೪

ಪ್ರತಿಯೊಂದು ಪಟ್ಟಣದಲ್ಲಿ ಪ್ರತಿಯೊಂದು ಹಳ್ಳಿಯಲ್ಲಿ ಖಾದಿ ಭಾಂಡಾರದಲ್ಲಿರುವ ಖಾದಿಯನ್ನು ವಿಕ್ರಯಿಸುವ ಏರ್ಪಾಡಾಗಬೇಕು. ಇಂತಹ ವಾರದಲ್ಲಿ ಇತರ ಕಾರ್ಯಕ್ರಮಗಳಿರಬಹುದಾದರೂ ಎಲ್ಲ ಕಾಂಗ್ರೆಸ ಕಮಿಟಿಗಳಿಗೂ ಕಾಂಗ್ರೆಸ ಜನರಿಗೂ ಈ ವಾರದಲ್ಲಿ ಖಾದಿಯ ಮಾರಾಟವನ್ನೇ ಮುಖ್ಯ ಕಾರ್ಯಕ್ರಮವನ್ನಾಗಿಟ್ಟುಕೊಳ್ಳಬೇಕೆಂದೂ ಖಾದಿಯ ವಿಕ್ರಯಕ್ಕಾಗಿ ಶಕ್ತಿಮೀರಿ ಯತ್ನಿಸಬೇಕೆಂದೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಪ್ರತಿಯೊಬ್ಬ ಕಾಂಗ್ರೆಸ ಕಾರ್ಯಕರ್ತನು ಈ ವಾರದಲ್ಲಿ ಖಾದಿಯನ್ನು ವಿಕ್ರಯಿಸಿ ತನ್ಮೂಲಕ ಖಾದಿಯ ಸಂದೇಶವನ್ನು ಮನೆ ಮನೆಗೂ ಮುಟ್ಟಿಸಬೇಕೆಂದು ನನ್ನ ಇಚ್ಛೆ

೧೫೦೦ ಜನರು ಬೇಕು.

ಅ|| ಭಾ|| ಚರಖಾ ಸಂಘದ ಅಧ್ಯಕ್ಷರಾದ ಶ್ರೀ|| ಜಮನಾಲಾಲರಿಂದ ೧೫ ಲಕ್ಷ ರೂ. ಗಳು ಖಾದಿಯ ರೂಪದಲ್ಲಿರುವವೆಂದೂ ಅಷ್ಟೇ ಹಣವು, ಹತ್ತಿ ಮೊದಲಾದ ಖಾದಿಯ ಉತ್ಪಾದಕ ವಸ್ತುಗಳಲ್ಲಿರುವದೆಂದೂ ನನಗೆ ತಿಳಿದು ಬಂದಿದೆ. ಕಾರಣ ರೋಖು ಹಣದ ಅಭಾವದಿಂದ ಅ|| ಭಾ|| ಚ|| ಸಂಘಟಕ್ಕೆ ತನ್ನ ಕಾರ್ಯ ಮಾಡಲು ಬಹು ತೊಂದರೆಯಾಗಿದೆ. ಕಾರಣ ಸಿದ್ಧವಿದ್ದ ಖಾದಿಯೆಲ್ಲ ಮಾರಾಟವಾಗುವಂಥ ಯುಕ್ತಿಯೊಂದನ್ನು ನಾವು ಯೋಚಿಸಬೇಕಾಗಿದೆ. ಅಪಾಥವ್ಯವಾದ ಹಿಂದುಸ್ಥಾನದಲ್ಲಿ ೧೦೦೦ ರೂ. ಬೆಲೆ ಬಾಳುವ ಖಾದಿಯನ್ನು ಕೊಳ್ಳುವ ಅಥವಾ ಮಾರುವ ೧೫೦೦ ಜನರು ದೊರೆತಲ್ಲಿ ಈ ಕಾರ್ಯವಾಗುವದು ಸದ್ಯದ ಪ್ರಸಂಗವನ್ನು, ಈ ಕಾರ್ಯದ ಸದುದ್ದೇಶವನ್ನು ನಿರೀಕ್ಷಿಸಿದಲ್ಲಿ ಇದೇನೂ ಕಠಿಣವಾದ ಕಾರ್ಯಕ್ರಮವೆಂದು ನನಗನಿಸುವದಿಲ್ಲ. ಖಾದಿಯು ರಾಜಕೀಯ ದ್ವೇಷಕವೆಂದು ಯಾರೂ ತಿಳಿಯಕೂಡದು. ಅದು ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವ ಸಾಧನವಾಗಿದೆ ಸ್ತ್ರೀಯರಿಗೆ ತಮ್ಮ ವಿರಾಮವೇಳೆಯಲ್ಲಿ ನೂಲುವದೊಂದೇ ಸಾಧ್ಯಕಾರ್ಯವಾಗಿದೆ. ಕಾರಣ ರಾಜಕೀಯ ವಿಚಾರಗಳಲ್ಲಿ ಕಾಂಗ್ರೆಸ್ಸಿಗಿಂತ ಭಿನ್ನ ಮತವುಳ್ಳವರು-ಅವರು ಜಮೀನದಾರರಿರಲಿ, ರಾಜರಿರಲಿ, ಸರಕಾರೀ ನೌಕರರಿರಲಿ- ಖಾದಿಯ ಮಾರಾಟದಲ್ಲಿ ತಮ್ಮ ಕಾರ್ಯವನ್ನು ಮಾಡುವರೆಂದು ನಾನು ನಂಬುತ್ತೇನೆ. ನಾನು ಹೇಳಿದಂತೆ ೧೦೦೦ ರೂ. ಬೆಲೆ ಬಾಳುವ ಖಾದಿ ಕೊಳ್ಳುವ ೧೫೦೦ ಜನರನ್ನು ಕೂಡಿಸಲು ಎಲ್ಲರೂ ಅದರಲ್ಲೂ ವಿಶೇಷತಃ ಕಾಂಗ್ರೆಸ್ಸಿನವರು-ನನಗೆ ಸಹಾಯಮಾಡಲು ದಾನವನ್ನು ಬೇಡಿಕೊಳ್ಳುತ್ತೇನೆ. ಅ|| ಭಾ|| ಚ|| ಸಂಘದವರು ಖಾದಿಯನ್ನು ಬೇಡಿಕೆಯಿದ್ದ ಸ್ಥಳಗಳಿಗೆ ಮುಟ್ಟಿಸಲು ಒಪ್ಪಿಕೊಂಡಿದ್ದಾರೆ. ಇಂದಿನಿಂದಲೇ ಈ ಕಾರ್ಯವು ಪ್ರಾರಂಭವಾಗಬೇಕು. ಎಲ್ಲ ಆರ್ಡರುಗಳನ್ನು ಅಹಮದಾಬಾದದಲ್ಲಿರುವ ಅ|| ಭಾ|| ಚ|| ಸಂಘಕ್ಕೆ ಕಳುಹಿಸಬೇಕು. ಎಲ್ಲ ಹಣವನ್ನು ಮುಂಗಡ ಕಳುಹಿಸಬೇಕು. ಕೇವಲ ಕೆಲವು ದಿನಗಳಲ್ಲಿ ಅಸಂಖ್ಯ ಬೇಡಿಕೆಗಳು ಬರಬಹುದೆಂದು ನಾನು ಆಶಿಸುತ್ತೇನೆ. ನಮ್ಮ ಮುಖಂಡರು (ಮಹಾತ್ಮರು) ಅಲ್ಲಿ ದೂರ ಇಂಗ್ಲಂಡದಲ್ಲಿ ದೇಶಹಿತಕ್ಕಾಗಿ ದುಡಿಯುತ್ತಿರುವಾಗ ನಾವಿಲ್ಲಿ ಇಷ್ಟು ಇಂಥ ಕಾರ್ಯವನ್ನಾದರೂ ಮಾಡುವಾ.

The Asian Life Assurance Co. Ltd
Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೩೪,೦೦೦,೦೦ ಕಂತದ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರಿಗಿ ಕೊಟ್ಟದ್ದು ೧೧,೦೦,೦೦೦

ಫಂಡ ೧ ೩೩,೨೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕುಲಕರ್ಣಿ, ಧಾರವಾಡದ ಏಜಂಟರು

ಕೆ. ಬ್ಹಿ. ಹುಲಸೋಗಿ, ಬಿ. ಎ. ಕರ್ನಾಟಕದ ಬ್ರಾಂಚ ಮ್ಯಾನೇಜರ

ಬಿ. ಎಚ್. ಪಾಟೀಲ ಹುಬಳಿಯ ಏಜಂಟರು-

ಹಾವೇರಿಯ ಚೀಫ ಏಜಂಟರು. ಶ್ರೀ. ಎನ್. ಎಮ್. ದೊಡ್ಡಮಾಡ ಮತ್ತು ಶ್ರೀ. ಬಿ. ಟಿ. ತಿರೋಳಕರ.

ಆಸುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು ಸೌಖ್ಯದಿಂದರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೨೦ ರೂ. ಗಳನ್ನ ಕೊಡುವಂಥ **ಗೋಲ್ಡನ್ (ಸುವರ್ಣ) ಪಾಲಿಸಿಯನ್ನು** ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನು ಕೊಡುವ ಕಂಪನಿಯೆಂದರೆ ಏಶಿಯನ್ನ ಕಂಪನಿಯೊಂದೇ ಆಗಿರುತ್ತದೆ

ಲಂಡನದಲ್ಲಿ ಒಂದು ಕೂಸಿಗೆ ಆಪರೇಷನ ಮಾಡಿದರು. ಕೂಡಲೆ ಅದು ಸತ್ತಿತು. ಶ್ವಾಸೋಚ್ಛ್ವಾಸ ಬಂದಾಗಬೇಕೆಂದು ಬಗೆದು ಪ್ರಾಣವಾಯು ತುಂಬುವ ಎಲ್ಲ ಉಪಾಯ ಮಾಡಿದರು. ವ್ಯರ್ಥವಾಯಿತು. ಬಳಿಕ ಡಾಕ್ಟರರು ಎದೆಯನ್ನು ತಿಕ್ಕಿದರು. ಕೆಲ ನಿಮಿಷಗಳಲ್ಲಿಯೇ ಜೀವ ತಿರುಗಿತು. ಆದರೆ ಅದು ೧೨ ತಾಸಿಗಿಂತ ಹೆಚ್ಚು ಹೊತ್ತು ಬದುಕಲಿಲ್ಲ.

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ		
೧೨ ತಿಂಗಳಿಗೆ		ರೂ. ೧೨-೮-೦
೬	"	೭-೦-೦
೩	"	೪-೫-೦
ವಾರ ಪತ್ರಿಕೆ ೧ ವರ್ಷಕ್ಕೆ		೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಕೊಳ್ಳಿರಿ

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ

R. N. B. 1443

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨] ಧಾರವಾಡ ಗುರುವಾರ ತಾರೀಖು ೨೪ ನೇ ಸಪ್ಟೆಂಬರ ೧೯೩೧ (ಸಂಚಿಕೆ ೨೧೬

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ ಶಿದ್ಧಾಪದೂಶರ ಅಸಲರ್ಜಿ, ಶ್ರೀ ಆರೂಢಸ್ವಾಮಿಗಳ ಕೈಫಿಯತ್ತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತೇವೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ ಕೊಡಲ್ಪಡುವದು. ವ್ಹಿ. ಪಿ ಖರ್ಚು ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

ಟ್ರಾಮವೇ ಕೂಲಿಕಾರರ ಪಿಕೆಟಿಂಗ

—(೦)—

ಮುಂಬಯಿಯಲ್ಲಿ ಸೋಮವಾರ ದಿವಸ ಟ್ರಾಮವೇ ಕಂಪನಿಯವರು ವೆಚ್ಚ ಉಳಿತಾಯವೆಂದು ಆ ದಿನದ ಮಟ್ಟಿಗೆ ಕಾರಖಾನೆಯಲ್ಲಾಗುವ ದುರಸ್ತಿಯ ಕೆಲಸವನ್ನು ಬಂದಿಟ್ಟರು. ಕಂಪನಿಯ ಕೃತ್ಯವು ಕೆಲಸಗಾರರ ಸಂಬಳ ಕಡಿಮೆ ಮಾಡುವ ಕೃತ್ರಿಮತನವಾಗಿರುತ್ತದೆಂದು ಕೂಲಿಕಾರರು ಅಂದುಕೊಂಡು, ಯಾವ ಕೂಲಿಯೂ ಕೆಲಸಕ್ಕೆ ಹೋಗದಂತೆ ಪಿಕೆಟಿಂಗ ಮಾಡಲು ಪ್ರಾರಂಭ ಒಂದಾಯಿತು.

ಅಮೃತಬಝಾರ ಪತ್ರಿಕೆಯ ಎಡಿಟರರು ಕೂದಲು ದಾಟಿದರು

—(೦)—

ಕಲಕತ್ತೆಯಲ್ಲಿ ಅಮೃತಬಝಾರ ಪತ್ರಿಕೆಯ ಎಡಿಟರರಾದ ಶ್ರೀ. ತುಷಾರಕಾಂತಿ ಘೋಷರು ಹೆಂಡತಿ ಮತ್ತು ಮಗನೊಂದಿಗೆ ಒಂದು ಕೋಣೆಯಲ್ಲಿ ಮಲಗಿದಾಗ ಪತ್ರದ ಕಚೇರಿಗೇ ಸಿಡ್ಲು ಬಡೆದು, ಅಲ್ಲಿಯ ವಿದ್ಯುತ್ತಿನ ದೀಪ ಆರಿ, ತಂತಿಗಳು ಕತ್ತರಿಸಿ ಹೋದವು. ಈ ಅನಾಹುತವಾಗುವಾಗ ಮೂರೇ ಮಿನಿಟಿನ ಮುಂಚೆ ಶ್ರೀ. ಘೋಷರು ಹೆಂಡತಿ ಮತ್ತು ಮಗ ಸಹಿತವಾಗಿ ಬೇರೆ ಕಡೆಗೆ ಹೋಗಿದ್ದರು.

ಪುನಃ ಎರಡು ದಿವಸ ಬ್ಯಾಂಕು ಬಂದು

····(೦)····

ಮೊನ್ನೆ ಮಂಗಳವಾರ ಬ್ಯಾಂಕುಗಳು ಬಂದಾದಂತೆ ನಿನ್ನೆ ಮತ್ತು ಇಂದು ಬ್ಯಾಂಕುಗಳು ಬಂದಿರಬೇಕೆಂದು ಹಿಂದುಸ್ಥಾನ ಸರಕಾರದವರು ಆರ್ಡಿನನ್ಸ ತೆಗೆದು ಎಲ್ಲಾ ಕಡೆಗೂ ಹುಕುಮು ಕಳಿಸಿದಾರೆ

ದಿ ಧಾರವಾಡ ಅರ್ಬನ ಕೋಅಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಿಗೆಯು ಎಂಟು ಲಕ್ಷದಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಠಾಕೀಮ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮ್ಯಾನೆಜಿಂಗ ಡಾಯರೆಕ್ಟರ

ಕೇರುವರು ಶ್ರೀ ದತ್ತರಾಜಸಮರ್ಥ ಕರುವರು

ಶ್ರೀ ದತ್ತಾತ್ರೇಯ ನಾಟಕ ಕಂಪನಿ ಗದಗ

ಕ್ಯಾಂಪ ಹುಬ್ಬಳ್ಳಿ.

ಗದಗ ಶ್ರೀದತ್ತಾತ್ರೇಯ ನಾಟಕ ಮಂಡಲದವರು ಹುಬ್ಬಳ್ಳಿ ಮಲ್ಲಿಕಾರ್ಜುನ ಥಿಯೇಟರಿನಲ್ಲಿ ಇದೇ ತಾ|| ೨೫-೯-೧೯೩೧ನೇ ಶುಕ್ರವಾರ ಅನಂತ ಚತುರ್ದಶಿ ರಾತ್ರಿ ೯|| ಘಂಟೆಗೆ ಸರಿಯಾಗಿ ಶ್ರೀಮಾನ ಗರೂಡ ಸದಾಶಿವರಾಯರಿಂದ ರಚಿತವಾದ ಆದರ್ಶಪ್ರಯೋಗವಾದ,——

"**ಶಿರಸಂಗಿ ಲಿಂಗರಾಜ**" ಎಂಬ ಚರಿತ್ರೆಯನ್ನು ರಂಗಭೂಮಿಯ ಮೇಲೆ ತರುವರು. ನಾಡಬಂಧುಗಳಿಗೆ ಇದೊಂದು ಹಬ್ಬವಲ್ಲವೇ?

ಮ್ಯಾನೇಜರ- ಗ. ದ. ನಾ. ಮಂ.

ವಿಜಯ.

ತಾರೀಖು ೨೪-೯-೧೯೩೧ನೇ ಇಸ್ವಿ

ಬಂಗಾರದ ಬೆಲೆ ಏಕೆ ಏರಿತು?

ಬ್ರಿಟಿಶ ಸಾಮ್ರಾಜ್ಯದ ಸೂತ್ರಗಳೆಲ್ಲ ಲಂಡನದಿಂದಾಡುವಂತೆ, ಅದರ ವ್ಯವಹಾರದ ಸೂತ್ರಗಳೂ ಲಂಡನದ ಬ್ಯಾಂಕುಗಳಿಂದಲೇ ಆಡುತ್ತವೆ. ಮಹಾಯುದ್ಧದ ನಂತರ, ಅಮೇರಿಕೆ, ಫ್ರಾನ್ಸ ಮತ್ತು ಇಂಗ್ಲಂಡ ಈ ಮೂರೇ ದೇಶಗಳು ಬಂಗಾರದ ಹೊಗೆ ಹಾಯುವಂಥವಾದವು. ಇವೇ ಮೂರು ಅನ್ಯದೇಶಗಳಿಗೆ ಸಾಲ ಕೊಟ್ಟಂಥ ಮತ್ತು ಕೊಡುವಂಥವಾದವು. ಇವುಗಳಲ್ಲಿ ಅಮೇರಿಕೆ ಮತ್ತು ಫ್ರಾನ್ಸದ ಸಂಬರು ಇಂಗ್ಲಂಡಕ್ಕಿಂತ ಎಷ್ಟೋ ಮಿಡಿಮೇಲಿಂಟು, ಇಂಗ್ಲಂಡವು ಸಿರಿವಂತವಾದರೂ, ಅಮೇರಿಕೆ ಮತ್ತು ಫ್ರಾನ್ಸದಲ್ಲಿ ಸಾಲ ತೆಗೆದು ಸಾಲಗಾರಳೆಯೂ ಆಗಿರುತ್ತದೆ.

ವ್ಯಾಪಾರ ಮಂದಿಯ ಮೂಲಕ ಏಶಾಯತಿಯ ಎಲ್ಲಾ ದೇಶಗಳು ದಿವಾಳಿಗೆ ಬಂದಿವೆ. ಜರ್ಮನಿಯ ದಿವಾಳಿತನ ನಿಲ್ಲಿಸಲು ಸ್ವತಃ ಇಂಗ್ಲಂಡದ ಮಂತ್ರಿಗಳು ಅಲ್ಲಿಗೆ ಹೋಗಿ ಬಂದದ್ದು ವಾಚಕರ ಸ್ಮರಣದಲ್ಲಿರಬಹುದು. ಇಂಗ್ಲಂಡಕ್ಕೆ ಹೊರಗಿನಿಂದ ಬರುವದು ಕಡೆದು ನಿಂತಿದೆ. ಇಂಗ್ಲಂಡದಲ್ಲಿ ದಿವಾಳಿಟ್ಟಂಥವರು ಧಂಧೆನೆ ತಮ್ಮ ಹಣ ತೆಗೆದುಕೊಳ್ಳಲಾರಂಭಿಸಿದ್ದಾರೆ. ಹಾಲಂಡದವರೂ ಬಹುತರ ಇಟ್ಟದ್ದನ್ನೆಲ್ಲ ತೆಗೆದುಕೊಂಡರು. ಈ ರೀತಿಯಾಗಿ ಇಂಗ್ಲಂಡವು ಕತ್ತರಿಯಲ್ಲಿ ಸಿಕ್ಕದ್ದರಿಂದ, ಅದಕ್ಕೆ ತನ್ನ ಕಾರಾಬೋಗಸವನ್ನು ಸ್ಥಿರಪಡಿಸಿಕೊಳ್ಳುವದು ಅಶಕ್ಯವಾಯಿತು. ಈ ಅನಿವಾರ್ಯದ ಆಪತ್ತಿನ ದೆಸೆಯಿಂದಲೇ ಒಂದೇ ದಿವಸದಲ್ಲಿ ಇಂಗ್ಲಂಡ ಹಿಂದುಸ್ಥಾನ ಮಾತ್ರವಲ್ಲ, ಜಗತ್ತಿನಲ್ಲಿ ಎಲ್ಲಾ ದೇಶಗಳಲ್ಲಿಯೂ ಬಂಗಾರದ ಧಾರಣೆಯು ತೀರಲೆಗೆ ಬಂದು ಏಕಾಏಕಿಯಾಗಿ ಏರಿತು. ಮುಂದೆ ಅದರ ತೀವ್ರಮಂದಿ ಹೋಗುವದೆಂಬದು ದೊಡ್ಡ ಪ್ರಶ್ನವಾಗಿರುತ್ತದೆ.

ಲಂಡನದ ಬ್ಯಾಂಕುಗಳಲ್ಲಿ ಪ್ರಹಾರ ಸಂಖ್ಯೆಯಿಂದ ಚಿನ್ನ ಏರಲಿಕ್ಕಿಲ್ಲ. ಅಷ್ಟು ಉಂಟೆಂದು ಅಂದಾಜು ಹೇಳಬಹುದು. ಕಳೆದಾರು ತಿಂಗಳುಗಳಲ್ಲಿ ಲಂಡನದ ಬ್ಯಾಂಕುಗಳಿಂದ ಜನರು ದ್ರವ್ಯ ತೆಗೆದುಕೊಳ್ಳುವದು ತೀರಿಸಲ್ಲಿಕೆ ನಡೆಯಿತು. ಈ ಎರಡು ತಿಂಗಳಲ್ಲಂತೂ ಎರಡುಸಾವಿರ ಲಕ್ಷ ಪವನುಗಳು ಲಂಡನದ ಮಾರ್ಕೆಟು ಬಿಟ್ಟು ಹೋದವು. ಮೂರು ಅಬ್ಜ ರೂಪಾಯಿಗಳು ಕೈಬಿಟ್ಟು ಹೋದದ್ದನ್ನು ಕಂಡು ಬ್ಯಾಂಕಿನವರೂ ವ್ಯಾಪಾರಸ್ಥರೂ ಮಾತ್ರವಲ್ಲ; ಸರಕಾರದವರು ಕೂಡ ಹೆದರಿದರು. ಕೂಡಲೆ ಬಂಗಾರಕ್ಕೆ ಯಾವದೊಂದು ನಾಣ್ಯದ ರೂಪ ಕೊಡಲು ಸರಕಾರದವರು ನಿಂತ ಕಾನೂನ ತೆಗೆದು ಮಾಡಿದರು. ೧೯೨೫ರಲ್ಲಿ ಗೋಲ್ಡ ಸ್ಟ್ಯಾಂಡರ್ಡ್ ಆಕ್ಟವೆಂಬ ಬಂಗಾರದ ಚಲನಿ ನಾಣ್ಯದ ಕಾಯದೆಯುಂಟು. ಈ ಕಾಯದೆಯಿಂದ ಲಂಡನದ ಬ್ಯಾಂಕಿನವರು ಸರಕಾರದಿಂದ ನಿದಿಷ್ಟವಾದಂಥ ದರದಿಂದಲೇ ಬಂಗಾರ ಮಾರುವರು. ಈ ನಿರ್ಬಂಧನೆಯನ್ನು ತೆಗೆದು ಹಾಕಿ, ಬಂಗಾರವು ಲಾಭದ ರೀತಿಯಿಂದ ಮಾರುವಂತೆಯೂ, ಧಾರಣೆಗೆ ಹಚ್ಚಿದರೆ ಜನರು ಕೊಳ್ಳುವದೂ ಕಡಿಮೆಯಾಗುವದೆಂದೂ ಯೋಚಿಸಿ, ಲಂಡನ ಬ್ಯಾಂಕಿನವರ ಆಲೋಚನೆಯ ಮೇರೆಗೆ ಧಾರಣೆಯನ್ನು ಮಾಡಿದ ಕಾಯದೆಯನ್ನು ಸಧ್ಯ ಆರು ತಿಂಗಳ ಮಟ್ಟಿಗಾದರೂ ರದ್ದುಮಾಡಿದ್ದಾರೆ.

ಮಂತ್ರಿಗಳು ಯಾರಿಗೂ ತಿಳಿಯದಂತೆ ಗುಪ್ತವಾಗಿ ಮಾಡುವ ಕಾಯದೆಗೆ ಪಾರ್ಲಮೆಂಟ ಸಭೆಯ ಮಂಜೂರಿ ಬೇಕಾಗುವದರಿಂದ, ಸೋಮವಾರ ದಿವಸ ಒಂದೇ ಹಿಂಗೊಂದರಂತೆ ಈ ಬಿಲ್ಲಿನ ವಾಚನವನ್ನು ಮೂರು ಸಾರೆ ಮಾಡಿ ಪಾಸು ಮಾಡಿಕೊಂಡರು. ಇದಕ್ಕೆ ಮೂರೂ ಪಕ್ಷಗಳ ಸಹಾಯ ಮತ್ತು ಸಹಾನುಭೂತಿ ಇತ್ತು. ಪ್ರಿನ್ಸ ಆಫ ವೇಲ್ಸರು ಕಂದಿಕಾಯಿಗಳನ್ನು ಕಾಣಲು ಬಾಲವೋರಕ್ಕೆ ಹೋಗತಕ್ಕವರಿದ್ದರು. ಬಿಕ್ಕಟ್ಟಿನ ಸಮಯವನ್ನೀಕ್ಷಿಸಿ, ಆ ಪ್ರಯಾಣ ನಿಲ್ಲಿಸಿ ಲಂಡನದಲ್ಲಿಯೇ ಉಳಕೊಂಡಿದ್ದಾರೆ. ಕಾಯದೆಯಾಗುವ ವರ್ತಮಾನವಾಯಿತು. ಜನರು ಇದೇ ಸಂದಿನಲ್ಲಿ ಬಂಗಾರ ತೆಗೆದುಕೊಳ್ಳಬಾರದೆಂದೂ, ಹೀಗೆ ಮಾಡುವದು ಘಟುವ ಮನೆಯ ಹಳ್ಳ ತಿರ್‍ರಿಯುವಂಥ ಕೃತ್ಯವಾಗುದೆಂದೂ ಖಂಡಿತವಾದ್ದರಿಂದ, ಸರಕಾರದವರು ಮಂಗಳವಾರ ದಿವಸ ಬ್ರಿಟಿಶ ಸಾಮ್ರಾಜ್ಯದೊಳಗಿನ ಎಲ್ಲ ಬ್ಯಾಂಕುಗಳನ್ನು ಒಂದು ವಾರ ತೆರೆಯದಂತೆ ರಜೆಯ ಹುಕುಮು ಕೊಟ್ಟರು.

ಏನಾದರೂ ಇಂಗ್ಲಿಷ ಜನರ ಸಾಂಪತ್ತಿಕ ಸ್ಥಿತಿಯು ಕೆಟ್ಟಿಲ್ಲ; ಆದರೆ ಈ ಸಮಯದಲ್ಲಿ ಯಾವನೊಬ್ಬ ಇಂಗ್ಲಿಷ ಮನುಷ್ಯನು ಪರದೇಶಗಳ ಪತ್ರಿಮಿಸರೀ ನೋಟು ಕೊಳ್ಳುವದು, ಮತ್ತು ಅಂಥ ಪತ್ರಿಮಿಸರಿ ನೋಟುಗಳನ್ನು ಕೊಳ್ಳುವದಕ್ಕೆ ಉತ್ತೇಜನ ಕೊಡುವದು ಬುದ್ಧಿಪೂರ್ವಕವಾಗಿ ಸ್ವದೇಶದ ತೊಂದರೆಗಳನ್ನು ಹೆಚ್ಚಿಸಲಿಕ್ಕೆ ಕಾರಣವಾಗುತ್ತಾನೆ. ಇಂಥ ಮನೆಮುರುಕ ಕೆಲಸವನ್ನಾವನೂ ಮಾಡಕೂಡದೆಂದು ಕೋಶಾಧ್ಯಕ್ಷರು ಎಚ್ಚರಿಕೆಯ ಮಾತನ್ನು ಜಾಹೀರ ರೀತಿಯಿಂದ ಹೇಳಿದ್ದಾರೆ.

ಹತ್ತಿಯ ಬಿತ್ತಿಗೆಯನ್ನು ಕಡಿಮೆ ಮಾಡಿದರು

...(೦)...

ಅಮೇರಿಕಾ ಮತ್ತು ಇಜಿಪ್ತ ಇವೆರಡು ಉತ್ಕೃಷ್ಟ ಹತ್ತಿಯನ್ನು ಬೆಳೆಯುವ ದೇಶಗಳಷ್ಟೇ, ಈ ವರ್ಷ ತಯಾರಾಗಿದ್ದದ್ದಕ್ಕೆ ಬೆಲೆ ಬರಲಿಲ್ಲ. ಬಂದ ಬೆಲೆಗೆ ಮಾರಬೇಕೆಂದರೂ ಗಿರಾಕಿ ಇರಲಿಲ್ಲ. ಆದ್ದರಿಂದ ಅಮೇರಿಕಾ ಸರಕಾರದವರು ಹತ್ತಿಯನ್ನು ಎಷ್ಟುವಾಗಿ ಬೆಳೆಯುವ ಪೆಶ್ಯಾಲಿಟಿ ಮುಂತಾದ ಪ್ರಾಂತಗಳಲ್ಲಿ ಈ ಸಾರೆ ಹತ್ತಿಯನ್ನೇ ಬಿತ್ತಬಾರದೆಂದು ವಿಚಾರ ನಡೆಸಿದ್ದಾರೆ. ಇಜಿಪ್ತ ಸರಕಾರದವರು ಸಧ್ಯಕ್ಕೆ ೨೫ ರಷ್ಟು ಕಡಿಮೆ ಬಿತ್ತಬೇಕೆಂದು ಜಾಹೀರನಾಮೆಯನ್ನು ಪ್ರಕಟ ಮಾಡಿದರು. ಕಡಿಮೆ ಬೆಳೆಯುವ ಭೂಮಿಯಲ್ಲಿಯು ತೂಕದ ಪ್ರಕಾರ ೩೦ ಲಕ್ಷದಷ್ಟು ಹುಟ್ಟುವಳಿ ಕಡಿಮೆಯಾಗುವದು.

ಹಿಂದುಸ್ಥಾನದಲ್ಲಿ ಎಷ್ಟು ಬೆಳೆಯಬೇಕು, ಎಷ್ಟು ಬಿತ್ತಬೇಕೆಂಬ ವಿಷಯವಾಗಿ ಸರಕಾರವು ಲಕ್ಷ್ಯ ಕೊಡಲಿಲ್ಲ. ವ್ಯಾಪಾರಸ್ಥರು ಮಾತ್ರ "ಈಗಿನ ವ್ಯಾಪಾರ ಮಂದಿಯ ಮೂಲಕ ಬೆಳೆಯನ್ನು ಕಳೆಯುವ ರೇಲ್ವೆಯ ಹಾಸಿಲನ್ನು ಈಗಿನ ದರದ ಅರ್ಧದಷ್ಟು ಮಾಡಬೇಕೆಂದು" ಸರಕಾರಕ್ಕೆ ಸೂಚನೆ ಮಾಡಿದ್ದಾರೆ.

ಪೋಲೀಸರ ಉಪದ್ರ್ಯವದ ದೆಸೆಯಿಂದ ನಾಗಪಟ್ಟಣದ ಚಿನಿವಾರರ ಸಂಪು

—(೦)—

ಕಳ್ಳರು ಬೆಳ್ಳಿ ಬಂಗಾರದ ಒಡವೆಗಳನ್ನು ಚಿನಿವಾರರಿಗೆ ಮಾರಲಿಕ್ಕೆ ಕೊಡುವದರ ಹೆಜ್ಜೆ ಶೋಧ ಹತ್ತಬೇಕೆಂದು ನಾಗಪಟ್ಟಣದ ಪೋಲೀಸರು ಕೆಲ ನಿಯಮಗಳನ್ನು ಮಾಡಿ, ಆ ನಿಯಮಗಳಂತೆ ಚಿನಿವಾರರು ವ್ಯವಹಾರ ಮಾಡಬೇಕೆಂದು ನಿರ್ಬಂಧಪಡಿಸಿದ್ದಾರೆ. ಈ ನಿಯಮ ಪ್ರಕಾರ ನಡೆಯುವದಾದರೆ ವ್ಯವಹಾರವನ್ನೇ ಒಂದು ಮಾಡಬೇಕಾದೀತೆಂದು ಚಿನಿವಾರರು ಪೋಲೀಸ ಅಧಿಕಾರಿಗಳಿಗೆ ಹೇಳಿಕೊಂಡದ್ದು ವ್ಯರ್ಥವಾಯಿತು. ಪೋಲೀಸರ ಹುಕುಮಿನಂತೆ ನಡೆಯುವದಕ್ಕಿಂತ ಎಲ್ಲ ವ್ಯವಹಾರವನ್ನು ನಿಲ್ಲಿಸುವದೇ ಲೇಸೆಂದೆಣಿಸಿ, ಚಿನಿವಾರರು ಸಂಪು ಮಾಡಿ ಅಂಗಡಿಗಳಿಗೆ ಬೀಗಹಾಕಿದ್ದಾರೆ.

ರಾವುಂಡ ಟೇಬಲ

ಮಹಾತ್ಮರು ಮುಸಲಮಾನರ ಇಚ್ಛೆ ಇಷ್ಟು ಪೂರ್ಣ ಮಾಡುವರು

ಮುಸಲಮಾನರು ಹಿಂದೂ ಜನರಿಗೆ ೧೪ ಕಲಮುಗಳ ಸವಾಲು ಹಾಕಿದ್ದಾರಷ್ಟೆ, ಮಹಾತ್ಮರು ಅವರ ಇಚ್ಛೆಯಂತಿರುವ ಈ ಎಲ್ಲ ಇಚ್ಛೆಗಳನ್ನು ಪೂರ್ಣ ಮಾಡುವರು. ಮುಂದೆ ಇವುಗಳಲ್ಲಿ ಬದಲು ಮಾಡಬೇಕೆಂದು ಅನುಭವದಿಂದ ಕಂಡು ಬಂದರೆ ಬದಲಾಗುವದಕ್ಕೆ ಮುಸಲಮಾನರು ಒಪ್ಪಬೇಕೆಂಬ ಕರಾರು ಹಾಕಿದ್ದಾರೆ. ಮುಸಲಮಾನರ ಈ ಕರಾರುಗಳನ್ನೊಪ್ಪಿದರೆ ಹಿಂದೂ ಮತ್ತು ಮುಸಲಮಾನರು ಸೇರಿ ಇಂಗ್ಲಿಷ ಸರಕಾರಕ್ಕೆ ಪೂರ್ಣ ಸ್ವಾತಂತ್ರ್ಯ ಕೊಡಬೇಕೆಂದು ಕೇಳುವರು. ಸರಕಾರದವರು ಸ್ವಾತಂತ್ರ್ಯ ಕೊಡದಿದ್ದರೆ ಎರಡೂ ಜನಾಂಗದವರು ಸೇರಿ ಕಾಯದೇಭಂಗದ ಯುದ್ಧ ಸಾರುವರು. ಆಗ ಬ್ಯಾರಿಷ್ಟರ ಜಿನ್ನಾ, ಸರ ಮಹಮ್ಮದ ಶಫಿ, ಜಾಫರಲ್ಲಿ ಮೊದಲಾದ ಮುಸಲಮಾನ ಮುಖಂಡರೂ ಸತ್ಯಾಗ್ರಹ ಮತ್ತು ಕಾಯದೆಭಂಗ ಮಾಡಿ, ಸೆರೆಮನೆಯ ದಾರಿ ಹಿಡಿಯುವರೆಂದು ಒಂದು ಗುಪ್ತ ಸುದ್ದಿಗೆ ಉಸುರೊಡಿದೆ.

ಮಹಾತ್ಮರು ಆದಿತ್ಯವಾರವನ್ನು ವಿಶ್ರಾಂತಿಯಲ್ಲಿ ಕಳೆದರು. ಆದರೂ ಕೆಲ ಜನರು ಇವರನ್ನು ಕಾಣಲಿಕ್ಕೆ ಹೋಗಿದ್ದರು. ಇವರು ಸಾಯಂಕಾಲದಲ್ಲಿ ಎಪಿಂಗವೆಂಬ ಅಡವಿಗೆ ಹೋಗಿ, ಅಲ್ಲಿಯ ಶುದ್ಧ ಹವೆಯ ಉಪಭೋಗ ಮಾಡಿದರು, ಕೆಲ ಹೊತ್ತು ಅಡವಿಯಲ್ಲಿ ಪಾದಚಾರಿಯಾಗಿ ನಡೆದರು.

ರಾವುಂಡಟೇಬಲಿನ ಕೆಲಸವು ಬಹಳ ಮಂದ ನಡೆದಿದೆ. ಕೆಲ ಮೆಂಬರರು ಬರೆದುಕೊಂಡು ಬಂದ ಲೇಖನಗಳನ್ನು ಓದುವರು. ಇವು ಶಾಲೆಯ ಹುಡುಗರು ನಿಬಂಧ ಓದುವಂತಾಗಿರುತ್ತವೆ. ಹಿಂದಿನ ರಾವುಂಡಟೇಬಲಿನಲ್ಲಿ ಓದಿದ್ದನ್ನೇ ತಿರತಿರುಗಿ ಓದುವರು. ಈ ನಿಬಂಧ ಓದು ಬೇಕಾಗಿಲ್ಲ. ಕೆಲಸಕ್ಕೆ ಹತ್ತಿರೆಂದು ಮಹಾತ್ಮರು ಹೇಳುವರು.

ಕೆಲವರು ಅಲ್ಪಸಂಖ್ಯಾಕರ ಪ್ರಶ್ನದ ನಿರ್ಣಯವಾದ ಹೊರತು ಫೆಡರಲ ಸ್ಟ್ರಕ್ಚರ ಕಮಿಟಿಯ ವಿಚಾರವನ್ನು ಬೇಕೆಂದು ಮುಂದೆ ಹಾಕಬೇಕೆಂದಿದ್ದಾರೆ. ಅಂತೂ ಇಂತೂ ಹಗ್ಗ ಹರಿಯದಂತೆ ಕೆಲಸ ನಡೆದಿದೆ. ಕೆಲ ಲಿಬರಲ ಮೆಂಬರರ ಸಹಾಯದಿಂದ, ಮಹಾತ್ಮರು ಇದಕ್ಕೆ ವೇಗ ಕೊಡಬೇಕೆಂದಿದ್ದಾರೆ.

ಲಾರ್ಡ ಆಯರ್ವಿನ ಸಾಹೇಬರು ತಮ್ಮ ಜನ್ಮಗ್ರಾಮವಾದ ಯಾರ್ಕದಿಂದ ಇಂದು ಲಂಡನಕ್ಕೆ ಬರುವರು. ನಾಳಿನ ದಿವಸ ಮಹಾತ್ಮರನ್ನು ಕಂಡು ಅವರ ಕೂಡ ಮಾತಾಡುವರು.

ಮಹಾತ್ಮರು ಅಕ್ಟೋಬರ ತಿಂಗಳ ೮ನೆಯ ತಾರೀಖಿನ ದಿವಸ ಪ್ರೊಟೆಸ್ಟಂಟ ಮತದ ಮುಖ್ಯ ಧರ್ಮಾಚಾರ್ಯರಾದ ಕಾಂಟರಬರಿಯ ಆರ್ಚಬಿಶಪ್ಪರ ಅತಿಥಿಯಾಗಿ ಹೋಗುವರು. ಮೂರು ದಿನ ಅವರ ಕೂಡ ಸಂಭಾಷಣೆಗೈಯುವರು.

ಹೈದ್ರಾಬಾದಿನ ನಿಜಾಮಸಾಹೇಬರ ಪ್ರತಿನಿಧಿಯಾದ ಸರ ಅಕಬರಿ ಹೈದರಿಯವರು ತಮಗೆ ವರ್‍ಹಾಡ ಪ್ರಾಂತವನ್ನು ತಿರುಗಿ ಕೊಡಬೇಕೆಂದು ಸ್ಟೇಟಸೇಕ್ರೆಟರಿಯವರನ್ನು ಕಂಡು ಹೇಳಿಕೊಂಡಿದ್ದಾರೆ.

ಪಾರ್ಲಮೆಂಟದ ಚುನಾವಣೆಯು ಬಹಳ ಮುಂದೆ ಬೀಳುವದು

...(೦)...

ಮಹಾಯುದ್ಧದಲ್ಲಿ ಸಂಯುಕ್ತ ಪ್ರಧಾನಮಂಡಲದ ಪ್ರಧಾನ ಮಂತ್ರಿಯಾಗಿದ್ದ ಮತ್ತು ಮುಂದೆ ಕೂಲಿಕಾರರ ಪಕ್ಷದಲ್ಲಿ ಮಿ. ಮ್ಯಾಕಡೊನಾಲ್ಡ ಸಾಹೇಬರ ಸ್ಥಾನವನ್ನಾಕ್ರಮಿಸುವ ಮಿ. ಲಾಯಿಡ ಜಾರ್ಜಸಾಹೇಬರು ಇಂಗ್ಲಿಷ ಜನಾಂಗವನ್ನುದ್ದೇಶಿಸಿ ಹೇಳುವದೇನೆಂದರೆ.—

ಬ್ರಿಟಿಶ ರಾಷ್ಟ್ರವು ಧೈರ್ಯ ಸ್ಥೈರ್ಯಗುಂದದೆ, ಶಾಂತ ಚಿತ್ತದಿಂದ ಒಗ್ಗಟ್ಟಿನಿಂದಿದ್ದರೆ ಎಲ್ಲವೂ ನೆಟ್ಟಗಾಗುವವು. ಮತ್ತು ನಾವು ಈ ಸಂಕಟದಿಂದ ಪಾರಾಗುವೆವು. ಈಗಿನ ಕೊರತೆಗಳ ಸಂಕಟಗಳಿಗೆ ಎದೆಗೊಡುವಷ್ಟು ನಮ್ಮ ಸಾಂಪತ್ತಿಕ ಸುಸ್ಥಿತಿಯುಂಟು. ಆದರೆ ನಮ್ಮೊಳಗೇ ಮನೆಮುರುಕತನ ಮಾಡಿಕೊಂಡು, ಹೊಡೆದಾಡತೊಡಗಿದರೆ ನಾವು ದೇಶಾಭಿಮಾನಶೂನ್ಯರಾದಂಥ ಹುಚ್ಚರಾಗುವೆವು.

ಮಿ. ಲಾಯಿಡ ಜಾರ್ಜಸಾಹೇಬರು ಇಂಗ್ಲಿಷ ಜನರಿಗೆ ಹೇಳಿದಂಥ ಬುದ್ಧಿಯ ಮಾತನ್ನು ಇಂಗ್ಲಂಡದಲ್ಲಿರುವ ರಾವುಂಡಟೇಬಲಿನ ಪ್ರತಿನಿಧಿಗಳು ವಸ್ತುಪಾಠವಾಗಿ ಕಲಿತುಕೊಂಡರೆ ಹಿಂದುಸ್ಥಾನಕ್ಕೆ ನಿಸ್ಸಂಶಯವಾಗಿ ಸ್ವರಾಜ್ಯ ಸಿಗುವದು.

ಸಾಹೇಬರ ಮೇಲಿನ ಭಾಷಣದಿಂದ ಪಾರ್ಲಮೆಂಟದ ಚುನಾವಣೆಯು ಮುಂದೆ ಬೀಳುವದೆಂದು ಇಂಗ್ಲಿಷ ಲೋಕಮತವಾಗಿರುತ್ತದೆ.

ಮಹಾತ್ಮರ ಜನ್ಮದಿನವನ್ನು ಹೇಗೆ ಪಾಲಿಸಬೇಕು?

೧೦೦೦೦ ನೇಕಾರರು ಮತ್ತು ಕೆಲಸಗಾರರ

೧೫೦೦೦ ಜನರು ಬೇಕು.

—(೨)—

ಅ. ಭಾ. ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಸರದಾರ ವಲ್ಲಭಭಾಯಿಯವರು ೧೪ನೇ ತಾರೀಖಿನ ದಿವಸ ಕೆಳಗಿನಂತೆ ಒಂದು ಪತ್ರಿಕೆಯನ್ನು ಹೊರಡಿಸಿದ್ದಾರೆ—

ಬರುವ ಅಕ್ಟೋಬರ ೨ನೇ ತಾರೀಖಿನ ದಿವಸ ದೇಶವೆಲ್ಲ ಮಹಾತ್ಮಾ ಗಾಂಧೀ ಜನ್ಮದಿನವನ್ನಾಚರಿಸುವದು, ಈ ದಿನಾಚರಣೆಯು ಮಹತ್ವದ್ದಿರುವದು. ಕಳೆದ ಸಾರೆ ಮಹಾತ್ಮರು ಸೆರೆಮನೆಯಲ್ಲಿದ್ದಾಗ ಅವರ ಜನ್ಮದಿನವಾಚರಿಸಲ್ಪಟ್ಟಿತು. ಈ ಸಾರೆ ಅವರು ನಮ್ಮಿಂದ ಎಷ್ಟೋ ಅಂತರದಲ್ಲಿದ್ದಾರೆ. ಈ ದಿನವನ್ನು ನಾವು ಅವರ ಯೋಗ್ಯತೆಗೆ ತಕ್ಕಂತೆ ಆಚರಿಸಬೇಕು. ಮಹಾತ್ಮರಿಗೆ ಅತ್ಯಂತ ಪ್ರಿಯವಾಗಿರುವ ಸಾವಿರಾರು ಬಡ ಜನರ ಕಲ್ಯಾಣ ಸಾಧನೆಯ ಕಾರ್ಯವನ್ನೇ ಮಾಡುವದಕ್ಕಿಂತ ಹೆಚ್ಚು ಉತ್ತಮರೀತಿಯಲ್ಲಿ ನಾವೀ ದಿನವನ್ನಾಚರಿಸಲಾರೆವು. ಹೊಟ್ಟೆಗಿಲ್ಲದೆ ಒಳಲುತ್ತಿರುವ ಲಕ್ಷಾವಧಿ ಜನರ ಕಲ್ಯಾಣವಾಗುವಂಥ ಕಾರ್ಯಕ್ರಮವಿರದಿದ್ದರೆ, ಈ ದಿವಸ್ನಾಚರಿಸಿ ಪ್ರಯೋಜನವಿಲ್ಲ. ಏಕೆಂದರೆ ಬಡ ಜನರ ಕಲ್ಯಾಣವೇ ಸ್ವರಾಜ್ಯವು. ಕಳೆದ ವರ್ಷ ಖಾದಿಯ ಬೇಡಿಕೆಯು ಅತಿಶಯವಾಗಿದ್ದರಿಂದ ನಾವು ಈ ಸಾರೆ ಸಾವಿರಾರು ಜನರನ್ನು ಖಾದಿಯನ್ನು ತಯಾರಿಸಲು ನೇಮಿಸಿದೆವು. ಆದರೆ ಈ ವರ್ಷ ದಾರಿದ್ರ್ಯವು ಮೂರ್ತಿಮಂತವಾಗಿ ನೆಲೆಗೊಂಡಿದ್ದರಿಂದ ಅವರೆಲ್ಲರೂ ಹೊಟ್ಟೆಗಿಲ್ಲದೆ ಒಳಲುವ ಪ್ರಸಂಗ ಬಂದಿದೆ. ಸಿದ್ಧವಾದ ಖಾದಿಯು ಮಾರಾಟವಾಗದೆ ಉಳಿದಿದೆ. ಮಹಾತ್ಮರು ಈಗ ಇಲ್ಲಿದ್ದರೆ ಈ ಖಾದಿಯ ವಿಕ್ರಯಕ್ಕಾಗಿ ಶಕ್ತಿಮೀರಿ ಯತ್ನಿಸುತ್ತಿದ್ದರೆಂಬುದು ನಿರ್ವಿವಾದವಾದ ಮಾತಾಗಿದೆ. ಅವರು ದೇಶಕಾರ್ಯ ಸಾಧಿಸಲು ಹೋಗಿರುವದರಿಂದ ಅವರ ಕಾರ್ಯ ನಿರ್ವಹಿಸುವ ಭಾರವೆಲ್ಲ ನಮ್ಮ ಮೇಲೆ ಬಿದ್ದಿದೆ.

ಖಾದಿಯನ್ನು ವಿಕ್ರಯಿಸಿರಿ.

ಪಾಶ್ಚಿಮಾತ್ಯ ಪದ್ಧತಿಯಂತೆ ಅಕ್ಟೋಬರ ೨ನೆಯ ತಾರೀಖು ಅವರ ಜನ್ಮದಿನ. ವಿಕ್ರಮ ಶಕದಂತೆ ೮ನೇ ತಾರೀಖು ಅವರ ಜನ್ಮದಿನವು. ಕಾರಣ ೨ನೇ ತಾರೀಖಿನಿಂದ ೮ನೇ ತಾರೀಖಿನ ವರೆಗೆ ಅಖಿಲ ಹಿಂದುಸ್ಥಾನದಲ್ಲಿ 'ಗಾಂಧಿ ಸಪ್ತಾಹ'ವೆಂದು ಆಚರಿಸಲ್ಪಡಬೇಕು. ಈ ಏಳು ದಿನಗಳಲ್ಲಿ

ಜಾಹೀರ ನೋಟಿಸು

—(೦)—

ಎಲ್ಲ ಜನರಿಗೆ ಈ ಜಾಹೀರ ನೋಟಿಸಿನಿಂದಾ ಭೀಮಪ್ಪಾ ರಾಮಪ್ಪಾ ಪತಂಗಿ ಸಾಕೀನ ಕಿತ್ತೂರ ತಿಳಿಸುವದೇನಂದರೆ- ನಮ್ಮ ತಂದೆಯಾದ ರಾಮಪ್ಪಾ ಪತಂಗಿ ಸಾ॥ ಕಿತ್ತೂರ ಇವನು ವೆಸನಿ ಪ್ರಸ್ಥನಿರುತ್ತಾನೆ. ಮತ್ತು ಮನಬಲ್ಲಂತೆ ಹಣವನ್ನು ಖರ್ಚ ಮಾಡುತ್ತಾನೆ. ಮನೆಯಲ್ಲಿ ಖರ್ಚಿಗೆ ವಗೈರೆ ಏನು ಕೊಡದೆ ಬಾಯಿಗೆ ಬಂದಂತೆ ಬಯ್ಯುವದೂ ಕೈಯಿಗೆ ಸಿಕ್ಕದ್ದನ್ನು ತಕ್ಕೊಂಡು ಹೋಗುವದೂ ಬಡಿಯುವದೂ ಮಾಡುತ್ತಾನೆ ನಮ್ಮ ಎಲ್ಲ ಕುಟುಂಬದ ಜನರಿಗೆಲ್ಲಾ ಬಹಳೇ ತ್ರಾಸ ಕೊಡುತ್ತಾನೆ ಸದರಿ ರಾಮಪ್ಪನ ಹೆಸರಲೆ ಕಿತ್ತೂರಲ್ಲಿ ಸೋಮವಾರ ಪೇಟೆಯಲ್ಲಿ ಒಂದು ಮನೆ ೪೫೯ ನಂಬರ ನೇದು ಮತ್ತು ಒಂದು ಅಂಗಡಿ ೪೭೭ ನಂಬರ ನೇದ್ದು ಇವುಗಳನ್ನು ಇವನು ಯಾರಿಗಾದರೂ ಪತ್ರ ಬರೆದುಕೊಟ್ಟರೆ ಅಥವಾ ಖರೀದಿಗೆ ಕೊಟ್ಟರೆ ಯಾರೂ ತಕ್ಕೊಳ್ಳಬಾರದು· ಜರ ತಕ್ಕೊಂಡರೆ ಹಣವಿಲ್ಲದೆ ಪರತ ಬಿಡಬೇಕಾದೀತು.

ಮೆಹರಬಾನ ಚೇರಮನ್ ಸಾಹೇಬ ಅರಬನ್ ಕೋ ಅಪರೇಟಿವ ಬ್ಯಾಂಕ ಲಿಮಿಟೆಡ್ ಕಿತ್ತೂರ ಜಿಲ್ಲಾ ಬೆಳಗಾವ ಇವರಿಗೆ ತಿಳಿಸುವದೇನಂದರೆ ನಮ್ಮ ತಂದೆಯಾದ ರಾಮಪ್ಪಾ ಪತಂಗಿ ಸಾ॥ ಕಿತ್ತೂರ ಇವನು ತನ್ನ ಹೆಸರಲೆ ನಿಮ್ಮ ಬ್ಯಾಂಕಿನಲ್ಲಿ ಇಟ್ಟ ಹಣವನ್ನು ಯಾವದೇ ಕಾರಣದಿಂದ ಇವತ್ತಿನಿಂದಾ ಇನ್ನು ಮೇಲೆ ಒಂದು ರೂಪಾಯಿ ಸಹ ನಿಮ್ಮ ಬ್ಯಾಂಕಿನಿಂದಾ ನನ್ನ ಸಮ್ಮತಿ ಇಲ್ಲದೆ ಕೊಡಬಾರದು. ಯಾಕಂದರೆ ನನ್ನ ತಾಸ ಇಬ್ಬರು ತಮ್ಮಂದಿರ ಮತ್ತು ಇಬ್ಬರು ತಂಗಿಯರದೂ ಲಗ್ನವಾಗತಕ್ಕದ್ದಿದೆ. ಕಾರಣ ನಮ್ಮ ತಂದೆಯು ವೆಸನಕ್ಕೆ ಬಿದ್ದು ವಿನಾಕಾರಣ ಹಣವನ್ನು ಹಾಳುಮಾಡಿ ಬಿಡುತ್ತಾನೆ. ಇವನು ಬ್ಯಾಂಕಿನಲ್ಲಿ ಇಟ್ಟ ಹಣವು ಮತ್ತು ಮೇಲೆ ಬರೆದ ಸ್ಥಾವರ ಆಸ್ತಿಯು ನಮ್ಮ ಅಜ್ಜನು ಗಳಿಸಿದ್ದಿರುವದರಿಂದ ನಾವೆಲ್ಲ ಅಣ್ಣತಮ್ಮಂದಿರು [illegible]ರಿರುತ್ತೇವೆ. ಈ ಮೂಲಕ ನನ್ನ ಸಮ್ಮತಿಯ ಹೊರತು ಹಣವನ್ನು ನಮ್ಮ ತಂದೆಗೆ ಕೊಡಬಾರದು. ಇದು ನಿಮಗೆ ತಿಳಿದಿರಬೇಕು. ತಾರೀಖು ೨೪-೯-೩೧ ನೇ ಇಸ್ವಿ

ಸಹಿ ಭೀಮಪ್ಪಾ ರಾಮಪ್ಪಾ ಸಾ॥ ಕಿತ್ತೂರ

The Asian Life Assurnance Co. Ltd
Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೧; ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೩೫,೦೦೦,೦೦ ಕಂತದ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರಿಗಿ ಕೊಟ್ಟದ್ದು ೧೦,೦೦,೦೦೦

ಜಿಂದಿಗಿ ೨೫,೦೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕುಲಕರ್ಣಿ ಧಾರವಾಡದ ಏಜಂಟರು

ಕೆ. ಪಿ. ಹುಲಸೋಗಿ, ಬಿ. ಎ. ಕರ್ನಾಟಕದ ಬ್ರಾಂಚ ಮ್ಯಾನೇಜರ

ಬಿ. ಎಚ್. ಪಾಟೀಲ ಹುಬ್ಬಳಿಯ ಏಜಂಟರು–

ಹಾವೇರಿಯ ಚೀಫ ಏಜಂಟರು. ಶ್ರೀ. ಎಸ್. ಎಮ್. ದೊಡ್ಡವಾಡ ಮತ್ತು ಶ್ರೀ. ಬಿ. ಟಿ. ಶಿರೋಳಕರ.

ಅನುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು ಸೌಖ್ಯದಿಂದರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೭೦ ರೂ. ಗಳನ ಕೊಡುವಂಥ **ಗೋಲ್ಡನ್** (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ ಏಶಿಯನ್ನ ಕಂಪನಿಯೊಂದೇ ಆಗಿರುತ್ತದೆ

ಜಾಹೀರ ನೋಟೀಸು

....(೦)....

ಯಾವತ್ತು ಜನರಿಗೆ ಈ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ—

ನಾನು ಕೆಳಗೆ ಹೆಬ್ಬೆಟ್ಟಿನ ಗುರ್ತಾ ಮಾಡಿದ ನಾಗವ್ವಾ ಕೋಂ ಶಿವಪ್ಪಾ ಸುಣಗಾರ ಸಾಕೀನ ಹುಲ್ಲಂಬಿ ಈಕೆಯು ನನ್ನ ಗಂಡನಾದ ಶಿವು ಸುಣಗಾರ ಈತನ ಮೇಲೆ ಹಿಂದಕ್ಕೆ ನನ್ನನ್ನು ಕರಕೊಂಡು ಹೋಗಬೇಕೆಂದು ಒಂದು ವರ್ಷದ ಹಿಂದೆ ಒಂದ ನೋಟೀಸು ಕೊಟ್ಟಿದ್ದೆನು. ಅನಂತರ ಎರಡು ತಿಂಗಳ ಹಿಂದೆ ಪುನಃ ನೋಟೀಸು ಕೊಟ್ಟಿದ್ದೆನು. ಆದರೆ ಆತನು ಸದರ ಎರಡೂ ನೋಟೀಸುಗಳಲ್ಲಿ ಬರೆದ ಪ್ರಕಾರ ನನ್ನ ಎಲ್ಲಾ ಕರಾರುಗಳನ್ನು ಪೂರ್ಣ ಮಾಡಿ, ನನ್ನನ್ನು ಕರಕೊಂಡು ಹೋಗಿ ಜೋಪಾನ ಮಾಡದೆ, ತನಗೆ ತನ್ನ ಮನಸ್ಸಿಗೆ ಬಂದಂತೆ ಥಲಥಲಕೆ ಮಜಕೂರು ಹಾಕಿ ನೋಟೀಸು ಕೊಟ್ಟಿರುತ್ತಾನೆ. ಈ ನೋಟೀಸಿಗೆ ನಾನು ಬಾಂಧಾಯಿಸಲಾರೆನು. ನನ್ನ ಹೊಟ್ಟೆ ಬಟ್ಟೆ ಸಾಗಹಾಂದೆಂದು ಬುದ್ಧಿಪೂರ್ವಕ ಖೊಟ್ಟಿ ನೋಟೀಸು ಮಾಡಿದ್ದಾನೆ. ಈತನು ತನ್ನ ಹಕೀಕತು ನಿಜವಾದರೆ- ಈ ನೋಟೀಸ ಜಾಹೀರಾದ ಕೂಡಲೆ ದಿವಾಣಿಕೋರ್ಟನಲ್ಲಿ ಇಲಾಜ ಮಾಡಿ, ನನ್ನ ಕಬಜಾದ ಇಲಾಜ ಮಾಡಬೇಕು. ಇದಕ್ಕೆ ತಪ್ಪಿದನೆಂದು ನನಗೆ ಕಂಡು ಬಂದ ಕೂಡಲೆ- ನಾನು ಈತನ ಉಜುರಿಸದೆ, ಎರಡನೆಯವನನ್ನು ಉಡಕೆಮಾಡಿಕೊಳ್ಳುವೆನು, ಅನಂತರ ಈತನ ಹಕ್ಕು ನನ್ನ ಮೇಲೆ ಮತ್ತು ನನ್ನ ಉಡಕೆಯ ಗಂಡನ ಮೇಲೆ ಬರಕೂಡ ನಡೆ[illegible]ದು. ಅಂತಾ ಜಾಹೀರ ಮಾಡಿದ ನೋಟೀಸು ತಾ॥ ೨೪ ಸಪ್ಟಂಬರ ೧೯೩೧ ನೇ ಇಸವಿ—

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ನಾಗವ್ವಾ ಕೋಂ ಶಿವಪ್ಪಾ ಸುಣಗಾರ ಸಾ॥ ಹುಲ್ಲಂಬಿ ಮಂಜಿಕೆ ಹೊಸೂರ ಈಕೆ ಕೈದು ಇರುತ್ತದೆ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

R. N. B. 1443

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨| ಧಾರವಾಡ ಶುಕ್ರವಾರ ತಾರೀಖು ೨೫ ನೇ ಸಪ್ಟಂಬರ ೧೯೩೧ (ಸಂಚಿಕೆ ೨೧೭

ಕೆರುವರು ಶ್ರೀ ದತ್ತಾತ್ರೇಯ ಸಮಾರ್ಥ ತರುವಲು

ಶ್ರೀ ದತ್ತಾತ್ರೇಯ ನಾಟಕ ಕಂಪನಿ ಗದಗ ಕ್ಯಾಂಪ ಹುಬ್ಬಳ್ಳಿ.

ಗದಗ ಶ್ರೀದತ್ತಾತ್ರೇಯ ನಾಟಕ ಮಂಡಲ ದವರು ಹುಬ್ಬಳ್ಳಿ ಮಲ್ಲಿಕಾರ್ಜುನ ಥಿಯೇಟರನಲ್ಲಿ ಇದೇ ತಾ|| ೨೫-೯-೧೯೩೧ನೇ ಶುಕ್ರವಾರ ಅನಂತ ಚತುರ್ದಶಿ ರಾತ್ರಿ ೯|| ಘಂಟೆಗೆ ಸರಿಯಾಗಿ ಶ್ರೀಮಾನ ಗರೂಡ ಸದಾಶಿವರಾಯರಿಂದ ರಚಿತವಾದ ಆದರ್ಶಪ್ರಂಗವಾದ,—

"ಶಿರಸಂಗಿ ಲಿಂಗರಾಜ" ಎಂಬ ಚರಿತ್ರೆಯನ್ನು ರಂಗಭೂಮಿಯ ಮೇಲೆ ತರುವರು. ನಾಡ ಬಂಧುಗಳಿಗೆ ಇದೊಂದು ಹಬ್ಬವಲ್ಲವೇ?

ಮ್ಯಾನೇಜರ- ಗ. ದ. ನಾ. ಮಂ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಗೆಯು ಎಂಟು ಲಕ್ಷದಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮ್ಯಾನೆಜಿಂಗ ಡಾಯರೆಕ್ಟರ

ಕನ್ನಡಿಗ

ಇದೇ ಅನಂತಚತುರ್ದಶಿಯಿಂದ ಪ್ರಾರಂಭವಾಗುವದು, ಕಾಯದೆಭಂಗ ಚಳವಳಿಯಲ್ಲಿ ಕನ್ನಡಿಗರ ಸೇವೆಯನ್ನು ಅತಿ ಉತ್ಸಾಹದಿಂದ ನೆರವೇರಿಸಿ ಕೆಲವು ಕಾರಣಗಳ ಮೂಲಕ ನಿಂತು ಹೋದ ಕನ್ನಡಿಗ ಪತ್ರಿಕೆಯು ಇದೇ ಅನಂತಚತುರ್ದಶಿಯಿಂದ ಪುನಃ ಪ್ರಾರಂಭವಾಗುವದು. ದುಂಡು ಮೇಜ ಪರಿಷತ್ತಿನಲ್ಲಿ ಜರುಗುವ ಮಹತ್ವದ ಸುದ್ದಿಗಳನ್ನು ತಿಳಿದುಕೊಳ್ಳಬೇಕಾದರೆ ಈ ಪತ್ರಿಕೆಯನ್ನು ಓದಿ ನೋಡಿರಿ. ಪ್ರತಿದಿನವೂ ಮಹತ್ವದ ಸಂಗತಿ ಸಮಾಚಾರಗಳು ಇದರಲ್ಲಿ ಕೊಡಲ್ಪಡುವವು. ಡೆಮಿ ೪ ಪುಟ ಬೆಲೆ ೩ ಪೈ ಏಜಂಟರಿಗೆ ಧಾರಾಳವಾದ ಕಮೀಶನ ಕೊಡಲಾಗುವದು. ಜಾಹೀರಾತದಾರರಿಗೆ ಒಳ್ಳೇ ಸುಸಂಧಿ. ಗ್ರಾಹಕರು ತ್ವರೆಮಾಡಬೇಕು.

ಮ್ಯಾನೇಜರ

ಕನ್ನಡಿಗ, ಬಾಗಲಕೋಟೆ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದು ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನ ಆಪಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕಚೇರಿಗೆ ಪತ್ರೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಕೊಲ್ಹಾಪೂರ, ಮಿರಜ, ಸಾಂಗಲಿ, ಜಮಖಂಡಿ ಮೊದಲಾದ ಕರ್ನಾಟಕದ ಸಂಸ್ಥಾನಗಳು ಮುಂಬಯಿಯ ಗವ್ಹರ್ನರಸಾಹೇಬರ ಮೇಲ್ವಿಚಾರಣೆಗೊಳಗಾಗಿವೆಯಷ್ಟೇ; ಈ ನಂತರಾಗುವ ಹೊಸ ರಾಜ್ಯಘಟನೆಯಿಂದ ಇವು ದಿಲ್ಲೀ ಸರಕಾರಕ್ಕೊಳಪಡುವವು.

ಕೊಲ್ಹಾಪೂರದ ಶ್ರೀ ಶಾಸ್ತ್ರ ಜಗದ್ಗುರುಗಳು ಅಸ್ಪೃಶ್ಯರಿಗೆ ತಮ್ಮ ಸಮಕ್ಷಮ ಗಣಪತಿಯ ಪಾದಸ್ಪರ್ಶ ಮಾಡಿಸಗೊಟ್ಟರು.

ಧಾರವಾಡ

ಇಂಪೀರಿಯಲ ಬ್ಯಾಂಕಿನವರು ಪ್ರಾಮಿಸರಿ ನೋಟುಗಳ ಮೇಲಿನ ಬಡ್ಡಿಯ ದರವನ್ನು ನೂರಕ್ಕೆ ಎಂಟು ಮಾಡಿದರು. ಅದು ನಾಲ್ಕರಿಂದ ಆರರ ತನಕ ಏರಿಳಿಯುತ್ತಿತ್ತು.

ನಿನ್ನಿನ ದಿವಸ ಈ ಯೂರಲ್ಲಿ ಬಂಗಾರದ ಧಾರಣೆಯು ತೊಲೆಗೆ ೨೪ರಂತಾಯಿತು.

ನಾಳಿನ ರಜೆ.

ಇಂದು ಅನಂತವ್ರತದ ದೆಸೆಯಿಂದ ವಾರ್ಷಿಕ ಪದ್ಧತಿಯ ಪ್ರಕಾರ ಮುದ್ರಾಲಯಕ್ಕೆ ರಜೆ ಇರುವದರಿಂದ ನಾಳಿನ ನಿತ್ಯದ ವಿಜಯವು ಪ್ರಕಟಿಸಲ್ಪಡಲಾರದು.

ವಿಜಯ.

ತಾರೀಖು ೨೫-೯-೧೯೩೧ನೇ ಇಸ್ವಿ

ನಾಣ್ಯದ ಕಾಯದೆಯಿಂದ ವಿಲಾಯತಿ ಅಮೇರಿಕೆಯಲ್ಲೆದ್ದ ಗೊಂದಲ.

—(೦)—

ಇಂಗ್ಲಂಡದಲ್ಲಿ ಬ್ಯಾಂಕುಗಳು ಒಂದು ದಿವಸ ಮಾತ್ರವಲ್ಲ. ಮೂರು ದಿವಸ ಬಂದಾದವು ಅದೇ ಪ್ರಕಾರ ಹಿಂದುಸ್ಥಾನದಲ್ಲಿಯೂ ಬಂದಾದವು ವಿಲಾಯತಿ ಅಮೇರಿಕೆಯಲ್ಲುಂಟಾದಂಥ ಯಾವ ಕೆಟ್ಟ ಪರಿಣಾಮವು ಚೀನ ಮತ್ತು ಜಪಾನದ ಕಡೆಗಳಲ್ಲಿ ಬ್ರಿಟಿಶ ಸಾಮ್ರಾಜ್ಯಕ್ಕೆ ಸೇರಿದ ಕಾನಡಾ ಸರಕಾರದವರು ಇಂಗ್ಲಿಷ ಕಾಯದೆಯ ಪ್ರಕಾರ ತಮ್ಮ ಗೋಲ್ಡಸ್ಟಾಂಡರ್ಡವನ್ನು ರದ್ದು ಮಾಡದೆ, ಮೊದಲಿನದನ್ನೇ ಕಾಯಮವಾಗಿಟ್ಟುಕೊಂಡಿದ್ದಾರೆ.

ಸರಕಾರದ ಹೊಸ ವ್ಯವಸ್ಥೆಯಿಂದ ಇಂಗ್ಲಂಡದಲ್ಲಿ ಧನದ ಕೊರತೆಯಾಗಲಾರದು. ಅದರ ಸಾಂಪತ್ತಿಕ ಸ್ಥಿತಿಯು ಉತ್ಕೃಷ್ಟವಾಗಿಯುಂಟು ಪರದೇಶಿಯರು ಮಾತ್ರ ಹೆದರಿಕೊಂಡು, ಇಂಗ್ಲಂಡದ ಬ್ಯಾಂಕುಗಳಲ್ಲಿದ್ದ ತಮ್ಮ ರಕಮುಗಳನ್ನು ತೆಗೆದುಕೊಂಡರು. ಇದರಿಂದ ಇಂಗ್ಲಂಡದಲ್ಲಿ ಬಹತೇಕ ಪದಾರ್ಥಗಳು ಹುಟ್ಟಿಯಾಗುವವು ಕೆಲಕಾಲ ಆ ಪೇಟೆಗೆ ತಲೆಗೊಟ್ಟು, ಜನರು ಕಷ್ಟ ಸೋಸಬೇಕಾಗುತ್ತದೆ. ಇದೊಂದು ಪ್ರಕಾರದ ಬರಗಾಲವೇ ಸೈ.

ಹಿಂದುಸ್ಥಾನದಲ್ಲಿಯೂ ಧಾರಣೆಯು ಏರಿತು. ಮುಂಬಯಿಯಲ್ಲಿ ಶನಿವಾರ ದಿವಸ ಪೇಟೆ ಬಂದಾಗುವಾಗ ಚಿನ್ನದ ಧಾರಣೆಯು ತೊಲೆಗೆ ೨೧-೭-೦ ಇತ್ತು ಅದು ಸೋಮವಾರ ಸಾಯಂಕಾಲದಲ್ಲಿ ೨೩ ರೂಪಾಯಿಯಾಯಿತು. ಬೆಳ್ಳಿಯು ೪೩ರಿಂದ ೪೮ಕ್ಕೆ ಜಿಗಿಯಿತು. ಅರಳಿಯು ೧೪೦ರಿಂದ ೧೫೦ಕ್ಕೆ ಹೋಯಿತು. ಸರಕಾರೀ ಪ್ರಾಮಿಸರಿ ನೋಟುಗಳ ಧಾರಣೆಯು ಅಸ್ಥಿರವಾಗಿರುತ್ತದೆ. ಇವು ಸ್ಥಿರಕ್ಕೆ ಬರದಿದ್ದರೆ ಸರಕಾರಿ ಒಂದು ವಾರದ ವರೆಗೆ ಇವುಗಳ ವಿಕ್ರಿಯನ್ನೇ ತಡೆದು ನಿಲ್ಲಿಸುವಂತೆ ಸರಾಫ ಟ್ರಿಯವರು ವಿಚಾರ ಮಾಡುತ್ತಿದ್ದಾರೆ.

ಜರ್ಮನಿಯು ಕೀನಸರು ಮಹಾಯುದ್ಧಕ್ಕೆ ಸಾಂಪತ್ತಿಕ ಸ್ಥಿತಿಯ ಯುದ್ಧವೆಂದು ಹೆಸರಿಟ್ಟಿದ್ದರು. ೭ ವರುಷ ಹೆತ್ತುವರ್ಷಗಳನಂತರ ನಿದರ್ಶನಕ್ಕೆ ಒಂದು ಮಹಾಯುದ್ಧದಲ್ಲಿ ಸಾಲಕೊಟ್ಟಂಥ ವರೂ ಕೊಟ್ಟ ದೇಶಗಳೂ ಬಡ್ಡಿಯ ದರ ಕಡಿಮೆ ಮಾಡಿ, ಆಯಾ ದೇಶಗಳ ಸ್ಥಿತಿಯನ್ನು ಸುಧಾರಿಸದಿದ್ದರೆ ಪರಿಣಾಮವು ಇದಕ್ಕೂ ಹೆಚ್ಚು ಭಯಂಕರವಾಗುವದೆಂದು ಕೆಲವು ಮತ. ಮೊದಲನೆಯ ಹೊಡತವು ಇಗ್ಲಂಡಕ್ಕೆ ಬಿತ್ತು. ಈ ನಂತರ ಫ್ರಾನ್ಸ ಮತ್ತು ಅಮೇರಿಕೆಗೆ ಇದೇ ಭೋಗ ಬರುವದೆಂದು ಹೇಳುವರು.

——

ಸಾಲದ ಬಡ್ಡಿಯ ನಿಯಮ ಮಾಡಬೇಕು

····(೦)····

ಅಸೆಂಬ್ಲಿಯಲ್ಲಿ ಸಾಹುಕಾರರು ತಾವು ಸಾಲಕೊಡುವ ರಕಮಿನ ಮೇಲೆ ಇಂತಿಷ್ಟೇ ಬಡ್ಡಿ ತೆಕ್ಕೊಳ್ಳಬೇಕು. ಅದಕ್ಕೂ ಹೆಚ್ಚಿಗೆ ಬಡ್ಡಿಯನ್ನು ತಕ್ಕೊಳ್ಳಬಾರದೆಂಬ ವಿಷಯದ ಚರ್ಚೆ ನಡೆದಿದೆ ಹಣಗಳ ವ್ಯಾಪಾರಕ್ಕಿಂತ ಹಾಗಡ ಬಡ್ಡಿಯ ವ್ಯಾಪಾರವೇ ಮೇಲೆಂದು ಒಂದು ನಾಣ್ಣುಡಿಯುಂಟು. ಹಾಗವೆಂದರೆ ಸಾಲ್ಕುಪ್ಪೆ ಈ ಬಡ್ಡಿಯು ಒಂದು ಕಾಲದಲ್ಲಿ ಪ್ರಸಿದ್ಧಿಸಿತು, ಅದು ಈಗ ಮನೆಮುರುಕತನವಾಗುತ್ತದೆ ಜನರು ಅಡಚಣೆಯಲ್ಲಿ ಸಿಕ್ಕಾಗ ಸಾಹುಕಾರರ ಬಾಗಿಲ ಕಾಯುವರು. ಅವರು ಮನಬಲ್ಲಂತೆ ಬಡ್ಡೀ ಹೇಳುವರು ಮಾರವಾಡಿ ಮತ್ತು ಪಠಾಣರ ಬಡ್ಡಿಗಳಂತೂ ಕಾಯಿಯ ಸರಿ ಮಗಳೆನ್ನುವಂತಾಗಿರುತ್ತವೆ ಸಹಕಾರೀ ಸಂಘಗಳು ಬಡ್ಡಿಯ ದರವನ್ನೇ ಅದಷ್ಟು ಕಡಿಮೆ ಮಾಡುತ್ತವೆ. ಆದರೆ ತಪ್ಪಿದ ಅಥವಾ ದಂಡದ ಬಡ್ಡಿಯ ಲೆಖ್ಖ ಹಾಕಿದರೆ ಮಾರವಾಡಿಯ ಬಡ್ಡಿಗೇ ಬರುತ್ತದೆ. ಯಾವದೇ ಒಂದು ಸಹಕಾರಿ ಬ್ಯಾಂಕಿನಲ್ಲಿ ಒಂದು ದಂಡದ ಬಡ್ಡಿಯ ಖಾತೆ ತೆಗೆದು ನೋಡಲಿ ಸಾಲ ತಕ್ಕೊಂಡ ರಕಮು ಎಷ್ಟು ? ಸಾದಾ ಬಡ್ಡಿ ಎಷ್ಟು ? ಅದು ಮುಂದೆ ಕೊನೆಯಲ್ಲಿ ತಪ್ಪಿದ ಬಡ್ಡಿಯಂತೆ ಎಷ್ಟಾಯಿತೆಂದೂ ಮಾರವಾಡಿ ವ್ಯಾಪಾರವನ್ನೇ ಹೋಲುತ್ತದೆಂದೂ ಕಂಡುಬರುವದು.

ಸರಕಾರದವರು ಬರೇ ಸಾಹುಕಾರರ ಮೇಲೆ ಬ್ರಹ್ಮಾಸ್ತ್ರ ಪ್ರಯೋಗ ಮಾಡದೆ, ಸಹಕಾರ ಸಂಘಗಳು ದಂಡದ ಬಡ್ಡಿಯ ಪದ್ಧತಿಯನ್ನೇ ತೆಗೆದು ಹಾಕಬೇಕೆಂದು ಕಾಯದೆ ಮಾಡುವಂಥ ಅವಶ್ಯವಾದ ಕರ್ತವ್ಯಕರ್ಮವಾಗುತ್ತದೆ.

——

ಅಸೆಂಬ್ಲಿಯಲ್ಲಾದ ಭಾಷಣಗಳು

—(೦)—

ಮಿ. ಮಿಯಾನ ಶಹಾ ನವಾಜ-

ಯೋಗ್ಯ ಬಡ್ಡಿಯ ದರದಿಂದ ಹಣ ಸಾಲಕೊಡುವದು ಒಂದು ಅಗತ್ಯದ ವ್ಯವಹಾರವಾಗುತ್ತದೆ ಆದರೆ ಭಾರೀ ಬಡ್ಡೀ ತಕ್ಕೊಳ್ಳುವದು ಸಾಲಗಾರರಮೇಲೆ ದಾವಳೀ ಎಬ್ಬಿಸಿದಂತಾಗುತ್ತದೆ. ಎಲ್ಲಾ ಧರ್ಮಗಳೂ ಬಹಳ ಬಡ್ಡಿ ತಕ್ಕೊಳ್ಳಬಾರದೆಂದು ಹೇಳಿವೆ ಸರಕಾರದವರು ೧೮೮೦ರಲ್ಲಿ ಈ ಬಗ್ಗೆ ಒಂದು ಕಾಯದೆ ಮಾಡಿದ್ದು ಫಿಜ ಆದರೆ ಇದರ ಉಪಯೋಗವೇನೂ ಆಗುವದಿಲ್ಲೆಂದು ಹಾಯಕೋರ್ಟಗಳು ಮಾಡಿದ ನಿರ್ಣಯಗಳೇ ಪ್ರತ್ಯಕ್ಷ ಸಾಕ್ಷಿಯಾಗಿರುತ್ತವ

ಮಿ. ಮಹಮದ ಯಾಮಿನಖಾನ-

ಸಾಹುಕಾರರು ಬೇಕಾದಷ್ಟು ಬಡ್ಡೀ ತಕ್ಕೊಳ್ಳಬೇಕೆಂದು ಅವರಿಗೆ ಅನಿರ್ಬಂಧಪಡಿದ್ದೇ ಹಳ್ಳಿಗಳಲ್ಲಿ ರೈತರಲ್ಲಿ ಅಸಂತೋಷ ಹೆಚ್ಚಾಗಲಿಕ್ಕೆ ಕಾರಣವಾಗಿರುತ್ತದೆ ೧೮೫೫ರ ವರೆಗೆ ಬಡ್ಡಿಯ ವ್ಯವಹಾರವು ಹಿಂದೂ ಧರ್ಮಶಾಸ್ತ್ರದ ಪ್ರಕಾರ ನಡೆಯುತ್ತಿತ್ತು. ಆನಂತರ ಕಂಪನಿ ಸರಕಾರದವರು ಮಾಡಿದ ಕಾಯದೆಯಿಂದ ಅನೇಕ ಕುಟುಂಬಗಳು ನಾಶಹೊಂದಿದವು ಬಡ್ಡಿಯ ನಿಯಮನ ಮಾಡದಿದ್ದರೆ ಹಿಂದುಸ್ಥಾನದಲ್ಲಿ ಬೊಲ್ಶೆವಿಕ ತತ್ವಪ್ರಸಾರವನ್ನು ತಡೆದಂತಾಗುತ್ತದೆ.

ಮಿ. ಪುರೋಹಿತ-

ಸರಕಾರದವರು ರೈತರ ಹಿತಬಯಸಿ, ಈ ಬಗ್ಗೆ ಕಾಯದೆ ಮಾಡದಿದ್ದರೆ ರೈತರೇ ಕಾಯದೆಯನ್ನು ತಮ್ಮ ಕೈಯಲ್ಲಿ ತಕ್ಕೊಂಡು, ಸಾಹುಕಾರರ ಮೇಲೆ ಅದರ ಅಮಲನ್ನು ನಡಿಸುವರು. ಪಂಜಾಬದಲ್ಲಿ ರೈತರು ಅನೇಕ ಸಾಹುಕಾರರನ್ನು ಕೊಂದಿರುತ್ತಾರೆಂಬದೇ ಪ್ರತ್ಯಕ್ಷ ಪ್ರಮಾಣವು.

ಮಿ ಶಮಾರ-

ಮದ್ರಾಸ ಇಲಾಖೆಯಲ್ಲಿ ವಿಪರೀತ ಬಡ್ಡಿ ತಕ್ಕೊಳ್ಳುವದರಿಂದ ಸಾವಿರಾರು ಕುಟುಂಬಗಳ ನಿರ್ನಾಮವಾಗಿರುತ್ತದೆ.

ಈ ಬಗ್ಗೆ ಇನ್ನೂ ಭಾಷಣಗಳು ನಡೆದಿವೆ.

ಪುಣೆಯಲ್ಲಿ ಬಾಬಾಜಾನನೆಂಬ ಹೆಸರಿನ ಮುದಕಿಯು ೧೧೦ ವರ್ಷದವಳಾಗಿ ಸತ್ತಳು. ಇವಳು ಯಂತ್ರ, ಮಂತ್ರ, ತಾಯಿತಗಳನ್ನು ಮಾಡುತ್ತಿದ್ದದರಿಂದ ಎಲ್ಲಾ ಜಾತಿಯವರು ಇವಳಿಗೆ ನಡಕೊಳ್ಳುತ್ತಿದ್ದರು. ಇವಳೊಂದು ಬೇವಿನ ಗಿಡದ ಬುಡದಲ್ಲಿಯೇ ವಾಸವಾಗಿರುತ್ತಿದ್ದಳು ಇವಳ ಸ್ಮಶಾನ ಯಾತ್ರೆಗೆ ೧೫ ಸಾವಿರ ಜನ ಕೂಡಿತ್ತು.

ಬ್ರಿಟಿಶ ಸರಕಾರಕ್ಕೆ ಸಂಸ್ಥಾನಿಕರ ದ್ರವ್ಯಸಹಾಯ

—(೦)—

ಇಂಗ್ಲಂಡಕ್ಕೆ ಒಂದೊದಗಿದ ದ್ರವ್ಯದ ಕೊರತೆಯನ್ನು ಪೂರ್ಣ ಮಾಡುವದರಲ್ಲಿ ತಮ್ಮದೂ ಅಲ್ಪ ಶಕ್ತಿ ಸಹಾಯವೆಂದು ರಾಮ್ಪುರ ಹೋಲಿಗೆ ಕೋರಿದಂಥ ಹಿಂದೀ ಸಂಸ್ಥಾನಿಕರು ತಾವೆ ಬ್ರಿಟಿಶ ಸರಕಾರದಿಂದ ತಕ್ಕೊಳ್ಳಬೇಕಾಗಿರುವಂಥ ಪ್ರವಾಸದ ವೆಚ್ಚ, ಭೋಜನ ಮುಂತಾದ್ದರ ಎಲ್ಲಾ ವೆಚ್ಚವನ್ನು ಬಿಟ್ಟುಕೊಟ್ಟಂತೆ ಮಿ ಮ್ಯಾಕಡೋನಾಲ್ಡ ಸಾಹೇಬರಿಗೆ ಪತ್ರಬರೆದು ತಿಳಿಸಿದರು. ಸಾಹೇಬರು ಸಂಸ್ಥಾನಿಕರ ಔದಾರ್ಯವನ್ನು ಹೊಗಳಿ ಕೃತಜ್ಞತೆಯನ್ನು ವ್ಯಕ್ತಪಡಿಸಿದ ಉತ್ತರ ಬರೆದಿದ್ದಾರೆ.

ವರ್ಹಾಡವನ್ನು ಹಕ್ಕಿನಿಂದ ಕೊಡದಿದ್ದರೆ ಮಾರಲಿಕ್ಕೆ ಕೊಡಿರಿ

(೦)—

ಹೈದ್ರಾಬಾದಿನ ನಿಜಾಮಸಾಹೇಬರು ವರ್ಹಾಡ ಪ್ರಾಂತವನ್ನು ತಮಗೆ ತಿರುಗಿ ಕೊಡಬೇಕೆಂದು ವಿಲಾಯತಿಯಲ್ಲಿ ತಮ್ಮ ಪ್ರತಿನಿಧಿಯಾದ ಸರ ಅಕಬರ ಹೈದರಿಯವರ ಮುಖಾಂತರ ಭಾರತಮಂತ್ರಿ ಸರ ಸ್ಯಾಮ್ಯುಯಲ ಹೋರ ಸಾಹೇಬರಿಗೆ ಹೇಳಿಕಳಿಸಿದ್ದಾರಂತೆ; ನೀವು ವರ್ಹಾಡವನ್ನು ತಿರುಗಿ ಕೊಟ್ಟರಂತೂ ಸರಿಯೇ ಇಲ್ಲವಾದರೆ ಎಷ್ಟು ಕೋಟಿ ರೂಪಾಯಿ ಬೇಕು ಹೇಳಿರಿ ನಾವು ಕೊಡುತ್ತೇವೆ. ಆ ರೂಪಾಯಿ ತಕ್ಕೊಂಡು ನಮ್ಮ ದೇಶ ನಮಗೆ ಕೊಡಿರಿ ಹಾಗು ಸದ್ಯದ ನಿಮ್ಮ ಚಿಟಿಪಿಟಿಯನ್ನು ಕಳೆದುಕೊಳ್ಳಿರೆಂದು ನಿಜಾಮಸಾಹೇಬರು ಸರ ಸಾಹೇಬರಿಗೆ ವತಿಯಿಂದ ಸವಾಲು ಕೇಳಿಸಿದ್ದಾರೆ. ಸರಕಾರದವರು ವರ್ಹಾಡವನ್ನು ಮಾರಾಟಕ್ಕೇ ಹಚ್ಚಿದರೆ ನಿಜಾಮರಿಗಿಂತ ಎಷ್ಟೋ ರೊಕ್ಕ ಹೆಚ್ಚು ಕೊಟ್ಟು ಕೊಳ್ಳುವಂಥ ನವಕೋಟಿ ನಾರಾಯಣರಲ್ಲ. ನವಾಬ್ಜ, ನವಖರ್ವ ನಾರಾಯಣರೂ ಮುಂದೆ ಬರುವರು.

ಒಂದನೆ ಆಶೆ ಹುಟ್ಟಿ ಪತ್ರ ಬೇರೆ ರೀತಿಯಿಂದ ನಿಜಾಮರು ವರ್ಹಾಡದ ಒತ್ತಾಯ ನಡೆಸಿದ ವರ್ತಮಾನ ಕೇಳಿ, ವರ್ಹಾಡದ ಜನರಲ್ಲಿ [illegible] ಚಳವಳಿಯುಂಟಾಗಿದ್ದು ನಾಗರಿಕರು ಈ ವ್ಯವಹಾರವಾಗದಂತೆ ಶಕ್ಯವಾದ ಉಪಾಯಗಳನ್ನು ಮಾಡಬೇಕೆಂಬ ವಿಚಾರ ನಡೆಸಿದ್ದಾರೆ.

ಮುಂಬಯಿಯಲ್ಲಿ ಒಬ್ಬಳು ತನ್ನ ಗಂಡನು ಉದ್ಯೋಗಹೀನನಾಗಿ ಕೂತನೆಂಬ ವ್ಯಥೆಯಿಂದ ಮೈ ಸುಟ್ಟು ಕೊಂಡು ಆತ್ಮಹತ್ಯ ಮಾಡಿಕೊಂಡಳು.

ಆಗಲೆ ಸಾವಿರ, ಸಾವಿರಕ್ಕಿಂತ ಹೆಚ್ಚು ಬೆಲೆಯ ಖಾದೀ ಕೊಂಡರು

....(೦)...

ಸರದಾರ ಪಟೇಲರ ವಿನಂತಿಯ ಮೇರೆಗೆ ಈ ಕೆಳಗಿನವರು ಅವರ ಹೆಸರಿನ ಮುಂದೆ ಹೇಳಿದಷ್ಟು ರೂಪಾಯಿನ ಖಾದೀ ಕೊಂಡಿದ್ದಾರೆ.

೧	ಮುಂಬಯಿ ಸಬರ್ಬನ ಡಿಸ್ಟ್ರಿಕ್ಟ ಕಾಂಗ್ರೆಸ ಕಮಿಟಿ	೧೫೦೦೦
೨	ಜೀವನಲಾಲ ಮೋತಿ[illegible]ಚಂದ ಮುಂಬಯಿ ಮತ್ತು ಕಲಕತ್ತೆ	೧೦೦೦೦
೩	ಸರ ಪುರುಷೋತ್ತಮದಾಸ ಠಾಕೂರದಾಸ	೫೦೦೦
೪	ಒಬ್ಬ ಮಿತ್ರ	೫೦೦೦
೫	ರಾಮನಾರಾಯಣ ಹಣಮಂತರಾಯ	೨೫೦೦
೬	ಸವೋಜಿ ಮುಕುಮಾರ ಎಡೇಲಮದ್ರಾಸ	೨೦೦೦
೭	ಶೇಟ ಶ್ರೀರಾಮ ಲ ಮಸಿರಂಜನ	೧೨೦೦
೮	ರಾಜಾ ಬಹಾದ್ದೂರ ಗೋವಿಂದಲಾಲ ಪಿಟಿ	೧೦೦೦
೯	ಶೇಟ ಮಾಲಜಿ ಶಿಕ್ಕ	೧೦೦೦
೧೦	ಹಿಂಗಣಾಲಾ	೧೦೦೦
೧೧	ಹಬೀಬ ಅಂಡ ಸನ್ಸ	೧೦೦೦
೧೨	ಎಚ್ಚ ಎಲ್ ಮಥುರಾದಾಸರ ಮುಖಾಂತರ	೧೦೦೦
೧೩	ಬಾಲಿವಾಲಾ ಥಿಯೇಟರದಲ್ಲಿ ಕಿರುಕಳ ಜಮೆ	೧೪೫೦

ಪರೀಕ್ಷೆಗೆ ಕೂತ ಬಳಿಕ ಪರೀಕ್ಷೆ ನಿಲ್ಲಿಸಿದರು

—(೦)—

ಬಡೋದೆಯಲ್ಲಿ ಟ್ರೇನಿಂಗ ಕಾಲೇಜದ ದೆಸೆಯಿಂದ ಪರೀಕ್ಷೆಯಾಗಬೇಕಾಯಿತು. ಉಮೇದವಾರರು ಟಿಕೇಟು ಹಚ್ಚಿ ಅರ್ಜಿ ಮಾಡಿ ಪರೀಕ್ಷೆಗೆ ಬಂದರು ಮೊದಲನೆಯ ಗಣಿತದ ಕಾಗದ ಕೊಟ್ಟರು. ಉಮೇದವಾರರು ಬರೆದರು ಬಳಿಕ ಸೂಚನೆಯಾಯಿತು ಎರಡನೆಯ ಕಾಗದ ಕೊಡುವಾಗ ಬಂದೇ ಸ್ಥಳ ಹೊಂಬ ಬೇಕಾಗಿದೆ ಕಾರಣ ಮುಂದಿನ ಪರೀಕ್ಷೆ ನಿಲ್ಲಿಸಲ್ಪಟ್ಟಿತೆಂದು ಹೇಳಿ, ಉಮೇದವಾರರಿಗೆ ಅಪ್ಪಣೆ ಕೊಟ್ಟರು. ಒಳ್ಳೇ ಸುಧಾರಿಸಿದ ಸಂಸ್ಥಾನದಲ್ಲಿಯ ವ್ಯವಸ್ಥೆಯು.

ಮದ್ರಾಸ ಇಲಾಖೆಯಲ್ಲಿ ಇಬ್ಬರು ಮಂತ್ರಿಗಳ ಸಂಖ್ಯೆ ಕಡಿಮೆ ಮಾಡಬೇಕು ಮತ್ತು ಮಂತ್ರಿಯ ಸಂಬಳವನ್ನು ಎರಡು ಸಾವಿರ ಮಾಡಬೇಕೆಂದು ಮಿ ಬಶೀರ ಅಹಮದರು ಅಲ್ಲಿಯ ಕೌನ್ಸಿಲದಲ್ಲಿ ಠರಾವು ತರಲಿಕ್ಕಿದ್ದಾರೆ.

ಪೋಲೀಸ ಅಫೀಸರನು ಅತ್ತೆಗೂ ಹೆಂಡತಿಗೂ ಗುಂಡು ಹಾಕಿದನು

....(೦)...

ಬಲೂಚಿಸ್ಥಾನಕ್ಕೆ ಸೇರಿದ ಪೋಲೀಸ ಅಮಲದಾರನಾದ ಮಹಮುದ ಹಮೀದಸಾಹೇಬನು ರಿವ್ಹಾಲ್ವರದಿಂದ ತನ್ನ ಅತ್ತೆಗೆ ಗುಂಡು ಹಾಕಿ, ಆಕೆಯನ್ನು ಕೊಂದು ನಂತರ ಹೆಂಡತಿಗೂ ಗುಂಡು ಹಾಕಿ ಆಕೆಯನ್ನು ಅರೆಜೀವ ಮಾಡಿದನು ಬಳಿಕ ತಾನೂ ಆತ್ಮಹತ್ಯ ಮಾಡಿಕೊಳ್ಳಲಿಕ್ಕೆ ಪ್ರಯತ್ನಿಸಿದಾಗ ಒಬ್ಬರು ಆತನನ್ನು ಹಿಡಿದು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕಳಿಸಿದರು.

ವಿವಿಧ ವರ್ತಮಾನಗಳು

ಸಿಂಧವನ್ನು ಮುಂಬಯಿ ಇಲಾಖೆಯಿಂದ ಅಗಲಿಸುವದು ಮುಂಬಯಿಯ ವರ್ತಕರ ಹಿತಸಂಬಂಧಗಳಿಗೆ ಅಹಿತವಾಗುವದರಿಂದ, ಅದನ್ನು ಅಗಲಿಸಬಾರದೆಂದು ಪರದೇಶಗಳ ಕೂಡ ವ್ಯಾಪಾರ ಮಾಡುವ ಹಿಂದೀ ವರ್ತಕರು ಹಿಂದುಸ್ಥಾನ ಸರಕಾರಕ್ಕೆ ತಾರಿನಿಂದ ತಿಳಿಸಿದ್ದಾರೆ.

ಮುಂಬಯಿಯಲ್ಲಿ ಒಂದು ಸಾರ್ವಜನಿಕ ಗಣಪತಿಯ ಮುಂದೆ ಅಸ್ಪೃಶ್ಯತಾ ನಿವಾರಣೆಯ ಸಭೆಯಾಯಿತು ಮುಗಿದ ಮೇಲೆ ಕೆಲವ ಬೇಕೆಂಬ ಠರಾವಿಗೆ ಎಲ್ಲರೂ ತಲೆದೂಗಿದರು ಸಾಕು ಹೊತ್ತಿನ ನಂತರ ಅಸ್ಪೃಶ್ಯರೆಂದು ಮೇಳೆ ಬರಲು, ಠರಾವಿಗೆ ತಲೆದೂಗಿದವರೇ ಮೊದಲಾಗಿ ಎಲ್ಲರೂ ಅವರ್ನ ಒಳಗೆ ಬರಗೊಡಲಿಲ್ಲ. ಒಳ್ಳೇ ಅಸ್ಪೃಶ್ಯತಾ ನಿವಾರಣೆಯು.

ಪುಣೆಯಲ್ಲಿ ಡಾಗನ ಕಾಸ್ಟನಲ ಸೋಲ್ಜರನು ಮಧ್ಯರಾತ್ರಿಯ ಸಮಯದಲ್ಲಿ ಕೈಯಲ್ಲಿ ರಿವ್ಹಾಲ್ವರ ಹಿಡಕೊಂಡು ತನ್ನ ಕೋಣೆಯಿಂದ ಹೊರಬಿದ್ದು, ಉಳಿದ ಸೋಲ್ಜರರಿಗೆ ಹೊರಬೀಳಬೇಡಿರಿ. ಬಿದ್ದರೆ ಗುಂಡು ಹಾಕುತ್ತೇನೆಂದು ಹೆದರಿಸುತ್ತಾ ತಿರುಗಿ ತನ್ನ ಕೋಣೆಗೆ ಬಂದು, ಆ ರಿವ್ಹಾಲ್ವರದಿಂದ ಗುಂಡು ಹಾಕಿಕೊಂಡು ಸತ್ತನು.

ಕಲಕತ್ತೆಯ ಸಂಸ್ಕೃತ ವಿದ್ಯಾಪೀಠದವರು ಕವೀಂದ್ರ ರವೀಂದ್ರನಾಥ ಟಾಗೋರರಿಗೆ ಕವಿಸಾರ್ವಭೌಮನೆಂಬ ಪದವಿ ಕೊಟ್ಟು, ಅವರ ಬಹುಮಾನ ಮಾಡಿದರು.

ನೋಟೀಸು

ಗುಡಗೇರಿ ತಾಲೂಕ ಪೈಕಿ ಹಿರೇ ವಡ್ಡಟ್ಟಿಯಲ್ಲಿ ಇರುವ ಯಲ್ಲವ್ವಾ ಕೋಂ ನಿಂಗಪ್ಪಾ ಒಟಕನಹಳ್ಳಿ ಇವರಿಗೆ—

ನಾನು ಕೆಳಗೆ ಸಹಿ ಮಾಡಿದ ಚಿಕ್ಕಪ್ಪ ಬಿನ್ ನೀಲಪ್ಪ ಒಟಕನಹಳ್ಳಿ ಸಾ॥ ಹಿರೇವಡ್ಡಟ್ಟಿ ತಾಲೂಕ ಗುಡಗೇರಿ ನಿನಗೆ ನೋಟೀಸಿನಿಂದ ತಿಳಿಸುವದೇನೆಂದರೆ ಹಿರೇವಡ್ಡಟ್ಟಿಯಲ್ಲಿ ಇರುವ ಸ ನಂಬರ ... ಎಕರೆ ೧೩ ಗುಂಟೆ ೯ ಆಕಾರ ರೂಪಾಯಿ (೧೬।೮। ೦) ಈ ಜಮೀನಿನ ಮಾಲಕನು ನಾನೆ ಇದ್ದೆನು. ಇದ್ದ ನನ್ನನ್ನು ನನ್ನ ಗಂಗವ್ವಾ ಕೋಂ ಚಂದಾನಪ್ಪ ಚಿಕ್ಕರಟ್ಟಿ ಈಕೆಯು ಜಡಿನೆಂಟು, ಇಪ್ಪತ್ತು (೧೮।೨೦) ವರ್ಷಗಳ ಲಾಗಾಯ್ತು ಜೋಪಾನ ಮಾಡಿದ್ದರಿಂದ ಆಕೆಯ ತಾಬೇದಲ್ಲಿ ಸದರೀ ಜಮೀನು ಇರುತ್ತದೆ. ಸದರೀ ಜಮೀನು ಸದ್ರಿ ಗಂಗವ್ವನಿಗೆ ನಾನು ತಾರೀಖು ೯-೭-೧೯೧೮ ಇಸ್ವಿ ದಿವಸ ಬಕ್ಷೀಸು ಕೊಟ್ಟು ಬಕ್ಷೀಸಪತ್ರಾ ಬರಕೊಟ್ಟಿರುತ್ತೇನೆ. ಸದ್ರಿ ಬಕ್ಷೀಸಪತ್ರಕ್ಕೆ ನೀನು ಸಮ್ಮತಿ ಹಾಕಿರುತ್ತೀ. ಸದ್ರಿ ಜಮೀನು ಅತಿಶಯ ನಾದುರಸ್ತ ಇದ್ದ ಮೂಲಕ ಸದ್ರಿ ಗಂಗವ್ವನು ೭೦೦-೮೦೦ ರೂಪಾಯಿಗಳನ್ನು ಖರ್ಚು ಮಾಡಿ ಜಮೀನು ಕಿರೀ ಮಾಡಿಸಿ ನಾಲ್ಕೂ ಬಾಜೂಕ್ಕೆ ಕಲ್ಲುವಡ್ಡು ವಗ್ಯೆರೆ ಕಟ್ಟಿಸಿ ದುರಸ್ತ ಮಾಡಿರುತ್ತಾಳೆ. ಸದ್ರಿ ಗಂಗವ್ವನಿಗೆ ಸಂಗಪ್ಪ ವ ಸೋಮಪ್ಪಾ ಎಂಬ ಇಬ್ಬರು ಮಕ್ಕಳಿದ್ದು ಇವರ ಪೈಕಿ ನೀನು ಸಂಗಪ್ಪನಿಗೆ ನಿನ್ನ ಮಗಳು ಕೊಟ್ಟು ಲಗ್ನವಾಗಿರುತ್ತದೆ. ನನ್ನ ಮತ್ತು ಸದ್ರಿ ಗಂಗವ್ವನ ಪಶ್ಚಾತ್ತ ಸದ್ರಿ ಮಿಳಕತ್ತ ಗಂಗವ್ವನ ಹೆಣ್ಣುಮಕ್ಕಳಿಗೆ ಹೋಗಬಾರದೆಂದು ನಾನು ಮತ್ತು ಗಂಗವ್ವನು ಆಲೋಚನೆ ಮಾಡಿ ಸದ್ರಿ ಗಂಗವ್ವನ ಮಕ್ಕಳ ಪೈಕಿ ಸೋಮಪ್ಪನ ಲಗ್ನವಾದ ಮೂಲಕ ಸದ್ರಿ ಸೋಮಪ್ಪನಿಗೆ ಈ ಜಮೀನು ಖರೀದಿಗೆ ಕೊಡಬೇಕೆಂದು ನಾನ ಮತ್ತು ಗಂಗವ್ವನೂ ಕೂಡಿ ಸದ್ರಿ ಜಮೀನಿನ ಖರೀದಿಯ ವಚನಪತ್ರ ತಾ ೪-೪-೧೯೩೧ನೇ ಇಸ್ವಿ ದಿವಸ ಸೋಮಪ್ಪನ ಹೆಸರಲೆ ಬರಕೊಟ್ಟಿರುತ್ತದೆ. ಆಗದ ಪ್ರಕಾರ ಸದ್ರಿ ಸೋಮಪ್ಪನ ಕಡೆಯಿಂದ ... ರೂಪಾಯಿಗಳನ್ನು ತಗೊಂಡು ಮೇಲೆ ಬರೆದ ಬಕ್ಷೀಸಪತ್ರದಲ್ಲಿ ನನ್ನ ಹಯಾತಿಪರ್ಯಂತ ಉಪಭೋಗಮಾಡುವ ಹಕ್ಕು ಇದ್ದ ಶರ್ತನ್ನು ಬಿಟ್ಟು ಖರೀದಿಪತ್ರ ಮಾಡಿಕೊಡುವದಕ್ಕೆ ನೀನು ಮತ್ತು ನಿಮ್ಮ ಅಪ್ಪ ನೀಲಪ್ಪ ಮತ್ತು ನಿನ್ನ ಅಳಿಯ ಸಂಗಪ್ಪ ನನಗೆ ಇಲ್ಲದ ಬೇವಕೂಪ್ಪ ಕಲಿಸಿ ಕೊಟ್ಟು ನನ್ನನ್ನು ಗಂಗವ್ವನ ಮನೆಯೊಳಗಿಂದ ಜುಲುಮಿನಿಂದ ಕರಕೊಂಡು ಹೋಗಿ ನನಗೆ ಧುಲಕಾಪಿ ಕೊಟ್ಟು ಖರೀದಿಪತ್ರ ಮಾಡಗೊಡಲಿಲ್ಲ. ಅದ್ದರಿಂದ ಸದ್ರಿ ಸೋಮಪ್ಪನು ಗುಡಗೇರಿ ಕೋರ್ಟಿನಲ್ಲಿ ಅಸಲನಂಬರ ೭೦/೧೯೩೧ನೇ ದಾವೆ ತಂದನು. ಈ ಹಕೀಕತ್ತು ನಿನಗೆ ತಿಳಿದನಂತರ ನೀನು ನನ್ನ ಕಡೆಯಿಂದ ಒಂದು ಬಿಳೀ ಕಾಗದದಮೇಲೆ ಹೆಬ್ಬೊಟ್ಟಿನ ಗುರ್ತ ತೆಗೆದುಕೊಂಡು ಹಿಂದಿನ ತಾರೀಖು ತಿಂಗಳ ಹಾಕಿಸಿ ಅಂದರೆ ೧೮-೩-೧೯೩೧ನೇ ಇಸ್ವಿ ದಿವಸ ಖರೀದಿವಚನಪತ್ರ ಸದ್ರಿ ಜಮೀನಿನ ಬಾಬತ ಮಾಡಿಸಿ ನನಗೆ ಒಂದು ಪೈಸಹ ಕೊಡದಲೇ ಸದ್ರಿ ಗಂಗವ್ವನ ವ ಸೋಮಪ್ಪನ ಲುಕ್ಸಾನ ಮಾಡುವ ಮೂಲಕ ತಾ ೧-೭-೧೯೩೧ನೇ ಇಸ್ವಿ ದಿವಸ ನಿನ್ನ ಹೆಸರಿಲೆ ಪೋಕಳ ಖರೀದಿ ಮಾಡಿಕೊಂಡಿರುತ್ತಿ. ಇದು ಖರೇ ಅಲ್ಲ. ನಿನ್ನ ತಾಬೇಕ್ಕೆ ಸದ್ರಿ ಜಮೀನು ನಾನು ವಂದೂ ಕೊಟ್ಟಿಲ್ಲ. ನನಗೆ ಕೊಡುವ ಅಧಿಕಾರ ಉಳಿದಿಲ್ಲ. ಹೀಗಿದ್ದು ನೀನು ಗುಡಗೇರಿ ಮಾಮಲೇದಾರರ ಕಡೆಗೆ ಜಾ ವ ನಂಬರ ೧/೧೯೩೧ನೆಂದರೆ ಕೆಲಸ ನಡೆಯಿಸಿ ನನ್ನ ಕಡೆಯಿಂದ ನೀನು ವ ತ್ತು ನಿನ್ನ ಅಳಿಯ ಸಂಗಪ್ಪ ಇವರು ಧುಲಕಾಪಮಾಡಿ ನನ್ನ ಜಾಬು ಕೊಡಿಸಿದಿರಿ. ಆದರೂ ಸದ್ರಿ ನಂಬರದಲ್ಲಿ ಗಂಗವ್ವನಂತೆ ನಿಕಾಲ ಆಗಿದೆ. ನೀನು ನನ್ನನ್ನು ಸಂರಕ್ಷಣೆ ಮಾಡುವ ಕಾರಣವಿಲ್ಲ. ನೀನು ಬರಿಸಿಕೊಂಡ ಖರೀದಿಪತ್ರ ಪೋಕಳ ಅದೆ. ಸದ್ರಿ ಸೋಮಪ್ಪನಿಗೆ ನಾನು ಮತ್ತು ಗಂಗವ್ವನು ಕೂಡಿ ಬರಕೊಟ್ಟ ವಚನದ ಪ್ರಕಾರ ನಾನು ಮತ್ತು ಗಂಗವ್ವನು ಕೂಡಿ ತಾ ೧೯-೯-೧೯೩೧ನೇ ಇಸ್ವಿ ದಿವಸ ಖರೀದಿ ಪತ್ರ ಬರಕೊಟ್ಟು ನೋಂದಣೀ ಮಾಡಿಸಿಕೊಟ್ಟಿರುತ್ತೇವೆ. ಈ ಜಮೀನಿನ ಮೇಲೆ ನಿಂದು ಯಾವತರದ್ದೂ ಹಕ್ಕು ಮಾಲ್ಕಿ ಉಳಿದಿರುವದಿಲ್ಲ. ನೀನು ಬರೆಸಿಕೊಂಡ ಖರೀದಿಪತ್ರ ಪೋಕಳ ಇದ್ದು ನಿನ್ನ ವ ನಿನ್ನ ಅಳಿಯನಾದ ಸಂಗಪ್ಪ ವಗ್ಯೆರೆ ಜನರ ಧುಲಕಾಪಿಗೆ ನಾನು ಮರುಳಾಗಿ ಖರೀದಿಪತ್ರ ಬರಕೊಟ್ಟ ಕಾರಣ ಖರೀದಿಪತ್ರದಲ್ಲಿ ಬರೆದ ಎಲ್ಲ ಮಜಕೂರು ಸುಳ್ಳು ಅದೆ. ಆದ್ದರಿಂದ ಸದ್ರಿ ಖರೀದಿಪತ್ರ ನಿನ್ನ ಹೆಸರಲೆ ಬರಕೊಟ್ಟಿದ್ದು ರದ್ದು ಅದೆ. ಮೇಲೆ ಬರೆದ ನಿಮ್ಮ ಮಾತು ಕೇಳಿ ನಾನು ನಿಮ್ಮ ಮಾತಿಗೆ ಭ್ರಾಂತಿಷ್ಟನಾಗಿ ಸದ್ರಿ ಗಂಗಪ್ಪನಿಗೆ ತ್ರಾಸು ಕೊಟ್ಟಂತೆಯಾಯಿತು. ನೀವೆಲ್ಲರೂ ಇದಕ್ಕೆ ಕಾರಣೀಭೂತರು ಇರುತ್ತೀರಿ. ಸದ್ರಿ ಜಮೀನಿಗೆ ಸೋಮಪ್ಪನೊಬ್ಬನೇ ಮಾಲಕನಿರುತ್ತಾನೆ. ನಿಂನದು ಏನೂ ಹಕ್ಕು ಇಲ್ಲಾ. ಈ ನೋಟೀಸಿನ ಖರ್ಚು ನಿನ್ನ ತಲೆಯಮೇಲೆ ಅದೆ ಅಂತಾ ತಿಳಿಸಿದೆ. ತಾರೀಖು —೧೯-೯-೧೯೩೧ನೇ ಇಸ್ವಿ

ಈ ಗುರ್ತ ಬಲಗೈ ಹೆಬ್ಬಟ್ಟಿನದು ಚಿಕ್ಕಪ್ಪಾ ಬಿನ್ ನೀಲಪ್ಪಾ ಒಟಕನಹಳ್ಳಿ ಈತಂದು ಅದೆ.

ನೋಟೀಸು

ಫಕೀರಪ್ಪಾ ಬಿನ್ನ ನೀಲಪ್ಪಾ ವೃಪ್ಪಾರ ಸಾಕೀನ ಕಲಕಟ್ಟಿ ತಾಲೂಕ ಬಂಕಾಪೂರ ಇವರಿಗೆ—

ಕೆಳಗೆ ಸಹಿ ಮಾಡಿದವಳು ಕೊಡುವ ನೋಟೀಸು ಯೇನಂದರೆ ನೀನು ನನ್ನ ವ ... ಬಿಟ್ಟು ನಮ್ಮ ನಿಮ್ಮ ಬಾಳ್ವೆ ಸುರಕ್ಷಿತದಿಂದ ನಡೆದು ಈಗ ನೀನು ನಿಮ್ಮ ತಾಯಿ ಮಾತು ಕೇಳಿ ನನ್ನನ್ನು ಹೊರಗ ... ನನ್ನ ಕೂಡ ವೈರತ್ವ ಮಾಡಿ ನನ್ನ ... ನನ್ನ ಮೈಮೇಲಿನ ಯಾನತ್ತು ... ಮತ್ತು ವೃತಕ್ಕ ತೀರಿ ... ನನಗೆ ಹರಕ ಪಡಕಿ ಕೊಟ್ಟು ... ಹಾಕಿದಿ ಇದು ಅಲ್ಲದೆ ನಿಮ್ಮ ... ಇವಳ ಹೆಂಡತಿನ್ನ ಹೊಡೆದು ... ಆಕೆನು ಸಹ ಹೊರಗ ಹಾಕಿದಿ ... ಅಲ್ಲದೆ ಆಕೆಗೂ ನನಗೂ ಸಳ್ಳು ನೋಟೀಸು ದಾಗೀನಿಗಳನ್ನು ತೆಗೆದುಕೊಂಡು ಹೋದಿರಿ ಅಂತ ಮಾಡಿದಿರಿ ಮತ್ತು ನಮ್ಮ ಮೇಲೆ ಹಕ್ಕು ಇಲ್ಲ ಅಂತ ನೋಟೀಸಿನಿಂದ ತಿಳಿಸಿದಿರಿ. ಆದರೆ ನಾನು ಬಾಳ್ವೆಮಾಡಬೇಕಂತ ಇವತ್ತಿನವರೆಗೂ ಸಾಲವಗ್ಯೆರೆ ಮಾಡಿಕೊಂಡು ಇದ್ದೆ. ಆದರೆ ಈಗ ಸಾಲಗಾರ ವೃದ್ಧ ಆಗಿರುತ್ತದೆ. ಸಾಲ ತೀರಿಸಲಿಕ್ಕೆ ೧೫೦ ರೂಪಾಯಿಗಳು ಬೇಕಾಗಿರುತ್ತದೆ. ಈ ರೂಪಾಯಿಗಳನ್ನು ನೀನು ಈ ನೋಟೀಸು ಮಟ್ಟಿದ(೮) ದಿವಸದೊಳಗಾಗಿ ಬಂದು ಸಾಲ ತೀರಿಸಿ ನನ್ನನ್ನು ಕರಕೊಂಡು ಹೋಗಬೇಕು. ಹೋಗದಿದ್ದರೆ ನಾನು ಯಾರದನೇ ದವರನ್ನು ಮಾಡಿಕೊಂಡು ಹೋಗಿ ಅವರ ಸಾಲ ತೀರಿಸಿಕೊಳ್ಳುತ್ತೇನೆ. ಇದೇ ಸೋಡಚೀಟಿ ಅಂತ ತಿಳಕೊಳ್ಳಬೇಕು.

ಯಡಗೈ ಹೆಬ್ಬೊಟ್ಟಿನ ಗುರ್ತ ಯಲ್ಲವ್ವ ಕೋಂ ಫಕೀರಪ್ಪ ವೃಪ್ಪಾರ ಸಾಕೀನ ಬೆಳವಡಿ ತಾಲೂಕ ಹಾನಗಲ್ಲ ಈಕಿ ಮಾಡಿದ್ದು ಅದೆ.

ವಿಜಯದ ವರ್ಗಣಿ ದರ

....(೦)...

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨ ೩-೧
೬ ,,	೭-೧-೪
೩ ,,	೪-೮-೨
ವಾರ ಪತ್ರಿಕೆಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿಗಳಿಗಾಗಿ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1449

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ರವಿವಾರ ತಾರೀಖು ೨೭ ನೇ ಸಪ್ಟಂಬರ ೧೯೩೧ (ಸಂಚಿಕೆ ೨೧೪

ದಿ ಧಾರವಾಡ ಅರ್ಬನ [illegible]

ಆಪರೇಟಿವ್ [illegible] ಲಿಮಿಟೆಡ

ಮಂಗಳವಾರ [illegible]

ಕೋ-ಆಪರೇಟಿವ್ [illegible] ಆಕ್ಟ ಪ್ರಕಾರ [illegible]

ಕರ್ನಾಟಕದಲ್ಲಿ [illegible] ಪ್ರಕಾರದಲ್ಲಿ ಶ್ರೇಷ್ಠ [illegible]

[illegible]ಗಳಿಗೆಯು ಎಂದರೆ [illegible], ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಿಕೊಳ್ಳಬೇಕು.

ಮ್ಯಾನೇಜಿಂಗ ಡಾಯರೆಕ್ಟರ

— —

ಮೈಸೂರು ಊದುಬತ್ತಿ

ಪದ್ಮ ಊಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ ೨—೦—೦

ಕೃಷ್ಣ ಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೮

೧೯-೧೧-೩೯ ಮೈಸೂರ ಸ್ಟೋರ,

ಬೆಳಗಾವಿಯವರಗಲ್ಲಿ

ಕನ್ನಡಿಗ

ಇದೇ ಅನಂತಚತುರ್ದಶಿಯಿಂದ ಪ್ರಾರಂಭವಾಗುವದು. ಕಾಯುದೆಭಂಗ ಚಳವಳಿಯಲ್ಲಿ ಕನ್ನಡಿಗರ ಸೇವೆಯನ್ನು ಅತಿ ಉತ್ಸಾಹದಿಂದ ನೆರವೇರಿಸಿ ಕೆಲವು ಕಾರಣಗಳ ಮೂಲಕ ನಿಂತು ಹೋದ ಕನ್ನಡಿಗ ಪತ್ರಿಕೆಯು ಇದೇ ಅನಂತಚತುರ್ದಶಿಯಿಂದ ಪುನಃ ಪ್ರಾರಂಭವಾಗುವದು. ದುಂಡು ಮೇಜ ಪರಿಷತ್ತಿನಲ್ಲಿ ಜರಗುವ ಮಹತ್ವದ ಸುದ್ದಿಗಳನ್ನು ತಿಳಿದುಕೊಳ್ಳಬೇಕಾದರೆ ಈ ಪತ್ರಿಕೆಯನ್ನು ಓದಿ ನೋಡಿರಿ ಪ್ರತಿದಿನವೂ ಮಹತ್ವದ ಸಂಗತಿ ಸಮಾಚಾರಗಳು ಇದರಲ್ಲಿ ಕೊಡಲ್ಪಡುವವು. ಡೆಮಿ ೪ ಪುಟ ಬೆಲೆ ೩ ಪೈ ಏಜಂಟರಿಗೆ ಧಾರಾಳವಾದ ಕಮೀಶನ್ ಕೊಡಲಾಗುವದು ಚಿಲ್ಲರೆ ವ್ಯಾಪಾರಿಗಳಿಗೆ ಒಳ್ಳೇ ಸುಸಂಧಿ ಗ್ರಾಹಕರು ತ್ವರೆಮಾಡಬೇಕು.

ವ್ಯಾನೇಜರ

ಕನ್ನಡಿಗ, ಬಾಗಲಕೋಟೆ

ನೋಟೀಸಿನ ದರಗಳು

ಸಿಂಗಲ ಕಾಲಮ [illegible] ಹತ್ತು ವಳಿಗಳಿಗೆ ಒಂದು ರೂಪಾಯಿ, ಮುಂದ [illegible] ಯೊಂದು ವಳಿಗೆ ಒಂದು ವರೇ [illegible] ಇಂಗ್ಲಿಷ [illegible]ಯೊಂದು ವಳಿಗೆ ಐದು ಆಣೆ ಸರಕಾರಿ [illegible] ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಂಪ್ರತ ಮೂರಾಣೆ ಇಂಗ್ಲಿಷಿನ ಅವತರಿಸಿ ಕನ್ನಡದಲ್ಲಿ [illegible] ವಿದ್ದರೆ ಎರಡು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕನಗಿನ ಪತ್ರಿಕೆ ಪತ್ರ ವ್ಯವಹಾರ ಮಾಡಬಹುದು.

ಜಿ. ಕಾಂಗ್ರೆಸ ಕಮೀಟಿ ಧಾರವಾಡ

ತಾ|| ೨೩-೯-೧೯೩೧

....(೦)....

ಸಪ್ರೇಮ ವಂದನೆಗಳು:—

ಬರುವ ಗಾಂಧೀ ಜಯಂತಿ ವಾರದಲ್ಲಿ ಖಾದೀ ಮಾರಾಟದ ಕಾರ್ಯವನ್ನು ಪ್ರಮುಖವಾಗಿ ಮಾಡಬೇಕೆಂದು ರಾಷ್ಟ್ರಪತಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಪ್ರಸಿದ್ಧ ಪಡಿಸಿದ ಆಜ್ಞಾಪತ್ರಿಕೆಯನ್ನು ನೀವು ಓದಿರುವಿರಿ. ಅದರಂತೆ ಧಾರವಾಡದಲ್ಲಿಯಾದರೂ ನಮ್ಮ ಶಕ್ತಿಮೀರಿ ದುಡಿದು ರಾಷ್ಟ್ರಪತಿಗಳ ಆಜ್ಞೆಯನ್ನು ಮನ್ನಿಸುವದು ನಮ್ಮ ಕರ್ತವ್ಯವಾಗಿದೆ.

ಗಾಂಧೀಜಯಂತೀ ವಾರದಲ್ಲಿ ಧಾರವಾಡದಲ್ಲಿ ಮನೆಮನೆಗೂ ಹೋಗಿ ಖಾದಿಯನ್ನು ಮಾರಬೇಕಾಗುವದು. ಅದರಂತೆಯೇ ನಮ್ಮ ಮಿತ್ರರಿಗೂ ಆಗ್ರಹದಿಂದ ಆ ವಾರದಲ್ಲಿ ಖಾದಿಯನ್ನು ಕೊಳ್ಳಲು ಮನವೊಲಿಸಬೇಕಾಗುವದು.

ಈ ಪವಿತ್ರ ಕಾರ್ಯದಲ್ಲಿ ನಿಮ್ಮ ನೆರವು ಸವಗೆ ಪೂರ್ಣವಾಗಿ ದೊರೆಯುವದೆಂದು ನಂಬಿದ್ದೇನೆ. ಈ ಕಾರ್ಯಕ್ಕಾಗಿ ನೀವು ಗಾಂಧೀವಾರದಲ್ಲಿ ಎಷ್ಟು ವೇಳೆ ಅರ್ಪಿಸಬಹುದೆಂಬುದನ್ನು ಜಿ. ಕಮೀಟಿಯ ಕಾರ್ಯದರ್ಶಿಗಳಿಗೆ ತಿಳಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಎಲ್ಲರೂ ನೆರವಾದ ಹೊರತು ಈ ಕಾರ್ಯವು ಯಶಸ್ವಿಯಾಗಲಾರದೆಂಬುದನ್ನು ಹೇಳಬೇಕಾಗಿ ಬರೆಯಬೇಕಾಗಿಲ್ಲ.

ತಮ್ಮ ವಿಧೇಯ

ದತ್ತಾತ್ರಯ ಕರಮರಕರ

ವಿಜಯ.

ತಾರೀಖು ೨೬-೯-೧೯೩೧ನೇ ಇಸ್ವಿ

ಶ್ರೀನಗರದಲ್ಲಿ ಮುಸಲಮಾನರ ಹೋರಾಟಿಕೆ

ಸಂಸ್ಥಾನವನ್ನು ಬಿಟ್ಟು ಹೋಗುವವರ [illegible]

ಕಾಶ್ಮೀರದ ರಾಜಧಾನಿಯಾದ ಶ್ರೀನಗರದಲ್ಲಿ ಮುಸಲಮಾನರು ತುರಂಗದ ಬಾಗಿಲದಲ್ಲಿ ದಂಗೆ ಮಾಡಿ, ಅನೇಕ ಜನರ ಪ್ರಾಣಾಹುತಿ ಕೊಟ್ಟ ತರುವಾಯ- ಅಲ್ಲಿಯ ಸರಕಾರದ ವಿರುದ್ಧ ಬಹುವಾಗಿ ಅತ್ಯಾಚಾರಗಳನ್ನು ನಡೆಸಿದ್ದಾರೆ. ಸಂಸ್ಥಾನದ ಹೊರಗಿನ ಮುಸಲಮಾನರು ಕಾಶ್ಮೀರ ದಿವಸವನ್ನಾಚರಿಸಿ, ದರಬಾರವನ್ನು ನಿಂದಿಸಿದರು. ಕೆಲವರು ಜಾಥಾ ಕೂಡಿಸಿ, ಸಂಸ್ಥಾನದಲ್ಲಿ ಸತ್ಯಾಗ್ರಹ ಮಾಡಬೇಕೆಂದಿದ್ದರು. ಆ ಜಾಥಾ ಕಾಶ್ಮೀರ ದೇಶದ ಗಡಿಯವರೆಗೆ ಹೋಗಿ, ಹಿಂದಿರುಗಿತು.

ಶ್ರೀನಗರದಲ್ಲಿರುವ ಮುಸಲಮಾನರು ರಾಜದ್ರೋಹವೆನಿಸುವಂಥ ಭಾಷಣಗಳನ್ನು ನಿರ್ಭಯದಿಂದ ಮಾಡುತ್ತಲಿದ್ದಾರೆ. ಕುರಾನ ತುರಂಗದಲ್ಲಿ ಕೊಟ್ಟಿದ್ದಿಲ್ಲವೆಂಬುದನ್ನು ಮರೆತೇ ಬಿಟ್ಟಿದ್ದಾರೆ. ಸರಕಾರದವರು ಈ ಆರೋಪಕ್ಕಾಗಿ ಒಬ್ಬನನ್ನು ಹಿಡಿದರು, ಆತನ ತರುವಾಯ ಮತ್ತೊಬ್ಬನನ್ನು ಹಿಡಿದರು. ಇದರಿಂದ ಮುಸಲಮಾನರು ಬುದ್ಧಿಗಲಿಯದೆ, ಸರಕಾರದ ವಿರುದ್ಧ ಭಯಂಕರ ಚಳವಳಿ ನಡೆಸಿದರು. ಕಡೆಗೆ ಬುಧವಾರವಂತೂ ಊರ ತುಂಬ ಹರತಾಳ ಮಾಡಿ, ಹುತಾತ್ಮರ ಮೆರವಣಿಗೆ ತೆಗೆಯಬೇಕೆಂದರು. ಇದರ ಬುಡದಲ್ಲಿ ರಾಜದ್ರೋಹದ ಉದ್ದೇಶ ಸಾಧನವಿಲ್ಲದೆ, ಈ ಆಟಿಕೆ ನಡೆಯುವದೇ ಇಲ್ಲವೆಂದು ದರಬಾರಿನವರ ತಿಳುವಳಿಕೆಯಾದ್ದರಿಂದ, ಅವರು ಅವು ಹೊರಡದಂತೆ ನುಡಿದು ಹೊರಟರು- ಅವರನ್ನು ಅಲ್ಲಿಂದಲೇ ಚದರಿಸಿ ಬಿಡುವಂತೆ ಬಂದೋಬಸ್ತು ಮಾಡಿದ್ದರಿಂದ, ಅವು ಹೊರಡಲಿಲ್ಲ.

ಮೆರವಣಿಗೆಯನ್ನು ಹೊರಡಿಸಬಾರದೆಂದು ಸರಕಾರದವರು ಜಾಹೀರನಾಮೆ ತೆಗೆದು, ತಂಬೂರಿ ಸಾರಿ, ಊರ ತುಂಬ ಹೇಳಿಕೆ ಕೊಟ್ಟರೂ, ಜುಮ್ಮಾ ಮಸೀದೆಯಲ್ಲಿ ಸಾವಿರಾರು ಜನರು ಸೇರಿದ್ದರು. ಅಂದೇನು ನಮಾಜದ ದಿವಸವಲ್ಲ. ಕೂಡಿದ ಜನರು ಪೋಲೀಸ ದಳದ ಮತ್ತು ಫೌಜಿ ಕಾವಲಗಾರರ ಮೇಲೆ ಕಲ್ಲು ದುಂಡಿಗಳನ್ನು ಒಗೆಯಹತ್ತಿದರು. ಬರಿಗೈ ಜನರನ್ನು [illegible] ಪ್ರಾರಂಭವಾಗಿದ್ದರು. ಇಬ್ಬರು ಸಿಪಾಯಿಗಳು [illegible] ಹೋಗಿದ್ದರು. ಆಗ ಸರಕಾರದ ಪಕ್ಷದವರಿಗೆ ಗುಂಡು ಅನಿವಾರ್ಯವಾಗಿ ಅಪ್ಪಣೆ ಕೊಡಬೇಕಾಗಿ ಹಾರಿಸಬೇಕಾಯಿತು. ಗುಂಡಿನಿಂದ ನಾಲ್ವರು ಸತ್ತರು. ಅನೇಕ ಜನರು ಗಾಯವಾಗಿದ್ದಾರೆ. ಸರಕಾರದ ಪಕ್ಷದಲ್ಲಿ ಮೇಲೆ ಹೇಳಿದ ಇಬ್ಬರು ಸಿಪಾಯಿಗಳು ಹೊಡಿಸಿಕೊಂಡು ಮರಣದ ದಾರಿಯನ್ನು ನೋಡುತ್ತಿದ್ದಾರೆ. ಇಬ್ಬರು ಸೈನಿಕರು ಭಯಂಕರ ಗಾಯವಾಗಿದ್ದಾರೆ. ರಾವುತರ ಕುದುರೆಗಳೂ ಕಲ್ಲಿನ ಮಳೆಯಲ್ಲಿ ಸಿಕ್ಕು ಗಾಯವಾಗಿವೆ. ಇವರ ಒಟ್ಟು ಸಂಖ್ಯೆಯು ೭೯ ಆಗಿರುತ್ತದೆ.

ಮುಸಲಮಾನರು ಗುಂಡಿನಿಂದ ಸತ್ತ ಜನರ ಮೆರವಣಿಗೆಯನ್ನು ಮಸೀದೆಯಿಂದ ತೆಗೆಯಬೇಕೆಂದಿದ್ದರು. ಅದಕ್ಕೆ ಪೋಲೀಸರು ಒಪ್ಪಿಗೆ ಕೊಡಲಿಲ್ಲ. ಬಳಿಕ, ಹೆಣಗಳ ಮೆರವಣಿಗೆಯನ್ನು ಅರಮನೆಗೆ ಒಯ್ಯಬೇಕೆಂದರು. ಅದಕ್ಕೂ ಒಪ್ಪಲಿಲ್ಲ. ಹೆಣಗಳ ಮೆರವಣಿಗೆಯು ಅರಮನೆಗೇಕೆಂಬ ಪ್ರಶ್ನವನ್ನು ಯಾರಾದರೂ ಕೇಳಬಹುದು. ಪೋಲೀಸರು ಹುಂಬ ಜನರ ಯಾವ ಆಟವನ್ನೂ ನಡೆಯಗೊಡದಾಗಲು- ಮಸೀದೆಯ ಹತ್ತರವೇ ಇದ್ದ ಒಂದು ಕಬರಸ್ಥಾನದಲ್ಲಿ, ಹುಗಿದರು. ಇಲ್ಲಿಗೆ ಸದ್ಯದಲ್ಲಿ ಈ ಹೋರಾಟಿಕೆಯು ನಿಂತಿರುತ್ತದೆ.

ಮುಸಲಮಾನರ ಹೋರಾಟಿಕೆಯನ್ನು ಕುರಿತು ದರಬಾರಿನವರು ಒಂದು ಲೇಖವನ್ನು ಪ್ರಸಿದ್ಧ ಮಾಡಿ, ಮುಸಲಮಾನರ ಉದ್ದೇಶವು ಹಿಂದೂ ಅರಸರ ಅರಸೊತ್ತಿಗೆಯನ್ನು ಬುಡಮೇಲು ಮಾಡುವದಾಗಿರುತ್ತದೆಂದು ಸ್ಪಷ್ಟವಾಗಿ ಅಂದಿದ್ದಾರೆ. ಈಗಿನ ಮನ್ವಂತರದಲ್ಲಿ ಹೀಗೆ ಸಂಸ್ಥಾನಗಳು ಬುಡಮೇಲಾಗುವದಿಲ್ಲ. ಅದಕ್ಕಾಗಿ ಸುಮ್ಮನೆ ಪ್ರಾಣಹಾನಿ ಮಾಡಿಕೊಳ್ಳುವದಾಗುತ್ತದೆಂಬದನ್ನು ರೌಂಡ ಟೇಬಲಕ್ಕೆ ಹೋದ ಮುಸಲಮಾನ ಮುಖಂಡರು ಅವರಿಗೆ ತಾರಿನಿಂದ ಬುದ್ಧಿ ಹೇಳುವದು ತೀರ ಅವಶ್ಯವಾಗಿರುತ್ತದೆ.

ಮಹಾತ್ಮರ ಪರಮಶಿಷ್ಯರಾದ ಮೀರಾ ಬಾಯಿಯು ತಾಯಿಯು ಬಂದೂವರೆ ಲಕ್ಷ ರೂಪಾಯಿಗಳ ಮೃತ್ಯುಪತ್ರ ಮಾಡಿ, ಅದನ್ನೆಲ್ಲ ಮೀರಾಬಾಯಿಯ ತಂಗಿಗೆ ಕೊಟ್ಟಳು. ಇದರ ಅರ್ಧವು ಮೀರಾಬಾಯಿಗೆ ದೊರೆಯಬೇಕಾಗಿತ್ತು. ಐಹಿಕ ಸರ್ವ ಸುಖಗಳನ್ನು ತ್ಯಜಿಸಿ ಪಂಚೇಂದ್ರಿಯಗಳನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುವಂಥ ದರಿದ್ರಳಿಗೆ ಈ ಧನದೊಡನೆ ಏನು ಬೇಕಾಗಿಲ್ಲೆಂದು ಹೇಳಿ, ಬಾಯಿಯು ಆ ದ್ರವ್ಯದ ಪಾಲನ್ನು ಬಿಟ್ಟು ಬಿಟ್ಟಳು.

ಮಹಾತ್ಮರು ದರಿದ್ರನಾರಾಯಣರೇಕಾದರು?

(೨)

ನಾವೇಕೆ ದರಿದ್ರನಾರಾಯಣನ ಅವತಾರ ಹೊಂದಬೇಕಾಯಿತೆಂಬುದನ್ನು ಮಹಾತ್ಮರು ಲಂಡನ್ನದಲ್ಲಿ ಫ್ರೆಂಡ್ಸ್ [illegible] ಎಂಬ ಸಂಘದ ಸಭೆಯಲ್ಲಿ ಹೇಳಿದ್ದಾರೆ:—

ನಾನು ರಾಜಕಾರಣದಲ್ಲಿ ಸೇರುವಾಗ ದರಿದ್ರನಾರಾಯಣನ ವ್ರತ ಹಿಡಿಯಲೇ ಬೇಕಾಯಿತು. ರಾಜಕಾರಣದಲ್ಲಿ ಪ್ರಸಂಗಾನುಸಾರ ಸುಳ್ಳು ಹೇಳಬೇಕಾಗುತ್ತದೆ. ಅನೀತಿಯ ಮಾರ್ಗವನ್ನೂ ಅವಲಂಬಿಸಬೇಕಾಗುತ್ತದೆ. ನನಗೆ ಇವೆರಡೂ ಕಲಂಕ ಹತ್ತಬಾರದೆಂದು ದ್ರವ್ಯದ ಲೋಭವನ್ನೇ ಬಿಟ್ಟುಕೊಟ್ಟೆನು. ನನ್ನ ರಾಜಕೀಯ ಧಾರ್ಮಿಕವಾಗಿದೆ. ಇಲ್ಲಿ ಧಾರ್ಮಿಕ ರಾಜಕಾರಣವನ್ನು ಕುರಿತು ಭಾಷಣ ಮಾಡುವದು ರೌಂಡ ಟೇಬಲಿನ ಒಂದಂಗವಾಗುತ್ತದೆ. ಇದು ನೋಡಿರಿ. ಎಲ್ಲರಿಗೂ ಸಂಪತ್ತು ದೊರೆಯುವದು ಶಕ್ಯವಲ್ಲ. ಎಲ್ಲರೂ ಸಿರಿವಂತರಾಗಲಾರರು. ಇದರ ವಿರುದ್ಧ ಎಲ್ಲರೂ ತಮ್ಮ ಜಿಂದಗಿಯ ಕೆಲವಂಶವಾದರೂ ಕಡಿಮೆ ಮಾಡಿಕೊಳ್ಳಬಹುದು. ಪ್ರತಿಯೊಬ್ಬನು ತನ್ನ ಅಪೇಕ್ಷೆಯಷ್ಟು ಅನ್ನ ಕಡಿಮೆ ಮಾಡಿಕೊಳ್ಳಲು ಸಮರ್ಥನಾಗಿದ್ದಾನೆ. ಆದರೆ ನಾನು ಎಲ್ಲರಿಗೂ ನಾದಾರಿಯಾಗಿರೆಂದು ಹೇಳುವದಿಲ್ಲ. ಉಪದೇಶ ಮಾಡುವದಿಲ್ಲ. ದೇಶದ ಸಾಂಪತ್ತಿಕ ಸ್ಥಿತಿಯು ಅತ್ಯಂತವಾಗಿ ನಿಕೃಷ್ಟವಾಗಿರುತ್ತದೆ. ಶ್ರೀಮಂತರಿದ್ದವರು ತಮ್ಮ ಯೋಗ್ಯತೆಯ ಪ್ರಕಾರ ಅರ್ಥತ್ಯಾಗ ಮಾಡುವದಾದರೆ- ಜಗತ್ತಿನಲ್ಲಿಯ ಒಡೆತನದ ಪ್ರಶ್ನವು ತಾನಾಗಿ ಬಿಡುವದು."

ಹಿಂದೂ ಧರ್ಮಶಾಸ್ತ್ರಪ್ರಕಾರ ಪ್ರತಿಯೊಬ್ಬನು ತನ್ನ ಗಳಿಕೆಯ ದಶಾಂಶವನ್ನು ದಾನಧರ್ಮದಲ್ಲಿ ವ್ಯಯಮಾಡಬೇಕೆಂದು ಹೇಳಿರುತ್ತದೆ. ಯಾವನೊಬ್ಬನು ತನ್ನ ಗಳಿಕೆಯ ಕೆಲ ಭಾಗವನ್ನು ಅಪವ್ಯಯ ಮಾಡುತ್ತಾನೆ. ಅನುತ್ಪಾದಕ ಕಾರ್ಯದಲ್ಲಿ ಹಾಕುತ್ತಾನೆ. ವ್ಯಸನಕ್ಕೆ ಹೋಗುವದಂತೂ ಬೇರೆ. ಆತನು ದರಿದ್ರನಾರಾಯಣರ ಸೇವೆಗಾಗಿ ಅಂದೇ ಕೆಲ ಹಣವನ್ನು ವೆಚ್ಚಮಾಡುವದಾದರೆ- ಹಿಂದೂಸ್ಥಾನ ಮಾತ್ರವಲ್ಲ. ಜಗತ್ತಿನ ಕಲ್ಯಾಣಕ್ಕೇ ಸೇವಾದಂತಾಗುತ್ತದೆ.

ಮಹಾತ್ಮರ ವರ್ಧಂತ್ಯುತ್ಸವದ ವಾರದಲ್ಲಿ ಹತ್ತು ರೂಪಾಯಿಗಳ ಖಾದೀ ಕೊಳ್ಳಿರಿ. ಇಂಥ ಹತ್ತು ಸಾವಿರ ಜನರು ಕರ್ನಾಟಕದಲ್ಲಿ ಹೊರಡಲೆಂದು ಶ್ರೀ. ಸದಾಶಿವರಾವ ಕರ್ನಾಡ ಮತ್ತು ಶ್ರೀ. ಗಂಗಾಧರರಾವ ದೇಶಪಾಂಡೆಯವರು ಒಂದು ವಿನಂತಿ ಪತ್ರ ತೆಗೆದಿದ್ದಾರೆ. ಆ ಪ್ರಕಾರ

ಹಿಂದಿನ ಕಾಲದ ಕೆಲವು ಜನಸಂಖ್ಯೆಯುಳ್ಳ ಕರ್ನಾಟಕದಲ್ಲಿ ಹತ್ತು ಸಾವಿರ ಜನರು ಜೋಡಿಸಿ ಈ ... ರು ಹೇಳಿದಂತೆ ಕೆಲ ಜನರು ತುಸುವಾದ ... ದರಿದ್ರನಾರಾಯಣರ ಸೇವೆ ಮಾಡಿದಂಥ ಸುಸ್ಕೃತ ಬಳ್ಳಿಯುವರು.

ಮಹಾತ್ಮರ ಇನ್ನೊಂದು ಘೋಷಣೆ

ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯ ಬೇಕು.

ಪಾರ್ಲಮೆಂಟ ಸಭೆಯಲ್ಲಿ ಆದರ ಮೆಂಬರರ ಮುಂದೆ ಮಹಾತ್ಮರು ಹಿಂದುಸ್ಥಾನದ ಸ್ವಾತಂತ್ರ್ಯ ಕುರಿತು ಭಾಷಣಮಾಡಿದರು. ಅದೇನಂದರೆ-

ಇಲ್ಲಿ ನಾನು ಕಾಂಗ್ರೆಸದ ಮತವನ್ನು ಹೇಳಲಿಕ್ಕೆ ಬಂದಿದ್ದೇನೆ ಸಂಪೂರ್ಣ ಸ್ವಾತಂತ್ರ್ಯವೆಂದರೆ- ಇಂಗ್ಲಂಡದ ಪಂಜು ಹಂಕಾರೂಸ್ಸುವದಲ್ಲ. ಎಲ್ಲರೂ ಒಂದೇ ದರ್ಜೆಯವರೆಂಬ ಸರಿಸಮಾನತ್ವ ತತ್ವವನ್ನು ಬಿಡತಕ್ಕದ್ದಲ್ಲ. ಹಿಂದಿನ ರಾಷ್ಟ್ರಸಭೆಯಲ್ಲಿ ಸೇಫಗಾರ್ಡ್ಸವೆಂದು ಹಿಂದುಸ್ಥಾನದ ರಕ್ಷಣೆಯು ಸ್ವಸ್ಥ, ಪರರಾಷ್ಟ್ರಗಳ ಸಂಬಂಧವಾದ ಕಾರಭಾರ ಮತ್ತು ಹಣದ ಬಾಬುಗಳನ್ನು ಬ್ರಿಟಿಶ ಸರಕಾರಕ್ಕೆ ಒಪ್ಪಿಸಿ ಕೊಡಲು ಸಿದ್ಧರಾಗಿದ್ದಾರೆ. ಈ ರೀತಿಯಾಗಿ ಕಾಂಗ್ರೆಸದ ಮತವಲ್ಲ. ಈ ಸೇಫಗಾರ್ಡ್ಸಗಳನ್ನು ಬಿಟ್ಟು ಕೊಟ್ಟ ಕಾಂಗ್ರೆಸವು ಸ್ವರಾಜ್ಯಕ್ಕೆ ಸಮಚ್ಛಾಯಾದ ಕಕ್ಷಿಗೆ ಬಾಯಿ ತೆರೆಯಲಾರದು. ನಾವು ಹಿಂದಿನಂತೆ ನಮ್ಮ ಸ್ವಸ್ಥದ ಅಧಿಪತಿಗಳ ದರ್ಜೆ ಹೊಂದಿಸಿದ ಒಳುವ ದಾಸಿಯ ಭಾವವೂ ಉಂಟಾಗದು. ಮತ್ತು ನಾವೂ ಆಳಿದೂ ಹೋಗಲಿರುವ ಇಂಥ ಅಂಜಿಕೆಯು ನಮಗಿರುವದೇ ಇಲ್ಲ. ಇಂಗ್ಲಿಷರಾದವುದಾರರು ಮತ್ತು ಸೋಲ್ಜರರು ಹಿಂದೂ ಪೇಲ್ವಿಚಾರಣೆಗೂ ... ಅವರಿಗೆ ಇಂದೇ ಹಿಂದುಸ್ಥಾನ ಬಿಟ್ಟು ಹೋಗುವ ಅವಶ್ಯಕತೆಯುಂಟಾಗುವದಿಲ್ಲ. ಇಂಗ್ಲಿಷ ಸಂಚಾರದಿ. ಸಿವ್ಹಿಲ ಸರ್ವಂಟರ ಕೂಡ ಮಾಡಿಕೊಂಡಿರುವ ಕರಾರುಗಳನ್ನು ಮುರಿಯುವದಕ್ಕೆ ಕಾಂಗ್ರೆಸವೆಂದೂ ಅಪೇಕ್ಷಿಸುವದಿಲ್ಲ. ಸಿವ್ಹಿಲ ಸರ್ವಂಟರು ಎಷ್ಟೇ ಬುದ್ಧಿವಂತರಾಗಲಿ; ಕರ್ತವ್ಯ ಪರಾಯಣರಾಗಲಿ, ಅವರಿಗೆ ಈಗ ದೊರೆಯುತ್ತಿರುವಂಥ ಸಂಬಳ ಕೊಡಲಿಕ್ಕೆ ಮಾತ್ರ ನಾವು ಸಿದ್ಧರಿಲ್ಲ. ಏಕೆಂದರೆ- ನೀವೇ ನೋಡಿರಿ, ಅಸಂಖ್ಯ ಬಡಜನರು ಉಪವಾಸದಿಂದ ಬಳಲುವದನ್ನೂ ಸಿವ್ಹಿಲ ಸರ್ವಂಟರು ತಕ್ಕೊಳ್ಳುವ ಸಂಬಳವನ್ನೂ ನೀವೇ ತುಲನೆ ಮಾಡಿ ನೋಡಿರಿ. ನಮ್ಮ ಸ್ವರಾಜ್ಯದಲ್ಲಿ ಯುರೋಪಿಯನ್ನರು ಸುಖವಾಗಿರಬಹುದು. ನಾವು ಹಿಂದುಸ್ಥಾನದ ಹಿತ್ತಿ... ಯಾಗಿ ... ತಮಗಾಗಿ ... ಸುರಕ್ಷಿತತೆಗಳ ಅಪೇಕ್ಷೆ ಮಾಡಬೇಕಾಗಲಾರದು ಮುಖ್ಯವಾಗಿ ಹಳ್ಳಿಗರ ಹಿತವೇ ಎಲ್ಲರ ವಿಚಾರವಾಗಿರಬೇಕಾಗಿರುತ್ತದೆ. ಇಂಗ್ಲಿಷ ಜನರ ದೊರೆತನವು ಹಿಂದುಸ್ಥಾನಕ್ಕೆ ಅಪಾಯವನ್ನುಂಟು ಮಾಡಿದೆಂಬದನ್ನು ಧ್ಯಾನದಲ್ಲಿಡಿರಿ. ಆ ರೀತಿ, ಇರಿಗೇಶನವನ್ನು ಬಿಟ್ಟಿನಿಂದ ರಾಜ್ಯಕಾರಭಾರ ... ಯ ದೆಣಿಸತಕ್ಕದ್ದಲ್ಲ. ಲ್ಯಾಂಕಾಶಾಯರದ ಅವೆಯು ಪಾಡಿಗಿಂತ ಅಗ್ಗವಿದ್ದರೂ, ಖಾದಿಯನ್ನೇ ಧರಿಸಿರೆಂದು ನಾನು ಹೇಳುತ್ತೇನೆಂದು ಹ್ಯಾಯರಸ್ಲೇ ಎಂಬ ಸಾಹೇಬರು ಪ್ರಶ್ನೆ ಮಾಡಿದ್ದಾರೆ ಸಾಹೇಬರು ತಮ್ಮ ಜನರು ಯಾವ ಬಟ್ಟೆ ತೊಟ್ಟದ್ದರೆಂಬದನ್ನು ನೋಡಲಿ. ನಾನು ಗುಲಾಮನಾದಂಥ ಬ್ರಿಟಿಶ ಪ್ರಜನಾಗಿರುವದಕ್ಕಿಂತ ಸ್ವತಂತ್ರನಾಗಿರುವದೇ ಲೇಸೆಂದು ತಿಳಿಯುತ್ತೇನೆ ಮುಂದೆ ದಿವಾಳಿ ತೆಗೆಯುವ ಸರಕಾರದ ಕೂಡ ನಾನು ಸಹಕಾರ ಮಾಡಲಾರೆನು. ನೀವು ನನ್ನ ಸ್ವತಂತ್ರದಲ್ಲಿ ಹಾಕಿರಿ ಅಥವಾ ಬೇರೆ ಸುಸ್ಥಿರ ... ಮೇಲೆ ಕೆಡುವಿರಿ ನಾನು ಗುಲಾಮಗಿರಿ ಸ್ಥಿತಿಯಲ್ಲಿ ನಿಮ್ಮ ಕೂಡ ಸಹಕಾರ ಮಾಡಲಾರೆನೆಂಬದನ್ನು ಖಂಡಿತವಾಗಿ ತಿಳಿಯಿರಿ.

ಧಾರವಾಡ ಜಿಲ್ಹೆಯಲ್ಲಿ ಬಾರಡೋಲಿಯು

—(೦)—

ಹೋದ ಗುರುವಾರ ದಿವಸ ಹುಬ್ಬಳ್ಳಿಯಲ್ಲಿ ಕೂಡಿದ್ದ ಧಾರವಾಡ ಜಿಲ್ಹೆಯ ಕಾಂಗ್ರೆಸ ಕಮೀಟಿಯ ಸಭೆಯಲ್ಲಿ ಧಾರವಾಡ ಜಿಲ್ಹೆಯಲ್ಲಿ ಹಿರೆಕೆರೂರ ತಾಲೂಕು ಮತ್ತು ಹಾವೇರಿ ತಾಲೂಕಿನಲ್ಲಿ ಹೊಸರಿತಿ ಗಸ್ತಿಪನ್ನು ಕರ್ನಾಟಕದ ಬಾರಡೋಲಿ ಮಾಡಬೇಕೆಂಬ ಠರಾವು ಪಾಸಾಯಿತು. ರಾಷ್ಟ್ರದ ಜದ ಹೊಸ ವ್ಯವಸ್ಥೆಯಿಂದ ಆಮಾ ಪ್ರಾಂತದ ಭಾಷೆಯಲ್ಲಿ ಗೀತೆ ಹಾಡಬೇಕೇ ಎಂಬ ವಿಚಾರಕ್ಕೆ ಸಂಶಯ ಬಂದಿತ್ತು. ಕನ್ನಡಿಗರು ಕರ್ನಾಟಕಾಂದೆ ಸೀ ಧನ್ಯಳೆಂಬ ಹಾಡನ್ನು ಹಾಡಬೇಕೆಂದು ಗೊತ್ತಾಯಿತು. ಹುಬ್ಬಳ್ಳಿಯಲ್ಲಿ ಪರದೇಶಿ ಅಂಗಡಿಗಳ ಮುಂದೆ ತಾಲೂಕ ಕಾಂಗ್ರೆಸ ಕಮೀಟಿಯವರು ಒಪ್ಪದಿದ್ದರೆ- ಜಿಲ್ಹಾ ಕಾಂಗ್ರೆಸ ಕಮೀಟಿಯವರು ಪಿಕೆಟಿಂಗ ಮಾಡಬೇಕೆಂದು ಗೊತ್ತಾಯಿತು. ಇವುಗಳ ಹೊರತು ಇನ್ನು ಕೆಲವು ಸಂಗತಿಗಳು ನಡೆದವು ಮುಖ್ಯವಾದಂಥವನ್ನಷ್ಟೇ ಕೊಟ್ಟಿದ್ದೇವೆ.

ಕಾಳು ಕಡಿ ಅಗ್ಗವಾದ್ದರಿಂದ, ಮತ್ತು ಬೇರೆ ಅನೇಕ ಕಾರಣಗಳ ಮೂಲಕ ರೈತರಲ್ಲಿ ಸತ್ವ ಉಳಿಯದ್ದರಿಂದ, ಹಸ್ತೆಯನ್ನು ರೂಪಾಯಿಯಲ್ಲಿ ನಾಲ್ಕಾಣೆ ಮಾಫಮಾಡಬೇಕೆಂಬ ಠರಾವು ಮುದ್ರಾಸದ ಕೌನ್ಸಿಲದಲ್ಲಿ ಬಂದಿತ್ತು.

ಕರ್ನಾಟಕ ಕಾಲೇಜದ ವಾರ್ಷಿಕ ವರ್ಧಂತ್ಯುತ್ಸವ.

---(೦) ..

ಈ ಸಲ ಕರ್ನಾಟಕ ಕಾಲೇಜದವರು ತಮ್ಮ ವಾರ್ಷಿಕ ವರ್ಧಂತಿಯನ್ನು ಬರುವ ಅಕ್ಟೋಬರ ತಾ. ೧ ಮತ್ತು ೨ ದಿವಸ ವಿಶೇಷ ವಿಜೃಂಭಣೆಯಿಂದ ಜರುಗಿಸುವರೆಂದು ಕೇಳುತ್ತೇವೆ ಉತ್ಸವಕಾಲಕ್ಕೆ ಆಂಧ್ರದ ವಿದ್ವನ್ಮಣಿಗಳೂ ಕೆಲ ಮೈಸೂರ ಸಂಸ್ಥಾನದ ಶಾಲಾಖಾತೆಯ ಡಿರೆಕ್ಟರರೂ, ಕೆಲಕಾಲ ಆಂಧ್ರ ವಿಶ್ವವಿದ್ಯಾಲಯದ ಚಾಲಕರೂ ಆದ ಶ್ರೀಯುತ ಸಿ ಆರ್. ರೆಡ್ಡಿಯವರು ಆಗಮಿಸತಕ್ಕವರಿದ್ದಾರೆ. ಹೋದ ವರ್ಷವೇ ಅವರು ಸತ್ಯಾಗ್ರಹಸಮರದ ಕಾಲಕ್ಕೆ ಸರಕಾರದ ದಬ್ಬಾಳಿಕೆಯ ನಿಷೇಧಾರ್ಥವಾಗಿ ತಮ್ಮ ಉಪಚಾಲಕತ್ವದ ಉಚ್ಚಸ್ಥಾನದ ರಾಜೀನಾಮೆಯನ್ನು ಕೊಟ್ಟ ಸಂಗತಿಯು ಇನ್ನೂ ಜನರ ಲಕ್ಷದಲ್ಲಿ ಸ್ಫುಟವಾಗಿದೆ ಈ ಮಹನೀಯರ ಉಪನ್ಯಾಸವನ್ನು ವಿದ್ಯಾಭಿಮಾನಿಗಳೆಲ್ಲರೂ ಕೇಳತಕ್ಕದ್ದಾಗಿದೆ. ಇದೇ ಮಹೋತ್ಸವದ ವೇಳೆಗೆ ಬೆಳಗಾವಿಯ ಸಿದ್ಧ ಗಾಯಕರಾದ ಬಿಲಾಯತ ಹುಸೇನರ ಗಾಯನವೂ ಆಗತಕ್ಕದ್ದಿದೆ. ಕಾಲೇಜದ ವಿದ್ಯಾರ್ಥಿಗಳು ಕನ್ನಡ, ಮರಾಠಿ, ಉರ್ದು, ಇಂಗ್ಲಿಷ ನಾಟಕಗಳನ್ನು ರಾತ್ರಿ ಕಾಲೇಜದಲ್ಲಿಯೇ ಅಭಿನಯಿಸಿ ತೋರಿಸುವವರಿದ್ದಾರೆ ಕಾಲೇಜದ ಎಲ್ಲ ಹಳೆ ವಿದ್ಯಾರ್ಥಿಗಳೂ, ಎಲ್ಲ ಹಿತಚಿಂತಕರೂ ನೆರವು ಸಮಾರಂಭಕ್ಕೆ ವಿಶೇಷ ಶೋಭನವನ್ನು ತರುವರೆಂದು ಕೋರುತ್ತೇವೆ.

ಬಂಗಾರದ ಕಂಟ್ರೋಲ

— (೦) —

ಮಹಾಯುದ್ಧಕಾಲದಲ್ಲಿ ಅಕ್ಕಿ ಕಲ್ಲೆ ಮುಂತಾದವುಗಳ ಕಂಟ್ರೋಲದಂತೆ ಪ್ರಸ್ತುತದ ಹಿಂದುಸ್ಥಾನ ಸರಕಾರದವರು ಬಂಗಾರದ ವಿಕ್ರಯ ಕಂಟ್ರೋಲ ಮಾಡಿ ಆದರ ಸರ್ವಾಧಿಕಾರವನ್ನು ಇಂಪೀರಿಯಲ ಬ್ಯಾಂಕಿಗೆ ಕೊಟ್ಟಿದ್ದಾರೆ. ಎನ್ನಿನ ಮುಂಬಯಿಯ ಧಾರಣೆಯು ... ಹಾಗಿತ್ತು.

ಧಾರವಾಡ

ಶ್ರೀ. ಕಮಲಾದೇವಿ ಚಟ್ಟೋಪಾಧ್ಯಾಯಿನಿಯವರು ಮಂಗಳವಾರ ದಿವಸ ಅಂಕೋಲೆಯಿಂದ ಇಲ್ಲಿಗೆ ಬರುವರು. ಹೆಣ್ಣುಮಕ್ಕಳ ವೇಯಿಂದ ಎರಡು ಹಾಗು ಪುರಷರ ದೆಸೆಯಿಂದ ಒಂದು ಈ ಪ್ರಕಾರ ಮೂರು ಅವರ ವ್ಯಾಖ್ಯಾನಗಳ ವ್ಯವಸ್ಥೆ ಮಾಡಲ್ಪಟ್ಟದೆ.

ಧಾರವಾಡ ದಸರಾ ನವಮೀ ಉತ್ಸವಮಂಡಲ

ಐತಿಹಾಸಿಕ ಪ್ರದರ್ಶನ ವಿಭಾಗ

ಕರ್ನಾಟಕ ಇತಿಹಾಸ

ಪ್ರೇಮಿಗಳಲ್ಲಿ ವಿಜ್ಞಪ್ತಿ

ಪ್ರತಿವಾರಿಯಂತೆ ಈ ಸಾರೆಯಾದರೂ ಧಾರವಾಡದ ನಾಗರಿಕರು ನಾಡಹಬ್ಬವಾದ ನವರಾತ್ರಿ ಉತ್ಸವವನ್ನು ಮಾಡಲುಪಕ್ರಮಿಸಿದುದು ಶ್ಲಾಘನೆಗೆ ಪಾತ್ರವಾಗಲಿಕ್ಕೆ ಸಾಕು. ಈ ಉತ್ಸವದ ಅಂಗವೆಂದು ಒಂದು ಐತಿಹಾಸಿಕ ಪ್ರದರ್ಶನವನ್ನು ಏರ್ಪಡಿಸುವದಿದೆ. ಈ ಪ್ರದರ್ಶನದಲ್ಲಿ ಕರ್ನಾಟಕ ಇತಿಹಾಸಕ್ಕೆ ಸಂಬಂಧಪಟ್ಟ ಹಳೆಯ ನಾಣ್ಯಗಳನ್ನು, ತಾಮ್ರಪಟಗಳನ್ನು ಹಸ್ತಲಿಖಿತ ತಾಡವಾಲೆ ಪುಸ್ತಕಗಳನ್ನು, ಮತ್ತು ಮೂರ್ತಿಗಳ ಚಿತ್ರಗಳನ್ನು ಪ್ರದರ್ಶನದಲ್ಲಿ ಇಡುವ ವ್ಯವಸ್ಥೆ ಮಾಡಿದೆ. ಇದಲ್ಲದೆ ಯಾವದೇ ರೀತಿಯಿಂದ ಜನರಲ್ಲಿ ಇತಿಹಾಸದ ಬಗ್ಗೆ ಉತ್ಸುಕತೆಯನ್ನು ಹುಟ್ಟಿಸುವಂತಹ ವಸ್ತುಗಳನ್ನಾದರೂ ಪ್ರದರ್ಶಿಸಲಾಗುವದು. ಒಟ್ಟಿನಮೇಲೆ ಪ್ರದರ್ಶನವು ಸರ್ವಾಂಗ ಸುಂದರವಾಗುವಂತೆ ಮಾಡಬೇಕೆಂದು ಈ ಶಾಖೆಯ ಕಾರ್ಯದರ್ಶಿಗಳ ಉತ್ಕಟ ಇಚ್ಛೆಯಿದೆ. ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದ ವಸ್ತುಗಳೇನಾದರೂ ತಮ್ಮ ಬಳಿಯುಳ್ಳವರು, ಅವನ್ನು ನಮ್ಮ ಕಡೆಗೆ ಪ್ರದರ್ಶನದಲ್ಲಿ ಇಡುವದಕ್ಕಾಗಿ ಕಳುಹಿಸಿಕೊಡಬೇಕೆಂದು ಬೇಡಿಕೊಳ್ಳುತ್ತೇವೆ. ಪ್ರದರ್ಶನವು ಮುಗಿದನಂತರ ಅವುಗಳನ್ನು ಸುರಕ್ಷಿತವಾಗಿ ಮುಟ್ಟಿಸುವ ಹೊಣೆಯನ್ನು ನಾವು ಹೊರುವೆವು. ಎಲ್ಲ ಇತಿಹಾಸಪ್ರೇಮಿಗಳೂ ತಮ್ಮ ಕೈಲಾದ ಮಟ್ಟಿಗೆ ಸಹಾಯ ಮಾಡಿದರೆ ಪ್ರದರ್ಶನವು ಯಶಸ್ವಿಯಾಗುವದರಲ್ಲಿ ಸಂದೇಹವಿಲ್ಲ.

ಪ್ರದರ್ಶನವು ಅಕ್ಟೋಬರ ತಿಂಗಳ ೧೦ ನೇ ತಾರೀಖಿಗೆ ಪ್ರಾರಂಭವಾಗಿ ದಸರೆಯವರೆಗೆ ಜರಗುವದು. ಪ್ರದರ್ಶನಕ್ಕೆ ಒಸವೆಗಳನ್ನು ಕಳಿಸಲಿಚ್ಛಿಸುವವರು ಅಕ್ಟೋಬರ ತಿಂಗಳ ೮ ನೆಯ ತಾರೀಖಿನೊಳಗಾಗಿ ಕಾರ್ಯದರ್ಶಿಗಳಿಗೆ ತಲುಪುವಂತೆ ಕಳಿಸಬೇಕು.

ನರಸಿಂಗರಾವ ಕವಲಾಪೂರ
ವಾ. ಶ್ರೀ. ರಾಜಪುರೋಹಿತ
ದತ್ತಾತ್ರೇಯ ಕರಮರಕ
ಕಾರ್ಯದರ್ಶಿಗಳು
ಐತಿಹಾಸಿಕ ಪ್ರದರ್ಶನ ವಿಭಾಗ

ವಿಜಯ ಪುಸ್ತಕಾಲಯ ಧಾರವಾಡ

ವಿಜಯ ಪುಸ್ತಕಾಲಯದಲ್ಲಿ ಮಾರಲಿಕ್ಕೆ ದೊರೆಯುವ ಪುಸ್ತಕಗಳ ಪಟ್ಟಿಯು.

" ಈ ಕೆಳಗೆ ಬರೆದ ೪೦ ಪುಸ್ತಕಗಳು ಮುಂಬಯಿ ವಿದ್ಯಾಖಾತೆಯವರಿಂದ ವಾಚನಾಲಯಗಳನ್ನು ಕೆಲವು ಪಠ್ಯಪುಸ್ತಕವಾಗಿಯೂ ಮಂಜೂರಾಗಿವೆ.

೧ ಶಬ್ದಾನುಶಾಸನ ೪ ರೂ.
೨ ರಘುವಂಶ ೧ ರಿಂದ ೧೯ ಸ್ವರ್ಗಪೂರ್ಣ ೨ ,,
೩ ಶ್ರೀ ವಿದ್ಯಾರಣ್ಯಸ್ವಾಮಿಗಳ ಚರಿತ್ರೆ ೧ ,,
೪ ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಚರಿತ್ರೆ ೧ ,,
೫ ರಾಮಾಶ್ವಮೇಧಸಾರ ಸಂಗ್ರಹ ೧ ,,
೬ ದುರ್ಗಸಿಂಹನ ಪಂಚತಂತ್ರ, ಸಾರ ೧ ,,
೭ ಉತ್ತರರಾಮ ಚರಿತ್ರೆ ೧೨ ಆಣೆ
೮ ರಾಣಾರಾಜಸಿಂಹ ೧೨ ,,
೯ ಶ್ರೇಯಃಸಾಧನ ೧೨ ,,
೧೦ ಪಾರ್ವತೀ ಪರಿಣಯ ನಾಟಕ ೧೨ ,,
೧೧ ಬಾಣಕಾದಂಬರಿ ೧೦ ,,
೧೨ ಸತ್ಯಕಥಾ ಕುಸುಮ ಮಂಜರಿ (IV) ೧೦ ,,
೧೩ ಪ್ರೇಮಮಂದಿರ ೮ ,,
೧೪ ಯಯಾತಿ ನಾಟಕ ೮ ,,
೧೫ ಮಾನಸಶಾಸ್ತ್ರ ೮ ,,
೧೬ ಗೃಹವೈದ್ಯಕ ೮ ,,
೧೭ ಮೋಹೀ ಸಿಂದಕ ನಡಾವಳಿ ೮ ,,
೧೮ ಸತ್ಯರಾಜಾ ಪೂರ್ವದೇಶದ ಯಾತ್ರೆ ಭಾಗ ೨ ೮ ಆಣೆ
೧೯ ಕಾಲಿದಾಸ ೬
೨೦ ಕರ್ನಾಟಕ ಸ್ವಪ್ನವಾಸವದತ್ತ ೬ ,,
೨೧ ಅಭಿಷೇಕ ನಾಟಕ ೬ ,,
೨೨ ಕಥಾಸರಿತ್ಸಾಗರ ೬ ,,
೨೩ ಹಜರತ ಮಹಮದ
೨ ಪೈಗಂಬರರ ಚರಿತ್ರೆ ೬
೪ ಬೇಗಮ್ ಸಮರು ೬
೨೫ ಅಮೇರಿಕದೊಳಗಿನ ಬಡ ವಿದ್ಯಾರ್ಥಿಗಳು ೫ ,,
೨೬ ಭೀಷ್ಮಾಚಾರ್ಯ ೫
೨೭ ವೇಣೀಬಂಧನ ೪ ,,
೨೮ ಪಂಡಿತ ರಾಜ ೪ ,,
೨೯ ಹರೀಶನ ಪ್ರೇಮ ೪ ,,
೩೦ ಸತಿಯೂ ಸುನೀತಿಯೂ ೪ ,,
೩೧ ಆರ್ಯರ ಶಿಕ್ಷಣಪದ್ಧತಿ ೪
೩೨ ಶೇರಶಹ ೪ ,,
೩೩ ಸತ್ಯಕಥಾ ಕುಸುಮಮಂಜರಿ ಭಾಗ ೩ ೪ ,,
೩೪ ವೇ ಪರಸ್ ೩ ,,
೩೫ ಕವಿಕಾರ್ಯ ಪ್ರಶಂಸೆ ೩ ,,
೩೬ ಕೌಸಲ್ಯಾಪರಿಣಯ ೩ ,,
೩೭ ಇಸೋಪನ ಚರಿತ್ರೆ ೩ ,,
೩೮ ಸುಭದ್ರಾಹರಣ ೨ ,,
೩೯ ಯಾರೂ ಅರಿಯದ ರಾಧೆ ೨ ,,
೪೦ ಕನ್ನಡ ಮಾತು ತಲೆ ಯೆತ್ತುವ ಬಗೆ ೧ ,,
೪೧ ರಾಮಾಯಣ ಕಥಾಮೃತ ಸಾರ ೧ ,,
೪೨ ಕರ್ನಾಟಕ ಕವಿಚರಿತ್ರೆ ,, ಭಾಗ ೧ ೪ ರೂ
೪೩ ,, ಭಾಗ ೨ ೫ ,,
೪೪ ,, ಭಾಗ ೩ ೪
೪೫ ಮಹಾರಾಣಿ ಲಕ್ಷ್ಮೀಬಾಯಿ ೧ ರೂ
೪೬ ಸಾವಿತ್ರೀ ಸತ್ಯವಾನ ೧೨ ಆಣೆ
೪೭ ಪದ್ಮಿನಿ ೧೨ ,,
೪೮ ಪಾರ್ವತಿ ೮ ,,
೪೯ ದಾಕ್ಷಾಯಿಣಿ ೮ ,,
೫೦ ಕವಿತಾ ಕುಸುಮಮಂಜರಿ ೧೦ ,,
೧೨ ಭಾಗ ,,

ಮಾರಾಟಕ್ಕೆ ಸಿದ್ಧವಾಗಿವೆ.

೧. ನರಗುಂದ ಬಂಡಾಯ ಪಂಡಿತ ಭೀ. ಜಿ. ಹುಲಿಕವಿ, [ಎಸ್. ಟೀ. ಸೀ.] ಜನರಿಗೆ ಉತ್ಸಾಹಕ್ಕೆ ಹುರುಪು ಕೊಡುವ ವಿಷಯದಿಂದ ತುಂಬಿತುಳುಕುತ್ತಲಿದೆ. ಒಂದೇ ರೂಪಾಯಿ

೨. ನಿಜವಾದ ವೀರ ಅಥವಾ ಜಗಮಲ್ಲ [ಶ್ರೀ. ಗು. ಫ. ಹಳಕಟ್ಟಿ,] ನಾಲ್ವತ್ತು ವರ್ಷಗಳಿಂದ ಸಾಹಿತ್ಯಸೇವೆಯನ್ನು ಮಾಡುತ್ತಲಿರುವ ಅನುಭವಿಕ ಲೇಖಕರು ಬರೆದ ಹೊಸ ಕಾದಂಬರಿ. ಒಂದೇ ರೂಪಾಯಿ

೩. ಜೈನಧರ್ಮ ಪರಿಭಾಷೆ. [ಪಂಡಿತ ಮ. ಪ್ರ. ಪೂಜಾರ,] ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ, ಸಾಮಾನ್ಯ ವಾಚಕರಿಗೂ ಉಪಯುಕ್ತವಾಗಿರುವ ಪಂಡಿತ ಪೂಜಾರರು ಬರೆದ ಅಪ್ರತಿಮ ಗ್ರಂಥ ೧—೪—೦

೪. ಶ್ರೀಹರ್ಷನೂ ಆತನ ನಾಟಕಗಳೂ [ನಾ. ವೆ. ಕುರಡಿ,] ಕುರಡಿಯವರ ಗ್ರಂಥಗಳು ಜನಾದರಕ್ಕೂ ಉತ್ತಮ ವರ್ಗಕ್ಕೆ ಸೇರಿದುವು. ೦—೧೦—೦

ಇದಲ್ಲದೆ ನಮ್ಮಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ, ಕಥೆ ಕಾದಂಬರಿಗಳೂ ಮಾರಲಿಕ್ಕೆ ಸಿಗುವವು ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ್ ಕೊಡುವೆವು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

R. N. B. 1443

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೩) ಧಾರವಾಡ ಸೋಮವಾರ ತಾರೀಖು ೨೮ ನೇ ಸಪ್ಟಂಬರ ೧೯೩೧ (ಸಂಚಿಕೆ ೨೧೯

The Asian Life Assurnance Co. Ltd
Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗ ಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೩೫,೦೦೦,೦೦ ಕಂಶದ ಉತ್ಪನ್ನ ರೂ. ೭೦೬,೦೦೦

ವಿಮೆಯ ಹಣ ತಿರಿಗಿ ಕೊಟ್ಟಿದ್ದು ೧೦,೦೦,೦೮೦

ಜಿಂದಿಗಿ ೨೫,೦೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕೆ. ವ್ಹಿ. ಹುಲಸೋಗಿ, ಬಿ. ಎ.
ಕುಲಕರ್ಣಿ. ಧಾರವಾಡದ ಏಜಂಟರು ಕರ್ನಾಟಕದ ಬ್ರಾಂಚ ಮ್ಯಾನೇಜರ
ಬಿ. ಎಚ್. ಪಾಟೀಲ ಹುಬಳಿಯ ಏಜಂಟರು—
ಹಾವೇರಿಯ ಚೀಫ ಏಜಂಟರು. ಶ್ರೀ. ಎಸ್. ಎಮ್. ದೊಡ್ಡವಾಡ ಮತ್ತು
ಶ್ರೀ. ಬಿ. ಟಿ. ಶಿರೋಳಕರ.

ಅನುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು
ಸೌಖ್ಯದಿಂದರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೦೦ ರೂ. ಗಳನ್ನ ಕೊಡುವಂಥ ಗೋಲ್ಡನ್ (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂಥಾ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ ಏಶಿಯನ ಕಂಪನಿಯೊಂದೇ ಆಗಿರುತ್ತದೆ.

ದಿ ಧಾರವಾಡ ಅರ್ಬನ ಕೋ ಅಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದಮೇಲುಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ವು ಮಾಡಲ್ಪಡುವದು. ಕಾಯಮು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಜಾಸ್ತಿಯಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವ ರಿಂದ ತಿಳಕೊಳ್ಳಬೇಕು.

ಮ್ಯಾನೆಜಿಂಗ ಡಾಯರೆಕ್ಟರ

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳವದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆ ಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆರೆ ೨೪ ತೊಲೆಯ ಸೇರು ೧ಕ್ಕೆ ೭—೨—೦
ಕೃಷ್ಣ ಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦

೧೯–೧೧–೩೯ ಮೈಸೂರ ಸ್ಟೋರ್ಸ,
ಬೆಳಗಾವಿಯವರಗಲ್ಲಿ
ಹುಬ್ಬಳ್ಳಿ

ವಿಜಯ.

ತಾರೀಖು ೨೮-೯-೧೯೩೧ನೇ ಇಸ್ವಿ

ಶ್ರೀನಗರದಲ್ಲಿ ಬಂಡಾಯದ ಕಾಯಿದೆ!!

ಮುಸಲಮಾನರ ಭಯಂಕರ ಪುಂಡಾಟಿಕೆ

—(೦)—

ಶ್ರೀನಗರದಲ್ಲಾದ ಮುಸಲಮಾನರ ಬಂಡಾಯು ಸ್ವರೂಪದ ಬೇಗೆಯು ಸಂಸ್ಥಾನದ ಹಲವು ಸ್ಥಳಗಳಲ್ಲಿ ಹಬ್ಬಿರುತ್ತದೆ. ನಗರದಿಂದ ೩೨ ಮೈಲುಗಳ ಮೇಲಿರುವ ಅನಂತನಾಗವೆಂಬಲ್ಲಿ ಮುಸಲಮಾನರು ದಂಡಿನವರ ಮೇಲೆ ದಾಳಿಯಿಟ್ಟು ಹೋಗಲು- ದಂಡಿನವರು ಆತ್ಮರಕ್ಷಣೆಯ ಉಪಾಯವೆಂದು ದಾಳಿಗಾರರ ಮೇಲೆ ಗುಂಡು ಹಾಕಿದರು. ಗುಂಡು ಭಯಂಕರವಾದ ಕೊಲೆಮಾಡಿತು. ೧೯ ಜನರು ಅಲ್ಲೇ ಸತ್ತು ಬಿದ್ದರು. ಈ ವರ್ತಮಾನ ಕೇಳಿ, ದರಬಾರಿನವರು ಆತ್ತ ಕಡೆಗೆ ಯಾರೂ ಹೋಗದಂತೆ ಬಂದುಬಸ್ತು ಮಾಡಿ, ಅವಶ್ಯವಾಗಿ ಹೋಗಬೇಕೆನ್ನುವಂಥವರಿಗೆ ಮಾತ್ರ ಪಾಸು ಕೊಡುವಂಥವರಾದರು.

ಶ್ರೀನಗರದಲ್ಲಿಯ ಹಾವಳಿಯಂತೂ ಭಯಂಕರವಾಗಿರುತ್ತದೆ. ಹೊರಗಿನಿಂದ ಊರವರ ಸಹಾಯಕ್ಕಾಗಿ ಸಾವಿರಾರು ಜನರು ಬಂದಿದ್ದಾರೆ ಏಳೆಂಟು ಸಾವಿರ ಜನರ ಜಮಾಯತ ಕೂಡಿದೆ. ಇಷ್ಟು ದೊಡ್ಡಗುಂಪು ನೋಡಿ, ಹಿಂದೂಜನರು ಹೌಹಾರುವದು ಸಹಜವು ಎಲ್ಲ ವ್ಯಾಪಾರ ಕಟ್ಟಾಗಿದೆ. ಮುಸಲಮಾನರ ಉಪಟಳಿಗೆಯನ್ನು ಹೇಳುವ ಕಾರು ಮುಂದೆ ಕೊಟ್ಟಂತಿರುತ್ತದೆ.

ಮೈಬರ ಮೊಹಲ್ಲಾದಲ್ಲಿ ೫೦ ಸಾವಿರ ಮುಸಲಮಾನರು ಕೂಡಿದ್ದಾರೆ. ದರಬಾರದವರು ಒಬ್ಬ ಚಳವಳಿಗಾರನನ್ನು ಹಿಡಿಯಬೇಕೆಂದು ವಾರಂಟು ತೆಗೆದಿದ್ದು, ಆ ವಾರಂಟಿನ ಪ್ರಕಾರ ಆತನನ್ನು ಹಿಡಿಯಬಾರದೆಂದು ಇಷ್ಟು ಜನರು ಆತನನ್ನು ಸುತ್ತು ಹಾಕಿಕೊಂಡಿದ್ದಾರೆ. ಕುಂಟ ಜನರು ಯುದ್ಧದಂಥ ಸಿದ್ಧತೆ ಮಾಡಿದ್ದಾರೆ. ಇವರು ಗಿಡಗಳನ್ನು ಕಡಿದು, ಅವುಗಳ ಬಡಿಗೆಗಳನ್ನು ಮಾಡಿದ್ದಾರೆ. ಕಂಚಿ, ಕಂಡಗೋಲು, ಒರ್ಚಿ, ಕತ್ತಿ, ಅಗ್ನಿಪ್ರಾಹಕ ದ್ರವ್ಯಗಳು ಇವನ್ನು ಸಜ್ಜುಗೊಳಿಸಿದ್ದಾರೆ. ಬಂದೂಕ ಇದ್ದಂಥ ಮುಸ್ಲಿಮರು ಜನರು ಹೊರಗಿನಿಂದ ಬಂದು ಇವರನ್ನು ಕೂಡಿಕೊಂಡಿದ್ದಾರೆ. ಆಂಗ್ರೇಜಿ ಸರಕಾರದವರು ಬ್ರಹ್ಮದೇಶದ ಬಂಡಾಯದ ದೆಸೆಯಿಂದ ತೆಗೆದಂಥ ಒಂದು, ಲಷ್ಕರೀ ಹುಕುಮು ತೆಗೆದು ಪೋಲಿಸ ಮತ್ತು ಮಿಲಿಟರಿಯವರಿಗೆ ಸ್ಪೇಶಲ ಅಧಿಕಾರ ಕೊಟ್ಟಿದ್ದಾರೆ

—

ಬಂಗಾರ ಬೆಳ್ಳಿಯ ಬೆಲೆಯು ಇನ್ನೂ ಏರಿತು?

—(೦)—

ಏಡು ದಿವಸಗಳಲ್ಲಿ ಬಂಗಾರವು ತೊಲೆಗೆ ೨೫ ಮತ್ತು ಬೆಳ್ಳಿಯು ನೂರು ತೊಲೆಗೆ ೫೦ ರೂಪಾಯಿ ಧಾರಣೆಯಾಯಿತು. ಮಹಾಯುದ್ಧದ ಕಾಲದಲ್ಲಿ ಬಂಗಾರವು ಮೂವತ್ತರ ಅಂಕೆಯನ್ನು ಮೀರಿ ಹೋಗಿತ್ತು. ಅದೇ ಪ್ರಕಾರ ಈಗಾಗುವದೋ ಎಂಬ ಸಂಶಯವಾಗಿರುತ್ತದೆ ಹೀಗೆ ಧಾರಣೆ ಏರುವದು; ಬಂಗಾರ ಮಾರುವವರಿಗೆ ಮಹದಾನಂದ. ಆದರೆ ಕೊಳ್ಳುವದು ಮಾತ್ರ ಕಷ್ಟ.

ಹಿಂದುಸ್ಥಾನ ಸರಕಾರದವರು ಬಂಗಾರವು ಸಿಕ್ಕಂತೆ ಮಾರಬಾರದೆಂದೂ, ಇದಷ್ಟು ಮಟ್ಟಿಗೆ ಪರದೇಶಕ್ಕೆ ಹೋಗಬಾರದೆಂದೂ ಆರ್ಡಿನನ್ಸ ತೆಗೆದಿದ್ದಾರೆ: ನಿತ್ಯದ ವ್ಯವಹಾರಕ್ಕೆ ಹತ್ತುವಷ್ಟು ಬಂಗಾರವನ್ನು ಬ್ಯಾಂಕುಗಳಲ್ಲಿ ಕೊಳ್ಳಲಿಕ್ಕೆ ಅಡ್ಡಿಯಿಲ್ಲ. ವ್ಯಾಪಾರ ಉದ್ದಿಮೆಯ ದೆಸೆಯಿಂದ ಪರದೇಶಕ್ಕೆ ಕಳಿಸಬೇಕೆಂಬದಕ್ಕೆ ಮಾತ್ರ ಬಂದುಬಸ್ತು ಮಾಡಿದ್ದಾರೆ. ಯಾವದೊಂದು ದೊಡ್ಡ ಬ್ಯಾಂಕಿನಲ್ಲಿ ೩೫೭೦೦೦ ಪೌಂಡು ಅಂದರೆ ಸರಾಸರಿ ನಾಲ್ಕು ಲಕ್ಷದ ಬಂಗಾರ ಕೊಂಡರೇ ಕೊಡುವರು ಅದು ಹಿಂದುಸ್ಥಾನದಲ್ಲಿ ಉಪಯೋಗ ಮಾಡುವದಕ್ಕೇ ಇರಬೇಕು. ಇವರು ಇದರ ಎಲ್ಲ ವ್ಯವಸ್ಥೆಯನ್ನು ಇಂಪಿರಿಯಲ ಬ್ಯಾಂಕಿಗೆ ಕೊಟ್ಟಿದ್ದನ್ನು ಈ ಮೊದಲು ಬರೆದಿದ್ದೇವೆ.

ಹಿಂದುಸ್ತಾನದಲ್ಲಿ ಅಂದರೆ- ಹಿಂದುಸ್ಥಾನ ಸರಕಾರದ ಭಂಡಾರದಲ್ಲಿ ಆಗಷ್ಟ ತಿಂಗಳ ೩೧ನೆಯ ತಾರೀಖಿನ ದಿವಸ ೬೫ ಕೋಟಿಯು ಚಿನ್ನವಿತ್ತು. ಅದು ಇದೇ ಸಪ್ಟಂಬರ ೨೧ನೆಯ ತಾರೀಖಿನ ದಿವಸ ೪೪ ಕೋಟಿಯದಾಗಿತ್ತು. ಹೀಗೆ ೪೧ ಕೋಟಿಯು ಹಿಂದುಸ್ಥಾನವನ್ನು ಕೈಬಿಟ್ಟು ಹೋಗಿರುತ್ತದೆ. ಹಿಂದೆಯಾದದ್ದು ಆಗಿ ಹೋಯಿತು. ಉಳಿದಿದ್ದಾದರೂ, ಈ ದೇಶಬಿಟ್ಟು ಹೋಗದಂತೆ ವ್ಯವಸ್ಥೆಗೊಳಿಸಬೇಕೆಂದು ಅಸೆಂಬ್ಲಿಯ ಮೆಂಬರರು ಕೋಶಾಧ್ಯಕ್ಷರಾದ ಸರ ಶುಸ್ಟರಸಾಹೇಬರಿಗೆ ಸೂಚನೆ ಮಾಡಿದ್ದು, ಅವರು ಸಹಾನುಭೂತಿಯಿಂದ ವಿಚಾರ ಮಾಡುವವೆಂದು ಯಾವಾಗಿನ ಪದ್ಧತಿ ಪ್ರಕಾರ ಆಶೀರ್ವಾದದ ಮಂತ್ರ ಹೇಳಿದ್ದಾರೆ.

ಲಂಡನದಲ್ಲಿ ಭಾರತ ಮಂತ್ರಿಯಾದ ಸರ ಹೋರ ಸಾಹೇಬರು ರಾವುಂಡ ಟೇಬಲಿನ ಪ್ರತಿನಿಧಿಗಳ ಮುಂದೆ ಇಂಗ್ಲಂಡ ಮತ್ತು ಹಿಂದುಸ್ಥಾನದಲ್ಲಿ ಈ ವಿಷಯವಾಗಿ ತೆಗೆದ ಆರ್ಡಿನನ್ಸುಗಳ ನಿರೂಪಣೆ ಮಾಡಿದರು. ನಿಮ್ಮ ಪೂರಾಣ ಮತ್ತು ಪುರುಷಾರ್ಥ ಕೇಳಿದೆವು, ಆದರಿಂದ ತಮ್ಮ ತೃಪ್ತಿಯಾಗಲಿಲ್ಲೆಂದು ಮಹಾತ್ಮರು ಸಾಹೇಬರ ಮೋರೆಯ ಮೇಲೆ ಸ್ಪಷ್ಟವಾಗಿ ಹೇಳಿದರು.

ಇಂಗ್ಲಂಡ ಸರಕಾರದವರು ಹಿಂದುಸ್ಥಾನದ ಹೆಸರಿನಿಂದ ತಮ್ಮ ಗಂಗಾಜಲಿಯಲ್ಲಿರುವ ಬಂಗಾರವನ್ನು ಉಪಯೋಗಿಸಿ, ತಮ್ಮ ಹೊತ್ತು ಸಾಗಿಸಿಕೊಳ್ಳಬೇಕೆಂದಿದ್ದಾರೆ. ಹಿಂದುಸ್ಥಾನದ ಹೆಸರಿನಿಂದ ನಾಣ್ಯ ಅಥವಾ ಪಟ್ಟಿಯ ರೂಪದಿಂದ ಬಂಗಾರಕ್ಕೆ ಅವರು ಕೈ ಹಚ್ಚಬಾರದೆಂದೂ, ಹಿಂದುಸ್ಥಾನದ ಹೊರಗೆ ಯಾವದೇ ಕಾರಣದಿಂದ ಬಂಗಾರ ಹೋಗಬಾರದೆಂದೂ ಹಿಂದೀ ಲೋಕಮತವಾಗಿರುತ್ತದೆ.

—

ಬೆಳ್ಳಿಯ ಧಾರಣೆಯು ದಿಕ್ಕಟ್ಟು ಏರಿತು

....(೦)....

ಬಂಗಾರದ ಧಾರಣೆ ಏರಿದಂತೆ ಬೆಳ್ಳಿಯ ಧಾರಣೆಯೂ ಏರಿತು. ಮುಂಬಯಿಯಲ್ಲಿ ಆರು ದಿವಸಗಳಲ್ಲಿ ೪೩ ಇದ್ದದ್ದು ೫೯ ಆಯಿತು ನಿನ್ನೆ ಸಾಯಂಕಾಲದಲ್ಲಿ ಒಂದು ವರ್ತಮಾನವಾಗಿದೆ ಸೋವಿಯಟ ಸರಕಾರದವರು ಇಂಗ್ಲಂಡಕ್ಕೆ ೨೦ ಸಾವಿರ ಚೀಪುಗಳನ್ನು ಕಳಿಸಿದ ವರ್ತಮಾನ ಬರಲು ಮುಂಬಯಿ ಪೇಟೆಯಲ್ಲಿ ಕೆಲ ಹೊತ್ತು ಧಾರಣೆ ಇಳಿಯಿತು. ಲಂಡನದಲ್ಲಿ ಅದರ ಧಾರಣೆಯು ೧೭೫. ನಿನ್ನೆ ಆದಂತೆ ವರ್ತಮಾನ ಬಂದ ಕೂಡಲೆ ಧಾರಣೆಯು ೫೯ ರ ತನಕ ಹೋಗಿ, ಸರಾಫ ಗಲ್ಲಿಯು ತುಂಬ ಕಳಕಳಿಕಾಯಿತು. ಮುಂದೆ ವ್ಯಾಪಾರ ಮಾಡುವದು ಭಯಾವಹವೆಂದು ಕಂಡು, ವ್ಯಾಪಾರವನ್ನೇ ನಿಲ್ಲಿಸಿದರು.

ಕಾಶಿಯಲ್ಲಿ ನಾರಾಯಣಮೂರ್ತಿ ಎಂಬವರೊಬ್ಬರು ಪ್ರೊಫೇಸರರು. ಇವರು ಭಯಂಕರ ಮನುಷ್ಯರು; ಬಾಂಬು ಮಾಡಿ, ಪೋಲಿಸ ಸ್ಟೇಶನದ ಮೇಲೆ ಒಗೆದರೆಂಬ ಆರೋಪ ಹೊರಿಸಿ, ಪೋಲಿಸರು ಇವರ ಮೇಲೆ ಖಟ್ಲೆ ಹಾಕಿದರು. ಮ್ಯಾಜಿಸ್ಟ್ರೇಟರು ಇವರಿಂದ ಒಳ್ಳೆ ನಡತೆಯ ಬಗ್ಗೆ ಒಂದು ವರ್ಷದ ಮುಚ್ಚಳಿಕೆ ಬರಿಸಿಕೊಂಡು ಇವರನ್ನು ಬಿಟ್ಟುಬಿಟ್ಟರು.

ಮ್ಯಾಂಚೆಸ್ಟರಕ್ಕೆ ಮಹಾತ್ಮರ ಪ್ರಯಾಣ

—(೦)—

ಲಂಡನದಲ್ಲಿ ಮಹಾತ್ಮರು ಲಾರ್ಡ ಅರ್ವಿನ್ನ ಸಾಹೇಬರ ಕೂಡ ಎರಡು ತಾಸುಗಳ ವರೆಗೆ ಭಾಷಣ ಮಾಡಿದನಂತರ ಮಹಾತ್ಮರು ಮ್ಯಾಂಚೆಸ್ಟರಕ್ಕೆ ಪ್ರಯಾಣ ಮಾಡಿದರು. ಆಗ ಸಾಯಂಕಾಲವಾಗಿತ್ತು. ಮಹಾತ್ಮರು ಮೂರನೇ ವರ್ಗದ ಡಬ್ಬಿಯಲ್ಲಿಯೇ ಪ್ರವಾಸ ಮಾಡಿದರು. ಓಂತಿಯಲ್ಲಿ ಜನರ ದಟ್ಟಣೆಯು ಬಹಳವಾಗಿತ್ತು. ಪಾರ್ಲಮೆಂಟಿನ ಮೆಂಬರರಿಗೆ ಸಹ ಅನುವು ಸಿಗಲಿಲ್ಲ.

—

ಮಹಾತ್ಮರು ತಮ್ಮ ಕೂಡ ಆಡಿನಹಾಲು ಮತ್ತು ಆ ಸಾಮಾನು ಒಯ್ದಿದ್ದಾರೆ. ಸಂಗಡ ದೀನಬಂಧು ಅಂಡ್ರ್ಯೂಜ, ಕುಮಾರಿ ಸ್ಲೇಡ, ಮಹಾದೇವ ದೇಸಾಯಿ, ಪ್ಯಾರೆಲಾಲ ಮತ್ತು ಇವರು ಸಂಗಡ ಹೋಲಿಸಿದ್ದರು. ಸ್ಟೇಶನದಲ್ಲಿ ಇವರ ಸಂರಕ್ಷಣೆಗಾಗಿ ಒಳ ಪೋಲೀಸರದೊಂದು ಕಂಪನಿಯನ್ನು ಕಾವಲಾಗಿಟ್ಟಿದ್ದರು.

—

ದಾರಿಗುಂಟ ಜನರು ದರ್ಶನೋತ್ಸುಕರಾಗಿ ಸ್ಟೇಶನಗಳಿಗೆ ಬಂದಿದ್ದರು. ರಾತ್ರಿ ಇರುವಾಗಲೇ ಬಂಡಿಯು ಮ್ಯಾಂಚೆಸ್ಟರ ಸೇರಿತು. ಆಗ ವಿದ್ಯುತ್ಪ್ರಕಾಶ ಕೆಡವಿ, ಇವರ ಛಾಯಾಚಿತ್ರ ತಕ್ಕೊಂಡರು. ವರ್ತಮಾನಪತ್ರಗಳ ಪ್ರತಿನಿಧಿಗಳ ದೊಡ್ಡ ಗುಂಪೇ ಸೇರಿತ್ತು.

—

ಮಹಾತ್ಮರು ಬಂಡಿ ಇಳಿದ ಕೂಡಲೆ, ಜಗಗಾಳಿಯಲ್ಲಿ ತಮ್ಮನ್ನು ಕಾಣಲಿಕ್ಕೆ ಕುತೂಹಲದಿಂದ ಬಂದವರಿಗೆ ಹಾಸ್ಯಮುಖದಿಂದ ವಂದನೆಗಳನ್ನರ್ಪಿಸಿದರು. ಮತ್ತು ಮೋಟಾರದಲ್ಲಿ ಕೂತು ಇಳಿದುಕೊಳ್ಳುವ ಸ್ಥಳಕ್ಕೆ ಹೋದರು.

—

ಮಹಾತ್ಮರು ಮ್ಯಾಂಚೆಸ್ಟರಕ್ಕೆ ಸೇರಿದ ಡಾರ್ವಿನ ಪಟ್ಟಣವನ್ನು ನೋಡಿಕೊಂಡು, ಇಂದು ಲಂಡನಕ್ಕೆ ಬರುವರು. ಮತ್ತು ನಾಮದಾರ ಆಗ ಖಾನ, ಬ್ಯಾರಿಸ್ಟರ ಜಿನ್ನಾ ಮೊದಲಾದವರೊಂದಿಗೆ ಹಿಂದೂ ಮುಸಲಮಾನ ಐಕ್ಯದ ವಿಚಾರ ನಡೆಸುವರು.

ಮುಂಬಯಿಯಲ್ಲಿ ಹಿಂದೂ ಉಚ್ಚ ಕುಲಗಳ ಕುಮಾರಿ ಮತ್ತು ವಿಧವೆಯರಿಗೆ ವಿವಾಹ ಪುನರ್ವಿವಾಹ ಮಾಡಿಕೊಳ್ಳಬೇಕಾಗಿದೆ. ೨೫-೪೦ ವಯಸ್ಸಿನ ಸುಶಿಕ್ಷಿತ ಹಿಂದೂ ವರರು ಕಾರ್ಯದರ್ಶಿ ಶ್ರದ್ಧಾನಂದ ಅನಾಥ ಮಹಿಲಾಶ್ರಮ ಈ ವಿಳಾಸದ ಮೇಲೆ ಪತ್ರವ್ಯವಹಾರ ಮಾಡಬೇಕು.

ವಿವಿಧ ವರ್ತಮಾನಗಳು

ಜರ್ಮನಿಯ ಒಂದು ವಿಮಾನವು ವಿಕಾಟಾ ಪಟ್ಟಣದ ಹತ್ತರ ಪ್ರಚಂಡವಾದ ಮಳೆಗಾಳಿಯಲ್ಲಿ ಸಿಕ್ಕು, ಒಡಕೊಂಡು ಸಮುದ್ರದಲ್ಲಿ ಬಿತ್ತು. ಇದರ ಭಯಸೂಚಕ ದೀಪ ನೋಡಿ, ಹಡಗದವರು ಇದು ಇದ್ದಲ್ಲಿಗೆ ಹೋಗಿ, ಜನರನ್ನು ಉಳಿಸಿಕೊಂಡಿತು.

—

"ಲಂಡನ ಮತ್ತು ಲಿವ್ಹರಪೂಲಿನಲ್ಲಿ ಪವನಿನ ಬೆಲೆಯು ಕಡಿಮೆಯಾದ್ದರಿಂದ, ಧಾನ್ಯಗಳ ಧಾರಣೆಯು ಹೆಚ್ಚಿತು. ಲಿವ್ಹರಪೂಲದಲ್ಲಿ ಒಂದೇ ದಿವಸ ಅರಳೆಯ ೪೫ ಸಾವಿರ ಬೇಲುಗಳ ಮಾರಾಟವಾಯಿತು.

—

ಕಾಂಚಿಕೋಣೆಯ ನಿವಾಸಿಯಾದ ಸುಪ್ರಸಿದ್ಧ ವಿದ್ವಾಂಸರಾದ ಪಂಡಿತ ಬಾಪ-ಚಾರ್ಯರು ವೈಕುಂಠವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

—

ಮುಂಬಯಿ ಸರಕಾರಕ್ಕೆ ಈ ವರ್ಷ ಒಂದೂವರೆ ಕೋಟಿ ರೂಪಾಯಿಗಳ ಆದಾಯ ಕಡಿಮೆಯಾಗುವದೆಂದು ಅಂದಾಜು ಮಾಡಲ್ಪಟ್ಟಿದೆ.

—

ಕುರುಂದವಾಡ ಸಂಸ್ಥಾನದ (ಮಾಧವಪೂರ) ಅಧಿಪತಿಗಳಾದ ಶ್ರೀ. ನಾನಾಸಾಹೇಬರಿಗೆ ಅರ್ಧಾಂಗವಾಯುನಿಂದ ಅತ್ಯಾವಸ್ಥೆಯಾಗಿದೆ.

—

ಹುಬ್ಬಳ್ಳಿ ಮ್ಯುನಿಸಿಪಾಲಿಟಿಯ ಚುನಾವಣೆಯು ಮಾರ್ಚದ ತನಕ ಮುಂದೆ ಬಿತ್ತು.

—

ಧಾರವಾಡ

ನಿನ್ನಿನ ದಿವಸ ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕ ಸಭೆಯು ಕೂಡಿ, ಸೊಲ್ಲಾಪೂರದಲ್ಲಿ ಜಡ್ಜರಾಗಿರುವ ಮಿ. ಕುಲಕೋಟಿಯವರು ಅಧ್ಯಕ್ಷ, ಮೆಸರ್ಸ ಹಾಳಭಾವಿ ಮತ್ತು ಜೋಗರು ಉಪಾಧ್ಯಕ್ಷ, ಮಿ. ಬಸವನಹಾಳರು ಮ್ಯಾನೇಜಿಂಗ ಕಮಿಟಿಯ ಚೇರಮನ್ನ, ಮೆಸರ್ಸ ಕೆ. ವ್ಹಿ. ಕುಲಕರ್ಣಿ ಮತ್ತು ಹಳಕಟ್ಟಿಯವರು ಸೇಕ್ರೆಟರಿ ಮಿ. ಕೇಸರೀ ವಕೀಲರು ಟ್ರೇಜರರ ಹಾಗೂ ೧೧ ಜನರದೊಂದು ಮ್ಯಾನೇಜಿಂಗ ಕಮಿಟಿ ನೇಮಿಸಲ್ಪಟ್ಟಿತು.

ಬರುವ ಡಿಶಂಬರದ ನಾತಾಳಿಯಲ್ಲಿ ಕ. ವಿ. ವರ್ಧಕ ಸಂಘದ ನಿಮಂತ್ರಣವಾಗಿ ಕರ್ನಾಟಕ ಸಾಹಿತ್ಯ ಸಮ್ಮೇಲನವನ್ನು ಕೂಡಿಸಬೇಕೆಂದು ಗೊತ್ತಾಯಿತು.

—

ಗಾಂಧೀ-ಸಪ್ತಾಹ

ಇದೇ ಖಾದೀ-ಸಪ್ತಾಹ

....(೦)...

ದರಿದ್ರ ನಾರಾಯಣನ ಸೇವೆ ಮಾಡಿರೆಂಬುದೇ ಮಹಾತ್ಮಾ ಗಾಂಧಿಯವರ ಸಂದೇಶ

—(೦)—

ಕನಿಷ್ಟ ೧೦ ರೂಪಾಯಿಯ ಖಾದೀ ಕೊಳ್ಳಿರಿ

ಮಹಾತ್ಮಾ ಗಾಂಧಿಯವರು ಈಗ ಹಿಂದುಸ್ಥಾನದ ಕೋಟ್ಯವಧಿ ಬಡಬಗ್ಗರ ಸೇವೆಗಾಗಿ ಇಂಗ್ಲಂಡಕ್ಕೆ ಹೋಗಿದ್ದಾರೆ. ಆ ಕಾಲಕ್ಕೆ ನಾವು ಅವರ ಜಯಂತಿಯನ್ನು ಖಾದಿಯನ್ನು ಕೊಂಡು, ಖಾದಿಯ ಪ್ರಸಾರ ಮಾಡಿಯೇ ಆಚರಿಸುವದು ಉಚಿತವೆಂದು ರಾಷ್ಟ್ರಸಭಾಪತಿ ವಲ್ಲಭಭಾಯಿ ಪಟೇಲರು ಹೇಳಿದ್ದಾರೆ. ಅದು ಯಥಾರ್ಥವಿದ್ದದ್ದು.

ಕರ್ನಾಟಕವು ಬಡ ಪ್ರಾಂತವಿದ್ದರೂ ಅದು ಮಹಾತ್ಮರಿಗೆ ಪ್ರಿಯವು. ಮಹಾತ್ಮರು ಈ ಪ್ರಾಂತಕ್ಕೆ ಅತ್ಯಂತ ಪ್ರಿಯರು. ಅಂದಮೇಲೆ ಈ ಜಯಂತಿಯ ಪ್ರಸಂಗದಲ್ಲಿ ನಾವು ಪ್ರತಿಯೊಬ್ಬರು.

ಕನಿಷ್ಟ ೧೦ ರೂಪಾಯಿಯ ಖಾದಿಯನ್ನು ಕೊಂಡು ದರಿದ್ರ ನಾರಾಯಣನ ಸೇವೆ ಮಾಡುವಾ. ಇಂಥ ೧೦ ಸಾವಿರ ಜನರು ಕರ್ನಾಟಕದಲ್ಲಿ ದೊರೆತರೆ ನಮ್ಮ ಕಾರ್ಯವು ಆಯಿತು.

ಇದು ಧರ್ಮದ ಕೆಲಸವು, ಯಾಕೆಂದರೆ ಇದರಿಂದ ಸತ್ಯಕ್ಕೆ ಸಹಾಯವಾಗುವದು. ಇದು ಸತ್ಪಾತ್ರ ದಾನವು, ಯಾಕಂದರೆ ಇದರಿಂದ ಯೋಗ್ಯ ಉಪವಾಸವಿದ್ದ ಬೈತರಿಗೆ ಅನ್ನ ದೊರಕುವದು.

ಇದು ಪರೋಪಕಾರವು, ಯಾಕಂದರೆ ಹಸಿದು ಒಳಲುವ ಬಾಂಧವರಿಗೆ ಇದು ಸಹಾಯಕವು ಕಾರ್ಯಕರ್ತರೆ, ಇಂಥ ಕನಿಷ್ಟ ೧೦ ರೂ. ಯ ಖಾದೀ ಕೊಳ್ಳುವವರನ್ನು ಕೂಡಲೆ ದೊರೆಕಿಸಿರಿ. ಮತ್ತು ದರಿದ್ರ ನಾರಾಯಣನ ಚರಣಕ್ಕರ್ಪಿಸಿರಿ.

ಕರ್ನಾಟಕದ ಸೇವಕರಾದ

ಸದಾಶಿವರಾವ ಕರ್ನಾಡ

ಅಧ್ಯಕ್ಷ, ಪ್ರಾಂ. ಕಾಂಗ್ರೆಸ ಕಮಿಟಿ

ಗಂಗಾಧರರಾವ ದೇಶಪಾಂಡೆ

ಏಜಂಟ, ಅ. ಭಾ. ಚರಖಾ ಸಂಘ

ಕರ್ನಾಟಕ ಶಾಖೆ

ಕರ್ನಾಟಕದಲ್ಲಿ ಮಹಾರಾಜದಿಂದ ೬೪೦೦ ಜನರು ಸತ್ತರೆಂದು ಸ್ಯಾನಿಟರಿ ಖಾತೆಯವರಿಗೆ ಲೆಕ್ಕ ಹತ್ತಿದೆ.

—

ರಾಮದುರ್ಗದಲ್ಲಿ ಮುಲ್ಲಾಪಹಾರಿಯಮೇಲೆ ಅಟ್ಟದ ಮಾಲನು ತೆರೆಯುವ ಸಮಾರಂಭವಾಯಿತು.

ನೋಟೀಸು

— (೧) —

ಮ|| ರಾ|| ರಾ|| ಮಲ್ಲನಗೌಡಾ ವೀರನಗೌಡಾ ಪಲ್ಲಿಪಾಟೀಲ ಸಾಕೀನ ಅಂಟ್ಟಿ ತಾಲೂಕ ನವಲಗುಂದ ವ ಸಿಂಗನಗೌಡಾ ನಿಂಬನಗೌಡಾ ಜ್ಯಾ ಕುಶಾರ ಸಾ|| ಗೊಜಚಿ ಸಂಸ್ಥಾನ ರಾಮದುರ್ಗ ಇವರಿಗೆ—

ಈ ಕೆಳಗೆ ಸಹಿ ಮಾಡಿದ ವೀರನಗೌಡಾ ಫಕೀರಗೌಡಾ ಪರ್ವತಗೌಡರ ಸಾ|| ಅಂಟ್ಟಿ ತಾ|| ನವಲಗುಂದ ವಸ್ತಿ ಧಾರವಾಡ ನಿಮಗೆ ಈ ನೋಟೀಸಿನಿಂದಾ ತಿಳಿಸುವದೇನೆಂದರೆ—

೧ನೇ ಮಲ್ಲನಗೌಡನು ಖಾಸ ನನ್ನ ಭಾವು ಒಂದನು, ವ ೨ನೇ ಸಿಂಗನಗೌಡನು ನನ್ನ ಖಾಸ ಸೋದರಮಾವನಿದ್ದು ಕೋರ್ಟಿನಿಂದಾ ಪಾಲಕನಾಗಿ ನೇಮಕೊಂಡು ನನ್ನ ಸಂರಕ್ಷಣೆದಾರ ನಾತೆಯಿಂದ ನನ್ನ ಯಾವತ್ತೂ ಸ್ಥಾವರ ಆಸ್ತಿ ವಹಿವಾಟದಾರನು ಇದ್ದನು. ನನ್ನ ಯಾವತ್ತು ಸ್ಥಾವರ ವ ಜಂಗಮ ಮಾಲಿನ ಸಂಬಂಧಿ ಧಾರವಾಡ ಜ್ಯಾ|ಸ| ಜ| ಕೋರ್ಟಿನಲ್ಲಿ ಸದರ ಮಲ್ಲನಗೌಡಾ ದಾವೇ ಮಾಡಿದ್ದನು. ಸದರೀ ದಾವೇಯು ಆಪಸಾತ ರಾಜಿ ಆಗಿ ಅದರಲ್ಲಿ ಸದರ ಅಪ್ಪನು ವೀರನಗೌಡನಿಗೆ ಸರಿಯಾಗಿ ಸರಸ ನಿರಸ ಹಿಶೆ ಕೊಡಬೇಕೆಂದು ಅದಪ್ರಕಾರ ನೀವು ಇಬ್ಬರೂ ನನಗೆ ಸರಿಯಾಗಿ ಸರಸ ನಿರಸ ಹಿಶೆಕೊಟ್ಟಿರುವದಿಲ್ಲ. ಮತ್ತು ಸದರೀ ದಾವೇಯಲ್ಲಿ ನನ್ನ ವ ಮಲ್ಲನಗೌಡನ ಖಾಸ ಅಕ್ಕ ಇರುವ ಗಂಗವ್ವಾ ಇವಳಿಗೆ ಉಪಜೀವನದ ಬಗ್ಗೆ ಕೆಲವು ಸ್ಥಾವರ ವ ಜಂಗಮ ಮಾಲು ಕೊಟ್ಟಿದ್ದು ಅದರಲ್ಲಿ ಸಹ ಸದರೀಯವಳು ತೀರಿಯಾದನಂತರ ಸರಿಯಾಗಿ ಸರಸ ನಿರಸ ಹಿಶೆ ಕೊಡಬೇಕೆಂದ ಪ್ರಕಾರ ಯಾವತರದ್ದು ನನಗೆ ಹಿಶೆಕೊಟ್ಟಿರುವದಿಲ್ಲ. ಈ ಬಗ್ಗೆ ಅಂದರೆ ಸದರ ನನ್ನ ಯಾವತ್ತು ಸ್ಥಾವರ ವ ಜಂಗಮ ಆಸ್ತಿಗಳಲ್ಲಿ ವ ಅವ್ವನಿಗೆ ಕೊಟ್ಟ ಸ್ಥಾವರ ವ ಜಂಗಮ ಆಸ್ತಿಗಳಲ್ಲಿ ಸರಸ ನಿರಸ ಹಿಶೆ ಕೊಡುವ ಬಗ್ಗೆ ಆಯಾಕೀಕಾರಿಗೆ ೧-೧|| ತಿಂಗಳ ಹಿಂದೆ ಸದರ ಅಂಟ್ಟಿ ಗ್ರಾಮದಲ್ಲಿ ಹಳ್ಳಿಯ ಮಂದಿ ಪಂಚರ ಸಮಕ್ಷಮ ನಿರಾಳೆಯಾಗುವ [illegible] ನೀಡಿತ್ತು. ಅವಾಗೂ ಯಾವತ್ತೂ [illegible] ಮೊದಲು ೪೦) ವಯ ವೀರನಗೌಡಾ ವ ಮಲ್ಲನಗೌಡಾ ಇವರು ಅವ್ವನಿಗೆ ಕೊಟ್ಟ ಸ್ಥಾವರ ವ ಜಂಗಮ ಆಸ್ತಿಗಳಲ್ಲಿ ಸರಸ ನಿರಸ ಹಿಶೆ ಆದನಂತರ ನಿಮ್ಮ ಸ್ಥಾವರ ವ ಜಂಗಮ ಆಸ್ತಿ ಹಂಚಿಕೊಳ್ಳಿರಿ. ಅದಪ್ರಕಾರ ಸದರೀ ಅವ್ವನಿಗೆ ಕೊಟ್ಟ ಜಂಗಮ ಮಾಲು ವ ಅವಳ ಹಸ್ತ ಪರಭಾರೆ ಇದ್ದ ಇತರೆ ಜಂಗಮ ಮಾಲಿನಲ್ಲಿ ೪೦| ವಯ ವೀರನಗೌಡನಿಗೆ ೧೦೦ ರೂಪಾಯಿಗಳನ್ನು ಕೊಡಬೇಕೆಂದು ಠರಾವು ಮಾಡಿದರು. ಅದಕ್ಕೆ ನಾನೂ ಸುದ್ಧಾ ಕಬೂಲ ಮಾಡಿದೆನು. ಆ ನಂತರ ರೂಪಾಯಿಗಳನ್ನು ಕೊಡಲಿಕ್ಕೆ ಕೇಳಿದರೆ ಪಾವತಿಗೆ ಸಹಿ ಮಾಡು ಕೊಡುತ್ತೇವೆ ಅಂತಾ ಹೇಳಿದ ಪ್ರಕಾರ ಸಹಿ ಮಾಡಿದೆ. ಅವಾಗೂ ಪುನಃ ನೀವು ಯಾವತ್ತೂ ಆಸ್ತಿಗಳಲ್ಲಿ ಸರಿಯಾಗಿ ಸರಸ ನಿರಸ ಹಿಶೆ ಆದನಂತರ ರೂಪಾಯಿಗಳನ್ನು ಕೊಡುತ್ತೇವೆ ನೀನು ಇನ್ನು ೧೫|೨೦ ದಿವಸ ಬಿಟ್ಟು ಬಾ ಅಂದಪ್ರಕಾರ ನಾನು ನಿಮ್ಮಲ್ಲಿ ವಿಶೇಷ ನಂಬಿಗೆಯುಳ್ಳವನು ಇದ್ದ ಮೂಲಕ ಹಾಗೇಹೋದೆ ಪುನಃ ನಿಮ್ಮ ಹೇಳಿಕೆಪ್ರಕಾರ ಊರಿಗೆ ಒಂದು ನೋಡಲಾಗಿ ನೀವು ಊರಲ್ಲಿ ಇದ್ದಿಲ್ಲ. ಈಗ ನೀವು ನನ್ನ ಕಡೆಯಿಂದ ಪಾವತಿಗೆ ಸಹಿ ಮಾಡಿಸಿಕೊಂಡದ್ದರಲ್ಲಿ ನನ್ನ ಯಾವತ್ತೂ ಸ್ಥಾವರ ಆಸ್ತಿ ಮುಳಿಗಿಸಬೇಕೆಂಬುವ ದುಷ್ಟಯಿರಾದೆಯಿಂದ ಅದರಲ್ಲಿ ಸುಳ್ಳ ವ ಬನಾವಟ ಸಂಗತಿ ಬರೆಯಿಸಿ ನನಗೆ ನೋಟೀಸು ಕೊಟ್ಟಿದ್ದಿರೆಂದು ಜನರಿಂದ ತಿಳಿಯಬರುತ್ತದೆ. ನಿಮ್ಮ ವ [illegible] ಜನರಿಂದ ತಿಳಿದ ಪ್ರಕಾರ ನನ್ನ ಯಾವತ್ತೂ ಸ್ಥಾವರ ಆಸ್ತಿ ವಿಲೇವಾಟ ಮಾಡುವ ಪ್ರಸಂಗವು ನನಗೆ ಯಾವತರದ್ದೂ ಅವಶ್ಯಕಿರುವದಿಲ್ಲಾ. ವ ಗಂಗವ್ವನಿಗೆ ಕೊಟ್ಟ ಜಂಗಮ ಮಾಲಿನಲ್ಲಿ ೧೦೦ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ ನನ್ನ ಕಡೆಯಿಂದ ಪಾವತಿಗೆ ಸಹಿ ಮಾಡಿಸಿಕೊಂಡು ಹಿಂದಿನಿಂದಾ ಅದರಲ್ಲಿ ಸುಳ್ಳ ವ ಬನಾವಟ ಸಂಗತಿ ಬರೆಯಿಸಿ ನನಗೆ ನೋಟೀಸು ಕೊಟ್ಟಿದ್ದಾರೆಂದು ತಿಳಿಯುತ್ತದೆ. ಈ ಪ್ರಕಾರ ನನ್ನನ್ನು ಘಸಾಯಿಸುವದರ ಬುದ್ಧಿಯಿಂದ ಪಾವತಿಗೆ ಸಹಿ ಮಾಡಿಸಿಕೊಂಡು ಅದರಲ್ಲಿ ಬನಾವಟ ವ ಸುಳ್ಳ ಸಂಗತಿ ಬರೆಯಿಸಿ ನನಗೆ ನೋಟೀಸು ಕೊಟ್ಟಿದ್ದು ಯಾವ ರೀತಿಯಿಂದಲೂ ಬಾಂಧಾಯಿಸಲಾರದು. ಮತ್ತು ಅದು ಬದ್ದ ಬಾತಲ ಇರುತ್ತದೆ ವ ನೀವು ನನಗೆ ನೋಟೀಸು ಕೊಟ್ಟದ್ದು ಇವರೆಗೂ ಗೊತ್ತಿರುವದಿಲ್ಲ. ಆದರೆ ಜನರಿಂದ ತಿಳಿದ ಪ್ರಕಾರ ಈ ನೋಟೀಸು ಕೊಟ್ಟಿರುತ್ತೇನೆ. ನೀವು ಈ ನೋಟೀಸ ಮುಟ್ಟಿದ ೧೫ ದಿವಸಗಳೊಳಗೆ ನನ್ನ ಯಾವತ್ತೂ ಸ್ಥಾವರ ವ ಜಂಗಮ ಆಸ್ತಿಯಲ್ಲಿ ಸರಸ ನಿರಸ ಹಿಶೆಯನ್ನು ವ ಗಂಗವ್ವಗೆ ಉಪಜೀವನದ ಬಗ್ಗೆ ಕೊಟ್ಟ ಜಂಗಮ ಮಾಲಿನಲ್ಲಿ ಪಂಚರು ಠರಾವು ಮಾಡಿದ ಪ್ರಕಾರ ೧೦೦ ರೂಪಾಯಿಗಳನ್ನು ಕೊಡತಕ್ಕದ್ದು. ಈ ಒಳಗಾಗಿ ನೀವು ನನ್ನ ಕಡೆಯಿಂದ ಯಾವ ರೀತಿಯಿಂದಾದರೂ ಸಹಿ ಮಾಡಿಸಿಕೊಂಡ ಕಾಗದಪತ್ರಗಳು ಉಳಿದಿದ್ದರೆ ಅವು ಸಹ ಬದ್ದ ಬಾತಲ ಇರುತ್ತವೆ. ಇದರ ಕಡೆಗೆ ಮಾಡದೇ ಇದ್ದಲ್ಲಿ ನಿಮ್ಮಿಬ್ಬರ ಮೇಲೆ ಕಾಯ್ದೇಶೀರ ಇಲಾಜ ಮಾಡಲಾಗುವದು. ಇದರ ಮುಂದಿನ ಯಾವತ್ತೂ ಖರ್ಚ ನೀವೇ ಸಹಿಸಬೇಕಾಗುವದು ಅಂತಾ ಕೊಟ್ಟ ನೋಟೀಸ ತಾರೀಖು ೨೮-೯-೩೧

ಸಹಿ ವೀರನಗೌಡಾ ಫಕೀರಗೌಡಾ ಪರ್ವತಗೌಡ್ರ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ್ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಡಿಂದಿಗೆಯು ಎಂಟು ಲಕ್ಷದಮೇಲುಂಟು ಚೆಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮ್ಯಾನೆಜಿಂಗ ಡಾಯರೆಕ್ಟರ

ನೋಟೀಸಿನ ದರಗಳು

···(೨)···

ಸಿಂಗಲ ಕಾಲಮಿನ ಹತ್ತು ಸಾಲಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂದು ಆಣೆ ಇಂಗ್ಲಿಷ ಪ್ರತಿಯೊಂದು ಸಾಲಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ [illegible] ಆಣೆ ಡಬಲ ಕಾಲಮಿನ ಸಾಲಗಳಿಗೆ [illegible] ಚಾರ್ಜ ಕಾಯಂ ಜಾಹಿರಾತುಗಳ ಕೊಡುವವರು ಕೆಳಗಿನ ಪತ್ತಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

R. N. B. 1449

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ಬುಧವಾರ ತಾರೀಖು ೩೦ ನೇ ಸಪ್ಟಂಬರ ೧೯೩೧ (ಸಂಚಿಕೆ ೨೩೦

ಜಾಹೀರ ನೋಟೀಸು

—(೦)—

ಸವಣೂರ ಸಂಸ್ಥಾನ ೧ನೇ ವರ್ಗ ಸಬ್ ಜಜ್ಜ ಕೋರ್ಟಿನಲ್ಲಿ

ಮುಕ್ಕಾಂ ಸವಣೂರ ಇಲ್ಲಿ

ದಿವಾಣಿ ಮೊಖದಮ ನಂಬರ ೫/೧೯೨೯

ದರಖಾಸ್ತ ನಂಬರ ೧೬/೧೯೩೧

೧ ತೀಟಪ್ಪ ಬಿನ್ ರುದ್ರಪ್ಪ ಘಟ್ಟಿ ಸ॥ ಸವಣೂರ } ವಾದಿ

ವಿರುದ್ಧ

೧ ಅಹಮದಖಾ ವ॥ ಸಮ್ಮದಖಾ ಪಾನಜಾದೇ ಸಾ॥ ಸವಣೂರ } ಪ್ರತಿವಾದಿ

ದಾವೆಗಳೇ ರೂಪಾಯಿ ೮೨-೪-೬

ಇದರ ಮೇಲಿನ ಪ್ರತಿವಾದಿ ಅಹ್ಮದಖಾ ವ॥ ಸಮ್ಮದಖಾ ಪಾನಜಾದೇ ಸಾ॥ ಸವಣೂರ ಇವನಿಗೆ ಹೀಗೆ ತಿಳಿಸುವದರಲ್ಲಿ ಬರುತ್ತದಲ್ಲ:—

ಸದ್ರಿ ದಾವೆಯಲ್ಲಿ ಆದ ಹುಕುಂನಾಮೆಯ ಅಮಲಬಜಾವಣಿಯಲ್ಲಿ ಸವಣೂರ ತಾ. ಪೈಕಿ ಗಬ್ಬೂರ ಗ್ರಾಮದಲ್ಲಿ ಇರತಕ್ಕ ನಿನ್ನ ಮಾಲ್ಕಿಯತಿ ಪಾಟವುಳ್ಳ ಸರಕಾರೀ ಜಮೀನ ರಿ॥ ಸ॥ ನಂ. ೧೮ ಯಾಕರೇ ೮।೧೪ ಕರಂ ರೂಪಾಯಿ ೧೮-೫-೭ ಇದರ ಪೈಕಿ ೧/೩ ಹಿಸ್ಸೇದ ಹಕ್ಕು ವಗೈರೇ ಈ ಕೋರ್ಟಿನಿಂದ ಜಪ್ತಮಾಡಿ ವಾದಿಯು ಅದನ್ನು ಲಿಲಾವಿಗೆ ತಂದಿದ್ದಾನೆ. ಸದ್ರಿ ಆಸ್ತಿಯನ್ನು ಕುರಿತು ನಿನ್ನನ್ನು ವಿಚಾರಿಸತಕ್ಕದ್ದು ಅದೆ. ಕಾರಣ ಈ ಲೇಖದ ಮೇಲಿಂದ ನಿನಗೆ ನೋಟೀಸ ಮಾಡುವದೇನೆಂದರೆ ನೀನು ಈ ಕೋರ್ಟಿನಲ್ಲಿ ತಾರೀಖು ೧೪ನೇ ಮಾಹೆ ಅಕ್ಟೋಬರ ಸನ್ ೧೯೩೧ನೇ ಇಸ್ವಿಯ ದಿವಸ ಪೂರ್ವಾಹ್ನದ ೧೧ ಘಂಟೆಗೆ ಹಾಜರಾಗಬೇಕು. ಮತ್ತು ಮೇಲಿನ ನಿನ್ನ ಆಸ್ತಿಯ ಸಂಬಂಧದ ನಿನ್ನ ಕಬ್ಜಾದಲ್ಲಿಯೂ ಅಧೀನದಲ್ಲಿರುವ ಯಾವತ್ತು ದಸ್ತೈವಜುಗಳನ್ನು [illegible] ಕಾಗದಗಳನ್ನು ಹಾಜರಪಡಿಸಬೇಕು.

ಈ ಹೊತ್ತು ತಾರೀಖು ೧೪ನೇ ಸಪ್ಟಂಬರ ಸನ್ ೧೯೩೧ನೇ ಇಸ್ವಿ ದಿವಸ ನನ್ನ ಸಹಿಯಿಂದಲೂ ಕೋರ್ಟಿನ ಮೊಹರಿನಿಂದಲೂ ಕೊಡಲ್ಪಟ್ಟಿತು.

B. H. Kulkarni,
Subjudge First Class
Savanur.

ಗೌಡ ಕುಲಕರ್ಣಿಯವರಿಗೆ ಎಚ್ಚರಿಕೆ!

....(೦)....

ಧಾರವಾಡ ತಾಲೂಕ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ. ಅ. ರಂಗಾಚಾರ್ಯರು ಶ್ರೀ. ಮುಂ ದೇ ಬಾಬೂರಾಯರು ಒಬ್ಬ ಸ್ವಯಂಸೇವಕನೊಂದಿಗೆ ಶಾಂತಿಸಂಧಾನದ ಸಂದೇಶವನ್ನು ತಿಳಿಸಿಹೇಳುವದಕ್ಕೆ ನಿಗದೀ ಗ್ರಾಮಕ್ಕೆ ಹೋದಕಾಲಕ್ಕೆ ಅಲ್ಲಿಯ ಪಾಟೀಲರು ಅತ್ಯಾಚಾರವನ್ನು ನಡೆಸಿದ ಸುದ್ದಿಯು ನಮ್ಮ ವಾಚಕರಿಗೆ ಗೊತ್ತಿದ್ದ ಮಾತು. ಮುಂದೆ ತಾ. ಕಾ. ಕ. ಕಾರ್ಯದರ್ಶಿಗಳು ನಿಗದೀ ಗ್ರಾಮದಲ್ಲಿ ನಡೆದ ವಿಷಯವನ್ನು ಅಧಿಕಾರಿಗಳಿಗೆ ತಿಳಿಸಿ, ಅದು ಶಾಂತಿಸಂಧಾನಕ್ಕೆ ಅನುಕೂಲವೋ ಹೇಗೆಂಬುದನ್ನು ವಿಚಾರಿಸಿದ್ದರು. ಈ ಬಗ್ಗೆ ಇಲ್ಲಿಯ ಅಧಿಕಾರಿಗಳು ೫ ತಿಂಗಳ ದೀರ್ಘಕಾಲದಲ್ಲಿ ಒಮ್ಮೆ ಉತ್ತರಕೊಟ್ಟರೆಂಬುದು ಸಂತೋಷದ ಮಾತು. ಅದರಲ್ಲಿ ಅವರು ನಿಷ್ಪಕ್ಷಪಾತದಿಂದ ವಿಚಾರಿಸಿದ್ದು ಅಭಿನಂದನೀಯವು ಇದೆ. ಶ್ರೀ. ಮಾಮಲೇದಾರ ಸಾಹೇಬರು ನಿಗದೀ ಪಾಟೀಲರಿಗೆ "ನೀವು ಕಾಂಗ್ರೆಸ ಕೆಲಸಗಾರರೊಂದಿಗೆ ಉದ್ಧಟತನದಿಂದ ವೈಮನಸ್ಯದಿಂದ ನಡಕೊಳ್ಳುವದು ಯೋಗ್ಯವಲ್ಲ. ಇನ್ನಮುಂದೆ ಹೀಗೆ ಮಾಡಕೂಡದೆಂದು" ತಾಕೀದ ಕೊಟ್ಟಿರುವರಂತೆ, ಇದರಿಂದ ಕಾಂಗ್ರೆಸ ಕೆಲಸಗಾರರಿಗೆ ಕಿರುಕುಳ ಉಪದ್ರವ ಕೊಡುವ ಬೇರೆ ಗ್ರಾಮಸ್ಥರು ಎಚ್ಚರಿಕೆಯಿಂದ ನಡೆಯಬೇಕಲ್ಲವೆ ತಾ॥ ೨೯-೯-೩೧

ಇಡೀ ಮ್ಯುನಿಸಿಪಾಲಿಟಿಯ ಚುನಾವಣೆಯು ರದ್ದಾಯಿತು.

ಗುಜರಾಥಕ್ಕೆ ಸೇರಿದ ನಡಿಯಾದ ಮುನಿಸಿಪಾಲಿಟಿಯ ಮತದಾರರ ಲಿಸ್ಟು ಅಪೂರ್ಣ ಮತ್ತು ಅವ್ಯವಸ್ಥಿತವಾಗಿರುತ್ತದೆಂದು ಕೋರ್ಟಿನಲ್ಲಿ ದಾವೆಯಾಯಿತು. ಜಡ್ಜರು ಹೀಗೆ ೧೪ ಜನರ ಚುನಾವಣೆಯನ್ನು ರದ್ದುಮಾಡಿದರು. ಉಳಿದವರ ಮೇಲೆ ಇಂಜಕ್ಷನ ಕಳಿಸಿದ್ದಾರೆ. ಇದನ್ನು ನೋಡಿ, ಸರಕಾರದವರು ಮ್ಯುನಿಸಿಪಾಲಿಟಿಯ ಚುನಾವಣೆಯನ್ನು ರದ್ದುಮಾಡಿ, ಹೊಸ ಚುನಾವಣೆಯಾಗಬೇಕೆಂದು ಹುಕುಮುಮಾಡಿದ್ದಾರೆ.

ಅಲ್ಲಾಬಾದ ಇಲಾಖೆಯಲ್ಲಿ ಕಾಯದೆಭಂಗ.

ದಿಲ್ಲಿಯ ಒಡಂಬಡಿಕೆಯನ್ನು ಸ್ಥಾನಿಕ ಅಧಿಕಾರಿಗಳು ಮನೇಚ್ಛೆಯಿಂದ ಮುರಿಯುತ್ತಿರುವದರಿಂದ ಮತ್ತು ಹಿಂದುಸ್ಥಾನ ಸರಕಾರದವರು ಅವರ ಲಗಾಮು ಬಿಗಿಹಿಡಿಯದ್ದರಿಂದ, ತಮಗೆ ಬೇಗನೆ ಆ ಇಲಾಖೆಯಲ್ಲಿ ಕಾಯದೆಭಂಗವನ್ನು ಪ್ರಾರಂಭ ಮಾಡಬೇಕಾಗುವದು. ಇದು ಸ್ಥಾನಿಕ ಪ್ರಶ್ನವಿದ್ದು, ಇದಕ್ಕೂ [illegible] ಸಂಬಂಧವಿರುವದಿಲ್ಲೆಂದು ಪಂಡಿತ ಜವಾಹರಲಾಲರು ದಿಲ್ಲಿಯಲ್ಲಿ ಒಂದು ಜಾಹೀರ ವ್ಯಾಖ್ಯಾನದಲ್ಲಿ ಹೇಳಿದ್ದಾರೆ. ಇದಕ್ಕೆ ಡಾಕ್ಟರ ಕಿಚಲೂಸಾಹೇಬರು ಬೆಂಬಲವಿತ್ತಿದ್ದಾರೆ.

ವಿಜಯ.

ತಾರೀಖು ೩೦-೯-೧೯೩೧ನೇ ಇಸ್ವಿ

ಮ್ಯಾಂಚೆಸ್ಟರದಲ್ಲಿ ಮಹಾತ್ಮರು

ಮಹಾತ್ಮರು ಮ್ಯಾಂಚೆಸ್ಟರಕ್ಕೆ ಹೋದ ದಿನ ಬಹಳ ದಣಕೊಂಡರು. ನಿತ್ಯದ ಪ್ರಕಾರ ಉಷಃಕಾಲದಲ್ಲಿ ದೇವರ ಪ್ರಾರ್ಥನೆ ಮಾಡಿದ ಬಳಿಕ ಪುನಃ ಆರಾಮ ಖುರ್ಚಿಯ ಮೇಲೆ ಅರ್ಧ ತಾಸಿನ ತನಕ ಮಲಗಿದರು. ಬಳಿಕ ಸ್ಪ್ರಿಂಗ ಹ್ವೇಲೆಂಬಲ್ಲಿ ತಿರುಗಾಡಲಿಕ್ಕೆ ಹೋದರು. ಮಹಾತ್ಮರ ಬಹಿಷ್ಕಾರದಿಂದಲೇ ಲ್ಯಾಂಕೆಷಾಯರದ ಗಿರಣಿಗಳ ಧುಂಗಾ ಬಂದಾದವು. ಜನರು ಇವರ ಮೇಲೆ ಭಯಂಕರವಾಗಿ ರೇಗಿದ್ದಾರೆ. ಇವರ ಜೀವಕ್ಕೆ ಅಪಾಯ ಮಾಡಬಹುದೆಂದು ಪೋಲೀಸರು ಬಹುವಾಗಿ ಭದ್ರೋಪಾಯ ಮಾಡಿದ್ದರು. ಈ ಭಯದ ಬದಲಾಗಿ ಮಹಾತ್ಮರಲ್ಲಿ ಜನರ ಭಯ ಭಕ್ತಿಯೇ ಹೆಚ್ಚಾಗಿ ತೋರಿತು. ಇವರು ಹೋದಲ್ಲೆಲ್ಲ ಜನರು ಟೊಪ್ಪಿಗೆ ತೆಗೆದು, ಸಲಾಮು ಮಾಡಿ ಪೂಜ್ಯಭಾವವನ್ನು ವ್ಯಕ್ತಪಡಿಸಿದರು.

ಮಹಾತ್ಮರು ಸ್ಪ್ರಿಂಗ ಹ್ವೇಲಕ್ಕೆ ಹತ್ತಿದ ಗಿರಣಿಯಲ್ಲಿ ಕೆಲಸ ಮಾಡುವ ನಾಲ್ಕು ಜನ ನೇಯಿಗಾರರನ್ನು ಕರೆಯಿಸಿ, ಅವರ ಕೂಡ ಮಾತಾಡಿದರು. ಅವರು ಹೇಳಿದ್ದೇನೆಂದರೆ-

ನಾವು ನಮ್ಮ ಇಂಗ್ಲಿಷ ದರ್ಜೆಯಪ್ರಕಾರ ಸುಖವಾಗಿ ಉಂಡುಟ್ಟು ಜೀವಿಸಬೇಕೆಂದಿದ್ದೇವೆ. ಅದರ ಕೂಡ ನಾವು ಮಾಡುವಂಥ ಬಟ್ಟೆಯ ಉತ್ಕೃಷ್ಟತನವನ್ನೂ ಕಾಯ್ದುಕೊಳ್ಳಬೇಕೆಂದಿದ್ದೇವೆ. ನಮಗೆ ಪೂರ್ವದೇಶದವರು (ಜಪಾನ) ನಮ್ಮ ಕೂಡ ಪೈಪೋಟಿ ನಡೆಸಿದ್ದಾರೆ. ಮತ್ತು ಹಿಂದುಸ್ಥಾನದ ಬಹಿಷ್ಕಾರವು ನಮ್ಮ ಸೊಂಟವನ್ನೇ ಬಾಗಿಸುತ್ತದೆ. ಇವರಿಗೆ ಮಹಾತ್ಮರು ಕೊಟ್ಟ ಉತ್ತರ-

ದಿಲ್ಲಿಯ ಒಡಂಬಡಿಕೆಯಾದ ಬಳಿಕ ಕಾಂಗ್ರೆಸವು ನಿಮ್ಮ ವಿರೋಧಿಯಾಗಿ ನಿಂತಿಲ್ಲ. ಕಾಂಗ್ರೆಸವು ತನ್ನ ದೇಶದ ಉದ್ಯೋಗ ವ್ಯವಸಾಯಗಳು ಅಭಿವೃದ್ಧಿ ಹೊಂದಬೇಕೆಂದು ಬಯಸುತ್ತದೆ. ಇದು ನಿಮ್ಮ ಜನರಿಗೇ ವಿರುದ್ಧವಿಲ್ಲ. ಇಂಗ್ಲಂಡದಂತೆ ಜಪಾನದ ವಿರುದ್ಧವೂ ಇರುತ್ತದೆ. ಒಂದು ಮಾತು ಹೇಳುತ್ತೇನೆ. ಇಂಗ್ಲಂಡ ಮತ್ತು ಹಿಂದುಸ್ಥಾನವು ಒಂದಕ್ಕೊಂದು ವಿರುದ್ಧ ದಿಶೆಯಿಂದ ನಡೆಯುವದರ ಬದಲು, ಸ್ನೇಹವಾಗಿ ನಡೆದರೆ ಹಿಂದುಸ್ಥಾನದ ಇತರ ಭಾಗದಂತೆ ನಿಮ್ಮ ಭಾಗದ ಅರುವೆಗಳನ್ನು ಕೊಳ್ಳಬೇಕೆನ್ನುವೆನು.

ಮಹಾತ್ಮರು ಸ್ಪ್ರಿಂಗಹ್ವೇಲದಿಂದ ತಿರುಗಿ ಬಂದಬಳಿಕ, ಕೂಲಿಕಾರರ ೧೬ ಜನ ಪ್ರತಿನಿಧಿಗಳೊಂದಿಗೆ ಎರಡು ತಾಸಿನವರೆಗೆ ಸಂಭಾಷಣೆ ಮಾಡಿದರು. ಇವರಿಗೆ ಹೇಳಿದ್ದೇನೆಂದರೆ .—

ಖಾದಿಯು ಹಿಂದೀಜನರ ಸಾಮಾಜಿಕ ಮತ್ತು ಆರ್ಥಿಕ ಉನ್ನತಿಯ ವಿಷಯವು. ಜನತೆಯ ಸ್ಥಿತಿಯನ್ನು ಸುಧಾರಿಸುವದಕ್ಕೆ ಬೇರೊಂದು ಮಾರ್ಗ ತೋರುವತನಕ ಈ ಚಳವಳಿಯು ನಡೆಯುವದೇ. ನಿಮಗೆ ಹೊಟ್ಟೆಗಾಗಿ ಡೋಲಭತ್ತೆಯಾದರೂ ದೊರೆಯುತ್ತದೆ. ಹಿಂದುಸ್ಥಾನದ ಅವಸ್ಥೆಯು ನಿಮಗಿಂತ ಹೃದಯವಿದ್ರಾವಕವಾಗಿರುತ್ತದೆ. ಆದ್ದರಿಂದ ಹಿಂದೀಜನರು ತಮ್ಮ ಜೀವನಕ್ಕಾಗಿ ಅವಶ್ಯವಾದ ಪದಾರ್ಥಗಳನ್ನು ಮಾಡಿಕೊಳ್ಳುವದಕ್ಕೆ ಕೈಕೊಳ್ಳಬೇಕಾದ ರೀತಿಯನ್ನು ನಾವು ಅವಲಂಬಿಸಬೇಕಾಗಿರುತ್ತದೆ. ಹಿಂದುಸ್ಥಾನ ಮತ್ತು ಇಂಗ್ಲಂಡ ಈ ಎರಡೂ ದೇಶಗಳು ಸರಿ ಸಮಾನರಾಗಿರುತ್ತವೆಂದು ರಾವುಂಡಟೇಬಲಿನಲ್ಲಿ ರಾಜಕೀಯವಾಗಿ ಗೊತ್ತಾದರೆ- ನಿಮ್ಮ ಅರುವೆ ಕೊಳ್ಳಲು ನಾನು ಹೆಚ್ಚು ಸವಲತ್ತು ಕೊಡುವೆನು. ಆದರೆ ಈ ನಂತರ [illegible] ಒಂದೇ ಎಂಬ ಆಶೆ ಮಾತ್ರ ಮಾಡಬೇಡಿರಿ. ಕೈನೂಲ - ಕೈಮಗ್ಗದ ಅರುವೆಯ ಹುಟ್ಟುವಳಿ ಹೆಚ್ಚಾಗುವದಕ್ಕೆ ಬಹಿಷ್ಕಾರವು ಅತ್ಯವಶ್ಯವಾಗಿ ಬೇಕಾಗುತ್ತದೆ. ಹಿಂದುಸ್ಥಾನದ ಬಹಿಷ್ಕಾರದಿಂದಲೇ ನಿಮ್ಮ ಅವಸ್ಥೆಯು ಹೀಗಾಯಿತೆಂದು ತಿಳಿಯಬೇಡಿರಿ. ಜಗತ್ತಿನ ತುಂಬಾದ ವ್ಯಾಪಾರಮಂದಿಯು ಮತ್ತು ಧಾರಣೆಯ ಇಳಿಯು ನಿಮ್ಮ ವ್ಯಾಪಾರ ಮಂದಿಗೆ ಕಾರಣವಾಗಿದೆ.

ಮಹಾತ್ಮರು ಮ್ಯಾಂಚೆಸ್ಟರಕ್ಕೆ ಹೋದದ್ದು ಸರಕಾರೀ ರೀತಿಯಿಂದಲ್ಲ. ಅಥವಾ ಯಾವದೊಂದು ಸಂಘದ ಆಮಂತ್ರಣ ಸ್ವೀಕರಿಸಿಯೂ ಅಲ್ಲ. ಕೇವಲ ಅಲ್ಲಿಯ ಪರಿಸ್ಥಿತಿಯನ್ನು ನೋಡಲು ಕೆಲ ಸ್ನೇಹಿತರ ಆಗ್ರಹದ ದೆಸೆಯಿಂದ. ಈ ನಂತರ ಇವರು ಗಿರಣಿ ಹಾಗು ಕೂಲಿಕಾರರ ಸಂಘಗಳ ಆಮಂತ್ರಣ ಸ್ವೀಕಾರ ಮಾಡಿ ಹೋಗುವರು. ಆಗ ಇವರ ಯೋಗ್ಯತೆಗೆ ತಕ್ಕಂಥ ಸಮಾರಂಭಗಳಾಗುವವು. ಸದ್ಯ ಮಹಾತ್ಮರು ಅಲ್ಲಿಂದ ಹೊರಡುವಾಗ ಈ ಕೆಳಗಿನ ಸಂದೇಶವನ್ನು ಜಾಹೀರ ರೀತಿಯಿಂದ ಪ್ರಸಿದ್ಧ ಮಾಡಿದ್ದಾರೆ-

ಮ್ಯಾಂಚೆಸ್ಟರದಲ್ಲಾದ ಆದರಾತಿಥ್ಯದಿಂದ ಅತ್ಯಾನಂದಭರಿತನಾದೆನು. ಆದರೆ ಇಲ್ಲಿಯ ಜನರಿಗೆ ಬಂದ ಬಡತನ ಕಂಡು, ಮತ್ತು ಆ ಬಡತನಕ್ಕೆ ನಾನೇ ಕಾರಣನಾದೆನೆಂಬದನ್ನು ಕೇಳಿ, ನನಗೆ ಅತ್ಯಂತವಾಗಿ ದುಃಖವಾಗುತ್ತದೆ. ಆದರೆ ಅದರಲ್ಲಿ ನನ್ನ ಬುದ್ಧಿಪೂರ್ವಕವಾದ ಯಾವ ಹೇತುವಿಲ್ಲದ್ದರಿಂದ ಮತ್ತು ಜಗತ್ತಿನಲ್ಲಿ ಅತಿಶಯ ದೊಡ್ಡ ದೈನ್ಯ ಅಂದರೆ ಹಿಂದುಸ್ಥಾನದಲ್ಲಿ ಉದ್ಯೋಗ ವ್ಯವಸಾಯವಿಲ್ಲದೆ ಕೋಟ್ಯನುಕೋಟಿ ಜನರ ಹಿತಕ್ಕಾಗಿ ನಾನು ಉಪಾಯ ಮಾಡಬೇಕಾಯಿತೆಂಬ ಕಾರಣದಿಂದ ನನಗೆ ಸಮಾಧಾನವೆನಿಸುತ್ತದೆ. ಹಿಂದುಸ್ಥಾನದ ಬಡತನದ ತುಲನೆಯನ್ನು ಇಂಗ್ಲಂಡದ ಬಡತನದ ಕೂಡ ಮಾಡಿದರೆ- ಇಂಗ್ಲಂಡದ ಬಡತನವು [illegible]ವಾಗುತ್ತದೆ. ಈ ಅಡಚಣಿಯೊಳಗಿಂದ ದಾರಿಯನ್ನು ಹುಡುಕಿ ತೆಗೆಯಲು ನಾನು ಇಲ್ಲಿಗೆ ಬಂದಿದ್ದೇನೆ. ಮತ್ತು ಇದರಲ್ಲಿ ನಿಮ್ಮ ಸಹಕಾರವನ್ನು ಅಪೇಕ್ಷಿಸುತ್ತೇನೆ. ನನ್ನಿಂದ ಲ್ಯಾಂಕೆಷಾಯರದ ನಿರುದ್ಯೋಗತನವು ದೂರಾಗುವದಾದರೆ ನನಗೆ ಸಮಾಧಾನವಾಗುವದು.

ಇಂಗ್ಲಂಡದಲ್ಲಿ ಸರಕಾರದ ಡೋಲಿನ ಮೇಲಿರುವಂಥವರ ದಂಗೆಗಳು

—(o)—

ಇಂಗ್ಲಂಡದ ಸಂಯುಕ್ತ ಸರಕಾರದವರು ವೆಚ್ಚ ಉಳಿತಾಯದ ದೆಸೆಯಿಂದ ಡೋಲಿನ ರೊಕ್ಕದ ಪ್ರಮಾಣವನ್ನು ಕಡಿಮೆ ಮಾಡಿದ್ದರ ನಿಷೇಧವೆಂದು ಡೋಲು ಹೊಂದುತ್ತಿರುವಂಥ ಕೆಲಸವಿಲ್ಲದವರು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ದಂಗೆ ಮಾಡುವದು ನಿತ್ಯದ ಕೃತ್ಯವಾಗಿದೆ. ಲಿವ್ಹರಪೂಲ, ಗ್ಲಾಸಗೋ, ದಂಡಿ ಮುಂತಾದ ಪಟ್ಟಣಗಳಲ್ಲಿ ಇವರು ಮೆರವಣಿಗೆ ಹೊರಡಿಸಿ ಸಾರ್ವಜನಿಕ ಶಾಂತತೆಯನ್ನು ಭಂಗಪಡಿಸುತ್ತಿದ್ದಾರೆ. ದಂಡಿಯಲ್ಲಿ ೧೫೦೦ ಜನರು ರಾತ್ರಿಯಲ್ಲಿ ಪಂಜುಗಳನ್ನು ಹಚ್ಚಿ, ಮೆರವಣಿಗೆ ತೆಗೆದು, ರಹದಾರಿಯನ್ನು ಬಂದು ಮಾಡಿದರು. ಪೋಲೀಸರು ಇವರನ್ನು ಬಂದೂಕಿನ ಹಿಂಬದಿಯಿಂದ ತಿವಿದು, ಚದರಿಸಿದರು. ಸಭಾಸ್ಥಾನವನ್ನು ಆಕ್ರಮಿಸಿ, ಇವರು ಸಭೆ ಮಾಡದಂತೆ ಪ್ರತಿಬಂಧ ಮಾಡಿದರು. ಪೋಲೀಸರು ತಮ್ಮ ಸಭೆ ಮುರಿದದ್ದರ [illegible]ವೆಂದು ಇವರು ಪುನಃ ಮೆರವಣಿಗೆ, ಸಭೆ ಮುಂತಾದ ಗೊಂದಲಗಳನ್ನೆಬ್ಬಿಸತಕ್ಕವರಿದ್ದಾರೆ.

ಜಪಾನ ದೇಶದಲ್ಲಿ [illegible] ಗಂಧದೆಣ್ಣೆಯ ವ್ಯಾಪಾರ ಬೆಳೆಸುವ ವಿಚಾರವಾಗಿ, ಎಣ್ಣೆಯ ಕಾರಖಾನೆಗೆ ಸಂಬಂಧಿಸಿ ಶ್ರೀ [illegible] ಜಪಾನಕ್ಕೆ ಪ್ರಯಾಣ ಬೆಳೆಸುವರು.

ಹಿಂದೂ ಮುಸಲಮಾನ ಐಕ್ಯದ ಪರ್ಯಾಲೋಚನೆ

....(೦)....

ಈ ವಾರದಲ್ಲಿ ರಾವುಂಡ ಟೇಬಲಿನಲ್ಲಿ ಹಿಂದೂ ಮುಸಲಮಾನ ಐಕ್ಯದ ವಿಷಯ ನಡೆಯುವದು. ಮಹಾತ್ಮರು ನಾವ ದಾರ ಆಗಾಖಾನ, ಬ್ಯಾರಿಸ್ಟರ ಜಿನ್ನಾ ಮೊದಲಾದವರ ಕೂಡ ಮಾತಾಡಿದರು. ಕೊಟ್ಟಲವು ತೂಗಿ, ತೂಗಿ ಕೊನೆಗೆ ತನ್ನ ಸ್ಥಳದಲ್ಲಿಯೇ ನಿಲ್ಲುವಂತೆ, ಅದರ ಕೊನೆಯ ಪರಿಣಾಮವಾಯಿತು. ಬ್ಯಾರಿಸ್ಟರ ಸಾಹೇಬರು ತಮ್ಮ ೧೪ ಮುದ್ದೆಗಳನ್ನು ಬಿಡಲಿಕ್ಕೆ ಸಿದ್ಧರಿಲ್ಲ. ಇವರಿಗೆ ವಿರುದ್ಧವಾಗಿರುವ ರಾಷ್ಟ್ರೀಯ ಮುಸಲಮಾನ ಪಕ್ಷದ ಮುಖಂಡರಾದ ಡಾಕ್ಟರ ಅನಸಾರಿಯವರಿಗೆ ಆಮಂತ್ರಣವಿಲ್ಲ. ಅವರು ಬರುವಂತೆ ಮಾಡಿರಿ. ಅವರ ಕೂಡ ಮಾತಾಡಿರಿ. ಅನಂತರ ರಾಜಿಯ ಮಂದಿನ ಮಾತೆಂದು ಮಹಾತ್ಮರು ಇವರಿಗೆ ಒತ್ತಿ ತಿಳಿಸಿದ್ದಾರೆ.

ಖಾದಿ ಸಪ್ತಾಹ

ಮುಂಬಯಿಯಲ್ಲಿ ಖಾದೀ ಸಪ್ತಾಹದ ಸಿದ್ಧತೆಯು ಬಹಳ ಉತ್ಸಾಹದಿಂದ ನಡೆದಿದೆ. ಸಪ್ತಾಹ ಮುಗಿಯುವತನಕ ಸರದಾರ ಪಟೇಲರು ಅಲ್ಲೇ ಇರುವರು.

ಮುಂಬಯಿಯಲ್ಲಿ ಖಾದೀವಿಷಯವಾಗಿ ನಾಗರಿಕರ ಪ್ರಚಂಡ ಸಭೆ ಕೂಡಿತ್ತು. ಪಟ್ಟಣಿಗರು ಒಂದು ಲಕ್ಷ ಖಾದೀಕೊಂಡರು. ಖಾದೀಪ್ರಸಾರಕ್ಕೂ, ಅದನ್ನು ಬಡವರಿಗೆ ಧರ್ಮಾರ್ಥ ಹಂಚುವದಕ್ಕೂ ಈ ಸಭೆಯಲ್ಲಿ ೧೫೦೦೦ ರೂಪಾಯಿಗಳ ವರ್ಗಣಿ ಕೂಡಿತು. ಸ್ತ್ರೀಯರು ತಮ್ಮ ಮೈಮೇಲಿನ ಆಭರಣಗಳನ್ನು ತೆಗೆದು, ಅಧ್ಯಕ್ಷರ ಮುಂದೆ ರಾಸಿಹಾಕಿದರು.

ಗಾಂಧಿ ಜಯಂತ್ಯುತ್ಸವದ ಸಪ್ತಾಹದಲ್ಲಿ ಅಹಮದಾಬಾದ ಮ್ಯುನಿಸಿಪಾಲಿಟಿಯವರು ಐದು ಸಾವಿರ ರೂಪಾಯಿಯ ಖಾದೀ ಕೊಂಡು, ತಮ್ಮ ಕೆಲಸಗಾರರಿಗೆ ಇದರ ಸಮವಸ್ತ್ರ ಕೊಡಬೇಕೆಂದು ಗೊತ್ತು ಮಾಡಿದ್ದಾರೆ.

ಅಹಮದಾಬಾದ ಮ್ಯುನಿಸಿಪಾಲಟಿಯವರು ಸ್ವಂತಕ್ಕಾಗಿ ಕೊಂಡ ಐದುಸಾವಿರದ ಹೊರತಾಗಿ ಪಟ್ಟಣಿಗರು ೩೦ಸಾವಿರದ್ದನ್ನು ಕೊಂಡರು. ಖೇಡ ಜಿಲ್ಲೆಯಲ್ಲಿ ೨೦ಸಾವಿರದ ಖೋಕವ್ಯಾಪಾರವಾಯಿತು. ಶೇಟಜಮುನಲಾಲ ಬಜಾಜರ ಉತ್ತೇಜನದಿಂದ ನಾಗಪೂರ ಇಲಾಖೆಯಲ್ಲಿ ಇಪ್ಪತ್ತುಸಾವಿರದ ವಿಕ್ರಿಯಾಯಿತು.

ಈ ಪ್ರಕಾರ ದಿವಾಲು ಅಲ್ಲಲ್ಲಿಯ ಶೋಕ ವಿಕ್ರಿಯ ಅಂಕೆಗಳು ಬರುತ್ತಲೇ ಹೋಗುವವು. ಧಾರವಾಡದಲ್ಲಿ ಏಳು ಸಾವಿರದ ಸರಗು ಸಿಲುಕುಂಟು. ಹತ್ತಿತ್ತು ರೂಪಾಯಿಯ ಅರಿವೆ ಕೊಳ್ಳುವಂಥವರ ದೊಂದು ಯಾವಾವಳಿ ಮಾಡುವ ಕೆಲಸ ನಡೆದಿದೆ. ಇವರು ಬಹುವಾಗಿ ಖಾದಿಯನ್ನು ಸವಿಸಬಹುದೆಂದ ನಂಬಿಗೆಯುಂಟಾಗಿದೆ.

೨ನೇ ತಾರೀಖಿನ ದಿವಸವೇ ಜನ್ಮೋತ್ಸವ ಪ್ರಾರಂಭವಾಗುತ್ತದೆ. ಆ ದಿನ ಕೊಂಡವರಿಗೆ ರೂಪಾಯಿಕ್ಕೆ ಒಂದಾಣೆ ಮತ್ತು ಉಳಿದ ದಿವಸ ಕೊಳ್ಳುವವರಿಗೆ ಅರ್ಧಾಣೆಯಂತೆ ಕವಿಶನ ಕೊಡಬೇಕೆಂದು ಖಾದೀ ಅಂಗಡಿಯವರು ಗೊತ್ತು ಮಾಡಿದ್ದಾರೆ. ಇದರ ಲಾಭವನ್ನು ಧಾರವಾಡದ ಯಾವತ್ತು ಜನರು ತಕ್ಕೊಳ್ಳುವರೆಂದು ನಂಬಿಗೆ.

ಹೋದ ವರ್ಷ ರಾಷ್ಟ್ರೀಯ ಸಪ್ತಾಹದಲ್ಲಿ ಖಾದೀ ಅಂಗಡಿಯ ಎಲಾ ಕಪಾಟುಗಳು ಬರಿದಾದವು. ಈ ವರ್ಷವಾದರೂ ಹಾಗೇ ಆಗುವವೆಂದು ಊರಲ್ಲಿ ಕಂಡು ಬರುವ ಉತ್ಸಾಹದಿಂದ ಹೇಳಬೇಕಾಗುತ್ತದೆ.

ಹಳ್ಳಿಯಾಳ ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ ಏರಿಸುವ ಸಮಾರಂಭವು

....(೦)....

ಹೋದ ಶನಿವಾರ ದಿವಸ ಹಳ್ಳಿಯಾಳದ ಮ್ಯುನಿಸಿಪಾಲಿಟಿಯ ಕಚೇರಿಯ ಮೇಲೆ ನಾಡಗುಡಿ ಏರಿಸುವ ಸಮಾರಂಭವು ಬಹು ಸಡಗರದಿಂದ ನೆರವೇರಿತು. ಈ ಸಮಾರಂಭಕ್ಕಾಗಿ ಮ್ಯುನಿಸಿಪಾಲಿಟಿಯವರೂ ನಾಗರಿಕರೂ ಧಾರವಾಡ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ. ಜೋಗ ವಿಶ್ವನಾಥರಾಯರನ್ನು ಕರೆಯಿಸಿಕೊಂಡು, ಅವರ ಹಸ್ತದಿಂದಲೇ ಈ ಸಮಾರಂಭವನ್ನು ಮಾಡಿಸಿದರು. ಶ್ರೀ. ಜೋಗರು ಹಳ್ಳಿಯಾಳಕ್ಕೆ ಹೋದಬಳಿಕ, ಮಹಾತ್ಮರು, ದೇಶಬಂಧು ದಾಸ ಹಾಗು ಪಂಡಿತ ಮೋತಿಲಾಲರ ಭಾವಪಟಗಳ ಮೆರವಣಿಗೆ ತೆಗೆದರು. ಮೆರವಣಿಗೆಯು ಮ್ಯುನಿಸಿಪಾಲಿಟಿಗೆ ಬಂದನಂತರ ನಾಡಗುಡಿಯನ್ನೇರಿಸುವ ಸಮಾರಂಭವಾಯಿತು.

ಶ್ರೀನಗರದಿಂದ ೩೦ ಮೈಲುಗಳ ಮೇಲಿರುವ ಸೊಪೋಯನ್ನವೆಂಬ ಗ್ರಾಮದಲ್ಲಿ ಮುಸಲಮಾನರ ಗುಂಪು ದಂಗೆ ಮಾಡಿ, ಪೊಲೀಸ ಹೆಡ್ಡ ಕಾನ್ಸಟೇಬಲನನ್ನು ಕೊಂದರು. ಫೌಜದಾರಗೆ ಪೆಟ್ಟು ಹಚ್ಚಿದರು. ದಂಡಿನವರು ಇ… …ತಿ ಗುಂಡು ಹಾಕಲು ಇಬ್ಬರು ಸತ್ತರು, … ಗಾಯವಾಗಿದ್ದಾರೆ.

ತಾರಿನ ಸುದ್ದಿಗಳು

ಪಾರ್ಲಮೆಂಟ ಸಭೆಯು ಬರುವ ನೋವೆಂಬರ ಅಕ್ಟೋಬರದ ಮೊದಲನೆಯ ವಾರದಲ್ಲಿ ವಿಸರ್ಜನೆ ಹೊಂದಿ, ಅದರ ಮುಂದಿನ ವಾರದಲ್ಲಿ ಚುನಾವಣೆಯಾಗುವದು. ಇದರ ನಿಯಮನ ಮಾತಲು ಚಾದಶಹರು ಬಾಲಮೋರದಿಂದ ಲಂಡನಕ್ಕೆ ಬರುವರು. ಈಗಿನ ಮಿಶ್ರಪ್ರಧಾನ ಮಂಡಲಕ್ಕೇ ಮತ ಕೊಟ್ಟು, ಅದನ್ನೇ ಬಲಪಡಿಸಿರೆಂದು ಮಂತ್ರಿಯವರು ಹೋಟರನ್ನುದ್ದೇಶಿಸಿ, ಚುನಾವಣೆಯ ವಿನಂತಿ ಪತ್ರ ತೆಗೆಯುವರು.

ಚುನಾವಣೆಯ ಕಾಲದಲ್ಲಿ ರಾವುಂಡಟೇಬಲಿನ ಕೆಲಸವನ್ನು ಮುಂದಿಗೊತ್ತಿ, ಅದನ್ನು ವ್ಯವಧಾನದಲ್ಲಿಟ್ಟರೆ ಮತ್ತು ಚುನಾವಣೆಯಲ್ಲಿ ಹಿಂದುಸ್ಥಾನ ವಿಷಯಕ್ಕೆ ಮಹತ್ವ ಕೊಡದಿದ್ದರೆ ಮಹಾತ್ಮರು ಅಲ್ಲಿ ನೂಲು ಬಡಿಯುತ್ತಾ ವ್ಯರ್ಥ ಕಾಲಹರಣ ಮಾಡದೆ, ಹಿಂದುಸ್ಥಾನಕ್ಕೆ ತಿರುಗಿ ಬರುವರು. ಚುನಾವಣೆಯ ನಂತರ ವರ್ತಮಾನ ಪರಿಸ್ಥಿತಿಯು ಸಮಾಧಾನವಾಗಿ ತೋರಿದರೇ ಮಹಾತ್ಮರು ತಿರುಗಿ ಹೋಗುವರು. ಇಲ್ಲವಾದರೆ ಹೋಗರು.

ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರೆತ ಹೊರ್ತು ದೇಶದಲ್ಲಿ ಶಾಂತತೆಯುಳಿಯಲಾರದು. ರಾವುಂಡ ಟೇಬಲದಲ್ಲಿ ಅಪಯಶ ಬಂದರೆ ದೇವರೇ ಹಿಂದುಸ್ಥಾನದ ತಾರಕನಾಗಬೇಕು. ಅತನೇ ಆ ಗಂಡಾಂತರದೊಳಗಿಂದ ಪಾರಮಾಡಬೇಕೆಂದು ಮಹಾತ್ಮರು ತಾರಿನವರ ಪ್ರತಿನಿಧಿಯ ಮುಂದೆ ಚಾಹೀರ ರೀತಿಯಿಂದ ಹೇಳಿದ್ದಾರೆ.

ಮಹಾತ್ಮರು ಅಡಿದಂತೆ ನಡೆಯುವವರಾದ್ದರಿಂದ, ಮಂತ್ರಿ ಮಂಡಲದವರು ಚುನಾವಣೆಯ ಕಾಲದಲ್ಲಿಯೂ ರಾವುಂಡಟೇಬಲವನ್ನು ಸಾಗಿಸಿಕೊಂಡು ಹೋಗಬೇಕೆಂಬ ವಿಚಾರಮಾಡುತ್ತಲಿದ್ದಾರೆ

ಹಿಂದುಸ್ಥಾನದಲ್ಲಿ ಗಳಿಕೆ …ಯುವವು ಬಳಿಕ ಕಡಿಮೆಯಾಗುವದು

—(೦)—

ಹಿಂದುಸ್ಥಾನ ಸರಕಾರದವರು ಪ್ರಾಪ್ತಿಯ (ಇನಕಮ ಟ್ಯಾಕ್ಸ)ಕರ ಹೆಚ್ಚಿಸುವರು; ತರಿ, ತಂಬಾಕ ಮತ್ತು ಪೆಟ್ರೋಲ … ತಿ ಹೆಚ್ಚಿಸುವರು. ರೇಲ್ವೆ ಮತ್ತು ಪೋಸ್ಟ … ಲು ಏರಿಸುವರು. ಮತ್ತು ಸಾವಿರ ರೂಪಾಯಿ … ಕೆ ಸಂಬಳವಿದ್ದವರ ಪಗಾರದಲ್ಲಿ ನೂರಕ್ಕೆ ಹತ್ತರಂತೆ ಮತ್ತು ಅದರೊಳಗೆ ರೂಪಾಯಿಗೆ ಒಂದಾಣೆಯಂತೆ ಕಡಿಮೆ ಮಾಡುವರು. ದೇಶೀ ಅರಿ… ಮೇಲೂ ಜಕಾತಿ ಕೂಡಿಸುವರೆಂದು ವರ್ತಮಾನವಾಗಿದೆ.